(c) the total loan that was due to the several creditors at the time of reconstitution of the Board;

(d) the losses incurred by the Mills since the Government Directors' appointment;

(e) the details of losses on various accounts;

(f) the measures adopted by the Government to stop the losses?

A.— Sri K. MALLAPPA (Minister for Industries and Commerce).—

(a) The Board was reconstituted with effect from 16th August 1962.

(b) By Government Rs. 38 lakhs so far. By other agencies on Government guarantee—Nil.

(c) Rs. 36,31,110.

(d) Rs. 12,87,607 from 1st September 1962 to 28th February 1963 according to provisional unaudited accounts.

(e) The losses are due to irregular working production, to disrepair of machinery and excess labour employed. It is not possible to allocate the losses on various accounts;

(f) The matter is under consideration.

Constitution of the Chitradurga District Co-operative Union.

*Q.—574. Sri B. L. GOWDA (Challakere).—

Will the Government be pleased to state :—

(a) when the Chitradurga District Co-operative Union was constituted;

(b) who are all the members nominated on it?

A.— Sri RAMAKRISHNA HEGDE (Minister for Co-operation and Development).—

(a) 25th October 1960.

(b) The following persons were nominated :—

1 Sri H. Hanumaiah, Chitradurga.

2 ,, K. Seetharamaiah, Hiriyur.

3 Sri G. Channamallappa, Challakere.
4 ,, K. H. Halappa, Davanagere.
5 ,, G. Basappa, Hosadurga.
6 ,, K. Sanjeevareddy, Chitradurga.
7 ,, B. L. Gowda, Challakere.
8 ,, T. O. Homsagar, Harihar.
9 ,, K. T. Vasudevareddy, Jagalur.
10 ,, G. Veeranna, Thammenhalli.
11 ,, N. V. Naik, Harihar.
12 ,, Channiahwadiyar, Bilichodu.
13 ,, Nagesh Setty, Hosadurga.
14 ,, R. S. Kotrappa, Chitradurga.
15 The Assistant Registrar of Co-operative Societies, Chitradurga (*Ex-Officio*).

Karnataka State Archives (Departmental Library)
ಕರ್ನಾಟಕ ರಾಜ್ಯ ಪತ್ರಾಗಾರ (ಇಲಾಖಾ ಗ್ರಂಥಾಲಯ)
ಪುಸ್ತಕ ಕ್ರಮಾಂಕ Accession No. 13479
ದಿನಾಂಕ Date

MR. SPEAKER.—We will now pass on to the other business of the House.

REPORT OF THE BUSINESS ADVISORY COMMITTEE

MR. SPEAKER.—I present the Twelfth Report of the Business Advisory Committee.

SRI A. R. PANCHAGAVI.—I beg to move "that this House agrees with the Twelfth Report of the Business Advisory Committee".

MR. SPEAKER.—The question is:

"That this House agrees with the Twelfth Report of the Business Advisory Committee".

The motion was adopted.

INTRODUCTION OF BILLS.

SRI B. D. JATTI (Minister for Finance).— Sir, I beg to introduce the Mysore Sales Tax (Amendment) Bill, 1963.

MR. SPEAKER.—The Mysore Sales Tax (Amendment) Bill, 1963, is introduced.

SRI B. D. JATTI (Minister for Finance).— I beg to introduce the Mysore Agricultural Income-Tax (Amendment) Bill, 1963.

MR. SPEAKER.—The Mysore Agricultural Income-tax (Amendment) Bill, 1963, is introduced.

BUSINESS OF THE HOUSE

Mr. SPEAKER.—With regard to the Business of the Day, I would like to know whether we should continue the same practice of having no Teabreak today also, because, it is a non-official day and I do not want to cut out any time if I can possibly save it. As before, the House will continue to sit without tea-break till 12-30 P.M.

Then, with regard to the non-official business, I believe the Hon'ble Members are aware that a resolution was partly discussed and the Hon'ble Member that Sri Anna Rao, who was on his legs then, is now neither on his legs, nor is he found in the House. All that I can say is that he has concluded his speach.

Sri C. J. MUCKANNAPPA (Sira).—When he is absent ?

Mr. SPEAKER.—It means that. What shall we do with this resolution ? It is open to the House to conclude the debate or even to move for closure. The time allotted, I believe, is over. The mover was Sri T. Madiah Gowda, and the resolution relates to steps to be taken to improve administration and supervision of Primary Education particularly in Rural areas, so as to improve efficiency. How does the House feel ? Should we have a little more Debate on it ?

Sri S. SIVAPPA (Sravanabelagola).—If Members are not willing to speak, it means they do not want to take part in the Debate.

Sri C. J MUCKANNAPPA.—May I know how many members took part in the Debate on that resolution ?

Mr. SPEAKER.—I have got that information as I have already looked into that. The members who have taken part are Sri T. Madiah-Gowda, the mover, Sri C. J Muckannappa, Sri C. S. Subbiah Naik, Sri Sanjeevanatha Ikala and Sri Anna Rao Ganamukhi, who had not concluded his speech.

(*Sri Gopal Gowda stood up*)

Does the Hon'ble Member like to take part ? The House seems not inclined to continue the debate further. ಈ ವಿಷಯದಲ್ಲಿ ಇನ್ನು ಚರ್ಚೆ ಬೇಡ ಎನ್ನುವ ಅಭಿಪ್ರಾಯವನ್ನು ಸಭೆ ಸೂಚಿಸುತ್ತಿದೆ. ಮಾನ್ಯ ಸದಸ್ಯರ ಅಭಿಪ್ರಾಯವೇನು ?

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ)— ಪ್ರೈಮರಿ ವಿದ್ಯಾಭ್ಯಾಸ ಮುಖ್ಯವಾದುದು, ಅದರ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ.

Mr. SPEAKER.—I think the hon. member can be given a chance and then the debate be closed. If this resolution engages the time of the House, the other resolution would lapse.

NON-OFFICIAL RESOLUTION

Re : Taking steps to improve Administration and Supervision of Primary Education particularly in rural areas.

(*Debate continued*)

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಸಭೆಯ ಅಧಿವೇಶನದ ಕಳೆದ ದಿವಸಗಳಲ್ಲಿ ಚರ್ಚೆ ಮಾಡುತ್ತಿದ್ದ ಖಾಸಗಿ ನಿರ್ಣಯದ ಸಂಬಂಧದಲ್ಲಿ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಮಾನ್ಯ ಶ್ರೀ ಟಿ. ಮಾದಯ್ಯಗೌಡರು ಈ ನಿರ್ಣಯವನ್ನು ಸಭೆಯ

ಮುಂದೆ ತಂದು ಸರ್ಕಾರದ ಗಮನವನ್ನು ತೀವ್ರವಾಗಿ ಈ ಕಡೆ ಎಳೆಯುವುದಕ್ಕೆ ಬಹಳ ಸಹಾಯ ಮಾಡಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಸಭೆಯ ಪರವಾಗಿ ಅಭಿನಂದಿಸುತ್ತೇನೆ. ಈ ದೇಶದಲ್ಲಿ ಸ್ವಾತಂತ್ರ್ಯಾನಂತರ ಅತಿ ಕೆಟ್ಟ ರೀತಿಯಲ್ಲಿ ಅನಾಹತಕ್ಕೆ ಈಡಾಗಿರುವ ಒಂದು ವಿಷಯವೆಂದರೆ ಅದು ವಿದ್ಯಾಭ್ಯಾಸ ಎಂದು ನಾವು ಹೇಳದೆ ವಿಧಿಯಿಲ್ಲ. ಅದರಲ್ಲಿಯೂ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸದ ಸ್ಥಿತಿಗತಿಗಳನ್ನು ಮತ್ತು ಆ ಕ್ಷೇತ್ರದಲ್ಲಿ ನಾವು ಸ್ವಾತಂತ್ರ್ಯಾನಂತರದಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸುವುದಾದರೆ, ಅದು ಬಹಳ ಮಟ್ಟಿಗೆ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಿಲ್ಲ; ಮಾತ್ರವಲ್ಲ, ತಾವು, ಎಂದರೆ, ಸರ್ಕಾರದವರು, ಕೆಲವು ಸಂದರ್ಭಗಳಲ್ಲಿ ತಾವು ಮಾಡಲೇಬೇಕಾದ ತಮ್ಮ ಆದ್ಯಕರ್ತವ್ಯಗಳನ್ನು ಕೂಡ ನಿರ್ವಹಿಸಿಲ್ಲವೆಂದು ನಾನು ಈ ಸಭೆಯಲ್ಲಿ ಹೇಳಬೇಕಾಗಿದೆ: ರಾಜ್ಯಾಂಗದಲ್ಲಿ, ಎಲ್ಲ ಆರು ವರ್ಷ ತುಂಬಿದ ಮಕ್ಕಳಿಗೆ ಉಚಿತವಾಗಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಲೇಬೇಕು ಎಂಬ ನಿರ್ದೇಶ ಎಲ್ಲ ರಾಜ್ಯಗಳಿಗೂ ಇದ್ದರೂಕೂಡ ಆ ನಿರ್ದೇಶವನ್ನು ಅಕ್ಷರಶಃ ಪರಿಪಾಲನೆ ಮಾಡುವುದರಲ್ಲಿ ವಿಫಲರಾಗಿದ್ದಾರೆ. ತಮ್ಮ ರಾಜ್ಯದಲ್ಲಿ ಹಿಂದೆ ಕೂಡ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ದೊರಕಬೇಕೆಂಬ ಪ್ರಯತ್ನ ನಡೆದಿತ್ತು. ಆದರೆ ಈಗ ರಾಜ್ಯದಲ್ಲಿ ಈ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ಏನೊಂದು ನೀತಿಯನ್ನನುಸರಿಸುತ್ತಾ ಬಂದಿದ್ದಾರೋ ಅದು ಸ್ವತಃ ತನಗೆ ತಾನೆ ಮೋಸ ಮಾಡಿಕೊಳ್ಳತಕ್ಕ ಒಂದು ಪದ್ಧತಿ ಅಥವಾ ವ್ಯವಸ್ಥೆ ಎಂದು ನಾನು ಹೇಳಬೇಕಾಗಿದೆ. ಇದನ್ನು ಮಾನ್ಯ ವಿದ್ಯಾ ಸಚಿವರು ಸ್ವಲ್ಪ ಗಮನಿಸಬೇಕು. ಅವರು ಏನು ಹೇಳುತ್ತಾರೆಂದರೆ ಕಡ್ಡಾಯ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿದ್ದೇವೆ, ಅದರಂತೆ ನಾವು ಈ ಪ್ರಾಥಮಿಕ ವಿದ್ಯಾಭ್ಯಾಸದ ಸೌಲಭ್ಯವನ್ನು ಎಲ್ಲ ಹಳ್ಳಿಗೂ ವಹಿಸತಕ್ಕ ಪ್ರಯತ್ನದಲ್ಲಿದ್ದೇವೆ ಎಂದು. ಆದರೆ ಆರು ವರ್ಷ ತುಂಬಿದ ಎಲ್ಲ ಮಕ್ಕಳನ್ನೂ ಕಡ್ಡಾಯವಾಗಿ ಶಾಲೆಗಳಿಗೆ ಸೇರಿಸತಕ್ಕ ಕ್ರಮ ಈಗ ಹಾಲಿ ಸರ್ಕಾರದ ಯೋಜನೆಯಲ್ಲಿಲ್ಲ. ಯೋಜನೆಯಲ್ಲಿದ್ದರೂ ಅವರು ಅದನ್ನು ಕಾರ್ಯಗತ ಮಾಡುವ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿಲ್ಲ. ಯಾವ ವಿದ್ಯಾರ್ಥಿ ಶಾಲೆಗೆ ಸೇರುತ್ತಾನೆಯೋ ಅವನು ಸೇರಿದ ದಿವಸದಿಂದ ಶಾಲೆಯನ್ನು ಬಿಟ್ಟು ಹೋಗುವಷ್ಟು ದಿವಸ ಮಾತ್ರ ಅವನಿಗೆ ಉಚಿತವಾದ ವಿದ್ಯಾಭ್ಯಾಸ ದೊರೆಯುತ್ತದೆ; ಒಂದು ವರ್ಷ, ಎರಡು ವರ್ಷ, ಮೂರು ವರ್ಷ, ಹೀಗೆ ಅವನು ನಾನಾ ಕಾರಣಗಳಿಂದಾಗಿ, ಮುಖ್ಯವಾಗಿ ಬಡತನದ ಕಾರಣದಿಂದಾಗಿ ಶಾಲೆಯನ್ನು ಬಿಟ್ಟು ಹೋದರೆ ಅವನ ಎಲ್ಲ ಹೋದ, ಏನು ಮಾಡುತ್ತಿದ್ದಾನೆ, ಅವನು ಹೋಟಲಿನಲ್ಲಿ ಲೋಟ ತೊಳೆಯುವುದಕ್ಕೆ ಸೇರಿಕೊಂಡಿದ್ದಾನೆಯೋ ಅಥವಾ ಎಲ್ಲಿಯಾದರೂ ಬೇರೆ ಕಡೆಗಳಲ್ಲಿ ಹೊಟ್ಟೆಪಾಡಿಗಾಗಿ ತಿರುಗಾಡುತ್ತಿದ್ದಾನೆಯೋ ಎನ್ನುವ ವಿಷಯದ ಕಡೆ ಸರ್ಕಾರ ಗಮನ ಕೊಡುತ್ತ ಇಲ್ಲ. ನಾವು ಎಷ್ಟೋ ಮಕ್ಕಳನ್ನು ನೋಡುತ್ತಿದ್ದೇವೆ, ಬೀದಿಯಲ್ಲಿ ಅಲೆಯುವ ಚಿಕ್ಕ ಮಕ್ಕಳನ್ನು ನೋಡುತ್ತಿದ್ದೇವೆ, ಗುಂಪು ಗುಂಪಾಗಿ ಹಿಂಡು ಹಿಂಡಾಗಿ ಇರುವುದನ್ನು ಮತ್ತು ಹಳ್ಳಿಗಳಲ್ಲಿ ಬಹಳ ಕಡೆಗಳಲ್ಲಿ 7, 8, 9, 10 ವರ್ಷದ ಮಕ್ಕಳು ಶಾಲೆಗೆ ಹೋಗುವುದಕ್ಕೆ ಅವಕಾಶವಿಲ್ಲದೆ ಇರುವುದನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ನಾನು ಈ ವಿಷಯದಲ್ಲಿ ಸರ್ಕಾರ ವಿಫಲವಾಗಿದೆ, ಸೋತಿದೆ, ತನ್ನ ಕರ್ತವ್ಯವನ್ನು ನಿರ್ವಹಿಸಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ.

ಇನ್ನು ಈ ಒಂದು ಸನ್ನಿವೇಶವನ್ನು ನಾವೆಲ್ಲರೂ ಒಪ್ಪಿಕೊಂಡಿರತಕ್ಕ ಈ ಮೂಲ ತತ್ವವನ್ನು ಕಾರ್ಯಗತ ಮಾಡುವ ಕಡೆ ಸರ್ಕಾರದವರು ವಿಶೇಷ ಹಾಗೂ ತೀವ್ರ ಗಮನವನ್ನು ಕೊಡಬೇಕಾದ್ದು ಅವರ ಆದ್ಯ ಕರ್ತವ್ಯವಾಗಿದೆ. ಮಾನ್ಯ ವಿದ್ಯಾಸಚಿವರು ಪ್ರಾಥಮಿಕ ವಿದ್ಯಾಭ್ಯಾಸ ಮಾತ್ರವಲ್ಲ ನಾವು ಪ್ರೌಢ ವಿದ್ಯಾಭ್ಯಾಸವನ್ನು ಕೂಡ ಉಚಿತವಾಗಿ ಮತ್ತು ಕಡ್ಡಾಯವಾದ ರೂಪದಲ್ಲಿ ಕೊಡಬೇಕಾಗುತ್ತದೆ; ಅದು ಆವಶ್ಯಕ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜೊತೆಗೆ ಈಗ ರಾಜ್ಯದಲ್ಲಿ ಕೊಡುತ್ತಿರುವ ಪ್ರೌಢ ವಿದ್ಯಾಭ್ಯಾಸ ಪದ್ಧತಿಯಲ್ಲಿ ಬಡವರಿಗೆ ಬಹಳ ಜನರಿಗೆ ಅದು ಉಚಿತವಾಗಿ ದೊರಕುತ್ತಿದೆ ಎನ್ನುವ ಅಭಿಪ್ರಾಯವನ್ನು ಕೂಡ ಅವರು ತಿಳಿಸಿದ್ದಾರೆ. ಈ ವಿಷಯವನ್ನು ಸಮರ್ಥಿಸುತ್ತ ಅವರು ನಮ್ಮ ಮುಂದೆ ಅಂಕಿ ಅಂಶಗಳನ್ನು ಇಟ್ಟರೆ ಈ ರಾಜ್ಯದಲ್ಲಿ ಪ್ರೌಢ ವಿದ್ಯಾಭ್ಯಾಸವು ಕೂಡ ಎಲ್ಲ ಮಕ್ಕಳಿಗೂ ಉಚಿತವಾಗಿ ದೊರೆಯುವಂತೆ ಮಾಡುವುದಕ್ಕೆ ಎಷ್ಟು ಹಣವನ್ನು ನಾವು ಹೆಚ್ಚಾಗಿ ಒದಗಿಸಬೇಕು ಎಂದು ಈ ಮಾನ್ಯ ಸಭೆ ಅದರಲ್ಲಿಯೂ ಮುಖ್ಯವಾಗಿ ಹಣಕಾಸಿನ ಸಚಿವರು ವಿಚಾರಮಾಡಬಹುದು ಎಂದು ನನಗನ್ನಿಸುತ್ತದೆ. ಏಕೆಂದರೆ ಈ ವಿದ್ಯಾಭ್ಯಾಸ ಇತರ ಎಲ್ಲ ಹಣ ತೊಡಗಿಸತಕ್ಕ ಯೋಜನೆಗಳಿಗಿಂತ ಹೆಚ್ಚು ಫಲವನ್ನು ಕೊಡತಕ್ಕದ್ದು, ಶಾಶ್ವತವಾದದ್ದು ಮತ್ತು ಭದ್ರವಾದದ್ದು ಎಂದು ನಾನು ಭಾವಿಸುತ್ತೇನೆ. ಪ್ರೊಫೆಸರ್ ಗಾಲಬ್ರೇತ್ ಅವರು, ಹಿಂದೆ ನಮ್ಮ ದೇಶದಲ್ಲಿ ಅಮೇರಿಕದ ರಾಯಭಾರಿಯಾಗಿದ್ದವರು ಒಂದು ಮಾತನ್ನು ಹೇಳುತ್ತಾರೆ: ವಿದ್ಯಾಭ್ಯಾಸದಲ್ಲಿ ತಂದೆ ತಾಯಿಗಳು ಅಥವಾ ರಾಜ್ಯ ತೊಡಗಿಸತಕ್ಕ ಹಣ, ಅದು ಕೇವಲ ಖರ್ಚು ಮಾತ್ರ ಆಗುವುದಿಲ್ಲ, ಅದು ಒಂದು ಹಣವನ್ನು ತೊಡಗಿಸತಕ್ಕ ಯೋಜನೆ (ಇನ್‌ವೆಸ್ಟ್‌ಮೆಂಟ್) ಎಂದಾಗುತ್ತದೆ ಅದರ

(ಶ್ರೀ ಎಸ್. ಗೋಪಾಲಗೌಡ)

ಫಲಗಳು ಶೀಘ್ರವಾಗಿ ಮತ್ತು ಒಳ್ಳೆಯ ರೀತಿಯಿಂದ ಬೆಳೆಯುತ್ತವೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಆ ಅಭಿಪ್ರಾಯ ಸಾಮಾನ್ಯವಾಗಿ, ಸರ್ವಸಾಮಾನ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸ ಎಷ್ಟು ಒಳ್ಳೆಯ ರೀತಿಯಲ್ಲಿ ನಡೆಯುತ್ತದೆಯೋ ಅದರ ಆಧಾರದ ಮೇಲೆ ಮುಂದಿನ ಮಕ್ಕಳ ಭವಿಷ್ಯ ನಿಂತಿರುತ್ತದೆಯೆಂದು ನಾನು ನಿಸ್ಸಂದೇಹವಾಗಿ ಹೇಳಬಹುದು.

ಇವೊತ್ತು ನಮ್ಮ ಹಳ್ಳಿಗಳ ಪರಿಸ್ಥಿತಿಯನ್ನು ನೋಡಿದರೆ, ಅಲ್ಲಿಯ ಪಾಠಪ್ರವಚನಗಳನ್ನು ನೋಡಿದರೆ, ಅಲ್ಲಿನ ಮಕ್ಕಳ ಸ್ಥಿತಿಗತಿಗಳನ್ನು ನೋಡಿದರೆ ನಿಜಕ್ಕೂ ಆ ದೃಶ್ಯ ಕರುಣಾಜನಕವಾಗಿರತಕ್ಕ ದೃಶ್ಯ. ಅದರಲ್ಲಿಯೂ ಮಲೆನಾಡಿನ ಕಡೆಗಳಲ್ಲಿ ತಾವು ನೋಡಬಹುದು. ಮಲೆನಾಡಿ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ನಾವು ಆ ಮಕ್ಕಳು ಶಾಲೆಗಳಿಗೆ ಹೋಗತಕ್ಕ ಸನ್ನಿವೇಶವನ್ನು ನೋಡಿದರೆ ಕೆಲವು ಸಂದರ್ಭಗಳಲ್ಲಿ ಹೃದಯವಿದ್ರಾವಕವಾದ ಪರಿಸ್ಥಿತಿಯನ್ನು ನಾವು ನೋಡುತ್ತೇವೆ. ಅನೇಕ ಕಡೆಗಳಲ್ಲಿ ನಮ್ಮ ರಾಜ್ಯದವರು ರಸ್ತೆಗಳನ್ನು ಸೇತುವೆಗಳನ್ನೂ ಮಾಡಿದ್ದಾರೆ. ತಮ್ಮ ಗಮನಕ್ಕೆ ಒಂದು ಉದಹರಣೆಯನ್ನು ನಾನು ತರುವುದಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರದಲ್ಲಿ ಮೀನು ಹೊಳೆ ಎಂದು ಒಂದು ನದಿ ಇದೆ. ದೇಶದ ಅನೇಕ ಕಡೆಗಳಲ್ಲಿ ಸೇತುವೆಗಳೂ, ರಸ್ತೆಗಳೂ ಆಗುವಾಗ ಮೀನು ಹೊಳೆ ಸರ್ಕಾರದ ಗಮನವನ್ನು ಸೆಳೆಯಲಿಲ್ಲ, ಕಾರಣವೇನೋ ಗೊತ್ತಾಗಲಿಲ್ಲ. ಅದೇ ಜಿಲ್ಲೆಯವರು ಮಂತ್ರಿಗಳಾಗಿದ್ದಾಗಲೂ ಅದನ್ನು ಪೂರೈಸಲಾರದೆ ಹೋದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ—ನದಿಗೆ ಸೇತುವೆ ಹಾಕುವುದಕ್ಕೆ ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತಿದ್ದೇನೆಂದು ಯಾರೂ ತಪ್ಪು ಭಾವಿಸಬಾರದು—ಅಲ್ಲಿ ಮಳೆಗಾಲದಲ್ಲಿ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳತನಕ ಆ ನದಿ ತುಂಬಿ ಹರಿಯುತ್ತದೆ. ಅಲ್ಲಿಯ ಮಕ್ಕಳು ತೂಗು ಸೇತುವೆ,—ಅದಕ್ಕೆ ಸಾಗ ಎಂದು ಹೇಳುತ್ತಾರೆ, ಸೊಪ್ಪು, ಸೌದೆ ಮಣ್ಣು, ಹಾಕಿ ಅದನ್ನು ಕಟ್ಟಿರುತ್ತಾರೆ—ಅದರ ಮೇಲೆ ಮಕ್ಕಳು ಪ್ರತಿದಿನ ಮೇಗರವಳ್ಳಿ ಶಾಲೆಗೆ ನಡೆದುಬರುತ್ತಾರೆ. ಇಂಥ ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ನಮ್ಮಲ್ಲಿ ಎಷ್ಟೋಕಡೆ ಶಾಲೆಗಳ ಕಟ್ಟಡಗಳು ಸೋರುತ್ತಿರುತ್ತವೆ, ಮಳೆಗಾಲದಲ್ಲಿ ಅದಕ್ಕೆ ಇರಸಲುತಟ್ಟಿ ಕಟ್ಟುವವರು ಕೂಡ ಇರುವುದಿಲ್ಲ, ಅಲ್ಲಿ ಯಾವ ಸೌಲಭ್ಯವೂ ಇರುವುದಿಲ್ಲ. ಕೆಲವು ಕಡೆ ಕಿಟಕಿಗಳು, ಬಾಗಿಲುಗಳು ಇಲ್ಲದೆ ಇರತಕ್ಕ ಸಂದರ್ಭಗಳಿರುತ್ತವೆ, ಕೆಲವು ಕಡೆ ಖಾಸಗಿ ಜನರ ಜಗುಲಿಯ ಮೇಲೆ, ಕೋಣೆಯಲ್ಲಿ, ಅಂಗಳದಲ್ಲಿ ಶಾಲೆಗಳನ್ನು ನಡೆಸತಕ್ಕ ಪ್ರಮೇಯವಿರುತ್ತದೆ ಈಚೆಗೆ ಸರ್ಕಾರದವರು ಈ ಪ್ರಾಥಮಿಕಶಾಲಾ ಕಟ್ಟಡಗಳೆಲ್ಲವನ್ನೂ ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಗೆ ವಹಿಸಿಬಿಟ್ಟಿದ್ದೇವೆ, ಸಾರ್ವಜನಿಕರೂ ಅವರೂ ಸೇರಿ ಕಟ್ಟಡಗಳನ್ನು ಕಟ್ಟಿಕೊಳ್ಳಬೇಕು ಎಂದು ಹೇಳುತ್ತಾರೆ. ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಖಾಸಗಿಯವರು ಯಾರಾದರೂ ಶಾಲೆಗೆ ಕಟ್ಟಡವನ್ನು ಕೊಟ್ಟರೆ ಅದರ ರಿಪೇರಿಯನ್ನೂ ಅವರೇ ಮಾಡಿಸುತ್ತ ಇರಬೇಕು ಎಂದು ಸರ್ಕಾರದವರು ಬಿಟ್ಟಿರತಕ್ಕದ್ದು ಇದೆ. ತೀರ್ಥಹಳ್ಳಿ ತಾಲ್ಲೂಕು ನಾಲೂರು ಪ್ರಾಥಮಿಕ ಶಾಲೆಯನ್ನು ಉದಹರಿಸುತ್ತೇನೆ. ಆ ಶಾಲೆಗೆ ಇರಸಲುತಟ್ಟಿ ಕಟ್ಟುವ ವಿಷಯದಲ್ಲಿ ಜಿಜ್ಞಾಸೆ ಬಂತು. ಆ ಶಾಲೆಯನ್ನು ಸರ್ಕಾರದವರು ವಹಿಸಿಕೊಂಡಿಲ್ಲ. ಕಾರಣವೇನೆಂದರೆ ಸರ್ಕಾರದವರು ಹೇಳುವ ರೀತಿಯಲ್ಲಿ ಆ ಕಟ್ಟಡವಿಲ್ಲ ಎನ್ನುವ ವಿವಾದದಿಂದ. ಹೀಗಾಗಿ ಎರಡು ಮೂರು ಮಳೆಗಾಲದಲ್ಲಿ ಆ ಕಟ್ಟಡ ಮಳೆಯ ಹೊಡೆತಕ್ಕೆ ಸಿಕ್ಕಿ ಸಾವಿರಾರು ರೂಪಾಯಿ ಹಾಕಿ ಯಾರೋ ದಾನಿಗಳು ಕಟ್ಟಿಕೊಟ್ಟಂಥ ಶಾಲಾ ಕಟ್ಟಡ ಒಂದು ಮಳೆಗಾಲದಲ್ಲಿ ಬಿದ್ದುಹೋಯಿತು. ಇಂಥ ಕೆಲವು, ಸಾಮಾನ್ಯ ಬುದ್ಧಿಗೆ ಹೊಳೆಯತಕ್ಕ ಸಾಮಾನ್ಯ ಬುದ್ಧಿ ಇರತಕ್ಕವನ್ನು ಮಾಡಬಹುದಾದಂಥ, ಕೆಲಸಗಳನ್ನು ದೊಡ್ಡ ಸರ್ಕಾರ, ಇಷ್ಟೆಲ್ಲ ಸಿಬ್ಬಂದಿಯನ್ನು ಇಟ್ಟುಕೊಂಡೂ ಕೂಡ ಮಾಡಲಾರದೆ ಹೋಗಿ ಅದಕ್ಕೆ ಕೆಲವು ಕಾನೂನುಗಳ ಅಡಚಣೆಯನ್ನು ಹೇಳುತ್ತದೆ.

9-30 A.M.

ಸಾಮಾನ್ಯ ಬುದ್ಧಿ ಸರ್ಕಾರದವರಿಗೆ ಇರುವುದಿಲ್ಲ ಎಂದು ಈ ಸಂದರ್ಭದಲ್ಲಿ ಅನಿಸುತ್ತದೆ, ಅವರಿಗೆ ಕಾನೂನು ಇರಬೇಕು, ಅವರಿಗೆ ಪರಿಪತ್ರ ಇರಬೇಕು, ಅವರಿಗೆ ಆದೇಶ ಇರಬೇಕು ಅದರಂತೆ ಅವರು ನಡೆಯತಕ್ಕವರು, ಅದು ಒಳ್ಳೆಯದು. ಆದರೆ ಸಾರ್ವಜನಿಕ ಹಾಗೂ ಸರ್ಕಾರದ ಉಪಯುಕ್ತವಾದ ಕಟ್ಟಡಕ್ಕೆ ಆಗಲೀ ಅಥವಾ ಯಾವುದಾದರೂ ಸೇತುವೆಗೆ ಆಗಲಿ ಧಕ್ಕೆ, ಹಾನಿ ಬರತಕ್ಕ ಸಂದರ್ಭದಲ್ಲಿ ಅವರು ಕಣ್ಣು ಬಿಟ್ಟು ಬುದ್ಧಿಯನ್ನು ಉಪಯೋಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕಾದ್ದು ಅವರ ಮತ್ತೊಂದು ಆದ್ಯ ಕರ್ತವ್ಯವಾಗುತ್ತದೆ. ಮಲೆನಾಡಿನ ಶಾಲೆಗಳ ವಿಷಯದಲ್ಲಿ ನಾನು ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಹಳ್ಳಿಗೆ ಎಲ್ಲಾ ಒಂದೇ ಮಂತ್ರ-ದೇಶಕ್ಕೆ ಎಲ್ಲಾ ಒಂದೇ ತಂತ್ರ ಎಂದು 'ಏನು ಈ ರಾಜ್ಯಭಾರ ಮಾಡುವವರು ಅಭಿಪ್ರಾಯ ಪಡುತ್ತಾರೆ ಇದರಲ್ಲಿ ಕೆಲವು ಸಲ ಆಯಾಯಾ ಪ್ರದೇಶದ ಸ್ಥಿತಿಗತಿಗಳನ್ನು ಅನುಲಕ್ಷಿಸಿ ಕೆಲವು ಬದಲಾವಣೆಗಳನ್ನು ಕೂಡ ಮಾಡಿಕೊಳ್ಳಬೇಕಾಗುತ್ತದೆ. ಈಗ ನಮಗೆ ಏನು ಹೇಳುತ್ತಾರೆ ಎಂದರೆ ಎಲ್ಲಿ ಶಾಲೆ ಕಟ್ಟಡ ಕಟ್ಟಿಸಬೇಕಾದರೂ, ನೀವು ಸಾರ್ವಜನಿಕರಿಂದ ಹಣವನ್ನು ಎತ್ತಿ ಸಂಗ್ರಹಿಸಿ ಕೊಡಿ ಎಂದು ಹೇಳುತ್ತಾರೆ. ಅದು ಪಟ್ಟಣಗಳಿಗೆ ಎಷ್ಟು ಮಟ್ಟಿಗೆ ಅನ್ವಯಿಸುತ್ತದೆಯೋ ಗೊತ್ತಿಲ್ಲ. ಎಲ್ಲಿ ಮುನಿಸಿಪಾಲಿಟಿಗಳು ಇವೆಯೋ ಕಾರ್ಪೊರೇಷನ್‌ಗಳು ಇವೆಯೋ ಅಲ್ಲಿ ಯಾರು ಹಣವನ್ನು ಎತ್ತಿ ಕೊಡುತ್ತಾರೆ ಎನ್ನುವುದು ಒಂದು ಪ್ರಶ್ನೆ. ಇನ್ನು ಕಟ್ಟಡಗಳ ವಿಷಯದಲ್ಲೂ ಕೂಡ ಕೊಡಗಿನಲ್ಲಿ ಕಟ್ಟಡ ಕಟ್ಟುವುದಾದರೆ ಅಲ್ಲಿ ಎಷ್ಟು ಹಣವನ್ನು ಕೊಡಬೇಕಾದೀತು, ಮಲೆನಾಡಿನಲ್ಲಿ ಮಲಿಕಲ್ ಘಾಟಿನಲ್ಲಿ ಕಟ್ಟಡ ಕಟ್ಟುವುದಾದರೆ ಎಷ್ಟು ಹಣ ಕೊಡಬೇಕಾದೀತು, ತೀವ್ರ ಗಾಳಿ ಬೀಸತಕ್ಕ, ಹೆಚ್ಚು ಮರಮುಟ್ಟು ಸಿಕ್ಕದೇ ಇರತಕ್ಕ ಬಿಜಾಪುರದ ಕಡೆ ಎಷ್ಟು ಹಣ ಕೊಡಬೇಕಾದೀತು ? ಅದೇ ಬೆಂಗಳೂರಿನಂಥ ಪಟ್ಟಣದಲ್ಲಿ ಸ್ಥಳವನ್ನು ಮತ್ತು ಬೇರೆ ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಎಷ್ಟು ಹಣ ಕೊಡಬೇಕಾದೀತು ? ಇವುಗಳನ್ನು ಗಮನದಲ್ಲಿ ಇಟ್ಟುಕೊಳ್ಳದೇ ಒಂದು ಪ್ರಾಥಮಿಕ ಶಾಲೆಗೆ ಇಷ್ಟು ಹಣ ಕೊಡುತ್ತೇವೆ ಉಳಿದದ್ದು ನೀವು ಕೊಡಿ ಎಂದು ಕಣ್ಣು ಮುಚ್ಚಿಕೊಂಡು ಸರಕಾರ ಕಾನೂನು ಚಲಾಯಿಸುವುದಕ್ಕೆ ಮುಂದೆ ಹೋಗುತ್ತದೆ. ಎಷ್ಟೋ ಕಡೆಗಳಲ್ಲಿ ಎರಡು ಹಳ್ಳಿಗಳ ಮಧ್ಯದಲ್ಲಿರತಕ್ಕ ಒಂದು ಶಾಲೆ ಬಿದ್ದು ಹೋಗತಕ್ಕ ಪರಿಸ್ಥಿತಿಯಲ್ಲಿರುತ್ತದೆ—ಆ ಕಡೆ ಗ್ರಾಮದವರು ಈ ಕಡೆ ಗ್ರಾಮದವರು ಸರಿಪಡಿಸಲಿ ಎಂದು ಇರುತ್ತಾರೆ, ಈ ಕಡೆ ಗ್ರಾಮದವರು ಆ ಕಡೆ ಗ್ರಾಮದವರು ಸರಿಪಡಿಸಲಿ ಎಂದು ಇರುತ್ತಾರೆ. ತಲೆ ಮೇಲೆ ಮಣ್ಣು ಕಲ್ಲು ಬೀಳುತ್ತಿರುತ್ತದೆ. ಹಳ್ಳಿಯಲ್ಲಿ ಕಿಟಕಿ ಬಾಗಿಲು ಮಕ್ಕಳ ತಲೆಯ ಮೇಲೆ ಬೀಳುವ ಪರಿಸ್ಥಿತಿಯಿರುತ್ತದೆ; ಅದನ್ನು ನೋಡಿದರೆ ಗೊತ್ತಾಗುತ್ತದೆ. ಕೆಟ್ಟು ಹೋದ ಬಾಗಿಲು ರಿಪೇರಿ ಮಾಡಿಸುವುದಕ್ಕೆ ಗ್ರಾಮದವರು ಆಗ್ರಹಮಾಡುತ್ತಾರೆ ಎಂದೋ ಏನೋ ಯಾರೂ ಮುಂದೆ ಬರುವುದಿಲ್ಲ. ಉಪಾಧ್ಯಾಯರು ಮತ್ತು ಮಕ್ಕಳ ತಲೆ ಮೇಲೆ ಅದು ಬಿದ್ದುಹೋಗುವತನಕ ಗ್ರಾಮ ಪಂಚಾಯಿತಿ ಅವರೂ, ಸರಕಾರದವರೂ ಹಾಗೆಯೇ ಇರುತ್ತಾರೆ. ಇದು ಹಳ್ಳಿಯ ಒಂದು ಅಸಂಗತ ಪರಿಸ್ಥಿತಿ. ಇಂಥಾದ್ದನ್ನು ನಾನು ನೋಡಿದ್ದೇನೆ—ನನ್ನ ಕ್ಷೇತ್ರದಲ್ಲಿ ಒಂದು ಗ್ರಾಮ ಇದೆ. ಇವುಗಳನ್ನು ಪರಿಹಾರ ಮಾಡುವುದಕ್ಕೆ ಇಂತಹ ನಿರ್ವಾಹ ಸಂದರ್ಭಗಳನ್ನು ಒಂದಲ್ಲ ಒಂದು ರೀತಿಯಲ್ಲಿ ದಾಟಿ ಹೋಗಿ ಅಲ್ಲಿ ಸರಿಯಾದ ವ್ಯವಸ್ಥೆಗಳನ್ನು ಕಲ್ಪಿಸುವುದಕ್ಕೆ ಸರ್ಕಾರದವರು ಮಾನವೀಯವಾಗಿ ವಿಚಾರ ಮಾಡಬೇಕಾಗುತ್ತದೆ. ತಮ್ಮ ಸ್ವಂತ ತಲೆಯ ಬುದ್ಧಿ—ಅಠಾರ ಕಛೇರಿ ಬುದ್ಧಿ ಅಲ್ಲ-ಸ್ವಂತ ಬುದ್ಧಿ ಇರಬೇಕು, ಮಂತ್ರಿ ಮಂಡಲದ ಬುದ್ಧಿ ಅಲ್ಲದೆ ಸರ್ಕಾರದ ತಲೆ ಅಲ್ಲದೆ ಪ್ರತಿಯೊಬ್ಬರಿಗೂ ಭುಜದ ಮೇಲೆ ಒಂದು ತಲೆ ಇರುತ್ತದೆ ಆ ತಲೆಯಲ್ಲಿ ಒಂದು ಮೆದುಳು ಇದ್ದಿರುತ್ತದೆ ಅದನ್ನು ಉಪಯೋಗಿಸಿ ಸರ್ಕಾರಕ್ಕೆ ತಿಳಿಸಿ ಕೆಲಸ ಮಾಡಬೇಕಾಗುತ್ತದೆ. ಸರ್ಕಾರದ ತಲೆಯಲ್ಲಿ ಬುದ್ಧಿ ಇಲ್ಲ ಎಂದರೆ ನನ್ನ ತಲೆಯಲ್ಲಿ ಇದೆ ಅದನ್ನು ಸ್ವಲ್ಪ ದಾನವಾಗಿ ಕೊಡುತ್ತೇನೆ ಎಂದು ಸರ್ಕಾರಕ್ಕೆ ಹೇಳುವಷ್ಟು ಧಾತಿ ಅಥವಾ ವಿಶಾಲ ಮನೋಭಾವ ದೊಡ್ಡವರು ಮತ್ತು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕುಳಿತಿರತಕ್ಕ ಅಧಿಕಾರಿಗಳಿಗೆ ಬರಬೇಕು. ಆದ್ದರಿಂದ ಈ ಕಟ್ಟಡಗಳ ವಿಷಯದಲ್ಲಿ ಏನು ಒಂದು ವಿಶೇಷ ಸನ್ನಿವೇಶ ಇದೆಯೋ ಇದನ್ನು ಸರ್ಕಾರದವರು ತೀವ್ರವಾಗಿ ಗಮನಿಸಬೇಕು. ತಾಲ್ಲೂಕು ಬೋರ್ಡ್ ಸಮಿತಿಗೆ ಹಣವನ್ನು ಕೊಡದೇ ಸಾವಿರಾರು ಶಾಲಾ ಕಟ್ಟಡಗಳನ್ನು ನೀವೇ ವಹಿಸಿಕೊಂಡು ಅವುಗಳನ್ನು ರಿಪೇರಿ ಮಾಡಿ ಇಟ್ಟುಕೊಳ್ಳಬೇಕಾಗುತ್ತದೆ, ಅವುಗಳನ್ನು ವಿಸ್ತರಿಸಿ ಎಂದು ಹೇಳುವುದರಲ್ಲಿ ಏನೂ ಅರ್ಥವಿಲ್ಲ. ನಾನು ಕಳೆದ ಏಪ್ರಿಲ್‌ನಲ್ಲಿ ಪ್ರವಾಸ ಮಾಡಿದಾಗ ಕೆಲವು ಶಾಲೆಗಳನ್ನು ನೋಡಿದೆ. ಅವು ಈ 10 ವರ್ಷಗಳಲ್ಲಿ ಮಕ್ಕಳಿಂದ ತುಂಬ ಕಿಕ್ಕಿರಿದು ಉಸಿರು ಕಟ್ಟುವಹಾಗಿದೆ. 40 ಮಕ್ಕಳು ಕುಳಿತುಕೊಳ್ಳತಕ್ಕ ಸ್ಥಳದಲ್ಲಿ 200 ಮಕ್ಕಳು ಕುಳಿತಿರತಕ್ಕ ದೃಶ್ಯ, ಕಟ್ಟಡ ಕಿರಿದು ಮಕ್ಕಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಇದೆ, ವಿಸ್ತರಿಸುವುದಕ್ಕೆ ಸರ್ಕಾರದವರು ಗ್ರಾಂಟ್ ಕೊಟ್ಟಿಲ್ಲ ಹಾಗೂ ಕಟ್ಟಡಕ್ಕೆ ಸ್ಥಳ ಅಕ್ವೈರ್ ಮಾಡಿಕೊಟ್ಟರೆ ನಮಗೆ ಅದು ಇದೆ ಇದು ಇದೆ ಎಂದು ಊರಿನವರಿಗೆ ಇವರು ಹೊಂದರೆ ಹೇಳುತ್ತಾರೆ. ತಾಲ್ಲೂಕು ಬೋರ್ಡ್ ಸಮಿತಿಯವರು ನಮಗೆ ಅಷ್ಟು ಹಣ ಇಲ್ಲ, ಇದ್ದದ್ದೇ 3000 ರೂಪಾಯಿ, ಅದನ್ನು 30 ಹಳ್ಳಿಗಳಿಗೆ ಹಂಚಿದ್ದೇವೆ ಎಂದು ಹೇಳುತ್ತಾರೆ ಒಂದು ಹಳ್ಳಿಗೆ ಹೆಚ್ಚು ಹಣ ಸಿಕ್ಕಿ ಒಳ್ಳೆಯ ಕಟ್ಟಡ ಆಗಬಹುದು, ಇನ್ನೊಂದು ಹಳ್ಳಿಗೆ ಹೆಚ್ಚು ಹಣ ಸಿಕ್ಕದೆ ಕೆಟ್ಟ ಕಟ್ಟಡ ಆಗಬಹುದು. ಇದನ್ನು ಗಮನಕ್ಕೆ ತೆಗೆದುಕೊಳ್ಳದೇ ಹೋದರೆ—ನಾನು ನೋಡಿದ್ದೇನೆ ಒಬ್ಬರ ತೊಡೆಯ ಮೇಲೆ ಒಬ್ಬರು ಕುಳಿತುಕೊಳ್ಳುವ ಪರಿಸ್ಥಿತಿಯನ್ನು—ಕುಳಿತು ಕೊಳ್ಳುವುದಕ್ಕೆ ಮಣೆಯೇ ? ಅಥವಾ ಏನಾದರೂ ವ್ಯವಸ್ಥೆಯೇ ? ಮಕ್ಕಳು ನೆಲದ ಮೇಲೆ ತೆವಳುತ್ತಾ ಇರುತ್ತಾರೆ ಇಂಥಾ ಪರಿಸ್ಥಿತಿಯಲ್ಲಿ ಇವತ್ತು ವಿದ್ಯಾಭ್ಯಾಸ

(ಶ್ರೀ ಎಸ್. ಗೋಪಾಲಗೌಡ):

ವನ್ನು ಕೊಡುತ್ತೇವೆ. ಇದರಲ್ಲಿ ಈ ಕಡೆ ಒಂದು ಶಾಲೆ ಆದರೆ ಅದರ ಬೆನ್ನಿಗೆ ಇನ್ನೊಂದು ಶಾಲೆ ಈ ಕಡೆ ಉಪಾಧ್ಯಾಯ ಭೂಗೋಳ ಪಾಠ ಮಾಡುತ್ತಾ ಇದ್ದರೆ ಆ ಕಡೆ ಉಪಾಧ್ಯಾಯ ಲೆಕ್ಕದ ಪಾಠ ಮಾಡುತ್ತಾ ಇರುತ್ತಾನೆ. ಇಬ್ಬರಿಗೂ ಒಂದೇ ಹಲಗೆ ಇರುತ್ತದೆ. ಇಂಥ ಮಕ್ಕಳು ಬೆನ್ನಿಗೆ ಬೆನ್ನು ಕೊಟ್ಟು ಕುಳಿತಿರತಕ್ಕ ಪರಿಸ್ಥಿತಿಯಲ್ಲಿ ಏನು ವಿದ್ಯಾಭ್ಯಾಸ ಆದೀತು ಎಂಬುದನ್ನು ವಿಚಾರ ಮಾಡಬೇಕು. ಮಲೆನಾಡಿನಂಥ ಪ್ರದೇಶ, ಕೊಡಗಿನಂಥ ಪ್ರದೇಶ ಮತ್ತು ಮರ ಮುಟ್ಟು ಸಿಕ್ಕದ ಬಿಜಾಪುರ ಪ್ರದೇಶ ಈ ಎಲ್ಲಾ ಪ್ರದೇಶಗಳನ್ನೂ ಗಮನಕ್ಕೆ ತೆಗೆದುಕೊಂಡು ದೊಡ್ಡ ಹಳ್ಳಿ ಯಾವುದು, ಯಾವುದಕ್ಕೆ ಹೆಚ್ಚು ಸಿಕ್ಕಬೇಕು, ಎಲ್ಲಿ ಹೆಚ್ಚಿನ ಅವಶ್ಯಕತೆಗಳನ್ನು ಪೂರೈಸಬೇಕು, ತುರ್ತಾಗಿ ಪೂರೈಸಬೇಕು ಎಂಬುದನ್ನು ಗಮನಿಸಿ ಸರ್ಕಾರದವರು ಕ್ರಮ ತೆಗೆದುಕೊಳ್ಳದೇ ಹೋದರೆ ಇದು ಬಹಳ ದೊಡ್ಡ ಅಪಾಯಕ್ಕೆ ಹಾದಿಯಾಗುತ್ತದೆ. ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕು; ಕಟ್ಟಡ ಇಲ್ಲದೇ ಇದ್ದರೆ ಕಟ್ಟಡ ಕಟ್ಟಿ ಕೊಡಿ, ಹಣ ಕೊಡಿ, ನೀವೇ ಉಪಾಧ್ಯಾಯರನ್ನು ನೇಮಕ ಮಾಡಿ ಶಾಲೆಯನ್ನು ತೆರೆಯುತ್ತೇವೆ ಎಂಬ ಈ ಮಾರವಾಡಿ ಹೇಳುವ ಷರತ್ತುಗಳನ್ನು ಸರ್ಕಾರದವರು ಅನೇಕ ಸಲ ಹೇಳುತ್ತಾರೆ. 20 ಹುಡುಗರನ್ನು ಕೊಡಿ ಇಲ್ಲದೇ ಇದ್ದರೆ 3,000 ರೂಪಾಯಿ ಡಿಪಾಸಿಟ್ಟು ಮಾಡಿ ಎಂದು ಈ ತರಹ ಸರ್ಕಾರದಿಂದ ಕೇಳುವುದು ಬಹಳ ಅಸಹನೀಯವಾದುದು, ಇಷ್ಟು ಬೇಜವಾಬ್ದಾರಿಯಿಂದ ಸರ್ಕಾರದವರು ವರ್ತಿಸುತ್ತಿದ್ದಾರಲ್ಲ ಎಂದು ಒಂದೊಂದು ಸಲ ಆಶ್ಚರ್ಯವಾಗುತ್ತದೆ, ನೀವು ಒಂದು ಉಸಿರಿನಲ್ಲಿ 6 ವರ್ಷ ತುಂಬಿದ ಎಲ್ಲಾ ಹೆಣ್ಣು ಮತ್ತು ಗಂಡು ಮಕ್ಕಳಿಗೂ ಕಡ್ಡಾಯ ಶಿಕ್ಷಣ ಕೊಡಬೇಕು, ಇದು ರಾಜ್ಯಾಂಗದ ನಿರ್ದೇಶನ ಎಂದು ಹೇಳುತ್ತೀರಿ. ಇದು ನಿಮ್ಮ ಒಪ್ಪಿತವಾದ ಗುರಿಯಾಗಿದೆ ಇದನ್ನು ಕಾರ್ಯಗತ ಮಾಡುವುದರಲ್ಲಿ ಇದ್ದೇವೆ ಎಂದು ಒಂದು ಉಸಿರಿನಲ್ಲಿ ಹೇಳಿದರೆ ಇನ್ನೊಂದು ಉಸಿರಿನಲ್ಲಿ ಶಾಲೆಗಳಿಗೆ ಹುಡುಗರನ್ನು ಕಳುಹಿಸಿದರೂ ಕೂಡ ಕೆಲವು ಊರುಗಳಲ್ಲಿ 3-4 ಮೈಲಿಗಳ ದೂರದಲ್ಲಿ ಶಾಲೆ ಹತ್ತಿರ ಎಲ್ಲೂ ಇಲ್ಲ ಎಂದರೂ ಅವರಿಗೂ ಈ ಉತ್ತರವನ್ನು ಸರ್ಕಾರದವರು ಕೆಲವು ಸಲ ಕೊಡುತ್ತಾರೆ, ಇದನ್ನೂ ಕೂಡ ಮಾನ್ಯ ವಿದ್ಯಾ ಸಚಿವರು ವಿಚಾರ ಮಾಡಬೇಕು. ಮಕ್ಕಳ ಸಂಖ್ಯೆ 19 ಇರಬಹುದು ಶಾಲೆ ತೆಗೆಯಲಿಕ್ಕೆ 20 ಜನ ಹುಡುಗರು ಇಲ್ಲ ಎಂದು ಶಾಲೆ ತೆಗೆಯದೇ ಹೋದರೆ ಆ 19 ಮಕ್ಕಳ ಗತಿ ಏನು? ಕಾನೂನಿಗೆ ಕಣ್ಣು ಇರುವುದಿಲ್ಲ—ಹೃದಯ, ಮನಸ್ಸು ಇರುವುದಿಲ್ಲ. ಇಂತಹ ಕಾನೂನುಗಳನ್ನು ಜನರ ಮುಂದೆ ಹಿಡಿಯುವುದರಿಂದ ಏನು ಪ್ರಯೋಜನ? 19 ಮಕ್ಕಳನ್ನು ಕೊಡುವ ಹಳ್ಳಿಯೇ ಆದಾಗ—20 ಮಕ್ಕಳು ಇಲ್ಲ ಎಂದು ಶಾಲೆ ತೆರೆಯದಿದ್ದರೆ 19 ಜನ ಇರುವ ಮಕ್ಕಳು ಬೇರೆ ಕಡೆಗೆ ಹೋಗಿ ಊಟ ಎಲ್ಲಿ ಮಾಡಬೇಕು? ಅವರಿಗೆ ವಿದ್ಯಾಭ್ಯಾಸ ಹೇಗೆ ಕೊಡಿಸಬೇಕು? ಈ ಒಂದು ಸಂದರ್ಭವನ್ನು ತಾವು ತಪ್ಪಿಸಿಕೊಂಡು ಹೊಣೆಗಾರಿಕೆಯನ್ನು ತೀರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾವ 6 ವರ್ಷ ತುಂಬಿದ ಹೆಣ್ಣು ಮತ್ತು ಗಂಡು ಮಗುವನ್ನೂ ಶಾಲೆಯ ಹೊರಗಡೆ ಅಲೆಯುವುದನ್ನು ನೋಡುವುದಕ್ಕೆ ನನ್ನಿಂದ ಸಾಧ್ಯವಿಲ್ಲ.

ಏಕೆಂದರೆ ಇದು ಸರ್ಕಾರದವರ ಆದ್ಯಕರ್ತವ್ಯ. ಸರ್ಕಾರದವರೇ ಮಾಡುತ್ತೇವೆಂದು ಒಪ್ಪಿಕೊಂಡಿರುವುದರಿಂದ ಇದು ಇಂದು ಅವರ ಆದ್ಯಕರ್ತವ್ಯವಾಗಿದೆ. ಆದರೆ ಸರ್ಕಾರದವರಿಗೆ ಹಣದ ಕೊರತೆ ಇರಬಹುದು, ಜನಗಳು ಮುಂದೆ ಬಾರದಿರಬಹುದು, ನುರಿತ ಶಿಕ್ಷಕರಿಲ್ಲದಿರಬಹುದು, ಆದಾಗ್ಯೂ ಅವರ ಈ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಮತ್ತು ಕಡ್ಡಾಯವಾಗಿ ಕೊಟ್ಟೇತೀರಬೇಕು. ದೇಶ ಸ್ವಾತಂತ್ರ್ಯಗೊಳಿಸಿದ ಹದಿನಾರು ವರ್ಷಗಳ ಅವಧಿಯಲ್ಲಿ ನಾವೀಗ ಒಂದು ಪೀಳಿಗೆಯನ್ನು ಕಾಡುಪಾಲು ಮಾಡಿದ್ದೇವೆ. ನೂರಕ್ಕೆ ಐವತ್ತರಷ್ಟು ಹುಡುಗರು ಶಾಲೆಯ ಹೊರಗಡೆ ಇದ್ದಾರೆ ಎನ್ನುವುದನ್ನು ತಾವೆಲ್ಲರೂ ನೋಡಿರಬಹುದು.

Mr. SPEAKER.—This resolution has already been discussed for the 3 hours and would have been put to the vote of the House but for the hon. Member's desire to participate.

Sri S. GOPAL GOWDA.—I want 5 to 10 minutes.

Mr. SPEAKER.—What is the opinion of the House? Would it like to spend some more time?

Sri S. SIVAPPA.—This is an important resolution and the others to follow are not so important. We may spend 2 hours more on this resolution.

Mr. SPEAKER.—I have no objection at all if the House agrees. But the question can be discussed under Supplementary demands and on other occasions. Shall I fix the time upto 11-30 A.M.?

HON'BLE MEMBERS.—Yes.

Mr. SPEAKER.—There would be no time-limit.

Sri S. R. KANTHI (Minister for Education).—I require about 45 minutes.

Sri S. M. KRISHNA (Maddur).—The Hon. Minister may reply at 11-30 A.M.

Mr. SPEAKER.—We will see.

ಶ್ರೀ ಎಸ್. ಗೋಪಾಲಗೌಡ.—ಇನ್ನು ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸ ಪಡೆಯುತಕ್ಕ ಮಕ್ಕಳಿಗೆ,ಅದರಲ್ಲೂ ಹಳ್ಳಿಗಾಡಿನ ಜನಾಂಗದವರಿಗೆ ಕೆಲವು ವಿಶೇಷ ಸೌಲಭ್ಯಗಳನ್ನು ಕೊಡಬೇಕೆಂದು ಅದಕ್ಕಾಗಿ ಕೆಲವು ಹಣವನ್ನು ವಿಸಲಾಗಿಟ್ಟಿದ್ದಾರೆ. ಆದರೆ ಈ ಯೋಜನೆ ಕೆಲವು ವೇಳೆ ಕೇವಲ ಒಂದು ಪ್ರಚಾರಾರ್ಥಯೋಜನೆ ಆಗಿರುತ್ತದೆಯೇ ವಿನಾ ನಿಜವಾಗಿಯೂ ಜನರಿಗೆ ಇದರಿಂದ ಏನು ಸೌಲಭ್ಯ ದೊರೆಯಬೇಕೋ ಅದು ದೊರೆಯುತ್ತಿಲ್ಲ. ಈ ವಿಚಾರ ಎಲ್ಲರಿಗೂ ಗೊತ್ತಿರುತ್ತದೆ. ಕೆಲವು ಮಕ್ಕಳಿಗೆ ಬಟ್ಟೆ ಕೊಡಬೇಕೆಂಬ ಒಂದು ವ್ಯವಸ್ಥೆ ಮಾಡಿದ್ದಾರೆ. ಆ ಬಟ್ಟೆಗಳನ್ನು ಸರಬರಾಯಿ ಮಾಡು ವುದರಲ್ಲಿ ಅಳತೆಗೆ ಸರಿಯಾದ ಬಟ್ಟೆಗಳನ್ನು ತರುವುದಿಲ್ಲ. ರೆಡಿಮೇಡ್ ಷಾಪುಗಳಲ್ಲಿ ಕೊಂಡುಬಿಡು ತ್ತಾರೆ. ಆರಾಣೆ ಬೆಲೆ ಇದ್ದರೆ ಎಂಟಾಣೆ ಬಿಲ್ ಹಾಕಿಸಿ ಅದರಲ್ಲೂ ಎರಡಾಣೆ ಜೇಬಿಗೆ ಹಾಕತಕ್ಕಂಥ ಜನಗಳಿದ್ದಾರೆ. ನಮ್ಮ ಕಡೆ ಹೆಣದ ಬಾಯಿನಲ್ಲಿರತಕ್ಕ ಬೆಣ್ಣೆ ತಿನ್ನತಕ್ಕ ಜನ ಎಂದು ಹೇಳುತ್ತಾರೆ, ಅಂಥ ಜನ ಇವರು. ಹರಿಜನರ ಮಕ್ಕಳ ಬಟ್ಟೆಗಾಗಿ 5 ರೂಪಾಯಿ ಗ್ರಾಂಟ್ ಕೊಟ್ಟಿದ್ದರೆ ಅದರಲ್ಲೂ ಒಂದೂವರೆ ರೂಪಾಯಿ ಉಳಿಸಿಕೊಳ್ಳುವಂಥ ಜನ ನಮ್ಮಲ್ಲಿದ್ದಾರೆ. ಮೂರಡಿ ಉದ್ದ ಇರತಕ್ಕ ಹುಡುಗನಿಗೆ ಆರಂಚಿನ ನಿಕ್ಕರನ್ನು ಕೊಡುತ್ತಾರೆ. ಈ ವಿಚಾರಗಳನ್ನೆಲ್ಲ ಮಾನ್ಯ ಸಚಿವರು ಸ್ವಲ್ಪ ಲಾಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕೆಲವು ವಿಚಾರಗಳು ನಾವು ಎಷ್ಟರಮಟ್ಟಿಗೆ ಕೆಟ್ಟು ಹೋಗಿದ್ದೇವೆಂಬುದನ್ನು ಸೂಚಿಸುತ್ತದೆ. ಮಕ್ಕಳ ವಿಚಾರದಲ್ಲೂ ಅನೇಕ ಪುಣ್ಯಾತ್ಮರು ನಾನಾ ರೀತಿ ಯಲ್ಲಿ ಧಾನಧರ್ಮಗಳನ್ನು ಮಾಡುತ್ತಾರೆ. ಹಾಗೆ ಯಾರಾದರೂ ಹಣ ಕೊಟ್ಟರೆ ಅದಕ್ಕೆ ಒಂದು ಸರಿ ಯಾದ ವ್ಯವಸ್ಥೆ ಬೇಡವೇ? ನಮ್ಮ ಕಡೆ ಹುಡುಗರು 3-4 ಮೈಲಿಗಳಿಂದ ಬರುತ್ತಾರೆ, ಅವರಿಗೆ ದಿನವೆಲ್ಲ ಊಟ ಇರುವುದಿಲ್ಲ. ಸಂಜೆ ಮನೆಗೆ ಹೋಗುವಾಗ ಅವರ ಬಾಯಲ್ಲಿ ಒಂದು ಹನಿ ಎಂಜಲು ಸಹಾ ಇರು ವುದಿಲ್ಲ. ಈ ಹಿಂದೆ ಡಾ. ಲೋಹಿಯಾರವರು ಒಬ್ಬ ಮನುಷ್ಯನ ಆದಾಯ ಮೂರಾಣೆ ಇದೆಂದು ಹೇಳಿ ದಾಗ ಸಭೆಯಲ್ಲಿ ಒಂದು ಕೋಲಾಹಲವೇ ಎದ್ದಿತ್ತು. ಈ ದಿವಸ ಭರತಖಂಡದಲ್ಲಿ 27 ಕೋಟಿ ಜನ ಹಳ್ಳಿಗಾಡಿನಲ್ಲಿರುತ್ತಾರೆ. ಪೇಟೆಯಲ್ಲಿರತಕ್ಕ ಜನರಿಗೆ ಹೇಗೋ ದುಡ್ಡು ಬರುತ್ತದೆ. ಅವರು ನಾಯಿಯ ಬಾಲಕ್ಕೂ ದುಡ್ಡನ್ನು ಕಟ್ಟಬಲ್ಲರು. ಪೇಟೆಯಲ್ಲಿರತಕ್ಕ ಒಬ್ಬ ಕಂಟ್ರಾಕ್ಟರ ಮಗ ದಿನಕ್ಕೆ ಹತ್ತು ರೂಪಾಯಿಗಳನ್ನು ಬೇಕಾದರೂ ಖರ್ಚು ಮಾಡಬಲ್ಲ. ಮಂತ್ರಿಗಳ ಮಕ್ಕಳು ಕಾರಿನಲ್ಲೇ ಓಡಾಡಬಹುದು ಆದರೆ ಹಳ್ಳಿ ಮಕ್ಕಳಿಗೆ ಗಂಜಿಗೆ ಉಪ್ಪು ಸಿಕ್ಕುವುದು ಕಷ್ಟವಾಗಿರುತ್ತದೆ. ಆ ಶೀತ ಪ್ರದೇಶದಲ್ಲಿ ಬೆಳಗ್ಗೆ ನೀರು ಕುಡಿಯುವುದಕ್ಕಾಗುವುದಿಲ್ಲ. ಅಂಥ ಬಡಮಕ್ಕಳಿಗೆ ಕಾಫಿ ಎಲ್ಲಿಂದ ಬರಬೇಕು. ಆ ಬಡವರ ಮಕ್ಕಳಿಗೆ ಅನೇಕ ವೇಳೆ ಊಟಕ್ಕೇ ತೊಂದರೆ ಇರುತ್ತದೆ. ಹಾಗಿರುವಾಗ ಆ ಮಕ್ಕಳಿಗೆ ಪಾಠ ಪ್ರವಚನಗಳಲ್ಲಿ ಮನಸ್ಸು ಹೇಗೆ ತಾನೆ ಸರಿಯಾಗಿ ನಿಲ್ಲಲು ಸಾಧ್ಯ? ಹಳ್ಳಿಗಾಡಿನಲ್ಲಿರತಕ್ಕ ಅನೇಕ ತಂದೆತಾಯಿಗಳಿಗೆ ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಆ ಮಕ್ಕಳಿಗೆ ಪುಸ್ತಕ,ಬಟ್ಟೆ,ಸೀಸದಕಡ್ಡಿ,ಫೀಜು, ಕ್ಕೆಗೆ ಎರಡಾಣೆ ಇಷ್ಟನ್ನು ಒದಗಿಸಲು ಸಾಧ್ಯವಿರುವು ದಿಲ್ಲ. ಪಟ್ಟಣದಲ್ಲೂ ಇಂಥ ಕೆಲವು ಜನಗಳಿರುತ್ತಾರೆ. ಅಂಥವರು ಯಾರೆಂದರೆ ಬಿನ್ನಿ, ಮಿನರ್ವ ಇತ್ಯಾದಿ ಮಿಲ್ಲುಗಳಲ್ಲಿ ಕೆಲಸಮಾಡತಕ್ಕ ಜನರು, ಪೋಲೀಸ್ ಕಾನ್‌ಸ್ಟೇಬಲ್‌ಗಳು, ಬಡಉಪಾಧ್ಯಾ ಯರುಗಳು ಇಂಥವರು ಪಟ್ಟಣಗಳಲ್ಲಿದ್ದರೂ ಅವರು ಬಡವರೇನೆ. ಆದರೆ ಈ ಉಪಾಧ್ಯಾಯರ ಮಕ್ಕಳಿಗೆ ಶಾಲಾ ಫೀ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಬಹುದು ಆದರೆ ಆ ಹುಡುಗ ಶಾಲೆಗೆ ಹೋಗಬೇಕಾದರೆ ಆತನಿಗೆ ಚಡ್ಡಿ,ಅಂಗಿ,ಪುಸ್ತಕ, ಪೆನ್‌ಸಿಲ್‌ಕಡ್ಡಿ, ಇತರ ವೆಚ್ಚಕ್ಕಾಗಿ ಕೈಯಲ್ಲಿ ದಿನಕ್ಕೆ ಒಂದೆರಡಾಣೆ ದುಡ್ಡು ಇವೆಲ್ಲ ಲೆಕ್ಕ ಹಾಕಿದರೆ ಇದೆಷ್ಟಾಗುತ್ತದೆ?

[SRI M. SRINIVASA NAIK in the Chair]

ಹಾಗೆ ಕೇಳಿದರೆ ಮಾನ್ಯ ವಿದ್ಯಾ ಸಚಿವರು ಒಂದು ರೀತಿಯಾಗಿ ಉತ್ತರ ಕೊಡು ತ್ತಾರೆ. ಅವರ ತಲೆಯಲ್ಲಿ ಅನೇಕ ವಿಷಯಗಳು ಬರುತಿರುತ್ತವೆ. ಪಾದರಸದಂತೆ ಅವರ ಬುದ್ಧಿಯೂ ಓಡುತ್ತಿರುತ್ತದೆ. ಇದು ಅಲ್ಲದೆ ಈಚೆಗೆ ಅವರೇನು ಮಾಡಿದ್ದಾರೆಂದರೆ ಪ್ರತಿಯೊಂದು ಮಗುವೂ ಕೂಡ ಎರಡು ರೂಪಾಯಿಗಳನ್ನು ಕಲ್ಯಾಣ ನಿಧಿಗಾಗಿ ಕೊಡಬೇಕೆಂದು ನಿಗದಿ ಮಾಡಿದ್ದಾರೆ.

ಶ್ರೀ ಎಸ್.ಆರ್.ಕಂಠಿ.—ಇದು ಪ್ರೈಮರಿ ಶಾಲೆಗೆ ಹೋಗುವ ಹುಡುಗರಿಗಲ್ಲ. ಬರೀ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಹೋಗುವ ಹುಡುಗರಿಗೆ ಮಾತ್ರ.

ಶ್ರೀ ಎಸ್. ಗೋಪಾಲಗೌಡ.—ಇಂತಹ ನಿಧಿಯನ್ನು ಹೈಸ್ಕೂಲುಗಳಿಗೆ ಮಾತ್ರ ಎಂದರೂ ಕೊಡುವುದು ಕಷ್ಟವಾಗುತ್ತದೆ. ಕೆಲವು ಕಡೆ ಶ್ರೀಮಂತರ ಮಕ್ಕಳು ಪ್ರೈಮರಿ ಶಾಲೆಗಳಲ್ಲಿ ಓದಿಸುವುದಕ್ಕೆ ಸುಮಾರು ಇನ್ನೂರು ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದಾರೆ. ಸುಮಾರು 6,7, ಮತ್ತು 8 ವರ್ಷದ ಮಕ್ಕಳು ಬೆಂಗಳೂರಿನಲ್ಲಿರುವ ಪ್ರೈಮರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಇಂತಹ ಸ್ಕೂಲುಗಳು ಡೆಹರಾಡೂನಿನಲ್ಲಿ ಹಾಗೂ ಮಸ್ಸೂರಿ ಮುಂತಾದ ಕಡೆಗಳಲ್ಲಿರುವ ಶಾಲೆಗಳಿಗೆ ಹೋಗುವ ಮಕ್ಕಳಿಂದಲೂ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆ. ಶಾಲೆಗಳಿಗೆ ಹೋಗುವ ಮಕ್ಕಳಿಗಾಗಿ ಶಾಲೆಯು ಆರಂಭವಾಗಿ ಅವರ ವಿದ್ಯಾಭ್ಯಾಸವು ಪೂರೈಕೆಯಾಗುವವರೆಗೆ ಕೆಲವು ಸೌಕರ್ಯಗಳನ್ನು ಕೊಡಬೇಕೆಂದು ಅಷ್ಟು ಹಣವನ್ನು ಕೊಡಬೇಕೆಂದು ಮಾಡಿರುವುದನ್ನು ನಾವು ಒಪ್ಪುತ್ತೇನೆ. ಆದರೆ ಅದರ ವಿತರಣೆ ಸರಿಯಾಗಿ ಆಗುತ್ತಿದೆಯೇ ಎನ್ನುವುದನ್ನು ಈಗ ವಿವೇಚನೆ ಮಾಡುವುದು ಅಪ್ರಕೃತ ಮತ್ತು ಅದರ ವಿವಂಚನೆಗೆ ಈಗ ಒಳಗಾಗಬೇಕಾದ ಅಗತ್ಯವೂ ಇಲ್ಲ. ಆದರೆ ಕೆಲವು ಬೇರೆ ಸಂದರ್ಭಗಳಲ್ಲಿಯೂ ಇಂತಹ ಶಾಲೆಗಳಲ್ಲಿ ಹಣದ ವಸೂಲಿ ನಡೆಯುತ್ತಿದೆ. ಇದನ್ನು ಮಾಡಿರುವುದರಿಂದ ಮಕ್ಕಳು ಶಾಲೆಗೆ ಬರುವುದೂ ಕಷ್ಟವಾಗುತ್ತದೆ. ಅಲ್ಲದೆ ಸರ್ಕಾರದವರು ಮಾನವೀಯತೆಯ ದೃಷ್ಟಿಯಿಂದ ಕೆಲವು ಸೌಲಭ್ಯಗಳನ್ನು ಕೊಡುವಂತಿರಬೇಕು ಎಂದು ಹೇಳುತ್ತ ಇದರಲ್ಲಿ ಬಟ್ಟೆಯನ್ನೂ ಕೊಡಬೇಕೆಂದು ಮಾಡಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ, ಸುಮಾರು ಐದು ಲಕ್ಷ ಮಂದಿ ವಿದ್ಯಾರ್ಥಿಗಳಿಗೆ ಇದರಿಂದ ಪ್ರಯೋಜನವಾಗಬೇಕು ಎಂದು ಹೇಳುವಾಗ ಇದರ ವ್ಯವಸ್ಥೆ ಚೆನ್ನಾಗಿ ನಡೆಯಬೇಕು. ಆದರೆ ಹಣವೇನೋ ಖರ್ಚಾಗುತ್ತದೆ ಅದರಂತೆ ಇದರ ವ್ಯವಸ್ಥೆ ಸರಿಯಾಗಿ ಆಗುತ್ತಿದೆ ಎನ್ನುವುದು ಕಾಣುತ್ತಿಲ್ಲ. ಇವೊತ್ತು ಸೆಪ್ಟಂಬರ್ ತಿಂಗಳು 7ನೇ ತಾರೀಖಿನಲ್ಲಿದ್ದೇವೆ. ಆದರೆ ಕೆಲವು ಊರುಗಳಲ್ಲಿರುವ ಶಾಲೆಗಳಿಗೆ ಇನ್ನೂ ದುಡ್ಡು ತಲುಪಿಯೇ ಇಲ್ಲ. ದುಡ್ಡನ್ನು ಹಂಚುವ ಚಾನಲ್ಲು ಏನಿದೆ, ಅದರಿಂದ ಹಣದ ವರ್ಗಾವಣೆಯು ಗೊಂದಲದಿಂದ ಮತ್ತು ಮಂತ್ರಿಗಳ ಸ್ವಂತ ಕೆಲಸಗಳಿಂದಲೂ, ಹೀಗೆ ಬೇರೆ ಬೇರೆ ಕೆಲಸಗಳು ಅಡ್ಡ ಬರುವುದರಿಂದ ತಡವಾಗುತ್ತಿದೆ. ನಾನು ಹೇಳುತ್ತಿರುವುದು ಕೊಡಚಾದ್ರಿ ಮತ್ತು ಪಶ್ಚಿಮ ತುದಿಯಲ್ಲಿರುವ ಹುಲಿಕಲ್ಲು ಇತ್ಯಾದಿ ಊರುಗಳಿಗೆ ಹೋಗಬೇಕಾದರೆ ಡಿ. ಡಿ. ಪಿ. ಐ. ನಿಂದ ಡಿ. ಪಿ. ಐ. ಡಿ. ಪಿ. ಐ. ಕಡೆಯಿಂದ ಇನ್ಸ್‌ಪೆಕ್ಟರು ಕಡೆಗೆ, ಇನ್ಸ್‌ಪೆಕ್ಟರು ಕಡೆಯಿಂದ ಹೆಡ್‌ಮಾಸ್ಟರವರ ಕಡೆಗೆ ಹಣ ಹೋಗಿ ತಲಪಬೇಕಾದರೆ ಬಹುಶಃ ನವಂಬರು ಕೊನೆಯ ಹೊತ್ತಿಗೆ ಹೋದರೆ ಅವರ ಪುಣ್ಯ. ನಾವೆಲ್ಲಾ ಈಗ ಸ್ಕಾಲರ್‌ಷಿಪ್ಪುಗಳನ್ನು ಹಂಚುವುದನ್ನು ನೋಡುತ್ತಿದ್ದೇವೆ. ಕೆಲವು ವಿದ್ಯಾರ್ಥಿಗಳಿಗೆ ಸ್ಕಾಲರ್ ಷಿಪ್ಪು 500-600 ರೂಪಾಯಿಗಳಷ್ಟು ಅವರ ವಿದ್ಯಾಭ್ಯಾಸ ಮುಗಿದ ಮೇಲೆ ತಲಪಿರುವ ಸಂದರ್ಭಗಳೂ ಇವೆ. ಇಂತಹ ಒಂದು ಸ್ಥಿತಿ ಈಗ ಇದೆ. ಈಗ ಬಟ್ಟೆಯನ್ನೂ ಹಂಚಬೇಕೆಂದು ಮಾಡಿದ್ದಾರೆ. ಇದನ್ನು ಕೊಡುವುದೇನೋ ಅತ್ಯಗತ್ಯ. ಆದರೆ ಕೆಲವು ಕಡೆ ಒಂದು ಹತ್ತಿಪ್ಪತ್ತು ಮಂದಿ ಹರಿಜನರ ಮಕ್ಕಳುಗಳು ಇವೆ. ಅವು ಶಾಲೆಗೆ ಹೋಗಲು ಬಟ್ಟೆಯೇ ಇರುವುದಿಲ್ಲ. ಅಂತಹ ಮಕ್ಕಳು ಆರು ವರ್ಷ ತುಂಬಿದಾಕ್ಷಣ ಶಾಲೆಗೆ ಕಳುಹಿಸಬೇಕೆಂದು ಕಡ್ಡಾಯ ಮಾಡಿದ್ದೀರಿ ! ಅವರಿಗೆ ಆರು ವರ್ಷ ಆಗಿದೆಯೋ ಏಳು ವರ್ಷವಾಗಿದೆಯೋ ಐದು ವರ್ಷವಾಗಿದೆಯೋ ಅದನ್ನು ಹೇಳಲು ಅವರಲ್ಲಿ ಯಾವ ಜಾತಕದ ಕಾಪೀನೂ ಇಲ್ಲ, ಹುಟ್ಟಿದ ತಾರೀಖು ಕೂಡ ಗೊತ್ತಿರುವುದಿಲ್ಲ. ಅವರಿಗೆ ಸ್ಕಾಲರ್‌ಷಿಪ್ಪುಗಳನ್ನು ಹಂಚುವಾಗ ಒಬ್ಬರು ಅವನಿಗೆ 6, 7 ವರ್ಷಗಳಾಗಿವೆ ಎಂದರೆ ಇನ್ನೊಬ್ಬರು ಇನ್ನೂ ನಾಲ್ಕೂವರೆ ವರ್ಷ ಮಾತ್ರ ಆಗಿದೆ ಎಂದು ಹೇಳುತ್ತಾರೆ. ಇಂತಹ ಅವ್ಯವಸ್ಥೆಗಳು ಎಷ್ಟೋ ಇರುತ್ತವೆ. ಇದರ ಬಗ್ಗೆ ಸರ್ಕಾರ ಸರ್ವೆ ಮಾಡಿ ಎಲ್ಲೆಲ್ಲಿ ಎಷ್ಟು ವರ್ಷದ ಮಕ್ಕಳುಗಳು ಇವೆ ಎನ್ನುವುದನ್ನು ತಿಳಿಯಲು ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಂತೆ ತೋರುವುದಿಲ್ಲ. ಎಲ್ಲ ಮಕ್ಕಳನ್ನೂ ಈಗ ಕಡ್ಡಾಯವಾಗಿ ವಿದ್ಯಾಭ್ಯಾಸಕ್ಕಾಗಿ ಶಾಲೆಗಳಿಗೆ ಕಳುಹಿಸುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಇದನ್ನು ಕಾರ್ಯಗತ ಮಾಡುವಾಗ ಆರು ವರ್ಷದ ಮಕ್ಕಳು ಎಂದು ಶಾಲೆಗೆ ಕಳುಹಿಸುತ್ತಾರೆ. ಆದರೆ 7ನೆಯ ವರ್ಷದಲ್ಲಿ ಎಷ್ಟು ಜನ ಮಕ್ಕಳು ಶಾಲೆ ಬಿಟ್ಟರು ಎನ್ನುವುದರ ಅಂಕಿ ಸಂಖ್ಯೆಗಳೇನಾದರೂ ಇವೆಯೋ ಎಂದರೆ ಅದು ಕೂಡ ಇಲ್ಲ. ಎಷ್ಟೋ ಕಡೆ ನಾವು ನೋಡಿರುವಂತೆ ಗೇಣಿ ಜಮೀನು ಮಾಡುವವರ ಮಕ್ಕಳು 7, 8, 9 ವರ್ಷದ ಹುಡುಗರು ಗುಳ ಕಟ್ಟಿಕೊಂಡು ಉಳುವುದಕ್ಕೆ ಹೋಗುತ್ತಾರೆಯೇ ಹೊರತು ಅವರನ್ನು ಶಾಲೆಗಳಿಗೆ ಸೇರಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಹೀಗೆ ಲೆಕ್ಕಕ್ಕೆ ಆರು ತುಂಬಿದ ಮಕ್ಕಳು ಎಷ್ಟು ಜನರು ಶಾಲೆಗಳಿಗೆ ಬಂದು 7ನೇ ವರ್ಷದಲ್ಲಿ ಬಿಡುತ್ತಿರುವರು ಎನ್ನುವುದರ ಲೆಕ್ಕವೂ ಸಿಕ್ಕುತ್ತಿಲ್ಲ......

ಶ್ರೀ ಎಸ್. ಆರ್. ಕಂಠಿ.—ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಇದರಲ್ಲಿ ಎರಡು ತರಹವಿದೆ. ಈಗ ಒತ್ತಾಯ ಇರುವುದು ಆರರಿಂದ ಏಳನೇ ವಯಸ್ಸಿನವರು, ಏಳರಿಂದ ಎಂಟನೇ

ವಯಸ್ಸಿನವರು, ಮತ್ತು ಎಂಟರಿಂದ ಒಂಬತ್ತನೇ ವಯಸ್ಸಿನವರು ಇಯತ್ತೆಗಳಿಗೆ ಹೋಗುವವರಲ್ಲಿ ತಾವು ಹೇಳುವ ವಿಚಾರ ಬೇರೆ ಯಾವುದನ್ನೋ ದೃಷ್ಟಿಯಲ್ಲಿಟ್ಟುಕೊಂಡು ಹೇಳುತ್ತಿದ್ದೀರಿ.

ಶ್ರೀ ಎಸ್. ಗೋಪಾಲಗೌಡ.—ತಾವು ಸರಿಯಾಗಿ ಇದನ್ನು ಮುಂದುವರಿಸುತ್ತಿಲ್ಲ ಎಂದು ಮಾತ್ರ ಹೇಳುತ್ತಿದ್ದೇನೆ. ಇದರಲ್ಲಿ ತಂದೆ ತಾಯಿಗಳಿಗೂ ಕಷ್ಟವಿದೆ. ನಾಲ್ಕು ವರ್ಷಗಳಾದ ಕೂಡಲೇ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕು ಎನ್ನುವ ವ್ಯವಸ್ಥೆ ನಮ್ಮಲ್ಲಿ ಇತ್ತು. ಕಡ್ಡಾಯ ಎನ್ನುವ ಮಾತಿನ ಅರ್ಥವೇನು ಎನ್ನುವುದು ಎಷ್ಟೋ ಜನರಿಗೆ ತಿಳಿದಿಲ್ಲ. ಅಲ್ಲದೆ ಆರು ತುಂಬಿದ ಮಕ್ಕಳನ್ನು ಸೇರಿಸಿ ಒಂದು ವರ್ಷವಾದಮೇಲೆ ಏಳನೇ ವರ್ಷದಲ್ಲಿ ಎಷ್ಟು ಮಕ್ಕಳು ಶಾಲೆ ಬಿಡುತ್ತಾರೆ ಎನ್ನುವುದರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಇನ್ನು 'ಮಿಡ್ ಡೇ ಮೀಲ್ಸ್' ಎನ್ನುವುದನ್ನು ಜಾರಿಗೆ ತರಬೇಕು ಎಂದು ಇದಕ್ಕಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳವರು ಮತ್ತು ಶಾಲೆಯ ಉಪಾಧ್ಯಾಯರುಗಳೂ ಹೆಚ್ಚಿನ ಗಮನ ಕೊಡಬೇಕು ಎಂದ ಹೇಳುತ್ತಿದ್ದಾರೆ. ಇದರಲ್ಲಿ ಹೆಚ್ಚಿನ ಆಸಕ್ತಿಯನ್ನು ಶಾಲೆಯಲ್ಲಿರುವ ಉಪಾಧ್ಯಾಯರುಗಳೇ ವಹಿಸಬೇಕು ಹಾಗೂ ಗ್ರಾಮ ಸೇವಕರು ಇದಕ್ಕೆ ಸಹಾಯ ಮಾಡಬೇಕು. ಅಲ್ಲದೆ ಇದರಲ್ಲಿ ಇನ್ನೊಂದು ವಿಚಾರವನ್ನು ತಮಗೆ ಹೇಳಬೇಕಾಗಿದೆ, ಆದರೆ ನಿಜವಾಗಿಯೂ ಕೆಲವು ಕಡೆ ಕೊಡುವ ಪದಾರ್ಥಗಳು ತಿನ್ನಲು ಯೋಗ್ಯವಾಗಿರುವುದಿಲ್ಲ. ಅವು ಹೇಗಿರುತ್ತದೆ ಎಂದರೆ ಎಮ್ಮೆ ಕರ ಹಾಕಿದಾಗ ಮಡ್ಡಿಯಂತೆ ಕಲ್ಲು ಮಣ್ಣು ಎಲ್ಲವನ್ನೂ ಕಲೆಸಿ ಕೊಡುವಂತಿರುತ್ತದೆ. ಇಂತಹ ಪದಾರ್ಥಗಳನ್ನು ತಿನ್ನಬೇಕೆಂದು ಕೊಟ್ಟರೆ ಬಡವರ ಮಕ್ಕಳು ಹೇಗೋ ತಿನ್ನುತ್ತಾರೆ. ಆದರೆ ಶ್ರೀಮಂತರ ಮಕ್ಕಳು ಅದನ್ನು ಆಚೆಗೆ ಚೆಲ್ಲುತ್ತಾರೆ. ಬಡವರ ಮಕ್ಕಳು ಇದನ್ನು ತಿಂದು ಅಪೆಂಡಿಸೈಟಿಸ್ ಎನ್ನುವ ರೋಗಕ್ಕೆ ತುತ್ತಾಗುತ್ತಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಮಾಡಿದರೂ ಅದನ್ನು ಆಸಕ್ತಿಯಿಂದ ಕಳಕಳಿಯಿಂದ ಮಾಡದೇ ಹೋದರೆ ಇದರಿಂದೇನೂ ಅನುಕೂಲವಾಗುವುದಿಲ್ಲ. ಹೀಗೆ ಈಗೊಂದು ಕೋಲಾಹಲ ನಡೆಯುತ್ತಿದೆ.

ಸ್ವಾಮಿ, ಈ "ಮಿಡ್ ಡೇ ಮೀಲ" ಎಂದು ಏನು ಕೊಡುತ್ತಾರೆಯೋ ಅದು ಎಲ್ಲ ಶಾಲೆಗಳಲ್ಲಿ ದೊರೆಯುವುದಿಲ್ಲ. ಇದೊಂದು ಪ್ರಚಾರ ಸಾಧನವಾಗಿದೆಯೇ ಹೊರತು, ಇದನ್ನು ಅಂತಃಕರಣ ಪೂರ್ವಕವಾಗಿ ನಿಷ್ಠೆಯಿಂದ ಕಾರ್ಯಗತವಾಗುತ್ತಿಲ್ಲ. ಮಕ್ಕಳಿಗೆ ಇದಕ್ಕಾಗಿ ದೊರೆಯಬೇಕಾದ ಹಣ ಪ್ರಾಮಾಣಿಕವಾಗಿ ದೊರೆಯುತ್ತಿಲ್ಲ. ಈ ಯೋಜನೆ ಸಫಲವಾಗಬೇಕೆಂಬ ಕಳಕಳಿಯ ಉದ್ದೇಶವಿಲ್ಲ. ಒಟ್ಟಿನಲ್ಲಿ ಈ ಯೋಜನೆ ನಿರರ್ಥಕವಾಗಿದೆ ಎಂದು ಹೇಳಬಹುದು. ಇದನ್ನು ತೀವ್ರ ಸರಿಪಡಿಸಬೇಕು. 20 ಹುಡುಗರಿಗೆ, 50 ಮಕ್ಕಳಿಗೆ ಮಧ್ಯಾಹ್ನದ ಆಹಾರ ಕೊಡಲಾಯಿತು ಎಂದು ಲೆಕ್ಕದಲ್ಲಿ ಮಾತ್ರ ಸರಿಯಾಗಿರುತ್ತದೆ. ಲೆಕ್ಕ ತೋರಿಸುವುದರಲ್ಲಿ ಇವರು ಬಹಳ ಬುದ್ಧಿವಂತರಾಗಿದ್ದಾರೆ. ಲೆಕ್ಕದಲ್ಲಿ ಈ ಯೋಜನೆ ಸಫಲಮಾಡಿ ತೋರಿಸುವುದು ನಮಗೆ ಬೇಡ. ರುಚಿ ಯಾವಾಗಲೂ ತಿಂದಿ ತಿನ್ನುವುದರಲ್ಲಿ ಇದೆ. ಮಕ್ಕಳು ಊಟ ಮಾಡಬೇಕು ಮೈ ಹಿಡಿಯಬೇಕು ಅವರು ಸಮಾಧಾನಪಡಬೇಕು. ಇದು ಆಗದಿದ್ದರೆ ಈ ಯೋಜನೆ ನಿಷ್ಫಲ ವಾಗುತ್ತದೆ.

10-00 A.M.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಅಮೇರಿಕಾ ದೇಶದವರು ನಮಗೆ ಹಾಲಿನ ಪುಡಿ ಕಳುಸುತ್ತಿದ್ದಾರೆ. ಅದನ್ನು ಶಾಲಾ ಮಕ್ಕಳಿಗೆ ಒದಗಿಸ ಬೇಕೆಂಬುದು ಅವರ ಮುಖ್ಯ ಉದ್ದೇಶ. ಆದರೆ ಈ ಹಾಲಿನ ಪುಡಿ ಮಕ್ಕಳಿಗೆ ಕೊಡುವುದಕ್ಕೆ ಉಪಯೋಗಿಸದೆ, ಅದನ್ನು ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಿಕೊಂಡು ದುಡ್ಡು ಸಂಪಾದನೆ ಮಾಡುವ ಉದ್ಯೋಗವಾಗಿದೆ. ಕೇಂದ್ರದಲ್ಲಿಯೂ ಎಂ. ಪಿ. ಇದ್ದಾರೆ. ನಮ್ಮಲ್ಲಿಯೂ ಎಂ. ಪಿ. ಇದ್ದಾರೆ. ನಮ್ಮಲ್ಲಿಯ ಎಂ. ಪಿ. ಎಂದರೆ ಮಿಲ್ಕ್ ಪೌಡರ್ ಬ್ಯಾರೆಲ್ ಗಟ್ಟಲೆ ಮಾರಾಟ ಮಾಡಿ ದಕ್ಕಿಸಿಕೊಂಡು ನೂರಾರು ರೂಪಾಯಿ ಸಂಪಾದನೆ ಮಾಡುವವರು ಆಗಿದ್ದಾರೆ. ಈ ಉದ್ಯೋಗದಿಂದ ಸಂಪಾದನೆ ಮಾಡುವ ಎಂ. ಪಿ. ಅಂದರೆ ಮಿಲ್ಕ್ ಪೌಡರ್ ಎಂ. ಪಿ. ಇವರು ಆಗಿದ್ದಾರೆ. ಇದು ಸರಿಯಲ್ಲ. ಈ ರೀತಿ ದುರುಪಯೋಗಪಡಿಸಿಕೊಳ್ಳುವದನ್ನು ಬೇಗನೆ ತಡೆಗಟ್ಟಬೇಕಾದುದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಸೂಚನೆ ಮಾಡುತ್ತೇನೆ. ಈ ಹಾಲಿನ ಪುಡಿಯನ್ನು ಒದಗಿಸಿ ಬ್ಯಾರಲ್ ಒಡೆದು ಹಾಲಿನ ಪುಡಿ ಕೊಡುವ ಸಮಾರಂಭ ಮಾಡಬೇಕು.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ನಾವು ಹೇಳುವುದೆಲ್ಲ ಅರಣ್ಯ ರೋದನವಾಗಿದೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಅರಣ್ಯದಲ್ಲಿ ರೋದನ ಮಾಡಿದರೂ ಸಹ ಅದನ್ನು ಕೇಳತಕ್ಕ ಜನ ಇಂದು ಇದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಸಭೆಯಲ್ಲಿ ಚರ್ಚೆ ನಡೆದ ಕಾಲದಲ್ಲಿ ಮಂತ್ರಿಗಳು ಫೈಲು ಓದಬಹುದೇನು ?

ಶ್ರೀ ಬಿ. ರಾಚಯ್ಯ.—ಈ ಚರ್ಚೆಗೆ ಸಂಬಂಧಪಟ್ಟ ವಿಷಯದ ಫೈಲು ಇದಾಗಿದೆ.

ಸಭಾಪತಿಯವರು.—ಅಂತಹುದು ಏನೂ ಇಲ್ಲ. ಅದು ಸರಿಯಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಲಿನ ಪುಡಿಯ ಹಂಚಿಕೆ ಸರಿಯಾಗಿ ಆಗಬೇಕು. ಏಕೆಂದರೆ ಹಾಲಿನ ಪುಡಿಯನ್ನು ಕೊಡತಕ್ಕ ದೇಶದವರು ಇತ್ತೀಚೆಗೆ ವಿವಂಚನೆ ವ್ಯಕ್ತಪಡಿಸಿದ್ದಾರೆ. ಇದು ಒಳ್ಳೇ ಪರಿಣಾಮ ಉಂಟು ಮಾಡುವುದಿಲ್ಲ. ಆದುದರಿಂದ ಇದಕ್ಕೆ ಅಸ್ಪದ ಕೊಡಕೂಡದು. ಉದಾರವಾಗಿ ಕೊಟ್ಟಿರತಕ್ಕಂಥ ಹಾಲಿನ ಪುಡಿಯನ್ನು ಮಾರಾಟ ಮಾಡಿಕೊಂಡು ಹಣ ಸಂಪಾದಿಸುವ ಅಧೋಗತಿಯ ಮಟ್ಟಕ್ಕೆ ಇಳಿದಿರುವುದು ಭೂಷಣವಲ್ಲ. ಏಕೆಂದರೆ ಇದನ್ನು ಒಳ್ಳೆಯ ಮಾತಿನಲ್ಲಿ ಹೇಳಬೇಕಾಗಿದೆ. ಇತ್ತೀಚೆಗೆ ಕೇರಳದಿಂದ ಹಾಲಿನ ಪುಡಿ ತಂದು ಇಲ್ಲಿ ಮಾರಾಟ ಮಾಡುತ್ತಿದ್ದುದನ್ನು ಪೋಲೀಸರು ಹಿಡಿದಿದ್ದಾರೆ. ಮದ್ರಾಸಿನಿಂದ ತರುವ ಹಾಲಿನ ಪುಡಿಯನ್ನು ಆಂಧ್ರದಲ್ಲಿ, ಆಂಧ್ರದ್ದು ಕೇರಳದಲ್ಲಿ ಕೇರಳದ್ದು ಮೈಸೂರಿನಲ್ಲಿ ಈ ರೀತಿ ಮಾರಾಟವಾಗುತ್ತಿದೆ. ಇದೊಂದು ವ್ಯವಸ್ಥೆ ಮಾಡಿಕೊಂಡಂತಿದೆ. ಈ ರೀತಿ ಮಾರಾಟ ಮಾಡುವವರಿಗೆ ಬ್ಯಾರೆರ್‌ಗಟ್ಟಲೆ ಹಾಲಿನ ಪುಡಿ ದೊರೆಯುತ್ತದೆ. ಒಳ್ಳೇ ಸದುದ್ದೇಶದಿಂದ ಕೊಟ್ಟಿರತಕ್ಕ ಹಾಲಿನ ಪುಡಿಯನ್ನು ಹೀಗೆ ದುರುಪಯೋಗ ಪಡಿಸಿಕೊಳ್ಳುವುದು ಸರಿಯಲ್ಲ. ಲೆಕ್ಕಪತ್ರದಲ್ಲಿ ಎಲ್ಲವೂ ಸರಿಯಾಗಿರುತ್ತದೆ. ಆದರೆ ವಾಸ್ತವಾಂಶ ಬೇರೆ ರೀತಿಯಾಗಿದೆ. ಇದನ್ನು ಮಾನ್ಯ ವಿದ್ಯಾ ಸಚಿವರು ಕಣ್ಣುಬಿಟ್ಟು ನೋಡಿ ಕೂಡಲೆ ಸರಿಪಡಿಸಬೇಕು. ಒಂದೊಂದು ಊರಿಗೆ, ಒಂದೊಂದು ಸಂಸ್ಥೆಗೆ ಎಷ್ಟೆಷ್ಟು ಹಾಲಿನ ಪುಡಿ ಕೊಡುತ್ತೀರಿ, ಅದನ್ನು ಪ್ರಕಟ ಮಾಡಬೇಕು. ನಮ್ಮ ರಾಜ್ಯಕ್ಕೆ ಎಷ್ಟು ದೊರೆತಿದೆ ಎಷ್ಟು ಹಂಚಲಾಯಿತು ಎನ್ನುವುದಕ್ಕೆ ಅಂಕಿಅಂಶಗಳ ವಿವರ ಕೊಟ್ಟು ಪ್ರಕಟಿಸಬೇಕು ಯಾವ ಯಾವ ಗ್ರಾಮಕ್ಕೆ ಯಾವ ಯಾವ ಏಜೆನ್ಸೀ ಮೂಲಕ ಎಷ್ಟೆಷ್ಟು ಕೊಟ್ಟಿದೆ ಅದನ್ನು ಸಹ ಆಗಾಗ್ಗೆ ತಿಳಿಸಬೇಕು. ಅಂದರೆ ಯಾವ ಶಾಲೆಗೆ ಎಷ್ಟು ಹಾಲಿನಪುಡಿ ಒದಗಿಸಲಾಗಿದೆ ಎನ್ನುವುದು ಗೊತ್ತಾಗುತ್ತದೆ. ಹಾಲಿನಪುಡಿ, ಮಧ್ಯಾಹ್ನದ ಊಟ, ಬಟ್ಟೆ ಇವುಗಳನ್ನು ಹಂಚುವಾಗ್ಗೆ ಗ್ರಾಮ ಪಂಚಾಯಿತಿಯ ಸದಸ್ಯರು, ಉಪಾಧ್ಯಾಯರು ಹಾಜರ ಇರಬೇಕು. ಸಾರ್ವಜನಿಕರಿಗೆ ಈ ವಿಷಯದಲ್ಲಿ ಕೆಲವು ಸೌಲಭ್ಯ ಕೊಡಬೇಕು. ಈಗ ಕೊಟ್ಟಿರತಕ್ಕ ಸೌಲಭ್ಯ ಸಾಲದು ಎಂದು ಹೇಳುತ್ತೇನೆ.

ಆಡಳಿತದ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಈಚೆಗೆ ಬಹುಶಃ ಶ್ರೀಮಾಲಿಯವರು ನಿವೃತ್ತರಾಗುವುದಕ್ಕೆ ಮುಂಚೆ ಒಂದು ಮಾತನ್ನ ಹೇಳಿದರು. ಅದೇನೆಂದರೆ ಭಾರತದ ಪ್ರಾಥಮಿಕ ಶಾಲೆಯ ಉಪಾಧ್ಯಾಯರು 100 ರೂಪಾಯಿಗಳ ಸಂಬಳವನ್ನು ಪಡೆಯುವ ಮಟ್ಟಕ್ಕೆ ಬಂದುಮುಟ್ಟಿದ್ದಾರೆಂದು. ಎಲ್ಲಾ ಶಾಲೆಯ ಉಪಾಧ್ಯಾಯರೂ ಕೂಡ ತರಬೇತಿಯನ್ನು ಪಡೆದಿದ್ದಾರೆ. ತರಬೇತಿಯನ್ನು ಕೊಡುವ ವಿಷಯದಲ್ಲಿ ಒಬ್ಬೊಬ್ಬರು ಒಂದೊಂದು ವರ್ಷದಲ್ಲಿ ಒಂದೊಂದು ಯೋಜನೆಯನ್ನು ತರುತ್ತಾರೆ. ಆದರೆ ತರಬೇತಿ ಆದಮೇಲೆ ಅವರಿಗೆ ತರಬೇತಿಯ ಸೌಲಭ್ಯವನ್ನು ಒದಗಿಸುವುದಿಲ್ಲ. ಈಗ ಒಬ್ಬರು ಹಿಂದಿ ಪರೀಕ್ಷೆಯನ್ನು ಪಾಸುಮಾಡಿ ಎಂದು ಹೇಳುತ್ತಾರೆ, ಇನ್ನೊಬ್ಬರು ಫಿಜಿಕಲ್ ಟ್ರೈನಿಂಗ್ ಮಾಡಿ ಎಂದು ಹೇಳುತ್ತಾರೆ, ಇನ್ನೊಬ್ಬರು ಬೇಸಿಕ್ ಟ್ರೈನಿಂಗ್ ಮಾಡಿ ಎಂದು ಹೇಳುತ್ತಾರೆ, ಇನ್ನೊಬ್ಬರು ಮತ್ತೊಂದು ಟ್ರೈನಿಂಗ್‌ಮಾಡಿ ಎಂದು ಹೇಳುತ್ತಾರೆ. ಈಗ ಬಂಕಾಪುರದಲ್ಲಿ ಟ್ರೈನಿಂಗ್ ನಡೆಯುತ್ತಿದೆಯೆಂದು ಅಲ್ಲಿ ಅಧಿಕಾರಿಗಳು ಸೇರುವುದು ಟಿ. ಎ. ತೆಗೆದುಕೊಳ್ಳುವುದು ತಮಗೆ ಬೇಕಾದವರನ್ನು ಆರಿಸಿ ಅಲ್ಲಿಗೆ ಕಳುಹಿಸುವುದು. ತರಬೇತಿ ಕೇಂದ್ರಗಳನ್ನು ತೆರೆಯಲಾಯಿತು. ಪ್ರಚಾರ ನಡೆಸುವುದು. ಈಗ ವಾಸ್ತವವಾಗಿ ತರಬೇತಿಯನ್ನು ಪಡೆದಿರತಕ್ಕ ಶಿಕ್ಷಕರಿಗೆ ಏನು ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದೀರಿ ? ಈಗ ಮಲ್ಟಿ ಪರ್ಪಸ್ ಸ್ಕೂಲುಗಳನ್ನು ಕೊಟ್ಟಿರಿ, ಅಲ್ಲಿಗೆ ಕೊಟ್ಟಿರತಕ್ಕ ಸಾಮಾನುಗಳೆಲ್ಲವೂ ತುಕ್ಕು ಹಿಡಿದುನಿಂತಿವೆ. ತರಬೇತಿ ಕೇಂದ್ರಗಳನ್ನು ಒಂದು ವೇಳೆ ಮಾಡಿಕೊಂಡರೂ ಮಾಡಿಕೊಳ್ಳಿ. ಆದರೆ ತರಬೇತಿಯನ್ನು ಪಡೆದ ಶಿಕ್ಷಕರಿಗೆ ಒಂದು ಇನ್‌ಸೆಂಟೀವ್ ಕೊಡಬೇಕು. ಈಗ ಒಬ್ಬ ಶಿಕ್ಷಕರು ಹಿಂದಿಯನ್ನು ಪಾಸು ಮಾಡಿಕೊಂಡು ಬಂದರು ಅಥವಾ ಯಾವುದೋ ಒಂದು ತರಬೇತಿಯನ್ನು ಪಡೆದುಕೊಂಡು ಬಂದರು, ಅಂಥವರಿಗೆ 10 ರೂಪಾಯಿ ಸಂಬಳ ಜಾಸ್ತಿ ಸಿಕ್ಕುವಂತೆ ಮಾಡಬೇಕು. ಈಗ ಹಿಂದಿಯನ್ನು ಮುತವರ್ಜಿಯಿಂದ ಓದಿ ಎಂದು ಹೇಳುತ್ತಾರೆ. ಈಗ ಎಂ.ಎ. ತನಕ ಹಿಂದಿಯನ್ನು ಓದಿ ಪರೀಕ್ಷೆಯನ್ನು ಪಾಸುಮಾಡಿ ಅವನು ಪ್ರೈಮರಿ ಶಾಲೆಯಲ್ಲಿ ಶಿಕ್ಷಕನಾಗಿರಬೇಕೆಂದರೆ ಅದು ಯಾವ ನ್ಯಾಯ ? ತರಬೇತಿಯನ್ನು ಪಡೆದವನಿಗೆ ಒಂದು ಇನ್‌ಸೆಂಟೀವ್ ಕೊಡದೇ ಹೋದರೆ ತರಬೇತಿಗೆ ಏತಕ್ಕೆ ಕಳುಹಿಸಬೇಕು ? ಇದೂ ಅಲ್ಲದೆ ಕೆಲವು ದುಷ್ಟ ಅಧಿಕಾರಿಗಳು ಈಗಲೂ ಕೂಡ ಉಪಾಧ್ಯಾಯರನ್ನು ಚೆಂಡನ್ನು ಎಸೆಯುವ ಹಾಗೆ ಸ್ಥಳದಿಂದ ಸ್ಥಳಕ್ಕೆ ಊರಿಂದ ಊರಿಗೆ ವರ್ಗಾವರ್ಗಿ ಮಾಡುತ್ತಾರೆ. ಅವರು ಅದನ್ನು ವಜಾ ಮಾಡಿಸಿಕೊಳ್ಳುವುದಕ್ಕೆ ಒಬ್ಬರು ಎಂ. ಎಲ್. ಎ.ಅನ್ನೋ ಅಥವಾ ಇನ್ನು ಯಾರ

ನ್ನಾದರೂ ಹುಡಿಕಿಕೊಂಡು ಹೋಗಬೇಕು. ಹೀಗಾಗಿ ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರು ಆರು ತಿಂಗಳು ವರ್ಷಗಟ್ಟಲೆ ಇರುವುದಿಲ್ಲ. ಎಷ್ಟೋ ಶಾಲೆಗಳಲ್ಲಿ ಈಗ ನಾಲ್ಕುಜನ ಉಪಾಧ್ಯಾಯರು ಇರುವ ಶಾಲೆಗಳಲ್ಲಿ ಒಬ್ಬರೇ ಇದ್ದಾರೆ. ಅವರೇ ಎಲ್ಲಾ ತರಗತಿಗಳಿಗೂ ಪಾಠವನ್ನು ಹೇಳುತ್ತಾರೆ. ಒಬ್ಬ ಉಪಾಧ್ಯಾಯರು ಎಷ್ಟು ಅವಧಿ ಪಾಠವನ್ನು ಹೇಳಹೇಕೆಂಬುದನ್ನು ಗೊತ್ತು ಮಾಡಬೇಕು. ಇದನ್ನೆಲ್ಲಾ ಸರ್ಕಾರದವರು ಗಮನಿಸಬೇಕು.

ಆಮೇಲೆ ಈ ಒಬ್ಬ ಉಪಾಧ್ಯಾಯರು ಯಾವುದಾದರೂ ಒಂದು ಊರಿಗೆ ವರ್ಗ ಆಗಿಹೋದರೆ ಅವರು ಯಾರ ಮನೆಯಲ್ಲಿರಬೇಕು ? ಕೊನೆಗೆ ಎಲ್ಲೂ ಮನೆ ಸಿಕ್ಕದಿದ್ದರೆ ಪಟೇಲರು ಶ್ಯಾನು ಭೋಗರ ಮನೆಯಲ್ಲಿ ಹೋಗಿ ಸೇರಿಕೊಳ್ಳುತ್ತಾನೆ. ಆ ಊರಿನಲ್ಲಿ ರಾಜಕಾರಣಕ್ಕೆ ಬಲಿಯಾಗಿ ಒಂದು ಗುಂಪಿಗೂ ಇನ್ನೊಂದು ಗುಂಪಿಗೂ ವಿರೋಧಿಸುತ್ತಾನೆ. ಮೂಗರ್ಜಿಯನ್ನು ಬರೆಯುತ್ತಾನೆ. ತನಗೆ ಬೇಕಾದ ಕೆಲವು ಮಕ್ಕಳಿಗೆ ಪಾಠ ಹೇಳುವುದಕ್ಕೆ ಶುರು ಮಾಡುತ್ತಾನೆ. ಹೀಗಾಗಿ ಕೆಲವರು ಉಪಾಧ್ಯಾಯರು ರಾಜಕಾರಣಕ್ಕೆ ಬಂದು ಶಾಲೆಗಳು ರಾಜಕಾರಣಕ್ಕೆ ಈಡು ಆಗಿರತಕ್ಕ ದುಷ್ಟ ಸನ್ನಿವೇಶಗಳಿವೆ. ಕಾರಣವೇನೆಂದರೆ ಅವರು ಯಾವುದಾದರೂ ಒಂದು ಹಳ್ಳಿಗೆ ಹೋದರೆ ಅವರಿಗೆ ಸರಿಯಾದ ವ್ಯವಸ್ಥೆ ಇರುವುದಿಲ್ಲ. ವಾಸಕ್ಕೆ ಮನೆ ಇರುವುದಿಲ್ಲ. ಈಗ ಕೆಲವು ಹೆಣ್ಣುಮಕ್ಕಳು ಉಪಾಧ್ಯಾಯಿನಿಯರಾಗಿರುತ್ತಾರೆ. ಅವರಿಗಂತೂ ಅದು ಒಂದು ದುರಂತ. ಅವರೇನಾದರೂ ಒಂದು ಊರಿಗೆ ವರ್ಗಆಗಿ ಹೋದರೆ ಅವರು ಅಲ್ಲಿ ಸಾರ್ವಜನಿಕರ ಆಶ್ರಯದಲ್ಲಿ, ಅವರ ಕನಿಕರ, ಅವರ ದಯೆಯಲ್ಲಿ ಅವರು ಬದುಕಿ ಬಾಳಬೇಕಾಗುತ್ತದೆ. ಹೀಗಿರುವಾಗ ಒಬ್ಬ ಉಪಾಧ್ಯಾಯರನ್ನು ಒಂದು ಕಡೆಗೆ ಪೋಸ್ಟ್ ಮಾಡಿದರೆ ಅವರು ಯಾರ ಮನೆಯ ಜಗುಲಿಯ ಮೇಲೆ ಇರಬೇಕು ? ಅವರಿಗೆ ಹೆಂಡತಿ ಮಕ್ಕಳಿದ್ದರೆ ಅವರ ಕಷ್ಟ ನಿಷ್ಠೂರಗಳನ್ನು ಕೇಳುವವರು ಯಾರು ? ಅವರಿಗೆ ಅಲ್ಲಿ ಸರಿಬೀಳದೆ ಮತ್ತೆ ತನಗೆ ಬೇಕಾದ ಸ್ಥಳಕ್ಕೆ ವರ್ಗಮಾಡಿಸಿಕೊಳ್ಳಬೇಕಾದರೆ ಎಂ. ಎಲ್. ಎ. ಮೂಲಕವೋ ಡಿ. ಪಿ. ಐ. ಮೂಲಕವೋ ಹೋಗಬೇಕು. ಕೆಲವು ಸಂದರ್ಭಗಳಲ್ಲಿ ಕೆಲವು ಉಪಾಧ್ಯಾಯರುಗಳಿಗೆ ಕೆಲವು ಊರುಗಳಲ್ಲಿ ಅನುಕೂಲ ಇರುತ್ತದೆ. ಆದರೆ ಆ ಊರಿನಲ್ಲಿ ಜನಗಳು ಆಗುವುದಿಲ್ಲ. ಅಂಥಾ ಸಂದರ್ಭಗಳಲ್ಲಿ ಜನಗಳು ಉಪಾಧ್ಯಾಯರನ್ನು ಹಿಡಿದು ತದಿಕಿದ್ದಾರೆ ಅಂಥಾ ಸನ್ನಿವೇಶಗಳೂ ಇವೆ. ಈ ರೀತಿ ಆಗಬೇಕಾದರೆ ಹಳ್ಳಿಗಳಲ್ಲಿನ ವಾತಾವರಣವೂ ಬಹುಮುಖ್ಯ ಕಾರಣವಾಗಿದೆ. ಅದಕ್ಕೋಸ್ಕರ ಸರ್ಕಾರದವರು ಇದನ್ನು ಗಮನಿಸಬೇಕು. ಯಾವ ಉಪಾಧ್ಯಾಯರು ಎಷ್ಟು ದಿವಸ ರಜಾಹೋಗಿದ್ದರು, ಅವರ ಚಟುವಟಿಕೆಗಳೇನು, ಶಾಲೆಗೆ ಸರಿಯಾಗಿ ಹೋಗುತ್ತಿದ್ದಾರೆಯೇ ಇಲ್ಲವೇ, ಆವರು ಎಲ್ಲಿ ವಾಸಮಾಡುತ್ತಿದ್ದಾರೆ, ಅವರು ಯಾವ ತರಹ ಮನುಷ್ಯರು ಇತ್ಯಾದಿ ವಿಷಯಗಳನ್ನೊಳಗೊಂಡ ಒಂದು ರಿಪೋರ್ಟ್ ಅವರು ಕೆಲಸ ಮಾಡತಕ್ಕ ಸ್ಥಳದಲ್ಲಿರಬೇಕು. ಆರೀತಿ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಯಾವತ್ತೋ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳುವ ದಿವಸ ಇಂಟರ್‌ವ್ಯೂ ಮಾಡಿ ಅವನನ್ನು ಕೆಲಸಕ್ಕೆ ನೇಮಕ ಮಾಡಿಕೊಂಡು ಬಿಟ್ಟರೆ ಮುಗಿದು ಹೋಯಿತು ಎಂದಲ್ಲ. ಇವೊತ್ತು ಅವನು ಏನಾಗಿರಬಹುದು ಎಂಬುದನ್ನು ನೋಡಬೇಕಾಗುತ್ತದೆ. ಅವನು ಕೆಲಸಕ್ಕೆ ಸೇರಿದ 5-6 ವರ್ಷಗಳಲ್ಲಿ ಕೆಟ್ಟಚಾಳಿಗೆ ಬಿದ್ದು ಈಗ ಅವನು ಲಫಂಗ ಆಗಿರಬಹುದು ಅವನು ಸರಿಯಾಗಿ ಶಾಲೆಗೆ ಹೋಗದೆ ಇರಬಹುದು. ಅಂಥವನನ್ನು ಕೆಲವು ಸಂದರ್ಭಗಳಲ್ಲಿ ನಿಷ್ಠೂರವಾಗಿ ಉಪಾಧ್ಯಾಯ ವೃತ್ತಿಯನ್ನು ಮಾಡುವುದಕ್ಕೆ ನಿನಗೆ ಯೋಗ್ಯತೆಯಿಲ್ಲ, ನೀನು ಕಟುಕರ ಅಂಗಡಿಯಲ್ಲಿ ಮಾಂಸವನ್ನು ಕೊಯ್ಯುವುದಕ್ಕೆ ಲಾಯಕ್ಕಾಗಿದ್ದೀಯೆ, ನೀನು ನಮಗೆ ಬೇಡ ಎಂದು ಹೇಳಿ ಅವನನ್ನು ಮನೆಗೆ ಕಳುಹಿಸಬೇಕಾಗುತ್ತದೆ. ಇದನ್ನೆಲ್ಲಾ ನೋಡುವವರು ಯಾರು ಎಂಬುದನ್ನು ಸರ್ಕಾರದವರೇ ಗೊತ್ತುಮಾಡಬೇಕು.

ಇನ್ನೊಂದು ವಿಷಯ. ಈಗ ಸಾಮಾನ್ಯವಾಗಿ ಡಿ. ಪಿ. ಐ. ಆಫೀಸಿನಲ್ಲಿ ನೋಡಿ ಜಿಲ್ಲಾ ಮಟ್ಟದಲ್ಲಿರತಕ್ಕ ವಿದ್ಯಾಧಿಕಾರಿಗಳ ಆಫೀಸಿನಲ್ಲಿ ನೋಡಿ, ತಾಲ್ಲೂಕು ಮಟ್ಟದಲ್ಲಿರತಕ್ಕ ವಿದ್ಯಾಧಿಕಾರಿಗಳ ಆಫೀಸಿನಲ್ಲಿ ನೋಡಿ ಅಲ್ಲಿರತಕ್ಕ ಗುಮಾಸ್ತರುಗಳು ಉಪಾಧ್ಯಾಯರ ಹತ್ತಿರ ಮಾಮೂಲು ತೆಗೆದುಕೊಳ್ಳುತ್ತಾರೆ. ಯಾವುದಾದರೂ ಒಂದು ಊರಿಗೆ ಟ್ರಾನ್ಸ್‌ಫರ್ ಮಾಡಬೇಕಾದರೆ ಇಷ್ಟು, ಕಂಟಿಜೆನ್ಸಿ ಡ್ರಾ ಮಾಡಬೇಕಾದರೆ ಇಷ್ಟು ಎಂದು ಮಾಮೂಲು ವಸೂಲು ಮಾಡುತ್ತಾರೆ. ಈ ರೀತಿ ವಿದ್ಯಾಭ್ಯಾಸದ ಆಡಳಿತ ಇರುವುದು ಅವಮಾನಕರ. ವಿದ್ಯಾಭ್ಯಾಸದ ಸಂಸ್ಥೆಯಾದರೂ ಕೂಡ ದೇಶದ ನಿತ್ಯ ರಾಜಕಾರಣದಿಂದ ಹೊರಗೆ ಇದ್ದು ಲಂಚ, ಸ್ವಜನ ಪಕ್ಷಪಾತ ಮುಂತಾದ ದುಷ್ಟ ಪ್ರವೃತ್ತಿಗಳನ್ನು ದೂರಮಾಡುವುದಾದರೆ ಆಗ ಅದು ಒಂದು ವಿದ್ಯಾಭ್ಯಾಸ ಸಂಸ್ಥೆ ಎಂದು ಹೇಳಬಹುದು. ಒಂದು ಒಳ್ಳೆಯ ಆಡಳಿತ ಎಂದು ಹೇಳಬಹುದು. ವಿದ್ಯಾಭ್ಯಾಸದ ಇಲಾಖೆಯಲ್ಲಿ ಲಂಚ, ರಾಜಕೀಯ ಶಾಲಾ ಮಕ್ಕಳಿಗೆ ಕೊಟ್ಟಂಥ ಹಾಲಿನ ಪುಡಿಯನ್ನು ಮಾರಾಟ ಮಾಡುವ ದುಷ್ಟ ಪ್ರವೃತ್ತಿ, ಇವುಗಳು ಇರುವುದಾದರೆ ದೇಶಕ್ಕೆ ಒಳ್ಳೆಯದು ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಮಾನ್ಯ ಸಚಿವರು ಗಮನಿಸಬೇಕು.

(ಶ್ರೀ ಎಸ್. ಗೋಪಾಲಗೌಡ).

ಇನ್ನು ಪಠ್ಯಪುಸ್ತಕಗಳ ವಿಷಯದಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಆಡಳಿತಕ್ಕೆ ಸಂಬಂಧಪಟ್ಟದ್ದು. ಪಠ್ಯಪುಸ್ತಕಗಳ ವಿಷಯದಲ್ಲಿ ಬಹುಶಃ ದೇಶದ ಎಲ್ಲಾ ಜವಾಬ್ದಾರಿ ಜನರೂ ಕೆಲವು ವೇಳೆ ವಿವೇಚನೆಗೆ ತುತ್ತಾಗಿದ್ದಾರೆಂದು ಅನಿಸುತ್ತದೆ. ಈ ಪಠ್ಯಪುಸ್ತಕಗಳ ವಿಷಯದಲ್ಲಿ ವ್ಯಾಪಾರ ಸಂಸ್ಥೆಗಳು ಇವೆ, ಪ್ರಕಟಣೆ ಸಂಸ್ಥೆಗಳು ಇವೆ. ಆ ಪುಸ್ತಕಗಳಿಗೆ ಹೆಸರು ಇಡುವವರು ಬೇರೆ ಇದ್ದಾರೆ, ಅವುಗಳಿಗೆ ಬೆಲೆಯನ್ನು ಗೊತ್ತುಮಾಡುವವರು ಇದ್ದಾರೆ. ನಮ್ಮ ಕಾಲದಲ್ಲಿ ಇವುಗಳೆಲ್ಲಾ ಇರಲಿಲ್ಲ. ಯಾರ ಮನೆಯಲ್ಲೋ ಓದುವ ಪುಸ್ತಕಗಳನ್ನು ತಂದು ನಾವು ಓದಿಕೊಳ್ಳುತ್ತಿದ್ದೆವು. ಒಂದು ಊರಿನಲ್ಲಿ ಒಬ್ಬ ವಿದ್ಯಾವಂತ ಇದ್ದರೆ ಬಹಳ ಮಕ್ಕಳಿಗೆ ಪುಸ್ತಕಗಳು ದೊರೆಯುತ್ತಿದ್ದುವು. ಹಾಗೆ ಇರುವುದು ಒಳ್ಳೆಯದು. ಶ್ರೀಮಾನ್ ಕಂಠಿಯವರ ಕಾಲದಲ್ಲಿ ಪ್ರತಿವರ್ಷ ಪ್ರತಿಯೊಂದು ಶಾಲೆಯ ಪುಸ್ತಕಗಳೂ ಬದಲಾವಣೆಯಾಗುವುದಾದರೆ ಅದು ಒಂದು ದುರಂತ ಎಂದು ಹೇಳಬೇಕಾಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ತಾವು ಸ್ವಲ್ಪ ಯೋಚನೆ ಮಾಡಿ. ತಾವು ಹಾಗೆ ಹೇಳಿದರೆ ಆಗುವುದಿಲ್ಲ. ಯಾವ ಪುಸ್ತಕವನ್ನು ಪಠ್ಯಪುಸ್ತಕವಾಗಿ ಮಾಡುತ್ತೇವೆಯೋ ಅದನ್ನು 3 ವರ್ಷ ಬದಲಾವಣೆ ಮಾಡುವುದಿಲ್ಲ. ಕೆಲವು ವೇಳೆ ಮೂರು ವರ್ಷ ಆದ ನಂತರವೂ ಅದನ್ನು ಕಂಟಿನ್ಯೂ ಮಾಡುತ್ತೇವೆ. ಅದನ್ನು ನಾಲ್ಕು ವರ್ಷ ಕಂಟಿನ್ಯೂ ಮಾಡಬೇಕಾದರೆ ಅದನ್ನು ಯೋಚನೆ ಮಾಡಿ ಅದು ಯೋಗ್ಯವಾಗಿದ್ದರೆ ಅದನ್ನು ಕಂಟಿನ್ಯೂ ಮಾಡುತ್ತೇವೆ. ಆ ಪುಸ್ತಕ ಅನ್‌ಫಿಟ್ ಎಂದು ಹೇಳುವವರೆಗೂ ಅದನ್ನು ಕಂಟಿನ್ಯೂ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಅವರು ಹೇಳಿದ್ದಕ್ಕೆ ನಾನು ಆಭಾರಿಯಾಗಿದ್ದೇನೆ. ಆದರೆ ಈ ದಿವಸ ವಾಸ್ತವವಾಗಿ ಪಠ್ಯಪುಸ್ತಕಗಳ ವ್ಯವಸ್ಥೆ ಸರಿಯಾಗಿರುವುದಿಲ್ಲ. ಈ ಕೆಲಸದಲ್ಲಿ ಪ್ರಾಮಾಣಿಕತೆಯಿಲ್ಲ. ಇದಕ್ಕೆ ಸಂಬಂಧಪಟ್ಟ ಸಮಿತಿಯು ಕಣ್ಣುಬಿಟ್ಟುನೋಡಿ ಲೋಪದೋಷಗಳನ್ನು ಸರಿಪಡಿಸುತ್ತಿಲ್ಲ. ಕೊನೆಯಪಕ್ಷ ಅಲ್ಪಪ್ರಾಣ, ಮಹಾಪ್ರಾಣ, ಇಳಿ, ದೀರ್ಘ ಮುಂತಾದುವುಗಳಲ್ಲಿರುವ ಲೋಪಗಳನ್ನಾದರೂ ಸರಿಪಡಿಸದಿದ್ದರೆ ಈ ಸಮಿತಿ ಏಕಿರಬೇಕು? ಹೋದಸಲ ಒಂದು ಪುಸ್ತಕದ ದೋಷಗಳ ವಿಚಾರ ಶ್ರೀಮಾನ್ ಮುಕ್ಕಣ್ಣಪ್ಪನವರು ತಿಳಿಸಿದರು. ನಾನು ಅದನ್ನು ಬರೆದು ತಿಳಿಸಿದೆ. ಆ ಬಗ್ಗೆ ತೀರ್ಮಾನವೇನಾಯಿತೋ ತಿಳಿಯದು ಅದನ್ನೇನು ರದ್ದುಮಾಡಿದರೇ ?...

ಶ್ರೀ ಎಸ್. ಆರ್. ಕಂಠಿ.—ಅದು ತಿದ್ದುಪಡಿಯಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಇಂಥ ಅನೇಕ ಉದಾಹರಣೆಗಳಿವೆ. ನಾನು ಕನ್ನಡಪಂಡಿತನಲ್ಲ ಆದರೆ ಯಾವಕಡೆ ಹೇಗೆ ಬರೆಯಬೇಕು, ಎಲ್ಲಿ ಇಳಿಕೊಡಬೇಕು ಎಂಬುದು ಸ್ವಲ್ಪ ಗೊತ್ತಾಗುತ್ತದೆ. ಒಂದುಕಡೆ ಪುಸ್ತಕದಲ್ಲಿ ರಾಷ್ಟ್ರದ ಬಾವುಟಹಾಕಿ ಚರಕ ಹಾಕಿದ್ದಾರೆ ಎಂಬುದಾಗಿ ಶ್ರೀ ಮುಕ್ಕಣ್ಣಪ್ಪನವರು ಹೇಳಿದರು. ರಾಷ್ಟ್ರದ ಬಾವುಟದಲ್ಲಿ ಚಕ್ರವಿರಬೇಕೆ ಅಥವಾ ಚರಕವಿರಬೇಕೆ ಎಂಬುದು ಕೂಡ ಗೊತ್ತಿಲ್ಲದೆ ಚಿತ್ರಿಸಿದ್ದಾರೆ. ಹೋಟೆಲ್ ಮಾಲೀಕ ಚಕ್ರವನ್ನು ಚರಕ ಎಂದು ತೋರಿಸಬಹುದು, ಅವನಿಗೆ ಗೊತ್ತಿರುವುದಿಲ್ಲ. ಆದರೆ ಸರ್ಕಾರ ನಡೆಸುವವರು ತಪ್ಪುಮಾಡಿದರೆ ಅದನ್ನ ಸಹಿಸಲು ಸಾಧ್ಯವಿಲ್ಲ. ಅದು ಕಾಂಗ್ರೆಸ್ಸಿನ ಕೈವಾಡ ಎಂದು ಹೇಳಬೇಕಾಗುತ್ತದೆ, ಅಪಾದನೆ ಮಾಡಬೇಕಾಗುತ್ತದೆ. ಬರೆದ ಮನುಷ್ಯ ಕೈಯಿಂದ ಚಿತ್ರ ಬರೆದಿರಲಾರ, ಗಮನಿಸದೆ ಒಂದು ಶಬ್ದ ಹಾಕಿರಬಹುದು. ಆದುದರಿಂದ ನೀವು ತಿದ್ದುಪಡಿ ಮಾಡಿಕೊಂಡಿರಬಹುದು. ಆದರೆ ಪಠ್ಯಪುಸ್ತಕಗಳಲ್ಲಿ ಇಂಥಾದ್ದು ಇದ್ದರೆ ಸಮಿತಿಯು ಕಣ್ಣುಮುಚ್ಚಿಕೊಂಡು ಒಪ್ಪಿಗೆ ನೀಡಿತೆ? ಜಲಜನಕ, ಆಮ್ಲಜನಕ-ಇವು ಯಾವವರ್ಗಕ್ಕೆ ಸೇರಿವೆ ಎಂದು ವಿವರಣೆ ಕೊಡುವುದರಲ್ಲಿ ತಪ್ಪಿದ್ದರೆ ಪಠ್ಯಪುಸ್ತಕಗಳಲ್ಲಿ ಹೇಗೆ ಸರಿಪಡಿಸುವುದು? ಪ್ರತಿವರ್ಷ ಲಕ್ಷಗಟ್ಟಳೆ ಪುಸ್ತಕಗಳನ್ನು ಮಕ್ಕಳು ಕೊಳ್ಳುವುದಿಲ್ಲವೆ ? ಬರೆದಿರುವುದರಲ್ಲಿ ತಪ್ಪಿದ್ದರೆ ಮಕ್ಕಳು ಅದನ್ನೇ ಕಾಪಿಮಾಡುತ್ತಾರೆ. ಪುಸ್ತಕದಲ್ಲಿ ತಪ್ಪಿದೆಯೆಂದು ಯಾರಿಗೆ ಗೊತ್ತಾಗುತ್ತದೆ ? ಕೆಲವು ಪುಸ್ತಕಗಳಲ್ಲಿ ಮಂತ್ರಿಗಳ ಚಿತ್ರ, ಹೆಸರು ಮುಂತಾದ್ದನ್ನೆಲ್ಲಾ ಸೇರಿಸಿರುವುದೇಕೆ? ಯಾವ ಮಂತ್ರಿಗಳು ಎಷ್ಟುದಿವಸ ಅಧಿಕಾರದಲ್ಲಿರುತ್ತಾರೆಂಬುದೇ ಗೊತ್ತಿರುವುದಿಲ್ಲ. ಹಾಗಿರುವಾಗ ಇದೆಲ್ಲಾ ಏಕೆ ಸೇರಿಸಬೇಕು ? ತಪ್ಪುಬರೆದು ಮಕ್ಕಳ ಮೇಲೆ ಅದನ್ನು ಇಂಪ್ರೆಸ್ ಮಾಡಬಾರದು ಪಠ್ಯಪುಸ್ತಕಗಳನ್ನು ಆರಿಸುವ ಸಮಿತಿಯಲ್ಲಿ ಮಹಾ ತಜ್ಞರಿದ್ದಾರೆಂದು ಕೇಳಿದ್ದೇನೆ. ಅವರು ಕೈಯಿಡುವವರಾದರೆ ಅವರ ಕೈಗಳನ್ನು ಕತ್ತರಿಸಬೇಡವೆ ? 5ಲಕ್ಷ ಮಕ್ಕಳ ಭವಿಷ್ಯವನ್ನು ರೂಪಿಸುವವರು ಅಪಾದನೆಗೆ ಒಳಗಾಗಬಾರದು. ಅವರ ವಿಚಾರದಲ್ಲಿ ಗಾಳಿವರ್ತಮಾನ ಕೂಡ ಬರಬಾರದು. ಹಾಗಿಲ್ಲದಿದ್ದರೆ ಮಕ್ಕಳನ್ನು ಕಾಣದ ಹಳ್ಳಕ್ಕೆ ತಳ್ಳಿದಂತಾಗುತ್ತದೆ. ತಾಯಿಯ ಹಾಲೇ ವಿಷವಾದರೆ ಎಷ್ಟು ಹಿಂಸೆಯಾಗುತ್ತದೆಂಬುದನ್ನು ಯೋಚನೆಮಾಡಿ, ಆದುದರಿಂದ ಈ ಪಠ್ಯಪುಸ್ತಕಗಳ ವಿಷಯದಲ್ಲಿ ಬಹಳ ನಿಷ್ಠೂರವಾದ ನೀತಿ

ಯನ್ನು ಸರ್ಕಾರ ಪ್ರಮಾಣಿಕವಾಗಿ ಜವಾಬ್ದಾರಿಯಿಂದ ನಿರ್ವಹಿಸಬೇಕಾಗುತ್ತದೆ. ಪ್ರತಿಪಕ್ಷದಲ್ಲಿದ್ದು ಸಮರ್ಥನೆ ಮಾಡಿಕೊಳ್ಳುವುದು ಅನಿವಾರ್ಯ ಆದರೆ ವಸ್ತುಸ್ಥಿತಿ ಬೇರೆಇದೆ. ನೂರಾರು ಉದಾಹರಣೆ ಹೇಳುವುದು ಈ ದಿವಸ ನಿಗದಿಮಾಡಿರುವ ಪುಸ್ತಕಗಳು ಸರಿಯಾದ ಪುಸ್ತಕಗಳಲ್ಲ ಹತ್ತು ಪುಸ್ತಕಗಳನ್ನು ನೋಡಿ ಒಂದು ಪುಸ್ತಕವನ್ನು ಈ ಸಭೆಯಲ್ಲೇ ನಾನು ಬರೆದು ಕೊಡದಿದ್ದರೆ ನಾನು ಗೋಪಾಲ ಗೌಡನಲ್ಲ. 10ಪುಸ್ತಕಗಳನ್ನು ತಂದು ಅದರಲ್ಲಿರುವ ಪಾಠಗಳನ್ನು ಹಿಂದು ಮುಂದುಮಾಡಿ ಒಂದು ಪುಸ್ತಕ ಮಾಡಬಹುದು ಅದು ಸರಿಯಾದ ಕ್ರಮವೇ? ಮೂಲವಿಷಯ ಸಂಶೋಧನೆಮಾಡಿ ಯಾರೂ ಪುಸ್ತಕ ಬರೆದಿಲ್ಲ. ಪುಟ, ಹೆಸರು, ಅನುಕ್ರಮಚಿತ್ರ ಬದಲಾಯಿಸಿ ಪುಸ್ತಕಮಾಡಿ, ಪ್ರಕಾಶನದವರ ಹತ್ತಿರ ಕೈವಾಡ, ಮಾರಾಟಗಾರರ ಬಳಿ ಕೈವಾಡ, ನಡೆಸುತ್ತಾರೆ. ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತಿಲ್ಲ. ಅಕ್ರಮವು ಒಂದು ರೀತಿಯಲ್ಲಿ ನಡೆಯುತ್ತಿದೆ ಎಂದು ವ್ಯಸನದಿಂದ ಹೇಳಬೇಕಾಗಿದೆ. ಇದನ್ನು ಕಡಮೆ ಮಾಡಬೇಕು, ಪಠ್ಯಪುಸ್ತಕಗಳ ರಾಷ್ಟ್ರೀಕರಣ ಮಾಡುವುದಾಗಿ ಹೇಳುತ್ತೀರಿ, ಅದರ ಜೊತೆಗೆ ಜಾತಿ, ನ್ಯಾಸ, ಸ್ವಾತಂತ್ರ್ಯ ಮುಂತಾದುವುಗಳು ರಾಷ್ಟ್ರೀಕೃತವಾದರೆ ಅದಕ್ಕಿಂತ ದೊಡ್ಡಕೇಡು ಯಾವುದೂ ಇರಲಾರದು. ಜನಜೀವನ ಉತ್ತಮಗೊಳಿಸುವುದಕ್ಕೆ ದೋಷರಹಿತ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಜಗತ್ತಿಗೆ, ಸಮಾಜಕ್ಕೆ ದೊಡ್ಡ ಅಪಾಯ ತಮಗೆ ಬೇಕಾದ ಮುದ್ದಣ್ಣ, ಸಿದ್ದಣ್ಣ ಮುಂತಾದವರಿಂದ ಪುಸ್ತಕಗಳನ್ನು ಬರೆಸಿ, ಅವರಿಗೆ ಉಪಕಾರಮಾಡಿ ಹತ್ತಾರುಸಾವಿರ ಮಕ್ಕಳಿಗೆ ಹಂಚಿ ಓದಬೇಕೆಂದು ಹೇಳಿದರೆ, ಅವು ಸರಿಯಾಗಿಲ್ಲದಿದ್ದರೆ ಚಳುವಳಿಯನ್ನು ಅದರ ವಿರುದ್ಧವಾಗಿ ಮಾಡಬೇಕಾಗುತ್ತದೆ. ಆದುದರಿಂದ ವಿದ್ಯಾಸಚಿವರು ಇದನ್ನು ಚೆನ್ನಾಗಿ ಗಮನಿಸಬೇಕು. ಅವರು ತಿಳಿದವರು, ಅವರಿಗೆ ತಿಳಿಯುವಂತೆ ಹೇಳುವಶಕ್ತಿ ನನಗಿಲ್ಲ, ಈಗಿನ ರೀತಿ ಸರ್ಕಾರಕ್ಕೆ ಗೌರವ ತರುವಂತಿಲ್ಲ. ಪುನಃ ಪಠ್ಯಪುಸ್ತಕಗಳ ವಿಚಾರದಲ್ಲಿ ಈಗ ನಡೆದಿರುವ ಪ್ರಕರಣಗಳು ನಡೆಯದಂತೆ ತಡೆಮಾಡಬೇಕು. ನುರಿತ ಪಂಡಿತರು, ಜ್ಞಾನಿಗಳು ಅನೇಕರಿದ್ದಾರೆ, ಸಮಾಜ ಜೀವನದಲ್ಲಿ ಆಸಕ್ತಿಯಿರುವವರಿದ್ದಾರೆ. ಮಕ್ಕಳ ವಿಚಾರದಲ್ಲಿ ಮಮತೆಯುಳ್ಳವರಿದ್ದಾರೆ. ಅವರಿಗೆ ಸಂಬಳ, ಭತ್ಯ ಕೊಡಬೇಕಾಗಿಲ್ಲ. ಅವರನ್ನು ಕೇಳಿ ಮರ್ಯಾದೆಯಿಂದ ಅವರೊಂದಿಗೆ ಮಾತನಾಡಿ ವ್ಯವಸ್ಥೆಮಾಡಿದರೆ ಎಷ್ಟೋ ಒಳ್ಳೆಯದು.

ಪಠ್ಯಪುಸ್ತಕಗಳ ಪರಿಷ್ಕರಣ ಮಾಡುವಾಗ ಒಂದು ಗೊತ್ತಾದ ಕಾರ್ಯಕ್ರಮವನ್ನು ಅನುಸರಿಸಿಕೊಂಡು ಬರಬೇಕು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಇವತ್ತು ಇರತಕ್ಕಂಥ ಲೋಪದೋಷಗಳನ್ನು ಕುಂದುಕೊರತೆಗಳನ್ನು ತಾವು ಹೋಗಲಾಡಿಸಿ, ತಮ್ಮ ಆಡಳಿತವನ್ನು ಸರಿಪಡಿಸಿಕೊಳ್ಳಿ ಎಂದು ಹೇಳಿ ಉಪಾಧ್ಯಾಯರ ಸಂಬಳ ಸಾರಿಗೆಗಳ ವಿಷಯದಲ್ಲಿ, ಅವರ ಸೌಲಭ್ಯಗಳನ್ನು ಹೆಚ್ಚಿಸುವ ವಿಷಯದಲ್ಲಿ ಸರ್ಕಾರ ತೀವ್ರ ಗಮನಕೊಡಬೇಕು. ಅವರ ಕೊರತೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು, ಎಂದು ನಾನು ಹೇಳಿ, ನಾನು ಈ ಒಂದು ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ, ಹಾಗೂ ಈ ನಿರ್ಣಯ ತಂದಂಥ ಮಾನ್ಯ ಶ್ರೀ ಮಾದೇಗೌಡರಿಗೆ ಕೃತಜ್ಞತೆಯನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

10-30 P.M.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೆ, ಪ್ರಾಥಮಿಕ ಶಿಕ್ಷಣ ಆಡಳಿತದ ಬಗ್ಗೆ ತಂದಿರತಕ್ಕಂಥ ಈ ನಿರ್ಣಯದ ಬಗ್ಗೆ ಈಗಾಗಲೇ ಶ್ರೀಮಾನ್ ಗೋಪಾಲಗೌಡರು ಮಾತನಾಡಿರತಕ್ಕಂಥ ವಿಚಾರಗಳನ್ನು ಸ್ವಲ್ಪಮಟ್ಟಿಗೆ ಬಿಟ್ಟು, ಬಾಕಿ ವಿಚಾರವನ್ನು ಚರ್ಚೆ ಮಾಡಲು ಬಯಸುತ್ತೇನೆ. ಅದರಲ್ಲಿಯೂ ನಮ್ಮ ಈ ಮಂತ್ರಿಮಂಡಲದಲ್ಲಿ ಶ್ರೀಮಾನ್ ಕಂಠಿಯವರ ಅಧಿಕಾರಾವಧಿಯಲ್ಲಿ ಆಗಿರತಕ್ಕಂಥ ಅನ್ಯಾಯ ಮತ್ತು ಮಕ್ಕಳ ಭವಿಷ್ಯಕ್ಕೆ ಒದಗಿರತಕ್ಕಂಥ ಧಕ್ಕೆ ಒಂದು ದೊಡ್ಡ ಕೋಲಾಹಲವನ್ನೇ ಈ ರಾಜ್ಯದಲ್ಲಿ ಎಬ್ಬಿಸಿದೆ ಎಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಏಕೆಂದರೆ ನಮ್ಮ ದೇಶದಲ್ಲಿ ಸಮಾಜವಾದವನ್ನು ಸ್ಥಾಪನೆ ಮಾಡಬೇಕು, ಇದು ನಾಗರಿಕ ದೇಶವಾಗಬೇಕು, ಜನಗಳಲ್ಲಿ ಸಂಸ್ಕೃತಿ ಬೆಳೆಯಬೇಕು ಎಂದು ಹೇಳಿ ವಿದ್ಯಾಖಾತೆಗೆ ಹೆಚ್ಚು ಅಧಿಕಾರವನ್ನು ಕೊಟ್ಟೆವು. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ ಒಳ್ಳೆಯ ಪ್ರಜೆಗಳನ್ನು ನಿರ್ಮಾಣಮಾಡಬೇಕು ಎಂದು ಹೊರಟ ಈ ದಾರಿಗೆ ಇವತ್ತಿನಿಂದ ಕೊಡಲಿಪೆಟ್ಟು ಹಾಕಿರುವ ನಿದರ್ಶನಗಳಿವೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸರ್ಕಾರ ಬಂದಮೇಲೆ ಪ್ರತಿದಿವಸ ಸಾಮಾನ್ಯವಾಗಿ ವಿದ್ಯಾಭ್ಯಾಸದ ಇಲಾಖೆಯಮೇಲೆ ಟೀಕೆಗಳು ಬಂದಿವೆ. ಪ್ರತಿನಿತ್ಯ ವಿದ್ಯಾಇಲಾಖೆಯ ಆಡಳಿತ ಕುಸಿದು ಹೋಗುತ್ತಿರುವಂಥ ನಿದರ್ಶನಗಳನ್ನು ಕಣ್ಣಾರೆ ಕಂಡಿದ್ದೇವೆ.

Mr. CHAIRMAN.—The Hon'ble member should speak only on primary education.

Sri K. LAKKAPPA.—Education Department includes Primary Schools also.

ಈ ಮೂಲಭೂತವಾದಂಥ ವಿಷಯವನ್ನು, ಹಕ್ಕನ್ನು ಪ್ರಜೆಗಳಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಈ ಸರ್ಕಾರ ಆದರಲ್ಲಿಯೂ ಪ್ರಾಥಮಿಕ ಶಿಕ್ಷಣದ ಆಡಳಿತ ಬಹಳ ಕೆಟ್ಟುಹೋಗಿದೆ. ಅದಕ್ಕೆ ತುಕ್ಕು ಹಿಡಿದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈಗಾಗಲೇ ಶ್ರೀ ಗೋಪಾಲಗೌಡರು ಹೇಳಿದರು. ಈ ಸರ್ಕಾರ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು ಈ ದೇಶದಲ್ಲಿ ಸಂಸ್ಕೃತಿಯನ್ನು ಬೆಳಸಿ, ಜನಗಳನ್ನು ಸುಸಂಸ್ಕೃತರನ್ನಾಗಿ ಮಾಡುತ್ತೇವೆ ಎಂಬ ಈ ಒಂದು ಯೋಜನೆಯಲ್ಲಿ ವಿಫಲವಾಗಿದೆ ಎಂದು ಎಲ್ಲಕ್ಕಿಂತ ಬಹಳ ಮುಖ್ಯವಾಗಿ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳಿಲ್ಲ, ಕಟ್ಟಡಗಳಿದ್ದರೆ, ಉಪಾಧ್ಯಾಯರಿಲ್ಲ. ಉಪಾಧ್ಯಾಯರಿದ್ದರೆ ಹುಡುಗರು ಬರುತ್ತಾ ಇಲ್ಲ. ಇವೆಲ್ಲಾ ಇದ್ದರೂ ಆಡಳಿತವರ್ಗ ಸರಿಯಾಗಿಲ್ಲ. ಈ ಪ್ರಶ್ನೆಗಳು ಬಹಳವಾಗಿ ಇವೆ. ಇದು ಸರಿಯಾಗಬೇಕಾದರೆ ಅಧಿಕಾರ ನಡೆಸತಕ್ಕಂಥವರು ಸರಿಯಾಗಿರಬೇಕು; ಪಾಠವನ್ನು ಹೇಳತಕ್ಕಂತವರು ಸರಿಯಾಗಿರಬೇಕು, ಹುಡುಗರನ್ನು ಪಾಠಶಾಲೆಗೆ ಕಳುಹಿಸತಕ್ಕಂಥ ಪೋಷಕವರ್ಗಕ್ಕೆ ಮತ್ತು ಪಾಠಪ್ರವಚನವನ್ನು ಮಾಡುವುದಕ್ಕೆ ಒಳ್ಳೆಯ ಕಟ್ಟಡಗಳು ಅತ್ಯವಶ್ಯಕವಾಗಿರಬೇಕು. ಈ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳ ಬಗ್ಗೆ ಹೇಳುವುದಾದರೆ, ಜನರ ಸ್ಥಿತಿ ನಿಜವಾಗಿಯೂ ದುರ್ದೈವ ಎಂದು ಹೇಳಬೇಕಾಗಿದೆ. ಇವತ್ತಿನ ದಿವಸ ಈ ದೇಶದಲ್ಲಿ 100ಕ್ಕೆ 90 ಜನ ರೈತರಿರುವಂಥ ಕಡೆ ಆಡಳಿತಯಂತ್ರ ನಡೆಸತಕ್ಕಂಥ ಸರ್ಕಾರ, ರೈತರ ಮಕ್ಕಳು ವಿದ್ಯಾಭ್ಯಾಸಮಾಡುವುದಕ್ಕೆ ಸೌಕರ್ಯ ಕಲ್ಪಿಸಿಲ್ಲ. ಸೌಕರ್ಯ ಬೇಕು ಎಂದು ಹೇಳಿ ಯಾರು ಕೇಳಿದರೂ, ಮೊದಲು ಹಣವನ್ನು ಹಳ್ಳಿಯವರು ಕಟ್ಟಡಕ್ಕೆ ಕೊಡಬೇಕು ಎಂದು ಸರ್ಕಾರದವರು ಹೇಳುತ್ತಾರೆ. ಈ ಜವಾಬು ನಿಜವಾಗಿಯೂ ಪ್ರಜಾಪ್ರಭುತ್ವಕ್ಕೆ ಅಥವಾ ಪ್ರಜಾಪ್ರಭುತ್ವನೀತಿಗೆ ಸರಿಹೊಂದಿಕೊಳ್ಳುವುದಂಥದಲ್ಲ. ಏಕೆಂದರೆ ಈ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆಯತಕ್ಕಂಥಾದ್ದು ಅವನ ಆಜನ್ಮಸಿದ್ಧವಾದ ಹಕ್ಕು. ಆ ಹಕ್ಕಿಗೆ ಧಕ್ಕೆ ಇರುವುದಾದರೆ ಪ್ರಜಾಪ್ರಭುತ್ವ ಎಲ್ಲಿಗೆ ಹೋಗುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಸ್ವಾಮಿ, ಗ್ರಾಮಾಂತರ ಪ್ರದೇಶಗಳ ಪ್ರಾಥಮಿಕ ಶಿಕ್ಷಣ ಕಟ್ಟಡಗಳ ವಿಷಯವನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸತಕ್ಕಂಥ ವಾದ, ರೀತಿ ನೀತಿ ಕೂಡ ನಮ್ಮ ಮಕ್ಕಳ ಭವಿಷ್ಯಕ್ಕೆ ಬಹಳ ಅನ್ಯಾಯ ಮಾಡುವಂಥಾದ್ದು ಎಂದು ಎದ್ದು ಕಾಣುತ್ತಾ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಕಟ್ಟಡಗಳು ಬೇಕಾಗಿವೆ, ಅಲ್ಲಿಗೆ ಹೋಗತಕ್ಕಂಥ ಮಕ್ಕಳು ಎಷ್ಟು ಎಂಬ ಬಗ್ಗೆ ಇವತ್ತಿನವರೆಗೂ ಸರ್ಕಾರ ನಿಖರವಾದ ಅಂಕಿಅಂಶಗಳನ್ನು ಸಂಗ್ರಹಣೆ ಮಾಡಿಲ್ಲ. ಸಂಗ್ರಹಣೆ ಮಾಡಿರತಕ್ಕಂಥ ಅಂಕಿಅಂಶಗಳೂ ಕೂಡ ತಪ್ಪು ಮತ್ತು ಸುಳ್ಳಿನ ವರದಿಗಳ ಆಧಾರದ ಮೇಲೆ ಶೇಖರಿಸಿದ ಅಂಕಿಅಂಶಗಳಾಗಿವೆ. ಏಕೆಂದರೆ ಅನೇಕ ಹಳ್ಳಿಗಳಿಗೆ ಸಾಮಾನ್ಯವಾಗಿ ಹತ್ತಾರು ಮೈಲಿಗಳ ದೂರಕ್ಕೆ ಒಂದು ಸ್ಕೂಲು ಇರುವುದಿಲ್ಲ. ಸ್ಕೂಲುಗಳಿದ್ದರೂ ಒಂದೇ ಕೊಠಡಿಯಲ್ಲಿ ನಾಲ್ಕು ಕ್ಲಾಸುಗಳನ್ನು ಮಾಡುವ ದೃಶ್ಯ ನೋಡಬೇಕಾಗಿದೆ, ಇದೂ ಅಲ್ಲದೆ ಈ ಕ್ಲಾಸುಗಳಿಗೂ ಪಾಠವನ್ನು ಒಬ್ಬರೆ ಉಪಾಧ್ಯಾಯರು ಹೇಳಿಕೊಡಬೇಕು. ಎಲ್ಲ ಕ್ಲಾಸಿನ ಹುಡುಗರೂ ಒಂದೇ ಹಾಲಿನಲ್ಲಿ ಕುಳಿತುಕೊಂಡು ಪಾಠ ಹೇಳಿಸಿಕೊಳ್ಳಬೇಕು, ಕಲಿಯಬೇಕು. ಇವತ್ತಿನ ದಿವಸ ಉಪಾಧ್ಯಾಯರ ಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು ಮತ್ತು ಸರ್ಕಾರ ದಿನಚರಿ ಆಡಳಿತದಲ್ಲಿ ಕೈ ಹಾಕುತ್ತಿರುವ ನಿದರ್ಶನಗಳನ್ನೂ ಹೇಳಬೇಕಾಗಿದೆ. ಹಳ್ಳಿಯಲ್ಲಿನ ಪ್ರಾಥಮಿಕ ಶಾಲೆಗಳಸ್ಥಿತಿ ಹೀನಾಯವಾಗಿದೆ. ಅಧಿಕಾರಿಗಳು ನೀತಿನಿಯಮಕ್ಕೆ ಗೌರವ ಕೊಡುತ್ತಿಲ್ಲ. ಪ್ರೈಮರಿ ಶಾಲೆಯ ಒಂದು ನಿದರ್ಶನವನ್ನು ಹೇಳಬೇಕಾಗಿದೆ. ನಮ್ಮ ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ತಾಲ್ಲೂಕು ಕೊಳಾಲ ಎಂಬ ಒಂದು ಹಳ್ಳಿಯಲ್ಲಿ ಒಬ್ಬರು New Type Middle School ಹೆಡ್ ಮಾಸ್ಟರು 12 ವರ್ಷದಿಂದ ಅದೇ ಸ್ಕೂಲಿನಲ್ಲಿಯೇ ಇದ್ದರೂ ಆ ಊರಿನ ಮುಖ್ಯಸ್ಥರ ಮತ್ತು ಬಹಳ ಅನುಕೂಲಸ್ಥರ ಮನೆಯಲ್ಲಿ ಊಟಮಾಡಿಕೊಂಡು, ಅವರ ಲೆಕ್ಕಪತ್ರಗಳು, ಲೇವಾದೇವಿ, ದಿನಚರಿ ವ್ಯವಹಾರ ನೋಡಿಕೊಂಡು ಅವರ ಜೊತೆಯಲ್ಲಿಯೇ ಇದ್ದರು. ಅಂತಹ ವ್ಯವಹಾರದಲ್ಲಿದ್ದಂತಹ ಈ ಸ್ಕೂಲಿನ ಉಪಾಧ್ಯಾಯರು ಮೊನ್ನೆ ಒಂದು ಸಾರಿ ಇನ್‌ಸ್ಪೆಕ್ಟರನ್ನು ಭೇಟಿ ಮಾಡುವುದಕ್ಕೆ ಹೋದಾಗ ನೀವು ಯಾರು, ನೀವು ಇನ್‌ಸ್ಪೆಕ್ಟರ್ ಎಂಬುದಕ್ಕೆ ಏನು ಗುರುತಿದೆ ಎಂದು ಕೇಳಿದ್ದಾರೆ. ಈ ವಿಚಾರವನ್ನು ತುಮಕೂರು ಡಿ. ಒ. ಗೆ ತಿಳಿಸಿದಾಗ ಕೂಡಲೆ ಅಲ್ಲಿಂದ ಆ ಉಪಾಧ್ಯಾಯರನ್ನು ಪಾವಗಡ ತಾಲ್ಲೂಕಿಗೆ ವರ್ಗ ಮಾಡಿದ್ದಾರೆ. ಆದರೆ ಸಾಹುಕಾರರ ಒಂದು ಆಶ್ರಯದಲ್ಲಿ ಬೆಳೆದಂತಹ ಉಪಾಧ್ಯಾಯರು ಈ ಸ್ಕೂಲನ್ನೇ ಮುಚ್ಚಿ ವಿದ್ಯಾರ್ಥಿಗಳ ಸರ್ಟಿಫಿಕೇಟುಗಳನ್ನು ವಾಪಸ್ಸು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಇಲ್ಲಿ ಸ್ಕೂಲು ನಡೆಯುವುದಿಲ್ಲ. ನೀವೆಲ್ಲಾ ಬೇರೆಕಡೆಗೆ ಹೋಗಿ ಎಂದು ಹೇಳಿ ಆ ಸ್ಕೂಲು ಬಾಗಿಲನ್ನೇ ಮುಚ್ಚಿದರು. ಇಂಥಾದ್ದಕ್ಕೆಲ್ಲಾ ಸರ್ಕಾರ ರಕ್ಷಣೆ ಕೊಡುವಹಾಗೆಯೇ ಇಲ್ಲ. ಸರ್ಕಾರ ನೇರವಾಗಿ ತುಮಕೂರು ಡಿ. ಒ.

ಆಫೀಸಿಗೆ ಪತ್ರವ್ಯವಹಾರಗಳನ್ನು ನಡೆಸುವ ಮೂಲಕ, ಮಂತ್ರಿಗಳು ಮತ್ತು ಉನ್ನತ ಅಧಿಕಾರಿಗಳ ಪ್ರೇರಣೆಯಿಂದಲೋ ಏನೋ ಪುನಃ ಆ ಉಪಾಧ್ಯಾಯರನ್ನು ಅದೇ ಊರಿನಲ್ಲಿ ವರ್ಗಮಾಡಿದರು. ಒಬ್ಬ ಡಿಸ್ಟ್ರಿಕ್ಟ್ ವಿದ್ಯಾಧಿಕಾರಿ ಒಬ್ಬ ಸಾಮಾನ್ಯ ಉಪಾಧ್ಯಾಯರ ಮೇಲೆ ಕಂಟ್ರೋಲ್ ಇಲ್ಲದೆ ಅವರ ಒಂದು ಕರ್ತವ್ಯದ ಬಗ್ಗೆ ಅವರು ಹೇಳಿದ ಮಾತನ್ನು ಕೇಳದೆ ಇರುವ ನಿದರ್ಶನ ಒಂದನ್ನು ಈಗ ಈ ಸಭೆಯ ಮುಂದೆ ತಿಳಿಸಬೇಕಾಗಿ ಬಂತು. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಪ್ರಾಥಮಿಕ ಶಾಲೆಗಳ ಆಡಳಿತ ಯಂತ್ರದ ರೀತಿನೀತಿ ಕೆಟ್ಟುಹೋಗಿ ಪ್ರಾಥಮಿಕ ವಿದ್ಯಾಭ್ಯಾಸದ ಏಳಿಗೆ ಕುಂದುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ರಜೆಗಳು ಒಳ್ಳೆಯ ಸುಸಂಸ್ಕೃತರು ಆಗಬೇಕೆಂಬ ಸರ್ಕಾರದ ಮನೋಭಾವನೆಯ್ಯೇ ಅಷ್ಟಾಗಿ ಕಾಣಬರುತ್ತಿಲ್ಲ.

ಶ್ರೀ ಎಸ್. ಆರ್. ಕಂಠಿ.—ಅಂತಹ ಉದಾಹರಣೆಗಳು ಎಷ್ಟಿವೆ ?

ಶ್ರೀ ಕೆ. ಲಕ್ಕಪ್ಪ.—ಅಂತಹ ಉದಾಹರಣೆಗಳು ಬಹಳ ಇವೆ. ಹಿಂದೆ ಅನೇಕಬಾರಿ ಈ ಬಗ್ಗೆ ಕಾಗದಗಳನ್ನು ಬರೆದು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇದು ಬಹಳ ದುರದೃಷ್ಟಕರ. ಈ ವಿಷಯದಲ್ಲ ಉನ್ನತ ಅಧಿಕಾರಿಗಳು ಈರೀತಿಯಲ್ಲಿ ಕೆಲಸಕಾರ್ಯಗಳನ್ನು ನಿರ್ವಹಣೆ ಮಾಡಿದ್ದಾರೆ: ನಿಜವಾಗಿ ಆಡಳಿತಯಂತ್ರವನ್ನು ಸರಿಯಾಗಿ ನಡೆಸುವುದಕ್ಕೆ ತಕ್ಕ ಅವಕಾಶಗಳು ಇದ್ದರೂ ಸಾಮಾನ್ಯ ವಿಷಯಗಳಲ್ಲಿ ಇವರು ಕೈಹಾಕುವುದರಿಂದ ಆಡಳಿತಯಂತ್ರವೇ ಕೆಟ್ಟು ಹೋಗುವ ಪರಿಸ್ಥಿತಿ ಬರುತ್ತದೆ. ಇವತ್ತಿನ ದಿವಸ ತಾಲೂಕ್ ಬೋರ್ಡುಗಳಿಗೆ ಸರ್ಕಾರದವರು ಕೊಡುವ ಹಣ ಸಾಲದು ಎಂಬುದಾಗಿ ಪಂಚಾತಿ ನಿರ್ಣಯಗಳನ್ನು ಮಾಡಿ ಪೋಪಕರಿಂದ ಕಳುಹಿಸಲ್ಪಟ್ಟರೂ ಸಾಕಷ್ಟು ರೀತಿಯಲ್ಲಿ ಸರ್ಕಾರ ಆ ಬಗ್ಗೆ ನಿಗಾಕೊಡುತ್ತಾ ಇಲ್ಲ ಮುಖ್ಯವಾಗಿ ಇವತ್ತಿನ ದಿವಸ ಸರ್ಕಾರ ಪ್ರಾಥಮಿಕ ವಿದ್ಯಾಭ್ಯಾಸ ಸೌಕರ್ಯಕ್ಕೆ ಮತ್ತು ಕಟ್ಟಡಗಳಿಗೆ ಇನ್ನೂ ಅನೇಕ ಕಡೆಗಳಲ್ಲಿ ಹಣವನ್ನೊದಗಿಸಲಿಲ್ಲವೆಂದು ಬಹಳ ವ್ಯಸನವಾಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ಕೆಲವು ಕಡೆಗಳಲ್ಲಿ ಇನ್ನೂ ಜನಗಳಿಂದ ಕಾಂಟ್ರಿಬ್ಯೂಷನ್ ಬರಬೇಕು ಅದು ಬಂದಕೂಡಲೆ ಸರ್ಕಾರದವರು ತಕ್ಕ ಹಣ ಸಹಾಯವನ್ನು ಮಾಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ತೆರಿಗೆಗಳನ್ನು ನಾವೇಕೊಡಬೇಕು, ಕಟ್ಟಡಗಳನ್ನು ನಾವೇ ಕಟ್ಟಿಸಿಕೊಡಬೇಕು, ಉಪಾಧ್ಯಾಯರುಗಳನ್ನು ನಾವೇ ನೇಮಿಸಿಕೊಳ್ಳಬೇಕು. ಹೀಗೆ ಎಲ್ಲಾ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕು ಅಂದರೆ ಸರ್ಕಾರ ಏನೇನು ಕೆಲಸಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುತ್ತಿದೆಯೆಂಬುದನ್ನು ಸ್ವಲ್ಪ ಹೇಳಿದರೆ ಚೆನ್ನಾಗಿರುತ್ತದೆ. ತೆರಿಗೆಯನ್ನು ಜನ ಕೊಡುತ್ತಾರೆ. ಇತ್ತೀಚೆಗೆ ನಮ್ಮ ದೇಶಕ್ಕೆ ರಕ್ಷಣೆಯಾಗಬೇಕು ಎಂದು ಬೇರೆ ಹೇಳುತ್ತಿದ್ದೀರಿ. ಹೀಗೆ ಪ್ರತಿಯೊಂದು ನಾವೇ ಮಾಡುತ್ತಿದ್ದೇವೆಂದು ಜನತೆ ಹೇಳುತ್ತಿರುವುದನ್ನು ಸರ್ಕಾರ ಈ ಸಂದರ್ಭದಲ್ಲಿ ಮನಗಾಣಬೇಕು. ಅಂದ ಮೇಲೆ ಸರ್ಕಾರ ಮಾಡತಕ್ಕ ಕೆಲಸವೇನು? ವಿದ್ಯಾಭ್ಯಾಸ ಸೌಕರ್ಯ ಸಾಕಷ್ಟು ಮಕ್ಕಳಿಗೆ ಕೊಡಬಾರದು ಮತ್ತು ನಮ್ಮ ದೇಶದ ಮಕ್ಕಳು ವಿದ್ಯಾವಂತರಾಗಬಾರದು ಎಂಬ ಮನೋಭಾವ ಸರ್ಕಾರ ತಾಳಿದೆಯೋ ಏನೋ ಎಂಬ ಒಂದು ಸಂಶಯ ಜನತೆಗೆ ಈಗ ಉಂಟಾಗುತ್ತಿದೆ. ಇಂತಹ ಪ್ರಜಾಪ್ರಭುತ್ವದಲ್ಲಿ ಸ್ವೇಚ್ಛಾಧಿಕಾರ ತೊಲಗಬೇಕು. ಇಲ್ಲಧಿದ್ದರೆ ಸರ್ಕಾರದವರ ಮೇಲೆ ಒಂದು ರೀತಿಯ ಅನುಮಾನ ಅಥವಾ ಶಂಕೆ ಇಂತಹ ರಾಜ್ಯಾಡಳಿತದಲ್ಲಿ ಜನತೆಗೆ ಉಂಟಾಗುತ್ತದೆ. ಆದ್ದರಿಂದ ಈ ಪ್ರಜಾಭುತ್ವದಲ್ಲಿ ಪ್ರಾಥಮಿಕ ಶಾಲಾಕಟ್ಟಡಗಳು ಹೆಚ್ಚಿ ಮಕ್ಕಳು ಹೆಚ್ಚುಹೆಚ್ಚಾಗಿ ವಿದ್ಯಾವಂತರಾಗಿ ದೇಶ ಚೆನ್ನಾಗಿ ಬೆಳೆಯಬೇಕು ಎಂಬುದು ಈ ಸನ್ನಿವೇಶದಲ್ಲಿ ಬಹುಮುಖ್ಯವಾದುದು. ಈ ಸಮಸ್ಯೆಗಳನ್ನು ಇವತ್ತಿನವರೆಗೂ ಬಿಡಿಸಿಕೊಳ್ಳುವುದಕ್ಕೆ ಇವರ ಅಧಿಕಾರದ ಅವಧಿಯಲ್ಲಿ ಸಾಧ್ಯವಾಗಿಲ್ಲ. ಇನ್ನು ಮುಂದೆ ಪ್ರಾಥಮಿಕ ಶಾಲಾ ಕಟ್ಟಡಗಳ ಬಗ್ಗೆ ಆಗಬೇಕಾದ ಸೌಕರ್ಯಗಳನ್ನೆಲ್ಲಾ ಒದಗಿಸುವುದೇ ಈ ಸರಕಾರದ ಪ್ರಥಮ ಕರ್ತವ್ಯವಾಗಿರಬೇಕೆಂದು ನಾನು ಈ ಸಂದರ್ಭದಲ್ಲಿ ಆಶಿಸಬಯಸುತ್ತೇನೆ. ಇನ್ನು ಪ್ರಾಥಮಿಕ ಶಿಕ್ಷಣ ಮತ್ತೆ ಏತಕ್ಕೋಸರ ಕೆಟ್ಟಿದೆ ಎಂದರೆ ಉಪಾಧ್ಯಾಯರಲ್ಲಿರತಕ್ಕ ಜಿಗುಪ್ಸೆಯೇ ಕಾರಣ. ಅವರಿಗೆ ಕೊಡತಕ್ಕ ಈಗಿನ ಸಂಬಳಸಾರಿಗೆ ಮತ್ತು ಇತರ ಸೌಕರ್ಯಗಳೇ ಮತ್ತೊಂದು ಕಾರಣವೆಂದು ಹೇಳಬಹುದು ಏಕೆಂದರೆ ಆ ಉಪಾಧ್ಯಾಯರಿಗೆ ಕೊಡುತ್ತಾ ಇರತಕ್ಕ ಕಿರುಕುಳ, ಅನ್ಯಾಯಗಳನ್ನು ಇದುವರಗೂ ಈ ಸರ್ಕಾರ ಬಗೆಹರಿಸಿಲ್ಲ. ಈ ದೇಶದಲ್ಲಿ ಪ್ರಾಥಮಿಕ ಉಪಾಧ್ಯಾಯರುಗಳ ಸಂಖ್ಯೆಯೇ ಬಹಳ ಜಾಸ್ತಿ. ಆದ್ದರಿಂದ ಅವರ ಸಮಸ್ಯೆಗಳೂ ಅಷ್ಟೇ ಗಾತ್ರವಾಗಿ ಉದ್ಭವಿಸುತ್ತವೆಂಬುದನ್ನು ಸರ್ಕಾರ ಈ ಸಂದರ್ಭದಲ್ಲಿ ಮನಗಾಣಬೇಕು. ಆ ಬಗ್ಗೆ ಸರ್ಕಾರ ಯಾವ ಅಂಕಿ ಅಂಶವನ್ನೂ ಇದುವರೆಗೆ ಕ್ರೋಢೀಕರಿಸಿಲ್ಲ. ಇನ್ನು ಮೊನ್ನೆತಾನೆ ಪ್ರಾಥಮಿಕ ಉಪಾಧ್ಯಾಯರ ಬಗ್ಗೆ ರೆಕ್ರೂಟ್‌ಮೆಂಟ್ ರೂಲ್ಸ್ ಬಂದಾಗ ಕೆಲವು ವರ್ಗದ ಉಪಾಧ್ಯಾಯ ವೃತ್ತಿ ಶಿಕ್ಷಣ ಪಡೆದಿರುವ ಉಪಾಧ್ಯಾಯರ ಗೋಳು ನಮ್ಮ ಮುಂದೆ ಇವತ್ತಿನದಿವಸ ಬಂದಿದೆ. ಅದು ತಮಗೂ, ಸರ್ಕಾರದವರಿಗೂ ಗೊತ್ತಿದೆ. ಸುಮಾರು 400 ಜನ ಉಪಾಧ್ಯಾಯರುಗಳು ಎಸ್. ಎಸ್. ಎಲ್. ಸಿ. ಪಾಸಾಗಿದೆ ಟಿ. ಟಿ. ಸಿ.

(ಶ್ರೀ ಕೆ. ಲಕ್ಕಪ್ಪ)

ಪರೀಕ್ಷೆ ಪಾಸ್ ಮಾಡಿಕೊಂಡು ಇದುವರೆಗೂ ಹಂಗಾಮಿಯಾಗಿ ಉಪಾಧ್ಯಾಯರ ವೃತ್ತಿಯಲ್ಲಿ ಕೆಲಸಮಾಡಿ ಇವತ್ತಿನ ದಿವಸ ಅವರು ಕೆಲಸ ಕಾರ್ಯಗಳಿಲ್ಲದೆ ತೊಂದರೆಪಡುತ್ತಾ ಇದ್ದಾರೆ. ಇವತ್ತಿನ ದಿವಸ ಅವರಿಗೆಲ್ಲರಿಗೂ ಕೆಲಸಗಳನ್ನು ಕೊಡಿಸುವ ವಿಚಾರವನ್ನು ಸರ್ಕಾರದವರು ಇದುವರೆಗೂ ತಮ್ಮ ಗಮನಕ್ಕೆ ತೆಗೆದುಕೊಳ್ಳಲೇ ಇಲ್ಲ. ಈ 400 ಜನ ಉಪಾಧ್ಯಾಯರ ಗೋಳಂತೂ ಬಹಳವಾಗಿದೆ. ಈಗ ಅಂತಹವರಿಗೆ ಪುನಃ ಪರೀಕ್ಷೆ ಮತ್ತು ಟ್ರೈನಿಂಗ್ ತೆಗೆದುಕೊಳ್ಳಬೇಕೆಂದು ಒಂದು ಅವಕಾಶವನ್ನು ಕೊಟ್ಟಿದ್ದೀರಿ. ಅಂತಹ ಉಪಾಧ್ಯಾಯರಿಗೆ ಈಗ ಏನು ಕೆಲಸಗಳನ್ನು ಕೊಟ್ಟಿದ್ದೀರೋ ಗೊತ್ತಿಲ್ಲ. ಇವತ್ತಿನದಿವಸ ಏಕದಂ ಅವರನ್ನು ರಿಟ್ರೆಂಚ್ ಮಾಡುವುದರಿಂದ ಎಷ್ಟು ಅನ್ಯಾಯವಾಗುತ್ತದೆಂಬುದನ್ನು ಸರ್ಕಾರ ಚೆನ್ನಾಗಿ ಮನಗಾಣಬೇಕು. ಈಗಾಗಲೇ ಅವರಿಗೆ ಎಷ್ಟೋ ತೊಂದರೆಯಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಯಾವುದಾದರೂ ಒಂದು ತ್ವರಿತವಾದ ನಿರ್ಧಾರವನ್ನು ಕೂಡಲೇ ಕೈಗೊಳ್ಳಬೇಕು. ಏಕೆಂದರೆ ನುರಿತ ಶಿಕ್ಷಕರು ದೇಶದಲ್ಲಿ ಸಿಗುವುದು ದುರ್ಲಭ. ಉತ್ತಮ ವಾದಂಥ ರೀತಿಯಲ್ಲಿ ಪಾಠಗಳನ್ನು ಹೇಳಿಕೊಡತಕ್ಕ ಉಪಾಧ್ಯಾಯರುಗಳು ದೇಶದಲ್ಲಿ ಸಿಕ್ಕುವುದು ಕಷ್ಟ, ಹಾಗಿರುವಾಗ ಅಂತಹವರನ್ನು ಸರ್ಕಾರ ಸರಿಯಾದ ರೀತಿಯಲ್ಲಿ ನೋಡಿಕೊಂಡು ಅವರ ಸ್ಥಿತಿಗತಿಗಳ ಕಡೆಗೆ ವಿಶೇಷ ಗಮನವನ್ನು ಕೊಡಬೇಕು. ಇಲ್ಲದಿದ್ದರೆ ದೇಶದಲ್ಲಿ ಮುಂದೆ ಉತ್ತಮವಾದ ಪ್ರಜೆಗಳನ್ನು ತಯಾರುಮಾಡುವುದಕ್ಕೆ ಸರ್ಕಾರಕ್ಕೆ ತುಂಬಾ ತೊಂದರೆಯಾಗುತ್ತದೆ. ಎಲ್ಲಿ ಅಂತಹ ಉಪಾಧ್ಯಾಯರುಗಳಿರುವುದಿಲ್ಲವೋ ಅಂತಹ ದೇಶ ಸುಸಂಸ್ಕೃತದೇಶವಾಗುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಮುಖ್ಯವಾಗಿ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ವಿಚಾರದಲ್ಲಿ ಸರ್ಕಾರದವರು ಬಹಳ ಸಹಾನುಭೂತಿಯಿಂದ ವರ್ತಿಸಬೇಕಾದುದು ಅವರ ಪ್ರಥಮ ಕರ್ತವ್ಯ. ಆದರೆ ಉಪಾಧ್ಯಾಯರುಗಳು ಎಲ್ಲೇಆಗಲಿ ಅವರ ಕರ್ತವ್ಯವನ್ನು ಮೀರಿ ಕರ್ತವ್ಯಕ್ಕೆ ವಿರೋಧವಾಗಿ ಕೆಲಸಮಾಡುವ ನಿದರ್ಶನಗಳೇನಾದರೂ ಸರ್ಕಾರಕ್ಕೆ ಕಂಡು ಬಂದಾಗ್ಗೆ ಅವರ ಮೇಲೆ ಉಗ್ರಶಿಕ್ಷೆ ಮಾಡತಕ್ಕ ವ್ಯವಸ್ಥೆ ಮಾಡುವುದು ಬಹುಮುಖ್ಯ. ಏಕೆಂದರೆ ಇವತ್ತಿನ ದಿವಸ ಕೆಲವು ಉಪಾಧ್ಯಾಯರುಗಳು ಮತ್ತು ಇತರರು ಖಾಸಗೀ ಜನಗಳಿಂದ, ಸರ್ಕಾರದಿಂದ ಅಥವಾ ಅಮೇರಿಕಾ ದೇಶದಿಂದ ಶಾಲಾ ಮಕ್ಕಳಿಗೋಸ್ಕರ ಕೊಟ್ಟಂಥ ಹಾಲಿನ ಪುಡಿಯನ್ನು ಅಪಹಾಸ್ಯ ಮಾಡಿದಂಥ ನಿದರ್ಶನಗಳನ್ನು ನಾನು ಹಿಂದೆ ಆಯವ್ಯಯದ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಎಲ್ಲಿ ಶಾಲಾ ಮಕ್ಕಳಿಗೋಸ್ಕರ ಕೊಟ್ಟಂಥ ಹಾಲಿನ ಪುಡಿಯನ್ನು ದುರುಪಯೋಗ ಮಾಡುತ್ತಾರೋ ಅಂತಹವರು ನಿಜವಾಗಿ ದೇಶ ದ್ರೋಹಿಗಳು. ಅಂತಹವರು ಎಲ್ಲೇ ಇರಲಿ ಅವರಿಗೆ ಸರ್ಕಾರದವರು ಉಗ್ರಶಿಕ್ಷೆಯನ್ನು ಕೊಡುವ ಕಾನೂನನ್ನು ಜಾರಿಗೆ ತರಬೇಕು. ಹೆಬ್ಬೂರ್ ಹೈಸ್ಕೂಲಿಗೆ ಸರಬರಾಜು ಮಾಡಿದ ನೂರಾರು ಡಬ್ಬಿಗಳ ಹಾಲಿನ ಪುಡಿಯನ್ನು ಆ ಸ್ಕೂಲಿನ ಒಬ್ಬ ಅಧ್ಯಕ್ಷರು ದುರುಪಯೋಗಪಡಿಸಿ ಅದರಿಂದ ಬಂದಂಥ ಹಣವನ್ನೆಲ್ಲಾ ಉಪಯೋಗಿಸಿದರೆ, ಈ ವಿಚಾರವನ್ನು ಹಿಂದೆಯೇ ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದಾರೆ. ಇದು ಏಕೆಂದರೆ ಇವತ್ತು ಆ ಹೈಸ್ಕೂಲು ಇಲ್ಲಿ ಅಲ್ಲಿರುವವರ ಅನುಕೂಲಕೋಸ್ಕರ ಅಥವಾ ಒಂದು ಸುಖ ಭೋಗಕೋಸ್ಕರ ಸ್ಥಾಪನೆಯಾಗಿದೆ ಎಂದು ಕಾಣುತ್ತದೆ. ಇದರಿಂದ ಪ್ರಜೆಗಳಿಗೇ ಆಗಲೀ ವಿದ್ಯಾರ್ಥಿಗಳಿಗೇ ಆಗಲೀ ಏನೊಂದೂ ಪ್ರಯೋಜನವೂ ಆಗುತ್ತಿಲ್ಲ. ಇಂತಹ ಹೈಸ್ಕೂಲುಗಳು ಈಗ ದೇಶದಲ್ಲಿ ಬಹಳವಾಗಿವೆ. ಅಂತಹವರ ಬಗ್ಗೆ ಒಂದು ಉಗ್ರಶಿಕ್ಷೆ ಕೊಡುವ ಕ್ರಮವನ್ನು ಸರ್ಕಾರ ಅತಿಜಾಗ್ರತೆಯಾಗಿ ವ್ಯವಸ್ಥೆ ಮಾಡುವುದು ಮೊಟ್ಟಮೊದಲನೆಯ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸ್ವಾಮಿ, ಇನ್ನೂರು ಮುನ್ನೂರು ಮಕ್ಕಳಿರುವ, ಕೆಲವು ಪ್ರೈಮರಿ ಸ್ಕೂಲುಗಳನ್ನು ಅಪ್‌ಗ್ರೇಡ್ ಮಾಡಿ ಎಂದರೆ, ಹಣವಿಲ್ಲವೆಂದು ಹೇಳುತ್ತಿದ್ದಾರೆ. ಮಾಡಬೇಕಾದರೆ ಕೆಲವು ಷರತ್ತುಗಳನ್ನು ಹಾಕುತ್ತಿದ್ದಾರೆ. ಶ್ರೀಮಾನ್ ಗೋಪಾಲಗೌಡರು ಹೇಳಿದಹಾಗೆ ಕೆಲವುಕಡೆ ಷರತ್ತುಗಳು ಬಹಳ ಕಠಿಣವಾಗಿ ಕಷ್ಟವಾಗುತ್ತಿದೆ. ನದಿಗಳು ಇರುವ ಕಡೆ ಹತ್ತಿರದಲ್ಲಿ ಸ್ಕೂಲುಗಳಿದ್ದರೂ ಮಕ್ಕಳು ಆ ಸ್ಕೂಲುಗಳಿಗೆ ಹೋಗಲು ಕಷ್ಟವಿರುತ್ತದೆ. ಪ್ರವಾಹ ಕಾಲದಲ್ಲಿ ಬಹಳ ತೊಂದರೆಯಾಗುತ್ತದೆ. ಇಂಥ ನಿದರ್ಶನ ನಮ್ಮ ಕ್ಷೇತ್ರದಲ್ಲಿಯೂ ಇದೆ. ಹೀಗಿರುವಾಗ ಅಪ್‌ಗ್ರೇಡ್ ಮಾಡಿ ಎಂದು ಕೇಳಿದರೆ, ಷರತ್ತುಗಳನ್ನು ಸಡಿಲ ಮಾಡಬೇಕು. ಹೀಗೆ ಮಾಡಿದ ಹೊರತು ಆಡಳಿತ ಉತ್ತಮವಾಗುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ಏನು ಮಾಡಬೇಕೆಂದು ಹೇಳಿ.

ಶ್ರೀ ಕೆ. ಲಕ್ಕಪ್ಪ.—ನೂರು ಹುಡುಗರು ಎಂಬತ್ತು ಹುಡುಗರು ಇರಬೇಕೆಂದು ಕಡ್ಡಾಯ ಮಾಡಿದ್ದಾರೆ, ಕಟ್ಟಡ ಕೊಡಬೇಕೆಂದು ಮಾಡಿದ್ದಾರೆ. ಸರ್ಕಾರಕ್ಕೆ ತೆರಿಗೆಯನ್ನು ಕೊಡುವವರು

ನಾವು, ನಮಗೆ ಸೌಕರ್ಯ ಕೊಡಿ ಎಂದು ಕೇಳುವ ಹಕ್ಕು ಪ್ರಜೆಗಳಿಗಿದೆ. ಅದನ್ನು ಕೊಡು ವುದಕ್ಕಾಗುವುದಿಲ್ಲವೆಂದು ಸರ್ಕಾರ ಹೇಳುವುದಕ್ಕಾಗುವುದಿಲ್ಲ. ತಮಗೆ ಇಷ್ಟ ಬಂದಹಾಗೆ ಷರತ್ತು ಗಳನ್ನು ಹಾಕುವುದಾದರೆ, ಪ್ರಜೆಗಳ ಹಿತದೃಷ್ಟಿಯಿಂದ ಸರ್ಕಾರ ಕೆಲಸ ಮಾಡುತ್ತಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದಷ್ಟುಮಟ್ಟಿಗೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಸಂಗ ಮಾಡುವ ದೃಷ್ಟಿಯಿಂದ ಅವರಿಗೆ ಸೌಕರ್ಯ ಕೊಡಲು ಷರತ್ತುಗಳನ್ನು ಸಡಿಲಗೊಳಿಸಬೇಕು. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹಣವನ್ನೊದಗಿಸಬೇಕು. ದೊಡ್ಡ ಪಟ್ಟಣಗಳಲ್ಲಿ ಹೆಚ್ಚು ಶಾಲಾ ಕಟ್ಟಡಗಳನ್ನು ಕೊಟ್ಟಿದ್ದಾರೆ, ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಸರ್ಕಾರದ ಯಂತ್ರ ಗ್ರಾಮಾಂತರ ಜನರಿಂದ ನಡೆಯುತ್ತದೆ. ಹೀಗಿರುವಾಗ ಗ್ರಾಮಾಂತರ ಪ್ರದೇಶದ ಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಹೆಚ್ಚು ಹಣ ಮತ್ತು ಸೌಕರ್ಯವನ್ನು ಕಲ್ಪಿಸುವುದು ಅತ್ಯಗತ್ಯ. ಇದನ್ನು ಇದುವರೆಗೆ ಸರ್ಕಾರ ಕಾರ್ಯರೂಪಕ್ಕೆ ತಂದಿಲ್ಲ, ಪ್ರಶ್ನೆಯಾಗಿಯೇ ಉಳಿದಿದೆ.

ತಾಲ್ಲೂಕು ಬೋರ್ಡುಗಳಿಗೆ ವಹಿಸಿರುವ ಜವಾಬ್ದಾರಿ ಬಹಳ ಕಠಿಣವಾಗಿದೆ; ಕೊಡತಕ್ಕ ಹಣ ಬಹಳ ಅಲ್ಪ. ಅದರಿಂದ ಸ್ಕೂಲನ್ನು ನಡೆಸಲು ಸಾಧ್ಯವಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಕಡೆ ಶಾಲೆಯ ಕಟ್ಟಡದ ಗೋಡೆ ಕಟ್ಟಿಸಿ ಅಲ್ಲಿಗೇ ನಿಲ್ಲಿಸಿದ್ದಾರೆ, ಕಿಟಕಿ ಬಾಗಿಲುಗಳಿಲ್ಲದ ಕಟ್ಟಡಗಳಿವೆ, ದೇವಸ್ಥಾನಗಳಲ್ಲಿ ಸ್ಕೂಲುಗಳನ್ನು ನಡೆಸತಕ್ಕ ಸಂದರ್ಭಗಳಿವೆ. ಅನೇಕ ಸ್ಕೂಲುಗಳನ್ನು ನೋಡಿ ದರೆ ಅಲ್ಲಿನ ಹುಡುಗರ ಭವಿಷ್ಯವನ್ನೇ ಹಾಳುಮಾಡುತ್ತಿರುವ ನಿದರ್ಶನಗಳಿವೆ. ಹದಿನೈದು ವರ್ಷ ಗಳಾದರೂ ಊರಿಗೊಂದು ಸ್ಕೂಲು ಕಟ್ಟಡವಿಲ್ಲ, ಒಳ್ಳೆಯ ಸುಸಂಸ್ಕೃತ ಉಪಾಧ್ಯಾಯರನ್ನು ನೇಮಕ ಮಾಡಿಲ್ಲ. ಹೀಗಿರುವಾಗ ಈ ಸರ್ಕಾರದವರು ನಿಜವಾಗಿಯೂ ಸಮಾಜವಾದಿ ಸಮಾಜವನ್ನು ಜಾರಿಗೆ ತರುತ್ತಾರೆಯೆ ಎಂಬ ಶಂಕೆ ಬಂದಿದೆ. ನಮ್ಮ ದೇಶದ ಹಳ್ಳಿಗಳಲ್ಲಿ ಓದತಕ್ಕ ಮಕ್ಕಳ ಸಂಖ್ಯೆಗನುಗುಣವಾಗಿ ಎಲ್ಲ ಸೌಲಭ್ಯವನ್ನೂ ಒದಗಿಸುವ ಏರ್ಪಾಡನ್ನು ಶೀಘ್ರವಾಗಿ ಮಾಡ ಬೇಕಾದುದು ಸರ್ಕಾರದ ಕರ್ತವ್ಯ.

ಇನ್ನು ಉಪಾಧ್ಯಾಯರ ಮತ್ತು ಶಿಕ್ಷಣ ಅಧಿಕಾರಿಗಳ ವರ್ಗಾವರ್ಗಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ವರ್ಗಗಳ ವಿಚಾರದಲ್ಲಿ ಮಂತ್ರಿಗಳು ನೇರವಾಗಿ ಕೈಹಾಕುವುದು ನಿಲ್ಲಬೇಕು. ಆಡಳಿತ ದೃಷ್ಟಿಯಿಂದಲೂ ಸಾರ್ವಜನಿಕ ಹಿತದೃಷ್ಟಿ ಯಿಂದಲೂ ರಾಜಕೀಯ ಕೈವಾಡದಿಂದ ಇದು ದೂರವಿರಬೇಕು. ಕಾನೂನು ನಿಬಂಧನೆಗಳನ್ನು ಉಲ್ಲಂಘನೆ ಮಾಡಿ, ತಾವೇ ಹಾಕಿರತಕ್ಕ ನೀತಿಗೆ ತಿಲಾಂಜಲಿಯನ್ನು ಕೊಟ್ಟು ದುರುದ್ದೇಶಗಳನ್ನಿಟ್ಟು ಕೊಂಡು ನೇರವಾಗಿ ಒಳ್ಳೆಯ ಅಧಿಕಾರಿಗಳನ್ನು ಸಿಕ್ಕಾಪಟ್ಟೆ ವರ್ಗವರ್ಗಿ ಮಾಡುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಸಚಿವರಿಗೇ ಗೊತ್ತಿದೆ, ತುಮಕೂರು ಜಿಲ್ಲೆಯಲ್ಲಿ ಒಂದು ಒಂದೂವರೆ ವರ್ಷದೊಳಗೆ ವಿದ್ಯಾಭ್ಯಾಸ ಅಧಿಕಾರಿಗಳನ್ನು ಸಾರ್ವಜನಿಕರಿಗೆ ತೊಂದರೆಯಾಗತಕ್ಕ ರೀತಿಯಲ್ಲಿ ವರ್ಗ ಮಾಡಿರುವ ನಿದರ್ಶನವಿದೆ. ಯಾವ ತಪ್ಪೂ ಇಲ್ಲದೆ ನೇರವಾಗಿ ಪ್ರವೇಶಿಸಿ ಅವರನ್ನು ಅಲ್ಲಿಂದ ವರ್ಗ ಮಾಡಿರುವುದು ಬಹಳ ತಪ್ಪು, ಅದನ್ನು ನಾನು ಉಗ್ರವಾಗಿ ಪ್ರತಿಭಟಿಸು ತ್ತೇನೆ. ಆರು ತಿಂಗಳಿಂದ ಏನೋ ರಾಜಕೀಯಕ್ಕೆ ಕಟ್ಟುಬಿದ್ದು, ಏನೋ ಉದ್ದೇಶವನ್ನಿಟ್ಟುಕೊಂಡು, ಎಲ್ಲಿ ಒಳ್ಳೆಯ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದರೋ, ಎಲ್ಲಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಸೌಕರ್ಯ ಮಾಡುತ್ತಿದ್ದರೋ ಅಂಥವರನ್ನು ದುರುದ್ದೇಶದಿಂದ ವರ್ಗ ಮಾಡಿರು ವುದು ಖಂಡನೀಯ ವಿಚಾರ. ಈ ವಿಚಾರದಲ್ಲಿ ಈ ಮಾನ್ಯ ಸಭೆಯ ಸುಮಾರು 60 ಮಂದಿ ಒಂದು ಮನವಿ ಕೊಟ್ಟಿದ್ದರೂ ಈ ಬಗ್ಗೆ ವಿಚಾರ ಮಾಡದೆ ಯಾವ ಉತ್ತರವನ್ನೂ ಕೊಡದೇಯಿರುವುದು ಈ ಸಭೆಗೆ ಗೌರವ ತರುವ ವಿಚಾರವಲ್ಲ. ಈ ಸಭೆಯನ್ನು ನಿಂದನೆ ಮಾಡಿದ ಹಾಗಾಗುತ್ತದೆ. ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಕಂಠಿ.—60 ಜನರಲ್ಲ, ಕೆಲವರು ವಿರೋಧಪಕ್ಷದ ಸದಸ್ಯರು ಕೊಟ್ಟಿದ್ದಾರೆ. ತಾವು ಇದರಲ್ಲಿ ಕೈಹಾಕಿ ಕೊಡಿಸಿದಿರಿ.

ಶ್ರೀ ಕೆ. ಲಕ್ಕಪ್ಪ.—ಈ ಸರ್ಕಾರ ರಾಜಕೀಯ ಮಾಡಿ ನೇರವಾಗಿ ಕೈಹಾಕುತ್ತಿರುವ ನಿದರ್ಶನ ವಿದೆ. ಇದರಿಂದ ಪ್ರಜಾಪ್ರಭುತ್ವ ತತ್ವದ ತಳಹದಿಗೇ ಪೆಟ್ಟು ಹಾಕಿದ್ದಾರೆಂದು ಹೇಳುತ್ತಿದ್ದೇನೆ. ಆರು ತಿಂಗಳಿಂದ ತುಮಕೂರು ಜಿಲ್ಲೆಯಲ್ಲಿ ಉಪಾಧ್ಯಾಯರ ಸ್ಥಿತಿಗತಿಗಳು ಕೆಟ್ಟಿವೆ, ಧಾರಾಕಾರ ವಾಗಿ ರಾಜಕೀಯ ಕೈವಾಡ ಅಲ್ಲಿ ನಡೆಯುತ್ತಿದೆ. ಯಾವ ಉಪಾಧ್ಯಾಯ ಚೆನ್ನಾಗಿ ಕೆಲಸ ಮಾಡಿದ್ದಾನೋ ಅವನನ್ನು ಬೇರೆ ಕಡೆ ಹಾಕಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಸರಿಯಾಗಿ ಕಾರ್ಯಗತ ಮಾಡಬೇಕು, ಸುಸಂಸ್ಕೃತರಾದವರನ್ನು ದೇಶದಲ್ಲಿ ತಯಾರು ಮಾಡಬೇಕೆಂದು ಹೊರಟಿರುವಾಗ ಈ ರೀತಿ ಸಣ್ಣಸಣ್ಣ ಅಧಿಕಾರಿಗಳ ವರ್ಗದಲ್ಲಿ ಸರ್ಕಾರ ಕೈಹಾಕಿದರೆ ಎಷ್ಟು ಮಟ್ಟಿಗೆ ಸರಿಹೋಗುತ್ತದೆಂಬುದನ್ನು ಯೋಚಿಸಬೇಕು.

ಶ್ರೀ ಎಸ್. ಆರ್. ಕಂಠಿ.—ವರ್ಗಗಳ ವಿಚಾರದಲ್ಲಿ ಸರ್ಕಾರಕ್ಕೆ ಅಧಿಕಾರವಿದೆ; ಆದರೆ ಅದರಲ್ಲಿ ಕೈಹಾಕಿದುದು ನೀವು.

ಶ್ರೀ ಕೆ. ಲಕ್ಕಪ್ಪ.—ನಾವು ಕೈಹಾಕಿಲ್ಲ, ನೀವೇ ಹಾಕಿದ್ದೀರಿ ಎಂಬುದು ತುಮಕೂರಿಗೆಲ್ಲ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕೂಡ ಸಭೆಯ ಮುಂದೆ ಬೇಕಾದರೆ ಇಡುತ್ತೇನೆ. ನೀವು ಹೀಗೆಲ್ಲ ಮಾಡಬಾರದು.

ಶ್ರೀ ಎಸ್. ಆರ್. ಕಂಠಿ.—ನೀವು ಹಾಗೆ ಮಾಡಿರುವವರು, ಆ ರೀತಿ ಮಾಡಬಾರದು.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ತುಮಕೂರು ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಆಫೀಸರ ಕಚೇರಿಯಲ್ಲಿ ಅಲ್ಲಿನ ಅಧಿಕಾರ ವರ್ಗವಲ್ಲಿ ನಡೆಯುತಕ್ಕ ರಾಜಕೀಯ ನಿಲ್ಲಬೇಕು, ಉಪಾಧ್ಯಾಯರು ಸರಿಯಾಗಿ ಕೆಲಸ ಮಾಡಬೇಕು. ರಾಜಕೀಯಕ್ಕೊಳಪಟ್ಟು ಪದೇಪದೇ ವರ್ಗವಾಗುತ್ತಿದ್ದರೆ ಸರಿಯಾಗಿ ಕೆಲಸ ಮಾಡಲು ಯಾರಿಗೆ ಮನಸ್ಸಿರುತ್ತದೆ?

ನಾನು ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ, ಶಾಲೆಗಳು ಸರಿಯಾಗಿಲ್ಲ, ಕಟ್ಟಡಗಳು ಸರಿಯಾಗಿಲ್ಲ, ರಾಜ್ಯದಲ್ಲಿ ಇದನ್ನು ನಡೆಸತಕ್ಕ ಮಂತ್ರಿಗಳು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿಲ್ಲ. ಪ್ರಾಥಮಿಕ ಶಾಲಾ ಉಪಾಧ್ಯಾಯರ ಸ್ಥಿತಿ ಉತ್ತಮವಾಗಲಿಲ್ಲ, ಇವೊತ್ತಿನ ದಿವಸ ಕಟ್ಟಡಗಳಿಲ್ಲ, ಸಂಬಳವಿಲ್ಲ, ಉಪಾಧ್ಯಾಯರುಗಳಂತೂ ಸಾಕಷ್ಟಿಲ್ಲ. ಈ ರೀತಿಯಾಗತಕ್ಕ ವಿದ್ಯಾಭ್ಯಾಸ ಎಲ್ಲಿಯವರೆಗೆ ಒಳ್ಳೆಯ ಪ್ರಜೆಗಳನ್ನು ತಯಾರು ಮಾಡಬಹುದು ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗಿದೆ.

ಸ್ವಾಮಿ, ಇಷ್ಟು ಮಾತನ್ನು ಹೇಳಿ ಶ್ರೀ ಮಾದಯ್ಯಗೌಡರು ತಂದಿರುವ ನಿರ್ಣಯವನ್ನು ಸಮರ್ಥಿಸುತ್ತ ಪ್ರಾಥಮಿಕ ಶಾಲೆಗಳ ಆಡಳಿತ ಮತ್ತು ಶಾಲಾ ಶಿಕ್ಷಕರ ಸ್ಥಿತಿಗತಿಗಳು ಉತ್ತಮವಾಗಬೇಕು; ಆಡಳಿತವನ್ನು ಸರಿಯಾದ ರೀತಿಯಲ್ಲಿ ನಡೆಸತಕ್ಕ ಅರ್ಹತೆಯುಳ್ಳ ಜನ ನೇಮಕವಾಗಬೇಕು ಎಂದು ಹೇಳುತ್ತೇನೆ. ಇದನ್ನು ಉತ್ತಮಪಡಿಸದೆ ಹೋದರೆ ನಮ್ಮ ದೇಶವು ಹಾಳಾಗಿ ಹೋಗುತ್ತದೆ, ಪ್ರಜಾಪ್ರಭುತ್ವವು ಕೂಡ ಉಳಿಯುವುದಿಲ್ಲ, ಇದನ್ನು ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಶ್ರೀ ಗೋಪಾಲಗೌಡರು ಹೇಳಿದಹಾಗೆ ಚಳುವಳಿಯನ್ನು ಕೂಡ ಹೂಡಬೇಕಾಗುತ್ತದೆಂದು ಹೇಳಿ, ಅಧ್ಯಕ್ಷರು ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11 A.M.

† Sri L. B. BIRJE (Khanapur).—[Spoke in Marathi.]

† ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ: ಈ ಗೊತ್ತುವಳಿಯ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಕೆಲವರು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಕೆಲವರು ಕೆಲವು ಟೀಕೆಗಳನ್ನೂ ಮಾಡಿದ್ದಾರೆ. ಸಾಮಾನ್ಯವಾಗಿ ಎಲ್ಲ ಟೀಕೆಗಳಿಗೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಕೆಲವು ಮಹತ್ವವಾದ ಟೀಕೆಗಳೇನಿವೆ ಅವುಗಳಿಗೆ ಮಾತ್ರ ನಾನೀಗ ಉತ್ತರವನ್ನು ಕೊಡಬೇಕೆಂದು ಮಾಡಿದ್ದೇನೆ. ಮುಖ್ಯವಾಗಿ ಮಾನ್ಯ ಸದಸ್ಯರುಗಳು ಕೇಳಿರತಕ್ಕ ಅಂಶಗಳೇನೆಂದರೆ:

No uniformity in primary education.

Compulsory education has not come into effect in the whole State.

No facilities to make it successful.

ಆಮೇಲೆ,

More schools to be opened and more teachers to be employed.

More lady teachers to be appointed.

More grant of Rs. 1,000 per room for school buildings.

More school and more buildings.

Conditions of teachers.

Uniform grant-in-aid code.

ಕಡೆಯಲ್ಲಿ ಟೆಕ್ಸ್ಟ್ ಬುಕ್ಕುಗಳು ಹಾಗೂ 'Mid day meal' ವಿಚಾರವನ್ನೂ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಸಾಧಾರಣವಾಗಿ 25 ಸಾವಿರಕ್ಕಿಂತ ಸ್ವಲ್ಪ ಹೆಚ್ಚಿಗೆ ಗ್ರಾಮಗಳಿರುತ್ತವೆ. ಎಲ್ಲಾ ಊರುಗಳೂ, ಪಟ್ಟಣಗಳೂ ಸೇರಿ 25 ಸಾವಿರ ಚಿಲ್ಲರಕ್ಕೆ ಮೇಲಿರುತ್ತವೆ. ನಮ್ಮ ಇಡೀ ರಾಜದ

ಲೆಕ್ಕ ಹಾಕಿದರೆ, ಈಗ 30 ಸಾವಿರ ಶಾಲೆಗಳಿರುತ್ತವೆ. ಸರ್ಕಾರದವರ ಇಚ್ಛೆ ಮುನ್ನೂರಿನಷ್ಟು ಜನಸಂಖ್ಯೆ ಎಲ್ಲಿರುತ್ತದೆ, ಯಾವ ಗ್ರಾಮದಲ್ಲಿರುತ್ತದೆ, ಅಥವಾ ಎಷ್ಟು ಗ್ರಾಮಗಳನ್ನು ಒಂದು ಗ್ರೂಪ್ ಮಾಡಿದರೆ ಅಲ್ಲಿ ಮುನ್ನೂರು ಜನಸಂಖ್ಯೆ ಆಗುತ್ತದೋ ಅಂಥ ಕಡೆಗಳಿಗೆಲ್ಲ ಒಂದೊಂದು ಪ್ರಾಥಮಿಕ ಶಾಲೆಯನ್ನು ಕೊಡಬೇಕು ಎಂಬುದಾಗಿದೆ. ಕೆಲವು ಕಾಲಾನಂತರ 250 ಜನಸಂಖ್ಯೆ ಇರತಕ್ಕ ಗ್ರಾಮಾಂತರ ಪ್ರದೇಶಗಳಿಗೆಲ್ಲ ಒಂದೊಂದು ಶಾಲೆಯನ್ನು ಕೊಡಬೇಕೆಂಬ ಅಭಿಲಾಷೆ ಕೂಡ ಇದೆ. ಈಗ ಎಲ್ಲೆಲ್ಲಿ 300 ಜನಸಂಖ್ಯೆಯಿರತಕ್ಕ ಗ್ರಾಮಗಳಿವೆಯೋ ಅಲ್ಲಿಗೆಲ್ಲ ಶಾಲೆಗಳನ್ನು ಕೊಡಲಾಗಿದೆ. ಆ ಶಾಲೆಗಳೆಲ್ಲ ಸರಿಯಾಗಿಯೇ ನಡೆಯುತ್ತಿವೆ ಎಂಬುದು ನನ್ನ ಭಾವನೆ. ಆದರೆ ಕೆಲವರು ನನ್ನಲ್ಲಿಗೆ ಬಂದು ಕೆಲವು ಶಾಲೆಗಳು ಸರಿಯಾಗಿ ನಡೆಯುತ್ತಿಲ್ಲ ಎನ್ನತಕ್ಕ ಮಾತನ್ನೂ ಹೇಳಿದ್ದಾರೆ. ಆದರೆ ನಾನು ಆ ಮಾತನ್ನು ಅಲ್ಲಗಳೆಯುವುದಿಲ್ಲ. 30 ಸಾವಿರ ಪ್ರಾಥಮಿಕ ಶಾಲೆಗಳೂ, 80 ಸಾವಿರ ಶಿಕ್ಷಕರೂ ಇದ್ದು ಇಂಥ ಒಂದು ದೊಡ್ಡ ರಾಜ್ಯದಲ್ಲಿ ಇಂಥ ಒಂದು ದೊಡ್ಡ ವ್ಯವಹಾರ ನಡೆಯುತ್ತಿರುವಾಗ ಕೆಲವು ಕಡೆ ಕೆಲವು ಅಕ್ರಮಗಳು ನಡೆಯುತ್ತಿರಬಹುದು. ಕೆಲವರು ಅಂಥಾದ್ದನ್ನು ತೋರಿಸಿದ್ದಾರೆ, ನಾನು ಅದನ್ನು ಕೂಡಲೆ ಸರಿಪಡಿಸಿರುತ್ತೇನೆ. ಅಂಥ ವಿಚಾರದಲ್ಲಿ ನಾನು ಮೇಲಿಂದ ಮೇಲೆ ಕಾರ್ಯಕ್ರಮ ಕೈಗೊಂಡಿರುತ್ತೇನೆ. ಕೆಲವರು ಕೆಲವು ಜಿಲ್ಲೆಗಳಲ್ಲಿ ನಡೆಯುತಕ್ಕ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದರು. ನಾನು ಅದನ್ನು ಸರಿಪಡಿಸಲು ಕೂಡಲೆ ಕಾರ್ಯಕ್ರಮವನ್ನು ಕೈಗೊಂಡಿರುತ್ತೇನೆ.

11-30 A.M.

ಈಗ ನಾವು ಆರರಿಂದ ಹನ್ನೊಂದು ವರ್ಷ ವಯಸ್ಸಿನ ಮಕ್ಕಳಿಗೆ ಒತ್ತಾಯ ಶಿಕ್ಷಣವನ್ನು ಕೊಡುವ ಬಗ್ಗೆ ಒಂದು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಇದು ಸಂಪೂರ್ಣವಾಗಿ ಆಗಬೇಕಾಗಿದೆ. ಆದರೆ ಇದು ಹಂತ ಹಂತವಾಗಿ ಆಗುತ್ತಿದೆ. ಇದು ಮೊದಲಿಗೆ ಆರಂಭವಾದದ್ದು 1961ರಲ್ಲಿ. ಒತ್ತಾಯ ಶಿಕ್ಷಣ ಆರಂಭವಾಗಿ ಈಗ ಮೂರನೆಯ ವರ್ಷದಲ್ಲಿದ್ದೇವೆ. ಅಲ್ಲಿಂದ ಇಲ್ಲಿಯವರೆಗೆ 6 ರಿಂದ 7, 7ರಿಂದ 8, 8 ರಿಂದ 9 ಎಂದರೆ 1, 2 ಮತ್ತು 3ನೇ ವರ್ಗಗಳಲ್ಲಿ ವಿದ್ಯಾರ್ಥಿಗಳು ಒತ್ತಾಯವಾಗಿ ಹೋಗುತ್ತಿದ್ದಾರೆ. ಈ ರೀತಿ ಒತ್ತಾಯವನ್ನು ಮಾಡಿರುವ ಪರಿಣಾಮವಾಗಿ ಹಾಜರಿಯ ದಾಖಲಾತಿ ಬಗ್ಗೆ ನೋಡುವುದಾದರೆ ನೂರಕ್ಕೆ ತೊಂಬತ್ತು ಭಾಗದಷ್ಟು ವಿದ್ಯಾರ್ಥಿಗಳು ಹಾಜರಿ ದಾಖಲಾತಿಯಲ್ಲಿದ್ದಾರೆನ್ನುವುದು ಕಂಡು ಬರುತ್ತಿದೆ. ಇದರಲ್ಲಿ ಇನ್ನೊಂದು ವಿಶೇಷದ ಸಂಗತಿ ಎಂದರೆ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು ಇವರುಗಳ ಸರಾಸರಿಯನ್ನು ತೆಗೆದುಕೊಂಡು ನೋಡಿದರೆ ಹೆಚ್ಚುಕಡಮೆ ಇಬ್ಬರ ಸಂಖ್ಯೆಯೂ ಒಂದೇ ಸಮನಾಗಿರುತ್ತದೆ. ಬೇರೆ ರಾಜ್ಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಯಾವ ರೀತಿ ಉತ್ತೇಜನ ಇದೆಯೋ ಅದಕ್ಕಿಂತ ಹೆಚ್ಚು ಉತ್ತೇಜನ ನಮ್ಮ ಮೈಸೂರು ರಾಜ್ಯದಲ್ಲಿಯೂ ಕೊಡಲಾಗುತ್ತಿದೆ. ಎಲ್ಲ ರಾಜ್ಯಕ್ಕಿಂತ ನಮ್ಮ ರಾಜ್ಯದಲ್ಲೇ ಮೊದಲಿಗೆ ಹೆಣ್ಣುಮಕ್ಕಳ ಶಿಕ್ಷಣವನ್ನು ರೂಪಿಸಿದುದು. ನಮ್ಮ ರಾಜ್ಯದಲ್ಲಿ ಶಿಕ್ಷಣದ ಶೇಕಡವಾರು 25.4 ಎಂದು ಆಲ್ ಇಂಡಿಯಾ ಆವರೇಜಿನಿಂದ ಗೊತ್ತಾಗುತ್ತದೆ, ಎಂದರೆ ಇತರ ಕಡೆಗಿಂತ ಜಾಸ್ತಿ ಇದೆ ಎನ್ನುವುದು ಕಂಡು ಬರುತ್ತದೆ. ಆದರೆ ಸ್ಟೇಟು ಆವರೇಜು ತೆಗೆದುಕೊಂಡರೆ ನಮ್ಮ ರಾಜ್ಯಕ್ಕೆ ಏಳನೇ ನಂಬರು ಬರುತ್ತದೆ. ಹಾಗೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣ ಶೆಟ್ಟರ ಕ್ಷೇತ್ರವಾದ ಸೌತ್ ಕ್ಯಾನರಾದಲ್ಲಿ ಲಿಟರೆಸಿ ಶೇಕಡಾ 33.3 ಇದೆ, ಧಾರವಾಡದಲ್ಲೂ ಕೂಡ ಅಷ್ಟೇ ಇದೆ, ಎರಡನೆಯದು ಕೊಡಗು, ಮೂರನೇಯದು ಕಾರವಾರ. ಹೈದರಾಬಾದು ಕರ್ನಾಟಕದ ಭಾಗಗಳಲ್ಲಿ ಹಿಂದುಳಿದಿವೆ. ಆದರೆ ಹಾಗೆ ಹಿಂದುಳಿದಿರುವುದನ್ನು ಒಂದೇ ದಿನದಲ್ಲಿ ಉತ್ತಮಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಮಾಡಲು ಪ್ರಯತ್ನ ಮಾಡಬೇಕು. ಹೈದರಾಬಾದಿನ ಬಿದರ್ ಭಾಗದಲ್ಲಿ 14.4 ಅಥವಾ 14.3 ಇದೆ ಆದರೆ ರಾಯಚೂರಿನಲ್ಲಿ ಸ್ವಲ್ಪ ಚೆನ್ನಾಗಿದೆ. ರಾಯಚೂರಿಗಿಂತ ಗುಲ್ಬರ್ಗಾದಲ್ಲಿ ಸ್ವಲ್ಪ ಕಡಿಮೆ ಇದೆ. ಬಿದರ್‌ನಲ್ಲಿ ಇದಕ್ಕಿಂತಲೂ ಕಡಮೆ ಇದೆ. ಇದನ್ನು ಸುಳ್ಳು ಎಂದು ಹೇಳುತ್ತಿಲ್ಲ. ಆದರೆ ನಮ್ಮಲ್ಲಿ ಕೆಲವರು ಮಾನ್ಯ ಸದಸ್ಯರು ಹೇಳಿದಂತೆ ಇಡೀ ರಾಜ್ಯದಲ್ಲಿ ಒತ್ತಾಯ ಶಿಕ್ಷಣ ಸರಿಯಾಗಿಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅದು ಸುಳ್ಳು. ಸಂಪೂರ್ಣವಾಗಿ ಪ್ರೈಮರಿ ಎಜುಕೇಷನ್ನು ಒತ್ತಾಯ ಎಲ್ಲಾ ಕಡೆಯೂ ಇದೆ. ಆದರೆ ಪ್ರೈಮರಿ ಶಿಕ್ಷಣದ ಪದ್ಧತಿಯ ಬಗೆಗೆ ಎಲ್ಲಾ ಕಡೆಯಲ್ಲಿಯೂ ಒಂದೇ ರೀತಿಯಾಗಿಲ್ಲ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಇಲ್ಲ ಎಂದು ಹೇಳುವುದಿಲ್ಲ. ಮುಂಬಯಿ ಕಡೆಯಿಂದ ಬಂದ ಭಾಗಗಳ ಪ್ರೈಮರಿ ಶಿಕ್ಷಣ ಪದ್ಧತಿ ಒಂದು ರೀತಿ ಇದೆ. ಮದರಾಸು ಕರ್ನಾಟಕದ ಭಾಗದಿಂದ ಬಂದಿರುವ ಭಾಗಗಳ ಶಿಕ್ಷಣ ಪದ್ಧತಿ ಒಂದು ರೀತಿಯಾಗಿದೆ. ಕೊಡಗು ಭಾಗದಿಂದ ಬಂದಿರುವ ಭಾಗಗಳಲ್ಲಿ ಒಂದು ರೀತಿಯಾದ ಶಿಕ್ಷಣ ಪದ್ಧತಿ ಇದೆ. ಹಳೇ ಮೈಸೂರಿನ ಪದ್ಧತಿಯೇ ಬೇರೆ ರೀತಿಯಲ್ಲಿದೆ.

(ಶ್ರೀ ಎಸ್. ಆರ್. ಕಂಠಿ)

ಇವೆಲ್ಲವನ್ನೂ ಏಕೀಕೃತವಾಗಿ ಮಾಡಬೇಕೆಂದು ಸರಕಾರ ಬಹಳ ಜೋರಿನಿಂದ ಒತ್ತಾಯದ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇದರ ಬಗೆಗೆ ಒಂದು ಏಕೀಕೃತವಾದ ರೂಪದ ಬಿಲ್ಲನ್ನು ತರಬೇಕಾಗಿದೆ. ಇದಕ್ಕಾಗಿ ಸ್ಥಾನಿಕ ಸಂಸ್ಥೆಗಳವರ ಕಡೆಯಿಂದ ಒಂದು ಕಮಿಟಿ ಮಾಡಲಾಗಿತ್ತು. ಅವರ ವರದಿ ಈಗ ಸರಕಾರದ ಕಡೆಗೆ ಬಂದಿದೆ. ಅವನ್ನೂ ಪರಿಶೀಲನೆ ಮಾಡಲಾಗುತ್ತಿದೆ. ಹಾಗೇನೇ ಈಗ ಗ್ರಾಂಟು ಇನ್ ಏಡ್ ಕಾನೂನು ಕೂಡ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿವೆ. ಇವನ್ನೆಲ್ಲಾ ಒಂದುಗೂಡಿಸಿ ಏಕರೂಪವಾದ ಕಾನೂನು ತರಬೇಕೆಂದು ಸರಕಾರ ನಿರ್ಣಯವನ್ನು ಮಾಡಿದೆ. ಇದರ ಬಗ್ಗೆ ಇರುವ ನಿಯಮಗಳನ್ನೂ ಬದಲಾವಣೆ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಇದರ ಬಗ್ಗೆ ಡಿ.ಪಿ.ಐ. ಆಫೀಸಿನಲ್ಲಿ ಕೆಲಸಗಳೂ ನಡೆಯುತ್ತಿವೆ. ಆ ಆಫೀಸಿನಲ್ಲಿರುವ ಜನರನ್ನೂ ಕರೆಸಿ ಇದನ್ನು ಇನ್ನೂ ಕೂಲಂಕಷವಾಗಿ ವಿಚಾರ ಮಾಡಿ ಪ್ರೈಮರಿ ವಿದ್ಯಾಭ್ಯಾಸದ ಪದ್ಧತಿಯನ್ನು ದೇಶದಲ್ಲಿ ಇನ್ನೂ ಉತ್ತಮಪಡಿಸಬೇಕೆಂಬ ಅಭಿಪ್ರಾಯ ಸರಕಾರಕ್ಕಿದೆ. ಆದುದರಿಂದ ನಮ್ಮ ಮೈಸೂರು ರಾಜ್ಯ ಇತರ ರಾಜ್ಯಗಳಿಗಿಂತ ಹಿಂದುಳಿದಿದೆ ಎನ್ನುವುದು ಸರಿಯಲ್ಲ. ಅಡ್ವಾನ್ಸ್‌ಡ್ ಸ್ಟೇಟುಗಳಲ್ಲಿ ನಮ್ಮ ರಾಜ್ಯ ಆರನೆಯದಾಗಿರುತ್ತದೆ. ಅಲ್ಲದೆ ನಮ್ಮ ಮೈಸೂರು ರಾಜ್ಯಕ್ಕೆ ಒಂದು ಒಳ್ಳೆಯ ಹೆಸರೂ ಇದೆ. ಆದಕಾರಣ ನಮ್ಮ ರಾಜ್ಯ ಹಿಂದುಳಿದಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಇದಕ್ಕಾಗಿ ಜರೂರಾಗಿ ಮತ್ತು ಸಾಕಷ್ಟು ಶಿಕ್ಷಣವನ್ನು ಉತ್ತಮ ಮಾಡಬೇಕು ಎನ್ನುವ ವಿಚಾರವನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಇದನ್ನು ನಾವು ಮಾಡೋಣ.

ಶ್ರೀ ಎಸ್. ಗೋಪಾಲ ಗೌಡ.—ಕುರುಡುಗಣ್ಣಿಗಿಂತ ಮೆಳ್ಳಗಣ್ಣೇ ಲೇಸು ಎನ್ನುವಂತೆ ನಮ್ಮ ವಿದ್ಯಾ ಮಂತ್ರಿಗಳು ಹೇಳುತ್ತಿದ್ದಾರೆ.

Mr CHAIRMAN.—The Hon'ble Minister has not yielded. The member may please resume his seat.

ಶ್ರೀ ಎಸ್. ಆರ್. ಕಂಠಿ.—ನಮ್ಮ ಮಾನ್ಯ ಸದಸ್ಯರು ತಮ್ಮ ಕಣ್ಣಿನಿಂದ ಸರಿಯಾಗಿ ನೋಡುತ್ತಿಲ್ಲ. ಏಕೆಂದರೆ ಅವರೂ ನಾವು ಸೇರಿಕೊಂಡು ಈ ಒತ್ತಾಯ ಶಿಕ್ಷಣವನ್ನು ಯಶಸ್ವಿಯಾಗುವಂತೆ ಮಾಡಬೇಕು. ಆ ದೃಷ್ಟಿಯಿಂದ ನಮ್ಮ ಮೈಸೂರು ರಾಜ್ಯ ಮೊದಲಿನಿಂದ ಯಾವ ರೀತಿ ತನ್ನ ಒಳ್ಳೆಯ ಹೆಸರನ್ನು ಉಳಿಸಿಕೊಂಡು ಬಂದಿದೆಯೋ ಅದನ್ನು ಉಳಿಸಿಕೊಂಡು ಬರಬೇಕು. ಸರಕಾರದವರೂ ಇದಕ್ಕಾಗಿ ಪ್ರಯತ್ನ ಮಾಡಬೇಕು, ಮಾನ್ಯ ಸದಸ್ಯರೂ ಪ್ರಯತ್ನ ಮಾಡಬೇಕು. ಇದೇ ಸಂದರ್ಭದಲ್ಲಿ ನಮ್ಮ ಶಿಕ್ಷಣದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು 'ಮಾರವಾಡಿ ಷರತ್ತು'ಗಳನ್ನು ಸರಕಾರ ಹಾಕುತ್ತಿದೆ ಎಂದು ಹೇಳಿದರು. ನಮ್ಮ ಒತ್ತಾಯ ಶಿಕ್ಷಣವನ್ನು ಪೂರ್ಣವಾಗಿ ಯಶಸ್ವಿಯಾಗುವಂತೆ ಮಾಡಬೇಕಾದರೆ ನಾವು ಯಾವ ರೀತಿಯಾದ ಕ್ರಮ ತೆಗೆದುಕೊಳ್ಳಬೇಕು, ಹಣವನ್ನು ಯಾವರೀತಿಯಾಗಿ ತೆಗೆದುಕೊಳ್ಳಬೇಕು ಎಂಬುದನ್ನು ವಿಚಾರಮಾಡಿ ಸಾರ್ವಜನಿಕರು ತಾವಾಗಿಯೇ ಮುಂದೆ ಬಂದು ಸಹಾಯ ಮಾಡಬೇಕೆಂದು ಕೇಳಿದ್ದೇವೆ, ಸ್ಥಾನಿಕ ಸಂಸ್ಥೆಗಳೂ ಮುಂದೆ ಬರಬೇಕು, ಮಾನ್ಯ ಸದಸ್ಯರೂ ಮುಂದೆ ಬರಬೇಕೆಂದು ನಾನು ಭಾವಿಸುತ್ತೇನೆ. ಇದನ್ನು ವಿಚಾರ ಮಾಡದೆ ಶ್ರೀಮಾನ್ ಗೋಪಾಲಗೌಡರು ಸುಮ್ಮನೆ 'ಮಾರವಾಡಿ ಷರತ್ತು' ಎಂದು ಹೇಳಿದರು. ಇದನ್ನು ವಿಚಾರ ಮಾಡಿದರೆ ಇದೆಷ್ಟು ಕಠಿಣದ ಕೆಲಸವೆನ್ನುವುದು ಕಾಣುತ್ತದೆ. ಅವರಿಗಾಗಿ ಒಂದೇ ಒಂದು ಉದಾಹರಣೆಯನ್ನು ಇಲ್ಲಿ ಕೊಡುತ್ತೇನೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಸಾಧಾರಣವಾಗಿ ಹತ್ತು ಲಕ್ಷ ವಿದ್ಯಾರ್ಥಿಗಳು ಶಾಲೆಗೆ ಸೇರುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆವು. ಆದರೆ ಅದು ಈಗ ಸುಳ್ಳು ಎನ್ನುವಂತೆ ಕಾಣಬರುತ್ತಿದೆ. ಸಾಧಾರಣವಾಗಿ ಮೂರನೆ ಪಂಚವಾರ್ಷಿಕ ಯೋಜನೆಯೊಳಗೆ ಸುಮಾರು ಹನ್ನೆರಡು ಲಕ್ಷ ವಿದ್ಯಾರ್ಥಿಗಳು ಒತ್ತಾಯ ಶಿಕ್ಷಣಕ್ಕೆ ಸೇರಬೇಕಾಗುತ್ತದೆ ಎನ್ನುವುದು ಇತ್ತೀಚೆಗೆ ಕಂಡುಬರುತ್ತಿದೆ. ಹೀಗೆ ಹತ್ತು ಲಕ್ಷ ವಿದ್ಯಾರ್ಥಿಗಳು ಸೇರುವಾಗ 40 ವಿದ್ಯಾರ್ಥಿಗಳಿಗೆ ಒಂದು ರೂಮು ಬೇಕಾಗುತ್ತದೆ ಎಂದು ಲೆಕ್ಕಾಚಾರ ಮಾಡಿದರೆ ಸುಮಾರು 25,000 ರೂಮುಗಳು ವಿದ್ಯಾರ್ಥಿಗಳಿಗಾಗಿ ಬೇಕಾಗುತ್ತವೆ. ಎಂದರೆ ಇದಕ್ಕಾಗಿ ಎಂಟು ಕೋಟಿ ರೂಪಾಯಿಗಳಷ್ಟನ್ನು ಖರ್ಚುಮಾಡಬೇಕಾಗಿ ಬರುತ್ತದೆ. ಈಗ ಸರಕಾರದವರು ಒಂದು ರೂಮಿಗಾಗಿ ಒಂದು ಸಾವಿರ ರೂಪಾಯಿಗಳಷ್ಟು ಸಹಾಯವಾಗಿ ಕೊಡಲು ಸುಮಾರು ಎರಡು ಕೋಟಿ ಐವತ್ತು ಲಕ್ಷ ರೂಪಾಯಿಗಳಷ್ಟು ಬೇಕಾಗುತ್ತವೆ. ಪಂಚವಾರ್ಷಿಕ ಯೋಜನೆಯಂತೆ ಒತ್ತಾಯ ಶಿಕ್ಷಣದಿಂದಾಗಿ ಸುಮಾರು 35 ಲಕ್ಷ ವಿದ್ಯಾರ್ಥಿಗಳು ಶಾಲೆಗೆ ಹೋಗಬೇಕಾಗಿ ಬರುತ್ತದೆ. ಇದಕ್ಕಾಗಿ ಸುಮಾರು 25 ರಿಂದ 30 ಕೋಟಿ ರೂಪಾಯಿಗಳಷ್ಟು ಹಣ ಸರಕಾರಕ್ಕೆ ಬೇಕಾಗುತ್ತದೆ. ಇಂತಹ ದೊಡ್ಡ ಜವಾಬುದಾರಿಯನ್ನು ಸರಕಾರ ಒಂದೇ ಹೇಗೆ ಹೊರಲು ಸಾಧ್ಯ ಎಂದು ಜನಗಳ ಮುಂದೆ ಸಹಾಯಕ್ಕಾಗಿ ಕೋರಿದಾಗ

ಜನರು ತಾವಾಗಿಯೇ ಮುಂದೆ ಬಂದು ಸಹಾಯ ಮಾಡುತ್ತಿದ್ದಾರೆ. ಹಿಂದೆ ಕ್ಲಾಸು ಎಜುಕೇಷನ್ ಎಂದಿತ್ತು. ಆದರೆ 'ಮಾಸ್ ಎಜುಕೇಷನ್' ಎಂದು ಈಗ ಮಾಡಬೇಕಾಗಿ ಬಂದಿದೆ. ಅದಕ್ಕಾಗಿ ಹಿಂದಿನಿಂದ ಬಂದಿರುವ ಪದ್ಧತಿಗಳನ್ನು ಈಗ ಬದಲಾವಣೆ ಮಾಡಬೇಕಾಗಿ ಬಂದಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟೋ ಜನರು ತಾವಾಗಿಯೇ ಮುಂದೆ ಬಂದು ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಅದರಲ್ಲಿಯೂ ಈಚೆಗೆ ಸರಕಾರದವರು ಹೇಳಿದ ಮೇಲೆ ಜನಗಳೇ ತಾವಾಗಿಯೇ ಮುಂದೆ ಬಂದು ಶಾಲಾ ಕಟ್ಟಡಗಳನ್ನು ಕಟ್ಟಲು ಸಹಾಯ ಮಾಡುತ್ತಿದ್ದಾರೆ. ಇದರ ಬಗೆಗೆ ಜನರ ಉತ್ಸಾಹ ಬಹಳ ಹೆಚ್ಚಾಗಿದೆ ಎನ್ನುವುದು ಕಂಡು ಬರುತ್ತಿದೆ.

ಇತ್ತೀಚೆಗೆ ಈ ಕೆಲಸ ಮಾಡಲು ಜನರು ಮುಂದೆ ಬರುತ್ತಿದ್ದಾರೆ. ಎಲ್ಲವನ್ನೂ ಸರಕಾರವೇ ಮಾಡಬೇಕು ಎಂದು ಹೇಳುವುದು ಸರಿಯಲ್ಲ. ಈಗ ಹಳೇ ಪಲ್ಲವಿಯನ್ನೇ ಹಾಡುವುದು ಸರಿಯಲ್ಲ. ಏಕೆಂದರೆ ಇದರಿಂದ ನಮ್ಮ ದೇಶದ ಪ್ರಗತಿಯಾಗುವುದಿಲ್ಲ.

ಇನ್ನು ಸ್ಕೂಲ್ ಕಟ್ಟಡದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಕಟ್ಟಡ ಕಟ್ಟಿಸುವ ವಿಚಾರದಲ್ಲಿ ಕೆಲವು ತಾಲ್ಲೂಕ ಬೋರ್ಡುಗಳು ಮುಂದೆ ಬಂದಿವೆ. ಜನರಿಂದ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಈ ಕೆಲಸ ಮಾಡುತ್ತಿವೆ ಎಂದು ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈಗಾಗಲೇ 200 ಪ್ರೈವೇಟ್ ಹೈಸ್ಕೂಲುಗಳನ್ನು ಜನರು ಪ್ರಾರಂಭಮಾಡಿದ್ದಾರೆ. ಇದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ಜನರಲ್ಲಿ ಇಂಥ ಶಕ್ತಿ ಇರುವುದು ಇಷ್ಟು ದಿನ ಗೊತ್ತಾಗದೆ ಇರುವುದು ದುಃಖವಾಗುತ್ತದೆ. ಯಾವ ತಯಾರಿಯಿಲ್ಲದೆ ಕಡ್ಡಾಯ ಶಿಕ್ಷಣ ಯೋಜನೆ ಪ್ರಾರಂಭ ಮಾಡಿದ್ದೇವೆಂದು ಶ್ರೀಮಾನ್ ಮಾದೇಗೌಡರು ಹೇಳಿರುವುದು ಸರಿಯಲ್ಲ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸರಿಯಾದ ರೀತಿಯಲ್ಲಿ ತಯಾರಿ ಮಾಡಿ ಕಡ್ಡಾಯ ಶಿಕ್ಷಣ ಯೋಜನೆಯನ್ನು ತೆಗೆದುಕೊಂಡಿದ್ದೇವೆಂದು ನಾನು ಹೇಳುತ್ತೇನೆ. ಅವರು ಹೇಳುವ ಹಾಗೆ ಎಲ್ಲಾ ತಯಾರಿ ಮಾಡುವುದು ಯಾರಿಗೂ ಸಾಧ್ಯವಿಲ್ಲ. ಕಷ್ಟ ಬಂದರೆ ಅದನ್ನು ಹೇಗೆ ನಿವಾರಣೆ ಮಾಡಬೇಕು ಎಂಬುದನ್ನು ವಿಚಾರಮಾಡಬೇಕಾಗುತ್ತದೆ. ಸಧ್ಯಕ್ಕೆ ಮುಂದೆ ಹೆಜ್ಜೆ ಇಡೋಣ. ಬರುವ ಕಷ್ಟ ನಿವಾರಣೆ ಮಾಡೋಣ. ಈ ರೀತಿಮಾಡಿದರೆ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಪ್ರಳಯದ ಕಾಲದವರೆಗೂ ಸಾಧ್ಯವಾಗುವುದಿಲ್ಲ.

Sri T. MADIAH GOWDA (Ramanagaram).—No order shall be made in respect of any area unless the State Government is satisfied that necessary facilities have been provided in that area for imparting primary education to all children.

ಶ್ರೀ ಎಸ್. ಆರ್. ಕಂಠಿ.—ಸಾಮಾನ್ಯವಾಗಿ ಸಾಧ್ಯವಿರುವ ಎಲ್ಲ ತಯಾರಿ ಮಾಡಲಾಗಿದೆ. ಸ್ಕೂಲ್ ಕಟ್ಟಡ ಇದೆ, ಸಾಲೆಗೆ ಹೋಗುವ ಮಕ್ಕಳು ಇದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳುವ ಹಾಗೆ ಮಾತ್ರ ಮಾಡಲು ಪ್ರಳಯ ಕಾಲದವರೆಗೆ ಸಾಧ್ಯವಾಗುವುದಿಲ್ಲ.

ಕಳೆದ ಹತ್ತು ವರ್ಷಗಳಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಬರುವ ಹತ್ತು ವರ್ಷಗಳಲ್ಲಿ 70 ಲಕ್ಷ, 80 ಲಕ್ಷ ಸಂಖ್ಯೆಗೆ ಹೋಗಬಹುದು. ಹೀಗೆ ಆಗುವುದು ಸಂತೋಷದ ಸಂಗತಿ. ಈ ರೀತಿ ಭರದಿಂದ ಪ್ರಗತಿ ಕಂಡು ಬರುತ್ತಿರುವಾಗ್ಗೆ ಜನರು ಮುಂದೆ ಬಂದು ಸಹಾಯ ಮಾಡಬೇಕು. ಸ್ಕೂಲ್ ಬಿಲ್ಡಿಂಗ್ ಕಟ್ಟಿಸಬೇಕು. ಸರಕಾರ ಸಹ ಸ್ವಲ್ಪ ಹಣದ ಸಹಾಯ ಮಾಡುವುದು. ಸರಕಾರವೇ ಎಲ್ಲವನ್ನೂ ಮಾಡಬೇಕೆಂದು ಕೆಲವರು ಏನು ಹೇಳುತ್ತಾರೆಯೋ ಅಂಥವರಿಗೆ ನೀವೇ ಮಾಡಿ ಎಂದು ನಾನು ಹೇಳುತ್ತೇನೆ.

ಪಟ್ಟಣಗಳಲ್ಲಿ ಹೆಚ್ಚಾಗಿ ಸ್ಕೂಲುಗಳನ್ನು ಮಾಡುತ್ತೇವೆಂದು ಕೆಲವರು ಹೇಳಿದರು. ಆದರೆ ಆ ರೀತಿ ಮಾಡಿರುವುದಿಲ್ಲ. ಬೆಂಗಳೂರು ನಗರದಲ್ಲಿ ಪ್ರಾಥಮಿಕ ಶಾಲೆಗಳು ಹೇಗೆ ಇವೆ ಎನ್ನುವುದನ್ನು ನೀವು ಹೋಗಿ ನೋಡಬೇಕು. ಪಟ್ಟಣದಲ್ಲಿ ಶಾಲೆಗಳು ಬಾಡಿಗೆ ಮನೆಯಲ್ಲಿ ಇವೆ. ಲಕ್ಷಾಂತರ ರೂಪಾಯಿ ಬಾಡಿಗೆ ಕೊಡುತ್ತಿದ್ದೇವೆ. ಆದುದರಿಂದ ಗ್ರಾಮಾಂತರದಲ್ಲಿ ಕಟ್ಟಡಕ್ಕಾಗಿ ಖರ್ಚುಮಾಡದೆ ದೊಡ್ಡ ದೊಡ್ಡ ಪಟ್ಟಣದಲ್ಲಿ ಖರ್ಚು ಮಾಡುತ್ತೇವೆಂದು ಹೇಳುವುದು ಸರಿಯಾದುದಲ್ಲ. ಶ್ರೀಮಾನ್ ಗೋಪಾಲಗೌಡರು ಭಾಷಣ ಮಾಡಲು ವಿಜಾಪುರಕ್ಕೆ ಹೋಗುತ್ತಾರೆ. ಅತ್ತ ಕಡೆ ಹೋದಾಗ್ಗೆ ದಯವಿಟ್ಟು ಅವರು ವಿಜಾಪುರ, ಧಾರವಾಡ, ಬೆಳಗಾಂವಿ, ಕಾರವಾರ ಜಿಲ್ಲೆಗಳಲ್ಲಿ ಮೂಲೆ ಮೂಲೆಗಳಲ್ಲಿ ಶಾಲೆಗಳು ಹೇಗೆ ನಡೆದಿವೆ ಎಂಬುದನ್ನು ನೋಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಬಹಳ ಕಡೆ ಶಾಲಾ ಕಟ್ಟಡಗಳಿವೆ. ಅವುಗಳನ್ನು ಯಾರು ಕಟ್ಟಿಸಿದರು ? ಸರ್ಕಾರ ಕಟ್ಟಿಸಿದ್ದಾರೆಯೇ ? ಇಲ್ಲ, ಜನರು ಮುಂದೆ ಬಂದು ಕಾಂಟ್ರಿಬ್ಯೂಷನ್ ಕೊಟ್ಟು ಕಟ್ಟಿಸಿದ್ದಾರೆ ? ಶಿರಹಟ್ಟಿ ತಾಲ್ಲೂಕಿನಲ್ಲಿ ತುಂಬಾ ಶಾಲೆಗಳು ಇವೆ. ಜನರು ಮುಂದೆ

(ಶ್ರೀ ಎಸ್. ಆರ್. ಕಂಠಿ)

ಬಂದು ಕೆಲಸ ಮಾಡಿದರೆ ಎಲ್ಲ ಕೆಲಸಗಳು ನಿಖರವಾಗಿ ಆಗುತ್ತವೆ. ಸರಕಾರದಿಂದ ಎಲ್ಲವೂ ಆಗುವುದಿಲ್ಲ. ಹಿಟ್ಟಿನಲ್ಲಿ ಸ್ವಲ್ಪ ಉಪ್ಪು ಬೆರಸಬಹುದು. ಆದರೆ ಹಾಲಿನಲ್ಲಿ ಮಾತ್ರ ಉಪ್ಪು ಬೆರಸಬೇಡಿ. ಹಾಲು ಕೆಟ್ಟು ಹೋಗುತ್ತದೆ. ಆದುದರಿಂದ ಇದಕ್ಕೆ ಮಾನ್ಯ ಸದಸ್ಯರೂ ಸಹ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡಿನ ಬಗ್ಗೆ ಕೆಲವು ತೊಂದರೆಗಳು ಇವೆ ಎಂದು ಕೆಲವರು ಹೇಳಿದರು. ಮಲೆನಾಡಿನಲ್ಲಿ ಮಳೆಯ ತೊಂದರೆ ಇದ್ದರೆ, ಮೈದಾನ ಪ್ರದೇಶವಾದ ವಿಜಾಪುರದಲ್ಲಿ ಬಿಸಿಲು ಬಹಳ ಇರುವುದರಿಂದ ತೊಂದರೆ ಇದೆ. ನೈಸರ್ಗಿಕವಾಗಿ ಇರುವುದನ್ನು ನಾವು ಎದುರಿಸಲೇ ಬೇಕಾಗುತ್ತದೆ. ಸೌತ್ ಕೆನರಾದಲ್ಲಿಯೂ ತುಂಬಾ ಮಳೆ ಬೀಳುತ್ತದೆ. ಆದರೆ ಅಲ್ಲಿ ಇಷ್ಟು ತೊಂದರೆ ಇದ್ದರೂ ಸಹ ಅಲ್ಲಿ ಶೇಕಡ 33.3 ಲಿಟರಸಿ ಹೇಗೆ ಆಯಿತು ? ಶಿವಮೊಗ್ಗಾ ಜಿಲ್ಲೆಯಲ್ಲಿ ಶೇಕಡ 28 ರಷ್ಟು ಲಿಟರಸಿ ಇದೆ. ಬೆಳಗಾಂನಲ್ಲಿ ಶೆಕಡ 27 ಹೇಗೆ ಆಯಿತು ? ಇದನ್ನು ವಿಹಂಗಮ ದೃಷ್ಟಿಯಿಂದ ನೋಡಿದರೆ ಒಂದು ಮಾತು ಗೊತ್ತಾಗುತ್ತದೆ. ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ಲಿಟರಸಿ ಜಾಸ್ತಿ ಇದೆ. ಮೈದಾನ ಪ್ರದೇಶವಾದ ವಿಜಾಪುರ ಜಿಲ್ಲೆಯಲ್ಲಿ 24.4 ಇದೆ. ರಾಜ್ಯದ ಸರಾಸರಿಗಿಂತಲೂ ಕಡಮೆ ಇದೆ. ಕೋಲಾರ ತುಮಕೂರುಗಳಲ್ಲಿ ಶೇಕಡ 22 ರಷ್ಟು ಇದೆ. ಅಂದರೆ ಮೈದಾನ ಪ್ರದೇಶದಲ್ಲಿ ಲಿಟರಸಿ ಕಡಮೆ ಇದೆ ಎಂದು ಇದರಿಂದ ಗೊತ್ತಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಮೈದಾನ ಪ್ರದೇಶದ ಜನರಿಗಿಂತಲೂ ಮಲೆನಾಡ ಪ್ರದೇಶದ ಜನರು ಇಂಡಸ್ಟ್ರಿಯಸ್ ಆಗಿದ್ದಾರೆಂದು ಕಂಡು ಬರುತ್ತದೆ. ಮಲೆನಾಡ ಪ್ರದೇಶದಲ್ಲಿ ತೊಂದರೆ ಇದ್ದರೂ ಸಹ ಜನರು ಉತ್ಸಾಹದಿಂದ ಮುಂದೆ ಬಂದು ಕಷ್ಟಪಟ್ಟು ದುಡಿದು ಕಲಿಯುತ್ತಾರೆ. ಇದು ಸಂತೋಷದ ವಿಚಾರ. ಯಾವ ಅನುಕೂಲತೆ ಇರದಿದ್ದರೂ ಜನರು ಕಲಿಯುತ್ತಾರೆ. ಮಲೆನಾಡಿನ ಜನ ಮುಂದುವರಿದಿದ್ದಾರೆ. ಶ್ರೀಮಾನ್ ಗೋಪಾಲಗೌಡರಿಗೆ ಶಿವಮೊಗ್ಗಾ ಜಿಲ್ಲೆಯನ್ನು ಸ್ವರ್ಗ ಮಾಡಲು ಸಾಧ್ಯವಿದೆ. ಅದಕ್ಕೆ ಅವರು ಮನಸ್ಸು ಮಾಡಬೇಕು. ಅವರ ಭಾಷಣದ ಸ್ವರ ಬೇರೆ ಮಾಡಿದರೆ ಅದು ಸಾಧ್ಯವಿದೆ. ಈ ಸಮಸ್ಯೆ ಅಷ್ಟು ಸುಲಭವಲ್ಲ. ಜನರು ದೇವಾಲಯ ಕಟ್ಟಿಸಲು ಯಾವ ರೀತಿ ಮುಂದೆ ಬರುತ್ತಾರೆಯೋ ಅದೇ ರೀತಿಯಾಗಿ ಮಾಡರ್ನ್ ದೇವಾಲಯ ಅಥವಾ ಆಧುನಿಕ ದೇವಾಲಯವಾಗಿರುವ ಶಾಲಾ ಕಟ್ಟಡವನ್ನು ಕಟ್ಟಿಸುವುದಕ್ಕೆ ಜನರು ಮುಂದೆ ಬರಬೇಕು, ಕೆಲಸ ಕೈಕೊಳ್ಳಬೇಕು. ಅಂದರೆ ನಮ್ಮ ದೇಶದ ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಬೆಟರ್‌ಮೆಂಟ್ ಕಮಿಟಿಯ ಸಂಬಂಧವಾಗಿ ಒಂದೆರಡು ಮಾತುಗಳನ್ನು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಈ ಬೆಟರ್‌ಮೆಂಟ್ ಕಮಿಟಿಗಳು ನಮ್ಮ ರಾಜ್ಯದಲ್ಲಿ ಸರ್ವೇ ಸಾಧಾರಣವಾಗಿ ಚೆನ್ನಾಗಿ ನಡೆದಿವೆ. 1961-62ನೆಯ ಸಾಲಿನ ವಿಚಾರವನ್ನು ಹೇಳಬೇಕಾದರೆ 44 ಲಕ್ಷ ರೂಪಾಯಿಗಳವರೆಗೆ ಬೆಟರ್‌ಮೆಂಟ್ ಕಮಿಟಿಗಳು ದುಡ್ಡನ್ನೂ ಆಹಾರ ಧಾನ್ಯಗಳನ್ನೂ ಮತ್ತು ಉಳಿದ ಪದಾರ್ಥಗಳನ್ನೂ ಸಂಗ್ರಹಿಸಿವೆ. ಅವರು 1962-63ನೆಯ ಸಾಲಿನಲ್ಲಿ 66 ಲಕ್ಷ ರೂಪಾಯಿಗಳವರೆಗೂ ಸಂಗ್ರಹಿಸಿದ್ದಾರೆ. ತುರ್ತು ಪರಿಸ್ಥಿತಿ ಇಲ್ಲದೆ ಇದ್ದರೆ 1962-63ನೇ ಸಾಲಿನಲ್ಲಿ ಒಂದು ಕೋಟಿ ರೂಪಾಯಿಗಳವರೆಗೂ ಹೋಗುತ್ತಿತ್ತು. ಬೆಟರ್‌ಮೆಂಟ್ ಕಮಿಟಿಗಳು ಇನ್ನೂ ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿತ್ತು. ಶಿಕ್ಷಕರು ಸರಿಯಾಗಿ ಶಾಲೆಗೆ ಹೋಗುತ್ತಾರೆಯೇ ಇಲ್ಲವೇ, ಮಕ್ಕಳು ಸರಿಯಾಗಿ ಶಾಲೆಗೆ ಹೋಗುತ್ತಾರೆಯೇ ಅಥವಾ ಇಲ್ಲವೆ ಎಂಬುದನ್ನು ನೋಡಿಕೊಳ್ಳುವುದಕ್ಕೆ ಬೆಟರ್‌ಮೆಂಟ್ ಕಮಿಟಿಗಳನ್ನು ನೇಮಿಸಿದ್ದೇವೆ. ಬೆಟರ್‌ಮೆಂಟ್ ಕಮಿಟಿಗಳು ಚೆನ್ನಾಗಿ ಕೆಲಸ ಮಾಡಿದರೆ ಬಹಳ ರೀತಿಯಿಂದ ನಮಗೆ ಸಹಾಯವಾಗುತ್ತದೆ.

ಆಮೇಲೆ ಮಧ್ಯಾಹ್ನದ ಉಪಾಹಾರದ ವಿಷಯವನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ಆ ವಿಷಯದಲ್ಲಿ ಸ್ವಲ್ಪ ಅನಾಹುತ ನಡೆಯುತ್ತಿದೆ. ಈ ಮಧ್ಯಾಹ್ನದ ಉಪಾಹಾರಕ್ಕೆ ಸರ್ಕಾರದವರು ಇಷ್ಟು ಹಣ ಎಂದು ಕೊಡುತ್ತಾರೆ, ಅದರ ಜೊತೆಗೆ ಜನಗಳು ಇಷ್ಟು ಹಣ ಎಂದು ಕೊಡುತ್ತಾರೆ. ಈ ಮಧ್ಯಾಹ್ನದ ಉಪಾಹಾರಕ್ಕೆ ಕೇಂದ್ರ ಸರ್ಕಾರದವರು ಹಣವನ್ನು ಕೊಡುತ್ತಾರೆ. ಆ ಹಣವನ್ನು ಸರ್ಕಾರದವರು ಅದಕ್ಕಾಗಿ ಖರ್ಚುಮಾಡುತ್ತಾರೆ. ಅದರ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಲೋಕಲ್ ಜನಗಳೂ ಸಹ ಸಹಾಯ ಮಾಡಿದರೆ ಅದನ್ನು ಚೆನ್ನಾಗಿ ದೊಡ್ಡ ಪ್ರಮಾಣದಲ್ಲಿ ನಡೆಸಬಹುದು. ಅದಕ್ಕೋಸ್ಕರ ಎರಡು ಕೋಟಿ ರೂಪಾಯಿಗಳ ಆಹಾರ ಧಾನ್ಯಗಳನ್ನು ಒದಗಿಸಿ ಅದನ್ನು ಗ್ರಾಮಾಂತರ ಪ್ರದೇಶದಲ್ಲಿ ಹಂಚಬೇಕೆಂದು ಮಾಡಿದ್ದೇವೆ. ಅದರಲ್ಲಿ ಅನಾಹುತ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಮಾನ್ಯ ಸದಸ್ಯರು ಸರ್ಕಾರಕ್ಕೆ ಬರೀ ಸಲಹೆಗಳನ್ನು ಮಾಡಿದರೆ ಆಗುವುದಿಲ್ಲ. ಆದರೂ ಸಹ ಸ್ವಲ್ಪ ಆ ಕಡೆಗೆ ಗಮನ ಕೊಡಬೇಕು. ತಾಲ್ಲೂಕು ಬೋರ್ಡಿನ ಸದಸ್ಯರು ಮತ್ತು ಆ

(ಇಲಾಖಾ ಗ್ರಂಥಾಲಯ)
ಪ್ರತಿಸ್ವೀ ಕ್ರಮಾಂಕ Accession No. 13...
ದಿನಾಂಕ Date ...4795...

ಊರಿನ ಜನಗಳು ಆ ಕಡೆ ಗಮನ ಕೊಟ್ಟರೆ ಇಂಥಾ ಅನಾಹುತಗಳು ಕಡಮೆಯಾಗುತ್ತವೆ. ಕೆಲವು ಕಡೆ ಅನಾಹುತಗಳು ಆಧಾಗ ಅವರನ್ನು ಹಿಡಿದು ಶಿಕ್ಷೆ ಮಾಡಿದರೆ ಅದರಿಂದ ಅನುಕೂಲವಾಗುತ್ತದೆ. ಅದಕ್ಕೋಸ್ಕರ ಅಂಥಾ ಅನಾಹುತಗಳಾಗಿ ಅದರಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವಂಥಾ ಒಂದು ಕಾನೂನನ್ನು ಸಹ ಈಗ ಮಾಡಿದ್ದೇವೆ.

ಇನ್ನು ಶ್ರೀಮಾನ್ ಬಿರ್ಜೆಯವರು ಕೆಲವು ಮಾತುಗಳನ್ನು ಹೇಳಿದರು. ಅವರು ಮೊದಲು ಶಾಲೆಯಲ್ಲಿ ಶಿಕ್ಷಕರಾಗಿದ್ದು ಈಗ ನಿವೃತ್ತಿಯಾಗಿದ್ದಾರೆ, ಅವರಿಗೆ ಶಾಲೆಯ ವಿಷಯಗಳೆಲ್ಲಾ ಗೊತ್ತು. ಅವರು ಮಕ್ಕಳಿಗೆ ಸರಿಯಾಗಿ ಶಿಕ್ಷಣವನ್ನು ಸರಿಯಾಗಿ ನೀಡಿ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಈಗ ಉಪಾಧ್ಯಾಯರಿಗೆ ಹೆಚ್ಚಿನ ಸಲವತ್ತುಗಳು ಸಿಕ್ಕಲಿ, ಅವರಿಗೆ ಕಲ್ಯಾಣವಾಗಲಿ ಎಂದು ಸಹಾಯ ಮಾಡುತ್ತಿದ್ದೇವೆ. 1961ನೆಯ ಇಸವಿಯಲ್ಲಿ ಪೇ ರಿವೈಜ್ ಮಾಡಿದೆವು. ಮೊನ್ನೆ ತಾನೆ ತುಟ್ಟಿ ಭತ್ಯವನ್ನು ಜಾಸ್ತಿ ಮಾಡಿದ್ದೇವೆ ಟ್ರಿಪಲ್ ಬೆನಿಫಿಟ್ ಸ್ಕೀಮು ಮೊನ್ನೆತಾನೆ ಆಗಿದೆ. ಕೇಂದ್ರ ಸರ್ಕಾರದವರು ಟೀಚರ್ಸ್ ವೆಲ್‌ಫೇರ್‌ಫಂಡ್ ಎಂದು ಮಾಡುತ್ತಿದ್ದಾರೆ. ನಾವೂ ಕೂಡ ಸರ್ಕಾರದ ವತಿಯಿಂದ ಟೀಚರ್ಸ್ ಬೆನಿಫಿಟ್‌ಫಂಡ್ ಎಂದು ಮಾಡುತ್ತಿದ್ದೇವೆ. ನಾನು ನಿನ್ನೆ ದಿವಸ ತಾನೆ ಅದನ್ನು ನೋಡಿದೆ. ಆ ಬಗ್ಗೆ ಈಗಾಗಲೇ 60 ಸಾವಿರ ರೂಪಾಯಿಗಳವರೆಗೂ ಕೂಡಿದೆ. ಇನ್ನೂ ಕೂಡುತ್ತಾ ಇದೆ. ಅದಕ್ಕೆ ಒಂದು ನಿಯಮಾವಳಿಯನ್ನು ಮಾಡಿದ್ದೇವೆ, ಈಗ ದುಡ್ಡು ಕೂಡುತ್ತಾ ಇದೆ. ಇನ್ನೊಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿ ಕೂಡುವುದಕ್ಕೆ ಸಾಧ್ಯವಿದೆ. ಅದರಿಂದ ಯಾರು ಕಷ್ಟದಲ್ಲಿ ಇದ್ದಾರೋ ಅವರಿಗೆ ಅದನ್ನು ಕೊಡುವುದಕ್ಕೆ, ಸಹಾಯ ಮಾಡುವುದಕ್ಕೆ ಅವಕಾಶವಾಗುತ್ತದೆ.

ಆಮೇಲೆ ಸ್ಕೂಲ್ ಬೋರ್ಡಿನ ವಿಷಯವನ್ನು ಹೇಳಿದರು. ಸ್ಕೂಲ್ ಬೋರ್ಡು ರೀಆರ್ಗನೈಜ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಧಾರವಾಡದಲ್ಲಿ ಆಗಿದೆ. ಕಾರವಾರದಲ್ಲಿ ಆಗುತ್ತಾ ಇದೆ. ಬಿಜಾಪುರದಲ್ಲಿ ಆಗುತ್ತಾ ಇದೆ. ಮಾನ್ಯ ಸದಸ್ಯರಾದ ಬಿರ್ಜೆಯವರು ಬೆಳಗಾವಿನ ಮೇಲೆ ಕೋಪ ಇಟ್ಟುಕೊಂಡು ಸ್ಕೂಲ್ ಬೋರ್ಡು ರೀ ಆರ್ಗನೈಜ್ ಆಗಿಲ್ಲ ಎಂದು ಹೇಳಿದರೆ ಹೇಗೆ? ಧಾರವಾಡದ ಸ್ಕೂಲ್‌ಬೋರ್ಡ್ ನಿಮಗಿಂತ ಮುಂಚೆ ರೀ ಆರ್ಗನೈಜ್ ಆಗಿದೆ. ಅದರಲ್ಲಿ ಎಂ. ಇ. ಎಸ್. ಜನಗಳನ್ನು ಸೇರಿಸಿಕೊಂಡಿಲ್ಲ ಎಂದು ಹೇಳಿದರು. ಅದಕ್ಕೆ ಜನಗಳನ್ನು ಸೇರಿಸಿಕೊಳ್ಳುವಾಗ ಎಂ. ಇ. ಎಸ್. ಮತ್ತು ನಾನ್ ಎಂ. ಇ. ಎಸ್. ಎಂದು ನಾವು ಅದರಲ್ಲಿ ಜನಗಳನ್ನು ಸೇರಿಸಿಕೊಂಡಿಲ್ಲ. ಅದರಲ್ಲಿ ನಾನ್ ಕಾಂಗ್ರೆಸ್ ಜನಗಳೂ ಇದ್ದಾರೆ. ಮಾನ್ಯ ಸದಸ್ಯರು ತಿಳಿದುಕೊಂಡಿರುವುದು ತಪ್ಪು.

ಆಮೇಲೆ ಅವರು ಹೆಣ್ಣು ಮಕ್ಕಳು ಹೆಚ್ಚಿನ ಶಿಕ್ಷಕರಾಗುವುದಕ್ಕೆ ಅನುಕೂಲಮಾಡಿ ಕೊಡಬೇಕೆಂದು ಸೂಚನೆ ಮಾಡಿದ್ದಾರೆ. ಆ ವಿಷಯದಲ್ಲಿ ಸರ್ಕಾರದವರು ಏನು ಮಾಡಿದ್ದಾರೆಂದರೆ ಹೆಣ್ಣು ಮಕ್ಕಳಿಗೆ ಎಸ್. ಎಸ್. ಎಲ್. ಸಿ. ಪಾಸು ಆಗದಿದ್ದರೂ ಚಿಂತೆಯಿಲ್ಲ, ಎಲ್. ಎಸ್. ಮತ್ತು ಪಿ. ಎಸ್. ಸಿ. ಆಗಿದ್ದರೂ ಕೂಡ ಅವರಿಗೆ ನೌಕರಿ ಕೊಡಬಹುದೆಂದು ಅನುಕೂಲಮಾಡಿ ಕೊಟ್ಟಿದ್ದೇವೆ. ಅವರಿಗೆ ಎರಡು ವರ್ಷ ಟ್ರೈನಿಂಗ್ ಕೊಡುತ್ತಿದ್ದೇವೆ. ನಾನ್ ಎಸ್. ಎಸ್ ಎಲ್. ಸಿ. ಯವರಿಗೆ ಎರಡು ವರ್ಷ ಟ್ರೈನಿಂಗ್ ಇಲ್ಲದೆ ಹೋದರೆ ಅವರನ್ನು ಯಾವರೀತಿ ನೇಮಕ ಮಾಡಿಕೊಳ್ಳಬೇಕೆಂಬ ವಿಷಯವನ್ನು ವಿಚಾರ ಮಾಡಿದ್ದೇವೆ. ಮೊದಲನೆಯದು ಎಸ್. ಎಸ್. ಎಲ್. ಸಿ. ಟ್ರೈನ್ಡ್, ಎರಡನೆಯದು ಎಸ್. ಎಸ್. ಎಲ್. ಸಿ. ನಾನ್ ಟ್ರೇನ್ಡ್, Third, Now S. S. L. C. Trained before a certain day ಎಂದು ಮಾಡಿದ್ದೇವೆ. ಎರಡು ವರ್ಷ ಅವರು ಕಲಿತುಕೊಂಡು ನಮಗೆ ನೌಕರಿ ಕೊಡಿ ಎಂದು ಬರಬಾರದು ಎಂದು before that date ತೆಗೆದು ಕೊಳ್ಳುತ್ತೇವೆಂದು ಹೇಳಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—1954ನೇ ಇಸವಿಯಲ್ಲಿ ಟೆಂಪರರಿಯಾಗಿ ಕೆಲಸಕ್ಕೆ ಸೇರಿ ಈಗ ಅವರಿಗೆ ಟ್ರೇನಿಂಗು ಆಗಿದ್ದರೆ ಅವರಿಗೆ ಯಾವ ನಿಯಮವನ್ನು ಅನ್ವಯಿಸುತ್ತೀರಿ?

ಶ್ರೀ ಎಸ್. ಆರ್. ಕಂಠಿ.—ಅವರನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಅವರನ್ನು ರೀಎಂಪ್ಲಾಯ್ ಮಾಡಿಕೊಳ್ಳಬೇಕು. ಅಂಥವರು ಯಾರು ಯಾರು ಇದ್ದಾರೋ ಅವರ ಹೆಸರನ್ನು ಕೊಟ್ಟರೆ ಅದನ್ನು ನಾನು ನೋಡುತ್ತೇನೆ. ಬೆಳಗಾವಿನಲ್ಲಿ ಎರಡು ಸಂಘಗಳಿವೆ. ಸಮಿತಿ ಮತ್ತು ಕುಂದರನಾಡು ಎಂದು ಎರಡು ಸಂಸ್ಥೆಗಳು. ಅವರು ಬಹಳ ಶಾಲೆಗಳನ್ನು ನಡೆಸುತ್ತಿದ್ದಾರೆ. ಈ ದಿವಸ ಅವುಗಳನ್ನು ನಾವು ತೆಗೆದುಕೊಳ್ಳುವುದಿಲ್ಲ. ಕೆಲವು ಪ್ರೈವೇಟ್ ಪ್ರೈಮರಿ ಶಾಲೆಗಳನ್ನು ಉತ್ತರ ಕರ್ನಾಟಕದಲ್ಲಿ ನಡೆಸುತ್ತಿದ್ದಾರೆ. ಅವುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೆ ಒಂದು ಕ್ರಮವನ್ನು ಮಾಡಿದ್ದೇವೆ. ಆ ಪ್ರಕಾರ ಅವುಗಳನ್ನು ತೆಗೆದುಕೊಳ್ಳುತ್ತೇವೆ. ಕುಂದರನಾಡು ಸಂಘದವರು ನಡೆಸುತ್ತಿರುವ ಶಾಲೆಗಳು ಧಾರವಾಡ, ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳಲ್ಲಿದ್ದರೆ ಅವುಗಳನ್ನು ಕ್ರಮವಾಗಿ ಸರ್ಕಾರಕ್ಕೆ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಆದುರಿಂದ ಶ್ರೀಮಾನ್ ಬಿರ್ಜೆಯವರು ಹೇಳಿದಂತಹ ಮಾತಿನಲ್ಲಿ ಅಷ್ಟು ಸತ್ಯವಿಲ್ಲ. ನಾವು ಯಾವ ತರಹ ಅನ್ಯಾಯವನ್ನೂ ಮಾಡಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಕೆಲವು ಪ್ರಾಥಮಿಕ ಶಾಲೆಗಳಲ್ಲಿ 4-5 ವರ್ಷ ಕೆಲಸ ಮಾಡಿದ ಉಪಾಧ್ಯಾಯರನ್ನು ನಿವೃತ್ತಿಮಾಡಿ ಕಳುಹಿಸಿದ್ದಾರೆ ಅದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಅವರು ಲೋಕಲ್ ಕ್ಯಾಂಡಿಡೇಟ್ಸ್ ಇರಬೇಕು. ಯಾವಾಗ ರೆಗ್ಯುಲರ್ ಕ್ಯಾಂಡಿಡೇಟ್ಸ್ ಬರುತ್ತಾರೆಯೋ ಆಗ ಲೋಕಲ್ ಕ್ಯಾಂಡಿಡೇಟ್ಸನ್ನು ನಿವೃತ್ತಿ ಮಾಡಬೇಕಾಗುತ್ತದೆ. ಅವರು ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಯ ಮುಂದೆ ಹೋಗಿ ಆರಿಸಿ ಬರಬೇಕು.

ಆಮೇಲೆ ಶ್ರೀಮಾನ್ ಬಿಜ್ಜೆಯವರು ಟೆಕ್ಸ್ಟ್ ಬುಕ್ಕುಗಳ ವಿಚಾರವನ್ನು ಹೇಳಿದರು. ಅದಕ್ಕಾಗಿ ಸರ್ಕಾರದವರು ಟೆಕ್ಸ್ಟ್ ಬುಕ್ಕುಗಳನ್ನು ರಾಷ್ಟ್ರೀಕರಣ ಮಾಡುತ್ತಿದ್ದಾರೆ. ಶ್ರೀಮಾನ್ ಗೋಪಾಲ ಗೌಡರು ಹೇಳಿದರು, ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿರುವುದು ಲೋಪದೋಷದಿಂದ ಕೂಡಿವೆ, ಪಠ್ಯ ಪುಸ್ತಕಗಳಲ್ಲಿ ರಾಜಕೀಯ ವಿಚಾರಗಳನ್ನು ಹಾಕಿದ್ದಾರೆಂದು, ಅದು ಸರಿಯಿಲ್ಲ. ರಾಜಕೀಯ ವಿಚಾರಗಳನ್ನು ಅದರಲ್ಲಿ ಹಾಕುವುದಕ್ಕೆ ಬರುವುದಿಲ್ಲ. ಅದರಲ್ಲಿ ಲೋಪದೋಷ ಬರುವುದಿಲ್ಲ. ಪಠ್ಯ ಪುಸ್ತಕಗಳನ್ನು ಬರೆಯುವುದಕ್ಕೆ ಸಿಲಬಸ್ ಇದೆ. ಆ ಸಿಲಬಸ್ ಪ್ರಕಾರ ಸಬ್‌ಜೆಕ್ಟ್‌ಗಳು ಯಾವು ಯಾವುದು ಬರಬೇಕೋ ಅವುಗಳನ್ನು ಬರೆಸಿ ಹಾಕುತ್ತೇವೆ, ಪಠ್ಯ ಪುಸ್ತಕಗಳಲ್ಲಿ ರಾಜಕೀಯ ಇದ್ದರೆ ಲೋಪದೋಷಗಳಿದ್ದರೆ ಅದನ್ನು ಶ್ರೀಮಾನ್ ಗೋಪಾಲಗೌಡರು ನನ್ನ ಗಮನಕ್ಕೆ ತಂದರೆ ಅದನ್ನು ನಾನು ಸರಿಪಡಿಸುತ್ತೇನೆ.

ಈಗ ಅನೇಕ ಜನರು ಪಠ್ಯ ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಇಪ್ಪತ್ತು ಕಡೆ ಇಪ್ಪತ್ತು ಬೇರೆ ಬೇರೆ ಸೋಷಿಯಲ್ ಸೈನ್ಸ್ ಪುಸ್ತಕಗಳು ಈಗ ನಿಗದಿಮಾಡಲ್ಪಟ್ಟಿವೆ. ಅದರಿಂದ ಬಹಳ ವೇಸ್ಟ್ ಆಗುತ್ತದೆ ಮತ್ತು ಸ್ವಲ್ಪ ತೊಂದರೆಯಿದೆ. ಆದುದರಿಂದ ಅದನ್ನು ತಪ್ಪಿಸಲು ಒಂದು ಮಾಸ್ಟರ್ ಪ್ಲಾನ್ ಪ್ರಕಾರ ಪಠ್ಯ ಪುಸ್ತಕಗಳನ್ನು ನ್ಯಾಷನಲೈಸ್ ಮಾಡುತ್ತಿದ್ದೇವೆ. ಈ ವರ್ಷ 107 ಪುಸ್ತಕಗಳನ್ನು ನ್ಯಾಷನಲೈಸ್ ಮಾಡಿದ್ದೇವೆ; ಹಿಂದೆ 55 ಪುಸ್ತಕಗಳನ್ನು ನ್ಯಾಷನಲೈಸ್ ಮಾಡಿದ್ದೆವು. ಇದೆಲ್ಲಾ ಸೇರಿ 162 ಪುಸ್ತಕಗಳಾಗುತ್ತವೆ. ಮುಂದಿನ ವರ್ಷ ಎಲ್ಲಾ ನ್ಯಾಷನಲೈಸ್ ಆಗುತ್ತದೆ. ಶ್ರೀಮಾನ್ ಗೋಪಾಲಗೌಡರಿಗಿರುವ ಭಯ ಸರಿಯಿಲ್ಲ. ನಮ್ಮ ಮೇಲೆ ಅವರು ವಿಶ್ವಾಸವಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

12-00 NOON.

ಇನ್ನು ಅಟೆಂಡೆನ್ಸ್ ಆಫೀಸರ ವಿಚಾರವಾಗಿ ಒಂದು ಮಾತು. ಅವರನ್ನು ನಾವು ನೇಮಕ ಮಾಡಿಲ್ಲ ಎಂದು ಆಕ್ಷೇಪಿಸಿದ್ದಾರೆ. ನಾವು ಡೆಪ್ಯುಟಿ ಅಟೆಂಡೆನ್ಸ್ ಆಫೀಸರನ್ನು ನೇಮಿಸಿದ್ದೇವೆ. ಅವರಿಂದ ಸರಿಯಾಗಿ ಕೆಲಸ ನಡೆಯುತ್ತಿದೆಯೆ ಎಂಬುದನ್ನು ಕಾದು ನೋಡಬೇಕಾಗಿದೆ. ಅವರಿಗೆ ಬಹಳ ಕೆಲಸವಿದೆ, ಅವರು ಈ ಕೆಲಸವನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ಬಿಜ್ಜೆಯವರು ಹೇಳಿದರು ಈ ವರ್ಷ ಪ್ರಯೋಗಿಕವಾಗಿ ಅವ್ಯವಸ್ಥೆ ಮಾಡಿದ್ದಾರೆ. ಅದರ ಅನುಕೂಲ ಅನನುಕೂಲಗಳನ್ನು ಕೆಲವು ಕಾಲ ನೋಡಲಿ ನಂತರ ಬೇಕಾದರೆ ಬೇರೆ ವ್ಯವಸ್ಥೆ ಮಾಡೋಣ. ಕೆಲವು ಶಬ್ದಗಳ ಉಪಯೋಗದಿಂದ ಅನಾಹುತವಾಗುತ್ತಿದೆ ಎಂದು ಕೆಲವು ಟೀಕೆಗಳು ಬಂದುವು. ನಾವು ಸಾಕಷ್ಟು ಕ್ರಮ ಕೈಕೊಳ್ಳುತ್ತಿದ್ದೇವೆ. ಸುಮ್ಮನೆ ಆರೋಪಿಸಲು ಟೀಕೆ ಮಾಡಬಾರದು.

ಹುಡುಗರ ವಿಚಾರವಾಗಿ ಹೇಳಬೇಕಾದರೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒತ್ತಾಯ ಶಿಕ್ಷಣವನ್ನು ಜಾರಿಗೆ ತಂದ ಮೇಲೆ ಎರಡು ವರ್ಷಗಳಲ್ಲಿ 5 ಲಕ್ಷ ವಿದ್ಯಾರ್ಥಿಗಳು ಶಾಲೆಗೆ ಸೇರಿದರು. ಅದು 1961-62 ಕ್ಕೆ ಸಂಬಂಧಪಟ್ಟಿದೆ. ಈ ವರ್ಷ ಸುಮಾರು 2 ಲಕ್ಷ ಹೊಸದಾಗಿ ಶಾಲೆಗೆ ಹೋಗುತ್ತಿದ್ದಾರೆ. ಶಿಕ್ಷಕರು ಈ ವರ್ಷ 5 ಸಾವಿರ ಮಂದಿ ಬೇಕಾಗಿತ್ತು. ಆದರೆ ಬಡ್ಜೆಟ್ ಪ್ರಕಾರ ಅವಕಾಶವಿರುವುದು ಒಂದು ಸಾವಿರ ಮಂದಿಗೆ ಮಾತ್ರ. ಅದಕ್ಕಾಗಿ ಕೇಂದ್ರ ಸರ್ಕಾರದ ನೆರವನ್ನು ಕೇಳಿದ್ದೇವೆ. ಅದು ಬಂದಮೇಲೆ 1: 40 ಪ್ರಮಾಣದಲ್ಲಿ ನೇಮಕವಾಗಬೇಕಾಗಿದೆ. ನಮ್ಮ ರಾಜ್ಯದಲ್ಲಿ ಸರಾಸರಿ 1: 40 ಈಗ ಇದೆ; ಒಬ್ಬ ಶಿಕ್ಷಕ 40 ವಿದ್ಯಾರ್ಥಿಗಳನ್ನು ನೋಡಿಕೊಳ್ಳುತ್ತಿದ್ದಾನೆ. ಈ ವರ್ಷ ಬಂದಿರುವ 2 ಲಕ್ಷ ವಿದ್ಯಾರ್ಥಿಗಳಿಗಾಗಿ ಹೆಚ್ಚಿನ ಶಿಕ್ಷಕರನ್ನು ತೆಗೆದುಕೊಳ್ಳಬೇಕಾಗಿದೆ. ಕೇಂದ್ರ ಸರ್ಕಾರದಿಂದ ಜವಾಬು ಬಂದಮೇಲೆ ಮುಂದಿನ ಕ್ರಮ ಕೈಕೊಳ್ಳಬೇಕಾಗುತ್ತದೆ. ಕೆಲವು ಕಡೆ ಒಬ್ಬರೇ ಉಪಾಧ್ಯಾಯರು 3-4 ತರಗತಿಗಳನ್ನು ನೋಡಿಕೊಳ್ಳಬೇಕಾಗಿದೆ ಎಂದು ಆರೋಪಿಸಿದರು. ಹಾಗೆ ಕೆಲವು ಕಡೆ ಇರಬಹುದು. ಸರ್ಕಾರದವರು ಈಗ ಪ್ರಯೋಗಾರ್ಥವಾಗಿ ಹಾಗೆ ಮಾಡಿದ್ದಾರೆ. ಮೊನ್ನೆ ಒಂದು ಸೆಮಿನಾರ್ ಆಯಿತು. ಸಿಂಗಲ್ ಟೀಚರ್ ಸ್ಕೂಲುಗಳು 2 ಸಾವಿರಕ್ಕೆ ಕಡಮೆಯಿಲ್ಲದಂತ ಇವೆ. ಕಾರವಾರ, ದಕ್ಷಿಣ ಕನ್ನಡ, ಮಲೆನಾಡು ಪ್ರದೇಶ ಮುಂತಾದ ಕಡೆಗಳಲ್ಲಿ ಅವುಗಳ ಅವಶ್ಯಕತೆ ಇದೆ. ಅಲ್ಲಿ ಯಾವರೀತಿ ನಡೆಯುತ್ತದೆ ಎಂಬುದನ್ನು ಕಾದು ನೋಡುತ್ತಿದ್ದೇವೆ.

ಶ್ರೀಮಾನ್ ಮಾದೇಗೌಡರು ಆಡಳಿತ ವಿಚಾರ ಪ್ರಸ್ತಾಪಿಸಿ ಸ್ವಲ್ಪ ಸರಿಯಾಗಿಲ್ಲವೆಂದು ಹೇಳಿದರು. ಅದೇಕೆ ಹಾಗೆ ಹೇಳಿದರೋ ತಿಳಿಯದು. ತಮಗೆ ಗೊತ್ತಿರುವ ಹಾಗೆ ಮೈಸೂರು ರಾಜ್ಯದಲ್ಲಿ 5 ಡಿವಿಜನ್ನುಗಳಿವೆ. ಜಿಲ್ಲೆಗಳಲ್ಲಿ ಡಿ. ಇ. ಒ. ಇರುತ್ತಾರೆ, ಡಿವಿಜನನಲ್ಲಿ ಡಿ. ಡಿ. ಪಿ.ಐ. ಇರುತ್ತಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ರೇಂಜನ್ನು ಮಾಡಿದ್ದೇವೆ. ಅಲ್ಲಿ ಒಬ್ಬ ಇನ್‌ಸ್ಪೆಕ್ಟರ ಕೈಕೆಳಗೆ ಒಬ್ಬ ಡೆಪ್ಯುಟಿ ಇನ್‌ಸ್ಪೆಕ್ಟರಿದ್ದಾರೆ. 150 ಉಪಾಧ್ಯಾಯರಿಗೊಬ್ಬ ಡೆಪ್ಯುಟಿ ಇನ್‌ಸ್ಪೆಕ್ಟರು ಇರುತ್ತಾರೆ. 1-10-1962 ರಿಂದ ಸಿಬ್ಬಂದಿ ಹೆಚ್ಚಿಸಿದ್ದೇವೆ. ಹೋದ ವರ್ಷ ತೆಗೆದುಕೊಂಡ ಹೊಸ ನಿರ್ಣಯದ ಪ್ರಕಾರ ಸೂಪರ್‌ವಿಷನ್ ಕೆಲಸ ಚೆನ್ನಾಗಿ ನಡೆಯುತ್ತಿದೆ. ಈಗ ಶಿಕ್ಷಣ ವಿಸ್ತಾರವಾಗುತ್ತಿರುವುದರಿಂದ ಈಗಿರುವ ಸಿಬ್ಬಂದಿ ಕಡಮೆಯೆಂದು ಕಾಣುತ್ತದೆ. ಶಿಕ್ಷಣದಷ್ಟು ವೇಗವಾಗಿ ನಡೆಯುವುದು ಯಾವುದೂ ಇರುವಂತೆ ಕಾಣುವುದಿಲ್ಲ. ವರ್ಷಕ್ಕೆ 2-3 ಲಕ್ಷದ ಪ್ರಕಾರ ಹುಡುಗರು ಶಾಲೆಗೆ ಹೆಚ್ಚಾಗಿ ಸೇರಿದರೆ ಸ್ವಲ್ಪ ಕಷ್ಟವಾಗುತ್ತದೆ. ಈಗ ಎಲ್ಲ ವಿಷಯಗಳಿಗೂ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಕೆಲವು ವಿಚಾರಗಳನ್ನು ಮಾತ್ರ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲ ಗೌಡ.—ಹಳೇ ಮೈಸೂರಿನಲ್ಲಿ ಪ್ರೈಮರಿ 8ನೆ ಶಾಲೆಯ ಮಕ್ಕಳ ವಿಚಾರ ಹೈಕೋರ್ಟಿಗೆ ಹೋಗಿದೆ. ಆ ತರಗತಿಯಲಿದ್ದ ಎಲ್ಲ ಮಕ್ಕಳನ್ನು ಪ್ರೌಢಶಾಲೆಗೆ ಸೇರಿಸಿಕೊಳ್ಳಬೇಕೆಂದು ಕೇಳುತ್ತಿದ್ದೇನೆ. ದಯಮಾಡಿ ಹಾಗೆ ಮಾಡಿ. ಅದರಿಂದ ಆಕಾಶವೇನೂ ಕಳಚಿ ಬೀಳುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ನನಗೆ ಎಲ್ಲಾ ಒಂದೇ ; ಹಳೇ ಮೈಸೂರು, ಹೊಸ ಮೈಸೂರು ಎಲ್ಲಾ ಒಂದೇ. ಆ ಬಗ್ಗೆ ನಿನ್ನೆ ಗವರ್ನಮೆಂಟ್ ಆರ್ಡರಾಗಿದೆ. ಅದರ ಪ್ರಕಾರ 8ನೆಯ ತರಗತಿಯಲ್ಲಿ ಫೈಲ್ ಆದವರಿಗೆ ಪರೀಕ್ಷೆ ನಡೆಸಿ ಹೈಸ್ಕೂಲಿಗೆ ಹಾಕಬೇಕೆಂದು ಸೂಚಿಸಲಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಶಾಲೆಗಳಲ್ಲಿ ಈಗ ಮಕ್ಕಳು ಕಸಗುಡಿಸುವುದು, ಸಾರಿಸುವುದು ಮುಂತಾದ ಕೆಲಸವನ್ನೆಲ್ಲಾ ಮಾಡಬೇಕಾಗಿದೆ. ಅದು ಬಹಳ ಚಿಂತಾಜನಕವಾಗಿದೆ. ಅದನ್ನು ತಪ್ಪಿಸಲು ಪ್ರಯತ್ನ ಇದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಎಲ್ಲಾ ಕಡೆಯೂ ಮಾಡಬೇಕೆಂಬ ವಿಚಾರವಿದೆ. ಶಾಲೆಯನ್ನು ಅವರು ಚೆನ್ನಾಗಿಡಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—300-400 ಜನರು ಎಸ್. ಎಲ್. ಸಿ. ಪಾಸು ಮಾಡದೆ ಟಿ. ಸಿ. ಟ್ರೈನಿಂಗ್ ಮಾಡಿಕೊಂಡು ಕೆಲಸಕಾರ್ಯವಿಲ್ಲದೆ ತೊಂದರೆ ಪಡುತ್ತಿದ್ದಾರೆ. ಅವರ ಬಗ್ಗೆ ಸಹಾನುಭೂತಿ ತೋರಿಸಿ ಅವರನ್ನು ಉಪಾಧ್ಯಾಯರಾಗಿ ನೇಮಿಸಿಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆಗಲೇ ಹೇಳಿದೆ. ಒಂದು ತಾರೀಖು ನಿಗದಿಮಾಡಿ ಅದರ ಹಿಂದೆ ಟಿ. ಸಿ. ಟ್ರೈನಿಂಗ್ ಆಗಿರುವವರನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದ್ದೇವೆ. ಆದರೆ ಒಂದು ವಿಚಾರ. ಈಗ ಪ್ರಾಥಮಿಕ ಶಾಲೆಗಳಲ್ಲಿ 5,6,7 ನೆಯ ತರಗತಿಗಳಲ್ಲಿ ಇಂಗ್ಲೀಷ್ ಕಲಿಸುತ್ತಿದ್ದೇವೆ. ಆದುದರಿಂದ ಟಿ. ಸಿ. ಟ್ರೈನಿಂಗ್ ಆದವರಿಗೆ ಇಂಗ್ಲೀಷ್ ಬಾರದಿದ್ದರೆ ಮುಂದೆ ತೆಗೆದುಕೊಳ್ಳಬಾರದೆಂದು ಹೇಳಿದ್ದೇವೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಎಲ್. ಎಸ್. ಆದ ಒಬ್ಬ ಹೆಣ್ಣು ಮಗಳನ್ನೂ ಟ್ರೇನಿಂಗಿಗೆ ತೆಗೆದುಕೊಂಡಿಲ್ಲ, ಇನ್ನು ಮುಂದಾದರು ಅವರ ಟ್ರೇನಿಂಗಿಗೆ ವ್ಯವಸ್ಥೆ ಮಾಡುತ್ತೀರ ?

ಶ್ರೀ ಎಸ್. ಆರ್. ಕಂಠಿ.—ಎಲ್. ಎಸ್. ಆದವರನ್ನು ಟ್ರೇನಿಂಗಿಗೆ ಸೆಲೆಕ್ಟ್ ಮಾಡಿದೆ.

† ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸ್ವಾಮಿ, ಈ ಸಭೆಯ ಮುಂದೆ ಇಟ್ಟಿರತಕ್ಕಂಥ ನಿರ್ಣಯ ಎರಡು ದಿವಸ ವಿಫಲವಾಗಿ ಚರ್ಚೆಯಾಗಿ, ಅನೇಕ ವಿಚಾರಗಳನ್ನು ನಾವು ಸರ್ಕಾರದ ಗಮನಕ್ಕೆ ತರುವ ಒಂದು ಅವಕಾಶ ಇತ್ತಿರಲ್ಲಾ ಎಂದು ನಾನಾದರೂ ತುಂಬ ಸಂತೋಷ ಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರು, ಗೋಪಾಲಗೌಡರು ಮುಂತಾದವರೆಲ್ಲಾ ಅನೇಕ ವಿಚಾರಗಳನ್ನು ಎತ್ತಿ ಪ್ರಾಥಮಿಕ ಶಿಕ್ಷಣ ದೇಶದಲ್ಲಿ ಯಾವರೀತಿ ನಡೆಯುತ್ತಾಇದೆ ಯಾವರೀತಿ ನಡೆಯ ಬೇಕಾಗಿತ್ತು ಅನ್ನತಕ್ಕಂಥಾದ್ದನ್ನು ಚರ್ಚೆ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಕೂಡ ಎಷ್ಟರಮಟ್ಟಿಗೆ ಸಮಾಧಾನ ಹೇಳಬೇಕು, ಅಷ್ಟನ್ನು ಹೇಳಿದ್ದಾರೆ.

ನಾನು ಈ ನಿರ್ಣಯವನ್ನು ಸಭೆಯಮುಂದಿಟ್ಟಾಗ ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿದೆ. ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಎಲ್ಲಾ ವಿಚಾರಗಳಿಗೂ ಜವಾಬು ಕೊಡಲು ಸಾಧ್ಯವಿಲ್ಲವೆಂದು. ಆದರೆ ಈ ನಿರ್ಣಯವು ಚರ್ಚೆಯಾಗುತ್ತಿದ್ದಾಗ ಮಾನ್ಯ ಮಂತ್ರಿಗಳು ಬಹುಕಾಲ ಸಭೆಯಲ್ಲಿರಲ್ಲಿಲ್ಲ. ಇಲಾಖೆಯಲ್ಲಿ ಸಂಬಂಧಪಟ್ಟವರು ಇದ್ದುಕೊಂಡು ನಾವು ಹೇಳತಕ್ಕಂಥಾದ್ದನ್ನು ನೋಟ್ ಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಕೆಲವು ಮುಖ್ಯ ವಿಚಾರಗಳ ಪ್ರಸ್ತಾಪ ಏನು ಬಂದಿತ್ತು ಆ ವಿಚಾರವಾಗಿ ನಾನು ಈಗ ಸೂಚಿಸಲು ಅಪೇಕ್ಷಿಸುತ್ತೇನೆ.

(ಶ್ರೀ ಟಿ. ಮಾದಯ್ಯಗೌಡ)

ಮೊಟ್ಟಮೊದಲನೆಯದಾಗಿ ಈ ಪ್ರಾಥಮಿಕ ಕಡ್ಡಾಯ ಶಿಕ್ಷಣದ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಹೇಳಿದರೋ ಅದು ನನಗಾದರೂ ಅಷ್ಟು ಸಮರ್ಪಕವಾಗಿ ಹಿಡಿಸಲಿಲ್ಲ. ವಿಷಯ ಏನೆಂದರೆ ಕಡ್ಡಾಯಶಿಕ್ಷಣ ಕಾನೂನನ್ನು ಜಾರಿಗೆ ತಂದಮೇಲೆ 100ಕ್ಕೆ 90 ಮಕ್ಕಳು ಶಾಲೆಗೆ ಬರುತ್ತಾ ಇದ್ದರೆ, ನನಗೆ ಇರತಕ್ಕಂಥ ಒಂದು ಸಂಶಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. 100ಕ್ಕೆ 90ಜನ ಬರುತ್ತಾರೆಂದು ಏನು ಕರಡು ಅಂಶಗಳನ್ನು ಕೊಟ್ಟಿದ್ದಾರೆಯೋ ಅದು ಕೇವಲ ರಿಜಿಸ್ಟರಿನಲ್ಲಿ ಬರೆದಿಟ್ಟಿರತಕ್ಕಂಥ ಸಂಖ್ಯೆಯೇ ವಿನಾ, ನೇರವಾಗಿ ಶಾಲೆಗೆ ಬಂದು ಶಾಲೆಯಲ್ಲಿ ಕಲಿತುಕೊಳ್ಳತಕ್ಕ ಮಕ್ಕಳ ಸಂಖ್ಯೆಯಲ್ಲ ಅದು ಎಂದು ತುಂಬ ವಿಷಾದದಿಂದ ಹೇಳುತ್ತೇನೆ. ಅನೇಕ ಸ್ಕೂಲುಗಳನ್ನು ನೋಡಿದ್ದೇನೆ. ಸ್ಕೂಲಿನ ರಿಜಿಸ್ಟರಿನಲ್ಲಿ ಸಂಖ್ಯೆ 70 ಇದ್ದರೆ, ಸ್ಕೂಲಿಗೆ ಸರಾಸರಿ ಬರತಕ್ಕಂಥ ಮಕ್ಕಳು 20-30 ಜನ. ಬಾಕಿಯವರೆಲ್ಲ ಮೊದಲಿನಿಂದ ಕೊನೆಯವರಿಗೂ ಪ್ರತಿ ತಿಂಗಳಿನಲ್ಲಿಯೂ ಅಬ್‌ಸೆಂಟ್ ಆಗುತ್ತಾ ಇರುತ್ತಾರೆ, ಅದು ಲೆಕ್ಕಕ್ಕೆ ಬಂದಿಲ್ಲ. ಅಲ್ಲದೆ ಒಂದು ಊರಿನಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವಿದ್ದು ಶೇಕಡ 90 ಜನರು ಹಾಜರಿರುತ್ತಾರೆ, 10 ಜನ ನಿಂತು ಹೋಗುತ್ತಾರೆ ಇದೂ ಕೂಡ ಅರ್ಥವಾಗುವುದಿಲ್ಲ. ಕಡ್ಡಾಯ ಕಾನೂನನ್ನು ಜಾರಿ ಮಾಡಿದಾಗ ಹಳ್ಳಿಯಲ್ಲಿ ಇರತಕ್ಕ ಪ್ರತಿ ಮಕ್ಕಳೂ ಸಹ ಶಾಲೆಗೆ ಬರಬೇಕು, ಬಾರದಿದ್ದರೆ ಸರ್ಕಾರ ಒತ್ತಾಯ ಮಾಡಿ ಏಕೆ ಸೇರಿಸಲಿಲ್ಲ? ತಾವೇ ಹೇಳಿದಿರಿ ದಕ್ಷತೆಯಿಂದ ನಮ್ಮ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಂದು Attendance Officer ಇದ್ದಾರೆ; ಅವರಮೇಲೆ ಇನ್‌ಸ್ಪೆಕ್ಟರು ಇದ್ದಾರೆ; ಅವರ ಮೇಲೆ A. E. O., D. E. O. ಇತ್ಯಾದಿ, ಇತ್ಯಾದಿ ದೊಡ್ಡ hierarchy ಇದ್ದರೂ ಕೂಡ, ಇಂಥಿಂಥ ಊರಿನಲ್ಲಿ ಶೇಕಡ 50, 30, 20, 10 ಜನ ಮಕ್ಕಳು ಶಾಲೆಗೆ ಬಂದಿರಲಿಲ್ಲ ಎಂದ ಮೇಲೆ ಅವರನ್ನು ಏಕೆ ಸೇರಿಸಲಿಲ್ಲ? ಇವರು ಕ್ರಮ ವಾಗಿ ಏತಕ್ಕೆ ಶಾಲೆಗೆ ಬರುತ್ತಿಲ್ಲವೆಂದು ಈ ಅಧಿಕಾರಿಗಳು ನೋಡಬೇಕಾಗಿತ್ತು. ಇದು ಏನು ತಿಳಿಸುತ್ತದೆ ಅಂದರೆ ಕಡ್ಡಾಯ ಶಿಕ್ಷಣ ಎಷ್ಟರಮಟ್ಟಿಗೆ ಜಾರಿಗೆ ಬರಬೇಕೆಂದು ಅಪೇಕ್ಷಿಸುತ್ತೇವೆಯೋ ಅಷ್ಟರಮಟ್ಟಿಗೆ ಅದು ಬರುತ್ತಿಲ್ಲ. ಇದಕ್ಕೆ ಜವಾಬ್ದಾರರು ಸರ್ಕಾರದವರು. ಅವರು ಒಂದು ಕಾನೂನು ಮಾಡಿ ಇಲಾಖೆಯವರು ಈ ಯೋಜನೆಯನ್ನು ಯಾವ ಯಾವರೀತಿ ಜಾರಿಗೆ ತರಬೇಕೆನ್ನುವುದನ್ನು ಹೇಳಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಇದೆ. ತಾವು ಇದರಲ್ಲಿ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ನೀವು ಹೇಳಿದ್ದು ಜನಗಳು ಮಾಡುವ ಕೆಲಸ. ಇಲ್ಲದಿದ್ದರೆ ಜನಗಳನ್ನು ಶಿಕ್ಷೆಗೆ ಗುರಿಪಡಿಸಬೇಕಾಗುತ್ತದೆ; ಅದು ಒಳ್ಳೆಯದಲ್ಲ.

ಶ್ರೀ ಟಿ. ಮಾದಯ್ಯಗೌಡ.—ಅದು ಕಾನೂನಿನಲ್ಲಿಲ್ಲ.

Sri S. R. KANTHI.—Betterment Committee is provided for in the Act.

ಶ್ರೀ ಟಿ. ಮಾದಯ್ಯಗೌಡ.—ಬೆಟರ್‌ಮೆಂಟ್ ಕಮಿಟಿ ಇರತಕ್ಕಂಥದ್ದು ಶಾಲೆಗಳ ಮಕ್ಕಳ ಲೆಕ್ಕ ಮಾಡಬೇಕು, ರಿಜಿಸ್ಟರು ಮಾಡಬೇಕು. ರಿಜಿಸ್ಟರು ಆದಮೇಲೆ, ರಿಜಿಸ್ಟರು ಹೆಡ್‌ಮಾಸ್ಟರ ಹತ್ತಿರವಿರಬೇಕು. ಅವರು ಮಕ್ಕಳೆಲ್ಲಾ ಬಂದಿದ್ದಾರೆಯೇ ಇಲ್ಲವೋ ನೋಡಿಕೊಳ್ಳಬೇಕು. ಬರದೆ ಇದ್ದ ಮಕ್ಕಳ ಲಿಸ್ಟನ್ನು ಇನ್‌ಸ್ಪೆಕ್ಟರಿಗೆ ಕಳುಹಿಸಬೇಕು, ಅವರ ತಂದೆ ತಾಯಿಗಳಿಗೆ ನೋಟಿಸ್ ಕೊಡಬೇಕು, ಅವರ ಪ್ರಾಸಿಕ್ಯೂಷನ್ ಮಾಡಬೇಕು. ಇದು ಎಲ್ಲಾ ಅವರ ಕೆಲಸವೆ ವಿನಾ ಬೆಟರ್‌ಮೆಂಟ್ ಕಮಿಟಿಯದಲ್ಲ.

ಪ್ರಾಥಮಿಕ ಶಿಕ್ಷಣದಲ್ಲಿ ಸ್ವಲ್ಪ ಲೋಪದೋಷಗಳಿವೆ, ಸರಿಮಾಡಿ ಎಂದು ಹೇಳುತ್ತಿದ್ದೇನೆ, ಅಷ್ಟೆ. ನಮ್ಮ ವಿದ್ಯಾ ಇಲಾಖೆಯ ಮಂತ್ರಿಗಳು ದಕ್ಷರು, ಅಭಿಮಾನಶಾಲಿಗಳು, ರಾಷ್ಟ್ರದ ಪ್ರಗತಿಯಲ್ಲಿ ಆಸಕ್ತಿ ಉಳ್ಳವರು. ಇದರಲ್ಲಿರತಕ್ಕಂಥ ನ್ಯೂನತೆಗಳನ್ನು ಸರಿಮಾಡಿ ಅನ್ನತಕ್ಕಂಥ ಉದ್ದೇಶದಿಂದ ಹೇಳಿದೆ, ಇದರಲ್ಲಿ ಕೋಪಮಾಡಿಕೊಳ್ಳಬೇಕಾದ ಅವಶ್ಯಕತೆ ಇಲ್ಲ.

Sri L. B. BIRJE.—(Marathi).

Sri S. R. KANTHI.—(Marathi).

ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ, ಶಾಲೆಗೆ ಬರತಕ್ಕಂಥ ಮಕ್ಕಳ ಸಂಖ್ಯೆಯ ವಿಚಾರದಲ್ಲಿ ಮತ್ತು ಶಾಲೆಗೆ ಕಳುಹಿಸಿದ ಮಕ್ಕಳಿಗೆ ಎಷ್ಟರಮಟ್ಟಿಗೆ ಶಿಕ್ಷಣ ದೊರಕುತ್ತದೆ ಅನ್ನತಕ್ಕಂಥ ವಿಚಾರದಲ್ಲಿ ಹಿಂದಿನಿಂದ ಬಹಳ ದೀರ್ಘವಾಗಿ ಹೇಳಿದರೂ ಮತ್ತೊಮ್ಮೆ ಹೇಳಬೇಕಾದ ಪ್ರಸಂಗ ಬಂದಿದೆ. ತಾವು ಈ ವಿಚಾರದಲ್ಲಿ ಒಂದು ಸರಿಯಾದಂಥ ಉತ್ತರ ಕೊಡುವುದು ಒಳ್ಳೆಯದೆಂದು ಅನಿಸುತ್ತದೆ. ನಮ್ಮ ಉಪಾಧ್ಯಾಯರುಗಳ ವಿದ್ಯಾಭ್ಯಾಸ ನಮ್ಮ ಉಪಾಧ್ಯಾಯರುಗಳ ಒಂದು ಯೋಗ್ಯತೆ. ಅವರಿಗಿರತಕ್ಕಂಥ ಸನ್ಮಾನ, ಅವರಿಗಿರತಕ್ಕಂಥ ಒಂದು ಅನುಕೂಲ. ಈಗಾಗಲೆ ನಡೆಯುತ್ತಿರ

ತಕ್ಕಂಥ ವರ್ಗಾವರ್ಗ, ರೀತಿ ನೀತಿ ಮುಂತಾದುವನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು, ನಮ್ಮ ಮಕ್ಕಳಿಗೆ ಶಿಕ್ಷಣ ಎಷ್ಟರಮಟ್ಟಿಗೆ ದೊರೆಯಬೇಕೋ ಅಷ್ಟರ ಮಟ್ಟಿಗೆ ದೊರೆಯುತ್ತಿಲ್ಲವೆಂದು ವ್ಯಸನದಿಂದ ಹೇಳುತ್ತಿದ್ದೇನೆ. ಪ್ರಾಥಮಿಕ ವಿದ್ಯಾಭ್ಯಾಸ ಹೇಗಿದೆ ಎಂದು ಸ್ವಲ್ಪ ಕಠಿಣವಾದ ಮನಸ್ಸಿನಿಂದ, ತಮಗೆ ಬಹುಶಃ ಸಂತೋಷವಾಗದ ರೀತಿಯಲ್ಲಿ ಹೇಳುತ್ತಾ ಇದ್ದೇನೆ. ಮಕ್ಕಳು ಬೆಳೆಯುತ್ತಾ ಇರುತ್ತಾರೆ. ಇವತ್ತಿನ ಮಕ್ಕಳು ನಾಳೆ ಪ್ರಜೆಗಳು ಆಗಿಹೋಗುತ್ತಾರೆ. ಅವರಿಗೆ ವಿದ್ಯಾಭ್ಯಾಸ ದೊರೆಯಲಿಲ್ಲವೆಂದರೆ ಅವರ ಜೀವಮಾನವೆಲ್ಲಾ ಅನಕ್ಷರಸ್ಥರಾಗಿಯೇ ಇರಬೇಕು.

Sri S. R. KANTHI.—I rise to a point of order—The Hon'ble member is entitled to reply to the debate, but he is not entitled to bring in new facts.

Mr. CHAIRMAN.—The Hon'ble member can only reply to the Debate.

ಶ್ರೀ ಟಿ. ಮಾದಯ್ಯಗೌಡ.—ಈ ದೇಶದ ನಾನಾ ಭಾಗಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಒಂದೇ ರೀತಿಯಾಗಿ ನಡೆಯುತ್ತಾ ಇಲ್ಲ. ಅದನ್ನು ಏಕೀಕೃತವಾಗಿ ಮಾಡಬೇಕು ಎಂಬುದಾಗಿ ಸರ್ಕಾರದವರು ಉದ್ಯುಕ್ತರಾಗಿದ್ದಾರೆ. ಅದನ್ನು ಆದಷ್ಟು ಜಾಗ್ರತೆ ಮಾಡುವುದು ಒಳ್ಳೆಯದು. ಇಷ್ಟು ವರ್ಷಗಳಾದರೂ ಏಕೀಕೃತ ಮಾಡುವುದಕ್ಕೆ ಎಷ್ಟರಮಟ್ಟಿಗೆ ಪ್ರಯತ್ನಗಳನ್ನು ಮಾಡಿದ್ದಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಆ ಕಾರ್ಯವನ್ನು ಕೂಡಲೇ ಕೈಕೊಳ್ಳುವುದು ಒಳ್ಳೆಯದು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬೆಟರ್‌ಮೆಂಟ್ ಕಮಿಟಿಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ಕಮಿಟಿಗಳು ಎಲ್ಲಾ ಊರಿನಲ್ಲೂ ಇಲ್ಲ. ಕೆಲವು ಕಡೆಗಳಲ್ಲಿ ಮಾತ್ರ ಇವೆ. ಹಣವೇನೋ ವಸೂಲಾಗಿದೆ. ಆದರೆ ಹಣವೆಷ್ಟು ಖರ್ಚಾಗುತ್ತಿದೆ ಎಂಬುದೇ ನನಗೆ ಗೊತ್ತಿಲ್ಲ. ಹಿಂದಿನ ವರ್ಷ ನಾನು ಈ ಬಗ್ಗೆ ಮಾತನಾಡಿ ಸ್ಕೂಲುಗಳ ಪರಿಸ್ಥಿತಿ ಗ್ರಾಮಾಂತರ ಪ್ರದೇಶಗಳಲ್ಲಿ ತುಂಬಾ ಕೆಟ್ಟು ಹೋಗಿದೆ. ಅವುಗಳನ್ನು ಆದಷ್ಟು ಮಟ್ಟಿಗೆ ಅಭಿವೃದ್ಧಿ ಸ್ಥಿತಿಗೆ ತರಬೇಕೆಂದು ಒತ್ತಾಯಮಾಡಿ ಹೇಳಿದ್ದೇನೆ. ಮಕ್ಕಳು ಕುಳಿತುಕೊಳ್ಳುವುದಕ್ಕೆ ಸಾಕಷ್ಟು ಸ್ಥಳವಿಲ್ಲ. ಹಲಗೆಗಳಿಲ್ಲ. ಮೇಜುಗಳಿಲ್ಲ. ಉಪಾಧ್ಯಾಯರಿಗೂ ಕುರ್ಚಿ, ಬೇಂಚುಗಳಿಲ್ಲ—ಹೀಗಾಗಿ ಉಪಾಧ್ಯಾಯರಿಗೂ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ ತುಂಬಾ ತೊಂದರೆಯಾಗಿದೆ ಎಂಬ ವಿಷಯವನ್ನು ನಾನು ಎಷ್ಟೋ ಸಾರಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಈಗಲೂ ಮತ್ತೊಂದು ಸಾರಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದನ್ನೆಲ್ಲಾ ಬೆಟರ್‌ಮೆಂಟ್ ಕಮಿಟಿಯವರು ಮಾಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ಎಲ್ಲಿ ಬೆಟರ್‌ಮೆಂಟ್ ಕಮಿಟಿ ಇದೆಯೋ ಅಲ್ಲಿ ಅವರು ಮಾಡಬಹುದು. ಎಲ್ಲಿ ಬಡವರು ಅಥವಾ ನಿರ್ಗತಿಕರು ಇರುತ್ತಾರೋ ಮತ್ತು ಎಲ್ಲಿ ಆ ಕಮಿಟಿಗಳು ಇನ್ನೂ ರಚನೆಯಾಗಿಲ್ಲವೋ ಮತ್ತು ಎಲ್ಲಿ ಹಣ ಸಾಕಷ್ಟು ವಸೂಲಾಗುವುದಿಲ್ಲವೋ ಅಂತಹ ಕಡೆಗಳಲ್ಲಿ ಸರ್ಕಾರದವರೇ ಮುಂದೆ ಬಂದು ಆ ಕಮಿಟಿಯವರು ಮಾಡಬೇಕಾದಂತಹ ಕೆಲಸ ಕಾರ್ಯಗಳನ್ನು ಕೂಡಲೇ ಕೈಕೊಳ್ಳಬೇಕೆಂದು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸತಕ್ಕ ಜನರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಇನ್ನುಮುಂದೆ ಗ್ರಾಮಾಂತರ ಪ್ರದೇಶಗಳಿಗೆ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರ ಬದಲಾಗಿ ಉಪಾಧ್ಯಾಯನಿಯರನ್ನು ನೇಮಕ ಮಾಡಬೇಕೆಂದು ನಾನು ಹೇಳಿದ್ದೆ. ಆ ವಿಚಾರದಲ್ಲಿ ಸರ್ಕಾರ ಕೂಡಲೇ ಹೆಚ್ಚು ಗಮನವನ್ನು ಕೊಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ನಮ್ಮ ಚಿಕ್ಕಮಕ್ಕಳ ಉಪಾಧ್ಯಾಯನಿಯರ ಕೈಕೆಳಗೆ ತಯಾರಾಗುವುದು ಶ್ರೇಷ್ಠ. ಏಕೆಂದರೆ ಪಾಶ್ಚಾತ್ಯ ದೇಶಗಳಲ್ಲಿ ಈ ಪದ್ಧತಿ ಇದೆ. ಇಲ್ಲಿಯೂ ಸಹ ನಮ್ಮ ಸರ್ಕಾರದವರು ಆ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೋರುತ್ತೇನೆ.

ಇನ್ನು ಕಡ್ಡಾಯ ಶಿಕ್ಷಣ ಜಾರಿ ಮಾಡಿರುವ ವಿಚಾರವಾಗಿ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಆ ಕಾಲದಲ್ಲಿ ಇನ್‌ಸ್ಪೆಕ್ಟರ್‌ನಿಂದ ಹಿಡಿದು ಇಲಾಖೆಯಲ್ಲಿರುವ ಪ್ರತಿಯೊಬ್ಬರೂ, ಮಂತ್ರಿಗಳು ಮೊದಲ್ಗೊಂಡು ಅನೇಕ ಪ್ರಾಥಮಿಕ ಶಾಲೆಗಳಿಗೆ ಭೇಟಿ ಕೊಟ್ಟಿದ್ದಾರೆಂದು ಇನ್‌ಸ್ಪೆಕ್ಷನ್ ಪುಸ್ತಕದಲ್ಲಿ ತೋರಿಸುತ್ತಾರೆ. ಆದರೆ ಅಂತಹ ಸ್ಕೂಲುಗಳಿಗೆ ಭೇಟಿ ಕೊಟ್ಟಾಗ್ಗೆ ಅಲ್ಲಿ ಆಕಸ್ಮಿಕವಾಗಿ ಏನೇನು ನಡೆಯುತ್ತಿದೆ, ಏನೇನು ಅವಶ್ಯಕವಾಗಿ ಆ ಶಾಲೆಗೆ ಬೇಕಾಗಿದೆ ಎಂಬ ಬಗ್ಗೆ ಮೊದಲು ಗಮನ ಕೊಡಬೇಕು. ಇತ್ತೀಚೆಗೆ surprise visits ಎಂಬುದು ಇಲ್ಲವೇ ಇಲ್ಲವಾಗಿದೆ. ಇನ್‌ಸ್ಪೆಕ್ಷನ್ಸ್ ತೀರಾ ಕಡಮೆ. ಈಗಿರತಕ್ಕ ಶಾಲೆಗಳಿಗೆ ಇರತಕ್ಕ ಇನ್‌ಸ್ಪೆಕ್ಷನ್ ಸಿಬ್ಬಂದಿ ಬಹಳ ಕಡಿಮೆಯಾಗಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಸಾಕಷ್ಟು ಇನ್‌ಸ್ಪೆಕ್ಷನ್ ಸಿಬ್ಬಂದಿಯನ್ನು

(ಶ್ರೀ ಟಿ. ಮಾದಯ್ಯಗೌಡ)

ಯನ್ನು ನೇಮಿಸಿ ಆಗಾಗ್ಗೆ surprise visits ನ್ನು ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಕೊಡುವ ವ್ಯವಸ್ಥೆಯನ್ನು ಮಾಡುವುದರಿಂದ ಬಹುಮಟ್ಟಿಗೆ ನಾವು ಸೂಚಿಸಿರುವ ಕುಂದುಕೊರತೆಗಳು ಜಾಗ್ರತೆಯಾಗಿ ನಿವಾರಣೆಯಾಗುತ್ತವೆಂದು ನಾನು ಭಾವಿಸುತ್ತೇನೆ.

ಒಟ್ಟಿನಲ್ಲಿ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಂದುವರಿಸಬೇಕು. ನಮ್ಮ ದೇಶದ ಏಳಿಗೆಗಾಗಿ ವಿದ್ಯಾಭ್ಯಾಸವನ್ನು ಇನ್ನೂ ಹೆಚ್ಚಿಗೆ ಅಭಿವೃದ್ಧಿ ಸ್ಥಿತಿಗೆ ತರಬೇಕು. ಆ ಪ್ರಕಾರವಾಗಿಯೇ ಮಾನ್ಯ ಮಂತ್ರಿಗಳೂ ಹೆಚ್ಚಿಗೆ ಆಸಕ್ತಿಯನ್ನೂ ಸಹ ತೋರಿಸುತ್ತಿದ್ದಾರೆ. ಅದಕ್ಕಾಗಿ ಅವರನ್ನು ವಂದಿಸುತ್ತೇನೆ. ಇಷ್ಟು ಹೇಳಿ ಅತಿಮುಖ್ಯವಾದಂಥ ಈ ನಿರ್ಣಯವನ್ನು ಈ ಸಭಾಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಅಧ್ಯಕ್ಷರೇ, ಈಗ ಶ್ರೀ ಟಿ. ಮಾದಯ್ಯಗೌಡರು ನಿರ್ಣಯದ ಮೇಲೆ ಮಾತನಾಡುತ್ತಾ ಬಹಳ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಇಲಾಖೆಯಲ್ಲಿ ಏನೋ ಲೋಪದೋಷಗಳೇ ಇಲ್ಲವೆಂದು ನಾನು ಎಲ್ಲಿಯೂ ಹೇಳಿಲ್ಲ, ಕೆಲವಾರು ಇರಬಹುದು. ಆದರೆ ಹಣಕಾಸಿನ ಮಂತ್ರಿಗಳು ಮಾಡುವ ಕೆಲಸವನ್ನು ಆಯಾ ಊರಿನ ಜನರು ಸ್ವಲ್ಪ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳ ಬಗ್ಗೆ ಬೇಕಾದಷ್ಟು ಸೌಕರ್ಯಗಳನ್ನು ಕೊಡಬೇಕಾದುದೇನೋ ಸಹಜ. ಅವರಿಗೆ ಮಾನ್ಯ ಸದಸ್ಯರಾದ ಶ್ರೀ ಮಾದಯ್ಯಗೌಡರು ಹೇಳಿದಂತೆ ಪುಸ್ತಕಗಳನ್ನು ಕೊಡಿಸುವುದು, ಕುರ್ಚಿ-ಮೇಜುಗಳನ್ನು ಒದಗಿಸುವುದು, ಮರದ ಹಲಗೆಗಳನ್ನು ಹುಡುಗರು ಕುಳಿತುಕೊಳ್ಳುವುದಕ್ಕೆ ಕೊಡಿಸುವುದು—ಇವನ್ನೆಲ್ಲಾ ಬೆಟರ್‌ಮೆಂಟ್ ಕಮಿಟಿಯವರು ಕೆಲವು ಕಡೆಗಳಲ್ಲಿ ಮಾಡುತ್ತಿದ್ದಾರೆ. ಆದರೂ ಈ ಶಾಲೆಗಳಲ್ಲಿ ಸಣ್ಣ ಸಣ್ಣ ಕೊರತೆಗಳಿವೆ. ಬ್ಲಾಕ್‌ಬೋರ್ಡ್ ಮತ್ತು ಹಲಗೆ ಇಲ್ಲದೆ ಇರುವುದು ಮತ್ತು ಸಾಕಷ್ಟು ಸ್ಥಳಾವಕಾಶವೂ ಇಲ್ಲದೆ ಇರುವುದು, ಇವನ್ನೆಲ್ಲಾ ಸರ್ಕಾರದವರೇ ಮಾಡಬೇಕೆಂದರೆ ಸ್ವಲ್ಪಮಟ್ಟಿಗೆ ಕಷ್ಟವಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡ.—ಕೆಲವು ಕಡೆ ಬೆಟರ್‌ಮೆಂಟ್ ಕಮಿಟಿಗಳಿಲ್ಲದಿದ್ದರೂ ಸಹಾಯಕ ಸಮಿತಿಗಳನ್ನಾದರೂ ಮಾಡಿ ಅವಕ್ಕೆ ಅಧಿಕಾರ ಕೊಡಬಹುದಲ್ಲದೇ ?

ಶ್ರೀ ಎಸ್. ಆರ್. ಕಂಠಿ.—ಆ ಬಗ್ಗೆ ಹೊಸದಾಗಿ ಕಾನೂನು ಮಾಡದೆ ಅವುಗಳಿಗೆ ಅಧಿಕಾರ ಕೊಡುವುದಕ್ಕಾಗುವುದಿಲ್ಲ. ಸಹಾಯಕ ಸಮಿತಿಗಳೇನೋ ಕೆಲವು ಕಡೆಗಳಲ್ಲಿ ಚೆನ್ನಾಗಿ ಕೆಲಸಮಾಡುತ್ತಿವೆ ಯೆಂಬುದೇನೋ ಸರಿ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರಾಥಮಿಕ ಶಾಲೆಗಳಿಗೆ ಹೆಣ್ಣು ಮಕ್ಕಳನ್ನೇ ಇನ್ನುಮುಂದೆ ತೆಗೆದುಕೊಳ್ಳಬೇಕೆಂದು ಸದಸ್ಯರು ಅಭಿಪ್ರಾಯಪಟ್ಟರು. ಈಗಿನ ಸಂದರ್ಭದಲ್ಲಿ ಕಾನ್ಸ್ಟಿಟ್ಯೂಷನ್ನು ಆ ರೀತಿ ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲ. ಹೆಣ್ಣೂ ಅಷ್ಟೇ ಗಂಡೂ ಅಷ್ಟೇ. ಎಲ್ಲರನ್ನೂ ಒಂದೇ ಸಮನಾಗಿ ನೋಡಬೇಕಾಗುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ಹೆಣ್ಣು ಮಕ್ಕಳನ್ನು ವಿಶೇಷವಾಗಿ ನೇಮಕ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆ. ಇನ್ನು ಶಾಲೆಗಳಿಗೆ ಭೇಟಿಕೊಡಬೇಕೆಂಬ ಒಂದು ಅಂಶವನ್ನು ಸೂಚಿಸಿದರು. ಸಂಬಂಧಪಟ್ಟ ಇಲಾಖಾಧಿಕಾರಿಗಳು ಆ ಕೆಲಸವನ್ನು ಈಗಾಗಲೇ ಮಾಡುತ್ತಿದ್ದಾರೆ. ನಾನೂ ಸಹ ಕೆಲವು ವೇಳೆ ಕೆಲವಾರು ಶಾಲೆಗಳನ್ನು ಭೇಟಿಮಾಡಿದ್ದೇನೆ. ಅದರಿಂದ ನನಗೆ ಒಳ್ಳೆಯ ಅನುಭವವೂ ಬಂದಿದೆ. ಕೆಲವು ಕಡೆಗಳಲ್ಲಿ ಲ್ಯಾಬೊರೇಟರಿಯೇ ಇಲ್ಲ. ಸರಿಯಾದ ಇಕ್ವಿಪ್‌ಮೆಂಟ್ಸ್ ಸಹ ಇಲ್ಲ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದೇನೋ ನಿಜ. ಅದಕ್ಕಾಗಿಯೇ ಹೆಚ್ಚಿಗೆ ಗ್ರಾಂಟುಗಳನ್ನು ಕೊಡುವ ವ್ಯವಸ್ಥೆಯನ್ನೂ ಸಹ ಸರ್ಕಾರದವರು ಕೈಗೊಳ್ಳುತ್ತಿದ್ದಾರೆ. ಶಾಲೆಗಳಲ್ಲಿ ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ಕೊಡದಿದ್ದರೆ ರೆಕಗ್‌ನಿಷನ್ ವಿತ್‌ಡ್ರಾ ಮಾಡುವ ಒಂದು ಕ್ರಮವನ್ನೂ ಸಹ ತೆಗೆದುಕೊಳ್ಳುತ್ತಿದ್ದೇವೆ. ಕೆಲವರು ಬಹಳ ಉತ್ಸಾಹದಿಂದ ಶಾಲೆಗಳನ್ನು ನಡೆಸುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಉಪಾಧ್ಯಾಯರುಗಳು ಬಹಳ ಅಕ್ರಮವಾಗಿ ನಡೆಯುತ್ತಿದ್ದಾರೆಂದು ಹೇಳಿದರು. ಅಂತಹಕಡೆಗಳಲ್ಲಿ surprise visitsನ್ನು ಕೊಡುವುದು ಒಳ್ಳೆಯದೆಂಬುದು ನನ್ನ ಅಭಿಪ್ರಾಯವೂ ಇದೆ. ಮಾನ್ಯ ಸದಸ್ಯರು ಈ ವಿಚಾರಗಳನ್ನು ನನಗೆ ಮೊದಲೇ ತಿಳಿಸಿದ್ದರೆ ಅತ್ಯಂತ ಜರೂರಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತಿತ್ತೆಂದು ನಾನು ಅವರಿಗೆ ಭರವಸೆ ಕೊಡುತ್ತೇನೆ. ಶಿಕ್ಷಣ ಇಲಾಖೆ ಬಹುದೊಡ್ಡ ಇಲಾಖೆ. ಈ ಇಲಾಖೆಯ ಅನೇಕ ವಿಷಯಗಳು ಎಲ್ಲರ ಗಮನವನ್ನೂ ಸೆಳೆಯದೆ ತೀರ್ಮಾನವಾಗುವಂತಿಲ್ಲ. ಒಟ್ಟಿನಲ್ಲಿ ಈ ನಿರ್ಣಯ ಕೂಲಂಕಷವಾಗಿ ಇಲ್ಲಿ ಚರ್ಚೆಯಾಗಿದೆ. ಮಾನ್ಯ ಸದಸ್ಯರ ಸಲಹೆಗಳನ್ನೆಲ್ಲಾ ಪರಿಶೀಲಿಸಿ ಇನ್ನು ಮುಂದೆ ಈ ಪ್ರಾಥಮಿಕ ಶಿಕ್ಷಣಕ್ಕೆ ಇನ್ನೂ ಹೆಚ್ಚು ಗಮನವನ್ನು ಸರ್ಕಾರ ಕೊಟ್ಟು ಆ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನು ತೊಡೆದುಹಾಕಲು ಪ್ರಯತ್ನ ಮಾಡುವುದಾಗಿ ನಾನು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಒಂದು ಮಾತನ್ನು ಹೇಳಬೇಕಾಗಿದೆ.

ಮಾನ್ಯ ಸದಸ್ಯರು ಯಾರೇ ಆಗಲೀ ಏನಾದರೂ ಇಂತಹ ವಿಚಾರಗಳಿದ್ದರೆ ಅವನ್ನು ಮೊದಲೇ ಬರೆದು ಕೊಂಡು ಅದಕ್ಕೆ ಬೇಕಾದ ತೀರ್ಮಾನ ಅಭಿಪ್ರಾಯವನ್ನು ಪಡೆದು ನಿವಾರಣೆ ಮಾಡಿಕೊಂಡರೆ ಒಳ್ಳೆಯ ದಾಗುತ್ತದೆ. ಇಷ್ಟು ಹೇಳಿ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಮಾದಯ್ಯಗೌಡ.—ಮಾನ್ಯ ಮಂತ್ರಿಗಳು ಸಾಕಷ್ಟು ಆಶ್ವಾಸನೆಯನ್ನು ಕೊಟ್ಟಿದ್ದ ಕ್ಕಾಗಿ ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಅಪೇಕ್ಷೆ ಪಡುತ್ತೇನೆ.

The Resolution was, by leave of the House, withdrawn.

MR. CHAIRMAN.—The House will now rise to meet at 12-30 P.M. on Monday, the 9th September 1963.

The House adjourned at Thirty Minutes past Twelve of the Clock to meet again at Thirty Minutes past Twelve of the Clock on Monday, the 9th September 1963.

V-31 N 63
N63-3-46-50
(B) 4795

WD 975 GPB—900—15-10-1963

Karnataka State Archive
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. (B) 4795
ದಿನಾಂಕ Date

MYSORE LEGISLATIVE ASSEMBLY

FORTY-SEVENTH DAY.

Monday, 9th September 1963.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

MR. SPEAKER.—Sri Deve Gowda has authorised Sri Laxmanaiah to put Question. No. 530. He may put the question. Question No. 540 may also be taken up along with this question.

Sri G. A. Thimmappa Gowda is not present; hence Question 540 cannot be put. Sri Laxmaniah may put Question No. 530.

STARRED QUESTIONS

(to which oral answers were given)

Posting of a Permanent Principal to the First Grade College, Hassan.

*Q.—530. SRI B. H. LAKSMANIAH (Belur).—[On behalf of SRI H. D. DEVE GOWDA (Holenarasipur)]—

Will the Government be pleased to state :—

(*a*) whether they are aware that a permanent Principal has not been posted to the First-Grade College, Hassan.

(*b*) whether they would take early steps to post a permanent Prnicipal to the said College in the interests of better administration of the College ?

A.—SRI S. R. KANTHI (Minister for Education).—

(*a*) Yes.

(*b*) Yes.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಈ ಕಾಲೇಜಿಗೆ ಖಾಯಂ ಪ್ರಿನ್ಸಿಪಾಲರು ಎಷ್ಟು ದಿವಸಗಳಿಂದ ಇಲ್ಲ ?

†ಶ್ರೀ ಎಸ್. ಆರ್. ಕಂಠಿ.—ಕಾಲೇಜಿಗೆ ಪ್ರಿನ್ಸಿಪಾಲರು ಈಗ ಹೋಗಿದ್ದಾರೆ. ಅದು ಖಾಲಿಯಾದದ್ದು 31 ಮಾರ್ಚ್ 1962ರಲ್ಲಿ. ಆಗ ಶ್ರೀ ಹೈದರ್ ಎನ್ನುವವರು ಅಡಿಷನಲ್ ಚಾರ್ಜಿನಲ್ಲಿದ್ದರು, ಅನಂತರ ರಾಮಸ್ವಾಮಿ ಶಾಸ್ತ್ರಿ ಅವರು ಪ್ರಿನ್ಸಿಪಾಲರಾಗಿದ್ದರು. ಈಗ ಭಾಸ್ಕರ್ ಎನ್ನುವವರು ಹೋಗಿ 3ನೇ ಸೆಪ್ಟೆಂಬರ್ 1963ರಲ್ಲಿ ಚಾರ್ಜ್ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಖಾಯಂ ಪ್ರಿನ್ಸಿಪಾಲರು ಇಲ್ಲದೆ ಇರುವುದರಿಂದ ಆ ಕಾಲೇಜಿನಲ್ಲಿ ಬಹಳ ಕಡಮೆ ಪ್ರಮಾಣದಲ್ಲಿ ಪರೀಕ್ಷಾ ಫಲಿತಾಂಶಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಕಡಮೆ ಪರ್ಸೆಂಟೇಜ್ ಆಗಿದ್ದರೆ ಪ್ರಿನ್ಸಿಪಾಲರು ಇಲ್ಲದ್ದಕ್ಕೆ ಹಾಗಾಯಿತು ಎಂದಲ್ಲ. ಅದಕ್ಕೆ ನಾನಾ ಕಾರಣಗಳಿವೆ.

Sri S. SIVAPPA.—Has it come to the notice of the Government that in First Grade College, Hassan, about 75 per cent of the staff are only local candidates ?

ಶ್ರೀ ಎಸ್. ಆರ್. ಕಂಠಿ.—ಅಲ್ಲಿ 32 ಲೆಕ್ಚರರುಗಳ ಸ್ಥಾನಗಳಿವೆ. ಲೋಕಲ್ ಕ್ಯಾಂಡಿಡೇಟ್ ಎನ್ನುವುದರ ಅರ್ಥ ನನಗೆ ಆಗಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಪ್ರಶ್ನೆಯ 'ಎ' ಮತ್ತು 'ಬಿ' ಭಾಗಗಳಿಗೆ 'ಗೊತ್ತಿದೆ', 'ಹೌದು' ಎಂದು ಹೇಳಿದ್ದಾರೆ. ಈ ಉದ್ದೇಶ ಈಡೇರುವುದಕ್ಕೆ ಎಷ್ಟು ಕಾಲ ಸರ್ಕಾರಕ್ಕೆ ಬೇಕಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—3ನೇ ಸೆಪ್ಟೆಂಬರ್ 1963ಕ್ಕೆ ಭಾಸ್ಕರ್ ಎನ್ನುವವರು ಹೋಗಿ ಪ್ರಿನ್ಸಿಪಾಲರ ಚಾರ್ಜ್ ತೆಗೆದುಕೊಂಡಿದ್ದಾರೆ.

Number of Spindles and Looms working in the Mahaboob Shahi Kulbarga Mills, Gulbarga.

*Q.—562. Sri M. S. PATIL (Koppal).—

Will the Government be pleased to state :—

(a) the number of spindles and looms working in the Mahaboob Shahi Kulbarga Mills, Gulbarga ;

(b) the reasons for not working all the spindles and looms ;

(c) the raw materials and the stores required for the Mills to work to full capacity ;

(d) the resultant loss due to not working of the Mills to full capacity ?

A.—Sri K. MALLAPPA (Minister for Industries and Commerce).—

(a) On an average, 27,400 spindles and 4 looms were working intermitently till 12-12-1962 ;

(b) Want of adequate capital, cotton and other stores required by the Spinning Department and Loom shed. Some spindles and looms require repair or replacement ;

(c) 50 bales of cotton, 45 tons of coal and other stores worth about Rs. 3,000 would be required per day on the average to work the Mills to full capacity ;

(d) It is not possible to assess at present due to the non-working of the mills to full capacity for reasons indicated above, besides others.

†Sri K. MALLAPPA (Minister for Industries and Commerce).—Sir, the answer furnished has to be modified a little because it was furnished as on 10-4-1963. About (a) there are 28,000 spindles and 500 looms working now. Adequate capital has been given. About (c) cotton supply is good. So far as the machinery is concerned, it has been required and they are working fairly well now ; so, (c) stands. About (d), losses

have been brought down. Losses are inevitable because the machinery is not good and unless they are replaced by new ones, losses will be there. We are trying to get the existing machinery repaired and import foreign machinery. In about six months we will be able to reduce the loss to zero. We hope to make some profits after some time. That is the current position of the Mill, Sir.

ಶ್ರೀ ಎಂ. ಎಸ್. ಪಾಟೀಲ್.—ಸಾಕಷ್ಟು ಬಂಡವಾಳ ಬೇಕು ಎಂದು ಹೇಳುತ್ತಿದ್ದೀರಿ, ಈಗ ಎಷ್ಟು ಬಂಡವಾಳವನ್ನು ಹಾಕಿದ್ದೀರಿ, ಇನ್ನು ಮುಂದೆ ಎಷ್ಟು ಬಂಡವಾಳವನ್ನು ಹಾಕಬೇಕಾಗುತ್ತದೆ.

ಶ್ರೀ ಕೆ. ಮಲ್ಲಪ್ಪ.—ಈಗ 64½ ಲಕ್ಷ ರೂಪಾಯಿ ಸರ್ಕಾರ ಮಂಜೂರು ಮಾಡಿದೆ. ಅದರಲ್ಲಿ 53½ ಲಕ್ಷ ರೂಪಾಯಿ ತೆಗೆದುಕೊಂಡಿದ್ದಾರೆ. ಫೈನಾನ್ಸ್ ಕಾರ್ಪೊರೇಷನ್ನಿನಿಂದ 10 ಲಕ್ಷ ರೂಪಾಯಿ ಕೊಟ್ಟಿದ್ದಾರೆ. 11 ಲಕ್ಷ ರೂಪಾಯಿಗಳನ್ನು ಈ ತಿಂಗಳು ಅಥವಾ ಮುಂದಿನ ತಿಂಗಳು ತೆಗೆದುಕೊಳ್ಳುತ್ತಾರೆ ಮತ್ತು ಹೊಸ ಯಂತ್ರಗಳಿಗಾಗಿ 37½ ಲಕ್ಷ ರೂಪಾಯಿ ಬೇಕಾಗುತ್ತದೆ. ಇದನ್ನು N.I.D.C. Fund ಕೊಡುವುದಕ್ಕೆ ಒಪ್ಪಿದ್ದಾರೆ. ಇನ್‌ಸ್ಟಲೇಷನ್ ಮತ್ತು ಇತರ ಬಾಬುಗಳಿಗೆ 17½ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇಷ್ಟು ಖರ್ಚು ಮಾಡಿದರೆ ಆ ಮಿಲ್ most modern mill ಆಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—63 ಲಕ್ಷ ರೂಪಾಯಿಗಳಲ್ಲಿ ಇದುವರೆಗೆ ಸಾಲ ತೀರಿಸಲು ಎಷ್ಟು ಹಣವನ್ನು ಕೊಟ್ಟಿದ್ದೀರಿ ಮತ್ತು ಸಾಲವನ್ನು ತೀರಿಸಿದ ಅನಂತರ working capital ಎಂದು ಎಷ್ಟು ಉಪಯೋಗ ಮಾಡುತ್ತಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಸಾಧಾರಣವಾಗಿ ಹತ್ತು ಲಕ್ಷ ರೂಪಾಯಿಗಳನ್ನು working capital ಇಟ್ಟುಕೊಂಡು ಬಾಕಿ ಹಣವನ್ನೆಲ್ಲಾ ಪಂಜಾಬ್ ನ್ಯಾಷನಲ್ ಬ್ಯಾಂಕ್ ವಗೈರೆಕಡೆ ಇದ್ದ ಸಾಲಗಳನ್ನು ತೀರಿಸಲು ಉಪಯೋಗಿಸಿದ್ದೇವೆ.

Sri M. R. PATIL.—What are the terms and conditions on which this mill has been taken over by Government, Sir ?

Sri K. MALLAPPA.—We have taken 51 per cent of the share. We have paid a very very low sum *i.e.*, four annas a share. 51 per cent of the fully paid up shares have been purchased by Government at four annas a share. Then we appointed a Managing Director. We have put one more Financial Director and two other Directors from the Government side.

Sri SANJEEVANATH AIKALA.—What is the total assets of the mill?

Sri K. MALLAPPA.—It will be about one or one and a half crores.

ಶ್ರೀ ಅಣ್ಣಾರಾವ್ ಗಣಮುಖಿ.—ಈ ಮಿಲ್ಲಿನಲ್ಲಿರುವ ಒಟ್ಟು spindles ಎಷ್ಟು, ಒಟ್ಟು looms ಎಷ್ಟು; ಇವುಗಳಲ್ಲಿ ಕೆಲಸ ಮಾಡುತ್ತಿರುವುವೆಷ್ಟು ?

Sri K. MALLAPPA.—Installed capacity of the Mills 35,000 spindles and 600 looms. ಇದರಲ್ಲಿ 28,000 spindles ಮತ್ತು 500 looms ಕೆಲಸ ಮಾಡುತ್ತಿವೆ.

ಶ್ರೀ ಅಣ್ಣಾರಾವ್ ಗಣಮುಖಿ.—ಇದರಿಂದ ಪೂರ್ತಿಯಾಗಿ ಕೆಲಸಗಾರರನ್ನು ನೇಮಕ ಮಾಡಿಲ್ಲವೆಂದು ಅರ್ಥವಾಗುತ್ತದೆಯಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಅವರು excess labour ನೇಮಕ ಮಾಡಿದ್ದರು. We are now trying to remove inefficient labour and the old labour and keep only efficient labour. Also, we cannot work the mill to its full capacity as the machinery is worn out. It is not possible to work with that machinery.

Starting of a I Class Munsiff's Court at Shahapur Taluk

* Q.—579. Sri MAHANTASWAMY (Shahapur).—

Will the Government be pleased to state.

(a) whether they intend to start a I Class Munsiff's Court at Shahapur Taluk;

(b) If so, when ?

A.—Sri M. V. RAMA RAO (Minister for Law).—

(a) No.

(b) Does not arise in view of the reply to (a).

ಶ್ರೀ ಮಹಾಂತ ಸ್ವಾಮಿ.—ಷಹಾಪುರ ಭಾಗದಲ್ಲಿ ಕೋರ್ಟನ್ನು ಪ್ರಾರಂಭ ಮಾಡಲಿಕ್ಕೆ ಅರ್ಜಿಗಳು ಬಂದದ್ದು ತಮ್ಮ ಗಮನದಲ್ಲಿದೆಯೇ ?

ಶ್ರೀ ಎಂ. ವಿ. ರಾಮರಾವ್.—ಹಿಂದೆ ಅರ್ಜಿಗಳು ಬಂದಿವೆ; ಆದರೆ ಅಲ್ಲಿ ಕೋರ್ಟ್ ಪ್ರಾರಂಭ ಮಾಡಲಿಕ್ಕೆ ಸಾಕಷ್ಟು ಕೆಲಸವಿಲ್ಲ ಎಂದು ಹೈ ಕೋರ್ಟನವರ ಅಭಿಪ್ರಾಯ.

ಶ್ರೀ ಮಹಾಂತ ಸ್ವಾಮಿ.—ಹಿಂದಿನ ಹೈದರಾಬಾದ್ ಹೈ ಕೋರ್ಟಿನ ನ್ಯಾಯಾಧೀಶರಾದ ಎಲ್. ಎಸ್. ಮಿಶ್ರಾ ಅವರು ಅಲ್ಲಿ ಕೋರ್ಟ್ ಪ್ರಾರಂಭ ಮಾಡುವುದು ಯೋಗ್ಯವಾಗಿದೆ ಎಂದು ಹೇಳಿದ್ದು ಗೊತ್ತೇ ?

ಶ್ರೀ ಎಂ. ವಿ. ರಾಮರಾವ್.—ಆ ವಿಷಯ ಗೊತ್ತಿಲ್ಲ.

Sri GANJI VEERAPPA.—Have the Government any idea with regard to the courts that have no work and are still functioning ?

Mr. SPEAKER.—How does is arise ? It relates to information not covered by this question.

ಶ್ರೀ ಎಂ. ವಿ. ರಾಮರಾವ್ ಯಾವ ಕೋರ್ಟಿಗೆ ಎಷ್ಟು ಕೆಲಸ ಇದೆ ಎನ್ನುವುದು ಜನರಲ್ ಆಗಿ ಹೇಳಲಿಕ್ಕೆ ಬರುವುದಿಲ್ಲ.

Sri ANNARAO GANAMUKHI.—What is the workload prescribed for a First Class Munsiff's Court so that it may be established ?

Sri M. V. RAMA RAO.—There is nothing like a workload prescribed for a court. As much work as will keep the presiding officer engaged during the working hours of a day would be the work load.

Sri S. M. KRISHNA.—Whenever Government thinks in terms of establishing a new court, is it always guided by the recommendations made by the High Court ?

M. V. RAMA RAO.—I should say, invariably so.

ಶ್ರೀ ಎಸ್. ಭೀಮಣ್ಣ.—ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಮುನಸೀಫ್ ಕೋರ್ಟ್ ಇರಬೇಕೆಂದು ಸರ್ಕಾರದ ನೀತಿ ಇದೆಯೇ ?

ಶ್ರೀ ಎಂ. ವಿ. ರಾಮರಾವ್.—ಆ ರೀತಿ ನೀತಿ ನಿರ್ಣಯ ಮಾಡಿಲ್ಲ, ಇದುವರೆಗೂ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ—ವರ್ಕ್‌ಲೋಡ್ ಸಾಕಾದಷ್ಟು ಇಲ್ಲ ಎಂದು ಹೇಳಿ ಅಲ್ಲಿ ಕೊಟ್ಟಿಲ್ಲ ಎಂದು ಹೇಳಿದಿರಿ. ಕೋರ್ಟ್ ಕೊಡದೆ ವರ್ಕ್‌ಲೋಡ್ ಇಲ್ಲ ಎಂದು ಹೇಗೆ ಗೊತ್ತಾಯಿತು ? ಮೊದಲು ಕೋರ್ಟ್ ಕೊಟ್ಟ ಮೇಲೆ ತಾನೆ ಕೇಸು ಹಾಕುವುದು ? ಮಾನ ನಿರೋಧದಂತಹ ಚಿಕ್ಕ ಪುಟ್ಟ ಕೇಸುಗಳಿಗೆ ಬಹಳ ದೂರ ಹೋಗ ಬೇಕಾಗುತ್ತದೆ.

ಅಧ್ಯಕ್ಷರು.—ಷಹಪುರದ ವಿಷಯ ನಿಮಗೆ ಗೊತ್ತಿದ್ದರೆ ಹೇಳಿ ?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬೇಕಾದಷ್ಟು ಸಾರಿ ಅಲ್ಲಿಗೆ ಹೋಗಿದ್ದೇನೆ ಗೊತ್ತು. (ನಗು)

ಶ್ರೀ ಎಂ. ವಿ. ರಾಮರಾವ್.—ಅವರ ತಿಳಿವಳಿಕೆಗೆ ಹೇಳಬೇಕಾದರೆ ಅಲ್ಲ ಮಾನನಿರೋಧವೇ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಆಗಿನ ಹೈದರಾಬಾದ್ ಹೈ ಕೋರ್ಟಿನ ನ್ಯಾಯಾಧೀಶರು ಷಹಾಪುರದಲ್ಲಿ ಕೋರ್ಟ್ ಆಗಬೇಕೆಂದು ಹೇಳಿದ್ದು ಗೊತ್ತಿಲ್ಲ ಎಂದು ಹೇಳಿದಿರಿ, ಈಗಲಾದರೂ ಆ ಸಮಾಚಾರವನ್ನು ತರಿಸಿಕೊಂಡು ಆ ರೀತಿ ಶಿಫಾರಸು ಮಾಡಿದ್ದರೆ ಅಲ್ಲಿ ಕೋರ್ಟ್ ತೆಗೆಯಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ರಾಮರಾವ್.—ಅದನ್ನು ತರಿಸುವ ಉದ್ದೇಶವಿಲ್ಲ; ಅದು ಅನಾವಶ್ಯಕ ಮೈಸೂರು ಹೈಕೋರ್ಟಿನ ಅಭಿಪ್ರಾಯ ಅಗತ್ಯವೇಹೊರತು ಹಿಂದಿನ ಹೈಕೋರ್ಟಿನವರ ಅಭಿಪ್ರಾಯ ಏನಿತ್ತು ಎಂದು ಅದನ್ನು ತರಿಸುವುದು ಅಗತ್ಯ ಇಲ್ಲ.

Sri ANNA RAO GANAMUKHI.—Has it come to the notice of Govenment as equal number of case from Shorapur and Shahapur Taluk are pending in the Munsiff's Court?

Sri M. V. RAMA RAO.—I have no objection to receive the information that is volunteered by the Hon'ble Member.

Number of vacant Posts of Doctors in various Hospitals of South Kanara District

* Q.—584. Sri S. GOPAL SALENNA (Mudabidri).—

Will the Government be pleased to state:—

(a) the number of Vacant, posts of Doctors in the Hospitals, Primary Health Centres, Rural Dispensaries and Mobile Health Units of South Kanara District with the name of the Hospitals and the duration of vacancies of such post;

(b) the total expenditure involoved to maintain the staff and other requirement of Hospitals, Primary Health Centres, Rural Dispensaries and Mobile Health Units during the period of the Doctors not posted in their vacancies in each of the above Units?

A.— Sri K. NAGAPPA ALVA (Minister for Health).—

(a).—

	Names of the Institutions.	Number of vacancies	Duration of the vacancies
1	Government Wenlock Hospital, Mangalore.	9	Since 1961
2	Government Lady Goschen Hospital, Mangalore.	2	One since 1961 and another since 1962.
3	Domicilary T. B. Clinic, Mangalore ...	1	Since June 1962
4	T. B. Sanatorium, Mudusbedde ...	1	Since June 1962
5	Primary Health Centre, Ajekar ...	1	1 year 6 months
5	Primary Health Centre, Mudabidri ...	1	6 months
7	Primary Health Centre, Nitte ...	1	1 year 7 months
8	Primary Health Centre, Panaje ...	1	1 month
9	Primary Health Centre, Punjalkatta ...	1	1 year 2 monehs
10	Primary Health Centre, Ullal ...	1	4 months
11	Primary Health Centre, Hiriyadka ...	1	4 months
12	Mobile Medical Unit, Puttur ...	1	1 year 9 months
13	Mobile Health Unit, Sullia ...	1	3 years 6 months

(SRI K. NAGAPPA ALVA)

(b)—

	Name of the Institution		Amount
			Rs. np.
1	Primary Health Centre, Ajekar	...	11,690-05
2	Do Mudabidri	...	10,638-94
3	Do Nitte	...	25,045-94
4	Do Panaje		895-06
5	Do Punjalkatte	...	13,349-66
6	Do Ullal	...	5,300-47
7	Do Hiriyadke	...	3,458-83
8	Mobile Medical Unit, Puttur	...	25,041-92
9	Mobile Health Unit, Sullia	...	43,681-70
		Total ...	1,39,102-57

†Sri V. S. PATIL.—So far as the Control of camps, parades and banning use of uniforms are concerned, there are sufficient provisions in the Indian penal Code as well as in the Army, Navy and Airforce Acts. Whoever uses the uniforms similar to those used by these persons are liable to be punished. But this clause covers uniforms of every kind. The R. S. S. boys use some kind of uniform and they hold parades. Their aim is to discipline the entire people in a manner befitting an independent nation. There are other institutions which are trying to give physical training to young boys and girls in an organised manner and parades are held similar to those held in colleges and high schools. If this clause is enforced, if the ruling party does not like an institution, it may instruct the police to see that such things are stopped and it would come in the way of the desire of the Leader of the country, Pandit Nehru, who is keen on having a disciplined people. The standard of discipline of the people of our country is poor, compared to those in advanced countries. Even walking in streets is not known to our people. The rules of the road are not observed by them. Foreigners may feel that we are an Indisciplined nation. Therefore it is highly desirable that institutions devoted to inculcating a sense of discipline among our people should be encouraged and their activities should not be curbed in the manner suggested in this clause. Otherwise I am afraid the ruling

(SRI V. S. PATIL)

party would misuse the clause? This clause was introduced in Bombay to curb the activities of political institutions which started wings like Youth Leagues. I request the Government to avoid such blame and remove this provision.

† Sri R. M. PATIL.—Sub-clause (2) of clause 64 does not warrant any apprehension as expressed by the Hon'ble Member. It is a simple provision. If any person or groups of persons wear uniform of the same type as used by the police or the army, this clause would come into the picture, not otherwise. I do not know political ideologies and political workers would come into the picture. The Hon'ble Member is unnecessarily importing politics into the matter and making out a ground a gainst every provision of the Act, even though they are innocent and simple. He is imputing political motives at every stage. My humble submission is that there is no substance in his argument and the amendment may, therefore, be thrown out.

Mr. SPEAKER.—The question is:

"That clause 64 stand part of the Bill."

The motion was adopted.

Clause 64 was added to the Bill.

Mr. SPEAKER.—The question is:

"That clauses 65 to 67 stand part of the Bill."

The motion was adopted.

Clauses 65 to 67 were added to the Bill.

CLAUSE 68

Sri B. R. SUNTHANKAR.—I beg to move:

"That after item (g), the following item shall be added:, "(h) to protect the individual and his property to the best of his ability".

Mr. SPEAKER.—Amendment moved:

"That after item (g), the following item shall be added:, "(h) to protect the individual and his property to the best of his ability".

Sri B. R. SUNTHANKAR.—One of the most important duties of the police towards the public is the protection of life of the citizens and their property. Before the Bill was sent to the Joint Select Committee, it was criticised on the floor of this House that the duties of the police mentined in the clause and not exhaustive and that they should be more exhaustive and more adequate. The Committee does not appear to have taken into consideration views expressed here in this matter. Since this is one of the most important duties of the police, I suggest that it may be included now.

The protection of a person and the property that should be the primary duty of the Police Department. But, nowhere in this Bill

there is any indication of this specific duty on the part of the Police. Sir, in the early British days, it used to be said that any person could tie a lump of gold to a stick and move from place to place travelling from Badrikedan to Cape Comorin. That was said in the early days of the British rule. Now, that safety has gone; those days are gone. Now, the gold in the house is being robbed. It is taken away by the Government under the Gold Control Order. Those people, at that time, had faith in the Police Department, but now that faith has gone. People have lost confidence in the Police Department on account of the behaviour of the Police to the public. In order to restore that confidence, there must be such a provision in this Bill. People must feel that they are safe with the Police. That is why I press that this amendment should be accepted by the Hon'ble Minister, so that it should be a duty of the Police to protect the individual and his property.

2-30 P.M.

Mr. SPEAKER.—Is the Hon'ble Minister for Home accepting it?

Sri R. M. PATIL.—Sir, it is a very simple matter. Even under clause 65 (h) it is stated as follows.—

"(h) to discharge such duties as are imposed upon him by any law for the time being in force."

So, he could discharge such duties as are enjoined upon him under any other provision of law and as such this is a redundant clause which my friend is urging by way of amendment.

Mr. SPEAKER.—The question is:

"That in clause 68 after item (g), the following item shall be added:

"(h) to protect the individual and his property to the best of his ability."

The amendment was negatived.

Mr. SPEAKER.—The question is:—

"That clause 68 stand part of the Bill."

The Motion was adopted.

Clause 68 was added to the Bill.

Mr. SPEAKER.—The question is:—

"That clauses 69 to 131, both inclusive, stand part of the Bill."

The Motion was adopted.

Clauses 69 to 131, both inclusive, were added to the Bill.

Sri V. M. DEO.—Sir, I beg to move an amendment clause 132.

"That for Clause 132 the following shall be substituted:—

"That for clause 132 The Village Police shall be under the authority of the Village Panchayat and the Chairman of the Village Panchayat shall be the Police Patel who shall work under the directions of the District Magistrate."

Mr. SPEAKER.—Amendment moved;

"That for clause 132 the following shall be substituted:—

"The Village Police shall be under the authority of the Village Panchayat and the Chairman of the Village Panchayat shall be the Police Patel who shall work under the directions of the District Magistrate."

ಶ್ರೀ ವಿ. ಎಂ. ದೇವ್.—ಇಲ್ಲಿರುವ ಮುಖ್ಯವಾದ ವಿಷಯ ಯಾರಿಗೆ ಅಧಿಕಾರ ಕೊಡಬೇಕು ಎನ್ನುವುದು. ಸರ್ಕಾರ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್, ಸೂಪರಿಂಟೆಂಡೆಟ್, ರೆವೆನ್ಯೂ ಅಧಿಕಾರಿಗಳು ಇವರ ಮಧ್ಯೆ ಜನ ನುಚ್ಚು ನೂರಾಗುತ್ತಾರೆ, ಈ ತರಹ ಆರ್ಡರ್ ಮಾಡಿದರೆ. ಇನ್ನೊಂದು ಕಡೆ ನೋಡಿದರೆ ಇದರ ವಿಚಾರವಾಗಿ ಪೂರ್ಣವಾಗಿ ಯೋಚನೆ ಮಾಡದೆ ನಿರ್ದಿಷ್ಟವಾದ ತೀರ್ಮಾನಕ್ಕೆ ಬಂದು ಬುದ್ಧಿ ಪೂರ್ವಕವಾಗಿ ಮಾಡಿಲ್ಲವೆಂದು ನಾನು ಹೇಳುತ್ತೇನೆ. ನಾವು ಆಡಳಿತ ಪಕ್ಷದವರನ್ನು ಟೀಕೆ ಮಾಡಿದ ಹಾಗೆ ಅವರೂ ನಮ್ಮನ್ನು ಟೀಕೆ ಮಾಡುತ್ತಾರೆ. ಇದರ ತಿರುಳೇನೆಂದರೆ, ನೀವು ರಾಜ್ಯ ಹೇಗಿರಬೇಕು ಎನ್ನುವ ಚಿತ್ರವನ್ನು ಕೊಡುವುದಿಲ್ಲ, ನಿಮ್ಮಲ್ಲಿ ಚಿತ್ರವೇ ಇಲ್ಲ, ನೀವು ಹೇಗೆ ರಾಜ್ಯವನ್ನು ಆಳುತ್ತೀರಿ ಎಂದು ಕೇಳುತ್ತಾರೆ. ಆ ದೃಷ್ಟಿಯಿಂದ ನಾನು ಮಾತನಾಡುವುದಕ್ಕೆ ಇಷ್ಟ ಪಡುತ್ತೇನೆ. ಇದರೊಳಗೆ ಏನು ಅಡಕವಾಗಿದೆ, ತಿರುಳು ಏನಿದೆ.....

Mr. SPEAKER.—The Hon'ble Member should talk on the amendment but not on the general principles of the Bill.

ಶ್ರೀ ವಿ. ಎಂ. ದೇವ್.—ನಾನು ಹೇಳುವುದಿಷ್ಟು. ಯಾವ ತರಹ ತೀರ್ಮಾನಕ್ಕೆ ಬಂದಿದ್ದೀರಿ ಎಂದರೆ ಪರಿಸ್ಥಿತಿಯ ಅರಿವೇ ಬಹಳ ದೂರವಾಗಿದ್ದು ತೀರ್ಮಾನಕ್ಕೆ ಬಂದಿರುವುದು ಸರಿಯಾದುದಲ್ಲ. ಅಧಿಕಾರ ವಿಕೇಂದ್ರೀಕರಣ ಎಂದು ಹೇಳುವಾಗ, ಎಲ್ಲವನ್ನೂ ಬಾಯಲ್ಲಿ ಹೇಳುತ್ತಿದ್ದೀರೇ ಹೊರತು ಕಾರ್ಯದಲ್ಲಿ ಒಂದೂ ಇಲ್ಲ. ಪಂಚಾಯಿತಿಗಳನ್ನು, ಸ್ಥಳೀಯ ಸಂಸ್ಥೆಗಳನ್ನು ಎಂದಾದರೂ ಹೊರಗೆ ಹಾಕಬೇಕೆಂಬ ಉದ್ದೇಶದಿಂದ ಪ್ರತಿಯೊಂದನ್ನೂ ಮಾಡುತ್ತಿದ್ದೀರೆಂದು ಕಾಣುತ್ತದೆ. ಪಂಚಾಯಿತಿಗಳು ಇರಬೇಕಾಗಿದ್ದರೆ ಪೋಲೀಸು ಪಟೇಲರ ಅಧಿಕಾರವನ್ನು ಪಂಚಾಯಿತಿ ಚೇರ್‌ಮನ್‌ಗೆ ಕೊಟ್ಟು ಅವರ ಕೈಕೆಳಗೆ ಪೋಲೀಸಿನವರು ಏಕೆ ಬರಬಾರದು? ಅದು ಯಾವುದಕ್ಕೂ ಅವಕಾಶವನ್ನೇ ಮಾಡಿಲ್ಲವೆಂದರೆ ತಮಗೆ ನಿಜವಾಗಿಯೂ ಪರಿಸ್ಥಿತಿಯ ಅರಿವು ಇಲ್ಲ, ಅಂಥ ಅರಿವಿನ ಮೇಲೆ ತೀರ್ಮಾನಕ್ಕೆ ಬಂದಿಲ್ಲ. ಈ ಅಭ್ಯಾಸವಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ನಾನು uncharitable ಆಗಿದ್ದರೆ ತಾವು ಪಂಚಾಯಿತಿ ರಾಜ್ಯವನ್ನು ತಲೆಕೆಳಕು ಮಾಡುತ್ತಿದ್ದೀರಿ ಎಂದು ಹೇಳಬಹುದಾಗಿತ್ತು. ಆದರೆ ನಾನು ಆ ರೀತಿ ಹೇಳುವುದಿಲ್ಲ. ಪೂರ್ಣವಾಗಿ ಯೋಚನೆ ಮಾಡಿ ತೀರ್ಮಾನ ಮಾಡಬೇಕಾದರೆ ಪರಿಸ್ಥಿತಿಯ ಅರಿವು ಅವಶ್ಯ. ಈ ದೃಷ್ಟಿಯಿಂದ ನಾನು ಈ ತಿದ್ದುಪಡಿಯನ್ನು ಸೂಚಿಸಿದ್ದೇನೆ.

ಪೋಲೀಸು ಖಾತೆ ಏಕೆ ಇರಬೇಕು, ಅದರ.........

Mr. SPEAKER.—I am not allowing that discussion as to whether there should or should not be Police? The Hon'ble Members must kindly confine to the point because we are hard up for time.

ಶ್ರೀ ವಿ. ಎಂ. ದೇವ್.—ನಮ್ಮ ಮಾನ್ಯ ಮಂತ್ರಿಗಳು ಈಗ ತಾನೇ ಹೇಳಿದರು. ರಾಜ್ಯವನ್ನು ಕಟ್ಟುವುದಕ್ಕೆ peace and order ಬೇಕು ಎಂದು. ಆ ದೃಷ್ಟಿಯಿಂದ ನಾವು ಯೋಚನೆ ಮಾಡಿದರೆ ಶಿಸ್ತಿನಿಂದ, ಸಂಘಟನೆಯಿಂದ ಕೆಲಸವಾಗಲಿ ಎನ್ನುವ ದೃಷ್ಟಿಯಿಂದ ಬಂದು ಕಾನೂನು ಮಾಡಬೇಕು. ಪೋಲೀಸಿನವರು ಎಲ್ಲಕ್ಕೂ ಇರಬೇಕು ಎನ್ನುವ ಪ್ರಯತ್ನವನ್ನು ಇದರಲ್ಲಿ ಮಾಡಿದ ಹಾಗೆ ನನಗೆ ಕಾಣುತ್ತದೆ.

ಇದರಲ್ಲಿ ಈಗಿನ ಪರಿಸ್ಥಿತಿಯಲ್ಲಿ ಏನು ಅನಿಸುತ್ತದೆ? ನೀವು ನಿಜವಾಗಿಯೂ ವಿಕೇಂದ್ರೀಕರಣವನ್ನು......

Mr. SPEAKER.—May I suggest that the Hon'ble Members amendments are very good and clear? By developing it, the Hon'ble member is taking away the efficacy of the argument.

ಶ್ರೀ ವಿ. ಎಂ. ದೇವ್.—ಆಡಳಿತ ಪಕ್ಷದವರು ಯಾವ ರೀತಿ ರಾಜ್ಯವಾಗಬೇಕೆಂದು ಹೇಳುತ್ತಾರೆ ಎಂಬುದನ್ನು ಯೋಚನೆಮಾಡಿ. ಆದ್ದರಿಂದ ಈಗ ಹೊಸ ತರಹ ಡಿಬೇಟ್ ಶುರುವಾಗಿದೆ. ತಾವು

ನಾನು ಹೇಳುವ ಚಿತ್ರವನ್ನು ತೆಗೆದುಕೊಂಡು ನೋಡಬೇಕೆಂದು ಕೇಳುತ್ತೇನೆ. ಪೋಲೀಸ್‌ನವರು ಜನತೆಗೆ ಸ್ನೇಹಿತರಾಗಿರಬೇಕು;? ಶಾಂತಿ ಮತ್ತು ಶಿಸ್ತಿನಿಂದ ರಾಜ್ಯ ಕಟ್ಟುವುದಕ್ಕೆ ಷುರುಮಾಡಿದಾಗ ಹಳ್ಳಿಯವರು ವಾರಕ್ಕೆ ಒಂದೆರಡು ಕ್ಲಾಸು P.C. ಇಂದ Rifle training ಕಲಿತು ಚೈನಾದವರು ನಮ್ಮ ಮೇಲೆ ಬಿದ್ದರೂ ಅವರೇ ಪುಡಿ ಪುಡಿಯಾಗುತ್ತಾರೆ; ನಮಗೆ ಯಾವ ತರಹದ ಅಪಾಯವೂ ಇಲ್ಲ. ಆದರೆ ಈಗ ಮಾಡಿರುವಂತೆ ಪೋಲೀಸಿನವರಿಗೆ ಅಧಿಕಾರ ಕೊಟ್ಟರೆ ನಿಜವಾಗಿಯೂ ನಿಮಗೆ ಪಂಚಾಯ್ತಿ ರಾಜ್ಯದಲ್ಲಿ ನಂಬಿಕೆ ಇದೆ ಎಂಬುದನ್ನು ತೋರಿಸುತ್ತದೆಯೇ ಎಂದು ಕೇಳ ಬೇಕಾಗುತ್ತದೆ? ಆ ದೃಷ್ಟಿಯಿಂದ ನಾನು ಹೇಳುವುದು ಇಷ್ಟೇ. ಪಂಚಾಯ್ತಿ ಚೇರ್ಮನ್ ಅವರನ್ನು ಪೋಲೀಸ್ ಪಟೇಲನನ್ನಾಗಿ ಮಾಡಿ ಆತನ ಕೈ ಕೆಳಗೆ ಪೋಲೀಸ್‌ನವರನ್ನು ಕೊಟ್ಟು ಅವರಿಗೆ ಕೊಡ ಬೇಕಾದ ಸಂಬಳ ಸಾರಿಗೆಗೆ ಹಣವನ್ನು ಪಂಚಾಯ್ತಿ ಚೇರ್ಮನ್ ಫಂಡ್‌ಗೆ ಕೊಟ್ಟರೆ ಆಗ ಪಂಚಾಯ್ತಿಯಲ್ಲೂ ಹಣ ಇರುತ್ತದೆ-ಬೇಕಾದ ಕೆಲಸ ಕಾರ್ಯಗಳನ್ನು ಸಹ ಮಾಡಬಹುದು. ಇಲ್ಲದೇ ಇದ್ದರೆ ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಪೋಲೀಸ್‌ನವರನ್ನು ಜಾಸ್ತಿ ಮಾಡಿಕೊಂಡು ಹಳ್ಳಿ ಹಳ್ಳಿಗೆ ಪೋಲೀಸ್‌ನವರನ್ನು ಕೊಡಿ ಎಂದರೆ ಎಲ್ಲಿಂದ ಹಣಕೊಡುವುದು? ಯೋಜನಾ ಕಾರ್ಯಗತಕ್ಕೆ ಹಣವೆಲ್ಲಿ? ನಿಮಗೆ ಸಮಾಜವಾದಿಗಳ ಸಂಪರ್ಕ ಇದೆಯೇ? ಸಮಾಜವಾದಿಯಾದ ನನ್ನಂಥವನೊಬ್ಬನನ್ನು ಕೊಂದುಹಾಕಿ ಬಚಾಯಿಸಿಕೊಳ್ಳುತ್ತೇವೆ ಎಂದರೆ......

Mr. SPEAKER.—I will not allow any of the Members to be dealt with like that. Hon'ble Members are safe in my hands.

ಶ್ರೀ ವಿ. ಎಂ. ದೇವ್.—ನಮ್ಮ ಅಧ್ಯಕ್ಷರು ನನ್ನ ಕಡೆಗೆ ಸೇರಬೇಕೆಂದರೂ ಸಾಧ್ಯವಿಲ್ಲ. ಇಂಥ ಅನಾಗರಿಕ ಕಾಡು ಮನುಷ್ಯರ ವರ್ತನೆ ಮಾಡಿದರೆ ಹೇಗೆ? ಮುಖ್ಯವಾದ ಅಂಶವೆಂದರೆ ಇದರಿಂದ ಯಾವ ಗುರಿಮುಟ್ಟುತ್ತೇವೆ ಎಂಬುದನ್ನು ತಾವು ನೋಡಿ. ನಿನ್ನೆಯ ದಿವಸ ಅಧ್ಯಕ್ಷರು ಓಟಿಗೆ ಹಾಕಿದಾಗ ಮಿನಿಸ್ಟರು ಒಬ್ಬರೇ ಐಯ್ ಎಂದರು. ಇನ್ನಾರಾದರೂ ಬಾಯಿ ಬಿಟ್ಟರೇ? ಕಾಂಗ್ರೆಸ್ ಪಾರ್ಟಿ ಬೆಂಬಲ ಇದಕ್ಕೆ ಇದೆ ಎಂದು ಹೇಳೋಣವೇ ಇಲ್ಲ ಎಂದು ಹೇಳೋಣವೇ? This Bill has not got the sanction of the congress legislative party.

Mr. SPEAKER.—If Hon'ble member is indulging in what happened the other day and wasting the time of the House; I cannot allow this.

ಶ್ರೀ ವಿ. ಎಂ. ದೇವ್.—ಇದರಿಂದ ಮನುಷ್ಯರ ಮನಸ್ಸಿನ ಮೇಲೆ ಎಂಥ ಪರಿಣಾಮವಾಗುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ತಾವು ನಿರೀಕ್ಷಿಸಬೇಕು. ಓಟಿಗೆ ಹಾಕಿದಾಗ ಕಾಂಗ್ರೆಸ್ಸಿನವರು ಇಲ್ಲಿ ಇಲ್ಲದೇ ಬಾತ್ ರೂಮಿಗಾದರೂ ಹೋದರೆ ಚೆನ್ನಾಗಿರುತ್ತದೆ ಎಂದು ನನಗೆ ಅನಿಸುತ್ತದೆ. ಆರೀತಿ ಮಾಡುವುದಕ್ಕೂ ಕೂಡ ಅವರಿಗೆ ಸಾಧ್ಯವಿಲ್ಲ ಏಕೆಂದರೆ ಅವರು ಪಾರ್ಟಿ ಶಿಸ್ತನ್ನು ಅನುಸರಿಸ ಬೇಕಾಗುತ್ತದೆ. ರಾಜಕೀಯವಾಗಿ ಇದರ ಲೆಕ್ಕಾಚಾರ ಏನಾಗುತ್ತದೆ ಎಂದರೆ ಜನತೆಯಲ್ಲಿ ಇದರಿಂದ ತುಂಬಾ ಅಶಾಂತ ಪರಿಸ್ಥಿತಿಯುಂಟಾಗುತ್ತದೆ. ಎರಡನೆಯದಾಗಿ ಇದರ ಕಾರ್ಯ ಕರ್ತೃಗಳಾದ ಗೃಹ ಮಂತ್ರಿಗಳು ಮತ್ತು ನ್ಯಾಯಾಂಗ ಮಂತ್ರಿಗಳು ಯಾರಿದ್ದಾರೆ ಇವರನ್ನು ನೋಡಿದರೆ ಇವರಿಗೆ ಜನಸಂಪರ್ಕ ಇಲ್ಲವೇನೋ ಎಂದು ಅನಿಸುತ್ತದೆ-ಈ ಕಡೆ ನೋಡಿದರೆ ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿ ಬೆಂಬಲ ಕೂಡ ಇಲ್ಲ. ಅವರೇನೋ ಕಟ್ಟು ಕಾಯಿದೆಗೆ ಒಳಪಟ್ಟು ಇವರು ಹೇಳಿದ್ದಕ್ಕೆ 'ಹೂ' ಅನ್ನುತ್ತಾ ಇದ್ದಾರೆ. ಈ ದೃಷ್ಟಿಯಿಂದ ಡಿಸಲ್ಯೂಷನ್ ಆಗುವುದಕ್ಕೆ ಇದು ಕಾರಣವಾಗುತ್ತದೆಯೇ ಹೊರತು ಸ್ವಬಲಟಿಯಿಂದ ಸಮಾಜವಾದ ತತ್ವಕ್ಕೆ, ಮೈಸೂರಿನ ನಾಯಕತ್ವಕ್ಕೆ, ಅಲ್ಲದೇ ಇಡೀ ಭಾರತಕ್ಕೇ ಇದು ಮಾದರಿಯಾಗುತ್ತದೆಯೇ ಎಂದರೆ ಇದರಲ್ಲಿ objective condition ಇದ್ದರೂ subjective condition ಇಂದ ಹಾಳು ಮಾಡುತ್ತಾ ಇದ್ದಾರೆ. ಇದನ್ನು ಜನಗಳು ಆಳವಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ನಮಸ್ಕಾರ.

Mr. SPEAKER.—Is the Hon'ble Minister accepting the amendment?

†**Sri R. M. PATIL.**—So far as the amendment is concerned, it is incongruous. If the Village Panchayet Chairman is a person who is elected from the public, such an elected person cannot be vested with these powers and as such it is incongruous and so far as the arguments advanced by my learned friend are concerned, in all humility, I must submit, Sir, everything that he said, is irrelevant.

Mr. SPEAKER.—I am putting the amendment:
The question is:

"That for clause 132 the following shall be substituted:

"The Village Police shall be under the authority of the Village Panchayat and the Chairman of the Village Panchayat shall be the Police Patel who shall work under the directions of the District Magistrate."

The amendment was negatived.

Mr. SPEAKER.—I will now put the clause to the vote of the House. The question is:

Sri V. M. DEO.—I press for a division Sir.

Mr. SPEAKER.—I have not put the question as yet.
The question is:

"That clause 132 stand part of the Bill."

The Motion was adopted.

Clause 132 was added to the Bill.

CLAUSE 133.

Sri G. V. GOWDA.—Sir, I beg to move:

"That in item (iv), between the words "police officer" and "semicolon", the words "not below the rank of a sub-inspector of police" shall be inserted."

"That in item (v) between the words, "Police Officer" and the word "information", the words, "in charge of a Police Station" shall be inserted."

Mr. SPEAKER.—Amendment, moved:

"That in item (iv), between the words "Police Officer" and "Semicolon" the words "not below the rank of a sub-inspector of police" shall be inserted."

"That in item (v), between the words "Police Officer" and the word "information", the words in charge of a Police Station" shall be inserted."

Sri G. V. GOWDA.—Sir, just now I heard that the Hon'ble Home Minister was saying that because the Village Panchayet Chairman has an elected person, he could not be vested with these powers. We do not know who is the type of person who is to be appointed as police patel. I understand that it will be a person who is held in high esteem that will be appointed as police patel. Such being the case, he is not a regularly paid servant. We cannot therefore expect him to obey and execute all orders issued to all police officers. Because as has been definied in this Bill, the police officer includes a police constable also. If it is the order of a magistrate, he is bound to obey or even if it be the orders of a police officer not below the rank of a sub-inspector, he will obey. When the police patel is a person who is expected to be a person

(SRI G. V. GOWDA)

of self-respect in the village, he should not be expected to execute and obey orders issued by the police constable. With that intention I have brought this amendment.

Secondly, item (v) of clause 133 states:

"collect and communicate to the Police Officer information affecting the public peace";

He has to collect and communicate the information leading to the commission of an offence or affecting the public peace of the villages and he has to take necessary action.

Unless this information is sent to an officer who is incharge of the police station, I do not think there will be any effect. If some information is sent to the Police patel, I do not think it will have any effect. What I want is that the information must be sent to the person who is in charge of the police station. Let the officer be even a police constable.

Sri R. M. PATIL.—These amendments are not necessary.

Mr. SPEAKER.—The question is:

"That in item (iv), between the words 'Police Officer' and 'Semicolon' the words "not below the rank of a Sub-Inspector of Police" shall be inserted."

"In item (v), between the words 'Police Officer' and the word 'information' the words 'in charge of a Police Station' shall be inserted."

The amendment was negatived.

Mr. SPEAKER.—I shall now put the clause to vote. The question is:

"That clause 133 stand part of the Bill."

The motion was adopted.

Clause 133 was added to the Bill.

Mr. SPEAKER.—The question is:

"That clauses 134 to 140, both inclusive, stand part of the Bill."

The motion was adopted.

Clauses 134 to 140, both inclusive, were added to the Bill.

Mr. SPEAKER.—For Clause 141, there is an amendment.

Sri G. V. GOWDA.—Sir, I beg to move:

"That in sub-clause (1), in line 4 for the words 'within twenty-four hours of such arrest' the words 'immediately after such arrest' shall be substituted."

Mr. SPEAKER.—Amendment moved:

"That in sub-clause (1), in line 4 for the words 'within twenty-four hours of such arrest' the words 'immediately after such arrest shall be substituted."

†Sri G. V. GOWDA.—The Hon'ble Minister knows that whenever person is arrested by a police officer, he is to be produced before a Magistrate within 24 hours. There are no two opinions so far as that statement is concerned. Here, under clause 141, even a police patel can arrest; he also countes with the picture. According to clause 141, after the arrest effected by a police patel he is being given a time of 24 hours.

"It shall be lawful for the Police Patel to arrest any person within the limits of his village, who, he may have reason to believe has committed an offence for which a Police Officer may arrest without warrant and to forward such person within twenty-four hours of such arrest, together with all articles likely to be useful as evidence to the officer in charge of the police station within whose local jurisdiction the village is situated."

The village patel after effecting the arrest can send the accused person to the Police Station within 24 hours and when is he to be produced before a Magistrate? It offends the provisions of the Criminal Procedure Code because whenever a person is arrested, he is to be produced before a Magistrate within 24 hours excluding the time needed for the journey. If you give 24 hours to the police patel and if the police officer takes another 24 hours, it violates that principle. Therefore, I am submitting, immediately after such arrest, let the police patel forward the accused person to the officer in charge of the police station and let the accused person be produced before a Magistrates within 24 hours of such arrest. With that object in view, I move the amendment. I hope the Hon'ble Minister will appreciate the intention.

Sri R. M. PATIL.—I oppose the amendment because it is not practicable.

Mr. SPEAKER.—I will put the amendment to vote. The question is:

"That in sub-clause (1), in line 4 for the words 'within twenty-four hours of such arrest' the words 'immediately after such arrest' shall be substituted."

The amendment was negatived.

Mr. SPEAKER.—I shall now put the clause to vote. The question is :

"That clause 141 stand part of the Bill."

The motion was adopted.

Clause 141 was added to the Bill.

Mr. SPEAKER.—The question is :

"That clauses 142 to 151, both inclusive, stand part of the Bill."

The motion was adopted.

Clauses 142 to 151, both inclusive, were added to the Bill.

Sri G. V. GOWDA.—I beg to move an amendment to clause 152 :

"That in sub-clause (2), the words 'even though the use of such force may involve risk of death of the worng doer or the assailant or any other person assisting such worng doer or assailant,". occurring at the end shall be deleted."

Mr. SPEAKER.—Amendment moved :

"That in sub-clause (2), the words 'even though the use of such force may involve risk of death of the worng doer or the assailant or any other person assisting such wrong doer or assailant," occurring at the end shall be deleted."

Sri G. V. GOWDA.—I under sub-clause (2) of clause 152 :

"....a Reserve Police Officer may, when there is a reasonable apprehension of assault on himself or any Reserve Police Officer or of damage or harm to any property or person which or whom it is his duty to protect, use such force to the wrong doer or assailant as may be reasonably necessary to prevent the commission of such an offence, assault or causing damage to the property-..."

Even the Hon'ble Minister knows that as a measure of self-defence, one is entitled to use such as is reasonably necessary. That is what is contemplated under the Code. Therefore. using force which is not at all reasonable, may violate this principle. With that object in view I am submitting that we should see that such force as is necessary and reasonable for the purposs of preventing the commission of an offence or doing anything wrong is taken, not force that may even be more than what is reasonably necessary. If it is reasonably necessary, let them use it. Otherwise, they should not be allowed or empowered to use such force which is not reasonably necessary.

Sri R. M. PATIL.—I am not accepting the amendment.

Mr. SPEAKER.—I am putting the amendment to vote. The question is :

"That in sub-clause (2), the words 'even though the use of such force may involve risk of death of the wrong doer or the assailant or any other person assisting such wrong doer or assailant," occurring at the end shall be deleted."

The amendment was negatived.

Mr. SPEAKER.—The question is :

"That clause 152 stand part of the Bill."

The motion was adopted

Clause 152 was added to the Bill.

Mr. SPEAKER.—The question is :

"That clauses 153 to 159, both inclusive, stand part of the Bill".

The motion was adopted.

Clauses 153 to 159, both inclusive, were added the Bill.

Mr. SPEAKER.—With regared to amendment to sub-clause (1) to clause 160, I do not think it is necessary.

Sri B. R. SUNTHANKAR.—I am not moving it.

Mr. SPEAKER.—I will put all the remaining clauses. The question is :

"That clauses 160 to 179, both inclusive, stand part of the Bill."

The motion was adopted.

Clauses 160 to 179, both inclusive, were added to the Bill.

Mr. SPEAKER.—Schedules I to IV. The question is :

"That Schedules I to IV, both inclusive stand part of the Bill."

The motion was adopted.

Schedules I to IV were added to the Bill.

Mr. SPEAKER.—With respect to the Preamble, the amendment tabled is not admissible. Clause 1, the Title and the Preamble. The question is:

"That clause 1, the Title and the Preamble stand part of the Bill."

The motion was adopted.

Clause 1, the title and the preamble were added to the Bill.

Motion to pass.

Sri R. M. PATIL.—Sir, I move;

"That the Mysore Police Bill 1962, as reported by the Joint Select Committee, and as amended, be passed."

Mr. SPEAKER.—The question is:

"That the Mysore Police Bill, 1962 as reported by the Joint Select Committee, and as amended, be passed."

The motion was adopted.

3-00 P.M.

MYSORE BHOODAN YAGNA BILL, 1963

as passed by Legislative Council

Motion to consider.

Sri M. V. KRISHNAPPA (Minister for Revenue).—Sir, I beg to move:

"That the Mysore Bhoodan Yagna Bill, 1963, as passed by the Legislative Council, be taken into consideration."

Mr. SPEAKER.—Motion moved:

"That the Mysore Bhoodan Yagna Bill, 1963, as passed by the Legislative Council, be taken into consideration."

†ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಇದೊಂದು ಬಹಳ ಉಪಯುಕ್ತವಾದ ಬಿಲ್ಲು. ಇದು ಬಹಳ ಕಾಲದ ಹಿಂದೆಯೇ ಶಾಸನವಾಗಬೇಕಾಗಿತ್ತು. ಈಗ್ಗೆ ಐದಾರು ವರ್ಷಗಳ ಹಿಂದೆಯೇ ಈ ಬಿಲ್ಲು ಬರಬೇಕಾದ ಪ್ರಮೇಯವಿತ್ತು. ಕಾರಣಾಂತರಗಳಿಂದಾಗಿ ಈ ಬಿಲ್ಲು ಆಗ ಬರಲು ಅವಕಾಶವಿಲ್ಲದೆ ಈಗ ನಮ್ಮ ಮುಂದೆ ಬಂದಿದೆ. ಈಗಾಗಲೇ ಈ ಬಿಲ್ಲು ವಿಧಾನ ಪರಿಷತ್ತಿನಲ್ಲಿ ಪಾಸಾಗಿ ಇಲ್ಲಿಗೆ ಬಂದಿದೆ. ಈ ಬಿಲ್ಲಿನ ಉದ್ದೇಶವಿಷ್ಟೇ. ಶ್ರೀ ವಿನೋಬಾಜಿಯವರ ನೇತೃತ್ವದಲ್ಲಿ ಹಿಂದೂ

(ಶ್ರೀ ಎಂ. ವಿ. ಕೃಷ್ಣಪ್ಪ)

ಸ್ಥಾನದಲೆಲ್ಲ ಈ ಭೂದಾನ ಚಳುವಳಿ ಬಹಳ ದೊಡ್ಡದಾಗಿದೆ. ಅಂತಹ ಭೂದಾನ ಯಜ್ಞಕ್ಕೆ ಅನುಕೂಲವಾಗುವಂತಹ ವಿಧೇಯಕ ಇದು. ಹಳ್ಳಿಯಲ್ಲಿ ಇದನ್ನು ಭೂದಾನದ ಹೆಗ್ಗಣ ಎಂದು ಹೇಳುತ್ತಾರೆ. ಈ ಚಳವಳಿಯ ಮೂಲಕ ಭೂ ವಿಹೀನರಿಗೆ ಲಕ್ಷಾಂತರ ಎಕರೆಗಳಷ್ಟು ಭೂಮಿ ದಾನವಾಗಿ ಬಂದು ಹಂಚಲಾಗುತ್ತಿದೆ. ನಮ್ಮ ಸಂಸ್ಥಾನದಲ್ಲಿಯೂ ಶ್ರೀಮಂತರು ಬಡವರಿಗೋಸ್ಕರ ಸುಮಾರು ೨೨-೨೩, ಸಾವಿರ ಎಕರೆಗಳಷ್ಟು ಭೂಮಿಯನ್ನು ಕೊಟ್ಟಿದ್ದಾರೆ. ಈ ಭೂಮಿಯನ್ನು ಭೂಮಿ ಇಲ್ಲದೇ ಇರುವ ಬಡ ರೈತರಿಗೆ ಕೊಟ್ಟು ಅವರು ಅದನ್ನು ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರಬರಹುದು ಎನ್ನುವ ದೃಷ್ಟಿಯಿಂದ ಈ ಬಿಲ್ಲನ್ನು ಇಲ್ಲಿ ತಂದಿದ್ದೇವೆ. ಇಂಡಿಯಾದೇಶದಲ್ಲೆಲ್ಲಾ ಶ್ರೀ ವಿನೋಬಾಜೀಯವರಿಗೆ ಲಕ್ಷಾಂತರ ಎಕರೆಗಳಷ್ಟು ಭೂಮಿಯನ್ನು ಕೊಟ್ಟಿದ್ದಾರೆ. ನಮ್ಮ ಸಂಸ್ಥಾನ ಕೊಟ್ಟಿರುವುದು ಸ್ವಲ್ಪ ಕಡಿಮೆ. ಮುಂದೆ ವಿನೋಬಾಜಿಯವರು ಬರುವ ಕಾಲಕ್ಕೆ ಇಲ್ಲಿಯೂ ಬಹಳ ಜನ ಭೂಮಿಯನ್ನು ಕೊಡಬಹುದು. ಅಲ್ಲದೆ ಇದರಿಂದ ಜನರಲ್ಲಿ ಬಹಳ ಒಳ್ಳೆಯ ಪರಿಣಾಮವುಂಟಾಗಿದೆ. ಹಿಂದೂಸ್ಥಾನದಲ್ಲೆಲ್ಲಾ "Psychological atmosphere" ಎಂದರೆ ಭೂರಹಿತರಿಗೆ ಭೂಮಿಯನ್ನು ಕೊಡಬೇಕೆನ್ನುವ ಭಾವನೆ ಜನಗಳಲ್ಲಿ ಮೂಡಿದೆ. ಹೆಚ್ಚಾಗಿ ಭೂಮಿಯನ್ನು ಹೊಂದಬಾರದು ; ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡಬೇಕು ಎನ್ನುವ ಸದ್ಭಾವನೆ ಜನಗಳಲ್ಲಿ ಬಂದಿದೆ. ವಿನೋಬಾಜೀಯವರಿಗಾಗಿ ಕೊಟ್ಟಿರುವ ಭೂಮಿ ನಮ್ಮ ರಾಜ್ಯದಲ್ಲಿ ಸುಮಾರು ೨೨ಸಾವಿರ ಎಕರೆಗಳಷ್ಟಿರಬಹುದು. ಆ ಕೆಲಸವನ್ನು ಸುಗಮ ಮಾಡುವ ದೃಷ್ಟಿಯಿಂದ ಈ ಬಿಲ್ಲನ್ನು ತಂದಿದ್ದೇವೆ. ಈ ಬಿಲ್ಲಿನ ಪ್ರಕಾರ ಭೂಮಿಯಿರುವವರು ಭೂದಾನಕ್ಕಾಗಿ ವಿನೋಬಾಜೀಯವರಿಗಾಗಲೀ ನಮ್ಮ ಸರಕಾರಕ್ಕಾಗಲೀ ಕೊಡಬಹುದು. ಯಾರಾದರೂ ಹಕ್ಕಿಲ್ಲನೇ ಬೇರೆಯವರ ಭೂಮಿಯನ್ನು ಕೊಟ್ಟಾಗ ತೊಂದರೆಯಾದರೆ ಅದರ ಮೇಲೆ ಡೆಪ್ಯೂಟೀಕಮೀಷನರಿಗೆ ಅಥವಾ ಡಿವಿಜನಲ್ ಕಮೀಷನವರಿಗೆ ಅಪೀಲು ಮಾಡಿಕೊಳ್ಳಲು ಅವಕಾಶ ಇದರಲ್ಲಿದೆ. ಮತ್ತು ಸರಕಾರದವರು ಇದಕ್ಕಾಗಿ ಒಂದು ಬೋರ್ಡನ್ನು ನೇಮಿಸಲು ಅವಕಾಶವಿದೆ, ಇದರಲ್ಲಿ. ಈ ಬೋರ್ಡಿನಲ್ಲ ನಾಲ್ಕು ಜನರಿಗಿಂತ ಕಡಿಮೆ ಇಲ್ಲದ ಹಾಗೂ ಒಂಬತ್ತು ಜನರಿಗಿಂತ ಹೆಚ್ಚಾಗಿರದ ಸದಸ್ಯರು ಇರಬಹುದು, ಹಾಗೂ ಒಬ್ಬರನ್ನು ಚೇರ್‌ಮನ್ನರನ್ನಾಗಿ ನೇಮಿಸಬಹುದು ಎಂದಿದೆ. ಇದರಲ್ಲಿ ರಾಜಕೀಯವೇನಿಲ್ಲ. ವಿನೋಬಾಜಿಯವರು ಈ ಬೋರ್ಡಿನಲ್ಲಿ ಯಾರನ್ನು ಸದಸ್ಯರನ್ನಾಗಿ ಚೇರ್ಮನ್ನರನ್ನಾಗಿ ನೇಮಿಸಬೇಕೆಂದು ಹೇಳುತ್ತಾರೋ ಅಂತಹವರನ್ನೇ ಸರಕಾರದವರು ನೇಮಕಮಾಡುತ್ತಾರೆ, ಮತ್ತು ಅವರು ಕೊಡುವ ಹೆಸರಿನ ಪಟ್ಟಿಯನ್ನೇ ಸರಕಾರ ಒಪ್ಪಿಕೊಳ್ಳಬೇಕೆಂದು ಇದರಲ್ಲಿದೆ. ಆದರೆ ಒಂದು ಗೊತ್ತಾದ ಕಾಲದಲ್ಲಿ ವಿನೋಬಾಜಿಯವರು ಈ ಬೋರ್ಡಿಗೆ ಸದಸ್ಯರನ್ನೂ ಮತ್ತು ಚೇರ್ಮನ್ನರನ್ನೂ ನೇಮಕಮಾಡದೇ ಹೋದಾಗ ಸರಕಾರದವರೇ ಈ ಬೋರ್ಡಿಗೆ ಚೇರ್ಮನ್ನರನ್ನು ಹಾಗೂ ಸದಸ್ಯರನ್ನೂ ನೇಮಕಮಾಡುತ್ತಾರೆ. ಇವರ ಅವಧಿ ನಾಲ್ಕುವರ್ಷವಿರುತ್ತವೆ. ನಾಲ್ಕುವರ್ಷಗಳಾದಮೇಲೆ ಈ ಬೋರ್ಡನ್ನು ರೀಕಾನ್ಸ್‌ಟಿಟ್ಯೂಟು ಮಾಡುತ್ತಾರೆ. ಹಾಗೂ ಈ ಬೋರ್ಡಿನ ಆಫೀಸು ಬೆಂಗಳೂರಿನಲ್ಲಿರುತ್ತದೆ. ದಾನವಾಗಿ ಕೊಡುವ ಭೂಮಿಯೆಲ್ಲಾ ಬೋರ್ಡಿನ ಮೂಲಕ ಹಂಚಲಾಗುತ್ತದೆ. ಭೂಮಿಯನ್ನು ಹಂಚುವಾಗ ರೈತರಿಂದ ಶುಲ್ಕವನ್ನು ವಸೂಲು ಮಾಡಿಕೊಳ್ಳುತ್ತಾರೆ. ಭೂಮಿಗೆ ಕಂದಾಯ ಪ್ರತಿ ಏಕರೆಗೆ ಎರಡು ರೂಪಾಯಿದ್ದರೆ ಅದರ ಜೊತೆಗೆ ಎರಡು ರೂಪಾಯಿ ಶುಲ್ಕವನ್ನು ಕೊಡಬೇಕೆಂದು ಮಾಡಲಾಗಿದೆ. ಏಕೆಂದರೆ ಬೋರ್ಡಿನ ವ್ಯವಹಾರಗಳು ನಡೆಯಲು ಈ ಶುಲ್ಕವನ್ನು ವಸೂಲುಮಾಡಲಾಗುತ್ತದೆ. ಇದರಿಂದ ಬೋರ್ಡಿಗೆ ಭೂಮಿಯನ್ನು ಹಂಚಲು ಮತ್ತು ಸಾಗುವಳಿಮಾಡಲು ಸಹಾಯಮಾಡಿದಂತಾಗುತ್ತದೆ. ಯಾರಾದರೂ ಭೂಮಿಯನ್ನು ದಾನವಾಗಿ ಕೊಟ್ಟಾಗ ಅದನ್ನು ಯಾವರೀತಿಯಾಗಿ ತೆಗೆದುಕೊಂಡು ವಿತರಣೆ ಮಾಡಬೇಕು ಎನ್ನುವ ನಿಯಮಗಳನ್ನೂ ಇದರಲ್ಲಿ ಸೇರಿಸಲಾಗಿದೆ. ಇದು ಬಹಳ ಚಿಕ್ಕ ಮಸೂದೆ. ಮಾನ್ಯ ಸದಸ್ಯರೆಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆಂದು ಭಾವಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಮಾನ್ಯ ಸಭಾಪತಿಗಳೇ, ನಮ್ಮ ಭಾರತ ದೇಶದಲ್ಲಿ ಪವಾಡ ಪುರುಷರಿಗೇನೂ ಅಭಾವವಿಲ್ಲ. ಕೆಲವರು ತಮ್ಮ ಜೀವನಕಾಲದಲ್ಲಿಯೇ ಪವಾಡ ಪುರುಷರಾಗಿ ಕಂಗೊಳಿಸುತ್ತಾರೆ. ಅಂತಹವರ ಉನ್ನತ ಗುಂಪಿಗೆ ಸೇರಿದವರು ನಮ್ಮ ವಿನೋಬಾಜೀಯವರು. ಅವರು ನಮ್ಮ ದೇಶದಲ್ಲಿ ಒಂದು ನಿಶ್ಯಬ್ಧವಾದ ಕ್ರಾಂತಿಯನ್ನುಂಟುಮಾಡುವುದಕ್ಕೋಸ್ಕರ ಸುಮಾರು ಹತ್ತುವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದಾರೆ. ಅವರಿಗೆ ಸರಕಾರದ ಪರವಾಗಿ ಒಂದು ರೀತಿ ಪುಷ್ಟೀಕರಣ ಮಾಡುವುದಕ್ಕಾಗಿ ಇಟ್ಟಿರತಕ್ಕ ಒಂದು ಪ್ರಾಮುಖ್ಯವಾದ ಹೆಜ್ಜೆಯ ರೀತಿಯಲ್ಲಿ ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಮಸೂದೆಯನ್ನು ಮೊದಲಿನಿಂದ ಕೊನೆಯವರೆಗೆ ಓದಿದಾಗ, ಹಲವಾರು ಪ್ರಸಂಗಗಳು, ತಾವೇ ತಾವಾಗಿ

ಎದ್ದು ನಿಲ್ಲುತ್ತವೆ. ಇದರಲ್ಲಿ ಬಹು ಮುಖ್ಯವಾದ ಪ್ರಸಂಗವೇನಿದೆ ಎಂದು ಹೇಳಿದರೆ ಸುಮಾರು ೧೯೫೭ನೇ ಇಸವಿಯಲ್ಲಿ ವಿನೋಬಾಜಿಯವರು ಪಾದಯಾತ್ರೆ ಮಾಡಿಕೊಂಡು ಮೈಸೂರು ಸಂಸ್ಥಾನಕ್ಕೆ ಬಂದಿದ್ದಾಗ್ಗೆ ಸುಮಾರು ಇಪ್ಪತ್ತು ಸಾವಿರ ಎಕರೆಗಳಷ್ಟು ಭೂಮಿಯನ್ನು ದಾನವಾಗಿ ಅವರಿಗೆ ಕೊಡಲಾಯಿತು. ೧೯೫೭ನೇ ಇಸವಿಯಿಂದ ೧೯೬೨ನೇ ಇಸವಿಯವರೆಗೆ, ಈ ಭೂಮಿಯನ್ನು ಯಾವ ಸಂದರ್ಭದಲ್ಲಿ ಕೊಡಲಾಯಿತು, ಆ ಭೂಮಿಯಿಂದ ಇಲ್ಲಿಯವರೆಗೆ ಉತ್ಪತ್ತಿಯಾದುದು ಎಷ್ಟು, ಭೂಮಿಯ ವಿಸ್ತೀರ್ಣವೇನು, ಭೂದಾನ ಸಂಘದವರು ಯಾವುದಾದರೂ ಭೂಮಿಯನ್ನು ಹಂಚಲು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ, ಈ ಎಲ್ಲ ಪ್ರಶ್ನೆಗಳಿಗೂ ಇದರಲ್ಲಿ ಉತ್ತರ ದೊರಕಲಿಲ್ಲ. ಈ ಪ್ರಸಂಗಗಳೆಲ್ಲವೂ ಸಾಧುವಾದವುಗಳೇ ಮತ್ತು ಈ ವಿಧೇಯಕಕ್ಕೆ ಬಹುಮಟ್ಟಿಗೆ ಸಂಬಂಧಪಟ್ಟ ಪ್ರಶ್ನೆಗಳು. ನಾವು ಈ ವಿಧೇಯಕವನ್ನು ಪಾಸು ಮಾಡಿದರೆ ಹಿಂದೆ ಏನು ಭೂಮಿ ವಿನೋಬಾಜೀಯವರಿಗೆ ಬಂತು, ಮತ್ತು ಮುಂದೆ ಭೂಮಿ ಏನು ಅವರಿಗೆ ಬರಬಹುದು, ಇವೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ವಿಧೇಯಕವನ್ನು ನೋಡಬೇಕಾಗಿದೆ. ಸಾಧಾರಣವಾಗಿ ವಿನೋಬಾಜಿಯವರ ಈ ತತ್ತ್ವ ಅಥವಾ ಈ ಸಾಧನೆ ಟೀಕಾತೀತವಾದಂತಹದು. ಭೂಮಿಯ ವಿಚಾರದಲ್ಲಿ ಒಂದು ರೀತಿ ಸುಧಾರಣೆ ಆಗಬೇಕು ಎನ್ನುವ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮಾನ್ಯ ಸಭೆಯು ಭೂ ಸುಧಾರಣಾ ಮಸೂದೆಯನ್ನು ಬಹುಮತದಿಂದ ಪಾಸು ಮಾಡಿ, ಅದಕ್ಕೆ ರಾಷ್ಟ್ರಪತಿಗಳ ಅನುಮತಿ ದೊರಕಿದರೂ, ಅದು ಜಾರಿಗೆ ಬಂದಿಲ್ಲ. ಈ ಭೂಸುಧಾರಣೆಯ ಬಗ್ಗೆ ನಮ್ಮ ಸರಕಾರ ಎಷ್ಟರಮಟ್ಟಿಗೆ ಆಸಕ್ತಿ ವಹಿಸಬೇಕೋ ಅಷ್ಟರಮಟ್ಟಿಗೆ ವಹಿಸಿಲ್ಲ, ಕರ್ತವ್ಯಲೋಪ ಮಾಡಿದ್ದಾರೆ ಎಂದು ಆಗಿಂದಾಗ್ಗೆ ಟೀಕೆ ಮಾಡುತ್ತಾ ಬಂದಿದ್ದೇವೆ. ಈ ವಿಧೇಯಕವಾದರೂ 1959ನೇ ಇಸವಿಯಲ್ಲಿ ಈ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟಿದ್ದರೂ ಅದು ಚರ್ಚೆಗೆ ಬಂದಿರುವುದು 1963ನೇ ಇಸವಿಯಲ್ಲಿ. ಇಷ್ಟು ಕಾಲ ವಿಳಂಬಮಾಡಿದುದನ್ನು ನೋಡಿದರೆ ಇದರಿಂದ ಸರಕಾರಕ್ಕೆ ಎಷ್ಟರಮಟ್ಟಿಗೆ ಈ ವಿಧೇಯಕದ ಬಗ್ಗೆ ಆಸಕ್ತಿ ಇದೆ ಎಂಬುದು ಗೊತ್ತಾಗುತ್ತದೆ. ಶ್ರೀ ವಿನೋಬಾ ಭಾವೆಯವರ ಹೆಸರನ್ನು ಉಪಯೋಗಿಸಿಕೊಂಡಿದ್ದಾರೆ. ಅವರ ಬಗ್ಗೆ ಯಾರದೂ ಭಿನ್ನಾಭಿಪ್ರಾಯವಿಲ್ಲ ಎಂದು ಮೊದಲೇ ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ನಮಗೆಲ್ಲರಿಗೂ ವಿನೋಬಾಜಿಯವರು ಗುರು ಸ್ಥಾನದಲ್ಲಿದ್ದಾರೆ. ನಾವು ಶಿಷ್ಯ ಸ್ಥಾನದಿಂದ ಅವರಿಗೆ ನಮಸ್ಕಾರ ಸಮರ್ಪಣೆ ಮಾಡುತ್ತೇವೆ. ಕಾಂಗ್ರೆಸ್ ಸರಕಾರ 15 ವರ್ಷಗಳಿಗಿಂತ ಹೆಚ್ಚಾಗಿ ರಾಜ್ಯಭಾರ ಮಾಡಿದರು ಏನನ್ನು ಸಾಧನೆ ಮಾಡಲು ವಿಫಲವಾಗಿದೆಯೋ ಅಂಥ ಕಾರ್ಯದಲ್ಲಿ ವಿನೋಬಾಜಿಯವರು ಯಾವ ಅಧಿಕಾರ ಸ್ಥಾನವಿರದಿದ್ದರೂ ಜನರ ಮನಸ್ಸಿನಲ್ಲಿ ಒಂದು ವಿಧವಾದ ಕ್ರಾಂತಿಕಾರಕ ಬದಲಾವಣೆ ಮಾಡುವುದಕ್ಕೆ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. 1960ನೆಯ ಇಸವಿಯಲ್ಲಿ ನಾನು ವಿದೇಶದಲ್ಲಿ ಇದ್ದಾಗ್ಗೆ ಶ್ರೀ ವಿನೋಬಾ ಭಾವೆಯವರು ಭಾರತದಲ್ಲಿ ಗುಂಡಾಗಳ ಜೊತೆಗೆ ಇದ್ದು ಅವರ ಮನಸ್ಸನ್ನು ಯಾವ ರೀತಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯವಾಯಿತು ಎಂಬ ಬಗ್ಗೆ ಹಲವಾರು ಸಹಸ್ರಾರು ವಿದೇಶಿಯರು ತಮ್ಮ ಮೆಚ್ಚುಗೆಯನ್ನೂ ಶ್ರೀ ವಿನೋಬಾ ಭಾವೆಯವರ ಬಗ್ಗೆ ಹೆಚ್ಚಿನ ಗೌರವ ಮಾನ್ಯತೆಗಳನ್ನು ನನ್ನ ಮುಂದೆ ವ್ಯಕ್ತಪಡಿಸಿದರು. ಈ ವಿಧೇಯಕದ ಬಗ್ಗೆ ನಾಲ್ಕು ಮಾತು ಆಡಲು ಬಯಸುತ್ತೇನೆ. ಈ ಮಸೂದೆಯಲ್ಲಿ ಬಹು ಪ್ರಾಮುಖ್ಯವಾದ ವಿಷಯ ಎಂದರೆ 3ನೇ ವಿಧಿ. ಭೂದಾನದಿಂದ ದೊರೆತ ಜಮೀನಿನ ಆಡಳಿತವನ್ನು ನಡೆಸಲು ಒಂದು ಬೋರ್ಡು ರಚನೆ ಮಾಡಬೇಕು ಮತ್ತು ಈ ಬೋರ್ಡಿನಲ್ಲಿ ನಾಲ್ಕು ಜನಕ್ಕೆ ಕಡಮೆ ಇಲ್ಲದ ಮತ್ತು ಒಂಬತ್ತು ಜನಕ್ಕೆ ಮೀರದಂತೆ ಸದಸ್ಯರನ್ನು ನಾಮಕರಣ ಮಾಡಬೇಕು. ಹಾಗು ಒಬ್ಬರು ಅಧ್ಯಕ್ಷರು ಇರಬೇಕು ಎಂಬುದನ್ನು ಈ ಸರಳವಾದ ಚಿಕ್ಕದಾದ ವಿಧಿಯಲ್ಲಿ ಅಳವಡಿಸಿದ್ದಾರೆ. ಎಲ್ಲ ಭಿನ್ನಾಭಿಪ್ರಾಯಗಳೂ ಎಲ್ಲ ವಾದಗಳೂ ಈ ಮೂರನೇ ವಿಧಿಯ ಮೇಲೆ ನಿಂತಿವೆ ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಹಿಂದೆ ಕೂಡ ಹಲವಾರು ಸಮಿತಿಗಳನ್ನು, ಬೋರ್ಡುಗಳನ್ನು ರಚನೆ ಮಾಡಿದ್ದೇವೆ. ಉದಾಹರಣೆಗಾಗಿ ಮೈಸೂರು ಖಾದಿ ಸಲಹಾ ಸಮಿತಿ ರಚನೆಯಾಗಿದೆ. ಈ ಖಾದಿ ಸಲಹಾ ಸಮಿತಿಯ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಮಾಡಿರತಕ್ಕಂಥ ಟೀಕೆಯನ್ನು ನಾವೆಲ್ಲರೂ ಕಂಡಿದ್ದೇವೆ. ಖಾದಿ ಕೂಡ ಭೂದಾನದಷ್ಟೇ ಪವಿತ್ರವಾದ ಸಂಗತಿ. ಕಾಂಗ್ರೆಸ್ ಹೊರಗಡೆ ಇರುವ ಅನೇಕರು ಕೂಡ ಖಾದಿಯ ಬಗ್ಗೆ ಮಮತೆ ಆಸಕ್ತಿ ಪೂಜ್ಯತೆಯನ್ನು ವ್ಯಕ್ತಪಡಿಸುತ್ತಾರೆ. ಇಂಥ ಖಾದಿ ಬೋರ್ಡಿನಲ್ಲಿ ಏನು ಅನಾಹುತ ನಡೆಯಿತು ಎಂಬುದನ್ನು ಕಳೆದ ಅಧಿವೇಶನದಲ್ಲಿ ಕೆಲವು ಸದಸ್ಯರು ವರ್ಣಿಸಿದ್ದಾರೆ. ಯಾವ ಕ್ಷೇತ್ರದಲ್ಲಿ ಭಿನ್ನಾಭಿಪ್ರಾಯವಿಲ್ಲವೋ, ಎರಡು ಅಭಿಪ್ರಾಯವಿಲ್ಲವೋ ಅಂಥ ಕ್ಷೇತ್ರದಲ್ಲಿ ಈ ಕಾನೂನಿನಿಂದ ಭಿನ್ನಾಭಿಪ್ರಾಯ ಉಂಟುಮಾಡಲು ಸರಕಾರ ಹೊರಟಿದ್ದಾರೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಈ ಬೋರ್ಡಿನ ರಚನೆಯ ತತ್ವವನ್ನು ವಿನೋಬಾಜಿಯವರು ಒಪ್ಪಿದ್ದಾರೆಯೋ ಇಲ್ಲವೋ ಎಂಬುದು ನಮಗೆ ತಿಳಿಯದು. ಈ ವಿಧೇಯಕಕ್ಕೆ ವಿನೋಬಾಜಿಯವರು ಆಶೀರ್ವಾದ ಮಾಡಿದ್ದಾರೆಯೋ

(ಶ್ರೀ ಎಸ್. ಎಂ. ಕೃಷ್ಣ)

ಪುಷ್ಟೀಕರಿಸಿದ್ದಾರೆಯೋ ಇಲ್ಲವೋ ಎಂಬ ವಿವರ ಕೊಡಲ್ಪಟ್ಟಿಲ್ಲ. ನಾನಾದರೂ ಹೇಳುತ್ತೇನೆ ಈ ಭೂದಾನ ತತ್ವವನ್ನು ವಿವೇಚನೆ ಮಾಡಿ ನೋಡಬೇಕು. ಇದು ಬಹು ಮುಖ್ಯವಾದುದು. ಸಮಾಜ ರಚನೆಯಲ್ಲಿ ಅಡಿಗಲ್ಲು ಇದ್ದ ಹಾಗೆ ಇದೆ. ಮನುಷ್ಯನ ಮನೋಭಾವನೆ ಬದಲಾಗಿ ಈ ಕಾರ್ಯ ನಡೆಯಬೇಕಾಗಿದೆ. ಕಾನೂನಿನ ಮೂಲಕ ಬಲವಂತದಿಂದ ಇಂಥ ಕಾರ್ಯ ಮಾಡಲು ಸಾಧ್ಯವಿಲ್ಲ. ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. ಯಾವ ರಾಜ್ಯದಲ್ಲಿ ಅದೆಷ್ಟು ಕಡಮೆ ಕಾನೂನು ಮಾಡುತ್ತಾರೆಯೋ ಅದು ಸುಖೀ ರಾಜ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಗಾಂಧೀಜಿಯವರ ಹೆಸರು ಹೇಳುವ ಕಾಂಗ್ರೆಸ್ ಸರಕಾರ ಇವೊತ್ತಿನ ದಿವಸ ಈ ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸಿ ಈ ತತ್ವಕ್ಕೆ ತಿಲಾಂಜಲಿ ಕೊಟ್ಟಿದೆಯೆಂದು ನಾನು ಆಕ್ಷೇಪಣೆ ಮಾಡುತ್ತೇನೆ. ಈ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವಿಧೇಯಕವನ್ನು ಅಭಿನಂದಿಸಬೇಕಾಗಿದೆ, ಟೀಕೆ ಮಾಡಬೇಕಾಗಿದೆ. ಆದುದರಿಂದ ಇದರಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕು. ಬೋರ್ಡ್ ರಚನೆ ಮಾಡತಕ್ಕಂಥಾದ್ದು ಕೂಡ ಮುಖ್ಯವಾದ ಪ್ರಾವಿಸೋ ಆಗಿದೆ. ನಾಮಕರಣ ಮಾಡುವುದಕ್ಕೆ ಮುಂದೆ ವಿನೋಬಾಜಿಯವರ ಪೂರ್ವ ಸಮ್ಮತಿ, ಒಪ್ಪಿಗೆ ಪಡೆಯಬೇಕು ಎಂದಿದೆ. ವಿನೋಬಾಜಿಯವರು ಆ ರೀತಿ ಸಲಹೆ ಶಿಫಾರಸು ಮಾಡಿದ್ದರೆ ಸರಿಯಾಗಿರುತ್ತದೆ. ಒಂದು ಪಕ್ಷ ಶಿಫಾರಸು ಮಾಡಲು ಅವರು ತಯಾರು ಇಲ್ಲದೇ ಹೋದರೆ ಆಗ್ಗೆ ಸರಕಾರದವರು ಏನು ಮಾಡುತ್ತಾರೆ? ಇದೊಂದು ಬಹು ಸೂಕ್ಷ್ಮವಾದ ಅಂಶವನ್ನು ಈ ಮಸೂದೆಯಲ್ಲಿ ಕಾಣಿಸಿದ್ದಾರೆ.

It is stated in the Bill as follows :—

"The Board shall be a body corporate with the name aforesaid having perpetual succession and a common seal with power..."

"The Board shall consist of a Chairman and such number of members, which shall not be less than four and more than nine, as the State Government may determine."

"provided further that if Shri Acharya Vinoba Bhave fails to nominate the Chairman or any member before the date, or any extended date, fixed in that behalf by the State Government shall appoint the Chairman or the members, as the case may be."

ನಾನು ಮೊದಲೇ ಅರಿಕೆಮಾಡಿಕೊಂಡಂತೆ, ವಿನೋಬಾಜಿಯವರು ಇಂಥವರೇ ಅಧ್ಯಕ್ಷರಾಗಲಿ, ಸದಸ್ಯರುಗಳಾಗಲಿ ಎಂದು ಶಿಫಾರಸು ಮಾಡುವುದಕ್ಕೆ ಹೇಗೆ ಸಾಧ್ಯ? ಅವರ ಕಾಲ ಬಹಳಮಟ್ಟಿಗೆ ಪ್ರೆಶಸ್, ಅದನ್ನು ಇದಕ್ಕೆ ವಿನಿಯೋಗ ಮಾಡುವುದಕ್ಕೆ ಕಾಲ ಇರುತ್ತದೆ ಎಂಬ ವಿಚಾರದಲ್ಲಿ ನನಗೆ ಸಾಕಾದಷ್ಟು ನಂಬಿಕೆ ಇಲ್ಲ. ಬೋರ್ಡನ್ನು ಮಾಡುತ್ತೀರಾ: ನಾವು ಆಗಲೆ ನಮ್ಮ ದೇಶದಲ್ಲಿ ಅಧಿಕಾರ ಸ್ಥಾನಗಳಿಗೆ ನಡೆದಿರತಕ್ಕಂಥ ದ್ವಂದ್ವಯುದ್ಧವನ್ನು ನೋಡಿದ್ದೇವೆ. ನಾನು ಮಂತ್ರಿಯಾಗಬೇಕು, ನಾನು ಉಪಮಂತ್ರಿಯಾಗಬೇಕು, ನಾನು ಯಾವುದಾದರೂ ಸಹಕಾರ ಸಂಸ್ಥೆಯ ನಿಯೋಜಿತ ಅಧ್ಯಕ್ಷನಾಗಬೇಕು, ಸೇವಕಸಮಾಜದ ಸದಸ್ಯನಾಗಿ ಮೆರೆಯಬೇಕು, ಸಣ್ಣ ಪುಟ್ಟ ಸಂಸ್ಥೆಯ ಅಧ್ಯಕ್ಷನಾಗಿರಬೇಕು, ಆಮೇಲೆ ಸರಕಾರದ ಮೇಲೆ, ದೇಶದ ಮೇಲೆ ಪ್ರಭಾವ ಬೀರುವಂಥ ಶಕ್ತಿ ನನ್ನಲ್ಲಿರಬೇಕು ಎಂಬ ದೃಷ್ಟಿಯಲ್ಲಿ ಹೊರಟಿರತಕ್ಕಂಥ ಹಲವಾರು ರಾಜಕಾರಣಗಳು ಇಂಥ ಒಂದು ಬೋರ್ಡಿನ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿರಬೇಕು ಎಂದು ಕಾತರರಾಗಿ ಮುಂದೆಬಂದು ನಿಂತಿರುತ್ತಾರೆ. ಸರಕಾರದವರಾದರೂ ಕೂಡ, ಒಂದು ಪಕ್ಷ ಅವರ ಮೇಲೆ ಒಂದು ಅವಿಶ್ವಾಸ ನಿರ್ಣಯ ಬರಲಿ, ಅಥವಾ ಪಕ್ಷದೊಳಗೆ ಏನಾದರೂ ಕಾದಾಟ ಬರಲಿ, ಆಗ ಯಾರು ಗಲಾಟೆ ಮಾಡುತ್ತಾರೆಯೋ ಯಾರು ಇವತ್ತಿನ ದಿವಸ ಸರ್ಕಾರದವರ ಜೊತೆಯಲ್ಲಿದ್ದಾರೋ ಅಥವಾ ಸರಕಾರದ ವಿರುದ್ಧವಾಗಿ ಅಸಮಧಾನ ವ್ಯಕ್ತಪಡಿಸುತ್ತಾರೋ, ಅಂಥವರಿಗೆ ಇದು ಬೇಸಿಗೆ ಕಾಲದಲ್ಲಿ ತಣ್ಣೀರು ಸಿಕ್ಕರೆ ಎಷ್ಟು ಅಪ್ಯಾಯಮಾನವೊ ಅಷ್ಟೇ ಅಪ್ಯಾಯಮಾನ. ಸರಕಾರದವರು ಇಂಥ ಒಂದು ವಿಧೇಯಕವನ್ನು

ಮಾಡುವುದರ ಮೂಲಕ ವಿನೋಬಾಜಿಯವರ ಒಂದು ತತ್ವವನ್ನು ಇವತ್ತು ಮಲಿನ ಮಾಡಿದ್ದಾರೆ ಎಂದು ಬಹು ಸಂಕಟದಿಂದ ಹೇಳಬೇಕಾಗಿದೆ.

ಸ್ವಾಮಿ, ಇನ್ನು ಒಂದು ಕಡೆಯಿಂದ ಈ ವಿಚಾರದಲ್ಲಿ ಜಮೀನನ್ನು ಕೊಟ್ಟರತಕ್ಕಂಥ ಜನರೆಲ್ಲರೂ ಕೂಡ ಅಭಿನಂದರಿಗೆ ಅರ್ಹರಾದ ಜನ. ಕೆಲವು ಕಡೆ ಒಂದು ಇಂಥದೆ ಯಜ್ಞ ನಡೆಯಿತು; ಶ್ರೀ ಹನುಮಂತಯ್ಯನವರು ಅದನ್ನು ಯಜ್ಞ ಎಂದು ಕರೆಯಲಿಲ್ಲ, ಒಂದು ಮಿಷನ್ ಎಂದು ಕರೆದರು; ಅವರು ಮೈಸೂರಿನ ವಿನೋಬಾಜಿ ಆಗಬೇಕೆಂದಿದ್ದರು. ತಾವು ಒಬ್ಬರೇ ಏಕೆ ಆಗಬೇಕು, ತಮ್ಮ ಜೊತೆಯಲ್ಲಿರುವವರು ಮತ್ತು ಮಂತ್ರಿಗಳು ವಿನೋಬಾಜಿಯವರಾಗಬೇಕು ಎನ್ನುವ ದೃಷ್ಟಿಯಿಂದ 'Bhoodan for Vidyadan' ಎಂಬ ಒಂದು ಮಂತ್ರವನ್ನು ಉಚ್ಚರಿಸಿಕೊಂಡು ಹೊರಟರು. ನಮಗೆ ಗೊತ್ತಿರುವಹಾಗೆ ಹತ್ತಾರು ಸಹಸ್ರಾರು ಎಕರೆಗಳು ಕೂಡ ಹನುಮಂತಯ್ಯನವರ "ಭೂದಾನ ವಿದ್ಯಾದಾನ ಯಜ್ಞಕ್ಕೆ" ಸಂಬಂಧಪಟ್ಟ ಹಾಗೆ ಶೇಖರಿಸಲ್ಪಟ್ಟವು. ಇವತ್ತು ಅವತ್ತು ತೆಗೆದುಕೊಂಡ ಭೂದಾನ ವಿದ್ಯಾದಾನವೆಲ್ಲವೂ ಏನಾದುವು ? ಶಾಲೆಗಳಿಗೆ ಅವು ಸಂದಾಯವಾದುವೆ, ಶಾಲೆಗಳ ಹೆಸರಿಗೆ ಆ ಜಮೀನುಗಳು ವರ್ಗಾಯಿಸಲ್ಪಟ್ಟವೇ—ಇವೆಲ್ಲವೂ ಕೂಡ ನಮ್ಮ ಮುಂದೆ ಇವೆ. ಏನಾದರೂ ಒಂದು ವಿಧೇಯಕವನ್ನು ಮಾಡ ಹೊರಟರೆ ಅದರಿಂದ ನೇರವಾಗಿ ಜನರಿಗೆ ಅನುಕೂಲವಾಗಬೇಕು ಮತ್ತು ನಾವು ಏನನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊರಟಿದ್ದೇವೆಯೊ, ಯಾವ ಧ್ಯೇಯವನ್ನು, ಉದ್ದೇಶವನ್ನು ಸಾರ್ಥಕಗೊಳಿಸಬೇಕೆಂದಿದ್ದೇವೆಯೋ ಅವು ಈ ಒಂದು ವಿಧೇಯಕದಿಂದ ಸಾಧನೆಯಾಗಬೇಕು. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಹನುಮಂತಯ್ಯನವರು ಯಾವುದೋ ಒಂದು ಜಿಲ್ಲೆಗೆ ಪ್ರವಾಸ ಹೋದಾಗ, ಅವರ ಹಿಂದೆ ಯಥಾಪ್ರಕಾರ ಆ ಜಿಲ್ಲಾಧಿಕಾರಿಗಳೂ ಮತ್ತಿತರ ವಂದಿಮಾಗಧರು ಹೊರಟರು. ಅವತ್ತು ಒಂದು ಹಳ್ಳಿಗೆ ಹೋದಾಗ, ಜನತೆ ಜಮೀನು ಕೊಡಬೇಕೆಂದು ಹೇಳಿದರು. ಮಾಜಿ ಶಾಸನ ಸಭಾಸದಸ್ಯರೊಬ್ಬರು ತಾವು 25 ಎಕರೆಯನ್ನು ಭೂದಾನ ಯಜ್ಞಕ್ಕೆ ಕೊಡುತ್ತೇವೆಂದು ಹೇಳಿದರು. ಈ ವಾಗ್ದಾನವನ್ನು ಕೇಳಿದ ಮಿಕ್ಕವರು ಅವರ ಬಾಯಿನ ಮೇಲೆ ಬೆರಳಿಟ್ಟುಕೊಂಡರು. ಏಕೆಂದರೆ 25 ಎಕರೆ ಜಮೀನನ್ನು ಎಷ್ಟು ಧೈರ್ಯದಿಂದ ಕೊಡುತ್ತೇನೆಂಥ ಹೇಗೆ ಹೇಳಿದರು ಎಂದು. ಅವರನ್ನೇ ಆಗ ಯಾರೋ ಒಬ್ಬರು ಹೇಗೆ ಕೊಡುತ್ತೀರ ಎಂದು ಕೇಳಿದರು. ಅದಕ್ಕೆ ಅವರು 25 ಎಕರೆ ಜಮೀನಿಗೆ ದರಖಾಸ್ತು ಹಾಕಿದ್ದೇನೆ, ಕೇಳಿದವರು ಬೇಕಾದರೆ ಅದನ್ನೇ ಕನ್ವರ್ಟ್ ಮಾಡಿಕೊಳ್ಳಲಿ ಎಂದು ಹೇಳಿದರು. ಈ ಪರಿಸ್ಥಿತಿ ಕಲ್ಪಿಸಿದರೇ ಈ ದಾನಗಳಲ್ಲಿ ಎಷ್ಟು ವಿನೋಬಾಜಿಯವರಿಗೆ ತಲುಪಿದೆ ಎನ್ನುವುದನ್ನು ಕೂಡ ನಾವು ವಿಮರ್ಶೆ ಮಾಡಬೇಕಾಗಿದೆ. ನನಗೆ ತಿಳಿದಮಟ್ಟಿಗೆ ಕೆಲವುಕಡೆ ಜನ ಬಂಜರು ಭೂಮಿಯನ್ನು ಕೂಡ ಕೊಟ್ಟಿದ್ದಾರೆ. ಆದರೂ ಅವರು ಅಭಿನಂದನೆಗೆ ಅರ್ಹರು; ಏಕೆಂದರೆ ಅಷ್ಟರಮಟ್ಟಿಗಾದರೂ 25 ಎಕರೆಯನ್ನು ಕಡಮೆಯಾದರೂ ಮಾಡಿಕೊಂಡು ದೊಡ್ಡ ಜಮೀನುದಾರರು ಸಣ್ಣ ಜಮೀನುದಾರರಾಗುವುದಕ್ಕೆ ಒಪ್ಪಿಕೊಂಡರಲ್ಲ ; ಇಷ್ಟರಮಟ್ಟಿಗೆ ಸುಧಾರಣೆ ನಮ್ಮ ದೇಶದಲ್ಲಿ ನಡೆಯಿತು ಅನ್ನುವುದಾದರೂ ಕೂಡ ಸಮಾಧಾನವನ್ನು ಪಡೆದುಕೊಳ್ಳತಕ್ಕ ವಿಷಯ ! ಇಂಥ ಕೆಲಸಗಳು ಈ ಭೂದಾನದ ವಿಷಯದಲ್ಲಿ ಹಿಂದೆ ನಡೆದಿವೆ. ಇನ್ನು ಮುಂದಕ್ಕೂ ಇವು ನಡೆಯಲಿಕ್ಕೆ ಸಾಕು. ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಈ ವಿಧೇಯಕವನ್ನು ಚರ್ಚೆ ಮಾಡಬೇಕಾಗಿದೆ.

ಈ ಮೂರನೆಯ ಪ್ರಕರಣದಲ್ಲಿ ಏನು ಒಂದು ಸಮಿತಿಯನ್ನು ಮಾಡಬೇಕೆಂದು ಹೊರಟಿದ್ದೀರೋ ಅದು ತಿಳಿಸಿದಷ್ಟು ಸುಲಭವಾದ ಪ್ರಕರಣವಲ್ಲ. ಈ ಪ್ರಕರಣದ ಬಗ್ಗೆ ನಾವು ಇವತ್ತು ಪುನರ್ವಿಮರ್ಶೆ ಮಾಡಬೇಕಾಗಿದೆ. ನಾಲ್ಕು ಜನ ಏತಕ್ಕೆ ಬೇಕು ಅಥವಾ 9 ಜನರನ್ನು ತೆಗೆದುಕೊಳ್ಳಲು ಏಕೆ ಅವಕಾಶವನ್ನು ಇದರಲ್ಲಿ ಮಾಡಿಕೊಟ್ಟಿದೆ ಅನ್ನುವ ಬಗ್ಗೆ ಮಾನ್ಯ ಸಚಿವರು ಈ ಸಭೆಗೆ ಸಾಕಾದಷ್ಟು ಸಮಜಾಯಿಷಿಯನ್ನು ಕೊಡಬೇಕಾಗುತ್ತದೆ. ಈ ಅಧ್ಯಕ್ಷರಿಗೆ, ಪಾಪ, ಬೆಂಗಳೂರಿನಲ್ಲಿ ಆಫೀಸು ಬೇಕು. ಅಧ್ಯಕ್ಷರಿಗೆ ಬೆಂಗಳೂರಿನಲ್ಲಿ ಆಫೀಸು ಮಾಡಿದರೆ ಅವರಿಗೆ ಬೆಂಗಳೂರಿನಲ್ಲಿ ಬಂಗಲೆ ಸಹ ಬೇಕು. ಕೆಲವು ಮಂತ್ರಿಗಳಿಗೆ ಕೊಟ್ಟರತಕ್ಕಂಥ ಬಂಗಲೆ ಕೊಡದೆಹೋದರೂ, ಲೆಜಿಸ್ಲೇಟರ್ ಹೋಮಿನಲ್ಲಿಯಾದರೂ ಒಂದು ರೂಮನ್ನು ಕೊಡಬೇಕಾಗುತ್ತದೆ. ಏಕೆಂದರೆ ಅವರಿಗೂ ಸಂಸಾರ ಇರುತ್ತದೆ, ಅದು ಸಾಧು ಸಮಾಜವಲ್ಲ. ಅವರ ಸಂಸಾರ, ಅವರ ಮಕ್ಕಳ ವಿದ್ಯಾಭ್ಯಾಸ ಇವೆಲ್ಲಾ ನಡೆಯಬೇಕಾಗುತ್ತದೆ. ಈಗ ಬೇಕಾದಷ್ಟು ಸಮಿತಿಯ ಅಧ್ಯಕ್ಷರಿಗೆ ನಾವು ಆ ರೀತಿಯ ಅವಕಾಶಗಳನ್ನು ಮಾಡಿಕೊಟ್ಟಿದ್ದೇವೆ ; ಅದು ಈ ಸಭೆಯಲ್ಲಿ ಬಹಳಮಟ್ಟಿಗೆ ಟೀಕೆಗೆ ಬಂದಿದೆ. ಮತ್ತು ಅವರಿಗೆ ಆನರೋರಿಯಮ್ ಕೊಡಬೇಕಾಗುತ್ತದೆ. ಈಗ ಕೆಲವು ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ, ಅಪೆಕ್ಸ್ ಬ್ಯಾಂಕಿನಲ್ಲಿ, ಲ್ಯಾಂಡ್ ಮಾರ್ಟಿಗೇಜ್ ಬ್ಯಾಂಕಿನಲ್ಲಿ, ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಅಧ್ಯಕ್ಷರಿಗೆ ಸಂಬಳ ಕೊಡುತ್ತಾ ಇಲ್ಲ. ಈ ಎಲ್ಲಾ ಅಧ್ಯಕ್ಷರುಗಳು ಸಹಕಾರ ಕ್ಷೇತ್ರದಲ್ಲಿ ಒಳ್ಳೆಯ ಜ್ಞಾನವನ್ನು ಸಂಪಾದನೆ ಮಾಡಿದ್ದಾರೆ, ಸಹಕಾರ ಕ್ಷೇತ್ರದಲ್ಲಿ ಒಳ್ಳೆಯ ಅನುಭವ ಪಡೆದುಕೊಂಡಿದ್ದಾರೆ. ಆ ಅನುಭವ ಇರುವುದರಿಂದಲೇ ಅವರಿಗೆ ಆಡಳಿತ ಜವಾಬ್ದಾರಿಗಳನ್ನು

(ಶ್ರೀ ಎಸ್. ಎಂ. ಕೃಷ್ಣ)

ಒದಗಿಸಿದೆ. ಆ ಜವಾಬ್ದಾರಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವುದಕ್ಕೋಸ್ಕರವಾಗಿ ಈ ಆನರೋರಿಯಮ್ ಕೊಡಬೇಕಾಗುತ್ತದೆ. ಅವರಿಗೆ ಓಡಾಡುವುದಕ್ಕೆ ಕನ್‌ವೆಯನ್ಸ್ ಅಲೋ ಯನ್ಸ್ ಕೊಡುತ್ತಿದೆ— ಬಹುಶಃ 450 ರೂಪಾಯಿ ಕೊಡುತ್ತಿದ್ದಾರೆ. ಇವರಿಗೂ 450 ಅಥವಾ 250 ರೂಪಾಯಿ ಟಿ.ಎ. ಕೊಡಬೇಕಾಗುತ್ತದೆ. ಭೂದಾನ ಬೋರ್ಡಿನ ಅನ್ವಯ ಮೈಸೂರು ರಾಜ್ಯದಲ್ಲಿ ಎಲ್ಲಾ ದಿಕ್ಕಿನಲ್ಲಿ ಕೂಡ ಇರುತ್ತದೆ. ಚಿಕ್ಕಮಗಳೂರಿನಲ್ಲಿರುತ್ತದೆ, ಗುಲ್ಬರ್ಗದಲ್ಲಿರುತ್ತದೆ, ಮಂಡ್ಯ ಜಿಲ್ಲೆಯಲ್ಲಿ ಇರುತ್ತದೆ. ಅಧ್ಯಕ್ಷರು ಬೆಂಗಳೂರಿನಲ್ಲಿಯೆ ಕುಳಿತಿರುವುದಕ್ಕೆ ಆಗುವುದಿಲ್ಲ. ಸಂಸ್ಥಾನಾದ್ಯಂತ ಪ್ರವಾಸ ಹೋಗಬೇಕಾಗುತ್ತದೆ. ಅದಕ್ಕೋಸ್ಕರ ಈ ವಿಧೇಯಕದಲ್ಲಿ ಮುಂದೆ ಒಂದು ಸೆಕ್ಷನ್ನಿನಲ್ಲಿ ಬೋರ್ಡಿಗೆ ಬೇಕಾದಂಥ ಎಲ್ಲ ಸಿಬ್ಬಂದಿಯನ್ನು ಕೂಡ ಆ ಬೋರ್ಡು ನೇಮಿಸಿಕೊಳ್ಳಬಹುದು ಮತ್ತು ಅದಕ್ಕೆ ಬೇಕಾದ ಖರ್ಚನ್ನು ಕೂಡ ಆ ಬೋರ್ಡೆ ಸಂಪಾದನೆ ಮಾಡಿಕೊಂಡು, ಆ ಹಣದಿಂದ ಖರ್ಚು ನೀಗಿಸಿಕೊಳ್ಳಬೇಕು ಅನ ತಕ್ಕಂಥ ಮಾತನ್ನು ಕೂಡ ಕೊಟ್ಟಿದ್ದಾರೆ. ಅಂತಮೇಲೆ ಈ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಪ್ರಬಲವಾದಂಥ ಪೈಪೋಟಿ ನಡೆಯುತ್ತದೆ ಅನ್ನತಕ್ಕಂಥದ್ದನ್ನು ನಾನು ಬಹು ಚೆನ್ನಾಗಿ ಬಲ್ಲೆ. ಮಾನ್ಯ ಮಂತ್ರಿಗಳು ಇದರಿಂದಾಗಿ ಅನುಭವಿಸಬೇಕಾದ ಸಂಕಟವನ್ನು ಈಗಲೆ ನೆನೆಸಿಕೊಳ್ಳುವುದು ಒಳ್ಳೆಯದು. ಅವರು ಹುಸಿನಗೆಯನ್ನು ನಗುತ್ತಾ ಇದ್ದಾರೆ.

ಇನ್ನು ಈ ಸಲಹಾ ಸಮಿತಿ ಮತ್ತು ಅದರ ಕಾರ್ಯಕ್ಷೇತ್ರವನ್ನು ಕೂಡ ಈ ವಿಧೇಯಕದಲ್ಲಿ ನಮೂದು ಮಾಡಿದ್ದಾರೆ. ಒಂದು ಪಕ್ಷ ನಾವು ಪಡವಿರತಕ್ಕ ಭೂಮಿಯನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡುವ ದೃಷ್ಟಿಯಿಂದ, ಇಂಥ ಒಂದು ವಿಧೇಯಕದ ಮೂಲಕ ಮಾಡಬೇಕು ಎನ್ನುವ ದೃಷ್ಟಿಯಿಂದ ಇದ್ದಿದ್ದರೆ ಈ ಕಮಿಟಿಗೆ ಬದಲಾಗಿ, ಸಲಹಾ ಸಮಿತಿಗೆ ಬದಲಾಗಿ ಯಾರಾದರೂ ಒಬ್ಬ ಭೂದಾನ ಕಾರ್ಯಕರ್ತರನ್ನೊಬ್ಬರನ್ನು ಸರ್ಕಾರದವರು ಇಡೀ ಸಂಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಕನ್‌ವೀನರ್ ರೀತಿಯಲ್ಲಿ ಮಾಡಿ ಅವರ ಮೂಲಕ ಮತ್ತು ಅವರೇ ಸ್ವಂತವಾಗಿ ನೇಮಿಸಿಕೊಳ್ಳತಕ್ಕ ಸಮಿತಿಯ ಮೂಲಕ ಆಗಬಹುದಾಗಿತ್ತು ಎಂದು ನಾವಾದರೂ ಕೂಡ ಅಭಿಪ್ರಾಯ ಪಡುತ್ತೇವೆ. ವಿನೋಭಾಜಿಯವರು ಕೂಡ ಸರ್ಕಾರದ ಮೂಲಕ ಈ ಭೂಮಿಯ ವಿತರಣೆ ಮಾಡಬೇಕೆನ್ನುವ ವಿಷಯವನ್ನು ಖಂಡಿತವಾಗಿಯೂ ಒಪ್ಪುವುದಿಲ್ಲವೆನ್ನುವ ಮಾತನ್ನು ನಾವು ನೆನಪಿನಲ್ಲಿಡಬೇಕಾಗುತ್ತದೆ. ಇದು ಒಂದು ವಾಲಂಟರಿ ಮೂವ್‌ಮೆಂಟ್. ಈ ಒಂದು ಯೋಜನೆ ಕಾರ್ಯರೂಪಕ್ಕೆ ಬರಬೇಕಾದರೆ ಮತ್ತು ಯಶಸ್ವಿಯಾಗಬೇಕಾದರೆ ಭೂದಾನಕ್ಕೋಸ್ಕರ ತಮ್ಮ ಜೀವನವನ್ನೇ ದಾನ ಮಾಡಿರತಕ್ಕ ನೂರಾರು ಸಹಸ್ರಾರು ಮಂದಿ ಸಹಾಯಕರ ಮತ್ತು ಅವರ ಕಾರ್ಯತತ್ಪರತೆ ಇವುಗಳಿಂದ ಮಾತ್ರ ಈ ಕೆಲಸ ಯಶಸ್ವಿಯಾಗಬೇಕು. ಅದಿಲ್ಲದೆ ನಾವು ಕಾನೂನು ಮೂಲಕ ಕೆಲಸವನ್ನು ಸಾಧನೆ ಮಾಡುತ್ತೇವೆಂದು ಹೊರಟಿರತಕ್ಕ ರೀತಿ ನಮ್ಮೆಲ್ಲರಿಗೂ ಕೂಡ, ಕೆಲವರಿಗಂತೂ ಕೂಡ ಬಹಳ ಆಶ್ಚರ್ಯವನ್ನುಂಟುಮಾಡಿದೆ.

3-30 P.M.

11ನೆಯ ಪ್ರಕರಣದಲ್ಲಿ ಸಲಹಾ ಸಮಿತಿಗೆ ಹಣವನ್ನು ಸಂಸ್ಥಾನ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಅಥವಾ ಸ್ಥಳೀಯ ಸಂಸ್ಥೆಗಳಾಗಲೀ ಯಾರು ಕೊಟ್ಟರೂ ದಾನವಾಗಿ ಸ್ವೀಕಾರ ಮಾಡಬಹುದು ಮತ್ತು ಈ ಭೂದಾನ, ಧ್ಯೇಯ ಮತ್ತು ಉದ್ದೇಶಗಳಿಗೆ ಆ ಹಣವನ್ನು ಖರ್ಚು ಮಾಡಬಹುದು ಎಂದು ನಮೂದು ಮಾಡಿದ್ದಾರೆ. ಒಂದು ಪಕ್ಷ ಕೇಂದ್ರ ಸರ್ಕಾರವೇ ಆಗಲೀ, ರಾಜ್ಯ ಸರ್ಕಾರವೇ ಆಗಲೀ ಇದಕ್ಕೆ ಹಣವನ್ನು ಒದಗಿಸುವುದು ಬೇಡವೆನ್ನುವ ಅಭಿಪ್ರಾಯಪಟ್ಟರೆ ಅಥವಾ ಸಾಕಾದಷ್ಟು ಮಂದಿ ಸಾರ್ವಜನಿಕರು ಹಣವನ್ನು ಇದಕ್ಕೋಸ್ಕರ ವಿನಿಯೋಗಿಸುವುದಕ್ಕೆ ಮನಸ್ಸು ಮಾಡದೆ ಹೋದರೆ ಈ ಬೋರ್ಡಿನ ಗತಿ ಏನು ಎನ್ನುವುದನ್ನು ಕೂಡ ಸರ್ಕಾರದವರು ಆಲೋಚನೆ ಮಾಡಬೇಕಾಗಿದೆ.

"The Board shall have its own fund..."
ಬಹಳ ಸಂತೋಷ.

If in case it is not possible for the Board to create a fund of its own, what should be the future of this Board ? How is it possible for the Board to fulfil certain of the obligations that vest in the Board ?

ಇದನ್ನು ಕೂಡ ಸರ್ಕಾರದವರು ಯೋಚನೆ ಮಾಡುವ ರೀತಿಯಲ್ಲಿ ನನಗೆ ಕಾಣುವುದಿಲ್ಲ. ಅದಕ್ಕೆ ಯಾವಾಗ ನೀವು ಹಣವನ್ನು ಕೊಡುತ್ತೀರಿ ಆ ಹಣದ ಬಗ್ಗೆ ಸರಿಯಾದ ಲೆಕ್ಕಾಚಾರಗಳನ್ನು ಇಡುವುದಕ್ಕೆ ಸಾಕಾದಷ್ಟು ಸಿಬ್ಬಂದಿಯ ಅವಶ್ಯಕತೆ ಕೂಡ ಬಹುಮಟ್ಟಿಗೆ ಬೇಕಾಗುತ್ತದೆ. ಇಲ್ಲದೆ ಹೋದರೆ ಭೂದಾನ ಬೋರ್ಡ್ ಕೂಡ, ಖಾದಿ ಬೋರ್ಡ್ ಯಾವ ಮಾದರಿ ಹೊರಟು ಹೋಯಿತೋ ಅದೇ ಮಾದರಿಯಲ್ಲಿ ಹೋಗುವುದರಲ್ಲಿ ನನಗಂತೂ ಲೇಶ ಮಾತ್ರವೂ ಸಂಶಯವಿಲ್ಲವೆಂದು ಹೇಳುತ್ತೇನೆ. ಬಹು ವ್ಯಂಗ್ಯವಾಗಿ ಭೂದಾನ ಹೆಗ್ಗಣ ಎಂದು ಮಾನ್ಯ ಮಂತ್ರಿಗಳು ಹೇಳಿದರು......

ಶ್ರೀ ಎಂ. ವಿ. ಕೃಷ್ಣಪ್ಪ.—ರೈತ ತನ್ನ ಭಾಷೆಯಲ್ಲಿ ಸರಿಯಾಗಿ ಹೇಳುವುದಕ್ಕೆ ಬಾರದೆ ಆ ರೀತಿ ಹೇಳುತ್ತಾನೆಂದು ತಿಳಿಸಿದೆ. ಅದು ನನ್ನ ಅಭಿಪ್ರಾಯವಲ್ಲ.

ಶ್ರೀ ಎಸ್. ಎಂ. ಕೃಷ್ಣ.—ರೈತಾಪಿ ಭಾಷೆಯಲ್ಲಿ ಹಾಗೆ ಹೇಳಬಹುದು—ಮಾನ್ಯ ಸಚಿವರು ಯಾವಾಗಲೂ ರೈತಾಪಿ ಜನರನ್ನು ಪ್ರತಿನಿಧಿಸುವುದರಲ್ಲಿ ಮತ್ತು ಆ ರೈತಾಪಿ ಜನರನ್ನು ಪ್ರತಿಬಿಂಬಿಸುವುದರಲ್ಲಿ ಕೂಡ ಬಹು ಅಗ್ರಗಣ್ಯರು. ಯಜ್ಞ ಎನ್ನುವುದು ಬಹಳ ಕಷ್ಟವಾದ ಪದ. ಗೆಳೆಯ ಗೋಪಾಲಗೌಡರು ಮಾತ್ರ ಅದನ್ನು ಸರಿಯಾದ ರೀತಿಯಲ್ಲಿ ಹೇಳುವುದಕ್ಕೆ ಶಕ್ಯರು. ನಮ್ಮಲ್ಲಿ ಕೆಲವರಿಗೆ 'ಅ' ಕಾರ 'ಹ' ಕಾರಗಳನ್ನು, ಆಂಗ್ಲ ಪದವನ್ನು ಉಚ್ಚರಿಸತಕ್ಕ ನಾಲಗೆ ಕೊಂಚ ಕಷ್ಟವಾಗುತ್ತದೆ. ಅವರೂ ಆ ರೀತಿಯಲ್ಲಿ ತಪ್ಪು ಮಾಡುತ್ತಾರೆ. ಒಂದು ಪಕ್ಷ ಈ ಸಭೆಯಲ್ಲಿ ಹೇಳತಕ್ಕ ಟೀಕೆಗಳನ್ನು ನೀವು ಗಮನಿಸದೆ ಹೋದರೆ, ಈ ಭೂದಾನ ಸಮಿತಿ, ಭೂದಾನ ಬೋರ್ಡ್ ಏನಿದೆ ಅದು ಹೆಗ್ಗಣಗಳಿಗೆ ಆಶ್ರಯ ಸ್ಥಾನವಾಗಬಹುದು ಎನ್ನುವ ಶಂಕೆಯನ್ನು ಈ ದಿವಸ ನಾನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಹಿಂದೆ ನಡೆದಿರತಕ್ಕ ಕೆಲಸಕಾರ್ಯಗಳನ್ನು ನೋಡಿದರೆ, ಅದನ್ನು ಅಳತೆಗೋಲಾಗಿಟ್ಟುಕೊಂಡು ನೋಡಿದರೆ–ಯಾರೂ ಕೂಡ ಇದನ್ನು ಅನ್ಯಾಥಾ ಭಾವಿಸಬಾರದು–ಖಾದಿ ಬೋರ್ಡ್ ಮತ್ತು ಇನ್ನು ಕೆಲವು ಬೋರ್ಡ್‌ಗಳು, ನೀವೇ ಸೃಷ್ಟಿ ಮಾಡಿಸಿರತಕ್ಕ ಬೋರ್ಡ್‌ಗಳು ಇವುಗಳು ನಡೆದಿರುವ ರೀತಿನೀತಿಗಳನ್ನು ನೋಡಿದರೆ ಇದರಲ್ಲಿ ಕೂಡ ಸಾಕಾದಷ್ಟು ಸೇಫ್ಟಿ ಕ್ರಮಗಳನ್ನು ಸಕಾಲದಲ್ಲಿ ಕೈಕೊಳ್ಳದೆ ಹೋದರೆ ಈ ಬೋರ್ಡ್ ಕೂಡ ಆ ಬೋರ್ಡ್‌ಗಳಂತೆಯೇ ಬಿದ್ದು ಹೋಗಿ ಅದೇ ರೀತಿ ಇದೂ ಕೂಡ ಆಗಬಹುದು ಎನ್ನುವ ಸಂಶಯವನ್ನು ನಾನು ಮತ್ತೆ ವ್ಯಕ್ತಪಡಿಸಬೇಕಾಗಿದೆ. ಈ ದೃಷ್ಟಿಯಿಂದಲೂ ಸರ್ಕಾರದವರು ಈ ವಿಧೇಯಕದ ಬಗ್ಗೆ ಕೊಂಚ ಪುನರ್ವಿಮರ್ಶೆ ಮಾಡಬೇಕಾಗಿದೆ.

17ನೆಯ ಕ್ಲಾಜಿನಲ್ಲಿ "Disposed of Land vesting in the Board" ವಿಷಯವಿದೆ. ಇದೂ ಕೂಡ ಬಹಳ ನಾಚಿಕೆಯ ಕೆಲಸ. ಈ ವಿಧೇಯಕವನ್ನು ನಾವು ಅಂಗೀಕರಿಸುವುದರಿಂದ ಒಂದು ಜಾತಿಯ ಜನಕ್ಕೆ ಅನುಕೂಲವಾಗುತ್ತದೆ. ಒಂದು ಜಾತಿಯ ಜನ ಎಂದರೆ ಲಾಯರುಗಳು. ಅವರಿಗೆ ಕೊಂಚಮಟ್ಟಿಗೆ ಇದರಿಂದ ಅನುಕೂಲವಾಗಬಹುದೇನೋ ಎಂದು ನನಗನ್ನಿಸುತ್ತದೆ. ಬೋರ್ಡಿನವರು ಮಾಡುವ ತೀರ್ಮಾನಕ್ಕೆ ಮೊದಲು ಇಂಥ ಮನುಷ್ಯ ಈ ಜಮೀನನ್ನು ಭೂದಾನಕ್ಕೆ ಕೊಟ್ಟಿದ್ದಾನೆ, ಅವನಿಗೆ ಅರ್ಹತೆ ಇದೆಯೇ, ಅವನಿಗೆ ಹಕ್ಕಿದೆಯೇ, ಅವನಿಂದ ಸಂಪಾದನೆಯಾಗಿದೆಯೇ ಎಂಬ ಎಲ್ಲ ವಿಚಾರಗಳ ಬಗ್ಗೆ ರೆವೆನ್ಯೂ ಅಧಿಕಾರಿಯು ಒಂದು ತೀರ್ಮಾನವನ್ನು ಕೊಡುತ್ತಾನೆ. ಅದರ ಬಗ್ಗೆ ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮಿಷನರ್ ಇವರಿಗೆ ಅಪೀಲು ಹೋಗುವುದಕ್ಕೆ ಅವಕಾಶವನ್ನು ಈ ವಿಧೇಯಕದಲ್ಲಿ ಮಾಡಿಕೊಟ್ಟಿದ್ದಾರೆ. ನಾನೂ ವೃತ್ತಿಯಲ್ಲಿ ವಕೀಲ, ನನಗೂ ಕೂಡ ನಾಲ್ಕು ಕಾಸು ರೈತರಿಂದ ಸಂಪಾದನೆಯಾಗಬೇಕು; ನಾಲ್ಕಾರು ಜನ clients ಬಂದು ಅದರ ಬಗ್ಗೆ ವ್ಯವಹಾರ ನಡೆಸಬೇಕು. ಆದರೆ ಇಂಥ ಅವಕಾಶವನ್ನು ನಾವು ಲಾಯರುಗಳಿಗೆ ಮಾಡಿಕೊಡುವುದೇ ವಿನೋಭಾಜಿಯವರ ಧ್ಯೇಯವೇ, ಉದ್ದೇಶವೇ ಎನ್ನುವುದನ್ನು ಕೂಡ ನಾವು ಯೋಚನೆ ಮಾಡಬೇಕು.

ನಮ್ಮಲ್ಲಿ ಒಳಗೆ ಉಂಟಾಗಿರತಕ್ಕ ಹಲವಾರು ಅಭಿಪ್ರಾಯಗಳನ್ನು ಯಾವುದಾದರೂ ಒಂದು ರೀತಿಯಲ್ಲಿ ಪ್ರತಿಬಿಂಬಿಸುತ್ತೇವೆ. ಏನಾದರೂ ಕೆಲಸ ಮಾಡಬೇಕಾದರೂ ಸರ್ಕಾರದವರೇ ಮಾಡಬೇಕು, ಸರ್ಕಾರದ ಮುಖಾಂತರವೇ ನಡೆಯಬೇಕು ಮತ್ತು ಸರ್ಕಾರದ ಕೃಪಾ ಛತ್ರದಲ್ಲಿ ನಡೆಯಬೇಕು ಎನ್ನುವ ಮನೋಭಾವನೆ ಒಂದು ಕಾಲದಲ್ಲಿ ಈ ದೇಶದಲ್ಲಿತ್ತು. ಹಲವಾರು ಜನ ಮಂತ್ರಿಗಳು ಹಳ್ಳಿಗಾಡಿಗೆ ಹೋದಾಗ ಹೇಳುತ್ತಾರೆ: ಸರ್ಕಾರದ ಮೇಲೆ ಅವಲಂಬಿಸಿರಬಾರದು, ನಿಮ್ಮ ಕೆಲಸವನ್ನು ನೀವೇ ಮಾಡಿಕೊಳ್ಳಬೇಕು, ನಿಮ್ಮ ಕುಡಿಯುವ ನೀರಿನ ಭಾವಿಯನ್ನು ನೀವೇ ತೆಗೆಸಿಕೊಳ್ಳಿ ಎಂದು ಶ್ರೀಮಾನ್ ಪುಟ್ಟಸ್ವಾಮಿಯವರು ಹೋದ ಕಡೆಗಳಲ್ಲೆಲ್ಲಾ ಭಾಷಣ, (Interruption) ಶ್ರೀ ರೇವಣ್ಣಸಿದ್ಧಪ್ಪನವರು ಹೇಳುವಂತೆ ನಿಮ್ಮ ಗುಂಡಿಯನ್ನು ನೀವೇ ತೆಗೆಯಬೇಕು ಎಂದೂ ಹೇಳುತ್ತಾರೆ. ಈ ವಿಧೇಯಕದ ಬಗ್ಗೆಯೂ ಕೂಡ ಅದೇ ನೀಲುವನ್ನು ಏಕೆ ತೆಗೆದುಕೊಳ್ಳಲಿಲ್ಲ ಎಂದು ನಾವು ಕೇಳಬೇಕಾಗಿದೆ. ಈ ಒಂದು ಪ್ರಸ್ತಾಪದ ಬಗ್ಗೆ ನಾನು ಮತ್ತೆ ಸಚಿವರ ಗಮನವನ್ನು

(ಶ್ರೀ ಎಸ್. ಎಂ. ಕೃಷ್ಣ)

ಹೇಳುತ್ತೇನೆ. ಇಂಥ ಒಂದು ವಿಧೇಯಕವನ್ನು ವಿನೋಭಾಜಿಯವರು ಒಪ್ಪಿದ್ದಾರೆಯೇ, ವಿನೋಭಾಜಿಯವರು ಇಂಥ ವಿಧೇಯಕ ಇರಬೇಕೆಂದು ಮನ್ನಣೆ ಮಾಡಿಕೊಟ್ಟಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದರೆ ಬಹುಶಃ ಏನು ಚರ್ಚೆ ಮಾಡುವುದಕ್ಕೆ ಹೊರಟಿದ್ದೇವೆಯೋ ಆ ಚರ್ಚೆ ಸುಲಲಿತವಾಗಿರುತ್ತದೆ, ಅದು ಅರ್ಥಗರ್ಭಿತವಾಗಿರುತ್ತದೆಂದು ನಾನು ಭಾವನೆ ಮಾಡುತ್ತೇನೆ.

ಇನ್ನು ಜಮೀನನ್ನು ಹಂಚುವ ಬಗ್ಗೆ ಏಳು ದಿವಸಕ್ಕೆ ಮೊದಲು ಆ ಊರಿನಲ್ಲಿ ಡಂಗುರ ಹೊಡೆಸಬೇಕು. ಮತ್ತು ಇದೇ ರೀತಿ ಯಾವ ದಿವಸ ಈ ಭೂ ವಿತರಣೆ ನಡೆಯುತ್ತದೆಯೋ ಆವತ್ತಿನ ಬೆಳಿಗ್ಗೆಯೂ ಕೂಡ ಅಲ್ಲಿ ಒಂದು ರೀತಿ ಸಾರಿಸಿ ಆ ಊರಿನಲ್ಲಿರತಕ್ಕ ಎಲ್ಲಾ ಭೂ ವಿಹೀನರನ್ನೂ ಕೂಡ ಅಲ್ಲಿ ಜೋಡಿಸಿ ಕರೆಸಿಕೊಳ್ಳಬೇಕು.

"No allotment shall be valid unless either one-third of the total number of landless families in the village or double the number of persons to whom allotments can be made whichever is less, are present in the meeting."

ಇದರ ಸಾಧ್ಯಾಸಾಧ್ಯತೆಗಳನ್ನು ಸರ್ಕಾರದವರು ಆಲೋಚಿಸಿದ ಹಾಗೆ ಕಾಣಲಿಲ್ಲ. ಆಗ ಆ ಊರಿನಲ್ಲಿ ಎಷ್ಟು ಜನ ಭೂಮಿ ಇಲ್ಲದೇ ಇರತಕ್ಕ ಜನ ಇದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ. ಆಗ ನೀವು ಕುಟುಂಬವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಾ ಅಥವಾ ಅವಿಭಕ್ತ ಕುಟುಂಬವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೀರಾ ಅಥವಾ ಪ್ರತಿಯೊಬ್ಬನೂ ಕೂಡ ನನಗೆ ಭೂಮಿ ಇಲ್ಲ ಎನ್ನುವುದಾದರೆ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ನೂರಾರು ಜನ ಸಿಕ್ಕುತ್ತಾರೆ — ಮೈಸೂರು ರಾಜ್ಯದಲ್ಲಿ ಎಷ್ಟು ಹಳ್ಳಿಗಳಿವೆ, ಇದುವರೆಗೂ ದೊರೆಕಿಸಿಕೊಂಡಿರತಕ್ಕ 20 ಸಾವಿರ ಎಕರೆಗಳನ್ನು ಹಂಚಲು ಎಷ್ಟು ಮಟ್ಟಿಗೆ ಸಾಕಾಗುತ್ತದೆ ಎನ್ನುವುದನ್ನೂ ಕೂಡ ಆಲೋಚನೆ ಮಾಡಬೇಕಾಗಿದೆ. ಎಂದರೆ ಎಲ್ಲರಿಗೂ ಸಾಕಾಗಬೇಕೆಂಬ ನಿಯಮ ಇಲ್ಲ. ಇದು ದಾನವಾಗಿ ಬಂದಿರತಕ್ಕ ಒಂದು ವಸ್ತು ಆದ್ದರಿಂದ ಈ ರೀತಿಯಲ್ಲಿ ನೋಡಿಕೊಳ್ಳಬೇಕಾಗಿದೆ.

"ordinarily at least one third of the allotments of lands shall be in favour of members of the Scheduled Castes".

"(iv) the selection of persons to whom allotments are to be made shall be made unanimously by all the landless persons present at the meeting and if they cannot agree, by lots drawn from among persons unanimously nominated by them."

17ನೇ ಪ್ರಕರಣದಲ್ಲಿ ಏನು ನಮೂದು ಮಾಡಿದ್ದಾರೆ ಅವುಗಳೆಲ್ಲವನ್ನೂ ಕೂಡ ಕಾರ್ಯರೂಪಕ್ಕೆ ತರುವುದಕ್ಕೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಯಾರಾದರೂ ಆಲೋಚನೆ ಮಾಡಿದ್ದೀರಾ ಎಂಬ ಪ್ರಶ್ನೆಯನ್ನು ನಾವು ಕೇಳಬೇಕಾಗುತ್ತದೆ. 7 ದಿವಸಕ್ಕೆ ಮೊದಲೇ ಹೋಗಬೇಕು ಅಲ್ಲಿ ಆ ಊರಿನ ಜನರಿಗೆ ಪ್ರಚುರಪಡಿಸಬೇಕು, ಅನಂತರ ಜನಗಳಿಗೆ ಜಮೀನನ್ನು ಹಂಚಬೇಕಾದರೆ ಓಟು ತೆಗೆದುಕೊಳ್ಳಬೇಕು — ಯೂನಾನಿಮಸ್ ಆಗಿರಬೇಕು — ಅವರು ತೀರ್ಮಾನ ಮಾಡಬಹುದು. ಯಾವ ಊರಿನಲ್ಲಿ ಸರ್ವಸಮ್ಮತ ಅಭಿಪ್ರಾಯ ದೊರಕುತ್ತದೆ? ಏಕೆಂದರೆ ನಮ್ಮ ದೇಶದಲ್ಲಿ ಇವತ್ತು ಜೀವನ ರಾಜಕೀಯವಾಗಿ ಮತ್ತು ಆರ್ಥಿಕವಾಗಿ It is the survival of the fittest ಯಾರು ಬಲಾಢ್ಯನಾಗಿ ಇರುತ್ತಾನೆಯೋ ಅವನಿಗೆ ಅನುಕೂಲ. ಗಾಂಧಿಜಿಯವರು ಹೇಳಿದಂತೆ ಧರ್ಮದ ದಾರಿಯನ್ನು ಬಿಟ್ಟು ಬಹಳ ದಿವಸ ಆಯಿತು—ಒಂದು ಕೆಲಸವನ್ನು ನಡೆಸಬೇಕಾದರೆ ಒಂದು ಧ್ಯೇಯವನ್ನು ಸಾಧನೆ ಮಾಡಬೇಕಾದರೆ ಧರ್ಮದ ದಾರಿಯನ್ನು ಹಿಡಿಯಬೇಕೆಂದು ಮಹಾತ್ಮ ಗಾಂಧಿಜಿಯವರು ಉಪದೇಶ ಮಾಡಿ ಹೋದರು — ಈ ದಿವಸ ಎಷ್ಟೋ ಜನ ಧರ್ಮದ ದಾರಿಯನ್ನು ಬಿಡುವುದಕ್ಕೆ ಸಿದ್ಧವಾಗಿದ್ದೇವೆ ಎಂಬುದನ್ನು ನಾವೆಲ್ಲಾ ನೋಡಿದ್ದೇವೆ; ಕೆಲವರು ಚುನಾವಣೆಗಳಲ್ಲಿ ಭ್ರಷ್ಟಾಚಾರವನ್ನೂ ಕೂಡ ಮಾಡಿ ಈ ಸಭೆಯಲ್ಲಿ ಬಂದು ಕುಳಿತಿದ್ದಾರೆ ಎಂಬುದನ್ನು ನಾವು ಕಂಡಿದ್ದೇವೆ. ಎಂದ ಮೇಲೆ ಇವತ್ತು ನಾವು ಹಳ್ಳಿಗಳಲ್ಲಿ ಹೋದರೆ ಒಬ್ಬ ಬಡರೈತ ಎಷ್ಟುಮಟ್ಟಿಗೆ ತನ್ನ ಸರ್ವಸಮ್ಮತವಾದ ಅಭಿಪ್ರಾಯವನ್ನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು.

Sri N. HUCHAMASTI GOWDA (Chandrasekarapura).—On a point of order. ಭ್ರಷ್ಟಾಚಾರ ಮಾಡಿ ಈ ಸಭೆಯಲ್ಲಿ ಅನೇಕರು ಬಂದು ಸದಸ್ಯರಾಗಿ ಕುಳಿತಿದ್ದಾರೆ ಎಂದು ಹೇಳುವುದು ಈ ಸಭೆಯ ಗೌರವಕ್ಕೆ ತಕ್ಕುದಲ್ಲ. ಇದನ್ನು ಪ್ರೊಸೀಡಿಂಗ್ಸ್‌ನಿಂದ ತೆಗೆದು ಹಾಕುವಂತೆ ತಾವು ಅಪ್ಪಣೆ ಮಾಡಬೇಕು ಮತ್ತು ಅವರು ಅದನ್ನು ವಾಪಸು ತೆಗೆದುಕೊಳ್ಳಬೇಕು.

Mr. SPEAKER.—He says that it is unparliamentary. Does the Hon. Member say that it is parliamentary ?

Sri S. M. KRISHNA.—I submit that it is not unparliamentary.

Mr. SPEAKER.—It is vague and indefinite. It is so uncertain that it is not clear what he means by "brashtachara".

ಶ್ರೀ ಎಸ್. ಎಂ. ಕೃಷ್ಣ.—ಆದ್ದರಿಂದ ಈ ಒಂದು ರೀತಿಯಲ್ಲಿ ಚುನಾವಣೆಯನ್ನು ನಡೆಸಿದ್ದಾರೆ. ಅದಕ್ಕೇ ಈಗ ಏನು ಮಾಡಬೇಕಾಗುತ್ತದೆ ? ಭೂಮಿ ಬೇಕು ಎಂದು ಇಷ್ಟಪಟ್ಟಿರತಕ್ಕ ಜನ ಕ್ಯಾನ್‌ವಾಸ್ ಮಾಡಬೇಕಾಗುತ್ತದೆ. ನಾಳೆ ಭೂದಾನದ ಅಧ್ಯಕ್ಷರು ಬರುತ್ತಾರೆ ಆಗ ಕೇಳುತ್ತಾರೆ 'ತಿಮ್ಮಪ್ಪನಿಗೆ' ಎಷ್ಟು ಜನ ಭೂ ವಿಹೀನರು ಓಟು ಮಾಡುತ್ತೀರಿ ಎಂದು ಆಗ ನೀವೆಲ್ಲರೂ ಅವನಿಗೇ ಕೊಡಬೇಕು ಎಂದು ಹೇಳುವ ರೀತಿಯಲ್ಲಿ ಕ್ಯಾನ್‌ವಾಸ್ ನಡೆಯುತ್ತದೆ. ಹಾಗೆ ನಡೆಯುವುದಿಲ್ಲ ಎಂದು ನಾವು ಯಾರೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇಂಥ ಬ್ರಹ್ಮಾತ್ಮಕ ವಿಧಿಗಳನ್ನು ಈ ಕಾನೂನಿನಲ್ಲಿ ಏಕೆ ಸೇರಿಸಿದ್ದಾರೆ ಎಂದು ನಾನು ಮಾನ್ಯ ಸಚಿವರಿಗೆ ಪ್ರಶ್ನೆಮಾಡುತ್ತೇನೆ.

ಇನ್ನೂ ಹೊಸ ರೀತಿಯಲ್ಲಿ ಒಂದು ವ್ಯಾಖ್ಯಾನವನ್ನು 22ನೇ ಪ್ರಕರಣದಲ್ಲಿ ನೋಡುತ್ತೇವೆ. ಈಗಾಗಲೇ ನಾವು ಈ ಭೂಮಿಯನ್ನು ವಿತರಣೆ ಮಾಡತಕ್ಕ ರೀತಿ ಮತ್ತು ಉಳುವವನಿಗೇ ಭೂಮಿ ಎನ್ನತಕ್ಕ ತತ್ವವನ್ನು ಒಪ್ಪಿದ್ದೇನೆ. ಇದರಲ್ಲಿ ಈಗ ಬೇಕಾದಷ್ಟು ಜನ ಟೆನೆಂಟುಗಳನ್ನು ಸೃಷ್ಟಿ ಮಾಡಿದ್ದೀರಿ ಖಾಯಂ ಟೆನೆಂಟು ಇಂಥಾದ್ದೆಲ್ಲಾ ಇದೆ : 22ನೇ ಪ್ರಕರಣದಲ್ಲಿ ಹೊಸದೊಂದು ಟೆನೆಂಟು ಇದೆ ಅದು ಭೂ ದಾನ ಟೆನೆಂಟು :

"Any person to whom land has been granted under section 17 or is deemed to have been granted under sub-section (3) of section 18 shall be recorded as a Bhoodan tenant in the village accounts or the record of rights"

ಈ ಭೂದಾನದ ಟೆನೆಂಟನ್ನು ಸೃಷ್ಟಿ ಮಾಡತಕ್ಕ ಅವಶ್ಯಕತೆ ಏನಿತ್ತು ಎಂಬುದನ್ನೂ ಕೂಡ ಇವತ್ತು ನಾವು ಯೋಚನೆ ಮಾಡಬೇಕು.

Sri K. P. REVANASIDDAPPA (Tiptur).—On a point of order. An Honourable Minister (referring to Sri Ramakrishna Hegde) is reading a newspaper 'Veerakesari'.

Mr. SPEAKER.—I don't find any newspaper. He has got files before him.

ಶ್ರೀ ಎಸ್. ಎಂ. ಕೃಷ್ಣ.—ಭೂ ದಾನ ಟೆನೆಂಟು ಎನ್ನುವ ಈ ಹೊಸ ಜಾತಿ ಒಂದನ್ನು ಸೃಷ್ಟಿ ಮಾಡತಕ್ಕ ಅಗತ್ಯ ಇಲ್ಲ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ಒಟ್ಟಿನಲ್ಲಿ ಭೂದಾನದ ಈ ವಿಧೇಯಕ ಸಮರ್ಪಕವಾಗಿಲ್ಲ—ಇದರ ಅವಶ್ಯಕತೆ ಇವತ್ತಿನವರೆಗೆ ಕಂಡುಬರುವುದಿಲ್ಲ. ಒಂದು ಪಕ್ಷ ಇದು ಪಾಸ್ ಆಗಲೇ ಬೇಕೆನ್ನುವ ದೃಷ್ಟಿ ಮಾನ್ಯ ಸಚಿವರಲ್ಲಿ ಇರಬಹುದಾದರೆ ಇದಕ್ಕೆ ಸಾಕಾದಷ್ಟು ತಿದ್ದುಪಡಿ ಅವಶ್ಯಕವಾಗಿ ಆಗಬೇಕಾಗಿದೆ. ಮತ್ತು ನಾನು ಈ ಸಭೆಯ ಗಮನವನ್ನು ಮತ್ತು ಸಚಿವರ ಗಮನವನ್ನು ಸೆಳೆದಿರತಕ್ಕ ಹಲವು ಸ್ಪಷ್ಟ ಪ್ರಕರಣಗಳ ಬಗ್ಗೆ ಮಾನ್ಯ ಸಚಿವರು ಮತ್ತೆ ಪುನರಾಲೋಚನೆ ಮಾಡಬೇಕಾಗಿದೆ. ಈ ಕೆಲಸವನ್ನು ಯಾರು ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದಾರೆಯೋ ಅಂಥವರ ಕೈಗೆ ಬಿಟ್ಟುಕೊಟ್ಟು ಸರ್ಕಾರ ಈಗಾಗಲೇ ವಹಿಸಿರತಕ್ಕ ಜವಾಬ್ದಾರಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದರೆ ನೀವು ಸರ್ಕಾರದಲ್ಲಿ ಇದ್ದದ್ದಕೂ ಕೂಡ ಸಾರ್ಥಕವಾಗುತ್ತದೆ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಮಾನ್ಯ ಸಭಾಪತಿಗಳೇ ಇವತ್ತು ನಮ್ಮ ಮುಂದೆ ಇರುವ ಮಸೂದೆಗೆ ಬೆಂಬಲ ಕೊಡುತ್ತ ಕೆಲವು ಸೂಚನೆಗಳನ್ನು ಕೊಡಬೇಕೆಂದು ಇಷ್ಟಪಡುತ್ತೇನೆ. ಈ ಮಸೂದೆ ಆದಷ್ಟು ಬೇಗ ಆಗಬೇಕಾಗಿದ್ದರೂ ನಮ್ಮ ದೇಶದಲ್ಲಿ ಶ್ರೀ ಆಚಾರ್ಯ ವಿನೋಬಾಭಾವೆ

(ಶ್ರೀ ಎ. ಪಿ. ಅಪ್ಪಣ್ಣ)

ಯಾವರು ತಮ್ಮ ಸ್ವಪ್ರಯತ್ನದಿಂದ ಶೇಖರಣೆ ಮಾಡಿರತಕ್ಕ ಭೂಮಿಯನ್ನು ವಿತರಣೆಮಾಡುವ ಕಾರ್ಯದಲ್ಲಿ ನಾವು ಈಗಾಗಲೇ ಬಹಳ ಕಾಲವನ್ನು ವಿಳಂಬ ಮಾಡಿದ್ದೇವೆ. ಈಗ ಇದನ್ನು ಸ್ವಾಗತ ಮಾಡುವುದು ಅವಶ್ಯಕ. ಈ ಮಸೂದೆಯಲ್ಲಿರತಕ್ಕ ಕೆಲವು ಅಂಶಗಳನ್ನು ತೆಗೆದುಕೊಂಡರೆ ಇದರ ವಿತರಣೆಯ ಕಾರ್ಯ ಇನ್ನೂ ವಿಳಂಬವಾಗುವುದಕ್ಕೆ ಅವಕಾಶ ಆಗುವುದೇನೋ ಎಂಬ ಸಂಶಯಕ್ಕೆ ಶ್ರೀ ಕೃಷ್ಣ ಅವರು ಹೇಳಿದಂತೆ ಒಂದು ಅವಕಾಶವಿದೆ. ಗ್ರಾಮದಲ್ಲಿ ಯಾವನಿಗೆ ಭೂಮಿಯಿಲ್ಲವೋ ಅಂಥವನಿಗೆ ಭೂಮಿಯನ್ನು ಕೊಡಲು ಗ್ರಾಮದ ಜನರೆಲ್ಲ ಒಟ್ಟಿಗೆ ಸೇರಿ ಅವರು ಸರ್ವಾನುಮತದಿಂದ ಭೂಮಿಯನ್ನು ಹಂಚಲು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿದೆ. ಇದು ಬಹಳ ದೊಡ್ಡ ಕೆಲಸ ಇನ್ನಾದರೂ ಈ ವಿತರಣೆ ಕಾರ್ಯ ವಿಳಂಬವಾಗದಂತೆ ನಡೆಯಬೇಕಾಗಿದ್ದರೆ ಇಂಥ ಒಂದು ಇಕ್ಕಟ್ಟು ಇರಬಾರದೆಂದು ಹೇಳುತ್ತೇನೆ. ಭೂದಾನ ಯಜ್ಞ ಕಾಲದಲ್ಲಿ ಅನೇಕ ಜನ ಭೂಮಿಯನ್ನು ಕೊಡುವ ಕಾಲದಲ್ಲಿ ಆ ಭೂಮಿಯನ್ನು ಎಂಥವರಿಗೆ ಕೊಡಬೇಕು ಎಂಬುದನ್ನು ಅವರು ದಾನಪತ್ರದಲ್ಲಿ ಸೂಚಿಸಿರುತ್ತಾರೆ. ಯಾರು ಭೂಮಿಯಲ್ಲಿ ಬಹಳಕಾಲ ದುಡಿದು, ಭೂಮಿಯಿಲ್ಲದೆ ಇರುತ್ತಾನೋ ಅಂಥವನಿಗೇ ಆ ಭೂಮಿಯನ್ನು ಕೊಡಬೇಕೆಂದು ದಾನಪತ್ರದಲ್ಲಿ ತೋರಿಸಿರುತ್ತಾರೆ. ಈ ವಿಚಾರದಲ್ಲಿ ಸರ್ಕಾರ ತುಂಬ ಆಲೋಚನೆ ಮಾಡಬೇಕಾಗಿದೆ. ಆದರೆ ಈಗ ಭೂಮಿಯನ್ನು ಕಾಲವಿಳಂಬ ಮಾಡದೆ ವಿತರಣೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ನ್ಯಾಯವಾಗಿ ಯಾರು ಭೂಮಿಯಿಲ್ಲವೆ, ಬಹಳ ವರ್ಷಕಾಲ ಆ ಭೂಮಿಯಲ್ಲೇ ಕೂಲಿ ವಗೈರೆ ಕೆಲಸ ಮಾಡಿಕೊಂಡಿರುತ್ತಾನೋ ಅಂಥವನಿಗೆ ಆ ಭೂಮಿಯನ್ನು ಕೊಡುವುದು ಒಳ್ಳೆಯದು. ಇಂಥ ಒಂದು ನಿಬಂಧನೆಯಿರುವುದು ಒಳ್ಳೆಯದೆಂದು ನಾನು ಸರ್ಕಾರಕ್ಕೆ ಸೂಚಿಸಲಿಚ್ಛಿಸುತ್ತೇನೆ. ಆದರೆ ಈಗ ಭೂದಾನ ಮಂಡಲಿಯವರು ಕೊಡತಕ್ಕ ಭೂಮಿಗೆ, ಆ ಭೂಮಿಯನ್ನು ಪಡೆದವನು ಪೂರ್ಣ ಹಕ್ಕುದಾರನಾಗಿರುತ್ತಾನೆಯೇ ಎನ್ನುವುದು ಈ ಮಸೂದೆಯಿಂದ ಗೊತ್ತಾಗುತ್ತಿಲ್ಲ. ಆದರೆ ಹಾಗೆ ಭೂಮಿಯನ್ನು ಪಡೆಯತಕ್ಕ ಮನುಷ್ಯ ಯಾರಿದ್ದಾನೆ ಅವನಿಗೆ ಅದನ್ನು ಮಾರಾಟ, ದಾನ, ಇತ್ಯಾದಿ ರೀತಿಗಳಲ್ಲಿ ಪರಭಾರೆ ಮಾಡುವುದಕ್ಕೆ ಅವಕಾಶ ಕೊಡದಿರುವುದು ಒಳ್ಳೆಯದೇ ಸರಿ. ಆದರೆ ಆ ಭೂಮಿಯನ್ನು ಪಡೆಯತಕ್ಕ ವ್ಯಕ್ತಿ ಅದನ್ನು ಅಭಿವೃದ್ಧಿ ಮಾಡಿ, ಅದರಲ್ಲಿ ಹೆಚ್ಚು ಬೆಳೆ ತೆಗೆಯಬೇಕಾಗಿದ್ದರೆ ಆ ಭೂಮಿಯಮೇಲೆ ತಕಾವಿ ಇತ್ಯಾದಿ ಸಾಲಗಳನ್ನು ಪಡೆಯಲು ಆತನಿಗೆ ಅವಕಾಶವಿರಬೇಕು. ಆದರೆ ಅದಕ್ಕೆ ಈ ಮಸೂದೆಯಲ್ಲಿ ಅವಕಾಶವಿಲ್ಲವೆಂಬ ಸಂಶಯ ಉಂಟಾಗಿದೆ. ಭೂಮಿಗೆ ಒಡೆಯನಾಗತಕ್ಕವನನ್ನು ಕೇವಲ ಟೆನೆಂಟ್ ಎಂದು ಹೇಳಲಾಗಿದೆ. ಈ ದಿವಸ ಯಾರು ಭೂಮಾಲೀಕನಾಗುತ್ತಾನೋ ಅವನು ಹೆಚ್ಚು ಬೆಳೆ ಬೆಳೆಯಬೇಕೆಂಬ ಧೋರಣೆಯನ್ನು ಸರ್ಕಾರ ಹೊಂದಿದೆ. ಆದುದರಿಂದ ಆತನಿಗೆ ಸಾಲ ಎತ್ತಲು ಅವಕಾಶ ಕೊಡಬೇಕಾದ್ದು ಉಚಿತವೆಂದು ಕಾಣುತ್ತದೆ. ಅಂಥ ಒಂದು ಅವಕಾಶವಿಲ್ಲದೆ ಇದ್ದರೆ ಭೂಮಿಯನ್ನು ಕೊಟ್ಟಿದ್ದಕ್ಕೂ ಪ್ರಯೋಜನವಿಲ್ಲ ಎಂಬ ಒಂದು ಅಭಿಪ್ರಾಯವೂ ಇದೆ. ಕ್ಲಾಜ್ 22ರ ಒಳಕ್ಲಾಜ್ ಎರಡರಲ್ಲಿ ಹೇಳಿರುವುದು ಸರಿಯಾಗಿದೆ. ಆದರೆ ನಮ್ಮ ದೇಶದ ಕೆಲವು ಭಾಗದಲ್ಲಿ ಕಂದಾಯವಿಲ್ಲದ ಜಮೀನೂ ಇರುತ್ತದೆ. ಜಹಗೀರು, ಜಮಾಹಿತಿ ಇತ್ಯಾದಿ ಜಮೀನುಗಳಿಗೆ ಕಂದಾಯವಿಲ್ಲ. ಇಂಥ ಭೂಮಿಗಳನ್ನೂ ದಾನ ಕೊಟ್ಟಿದ್ದಾರೆ. ಈ ಜಮೀನುಗಳನ್ನು ಭೂ ಹೀನರಿಗೆ ಹಂಚಿದ ನಂತರ, ಆ ಜಮೀನುಗಳಿಗೆ ಕಂದಾಯ ನಿಗದಿ ಮಾಡತಕ್ಕ ಕಾಲದಲ್ಲಿ ಅಕ್ಕಪಕ್ಕದ ಕಂದಾಯದ ಜಮೀನಿಗೆ ಏನು ಕಂದಾಯ ಹಾಕಿದ್ದಾರೆ ಎಂಬುದನ್ನು ಪರಿಶೀಲಿಸಿ ಕಂದಾಯ ಹಾಕಬೇಕೆಂದು ಹೇಳುತ್ತೇನೆ.

ಇನ್ನು ಕ್ಲಾಜ್ 21 ರ ಒಳಕ್ಲಾಜ್ (2) ರಲ್ಲಿ ನಮ್ಮ ಇಂಡಿಯನ್ ಲಿಮಿಟೇಷನ್ ಆಕ್ಟ್ ಪ್ರಕಾರ ಸಿವಿಲ್ ಕೋರ್ಟುಗಳಲ್ಲಿ ಎಕ್ಸ್ ಪಾರ್ಟಿ ಡಿಕ್ರಿಯಾದರೆ ಎಷ್ಟು ಕಾಲದಲ್ಲಿ ಅದನ್ನು ಸೆಟ್ಟಸೈಡ್ ಮಾಡಬಹುದು ಎಂಬುದನ್ನು ಹೇಳಿದ್ದಾರೆ. ಕ್ಲಾಜ್ (20) ಒಳಕ್ಲಾಜ್ (2) ರಲ್ಲಿ ರೆವಿನ್ಯೂ ಅಧಿಕಾರಿಗಳ ತೀರ್ಪಿನ ಮೇಲೆ, ಯಾರಿಗಾದರೂ ಆ ಜಮೀನಿನಲ್ಲಿ ಹಕ್ಕಿದ್ದರೆ ಅಂಥವರು 6 ತಿಂಗಳೊಳಗಾಗಿ ಕೋರ್ಟಿಗೆ ಅರ್ಜಿ ಹಾಕಬಹುದೆಂದು ಹೇಳಿದ್ದಾರೆ.

4-00 P.M.

ಸಿವಿಲ್ ಕೋರ್ಟಿನಲ್ಲಿ ಇಂತಹ ಒಂದು ಆರ್ಡರನ್ನು ಮಾಡಿದರೆ ಅದನ್ನು ಸೆಟ್‌ಅಸೈಡ್ ಮಾಡಲು ಲಿಮಿಟೇಷನ್ ಆಕ್ಟಿನ ಪ್ರಕಾರ "within one month from the date of such order" ಅಪೀಲ್ ಮಾಡಬೇಕು ಎಂದಿದೆ.

ಇದರ ಬಗ್ಗೆ ಒಂದು ಉದಾಹರಣೆ ಇಲ್ಲಿ ಹೇಳಬೇಕಾಗಿದೆ. ಕೆಲವು ಜನರು ಹೇಳುತ್ತಾರೆ ಭೂದಾನ ಯಜ್ಞಕ್ಕಾಗಿ ಕೆಲವುಕಡೆ ಬಂಜರು ಜಮೀನುಗಳನ್ನು ಕೊಟ್ಟಿದ್ದಾರೆ, ಇದು ಕೂಡ ಇರಬಹುದು

ಇನ್ನೊಂದು ಸಂದರ್ಭದಲ್ಲಿ ಒಬ್ಬರು ಸೇನಾಗಡಿಯಲ್ಲಿ ಮಿಲಟರಿ ಕೆಲಸದಮೇಲೆ ಹೋಗಿರುವಾಗ ಅವರ ತಮ್ಮಂದಿರು ಅವರಿಗಿರುವ ಜಮೀನನ್ನು ಭೂದಾನಕ್ಕಾಗಿ ಕೊಟ್ಟುಬಿಡುತ್ತಾರೆ. ಅದರಮೇಲೆ ರೆವಿನ್ಯೂ ಅಧಿಕಾರಿಗಳು ಆರ್ಡರು ಮಾಡುತ್ತಾರೆ. ಅದನ್ನು ಸೆಟ್ ಸೈಡ್‌ಮಾಡಬೇಕಾದರೆ ಸಿವಿಲ್ ಕೋರ್ಟಿನಲ್ಲಿ ಲಿಮಿಟೇಷನ್ನು ಟೈಮು ಇದೆ. ಆಮೇಲೆ ಅದನ್ನು ಚಾಲೆಂಜು ಮಾಡುವುದಕ್ಕೆ ಸಾಧ್ಯವಿಲ್ಲ. ಲಿಮಿಟೇಷನ್ನು ಆಕ್ಟಿನಲ್ಲಿ "within one month from the date of such order" ಎಂದು ಕಾಲಪರಿಮಿತಿ ಇದೆ. ಇದರಮೇಲೆ ನಿರ್ಧಾರಮಾಡಲು ಒಂದು ಅವಕಾಶಮಾಡಿಕೊಟ್ಟ ಹಾಗಾಗುತ್ತದೆ.

ಕಾಲಮು 20 (2) ರಲ್ಲಿ 'within six months from the date of such order" ಎಂದಿದೆ. ಇನ್ನು ಸರಿಯಾಗಿ ಪರಿಶೀಲನೆ ಮಾಡಿ ಬದಲಾವಣೆಯನ್ನೇಕೆ ಮಾಡಬಾರದು ಎಂದು ಸರಕಾರ ಯೋಚಿಸಬೇಕು. ಈ ಶಾಸನದ ಮೇರೆಗೆ ನಾವು ಕೈಗೊಳ್ಳಬೇಕಾದ ಕಾರ್ಯ ಕೆಲಸಗಳೇನು ಎನ್ನುವುದನ್ನು ತಾವು ಯೋಚನೆ ಮಾಡಿ ವಿಚಾರವಿನಿಮಯ ಮಾಡಿ ಕಷ್ಟವಿಲ್ಲದಂತೆ ಸುಲಭವಾಗಿ ಕಡಮೆ ಕಾಲದಲ್ಲಿ ಇದನ್ನು ಹೇಗೆ ಇತ್ಯರ್ಥ ಮಾಡಬೇಕು ಎನ್ನುವುದನ್ನು ಸರಕಾರದವರು ಯೋಚಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri SANJIVANATHA IKALA (Suratkal).—If the Mysore Government is capable of anything, it is capable of piloting any number of Bills. The Bill now before this House is remarkable proof of what I said just now. I do not find any necessity of having in the statute book a law to govern the distribution of Bhoodan lands. The Bhoodan movement is a voluntary movement and it does not broke any intereference at the hands of Government.

Sri M. V. KRISHNAPPA.—On the advice of Vinobhaji we have done this.

Sri SANJEEVANATHA IKALA.—I do not think so. When some press Reports asked Vinobhaji as to whether he would welcome Governmental influence, his answer was an emphatic 'No.' He does not want Government's help. He wants the movement to be spontaneous. To say that such a person wanted the Government to come forward with a law of this kind is sheer blasphemy.........

Sri M. V. KRISHNAPPA.—Shall I show the Correspondence, if the Hon. Member does not believe the Government?

Sri SANJEEVANATHA IKALA.—I would like to see it.

Mr. SPEAKER.—It can be done later on.

Sri SANJEEVANATHA IKALA.—Government is trying to corrode into what is essentially a philosophic and philonthropic movement. All the clauses of this Bill give a hand to Government to interfere at every stage in the working of the movement. The movement had gone on well during the last 6 years without Government meddling with it. I do not know why the Government wants to put its nose at this stage. This Bill aims at the formation of a Board. Perhaps there will be some Ministers who will be shortly dislodged and they would find accommodation in the Board. That seems to be the main idea behind this Bill. The Bill provides that the Government would consult Vinoba Bhave regarding the constitution of the Board. I do not know why the Government wants to trouble Vinobhaji who is trying to be away from the doldrums of Government. Why should these malicious things be done in his name? I would like to ask the Government whether they have

(SRI SANJEEVANATHA IKALA)

his postal address because he is a man always on the move and it is imposible to find him. He will only say "Leave me alone: Do not disturb me'.

The Bill is not comprehensive and there are so many contradictory clauses. The Bhoodan movement aims at changing the social structure and the hearts of the people. But the Bill ignores these basic concepts. At every stage Government is to interfere with the spontaneous and natural urges of the people. There is no financial statement attached though there is a bald statement in clause 11 about the functions of the Board. Funds are to come by way of donation. I do not know whether the Bhoodan movement permits collection of funds. Vinobhaji had often stressed that the movement must be a 'Sampan Mukhta' and Bandan Mukhta', that is, it must be free from financial and organisational clutches. But the Bill wants to impose such clutches on the movement.

There are other clauses, which are incongruous. At one place it is said that land should be given to the landless labourers. At another place we find that land is to be given to persons whose occupation is agriculture. How can a landless man have agriculture as his occupation? He can at the utmost be a landless labourer. He would work on land but cannot be said to have agriculture as his occupation. Government perhaps wants to encroach upon the donated lands and take possession of them somehow.

In this connection I wish to say one thing. As I know, a certain phylanthropic gentleman has given nearly three to four hundred acres of land in the vicinity of Bangalore in one of the finest centres, which has immense capacity of development. If this Bill becomes an Act, the ownership of that land will go to the Board and ultimately the members of the Board, under the pretext of this clause, take away a piece of land to themselves or give the same to their near relatives. I feel that the land will be distributed amongst themselves. Under the provision of this Blll, they may claim a major portion of the Vishvaneedan centre and ultimately knock-away a great portion of the centre. So, I do not feel very happy about this Bill. In order that we shall have more time to discuss and bring in certain amendments, I wish that the Bill should be considered by a small Select Committee so that we may suggest certain major changes at that stage which may be accepted by the sponsors of the Bhoodan movement.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಬಂದಿರತಕ್ಕಂಥ ಈ ಭೂದಾನ ಯಜ್ಞ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಈ ಮಸೂದೆ 1959 ರಲ್ಲಿಯೇ ಚರ್ಚೆಗೆ ಬರಬೇಕಾಗಿತ್ತು. ತಡವಾಗಿ ಬಂದಿದ್ದರೂ ನಾವು ಈ ಮಸೂದೆಯನ್ನು ಸ್ವಾಗತಿಸಬೇಕಾಗಿದೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಮಾತನಾಡಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಂದು ಪಕ್ಷಕ್ಕೆ ಅವಕಾಶ ಕಲ್ಪಿಸಿಕೊಡುವುದರಿಂದ ಭೂದಾನ ಕಾರ್ಯ ಸರಿಯಾಗಿ ನಡೆಯುವುದಕ್ಕೆ ಅವಕಾಶವಿಲ್ಲ ಈ ಮಸೂದೆ ಸಮರ್ಪಕವಾಗಿಲ್ಲ ಎಂದು ಮುಂತಾಗಿ ಕೆಲವರು ಹೇಳಿದರು. ಕೆಲವೊಂದು ಮಾರ್ಪಾಟುಗಳನ್ನು ಸಹ ಸೂಚಿಸಿದ್ದಾರೆ. ಪೂಜ್ಯ ವಿನೋಬಾ ಭಾವೆಯವರು ಮಹಾತ್ಮಾ ಗಾಂಧಿಯವರು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದಂತೆ, ಆರ್ಥಿಕ

ರಂಗದಲ್ಲಿ ಶಾಂತಿ ಸಮಾಧಾನ ಉಂಟಾಗುವುದಕ್ಕೆ ಒಂದು ರೀತಿಯ ಕಾರ್ಯ ಚಟುವಟಿಕೆ ಪ್ರಾರಂಭಿಸಿದರು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಭೂದಾನ ಯಜ್ಞ ಪ್ರಾರಂಭ ಮಾಡಿದಾಗಿನಿಂದ ಕಳೆದ ಹತ್ತು ವರ್ಷಗಳಲ್ಲಿ ಅನೇಕ ಕಡೆ ಜನರು ಧಾರಾಳವಾಗಿ ಭೂಮಿ ಕೊಡುತ್ತಿದ್ದಾರೆ. ಯಾವ ಒತ್ತಾಯವೂ ಇಲ್ಲದೆ ಸುಮಾರು ಇಪ್ಪತ್ತು ಸಾವಿರ ಎಕರೆ ಭೂಮಿ ಬಂದಿದೆ. ನಮ್ಮ ಸುತ್ತುಮುತ್ತು ಇರತಕ್ಕಂಥ ಜನ ಸುಖವಾಗಿ ಇರಬೇಕು ಎಂಬ ಭಾವನೆಯಿಂದ ಈ ಕಾರ್ಯ ಪ್ರಾರಂಭಿಸಲಾಗಿದೆ. ಇದನ್ನು ಪ್ರೇಮದಿಂದ ಮಾಡುವುದು ಸಾಧ್ಯ ಕಾನೂನಿನಿಂದ ಮಾಡಲು ಸಾಧ್ಯವಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಈ ಮಸೂದೆಯಲ್ಲಿರುವ ಹಾಗೆ ಒಂದು ಬೋರ್ಡ್ ರಚನೆ ಮಾಡತಕ್ಕಂಥ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಿದರು. ಸರಿಯಾಗಿ ವಿತರಣೆ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ಕೆಲವು ಕಡೆ ಆ ರೀತಿ ಅನ್ಯಾಯವಾಗಿರಬಹುದು ವಿತರಣೆಯಾಗದೆ ಇರಬಹುದು. ಆದರೂ ಸರ್ವೋದಯ ಕಾರ್ಯಕ್ರಮವನ್ನು ವಿನೋಬಾ ಭಾವೆಯವರು ಸಮರ್ಪಕವಾಗಿ ಸೂಕ್ತವಾದ ರೀತಿಯಲ್ಲಿ ನಡಸಿಕೊಂಡು ಬಂದಿದ್ದಾರೆ. ಈಗ ಈ ಮಸೂದೆಯಿಂದ ಹೆಚ್ಚಿನ ನೆರವು ಬೇಕಾಗಿದೆ. ಈ ಬೋರ್ಡ್ ರಚನೆ ಮಾಡತಕ್ಕಂಥಾದ್ದು ಆವಶ್ಯಕವಾಗಿದೆ. ಪೂಜ್ಯ ವಿನೋಬಾಜೀಯವರ ಸಲಹೆಯ ಪ್ರಕಾರ ಅವರು ಹೇಳುವ ಹೆಸರುಗಳನ್ನು ತೆಗೆದುಕೊಂಡು ಸದಸ್ಯರಾಗಿ ಮಾಡಬೇಕಾಗುತ್ತದೆ. ಈ ಕಾರಣದಿಂದ ಇದರಲ್ಲಿ ಯಾವ ರಾಜಕೀಯ ಸಂಬಂಧವಿಲ್ಲ ಎನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಸರ್ವೋದಯ ಕಾರ್ಯಕರ್ತರು ಯಾವ ಪಕ್ಷಕ್ಕೆ ಸೇರಿದವರಲ್ಲ. ಆದುದರಿಂದ ನಾವು ಈ ಬೋರ್ಡಿನ ಸದಸ್ಯರ ಬಗ್ಗೆ ಭಯಪಡಬೇಕಾಗಿಲ್ಲ. ಸರ್ವ ಸಮ್ಮತಿಯಿಂದ ಇದನ್ನು ತೀರ್ಮಾನ ಮಾಡಲಾಗುವುದು. ಇನ್ನೊಂದು ವಿಚಾರ. ಈ ಮಸೂದೆಯ 14 ನೆಯ ಕಲಮಿನಲ್ಲಿ ಜಮೀನು ಯಾರಿಂದ ದಾನ ಪಡೆದಿರುತ್ತದೆಯೋ ಅವರು ಜೀವಂತ ಇರುವವರೆಗೆ ಹಕ್ಕು ತೆಗೆದುಕೊಳ್ಳಬಾರದು ಎಂದು ಈ ಕಾನೂನಿನಲ್ಲಿ ಬರೆದಿದೆ. ಯಾರೇ ಆಗಲಿ ದಾನ ಕೊಟ್ಟ ಮೇಲೆ ಆಶೆ ಬಿಟ್ಟು ತ್ಯಾಗ ಮಾಡತಕ್ಕಂಥಾ ಆವಶ್ಯಕ. ಬಂಜರು ಜಮೀನು ಸಹ ಕೊಡುವಾಗ್ಗೆ ಆಶೆ ಬಹುಮಟ್ಟಿಗೆ ಹೋಗಿರುತ್ತವೆ. ಏಕೆಂದರೆ ಅಂಥ ಜಮೀನು ಸಾಗುವಳಿಗೆ ತಯಾರಾಗುವುದಿಲ್ಲ. ಆಶೆಯನ್ನು ಹತೋಟಿಯಲ್ಲಿಡಬೇಕಾಗುತ್ತದೆ. ಎಂಥವನೇ ಜಮೀನು ಕೊಡಲಿ ಅದನ್ನು ಸಂತೋಷದಿಂದ ಸ್ವೀಕರಿಸಿ ವ್ಯವಸ್ಥೆ ಮಾ ಬೇಕಾಗುತ್ತದೆ. ಇದರಲ್ಲಿ ಯಾವ ತಪ್ಪು ಇಲ್ಲ.

ಅದರ ವಿಷಯದಲ್ಲಿ ಸಹ ಹೆಚ್ಚಿನ ಒಂದು ಅವಕಾಶವನ್ನು ಕಲ್ಪಿಸಿ, ಸಂಪತ್ತಿದಾನವನ್ನು ಪ್ರೋತ್ಸಾಹಿಸಬೇಕು. ಜಮೀನು ಇದ್ದವರು, ಸಂಪತ್ತು ಇದ್ದವರು ಕೊಡಬೇಕು. ಎಲ್ಲ ರೀತಿಯಲ್ಲಿಯೂ ತಮ್ಮ ಸ್ವಾರ್ಥವನ್ನು ಬಿಟ್ಟು ಪರರಿಗೆ ಕೊಡುವ ಅವಕಾಶಗಳನ್ನು ಕಲ್ಪಿಸಬೇಕು. ಈ ಕಾರ್ಯವನ್ನು ಭೂದಾನ ಬೋರ್ಡು ಮಾಡುವುದಾದರೆ, ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತದೆ. ಅಂಥದಕ್ಕೆ ಸರಕಾರ ಈಗ ಅವಕಾಶವನ್ನು ಕಲ್ಪಿಸಿಕೊಟ್ಟಿರತಕ್ಕಂಥದ್ದು ಬಹಳ ಸಮರ್ಪಕವಾಗಿದೆ.

ಕೊನೆಯದಾಗಿ, ಇದರಲ್ಲಿ 18ನೆಯ ಸೆಕ್ಷನಿನಲ್ಲಿ ಅಧಿಕಾರವನ್ನು ಹೆಚ್ಚಿಗೆ ರೆವಿನ್ಯೂ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ತೀರ್ಮಾನಮಾಡುವ ಅಧಿಕಾರವನ್ನು ಬೋರ್ಡಿಗಿಂತ ಹೆಚ್ಚಿಗೆ ಅವರಿಗೆ ಕೊಟ್ಟಿದ್ದಾರೆ. ಅದರ ಬದಲು ಬೋರ್ಡಿಗೇ ಅಧಿಕಾರವಿರಲಿ. ರೆವಿನ್ಯು ಅಧಿಕಾರಿಗಳ ಸಲಹೆ, ಖಾತೆ ವಿಚಾರದಲ್ಲಿ, ಹಕ್ಕು ವಿಚಾರದಲ್ಲಿ ಬೇಕಾಗುತ್ತದೆ. ಅಷ್ಟು ಮಾತ್ರ ಅಧಿಕಾರಗಳಿಂದ ತೆಗೆದುಕೊಂಡು ಮಿಕ್ಕೆಲ್ಲ ತೀರ್ಮಾನ ಮಾಡುವ ಅಧಿಕಾರವನ್ನೂ ಬೋರ್ಡಿಗೇ ವಹಿಸಬೇಕು ಏಕೆಂದರೆ ಈ ಬೋರ್ಡಿನ ತೀರ್ಮಾನ ಎಲ್ಲರ ಒಂದು ಹಿತಕ್ಕಾಗಿರುತ್ತದೆ ಮತ್ತು ಅದು ಗ್ರಾಮದಲ್ಲಿ ಸರಿಸಮಾನತೆ ಮತ್ತು ಶಾಂತಿಯನ್ನು ನೆಲಸುವ ಮಹತ್ವಪೂರ್ಣವಾದ ಕಾರ್ಯ ಚಟುವಟಿಕೆಯಲ್ಲಿ ತೊಡಗಿರುತ್ತದೆ. ಈ ಅಧಿಕಾರ ಬೋರ್ಡಿಗಿಲ್ಲದಿದ್ದರೆ ಅದು ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ.

ನಾನು ಈ ಭೂದಾನ ವಿಧೇಯಕವನ್ನು ಸ್ವಾಗತಿಸಿ, ಬೆಂಬಲ ಕೊಡುತ್ತೇನೆ ಮತ್ತು ಈ ಒಂದು ಸನ್ನಿವೇಶದಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri V. S. PATIL (Belgaum I).—Sir, this is a very strange piece of legislation that has been brought before th.s House. In the first place I should like to ask the Hon'ble Minister and his Secretariat as well as the Legal Department as to whether there is any legislation in the whole of our country or as a matter of fact in the whole world, where under statute, a particular individual has been given a particular status ? I feel

(SRI V. S. PATIL)

that the statutes or laws are meant for general application and not for a particular individual. I should like to ask the Hon'ble Minister who has been not only in this Assembly but also in the Centre as to whether he has ever come across any Bill or statute under which any particular individual was given a status that is proposed to be given in the present Bill. I understand as to why a particular individual is being given or recognised to be of a particular status under an act. After all Vinoba Bhave is an individual —he was born like any one of us and he is also liable to die. Then what is to be done with regard to the various provisions? There is no successor mentioned here.

SRI M. V. KRISHNAPPA.—"In his life-time," we have mentioned.

SRI V. S. PATIL.—After his life-time, what is to happen? are we to presume that this Bill continues, only till he is alive and after his death, it is to be wiped out? What is the intention of the Government? I should like to know whether there is any law in this world where such an individual has been given a status under any Act. That is the first point which I should like to ask.

The second point is, what is the Bhoodan movement? That is a point to be considered especially by you who are interested in the welfare of the tenants or the cultivators of the Land. This Bhoodan movement was started as we all know when Telengana was *under the control* of communists and there was some trouble regarding the land cultivators in some troubles were created. In order to counteract the communists, Vinoba Bhave came forward with the idea of Bhoodana Yagna. Sir, in a secular State like ours, when we profess to have no religion or no kind of religious influence to look after the welfare of the people in general, the basic principle must be that a man must work for his bread. We should not give much credit to these old ideas. These ideas of *dana* and living on *dana*– all these must be wiped out. We must live on our labour and on our intelligence; this kind of *dana* and living on *dana* these archaic ideas savour of old Hindu ideas and other religious precepts should not be allowed to have any sway over our feelings in piloting or controlling the affairs of a secular State. Sir, this word *dana* should have no place in any of our statutes at all. The very idea that every one must work for his bread for his maintenance is clearly wiped out by this idea of *dana*, especially this Bhoodana that is being propagated by the followers of Vinoba Bhave. We may have great respect for his knowledge, for his experience, for his sacrifices. But the ideas which he has propagated are based upon religion to which our Constitution has clearly given the go-by. Why should we encourage this idea of '*Bhoodan*' and '*Sampathi dana*' by bringing up this kind of a Bill? All sorts of things are recognised in the Bill. Now Sir, this is the second point which I should like to raise before this House.

The third point is, the basic principle of our policy, that the land must go to the tiller. The Tiller himself must be the owner of the land.

This basic principle has been accepted everywhere in our country. Even by the Congress High Command, the Planning commission, etc., etc. But here we are creating a new type of tenants who are affected by the sweet Bill of that great man or his followers. Is this proper? I should like to know from the Hon'ble Minister whether we can make such a distinction between the tenant and the landlord who is the private owner or an institution and the tenant cultivating land under this Bhoodan movement. When *dan* is made, according to this, it cannot be revoked. So the land goes to the Board according to this Bill and the Board gives the land to the tenant. Why should not it not be another gift from the Board to the tenant. Why is he to be kept under suspension for being turned out of the land if the President or members or any of these Bhoodan movement leaders consider that he is not a person, who is going to help Congress, because all this is meant for helping Congress? That is very plain. There can be no confusion about this Bhoodan movement. Vinoba Bhave is trying to push the roots of the Congress far deeper in every taluk of our country. That is the main purpose. So, if the Congress people complain in a particular case that a certion man is not helpful to Congress, naturally that man will be evicted summarily from the land. That is really speaking against the principle of the land to the tiller. This is a new class of tenants that is being created.

The sword is always kept hanging over his head to support the congress party. I feel that such a clause of tenants should not be created. He should be on a par with other tenants who are cultivating the land. If they become owners, this man also must become owner. Why another institution, named as Bhoodan Board, has been created? At present Government is the owner of the land. The occupants are the tenants. Then we are taking out the excess land from these occupants and distribute it to others who are actual cultivators. They will be termed occupants. Apart from all this policy, why this Bhoodan tenant should be kept as a tenant for his life? Further more, there is no provision in this Bill that the property or the land given in *bhoodan has* to vest either in Vinoba Bhave or even in the Bhoodan Board. What about the vesting of property which has been gifted away? When it is gifted away by the owner he ceases to have any interest in the land. I suggest that the moment you give that land to a tenant after the lapse of 5, 10 or some prescribed time limit when the ordinary tenant becomes an owner, this tenant also should become the owner of that land. That should be the case.

4-30 P. M.

There is one more provision to which I should like to refer. That is clause 19 dealing with "Settlement of donated land prior to distribution". Sub-clause (2) says;

"The laws for the time being in force relating to tenancies of agricultural lands shall not apply to the settlement under sub-section (1) and no right occupancy in such land shall accrue to the settle who

(SRI V. S. PATIL)

shall be liable to be evicted on the expiry of the 'prescribed period.' The terms are like those of the tenant at will and how can we expect a tenant who is a tenant at will, who is liable to be evicted, to work more, to invest more and to grow more ? Is it possible at all ? That is the point to be considered by you and I think such a clause should not be there at all.

Clause 26 :

"The State Government may, if it is satisfied that the Board has not been able to grant the land in any year, remit the land revenue or rent due on the land for that year." Are we to presume that the land revenue is to be remitted simply because there was negligence on the part of this Board to engage tenants for cultivation? These are very strange things that we are enacting here. Suppose a private land owner does not cultivate the land or his tenant does not cultivate it if it lies fallow for a year or two or even 10 years, Government will never give remission in respect of land revenue. Why this provision is mad here, I cannot understand. All these things clearly go to show that somehow our Minister wants to please that great man by passing such a Bill which will be useless so far as working is concerned. I have heard other members saying that our Government has set up so many Boards, has appointed so many Chairmen or Presidents of those Boards, that they have to feed so many persons and that this Board is also one of such Boards which have been formed up till now. Under clause 4 sub-clause (2)

"The Chairman and members of the Board shall be appointed by the State Government. Provided that during the life time of Shri Acharya Vinoba Bhave, the Chirman and members shall be appointed on his nomination."

I do not understand this. There is another class of bhoodan ; that is 'jeevandan' and all these 'danas' are being created just to misguide the people. You want to create another class by this Act. Under cluase 5.

"Resignation by, and removal of, the Chairman or a member........

"Provided that during the life time of Shri Acharya Vinoba Bhave such resignation shall be submitted through him."

What is the meaning of this sub-clause ? If a person or a member of the Board has no desire to work there, why should his resignation go through that channel? Sri Vinoba might be in Himalayas; he might go on Padayatra to China. If we impose these conditions, I do not think this piece of legislation is workable at all and you will come to know of the faulty legislation when you enact it. Even otherwise, I plead that this piece of legislation is merely to please him and not to enforce it at all. Even clause 3 which deals with 'disolution of the Board' refers this Acharya Vinoba Bhave.

If this piece of legislation is to be enforced, I think Acharya Vinoba Bhave will have to stay in Bangalore permanently, giving up all his activities outside the State. I suggest that the best course will be to withdraw the Bill honourably and keep it in the cold storage.

†ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮಾನ್ಯ ಸಭೆಯ ಮುಂದೆ ಮಾನ್ಯ ಕಂದಾಯ ಸಚಿವರು ಮಂಡಿಸಿರುವ ಈ ಭೂದಾನ ಯಜ್ಞ ವಿಧೇಯಕವನ್ನು ನಾನು ವಿನೋಬಾಜಿಯವರ ಕ್ಷಮೆ ಬೇಡಿ ವಿರೋಧಿಸುತ್ತೇನೆ. ಈ ಮಸೂದೆ ಅತ್ಯಂತ ವಿವಾದಾಸ್ಪದವಾದ ಮಸೂದೆ. ಯಾರು ಶಾಸನ ರಹಿತ ಸಮಾಜವನ್ನು ರಚಿಸಬೇಕು ಎಂದು ಆಶಿಸಿದ್ದರೋ ಅಂಥ ಮಹಾತ್ಮನ ಹೆಸರಿನಲ್ಲಿ ನಾವು ಒಂದು ಶಾಸನವನ್ನು ರಚಿಸುತ್ತಿದ್ದೇವೆ. ಪೂಜ್ಯ ವಿನೋಬಾರವರು ಹೇಳುತ್ತಾರೆ ಕಾನೂನು ಎನ್ನತಕ್ಕದ್ದು ಹೇಗೆ ಒಂದು ಪುಸ್ತಕವನ್ನು ಬರೆದಾದ ಮೇಲೆ ಕೊನೆಯಲ್ಲಿ ಇತಿಶ್ರೀ The end ಎಂದ ಬರೆಯುತ್ತಾರೆಯೋ ಹಾಗೆ ವ್ಯವಸ್ಥೆಯಲ್ಲಿ ಪೂರ್ಣ ಪಾಲನೆಯಾದ ಮೇಲೆ ಅದಕ್ಕೆ ಒತ್ತತಕ್ಕ ಒಂದು ಮುದ್ರೆ ಎಂದು.

ಸಮಾಜದಲ್ಲಿ ಕ್ರಾಂತಿ ಬದಲಾವಣೆ ಆಗಬೇಕು ಅನಂತರ ಶಾಸನಗಳು ಬರಬೇಕೆಂದು ಅವರು ಹೇಳಿದ್ದಾರೆ. ಈ ಭೂದಾನ ಚಳವಳಿ ಯಾವಾಗ ತೆಲಾಂಗಣದಲ್ಲಿ ಕಮ್ಯೂನಿಸ್ಟರು ಈ ಭೂ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹಿಂಸಾತ್ಮಕವಾದ ಕಾರ್ಯಕ್ರಮವನ್ನು ಕೈ ಕೊಂಡರೋ ಯಾವಾಗ ಅಲ್ಲಿ ರಕ್ತ ಪಾತ ನಡೆಯಿತೋ ಆ ಸಂದರ್ಭದಲ್ಲಿ ವಿನೋಬಾ ಅವರು ಆ ಪ್ರದೇಶಕ್ಕೆ ಪ್ರವಾಸ ಹೋಗಿದ್ದಾಗ ಅಲ್ಲಿ ಭೂಹೀನ ಹರಿಜನರು ಭೂಮಿ ಕೊಡಿ ಎಂದಾಗಲೇ ಒಂದು ಗ್ರಾಮದಲ್ಲಿ ಅವರಿಗೆ ಭೂಮಿ ಕೊಟ್ಟರು ಈ ಭೂಮಿ ಕೊಡತಕ್ಕ ಅಥವಾ ಕೇಳತಕ್ಕ ಕೆಲಸವನ್ನು ಒಂದು ಚಳವಳಿಯಾಗಿ ಮಾಡಬೇಕೆಂದು ಆಗ ಅವರು ಆಶಿಸಿದರು. ಅವರಿಗೆ ಮೊದಲು ಭೂಮಿ ದಾನ ಬಂದದ್ದು 1951ನೇ ಇಸವಿ ಏಪ್ರಿಲ್ 18ರಲ್ಲಿ ಎಂದು ಗೊತ್ತಾಗುತ್ತದೆ ಅವರು ಈ ಚಳವಳಿಯನ್ನು ಪ್ರಾರಂಭ ಮಾಡಿದ್ದು ಅದೇ ವರ್ಷ ಏಪ್ರಿಲ್ 28ನೇ ತಾರೀಖು. ಆದರೆ ನಾನು ಮೊದಲೇ ಹೇಳಿದಹಾಗೆ ಇದು ಬಹಳ ವಿವಾದಾಸ್ಪದವಾದ ವಿಷಯ. ಏಕೆಂದರೆ ನಾವೆಲ್ಲಾ ಲೌಕಿಕರು, ಲೌಕಿಕವಾಗಿ ವ್ಯವಹರಿಸುತ್ತೇವೆ ಲೌಕಿಕವಾಗಿ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಬೇಕಾಗುತ್ತದೆ. ಭಾವೆ ಅವರು ಸೂಚಿಸಿರುವ ಪರಿಹಾರ ಅಲೌಕಿಕವಾದುದ್ದು—ಮನುಷ್ಯನ ಅಂತಃಕರಣಕ್ಕೆ ಪ್ರಾರ್ಥನೆ ಮಾಡಿಕೊಳ್ಳತಕ್ಕದು. ಮನುಷ್ಯನು ತನ್ನ ಭಾವನೆಯನ್ನು ತಿದ್ದಿಕೊಳ್ಳಬೇಕು ಅವನು ಅಪರಿಗ್ರಹ ಮಾಡಬೇಕೆಂದು ಅವರು ಹೇಳಿದ್ದಾರೆ. ಸೋಷಿಯಲಿಸ್ಟರು ಅಥವಾ ಕಮ್ಯೂನಿಸ್ಟರು ಹೇಳತಕ್ಕ ಸಮಾನತೆಯ ರಾಜ್ಯದಲ್ಲಿ ಆಸ್ತಿಪಾಸ್ತಿಗಳನ್ನು ಕಿತ್ತುಕೊಳ್ಳತಕ್ಕ, ಅಪಹರಣ ಮಾಡತಕ್ಕ ವ್ಯವಸ್ಥೆ ಇದು, ಅಭಿಪ್ರಾಯ ಇದು ಎಂದು—ಅದನ್ನು ಬಿಟ್ಟು ಯಾರು ಆಸ್ತಿಪಾಸ್ತಿಗಳನ್ನು ಹೊಂದಿರುತ್ತಾರೆಯೋ ಅವರು ಅದನ್ನು ಹೊಂದಿರಬಾರದು, ತ್ಯಜಿಸಬೇಕು, ಅಪರಿಗ್ರಹವನ್ನು ಅವರೇ ಆಶ್ರಯಿಸಬೇಕು—ನಾನ್ ಪೊಸೆಷನ್—ಆದ್ದರಿಂದ ನಾನು ಈ ಮಾರ್ಗದಲ್ಲಿ ಜಗತ್ತನ್ನು ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು. ಇತಿಹಾಸದಲ್ಲಿ ಭೂ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದು ಮತ್ತು ಬಗೆಹರಿಸಿ ಒಂದು ಹೆಜ್ಜೆ ಮುಂದೆ ಇಟ್ಟದ್ದು ಎಂದರೆ ರಷ್ಯಾದಲ್ಲಿ ಕ್ರಾಂತಿಯ ನಂತರ ಸಬಲವಾಗಿ ತೆಗೆದುಕೊಂಡ ಹೆಜ್ಜೆ ಅದು. ಅದಕ್ಕೆ ಬದಲಾಗಿ ವಿನೋಬಾ ಅವರು ಅಹಿಂಸಾತ್ಮಕವಾಗಿ ಒಂದು ಹೆಜ್ಜೆಯನ್ನು ನಾವು ಇಡೋಣ, ಈ ದೇಶದಲ್ಲಿ ಧಾರ್ಮಿಕ ಶ್ರದ್ಧೆಯ ಜನ ಅವರವರಾಗಿಯೇ ತ್ಯಾಗ ಮಾಡಿಯಾರು ಅಂಥವರನ್ನು ನಾವು ಕೇಳಿಕೊಳ್ಳೋಣ 30 ಕೋಟಿ ಎಕರೆ ಜಮೀನು ಇದೆ ಅದರಲ್ಲಿ ಆರನೇ ಒಂದು ಭಾಗ ಅಂಶವನ್ನು ಪ್ರತಿಯೊಬ್ಬರೂ ಕೊಟ್ಟರೆ 5 ಕೋಟಿ ಎಕರೆಯಾಗುತ್ತದೆ, ಅದನ್ನು ಹಂಚಿದರೆ ಎಲ್ಲರಿಗೂ—ಭೂ ಹೀನರಿಗೆ ಭೂಮಿ ದೊರಕಿದಂತಾಗುತ್ತದೆ ಎನ್ನುವ ಒಂದು ಗುರಿಯನ್ನು ಅವರು ಇಟ್ಟುಕೊಂಡು ಈ ಚಳುವಳಿಯನ್ನು ಪ್ರಾರಂಭ ಮಾಡಿದರು. ಮಹಾತ್ಮಾ ಗಾಂಧಿಯವರು ಏನು ಅಹಿಂಸಾತ್ಮಕವಾದ ಒಂದು ಸತ್ಯಾಗ್ರಹ ಮತ್ತು ಅಹಿಂಸೆಯ ತತ್ವದ ಮೇಲೆ ಈ ದೇಶದಲ್ಲಿ ಸ್ವಾತಂತ್ರ್ಯವನ್ನು ಗಳಿಸಿದರೋ ಹಾಗೆಯೇ ಅಹಿಂಸೆಯ ಆಧಾರದ ಮೇಲೆ ಈ ಆರ್ಥಿಕ ಕ್ರಾಂತಿಯನ್ನು ಸಾಧಿಸಬೇಕು ಎನ್ನುವುದು ಭಾವೆಯವರ ಬಯಕೆಯಾಗಿತ್ತು. ನಾನು ಮೊದಲಿನಿಂದಲೂ ಈ ಒಂದು ಚಳುವಳಿಯನ್ನು ಸಂಶಯಾಸ್ಪದವಾದ ದೃಷ್ಟಿಯಲ್ಲಿ ನೋಡುತ್ತಾ ಬಂದವನು. ವರ್ಗ ಸಂಘರ್ಷಣೆಗೆ ಬದಲಾಗಿ ಈ ಒಂದು ಸೂತ್ರವನ್ನು ಈ ದೇಶದ ಮುಂದೆ ಇಡುವುದಾದರೆ ಕ್ರಾಂತಿಯ ಮಾತು ಮೌನವಾಗುತ್ತದೆ, ಮಂದವಾಗುತ್ತದೆ, ವರ್ಗ ಸಂಘರ್ಷಣೆಗೆ ಅಡ್ಡಿ ಬರುತ್ತದೆ, ಈ ಚಳುವಳಿಯಿಂದ ಭೂಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ಹೇಳಿ ನಾವು ಅವರಿಗೆ ಹೇಳಿದ್ದೆವು. ಅವರು ಅದಕ್ಕೆ ಮಾನಸಿಕ ಕ್ರಾಂತಿ ಆಗಲಿ, ತ್ಯಾಗ ಮನೋ ಬುದ್ಧಿ ಜನರಿಗೆ ಬರಲಿ- ರಕ್ತ ಪಾತವಾಗುವ ಹಿಂಸಾ ಕ್ರಾಂತಿ ಬೇಡ ಎಂದು ಹೇಳಿದರು. ಕ್ರಾಂತಿ ಎಂದರೆ ರಕ್ತ

(ಶ್ರೀ ಎಸ್. ಗೋಪಾಲಗೌಡ)

ಹರಿಯಲೇ ಬೇಕು ಎಂಬ ಯಾವ ನಿಯಮವೂ ಇಲ್ಲ. ಸ್ವಾತಂತ್ರ್ಯ ಸಂಗ್ರಾಮವನ್ನು ನಾವು ರಕ್ತವನ್ನು ಹರಿಸದೇ ಹೋರಾಟ ನಡೆಸಿ ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ಸಾಧ್ಯವಾಯಿತು. ಇದು ಆ ಸಹಕಾರ ಚಳುವಳಿಯಾಗಿ ಭೂ ಕಾನೂನಿಗೆ ಭಂಗ ತರುವಂಥ ಚಳುವಳಿಯಾಗಬಹುದು, ಪರಸ್ಪರ ವ್ಯತ್ಯಾಸವಾಗಿ ಎಲ್ಲಾ ಜನರೂ ಹೋರಾಟ ಮಾಡತಕ್ಕ ದಾರಿಯಾಗಬಹುದು. ಇವತ್ತು ಭಾವೆ ಅವರ ಈ ಭೂದಾನ ಚಳುವಳಿ ವಿಫಲವಾಗಿದೆ ಎಂದು ಹೇಳದೇ ವಿಧಿ ಇಲ್ಲ. ನಾವು ಮೈಸೂರು ರಾಜ್ಯದಲ್ಲಿ ಕಾಗೋಡಿನಲ್ಲಿ ಭೂಮಿಗಾಗಿ ಒಂದು ಹೋರಾಟ ಮಾಡಿದೆವು. ಆಗ ಅಹಿಂಸಾತ್ಮಕವಾಗಿ ಭೂಮಿಯನ್ನು ಬೇಡುವುದಕ್ಕೆ ಹೋಗತಕ್ಕ ಅಥವಾ ವಿವಾದದ ವಿರುದ್ಧ ಹೋಗತಕ್ಕ ರೈತರನ್ನು ಸರ್ಕಾರದವರು ಹಿಡಿದು ಜೈಲಿಗೆ ಹಾಕುತ್ತಾ ಇದ್ದರು ಅದೇ ಸರಿಯಾದ ಮಾರ್ಗ ಎಂದು ಕೂಡ ಅನಿಸುತ್ತಾ ಇತ್ತು. ಆದರೆ ಮಾನ್ಯ ಸಚಿವರು ಭೂ ಸಮಸ್ಯೆಯನ್ನು ಬಗೆಹರಿಸದೇ ಶ್ರೀಮಾನ್ ಭಾವೆ ಅವರ ಹೆಸರಿನಲ್ಲಿ ಈ ಭೂ ದಾನ ಯಜ್ಞ ಮಸೂದೆಯನ್ನು ತಂದು ನಮ್ಮ ಮುಂದೆ ಇಟ್ಟಿದ್ದಾರೆ, ಇದು ಒಂದು ದೊಡ್ಡ ವಿಪರ್ಯಾಸವನ್ನು ಸೂಚಿಸುತ್ತದೆ. ಕಾರಣವೇದೆಂದರೆ ಶ್ರೀ ಭಾವೆ ಅವರಿಗೆ ಒಂದು ಮಠಕಟ್ಟಿ ಇಡಬೇಕು ಭೂದಾನ ಯಜ್ಞ ಮಂಡಲಿ ಎಂದು ಭೂಮಿಯನ್ನು ದಾನವಾಗಿ ತೆಗೆದುಕೊಂಡು ಇಟ್ಟಿದ್ದೀರಿ. ಎಲ್ಲಾ ಮಠಗಳೂ ಹೀಗೆಯೇ ಹುಟ್ಟಿದ್ದು. ಶಂಕರಾಚಾರ್ಯರು ಮಹಾ ಅದ್ವೈತಿಗಳಾಗಿ ಈ ದೇಶದಲ್ಲಿ ಚಳುವಳಿ ಮಾಡಿದರು—ಅವರಿಗೆ ಮಠಗಳನ್ನು ಸ್ಥಾಪನೆ ಮಾಡಿದರು. ನಾವು ಈ ಕಾಲಕ್ಕೆ ಬಂದಮೇಲೆ ಶ್ರಿಂಗೇರಿ ಇನಾಂನ್ನು ಜಹಗಿರಿಯನ್ನು ರದ್ದು ಪಡಿಸಿದ್ದೇವೆ, ಕಾನೂನು ತಂದು. ಅದಾದ ನಂತರ ಪುನಃ ಶ್ರೀ ಭಾವೆ ಅವರ ಹೆಸರಿನಲ್ಲಿ ಒಂದು ಮಠವನ್ನು ಸ್ಥಾಪನೆ ಮಾಡುವುದಕ್ಕೆ ರೆವಿನ್ಯೂ ಸಚಿವರು ಕಾನೂನು ಮೂಲಕ ಹೋಗುತ್ತಾ ಇದ್ದಾರೆ. ಈ ಮಠಕ್ಕೆ ನಾವು ಉಂಬಳಿ ಕೊಡುತ್ತೇವೆ. ಅದು ಹೇಗೆ ಇರಬೇಕು ಅದಕ್ಕೆ ಯಾರ, ಅರ್ಹರು, ಯಾರನ್ನು ನೇಮಕ ಮಾಡಬೇಕು ಎಂದು ಹೇಳಿ ಹೊಸದಾಗಿ ಒಂದು ಮಠವನ್ನು ಸ್ಥಾಪನೆ ಮಾಡುವುದಕ್ಕೆ ಹೋಗುತ್ತಾ ಇದ್ದೇವೆ. ನಾನಾಗಲೇ ಹೇಳಿದೆ ಶ್ರೀ ಭಾವೆ ಅವರು ಯಾವಾಗಲೂ ಮಠ ಮತ್ತು ಒಂದು ಶಾಸನಬದ್ಧವಲ್ಲದ ಸಮಾಜದ ವಿರುದ್ಧ ಹೋರಾಡತಕ್ಕವರು ; ಅವರು ಯಾವತ್ತೂ ಸತತವಾದ ಸತ್ಯಾಗ್ರಹವನ್ನು ಇದಕ್ಕಾಗಿ ಮಾಡಿದವರು—ಅವರು ಕಾಂಚನ ಮುಕ್ತಿಯನ್ನು ಮಾಡಿಕೊಂಡಿದ್ದಾರೆ.

ಅಂಥವರು ಮೈಸೂರು ಸರ್ಕಾರಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಇದನ್ನು ಒಂದು ಮಠಮಾಡಿ ಇದಕ್ಕೆ ಸದಸ್ಯರನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆಂಬುದು ಬಹಳ ಆಶ್ಚರ್ಯಕರವಾದ ಮಾತು. ಎಲ್ಲಿ ಹಣವಿದ್ದರೆ ಅಲ್ಲಿ ಕಚ್ಚಾಟ ಬರುತ್ತದೆ ಅದಕ್ಕಾಗಿ ಈ ಸಮಿತಿಗಳನ್ನೇ ವಜಾಮಾಡಬೇಕೆಂದು ಕೇಳತಕ್ಕವರು ಅವರು. ಈಗ ಈ ಭೂಮಿಯನ್ನು ವಿತರಣೆಮಾಡುವ ಉದ್ದೇಶದಿಂದ ಈ ಒಂದು ಮಸೂದೆಯನ್ನು ತಂದು ಈ ವಿಚಾರವನ್ನು ಭಾವೆಯವರೇ ಹೀಗೆ ಮಾಡಬೇಕೆಂದು ಹೇಳಿದ್ದಾರೆ, ಇದಕ್ಕಾಗಿ ಒಂದು ಮಠ ಕಟ್ಟಬೇಕು, ಒಂದು ಮಂಡಲಿ ರಚಿಸಬೇಕು, ಇಂಥ ಒಂದು ಮಠಕಟ್ಟಿ, ಅದಕ್ಕೊಂದು ಮಂಡಲಿಯನ್ನು ರಚಿಸಿ, ಕಾನೂನು ಪ್ರಕಾರ ಅದರಲ್ಲಿ ರೆವಿನ್ಯೂ ಸಚಿವರೇ ಇರಬೇಕು ಅವರೇ ಅಧ್ಯಕ್ಷರಾಗಿರಬೇಕು, ಈ ತತ್ವದಮೇಲೆ ಈ ವಿತರಣೆ ಕಾರ್ಯ ನಡೆಯಬೇಕು ಎಂದು ಹೇಳುವುದು ಬಹಳ ವಿಪರ್ಯಾಸವಾದ ಮಾತು ; ಈ ಕಾನೂನಿಗೂ ಆ ಭೂಮಿ ಹಂಚತಕ್ಕದ್ದಕ್ಕೂ ಯಾವ ಸಂಬಂಧವೂ ಇಲ್ಲ. ಈಗ ಒಂದು ಹೊಸಮಾರ್ಗವನ್ನು ಸೃಷ್ಟಿಸಲು ನಾವು ಹೊರಟಿದ್ದೇವೆ. ಈ ಒಂದು ಉದ್ದೇಶದಿಂದ ಭೂಮಿ ವಿಲೆವಾರಿಯ ಕೆಲಸದಲ್ಲಿ ವಿಳಂಬವಾಗಿದೆ. ವಿನೋಬಾ ಭಾವೆಯವರ ಉದ್ದೇಶವಂತೂ ಸಫಲವಾಗಲಿಲ್ಲ. ಸಮಸ್ಯೆ ದಿನದಿನಕ್ಕೂ ಹದಗೆಡುತ್ತಿದೆ. ಭೂಹೀನರಿಗೆ ದರಖಾಸ್ತು ದಾನಮಾಡುತ್ತಿದ್ದೇನೆ ಎಂದು ಶ್ರೀ ಕೃಷ್ಣಪ್ಪನವರು ಹೇಳುತ್ತಿದ್ದರು......

ಶ್ರೀ ಎಂ. ವಿ. ಕೃಷ್ಣಪ್ಪ.—ದರಖಾಸ್ತು ದಾನವಲ್ಲ, ಪಟ್ಟಾದಾನ ಎಂದು ಹೇಳಿದ್ದೆ.

ಶ್ರೀ ಎಸ್. ಗೋಪಾಲಗೌಡ.—ಈ ದಿವಸ ಗೇಣಿದಾರರಾಗಿರತಕ್ಕ ಸಹಸ್ರಾರು ಜನ ರೈತರನ್ನು ಭೂಮಾಲಿಕರು ಹೊರದೂಡುತ್ತಿದ್ದಾರೆ. ಪಂಪು ಇತ್ಯಾದಿ ಯಾಂತ್ರಿಕ ಸೌಲಭ್ಯಗಳನ್ನು ಹೊಂದಿರತಕ್ಕ ನೂರಾರು ಎಕರೆ ಜಮೀನನ್ನು ಪಡೆದಿರುವಂಥ ಬಲಿಷ್ಠ ವರ್ಗವೊಂದನ್ನು ನಾವೀಗ ಸೃಷ್ಟಿಮಾಡುತ್ತಿದ್ದೇವೆ. ಒಂದೊಂದು ಹಳ್ಳಿಯಲ್ಲೂ ಅಮೇರಿಕನ್ ಟೈಪ್ ಕೃಷಿಗಾರರು ಹುಟ್ಟುತ್ತಿದ್ದಾರೆ. ನಾವು ಈ ದಿವಸ ಯಾವ ದಿಕ್ಕಿಗೆ ಹೋಗುತ್ತಿದ್ದೇವೋ ಎನ್ನುವುದು ಒಂದು ದಿಗ್ಭ್ರಮೆಯನ್ನು ಉಂಟುಮಾಡಿದೆ. ಈ ದಿವಸ ನಾವು ಇದನ್ನೆಲ್ಲ ಭಾವೆಯವರ ಮನಸ್ಸನ್ನು ಸಂತೋಷಪಡಿಸಲು ಹೀಗೆ ಮಾಡುತ್ತಿದ್ದೇವೆಯೋ ಅಥವಾ ಒಂದು ರೆವಿನ್ಯೂ ಲೆಕ್ಕಕ್ಕಾಗಿ ಇದನ್ನೆಲ್ಲ ಮಾಡುತ್ತಿದ್ದೇವೆಯೋ ಎಂಬುದನ್ನು ಅರ್ಥಮಾಡಿಕೊಳ್ಳುವುದೇ ಒಂದು ದೊಡ್ಡ ಪ್ರಶ್ನೆಯಾಗಿದೆ. ಇದರಲ್ಲಿ

ರಿಜಿಸ್ಟ್ರೇಷನ್ ಬಗ್ಗೆ ಕೆಲವು ವಿನಾಯಿತಿಗಳನ್ನು ಹೇಳಿದ್ದಾರೆ, ಇಂಥದಕ್ಕೆ ಖಂಡಿತ ಅವಕಾಶವಿರಬಾರದು. ಸ್ಟಾಂಪ್ ಶುಲ್ಕ ಇತ್ಯಾದಿಗಳನ್ನು ವಿನಾಯಿತಿ ಕೊಡತಕ್ಕದ್ದಾಗುವುದೆಂದು ಹೇಳಿದೆ. ಇದೊಂದು ಇದರಲ್ಲಿ ವಿಶೇಷ. ಆದರೆ ಸರ್ಕಾರ ಕಂದಾಯವನ್ನು ಮಾಫಿಮಾಡುವುದಕ್ಕೆ ತಯಾರಿಲ್ಲ. ಹಾಗಿರುವಾಗ ಸರ್ಕಾರಕ್ಕೆ ಬರಬೇಕಾದ ಶುಲ್ಕವನ್ನೇಕೆ ಬಿಡಬೇಕು ? ಇದನ್ನು ನೋಡಿದರೆ ನಾವೀಗ ಪುನಃ ಹಿಂದಕ್ಕೆ ಹೋಗುತ್ತಿದ್ದೇವೇನೋ ಅನ್ನುವಂತೆ ನನಗೆ ಭಾಸವಾಗುತ್ತಿದೆ. ಹೀಗೆಲ್ಲ ಇವರು ಮಾಡುತ್ತಾರೆಂದು ತಿಳಿದಿದ್ದರೆ ಖಂಡಿತ ಶೃಂಗೇರಿ ಜಹಗಿರಿಯ ಅಬಾಲಿಷನ್‌ಗೆ ನಾನು ಒಪ್ಪಿಗೆ ಕೊಡುತ್ತಿರಲಿಲ್ಲ.

Mr. SPEAKER.—The Hon'ble Member has already taken 35 minutes. Business Advisory Committee Report which he fixed their for Consideration of this Bill, has been adopted by this House. The Hon'ble Member is a party to it. It has been extended by one hour. Either he should adhere to the unit or leave the matter entirely to me.

ಶ್ರೀ ಎಸ್. ಗೋಪಾಲಗೌಡ.—ಇದು ಬಹಳ ವಿವಾದಾಸ್ಪದವಾದ ಮಸೂದೆ, ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುವುದುತ್ತಮ. ಇಲ್ಲವೆ ಇದನ್ನು ಶ್ರೀ ಭಾವೆಯವರಿಗೆ ವಾಪಸ್ಸು ಕಳುಹಿಸಿ ಎಂದು ಹೇಳುತ್ತೇನೆ.

Mr. SPEAKER.—I will leave it to the House whether the Bill should be sent to Vinobhaji. (Laughter). I am concerned here about the time-factor.

Sri S. SIVAPPA.—We shall extend the time to some extent. Some controversial issues have arisen.

Mr. SPEAKER.—Then I have to find fault with the Business Advisory Committee. All-right. Would the House agree to the extension of the time by 1 hour ?

HON'BLE MEMBER.—Yes.

5-00 P.M.

ಶ್ರೀ ಎಸ್. ಗೋಪಾಲಗೌಡ.—ಈ ಮಸೂದೆಯನ್ನು ಇರುವ ಹಾಗೆ ಅಂಗೀಕಾರಮಾಡಿ ಕಾನೂನಿನ ಕಡತಕ್ಕೆ ಏರಿಸುವುದಾದರೆ ನಾವು ನಮ್ಮ ಜವಾಬುದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ಕಾರಣವೇನೆಂದರೆ ಅವರ ದೃಷ್ಟಿಯಿಂದ 22, 23, ಸಾವಿರ ಎಕರೆಗಳಷ್ಟು ಜಮೀನನ್ನು ಅತಂತ್ರವಾದ ಹಿಡುವಳಿದಾರರುಗಳ ವಶದಲ್ಲಿರುವುದನ್ನು ಸರಕಾರದ ಮೂಲಕ ಒಳಪಡಿಸಿಕೊಳ್ಳಬೇಕೆನ್ನುವುದು. ಅಲ್ಲದೆ ಸರಕಾರದವರು ಭೂದಾನ ಚಳುವಳಿ ಸಮಿತಿಯವರನ್ನು ಕೇಳಿ ಇದನ್ನು ಮಾಡಿದ್ದಾರೆಯೇ ? ಅಲ್ಲದೆ ಇದರ ವಿಷಯದಲ್ಲಿ ಪೂರ್ವಾಪರ ಯೋಚನೆ ಮಾಡಿಲ್ಲ. ಆಚಾರ್ಯ ಭಾವೆಯವರು ಇದರ ಬಗ್ಗೆ ಏನು ಹೇಳಬೇಕೆಂದಿದ್ದಾರೆ ಅವರ ಅಭಿಪ್ರಾಯವನ್ನೂ ತಿಳಿದುಕೊಂಡಿಲ್ಲ. ಆದರೆ ಅವರ ಹೆಸರಿನಲ್ಲಿ ಭೂದಾನ ಚಳುವಳಿಯ ಸಮಿತಿಯ ಮೂಲಕ ಸಂಪಾದನೆಯಾಗಿರತಕ್ಕ ಭೂಮಿಯನ್ನು ಒಂದು ಟ್ರಸ್ಟು ಮೂಲಕ ಧರ್ಮದರ್ಶಿಗಳನ್ನು ನೇಮಕ ಮಾಡಬೇಕೆಂದು ಏನು ಇದರಲ್ಲಿ ಇಟ್ಟುಕೊಂಡಿದ್ದಾರೋ ಅಂತಹ ಒಂದು ಮಂಡಲಿಯನ್ನು ಮಾಡಿಕೊಂಡು ಅವರ ಮೂಲಕ ಭೂಮಿಯನ್ನು ಹಂಚಿಕೊಡುವ ಅಧಿಕಾರವನ್ನು ಕೊಟ್ಟಿರುವುದು ಸಮಂಜಸವಾಗುವುದಿಲ್ಲ. ಅದೂ ಇಂತಹ ಸನ್ನಿವೇಶದಲ್ಲಿ ಭೂಮಿಯ ಸಮಸ್ಯೆ ಹದಗೆಟ್ಟು ಕುಳಿತಿರುವಾಗ, ಖಚಿತವಾದ ಯಾವ ಹೆಜ್ಜೆಯನ್ನೂ ಇಡದೇ ಇರುವಾಗ, ಭೂಮಿಯ ಹಂಚಿಕೆಯೇ ಸರಿಸಮವಾಗಿ ಆಗದೇ ಇರುವಾಗ, ಇನಾಂ ಜಹಗೀರುಗಳನ್ನು ರದ್ದುಮಾಡಿರುವಾಗ ಈ ಹೊಸ ಇನಾಂ ಜಹಗೀರುಗಳನ್ನು ನಾವು ಸೃಷ್ಟಿ ಮಾಡಬೇಕೇ ಎನ್ನುವುದು ಬಹು ಮುಖ್ಯವಾದ ಪ್ರಶ್ನೆ. ಆಚಾರ್ಯ ಭಾವೆಯವರ ಬಗ್ಗೆ ನನಗೂ ಬಹಳ ಗೌರವವಿದೆ. ಅವರ ಚಳುವಳಿಯ ಬಗ್ಗೆ ನಾನೂ ಗೌರವವನ್ನು ಹೊಂದಿದ್ದೇನೆ. ಆದರೆ ಆ ಮಾರ್ಗದಲ್ಲಿರುವ ಆಲೌಕಿಕವಾದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನ್ನ ದೃಢವಾದ ನಂಬಿಕೆ. ಆದರೆ ಅವರು ಹೋಗುತ್ತಿರುವ ಮಾರ್ಗದಂತೆ ಸಂಪತ್ತನ್ನು ಗಳಿಸಲು ಸಾಧ್ಯವಿಲ್ಲ. ಅವರೇ ಹೇಳುವಂತಹ ಮನುಷ್ಯರನ್ನೂ ಸೃಷ್ಟಿ ಮಾಡುವುದೂ ಸಾಧ್ಯವಿಲ್ಲ. ಅದನ್ನು ನಾವು ಚರ್ಚಿಸುವುದು ಉಚಿತವಲ್ಲ ಮತ್ತು ಅದು ಅಪ್ರಕೃತ. ಅಹಿಂಸೆಯ

(ಶ್ರೀ ಎಸ್. ಗೋಪಾಲಗೌಡ)

ಆಧಾರದಮೇಲೆ ನಡೆಯುತ್ತಿರುವ ಈ ಚಳುವಳಿಯಲ್ಲಿ ಹಿಂಸೆಯಿಂದ ಒತ್ತಾಯ ತರುವುದನ್ನು ತೊರೆದು ಹಾಕಲು ಸಾಧ್ಯವಿಲ್ಲ. ಶ್ರೀ ಕೃಷ್ಣನೂ ಕೂಡ ಯುದ್ಧವನ್ನು ತಪ್ಪಿಸಲಿಕ್ಕೆ ಆಗಲಿಲ್ಲ. ಕುರುಕ್ಷೇತ್ರ ನಡೆದೇ ನಡೆಯಿತು. ಆದುದರಿಂದ ಇವೊತ್ತು ಉಂಟಾಗಿರತಕ್ಕಂಥಹ ಭೂಮಿಯ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಅವರು ಹೇಳುವುದು ಒಂದು ಪವಾಡ. ಭೂಮಿಯ ಸಮಸ್ಯೆ ಪವಾಡದಂತೆ ನಡೆಯುವುದಿಲ್ಲ ಎನ್ನುವುದು ಎಲ್ಲರೂ ತಿಳಿದು ಹೇಳುವ ಮಾತು. ಇದರ ಬಗ್ಗೆ ಆಚಾರ್ಯ ಭಾವೆಯವರೊಡನೆ ಸರಕಾರದವರು ವೈಯ್ಯಕ್ತಿಕವಾಗಿ ಕುರಿತು ಮಾತನಾಡಬೇಕು. ನಮ್ಮ ಅಭಿಪ್ರಾಯಗಳನ್ನು ಅವರಿಗೂ ತಿಳಿಸಬೇಕು. ಚಳುವಳಿ ವಿಫಲವಾಗಿದೆ ಎಂದು ಅವರು ಹೇಳುವ ಪ್ರಕಾರ ಮುಂದೆ ಇದಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಇದನ್ನು ತಾವಿಲ್ಲ ಸ್ವಲ್ಪ ವಿಚಾರ ಮಾಡಬೇಕು. ಹೊಸದಾಗಿ ಭೂದಾನದ ಗೇಣೀದಾರನೆಂದು ಒಬ್ಬರನ್ನು ಈಗಿರುವ ಇತರ ಗೇಣಿದಾರರೊಂದಿಗೆ ಸೃಷ್ಟಿ ಮಾಡಿದ್ದಾರೆ. ಈ ಹೊಸ ಭೂದಾನದ ಗೇಣಿದಾರ ಯಾರಾದರೂ ಭೂದಾನಕ್ಕಾಗಿ ಕೊಟ್ಟಿರುವ ಭೂಮಿಯನ್ನು ಉಪಯೋಗಿಸುತ್ತಿರುವಾಗ ಅಂತಹ ಬಡ ರೈತನ ಒಕ್ಕಲನ್ನು ಕಾನೂನಿನ ಪ್ರಕಾರ ರದ್ದು ಮಾಡುವಾಗ ಅವನನ್ನು ಬಿಡಿಸಬಹುದು ಎಂದು ಇದರಲ್ಲಿದೆ. ಯಾವ ಒಂದು ಶ್ರೇಯಸ್ಸಿಗೋಸ್ಕರ ಆಚಾರ್ಯ ಭಾವೆಯವರು ಇಡೀ ದೇಶದಲ್ಲಿ ಕಾಲ್ನಡಿಗೆಯಲ್ಲೇ ಓಡಾಡುತ್ತಿದ್ದಾರೋ ಅಂತಹವರ ತತ್ವಕ್ಕೇ ವಿರೋಧವಾಗಿ ನಾವು ಕಾನೂನುಗಳನ್ನು ಮಾಡಿ ಇದರೊಳಗೆ ಇಂತಹ ವಿಧಿಗಳನ್ನೂ ಪ್ರಕರಣಗಳನ್ನೂ ಹಾಕಿದ್ದೇವೆ. ಖಂಡಿತವಾಗಿಯೂ ಇದು ಪಾಸಾದರೆ ಈ ಶಾಸನದಿಂದ ಸರ್ವೋದಯ ಸಮಾಜವಾಗಬೇಕು ಎನ್ನುವ ಉದ್ದೇಶ ನೆರವೇರುತ್ತದೆಯೆ? 'ಕೃಷ್ಣಾರ್ಪಣಮಸ್ತು' ಎನ್ನುವಂತೆ ಇದೆ ಇದರ ತತ್ವ. ದೇಶದಲ್ಲಿ ಎಲ್ಲಿಯೂ ಇಲ್ಲದಂತಹ ಪದ್ಧತಿ ಇಲ್ಲಿ ಕಂಡುಬರುತ್ತಿದೆ ಎಂದು ನಾನು ಹೇಳಬೇಕಾಗಿದೆ. ಭಾವೆಯವರೇನು ಹೇಳಿದ್ದಾರೆ? ...

This is for Indra, not for me. ಇಂದ್ರನಿಗೇ ಕೃಷ್ಣಾರ್ಪಣ ಎಂದು ಮಾಡಿಸಿ ನಾವು ಬದುಕಬೇಕು. ಇದು ಒಂದು ದೊಡ್ಡ ತತ್ವ.

Mr. SPEAKER.—Reading of Books is not permitted. But the hon'ble member can mention the same in his own words.

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ ವಾಸ್ತವವಾಗಿ ಏನಿದೆ ಎಂದರೆ—

> "This is an ideal, but what do we find actually? The highly expensive administrative and other departments of the Government are known as 'services' and there are services like Civil services, Medical Services and Educational services. The officials of the Civil services are paid four-figured salary, still their masters......"

Mr. SPEAKER.—The hon'ble member can put the same in his own words. Reading of Books is not permitted.

ಆದ್ದರಿಂದ ಈ ಮಸೂದೆಯನ್ನು ನಾನು ಕಟುವಾಗಿ ಬಹಳ ತೀವ್ರವಾಗಿ ವಿರೋಧಿಸುತ್ತೇನೆ. ಈ ಮಸೂದೆಯನ್ನು ನೀವು, ನಾವು ಕಾನೂನಾಗುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅದು ಒಂದು ತಪ್ಪು ಮಾಡಿದ ಹಾಗಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು II).—ಸ್ವಾಮಿ, ಈ ಭೂದಾನ ಯಜ್ಞದ ಮಸೂದೆಯನ್ನು ಮೊದಲಿಗೆ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ರೆವೆನ್ಯೂ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ಶಿರೋನಾಮೆ ಏನಿದೆಯೋ ಅದೂ ಕೂಡ ಈ ವಿಧೇಯಕದ ತತ್ವಕ್ಕೆ ಅನುಗುಣವಾಗಿ ಇಲ್ಲ. ಯಜ್ಞ ಎಂಬ ಪದಕ್ಕೂ ದಾನ ಎಂಬ ಶಬ್ದಕ್ಕೂ ಯಾವ ಅರ್ಥವನ್ನು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಕೊಟ್ಟಿದ್ದಾರೆನ್ನುವುದು ನನಗೆ ಹೇಳಲಿಕ್ಕೆ ಬರುವುದಿಲ್ಲ. ಇದು ನಿಜವಾಗಿಯೂ ಒಂದು ಸಣ್ಣ ಬಿಲ್ಲು ಎಂದು ಹೇಳುವುದು ಒಂದು ವ್ಯಕ್ತಿಯ ಕಲ್ಪನೆ ಮತ್ತು ಆಸೆಗಳಿಗೆ ವ್ಯತಿರಿಕ್ತವಾಗಿದೆ ಎನ್ನುವುದು ಈಗಾಗಲೇ ವ್ಯಕ್ತವಾಗಿದೆ. ಇದು ನಿಜವಾಗಿಯೂ ಅನ್ಯಾಯ

ವಾದುದು ಮತ್ತು ಇದನ್ನು ತರುವುದೂ ಸರಿಯಲ್ಲ. ಮಾನಸಿಕ ಪರಿವರ್ತನೆಯಾಗುವ ಈ ಒಂದು ಹೊಸ ಸಮಾಜದಲ್ಲಿ ಇದರ ವ್ಯಾಪ್ತಿಯನ್ನು ತೆಗೆದುಕೊಂಡು ಒಂದು ಕಾನೂನಾಗಿ ಮಾಡಿ ಈ ರಾಜ್ಯ ದಲ್ಲಿ ಪ್ರಾರಂಭ ಮಾಡುವುದು ಎಂದು ಹೇಳಿದರೆ ಇದು ಸರ್ವಥಾ ಸರಿಯಲ್ಲ. ನ್ಯಾಯಕ್ಕೂ, ತತ್ವಕ್ಕೂ ಸರಿಯಲ್ಲ. ಇದನ್ನು ಪಾಸು ಮಾಡಿದರೆ ಇದು ಒಂದು ದೊಡ್ಡ ಅಪರಾಧ ಮಾಡಿದಂತಾ ಗುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಯಾವ ಉದ್ದೇಶದಿಂದ ಇದನ್ನು ಆಕ್ಷೇಪಣೆ ಮಾಡಿದರು ಎನ್ನುವುದರ ಬಗೆಗೆ ಈಗತಾನೇ ಮಾತನಾಡಿದ ಮಿತ್ರರು ಆಗಲೇ ವಿವರಿಸಿದರು. ಈ ದೇಶದಲ್ಲಿ ಜನತೆಗೆ ಭೂಮಿಯ ಒಂದು ಆಸೆ ಹುಟ್ಟಿತ್ತು ಮತ್ತು ಅವರ ಒಂದು ಪ್ರಚಾರವೂ ಹರಡಿತ್ತು. ಆಗ ಭೂಮಿಯ ಹಾವಳಿಯನ್ನು ತಪ್ಪಿಸಲು ವಿನೋಬಾ ಬಾವೆಯವರು ಒಂದು ದೊಡ್ಡ ಚಳವಳಿಯ ರೂಪದಲ್ಲಿ ಈ ದೇಶದಲ್ಲಿ ಹರಡಿದರು. ಆ ರೀತಿಯಾದ ಒಂದು ಕಾರ್ಯಕ್ರಮ ವನ್ನು ತೆಲಂಗಾಣದಲ್ಲಿ ಹಾಕಿಕೊಂಡು ಭೂಮಿಯನ್ನು ಶೇಖರಣೆಮಾಡಿ ಭೂಮಿಯಿಲ್ಲದವರಿಗೆ ಭೂಮಿ ಯನ್ನು ಹಂಚುವಿಕೆಯ ಕಾರ್ಯ ಕೈಗೊಂಡರು. ನಮ್ಮ ಕ್ಷೇತ್ರದಲ್ಲಿಯೂ ಅವರು ಪ್ರಯಾಣ ಮಾಡಿ ಸಂಚರಿಸಿದಾಗ ನಾನೂ ಕೂಡ ಅವರೊಡನೆ ತುಂಬಾ ಕೆಲಸ ಮಾಡಿದ್ದೆ. ನಮ್ಮ ಹಳ್ಳಿಯ ಮುಖಂಡ ರುಗಳೊಡನೆ ಅವರು ಪ್ರಯಾಣಮಾಡಿದರು. ವಿನೋಬಾಜೀಯವರು ಬಂದದ್ದಾಗ ನಮ್ಮ ಮೈಸೂರು ರಾಜ್ಯದಿಂದಲೂ ಕರ್ಣಾಟಕದ ಬಾರ್ಡರನ್ನು ತಲಪಬೇಕೆಂದು ರಾಜ್ಯದ ಮಂತ್ರಿಗಳು ಅವರು ಪ್ರವೇಶ ಮಾಡಿದಾಗ ದಕ್ಷಿಣ ಕನ್ನಡ ಜಿಲ್ಲೆಯವರಿಗೂ ಬಂದಿದ್ದರು. ಅಲ್ಲಿಯೂ ಕೂಡ ಮೈಸೂರು ಸರಕಾರದ ವತಿಯಿಂದ ಅವರಿಗೆ ಭೂಮಿಯನ್ನು ದಾನವಾಗಿ ಕೊಡಲಾಯಿತು ಮತ್ತೆ ನಾನು ಕೂಡ ಅವರೊಡನೆಯೇ ಮಾಣಿಯವರೆಗೂ ಬಂದಿದ್ದೆ. ಅವರನ್ನು ಅಗಲಿ ಬಿಟ್ಟು ಬಂದಾಗ ಅವರು ಹೇಳಿದ ಮಾತುಗಳು ಈಗಲೂ ನನಗೆ ನೆನಪಿದೆ. ಅದೇನೆಂದರೆ, "ಈ ಭೂದಾನ ಚಳುವಳಿಯಲ್ಲಿ ನಿಜವಾಗಿಯೂ ಶ್ರೀಮಂತರನ್ನು, ಭೂ ಮಾಲೀಕರನ್ನು ಒಳಗೊಂಡು ಒಂದು ಉದಾತ್ತವಾದ ಧ್ಯೇಯವನ್ನಿಟ್ಟು ಕೊಂಡು ಕೆಲಸ ಮಾಡುವುದು ಅಗತ್ಯ. ನಾನೇನೋ ಭೂಮಿಯನ್ನು ಬೇಡಿ ಭೂಮಿಯಿಲ್ಲದವರಿಗೆ ಭೂಮಿ ಹಂಚುವ ಕೆಲಸವನ್ನು ಕೈಗೊಳ್ಳುತ್ತಿರುವುದು ಒಂದು ದೊಡ್ಡ ಮಹತ್ವದ ಕೆಲಸ. ಇದರಿಂದ ಜನತೆಯಲ್ಲಿ ಒಂದು ಹೊಸ ಜಾಗೃತಿ ಉಂಟುಮಾಡಿ ಭೂಮಿಯಿಲ್ಲದವರಿಗೆ ಸರಿಯಾಗಿ ಭೂಮಿ ಸಿಕ್ಕಿದರೆ ಈ ಕಾರ್ಯ ಸಫಲವಾದೀತು."

ಇದು ಹೀಗೆ ಆಗದೇ ಇದ್ದರೆ ಜನತೆಯ ಬಲಕ್ಕೆ ಶ್ರೀಮಂತರು ತಲೆಬಾಗಬೇಕಾದೀತು ಎಂದು ಅವರು ಹೇಳಿದ್ದಾರೆ. ಅವರು ಹೀಗೆ ಹೇಳಿದ್ದು 1958ರಲ್ಲಿ. ಇಲ್ಲಿಯವರೆಗೆ ಎಷ್ಟೋ ಸಮಯ ಕಳೆಯಿತು. ನಮ್ಮ ರಾಜ್ಯದಲ್ಲಿ ಅವರು ಪಾದಯಾತ್ರೆ ಮಾಡಿದ ಕಾಲದಲ್ಲಿ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುತ್ತಾ ಭೂ ಸುಧಾರಣೆ ಮಸೂದೆ ಬೇಗನೆ ಜಾರಿಗೆ ತರಬೇ ಕೆಂದು ಅವರು ಒತ್ತಾಯ ಪೂರ್ವಕ ಹೇಳಿದ್ದಾರೆ ? ಮಾನಸಿಕ ಪರಿವರ್ತನೆಯಾಗುವುದು ಅಗತ್ಯ ಎಂದು ಹೇಳಿದ್ದಾರೆ. ಆದರೆ ನಮ್ಮ ಸರಕಾರ ಭೂ ಸುಧಾರಣೆಯ ಮಸೂದೆಯನ್ನು ಹಿಂದೆ ಹಾಕಿದ್ದಾರೆ. ಇನ್ನೂ ಕಾರ್ಯಗತ ಮಾಡಿಲ್ಲ, ಜಾರಿಗೆ ತರಲು ಪ್ರಯತ್ನ ಮಾಡಿಲ್ಲ. ಅವರ ತತ್ವ ಅವರ ಆಶೆಗೆ ವಿರುದ್ಧವಾದ ಈ ಮಸೂದೆಯನ್ನು ಅವರ ಒಂದು ದೊಡ್ಡ ಹೆಸರಿನಲ್ಲಿ ಈಗ ಸರಕಾರದವರು ತಂದಿ ದ್ದಾರೆ. ಇದು ಕಾಲಕ್ಕೆ ಅನುಗುಣವಾಗಿಲ್ಲ ಎಂದು ಹೇಳಬಹುದು. ದಾನ ಎಂಬುದು ಯಾವಾ ಗಲೂ ಗುಲಾಮಗಿರಿಯ ಚಿಹ್ನೆಯಾಗಿದೆ. ಈ ದಾನ ಯಾರಿಂದ ಯಾರಿಗೆ ಕೊಡಬೇಕು ? ಕೈ ಇಲ್ಲದ ವರಿಗೆ ಬುದ್ಧಿಯಿಲ್ಲದವರಿಗೆ ಕೊಡಬೇಕೆ ? ದೊಡ್ಡ ವ್ಯಕ್ತಿಯ ಹೆಸರಿನಲ್ಲಿ ಈ ಕಾನೂನು ತಂದಿರುವುದು ಈಗಿನ ಸಮಯಕ್ಕೆ ಅನುಗುಣವಾಗಿಲ್ಲ ಜನತೆಯನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗುತ್ತಿಲ್ಲ ಎಂದು ಹೇಳಬೇಕಾಗಿದೆ. ಇವತ್ತಿನ ದಿವಸ ಕಾಮರಾಜ ನಾಡರರ ಯೋಜನೆ ಎಲ್ಲರ ಮುಂದೆ ಇರುವಾಗ್ಗೆ ಮಂತ್ರಿಮಂಡಳ ಸಂಕುಚಿತ ಪಡಿಸುವ ಕಾರ್ಯ ಮಾಡುತ್ತಿಲ್ಲ. ಆದರೆ ಈ ಕಾನೂನು ತಂದರೆ ನಿಮ್ಮನ್ನು ಯಾರು ನಂಬಬೇಕು ? ಈಗಿನ ಪರಿಸ್ಥಿತಿಯಲ್ಲಿ ಎಲ್ಲರಿಗೆ ಬೇಕಾ ಗಿರುವುದು ಭೂ ಸುಧಾರಣೆ ಮಸೂದೆ. ಅದನ್ನು ಜಾರಿಗೆ ತಂದು ಜನತೆಗೆ ಅನುಕೂಲ ಮಾಡಿ ಕೊಡಬೇಕು. ಉಳುವವನೇ ಭೂಮಿಯ ಒಡೆಯನಾಗಬೇಕು. ನಾನು ಹೇಳುವುದು ಇಷ್ಟೆ. ದೇವರಲ್ಲಿ ಸತ್ಯ ಇರಬೇಕು. ಮೂರ್ತಿ ಮುಖ್ಯವಲ್ಲ. ಈಗ ಈ ಭೂದಾನ ಯಜ್ಞ ಮಸೂದೆ ತಂದಿ ರುವುದು ಸರಿಯಲ್ಲ. ಈ ಮಸೂದೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

Sri B. R. SUNTHANKAR (Belgaum I).—Mr. Speaker, it is very difficult to support this Bill though it is well-intentioned. Sir, I have many doubts regarding this Bill and its working. Sir, I doubt very much whether this Bill or the principle of this Bill would fit in with the

(SRI B. R. SUNTHANKAR)

basic ideology of Bhoodan, because Bhoodan is a voluntary and spontaneous movement. The spotaneity of the movement is the main feature of this movement. And this Bhoodan as it was originally sponsored was to take place, without the help or aid of the Government or any law. That was the original intention, that was the original motive of this movement. But, now Sir, Bhoodan is required to take resort to law and it looks that there is something very wrong with this Bhoodan movement and there must be some flaw to some defect in this Bhoodan movement. That is why this movement has to depend upon the assistance of law. That is what it looks. Sir, as regards this Bhoodan movement, though I do not agree with the ideology behind it, I was one of those who welcomed this Bhoodan originally when it was started, because it had raised high hopes and expectations in our minds. If this movement had been successfull, it would have worked out a silent revolution in this country. From that point, I was one of those who welcomed this movement. But looking at the working of the movement during the last twelve years, we are forced to say that this movement though it has not failed, has not met with the success it was expected to attain. This movement was started on 18-4-1951 by Acharya Vinoba Bhave at Pochampalli in Andhra and during the last twelve years, since the inception of this movement, the total land that was obtained was 41,63,116 acres. That was the total land that was collected by this Bhoodan movement. Out of this land up-till-now, the land that was distributed amounted to 11, 33, 816 acres—about 25 per cent of the land was distributed among the landless, and unfortunately out of these, 41 lakhs of acres, 11,90,450 acres of land were struck off as land which cannot be distributed owing to various reasons that means nearly 25 percent of the land was useless. And what remains now ? Only 18,32,850 acres of Bhoodan remains to be distributed. In this State as the Hon'ble Minister stated, only 22,000 acres of land were obtained under this movement, and so in this State particularly, the problem is not great. Of the total Bhoodan land, half the land was obtained in Bihar; and in recent years, particularly after 1957 the movement has greatly slowed down and latterly. It has come to a stand still—I am not wrong if I say that. We do not know what will be the future of this movement. So, taking a survey of the work for the last 12 years, it looks as though this movement has failed, at least partially it has failed. This movement expected to work out a psychological revolution, phylosophical revolution in the minds of the people.

It has not done that; it has not reached the extent to which it was expected to reach. So the objective of this movement has not been achieved.

About the Bhoodan Board, is will be instituted like other Boards—the Khadi Board and other Boards. This will be a grazing ground for the political unemployed from the ruling party. The worst feature of this Board will be that the Chairman and the Members shall be appointed

by Acharya Vinoba Bhave. If they are to resign, Acharya Vinoba's consent is required. Looking to the whole nature of the Bill, it depends upon the whims and will of a particular individual.........

Sri M. V. KRISHNAPPA.—Whom you respect and revere.

Sri B. R. SUNTHANKAR.—I am not speaking out of any disregard for Sri Acharya Vinoba. With all due respect to him, I say that a law should not depend upon an individal, because a statute is a statue for the whole State and however great he may be, he should not be identified with the State. We are superceding the law and we are placing the powers in the hands of an individual. That is the most objectionable feature of this legislation.

This land will be distributed to the landless. The lot of the agricultural labour or landless people is very pitiable. Only distributing lands to them will not do. They may require other help—technical assistance, financial assistance. Because the landless people will not be in a position to cultivate the lands of their own accord. They will require such outside assistance, financial, technical by way of implements, fertilisers, subsidies, but there is no provision in this Bill to see that the landless people to whom lands are distributed will get such assistance. The Board will have to provide specifically for such assistance to those to whom lands are distributed.

Sub-clause (2) of clause 19 is also highly objectionable, as has already been pointed by the members who spoke before me. With these words, I close my speech.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದಿರಿ).—ಸನ್ಮಾನ್ಯ ಅಧ್ಯಕ್ಷರೆ, ಪೂಜ್ಯ ವಿನೋಬಾಜಿಯವರು ಈ ಚಳುವಳಿಯನ್ನು ಆರಂಭಿಸಿದ ಉದ್ದೇಶವಾದರೂ ಹಿಂದೂಸ್ತಾನ ದೇಶದ ಜನರ ಹೃದಯ ಪರಿವರ್ತನೆ ಮಾಡಬೇಕೆಂದು ; ಎಲ್ಲ ರಂಗದಲ್ಲಿಯೂ ಕೂಡ ಜನರು ತಮ್ಮ ಸ್ವಾರ್ಥವನ್ನು ಬಿಟ್ಟು, ತಮಗಿಂತ ದುರ್ಬಲರಾದ ಜನತೆಯ ಹಿತಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಬೇಕೆಂದು. ಅವರು ಜನ ಸಾಮಾನ್ಯರಹಿತಕ್ಕಾಗಿ, ಸಂಪತ್ತುಗಳನೆಲ್ಲಾ, ಸರ್ವಸವನ್ನೂ ಬಿಟ್ಟುಬಿಡಬೇಕೆಂಬ ಉದ್ದೇಶದಿಂದ ಈ ಚಳುವಳಿಯನ್ನ ಆರಂಭಿಸಿದರು. ಮೇಲಾಗಿ, ಭೂಮಿಗಾಗಿ ಅಥವಾ ಸ್ವತ್ತಿಗಾಗಿ ರಕ್ತ ಕ್ರಾಂತಿಯಾಗಬಾರದೆಂದು ಅವರ ಉದ್ದೇಶ. ಅದನ್ನು ತಪ್ಪಿಸಲು ಜನರು ಸಹ ಒಳ್ಳೆಯ ನೀತಿಯನ್ನು ತಮ್ಮ ದಿನಚರಿ ಜೀವನದಲ್ಲಿ ಅನುಸರಿಸಬೇಕೆಂದು ಬೋಧಿಸಿದರು. ಈ ಧ್ಯೇಯಕ್ಕೆ ಈ ಚಳುವಳಿಯನ್ನು ಆರಂಭಿಸಿದರು ಎಂದು ಸ್ಪಷ್ಟವಾಗಿದೆ. ಅವರು ಕೇರಳದಿಂದ ಮಂಗಳೂರಿಗೆ ಬರುವ ಸಂದರ್ಭದಲ್ಲಿ ನಾವು ಗಡಿಯಲ್ಲಿ, ಹಲವು ಮಂತ್ರಿಗಳೊಂದಿಗೆ ಸ್ವಾಗತಿಸುವುದಕ್ಕೆ ಹೋಗಿದ್ದೆವು ಆಗ ಅವರ ಭಾಷಣವನ್ನು ಕೇಳಿದ್ದೇವೆ ಮತ್ತು ಅದರಿಂದ ಏನು ಪರಿಣಾಮವಾಗುತ್ತದೆಂಬುದನ್ನೂ ಕೂಡ ಸ್ವಲ್ಪ ಮಟ್ಟಿಗೆ ತಿಳಿದು ಕೊಂಡಿದ್ದೇನೆ. ಅವರು ಅಷ್ಟು ಉದಾತ್ತವಾದ ಧ್ಯೇಯವನ್ನಿಟ್ಟು ಕೊಂಡಿದ್ದಾರೆ. ಆದರೆ ಆ ಧ್ಯೇಯದ ಸಾಧನೆಗಾಗಿ ಜನರು ಮುಂದೆ ಬರಲಿಲ್ಲ. ನಮ್ಮ ಸ್ನೇಹಿತರಾದ ಶ್ರೀಮಾನ್ ಸುಂಠಣಕರರು ಕೆಲವು ಅಂಕೆ ಸಂಖ್ಯೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲಿ ಕೆಲವರು ತಮಗೆ ಬೇಡವಾದ ಜಮೀನನ್ನು ಬಿಟ್ಟಿದ್ದಾರೆ; ಕೆಲವರು ತಮಗೆ ಹೆಚ್ಚಾಗಿದ್ದ ಜಮೀನನ್ನು ಹೆಸರು ಗಳಿಸುವ ಉದ್ದೇಶದಿಂದ ಬಿಟ್ಟುಕೊಟ್ಟಿದ್ದಾರೆ. ಇನ್ನೂ ಕೆಲವರು ನಿಜವಾಗಿ ತ್ಯಾಗ ಬುದ್ಧಿಯಿಂದ ತಮ್ಮ ಅಲ್ಪ ಸ್ವಲ್ಪ ಭೂಮಿಯನ್ನು ಅವರಿಗೆ ದಾನವಾಗಿ ಕೊಟ್ಟಿದ್ದರೂ ಅವರಿಗೆ ನಿಜವಾದ ಹೃದಯ ಪರಿವರ್ತನೆಯಾಗಿಲ್ಲ. ಏಕೆಂದರೆ ವಿನೋಭಾಜಿಯವರ ತತ್ವದಲ್ಲಿ ಕೇವಲ 10 ಎಕರೆ, 20-30 ಎಕರೆ ಭೂದಾನ ಹೇಳಿಲ್ಲ ; ಗ್ರಾಮದಾನ, ಸ್ವತ್ತುದಾನ, ಮತ್ತು ತಮ್ಮೆಲ್ಲರುವ ಸರ್ವಸ್ವವನ್ನೂ ದಾನಮಾಡುವ ತತ್ವ ಅವರ ಯೋಜನೆಯಲ್ಲಿ ಅಡಕವಾಗಿದೆ. ಸಾರ್ವಜನಿಕರೆಲ್ಲಾ ಸೇರಿಕೊಂಡು ಅವರ ಸುಖವನ್ನು ಸಾರ್ವತ್ರಿಕವಾಗಿ ಅನುಭವಿಸಬೇಕೆಂಬುದು ಅವರ ಮೂಲ ತತ್ವ. ಮುಖ್ಯವಾಗಿ ಸ್ವಾತಂತ್ರ್ಯ ಸಿಕ್ಕಿದ ಮೇಲೆ, ಇವತ್ತು ದೇಶದ ಸರ್ವಸ್ವತ್ತೂ ಇಲ್ಲಿಯ ಜನತೆಯದು. ಅದು ಜನತೆಯ ಹಿತಕ್ಕಾಗಿ ಉಪಯೋಗವಾಗಬೇಕು, ಅದು ಎಲ್ಲರಿಗೂ ಸುಖ ಜೀವನವನ್ನು ಕಲ್ಪಿಸಿ

(ಶ್ರೀ ಗೋಪಾಲ ಸಾಲೆನ್ನ)

ಕೊಡಬೇಕು ಈ ಮುಖ್ಯ ಧ್ಯೇಯವನ್ನು ಎಲ್ಲರೂ ಒಪ್ಪಿಕೊಂಡಿದ್ದರೂ ಆ ಪ್ರಕಾರವಾದ ಕೈಯಲ್ಲಿ ಹಿಡಿದುಕೊಂಡು, ಆಡಳಿತ ಪಕ್ಷವು ಹಲವಾರು ವರ್ಷಗಳ ಆಳ್ವಿಕೆಯಿಂದ ಅದನ್ನು ಜಾರಿಗೆ ತರಲಿಕ್ಕೆ ಆಗಲಿಲ್ಲ. ಅವರು, ಕಾಯಿದೆ ಕೇವಲ ಕಾಯಿದೆ ಮಾತ್ರವಾಗಿ ಉಳಿದಿದೆ ಕಾಯಿಯಿಂದಲೇ ಜನರ ಹೃದಯವನ್ನು ಪರಿವರ್ತನೆ ಮಾಡುವುದಕ್ಕಾಗುವುದಿಲ್ಲ ಎಂಬ ದೃಷ್ಟಿಯಿಂದ ಧಾರ್ಮಿಕ ಚಳುವಳಿಯನ್ನು ದೇಶದ ಮುಂದಿಟ್ಟರು. ಇದಕ್ಕೆ ಸಾಕಷ್ಟು ಸ್ವಾಗತ ಸಿಕ್ಕಲಿಲ್ಲ. ಅದು ಸಂಪೂರ್ಣ ಪರಾಜಯ ಹೊಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಜನರು ಅವರು ಹೇಳಿದ ರೀತಿಯಲ್ಲಿ ಮುಂದೆ ಬಂದು ಗ್ರಾಮಗಳನ್ನು ದಾನ ಮಾಡಲಿಲ್ಲ, ತಮ್ಮ ಬ್ಯಾಂಕುಗಳನ್ನು ದಾನ ಮಾಡಲಿಲ್ಲ, ತಮ್ಮ ಸ್ವತ್ತುಗಳನ್ನು ದಾನಮಾಡಲಿಲ್ಲ. ಸರ್ವ ಜನರೂ ದಾನ ಕೊಟ್ಟು, ರಾಷ್ಟ್ರದ ಸ್ವತ್ತನ್ನು ಸಮಾನ ಹಿತಕ್ಕಾಗಿ ಉಪಯೋಗಿಸಿಕೊಳ್ಳಲು ಮುಂದೆ ಬರಲಿಲ್ಲ. ಆದ್ದರಿಂದ ಆ ತತ್ವ ಸಂಪೂರ್ಣವಾಗಿ ನಮ್ಮ ರಾಷ್ಟ್ರದಲ್ಲಿ ಪರಾಜಯ ಪಡೆದಿದೆ. ಅವರ ಮಹತ್ವದ ಉದ್ದೇಶ ಧ್ಯೇಯಕ್ಕೆ ಸ್ವಾಗತ ಸಿಕ್ಕಲಿಲ್ಲವೆಂಬುದು ಸ್ಪಷ್ಟವಾಗಿದೆ.

ಈಗ ಅವರ ಮಹತ್ವದ ಉದ್ದೇಶ, ಅವರ ಸೇವೆಯ ಫಲವಾಗಿ ಅಲ್ಪ ಸ್ವಲ್ಪ ಗಮನವನ್ನು ಸೆಳೆದಿದೆ. ಅದನ್ನು ಉಪಯೋಗಿಸಿಕೊಂಡು ಇನ್ನೊಂದು ಜಮೀನುದಾರಿ ಪದ್ಧತಿಯನ್ನು ಸ್ಥಾಪಿಸಿ, ಅವರ ಮೂಲಕ ಗೇಣಿಯನ್ನು ವಸೂಲುಮಾಡಿ ಸ್ವಲ್ಪ ಆಡಳಿತವನ್ನು ನಡೆಸೋಣವೆಂದು ಈಗ ಸರ್ಕಾರ ಮುಂದೆ ಬಂದಿದೆ. ಇದು ಅವರ ತತ್ವವನ್ನು ಒಂದು ರೀತಿಯಾಗಿ ಕೊಲೆ ಮಾಡುವುದು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಏಕೆಂದರೆ ಜನರ ಹಿತಕ್ಕಾಗಿ ಕಾಯಿದೆ ಇಲ್ಲದೆ, ತಾವೇ ಸರ್ವಸ್ವವನ್ನೂ ಕೊಡಬೇಕೆಂಬುದು ಅವರ ಉದ್ದೇಶ. ಆದರಿಂದ ಪರಸ್ಪರ ವಿಶ್ವಾಸ, ಸೌಹಾರ್ದ, ಸಹಬಾಳ್ವೆ ಪಡೆದುಕೊಳ್ಳಬಹುದು. ಅದರ ಬದಲು ಕಾಯಿದೆ ರೀತಿಯಲ್ಲಿ, ಹೊಲದಲ್ಲಿ ಈ ಯೋಜನೆಯನ್ನು ತಂದು, ಅಧಿಕಾರ ತೆಗೆದುಕೊಂಡು ಬಲಾತ್ಕಾರವಾಗಿ ಗೇಣಿ ಮುಂತಾದುವನ್ನು ವಸೂಲು ಮಾಡಿದರೆ, ಅವರ ಮೂಲ ತತ್ವಕ್ಕೆ ವಿರೋಧ ಎಂಬುದನ್ನು ಸರ್ಕಾರ ತಿಳಿದುಕೊಳ್ಳಬೇಕಾಗಿದೆ.

ಭೂಸುಧಾರಣೆಯನ್ನು ತರುವಂಥ ಜವಾಬ್ದಾರಿ ಸರ್ಕಾರದ ಕೈಯಲ್ಲಿದೆ. ಭೂಸುಧಾರಣೆ ಎಂದರೆ ಈಗಿರುವಂಥ ಹಲಕೆಲವು ರೈತರಿಂದ ಭೂಮಿಯನ್ನು ತೆಗೆದುಕೊಂಡು ಇನ್ನೊಂದು ವರ್ಗಕ್ಕೆ ಕೊಡತಕ್ಕದ್ದಲ್ಲ. ಜನರಿಗೆ ಸುಖವಾದ ಜೀವನ ದೊರೆಯಬೇಕು; ರೈತರಿಗೆ ಈಗಿರುವಂಥ ಭೂಮಿಯ ಅನುಭವದ ಖಾಯಂ ಹಕ್ಕು ಸಿಕ್ಕಬೇಕು, ಅವರ ಶ್ರಮದಿಂದ ಸರ್ವ ವಿಧದಲ್ಲಿಯೂ ಅಭಿವೃದ್ಧಿ ಮಾಡಿಕೊಂಡು ಯಾವ ವರ್ಗಕ್ಕೂ ನಷ್ಟವಾಗದ ರೀತಿಯಲ್ಲಿ ಎಲ್ಲ ಜನರಿಗೂ ಹಿತವಾಗುವ ರೀತಿಯಲ್ಲಿ ಭೂಸುಧಾರಣೆಯನ್ನು ತರುವಂಥಾದ್ದು ಈ ಸರ್ಕಾರದಿಂದ ಸಾಧ್ಯವಾಗಲಿಲ್ಲ. ಜನರ ಕಣ್ಣಿಗೆ ಮಣ್ಣು ಹಾಕುವಂಥ, ಸಾಮಾನ್ಯ ಜನರನ್ನು ವಂಚಿಸುವಂಥ, ಜನರಲ್ಲಿ ಕುತೂಹಲವನ್ನು ಎಬ್ಬಿಸುವಂಥ ಕಾಯಿದೆಗಳನ್ನು ತಂದು ರಾಷ್ಟ್ರಕ್ಕೆ ಗಂಡಾಂತರವನ್ನು ತಂದೊಡ್ಡುತ್ತಾರೆನ್ನುವ ಅನುಮಾನ ಇಲ್ಲಿ ಒದಗಿದೆ. ಅದರ ಜೊತೆಯಲ್ಲಿ ಇಂಥ ಒಂದು ಕಾಯಿದೆಯನ್ನು ತಂದು ಮಾಲಕತ್ವವನ್ನು ಭದ್ರಪಡಿಸತಕ್ಕ ನೀತಿ ಸರಿಯಲ್ಲ. ಆದುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳುವುದು ಉತ್ತಮ. ಒಂದು ವೇಳೆ ಅದನ್ನು ಕ್ರಮಪಡಿಸಬೇಕು, ಈಗಿರುವಂತಹ ಭೂಮಿಯನ್ನು ವಿತರಣೆ ಮಾಡುವುದನ್ನು ಕ್ರಮಪಡಿಸಬೇಕು ಎಂದು ಇದ್ದರೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿ ಮುಂದಿನ ಜನಾಂಗಕ್ಕೆ ಯಾವ ಅಡ್ಡಿ ಆತಂಕಗಳೂ ಬಾರದ ಹಾಗೆ ಎಲ್ಲ ವಿಚಾರಗಳನ್ನೂ ಪರಿಶೀಲಿಸಿ ವರದಿಯನ್ನು ಒಪ್ಪಿಸುವಂತೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸುವುದಗತ್ಯವೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

5-30 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಚಿಕ್ಕ ಮಸೂದೆಯ ಬಗ್ಗೆ ಇಷ್ಟೊಂದು ದೀರ್ಘವಾದ ಭಾಷಣ ನಡೆಯುತ್ತದೆಂದು ನಾನು ತಿಳಿದುಕೊಂಡಿರಲಿಲ್ಲ. ಎರಡೂವರೆ ಗಂಟೆ ಕಾಲ ನಡೆದ ಟೀಕೆಗಳಲ್ಲಿ ಮಾನ್ಯ ಸದಸ್ಯರ ಉದ್ದೇಶ ಒಳ್ಳೆಯದಾಗಿದ್ದರೂ ಬಹುಮಟ್ಟಿಗೆ ವಿಷಯವನ್ನು ಪೂರ್ತಿ ತಿಳಿದುಕೊಳ್ಳದೆ ಟೀಕೆ ಮಾಡಿದ ಪರಿಸ್ಥಿತಿ ಇತ್ತು. ನಾನು ವಿಷಯವನ್ನು ಪೂರ್ತಿ ತಿಳಿಸುವುದಕ್ಕೆ ಪ್ರಯತ್ನಪಟ್ಟರೂ ನಾವು ಮಾತನಾಡಲೇಬೇಕು ಎಂದು ಇರುವುದರಿಂದ ಮಾತನಾಡುತ್ತೇವೆ ಎಂದು ವರ್ತಿಸಿದ್ದರಿಂದ ನಾನು ಏನೂ ಹೇಳುವುದಕ್ಕೆ ಆಗದೆ ಹೋಯಿತು, ಮುಖ್ಯವಾಗಿ ಎರಡೂವರೆ ಗಂಟೆ ಕಾಲದಲ್ಲಿ ನಡೆದ ಚರ್ಚೆಯಲ್ಲಿ ವಿನೋಬಾಜಿಯವರ ತತ್ವವನ್ನು ನಾವೆಲ್ಲರೂ ಒಪ್ಪಿದ್ದರೂ ಈ ವಿಧೇಯಕವನ್ನು ಒಪ್ಪುವುದಿಲ್ಲವೆನ್ನುವ ರೀತಿಯಲ್ಲಿ ವಾದ ನಡೆಯಿತು.

ಮಾನ್ಯ ಸದಸ್ಯರ ಟೀಕೆಗಳಿಗೆಲ್ಲ ಒಂದೇ ಉತ್ತರ ಕೊಡಬಹುದು. ಇದಕ್ಕೆ ಪೂರ್ತಿಯಾಗಿ ವಿನೋಬಾಜಿಯವರ ಆಶೀರ್ವಾದವಿದೆ. ನಾವು ಇದನ್ನು ರಚನೆ ಮಾಡಿದ್ದರೂ ಕೇಂದ್ರ ಸರ್ಕಾರದವರು ವಿನೋಬಾಜಿಯವರ ಅಪ್ಪಣೆಯಂತೆ, ಅವರ ಅನುಮತಿಯನ್ನು ಪಡೆದು ಒಂದು ಮಾಡೆಲ್ ಬಿಲ್ ತಯಾರಿಸಿ ಎಲ್ಲ ರಾಜ್ಯಗಳಿಗೂ ಕಳಿಸಿಕೊಟ್ಟರು. ಅದರ ಪ್ರಕಾರವೇ ನಮ್ಮ ಬಿಲ್ ತಯಾರಾಗಿದೆ. ಅದರ ಜೊತೆಗೆ ಭೂದಾನ ಬಹುಮಟ್ಟಿಗೆ ನಡೆದಿರುವ ಪ್ರಾಂತಗಳು ಎಂದರೆ ಬಿಹಾರ ಮತ್ತು ಆಂಧ್ರ. ಅಲ್ಲಿ ಲಕ್ಷಾಂತರ ಎಕರೆ ಭೂಮಿ ದಾನವಾಗಿದೆ. ಆ ಪ್ರಾಂತಗಳಲ್ಲಿ ಆಗಿರುವ ಕಾನೂನನ್ನು ತರಿಸಿ ಅದರ ಪ್ರಕಾರವೇ, ಏನೂ ವ್ಯತ್ಯಾಸವಿಲ್ಲದೆ ಈ ಕಾನೂನನ್ನು ನಿರೂಪಮಾಡಿದೆ. ವಿನೋಬಾಜಿಯವರು ಒಂದು ಸ್ಥಳದಲ್ಲಿರುವವರಲ್ಲ. ಭೂದಾನ ಬಂದ ತಕ್ಷಣ ಅವರು ಮುಂದಿನ ಊರಿಗೆ ಹೋಗುತ್ತಾರೆ. ಆ ದೃಷ್ಟಿಯಿಂದ ಅನೇಕ ಪ್ರಾಂತಗಳಲ್ಲಿ ಲಕ್ಷಾಂತರ ಎಕರೆ ಜಮೀನು ಬಂದರೂ ಕೂಡ ನೂರರಲ್ಲಿ ಒಂದು ಭಾಗ ಕೂಡ ರೈತರಿಗೆ ಹಂಚಿಕೆಯಾಗಿಲ್ಲ, ಭೂಮಿ ಒಂದು ಆಸ್ತಿ. ತತ್ವದ ವಿಷಯದಲ್ಲಿ ಯಾರು ಎಷ್ಟೇ ಮಾತನಾಡಿದರೂ ಆಸ್ತಿಯ ವಿಷಯಕ್ಕೆ ಬಂದಾಗ ಪ್ರಪಂಚದಲ್ಲೆಲ್ಲ ಒಂದೇ ರೀತಿಯಾಗಿ ನಡೆಯುತ್ತಾರೆ. ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಮತ್ತು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮತ್ತು ಪ್ರಪಂಚದ ಎಲ್ಲ ಮುಖ್ಯ ದೇಶಗಳಲ್ಲಿಯೂ ನಾನು ನೋಡಿ ಬಂದಿದ್ದೇನೆ. ಎಲ್ಲ ವಿಷಯವನ್ನೂ ಮಾತನಾಡುತ್ತಾರೆ. ಆದರೆ ಆಸ್ತಿಯ ವಿಷಯಕ್ಕೆ ಬಂದಾಗ ಅದೆಲ್ಲ ಕಾನೂನು ಕಟ್ಟಲೆಗೆ ಒಳಪಟ್ಟಿರುತ್ತದೆ. ಆದುದರಿಂದ ಆಸ್ತಿ ಎನ್ನುವ ವಸ್ತು ಕೆಲವು ಕಾನೂನುಗಳಿಗೆ ಒಳಪಟ್ಟಿರಬೇಕಾಗುತ್ತದೆ. ದಾನವಾಗಿ ಬಂದಿರುವ ಭೂಮಿಯನ್ನು ಸರಿಯಾದ ರೀತಿಯಲ್ಲಿ ಜನರಿಗೆ ಹಂಚುವ ವ್ಯವಸ್ಥೆ ಮಾಡುವ ದೃಷ್ಟಿಯಿಂದ ಕಾನೂನು ಮಾಡಲೇಬೇಕು. ವಿನೋಬಾಜಿಯವರು ಸರ್ವೋದಯ ಸಂಘವೆಂದು ಮಾಡಿದ್ದಾರೆ. ಅವರ ಶಿಷ್ಯರಾದ ವಲ್ಲಭ ಸ್ವಾಮಿಯವರು ಮೈಸೂರು ದೇಶದಲ್ಲಿ ಅವರ ಪ್ರತಿನಿಧಿಯಾಗಿದ್ದಾರೆ. ಅವರ ಪೂರ್ಣ ಒಪ್ಪಿಗೆ ಈ ಮಸೂದೆಗೆ ಇದೆ. ಆದುದರಿಂದ ಸರ್ಕಾರದವರು ತತ್ವಕ್ಕೆ ವಿರೋಧವಾಗಿ, ವಿನೋಬಾಜಿಯವರು ಇಟ್ಟುಕೊಂಡಿರುವ ಧ್ಯೇಯಕ್ಕೆ ವಿರೋಧವಾಗಿ ಇದನ್ನು ಮಾಡಿದ್ದಾರೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಶುದ್ಧ ತಪ್ಪು. ವಿನೋಬಾಜಿಯವರ ಆಶೀರ್ವಾದ ಮತ್ತು ಅವರ ಪ್ರತಿನಿಧಿಯಾಗಿರುವ ಸರ್ವೋದಯ ಸಂಘದ ಕಾರ್ಯದರ್ಶಿಯವರಾದ ವಲ್ಲಭ ಸ್ವಾಮಿಯವರ ಪೂರ್ತಿ ಸಹಕಾರ ಮತ್ತು ಒಪ್ಪಿಗೆಯಿಂದ ಈ ಮಸೂದೆಯನ್ನು ಸರ್ಕಾರ ಸಭೆಯ ಮುಂದೆ ತಂದಿದೆ.

ಎರಡನೆಯ ವಿಷಯ ಬೋರ್ಡಿನ ನೇಮಕಕ್ಕೆ ಸಂಬಂಧಪಟ್ಟದ್ದು. ಮೈಸೂರು ರಾಜ್ಯದಲ್ಲಿ ಅನೇಕ ಬೋರ್ಡುಗಳಾಗಿ ಅವು ನಮ್ಮ ಜನಗಳು ಮೇಯುವುದಕ್ಕೆ ಹುಲ್ಲುಗಾವಲುಗಳಂತಾಗಿವೆ ಎಂದು ಅನೇಕ ಸದಸ್ಯರು ಮಾತನಾಡಿದರು. ಈ ಬೋರ್ಡನ್ನು ಸರ್ಕಾರ ಮಾಡುವುದೇ ಇಲ್ಲ. ಸರ್ಕಾರ ಇದರಲ್ಲಿ ಒಬ್ಬ ವ್ಯಕ್ತಿಯನ್ನೂ ನೇಮಿಸುವುದಿಲ್ಲ, ಆ ಅಧಿಕಾರ ಸರ್ಕಾರಕ್ಕೆ ಇಲ್ಲ. ವಿನೋಬಾಜಿಯವರು ಯಾರ ಹೆಸರುಗಳನ್ನು ಸರ್ಕಾರಕ್ಕೆ ತಿಳಿಸುತ್ತಾರೆಯೋ ಅಂಥವರು ಮಾತ್ರ ಈ ಬೋರ್ಡಿನಲ್ಲಿ ಸದಸ್ಯರಾಗಿರುತ್ತಾರೆಂದು ಕಾನೂನು ಪ್ರಕಾರ ಮಾಡಿರುವುದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಕಾಂಗ್ರೆಸ್‌ನವರು ತಮ್ಮ ಸ್ವಂತ ಜನಗಳು ಮೇಯುವುದಕ್ಕೆ ಈ ಬೋರ್ಡನ್ನು ಮಾಡುತ್ತ ಇಲ್ಲ. ಎದುರು ಪಕ್ಷದವರು ಮಾತನಾಡಿದುದನ್ನು ನೋಡಿದರೆ ವಿನೋಬಾಜಿಯವರ ಶಿಷ್ಯ ಮಂಡಲಿಯವರು ಜಾಸ್ತಿ ಇದ್ದಹಾಗೆ ಕಾಣುತ್ತದೆ. ಆದ್ದರಿಂದ ಅವರಲ್ಲಿ ಅನೇಕರಿಗೆ ಈ ಬೋರ್ಡಿನಲ್ಲಿ ಸದಸ್ಯರಾಗಲು ಅವಕಾಶವಿದೆ.

ಎಲ್ಲರೂ ಒಳ್ಳೆಯ ಉದ್ದೇಶದಿಂದಲೇ ಮಾತನಾಡಿದ್ದಾರೆ. ಆದರೆ ಇದರ ತಿಳಿವಳಿಕೆ ಇಲ್ಲದೆ ಅವರು ಸುಮ್ಮನೆ ಟೀಕೆ ಮಾಡಿ ಎರಡೂವರೆ ಗಂಟೆಕಾಲ ಮಾತನಾಡಿದ್ದಾಯಿತು. ಅವರಿಗೆಲ್ಲ ವಿನೋಬಾಜಿಯವರಲ್ಲಿರುವ ಪ್ರೀತಿ ವಿಶ್ವಾಸಗಳಿಗೆ ಬಹಳ ಸಂತೋಷಪಡುತ್ತೇನೆ. ಮುಂದೆ ಸಂದರ್ಭ ಬಂದಾಗ ಯಾರಲ್ಲಾದರೂ ಹೆಚ್ಚಿಗೆ ಭೂಮಿ ಇದ್ದರೆ ಅದು ದಾನವಾಗಿ ಬರುವುದಕ್ಕೆ ಪ್ರಯತ್ನಪಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಎಂದರೆ ವಿನೋಬಾ ಅವರ ತತ್ವದ ಬಗ್ಗೆ ಒಂದೆರಡು ಟೀಕೆ ಬಂದವು—ಇದು ಎಂತಹ ಚಳುವಳಿ ಎಂದು—ಅದು ಏನಾದರೂ ಆಗಲಿ ದೊಡ್ಡ ತತ್ವಗಳು ಬಂದಾಗ ದೊಡ್ಡದಾದ ಟೀಕೆಗಳೂ ಇದ್ದೇ ಇರುತ್ತವೆ. ಒಂದು ಮಾತನ್ನು ಖಡಾಖಂಡಿತವಾಗಿ ಹೇಳಬಹುದು ಇದು ಒಳ್ಳೆಯ ವಾತಾವರಣವನ್ನು ಕಲ್ಪನೆ ಮಾಡಿಕೊಟ್ಟಿದೆ– ಭೂ ಸುಧಾರಣೆ ಮಾಡುವುದಕ್ಕೆ ಸೈಕಲಾಜಿಕಲ್ ಅಟ್ಮಾಸ್‌ಫಿಯರ್ ಉಂಟಾಗಿದೆ ಹಿಂದೂಸ್ತಾನದಲ್ಲಿ ಹೆಚ್ಚು ಭೂಮಿಯನ್ನು ಇಟ್ಟುಕೊಂಡಿರುವವರು ಭೂ ರಹಿತರಿಗೆ ಭೂಮಿಯನ್ನು ಕೊಡಬೇಕು—ಉಳುವವನೇ ಭೂಮಿಯ ಒಡೆಯನಾಗಿರಬೇಕು ಎಂಬ ವಾತಾವರಣವನ್ನು ಕಲ್ಪನೆ ಮಾಡಿರತಕ್ಕ ಈ ಸಂದರ್ಭದಲ್ಲಿ ಇದನ್ನು ತಂದಿರುತ್ತೇವೆ. ಕಬ್ಬಿಣವನ್ನು ಕಾಯಿಸಿದಾಗ ಹೊಡೆದರೆ ಬೇಕಾದ ರೀತಿಯಲ್ಲಿ ಬರುತ್ತದೆ—ಕಾಯಿಸದೇ ಹೊಡೆದರೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಏನು ಮಾಡಿದರೂ ಬಗ್ಗಿಸುವುದಕ್ಕಾಗುವುದಿಲ್ಲ. ಇಂತಹ ಒಂದು ವಾತಾವರಣವನ್ನು ಕಲ್ಪನೆ ಮಾಡಿದ ಕೀರ್ತಿ ವಿನೋಬಾ ಅವರಿಗೆ ಸಲ್ಲುತ್ತದೆ. ಆ ದೃಷ್ಟಿಯಿಂದ ಈ ಒಂದು ಕಾನೂನನ್ನು ತಂದು ಇಟ್ಟಿದ್ದೇವೆಯೇ ಹೊರತು, ವಿನೋಬಾ ಅವರ ತತ್ವಕ್ಕೆ ಇದು ಎಳ್ಳಷ್ಟೂ ವಿರೋಧವಾಗಿಲ್ಲ, ಅವರ ಒಪ್ಪಿಗೆ ಪಡೆದೇ ಒಂದು ಬೋರ್ಡನ್ನು ನಿರ್ಮಾಣ ಮಾಡುತ್ತೇವೆ; ಅದಕ್ಕೆ ಅವರು ನಾಮಿನೇಷನ್ ಮಾಡುತ್ತಾರೆ. ಬಿಹಾರ, ಬಂಗಾಳ, ಬೊಂಬಾಯಿ ಇಲ್ಲೆಲ್ಲಾ ಈ ಬೋರ್ಡಿಗೆ ವಿನೋಬಾ ಅವರು ನಾಲ್ಕು ವರ್ಷಕ್ಕೆ ಒಮ್ಮೆ ಪಟ್ಟಿ ಕಳುಹಿಸುತ್ತಾ ಇದ್ದಾರೆ. ಆದ್ದರಿಂದ ಈ ತತ್ವಕ್ಕೂ ನಿಮ್ಮ ಮನಸ್ಸಿನಲ್ಲಿರುವುದಕ್ಕೂ ಏನೂ ವ್ಯತ್ಯಾಸವಿಲ್ಲ, ನಿಮ್ಮ ಮನಸ್ಸಿನಲ್ಲಿರುವ ರೀತಿಯಲ್ಲೇ ಮಾಡಿದೆ ಎಂದು ವಿನೋಬ ಅವರ ಶಿಷ್ಯಮಂಡಲಿ ಯಾದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ತಮಗಳಿಗೆಲ್ಲಾ ವಂದನೆಗಳನ್ನರ್ಪಿಸಿ ಈ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—The question is :

"That the Mysore Bhoodan Yagna Bill, 1963 as passed by Legislative Council, be taken into consideration."

The motion was adopted.

Mr. SPEAKER.—The question is :

"That clauses 2 and 3 stand part of the Bill"

The motion was adopted.

Clauses 2 and 3 are added to the Bill.

Sri B. R. SUNTHANKAR.—I beg to move an amendment to clause 4.

"That the proviso to sub-clause 2 be deleted."

Mr. SPEAKER.—The question is :

"That the proviso to sub-clause 2 to be deleted."

The amendment was negatived.

Mr. SPEAKER.—The question is :

"That clause 4 stand part of the Bill."

The motion was adopted.

Sri B. R. SUNTHANKAR.—I beg to move :

(i) "That the proviso to sub-clause (1) be deleted.

(ii) In sub-clause 2 the words "on the recommendation of Sri Acharya Vinobha Bhave be deleted."

Mr. SPEAKER.—Amendment moved :

(i) "That the proviso to sub-clause (1) be deleted."

(ii) "That in sub-clause 2 the words "on the recommendations of Sri Acharya Vinobha Bhave be deleted."

Sri C. J. MUCKANNAPPA.—May I know the intention behind this proviso ?

Mr. SPEAKER.—The Hon'ble Member was not present during the Debate. Now he is asking the questions.

ಶ್ರೀ ಎಂ. ವಿ. ಕೃಷ್ಣಪ್ಪ.—ಪೂಜ್ಯ ಭಾವೆ ಅವರ ಈ ಪ್ರಚಂಡವಾದ ಚಳುವಳಿಯನ್ನು ಅವರು ಹಿಂದೂಸ್ಥಾನದಲ್ಲಿ ಪ್ರಪಂಚದಲ್ಲೇ ಮೊದಲು ಪ್ರಾರಂಭ ಮಾಡಿದ್ದರಿಂದ ಅವರ ಗೌರವದ ರೂಪವಾಗಿ ಸರ್ಕಾರದವರು ಅವರಿಗೆ ಅವರ ನಾಮಿನೇಷನ್ನು ಈ ಬೋರ್ಡ್‌ನಲ್ಲಿ ಸೇರಿಸಿರಬೇಕೆಂದು ಅವಕಾಶ ಕಲ್ಪಿಸಿಕೊಡಲು ಎಲ್ಲಾ ಸರ್ಕಾರಗಳೂ ಒಂದು ನಿಯಮವನ್ನು ಮಾಡಿಕೊಂಡಿವೆ. ಕೇಂದ್ರಸರ್ಕಾರದ ಮಸೂದೆಯಲ್ಲೂ ಕೂಡ ಇದು ಇದೆ. ಈಗಾಗಲೇ ಅನೇಕ ಟೀಕೆಗಳು ಬಂದಿವೆ, ಕಾಂಗ್ರೆಸ್ ಮಂತ್ರಿಗಳು ಕೆಲವರು ಹೋಗುವವರು ಇದ್ದಾರೆ, ಅವರನ್ನು ಸೇರಿಸುವುದಕ್ಕೆ ಇಂತಹ ಬೋರ್ಡುಗಳನ್ನು ಮಾಡುತ್ತಾ ಇದ್ದಾರೆ ಎಂದು ಆ ಒಂದು ಅಪಾದನೆಯನ್ನು ತಪ್ಪಿಸಿಕೊಳ್ಳುವುದಕ್ಕೆ ವಿನೋಬಾ ಅವರೇ ತಮ್ಮ ನಾಮಿನೇಷನ್ನು ಮೂಲಕ ಇದಕ್ಕೆ ನೇಮಕ ಮಾಡಲಿ ಎಂದು ಹೇಳಿ ಈ ರೀತಿ ಮಾಡಿದ್ದೇವೆ.

Mr. SPEAKER.—The question is :

(i) " That the proviso to sub-clause (1) be deleted."

(ii) That in sub-clause 2 the words "on the recommendation of Sri Acharya Vinobha Bhave" be deleted".

The amendment was negatived.

Mr. SPEAKER.—The question is :

" That clause 5 stand part of the Bill."

The motion was adopted.

Clause 5 was added to the Bill.

CLAUSES 6 to 12

Mr. SPEAKER.—The question is:

" That the clauses 6 to 12, both the clauses stand part of the Bill."

The motion was adopted.

Clauses 6 and 12 both inclussive were added to the Bill.

Sri B. R. SUNTHANKAR.—Sir, I beg to move :

"That in clause 13, sub-clause (1), line 2, the words "in consultation with Shri Acharya Vinobha Bhave" shall be deleted."

Mr. SPEAKER.—Amendment moved:

" That in Clause 13, sub-clause (1), line 2, the words " in consultation with Shri Acharya Vinobha Bhave" shall be deleted."

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರಾಜ್ಯದಲ್ಲಿರತಕ್ಕ ಜನರು ಈ ಭೂದಾನಕ್ಕಿಂತ ಹೆಚ್ಚಿನದಾದ ಮಂತ್ರಿದಾನ ಬೇಕೆಂದೂ ಅದರ ಆವಶ್ಯಕತೆ ಬಹಳವಾಗಿರುತ್ತದೆಂದೂ ಹೇಳುತ್ತಿರುವಾಗ ನಮ್ಮ ಮಂತ್ರಿಗಳ ಮನಸ್ಸು ಆ ಕಡೆಗೆ ಹೋಗುತ್ತಿಲ್ಲ. ಈ ಹಿಂದೆ 3-4 ವರ್ಷಗಳಲ್ಲಿ ಭಾವೆಯವರು ಈ ಪ್ರಾಂತ್ಯದಲ್ಲಿ ಸಂಚರಣೆ ಬಂದಿದ್ದಾಗ, ಇದನ್ನು ಪೂರ್ಣ ಯಶಸ್ವಿಗೊಳಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಅನೇಕ ಕಡೆ ಚಪ್ಪರಗಳನ್ನೂ ಹಾಕಿದ್ದರು. ಆದರೆ ಈಗ ಅನೇಕ ಜನಗಳಿಗೆ ಈ ದಾನ ಕೊಟ್ಟಿದ್ದ ಜಮೀನು ಕ್ರಯವಾಗಿರುತ್ತದೆ. ಎರಡು ಮೂರು ಕೈಗಳು ದಾಟಿಹೋಗಿದೆ, ಈಗ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಬಹಳ ಕಷ್ಟ. ಪೂಜಾರಿಗೆ ದುಡ್ಡು ಕೊಟ್ಟು ಆಶೀರ್ವಾದ ಪಡೆದಹಾಗೆ ಆಗುತ್ತದೆ. ಯಾರೋ ಬೇರೆಯವರು ಕೊಟ್ಟಿರತಕ್ಕ ದಾನದ ಬಗ್ಗೆ ಮಂತ್ರಿಗಳು ಪ್ರೋತ್ಸಾಹ ತೋರಿಸಲು ಹೊರಟಿದ್ದಾರೆ. ಇವರ ಕಡೆಯಿಂದ ಇಂಥ ಯಾವ ದಾನವೂ ಬಂದಿಲ್ಲ. ಈ ಬಿಲ್ಲನ್ನು ಮುಂದುವರಿಸುವುದಕ್ಕೆ ಇವರಿಗೆ ಯಾರಿಗೂ ಮನಸ್ಸಿಲ್ಲ, ಇದನ್ನು ಕೇಳತಕ್ಕವರಿಗಾದರೂ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಇವರು ಹೇಳಿದ್ದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

Mr. SPEAKER.—Is the Hon'ble Minister for Revenue accepting the amendment ?

Sri M. V. KRISHNAPPA.—No, Sir.

Sri B. R. SUNTHANKAR.—In this clause it is stated:

"in consultation with Sri Acharya Vinoba Bhave."

Nothing is clear as to what will happen after the death of Vinoba Bhave? Where the Government should go to consult him? The Government will have to go to Heavens.

Sri M. V. KRISHNAPPA.—Please read clause 4. It is very clear. Even in his life time, we will just take the names from him. Ultimately, it is the Government which will nominate. Second portion also says that if by a specific time Vinobaji does not nominate, Government has the right to nominate.

Sri B. R. SUNTHANKAR.—According to this.....

Mr. SPEAKER.—Consultation can be only during his life time. Does the Hon'ble member seriously suggest that consultation is after his death? The question is:

"That in Clause 13, sub-clause (1), line 2, the words "in consultation with Sri Acharya Vinobha Bhave" shall be deleted."

The amendment was negatived.

Mr. SPEAKER.—The question is:

"That Clause 13 stand part of the Bill."

The motion was adopted.

Clause 13 was added to the Bill.

Mr. SPEAKER.—The question is:

"That Clauses 14, 15 and 16 stand part of the Bill."

The motion was adopted.

Clauses 14, 15 and 16 were added to the Bill.

CLAUSE 17.

Sri B. R. SUNTHANKAR.—Sir, I beg to move:

"That in Clause 17, item (iii), sub-clause (2), the words "and/or Scheduled Tribes" shall be added after the words "Scheduled Castes."

Mr. SPEAKER.—Amendment moved:

"That in Clause 17, item (iii), sub-clause (2), "the words" "and/or Scheduled Tribes" shall be added after the words "Scheduled Castes."

Is the Hon'ble Minister accepting it?

Sri M. V. KRISHNAPPA.—No, Sir.

Mr. SPEAKER.—The question is:

"That in Clause 17, item (iii), sub-clause (2), the words "and/or Scheduled Tribes" shall be added after the words "Scheduled Castes."

The amendment was negatived.

Mr. SPEAKER.—The question is:
"That Clause 17 stand part of the Bill."

The motion was adopted.

Clause 17 was added to the Bill.

Mr. SPEAKER.—The question is:
"That Clause 18 stand part of the Bill."

The motion was adpoted.

Clause 18 was added to the Bill.

CLAUSE 19.

Sri B. R. SUNTHANKAR.—Sir, I beg to move:
"That in Clause 19"
"Sub-clause (2) shall be deleted."

Mr. SPEAKER.—Amendment moved:
'That in Clause 19"
"Sub-clause (2) shall be deleted."
Is the Hon'ble Minister accepting it?

Sri M. V. KRISHNAPPA.—No, Sir.

Mr. SPEAKER.—The question is:
"That in clause 19
"Sub-clause (2) shall be deleted."

The amendment was negatived.

Mr. SPEAKER.—The question is:
"That Clause 19 stand part of the Bill."

The motion was adopted.

Clause 19 was added to the Bill.

Mr. SPEAKER.—The question is:
"That Clauses 20 to 30, both inclusive, stand part of the Bill."

The motion was adopted.

"That Clauses 20 to 30, both inclusive, stand part of the Bill."

CLAUSE 1, TITLE AND PREAMBLE.

Mr. SPEAKER.—The question is:—
"That Clause 1, the Title and Preamble stand part of the Bill."

Motion to pass.

Sri M. V. KRISHNAPPA.—Sir, I beg to move:
"That the Mysore Bhoodan Yagna Bill, 1963 as passed by the Legislative Council, be passed."

ಶ್ರೀ ಎಸ್. ಗೋಪಾಲಗೌಡ.—ನನಗೆ ಈ ಮಸೂದೆ ಪಾಸಾಗುವುದರಲ್ಲಿ ಭಾಗಿಯಾಗಲು ಇಷ್ಟವಿಲ್ಲ. ಇದಕ್ಕೆ ನನ್ನ ಸಂಪೂರ್ಣ ವಿರೋಧವಿದೆ. ಆದುದರಿಂದ ನಾನು ವಾಕ್‌ಔಟ್ ಮಾಡುತ್ತೇನೆ.

(The Hon'ble member withdrew from the House).

Mr. SPEAKER.—The question is :—

"That the Mysore Bhoodan Yagna Bill, 1963 as passed by the Legislative Council, be passed."

The motion was adopted.

Mr. SPEAKER.—The House will now adjourn to meet at 12-30 P.M. tomorrow.

The House adjourned at Six of the Clock to meet again at Thirty Minutes past Twelve of the Clock on Tuesday, the 10th September 1963.

WD 1014 GPB—900—18-10-1963

MYSORE LEGISLATIVE ASSEMBLY

FORTY-EIGHTH DAY

Tuesday, 10th September 1963.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Amount granted to construct Gogi Nekara Colony at Gogi Village in Shahapur Taluk, Gulbarga District.

*Q.—581. Sri MAHANTASWAMY (Shahapur).—

Will the Government be pleased to state :—

(*a*) the amount granted to construct Gogi Nekara Colony at Gogi village, Shahapur Taluk, Gulbarga District ;

(*b*) when the amount was given to them ;

(*c*) the reasons for not constructing this Colony so far ;

(*d*) when they would construct the same ?

A.—Smt. YASHODARA DASAPPA (Minister for Social Welfare).—

(*a*) Rs. 3,89,660.

(*b*) First instalment of Rs. 1,09,660 paid on 31st March 1960.

(*c*) The construction of the Colony was entrusted to the Handloom Weavers' Co-operative Society. The Society started construction work as per the approved plan and estimates during 1960, but the work could not progress due to allegation of misuse of the moneys against the President of the Society, who has been directed to make good the amounts utilised by him for the production activities of both the Cotton and Silk Societies in Gogi.

(*d*) The work is since entrusted to Executive Engineer, Public Works Department, for completion.

ಶ್ರೀ ಮಹಾಂತಸ್ವಾಮಿ.—(ಬಿ) ನಲ್ಲಿ ಕೇಳಿರುವ ಈ ಹಣವನ್ನು ಸಂಘದಲ್ಲಿ ಇಟ್ಟಿದ್ದೀರಾ ಅಥವಾ ಬ್ಯಾಂಕಿನಲ್ಲಿ ಇಟ್ಟಿದ್ದೀರಾ ಎಂಬುದನ್ನು ಹೇಳುತ್ತೀರಾ ?

† ಶ್ರೀಮತಿ ಯಶೋಧರ ದಾಸಪ್ಪ.—ಸಂಘದವರು ಆ ಹಣವನ್ನು ತೆಗೆದುಕೊಂಡು ಬ್ಯಾಂಕಿನಲ್ಲಿ ಇಟ್ಟಿದ್ದಾರೆ.

ಶ್ರೀ ಮಹಾಂತಸ್ವಾಮಿ.—ಸಂಘದವರು ಬ್ಯಾಂಕಿನಿಂದ ಸುಮಾರು ಒಂದು ಲಕ್ಷದ ಒಂಬತ್ತು ಸಾವಿರದ ಆರುನೂರ ಅರವತ್ತು ರೂಪಾಯಿಗಳನ್ನು ತೆಗೆದುಕೊಂಡು ಸಂಘದಲ್ಲಿ ಕೇವಲ ನಾಲ್ಕು ಸಾವಿರ ರೂಪಾಯಿಗಳನ್ನು ಮಾತ್ರ ಜಮಾ ತೆಗೆದುಕೊಂಡದ್ದು ತಮ್ಮ ಗಮನದಲ್ಲಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಅದರಲ್ಲಿ 50 ಸಾವಿರ ರೂಪಾಯಿಗಳನ್ನು ಸೊಸೈಟಿಯ ಪ್ರೆಸಿಡೆಂಟರು ತೆಗೆದುಕೊಂಡು ಅದನ್ನು ಕೋ-ಆಪರೇಟಿವ್ ಸೊಸೈಟಿಯ ಕೆಲಸಗಳಿಗೆ ಉಪಯೋಗಿಸಿಕೊಂಡಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿದೆ.

Sri S. M. KRISHNA.—What is the amount misused by the President of the Society ?

Smt. YASHODARA DASAPPA.—Rs. 6,000.

ಶ್ರೀ ಸಿದ್ದಯ್ಯ ಕಾಶೀಮಠ.—ಸಂಘದ ಅಧ್ಯಕ್ಷರು ಹಣವನ್ನು ದುರುಪಯೋಗ ಮಾಡಿದ್ದರೆ ಇಲ್ಲಿಯವರೆಗೂ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಅದರಲ್ಲಿ 50 ಸಾವಿರ ರೂಪಾಯಿ ಜಮಾ ಬಂದಿದೆ. ನಾಲ್ಕು ಸಾವಿರ ರೂಪಾಯಿ ಮಾತ್ರ ಅವರಿಂದ ಬರಬೇಕು. ಅದನ್ನು ಕೂಡ ವಸೂಲು ಮಾಡುವುದಕ್ಕೆ ಕಾರ್ಯಕ್ರಮ ಮುಂದುವರಿಸುತ್ತಾ ಇದ್ದೇವೆ.

Sri S. RAJAGOPAL.—Since what date was the Executive Engineer entrusted with this work ?

ಶ್ರೀಮತಿ ಯಶೋಧರ ದಾಸಪ್ಪ.—ಈ ಹಣ ತೆಗೆದುಕೊಂಡಿರುವುದು 20ನೇ ಮಾರ್ಚ್ 1960 ರಲ್ಲಿ. ಆಗಲೇ ಆ ಹಣವನ್ನು ಮನೆಗಳನ್ನು ಕಟ್ಟಿಸುವುದಕ್ಕೆ ಕೊಡಬೇಕಾಗಿತ್ತು. ಆದರೆ ಆ ಹಣ ಅದಕ್ಕೆ ಸಂದಾಯವಾಗಿಲ್ಲ.

ಶ್ರೀ ಮಹಾಂತಸ್ವಾಮಿ.—ಈ ಹಣ ದುರುಪಯೋಗ ಪಡಿಸಿಕೊಂಡ ಅಧ್ಯಕ್ಷರ ಮೇಲೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಈಗ 50 ಸಾವಿರ ರೂಪಾಯಿಗಳು ಬಂದಿವೆ. ಉಳಿದಿರುವ 4 ಸಾವಿರ ರೂಪಾಯಿ ಅವರಿಂದ ಬರಬೇಕು ಎಂದು ಸರ್ಕಾರದವರ ಗಮನಕ್ಕೆ ಬಂದಿದೆ. ಈ ಹಣ ವಸೂಲು ಮಾಡುವುದಕ್ಕೆ ಅವರ ಮೇಲೆ ಮುಂದಿನ ಕ್ರಮ ಜಾರಿ ಮಾಡುತ್ತಾ ಇದ್ದೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅವರಿಂದ ಬರಬೇಕಾದ ಹಣದ ಮೇಲೆ ಬಡ್ಡಿ ಸಹ ವಸೂಲು ಮಾಡುತ್ತೀರಾ ಅಥವಾ ತಮ್ಮ ಹಣ ಎಷ್ಟು ಬರಬೇಕೋ ಅದನ್ನು ತೆಗೆದುಕೊಂಡು ಸುಮ್ಮನೆ ಇರುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಬಡ್ಡಿ ವಸೂಲು ಮಾಡುವುದಿಲ್ಲ; ಅಸಲು ಬಂದರೆ ಸಾಕಾಗಿದೆ.

Sri S. RAJAGOPAL.—Have any more such cases been brought to the notice of Government ?

ಶ್ರೀಮತಿ ಯಶೋಧರ ದಾಸಪ್ಪ.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ಬೈರೇಗೌಡ.—ಇಷ್ಟು ಭಾರಿ ಮೊಬಲಗನ್ನು ಕೊಟ್ಟಾಗ ನಿಮ್ಮ ಇಲಾಖೆಯವರ ಸೂಪರ್‌ವಿಷನ್ ಇರಲಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಯವರು ಈ ಹಣವನ್ನು ತೆಗೆದುಕೊಂಡಿರುವುದು—ಅಲ್ಲಿ 100 ಜನಗಳಿಗೆ ಮನೆ ಕಟ್ಟಿಸಲು 3,600 ರೂಪಾಯಿಗಳು ಬೇಕೆಂದು ಕೇಳಲಾಗಿತ್ತು ಮತ್ತು ವೀವಿಂಗ್ ಸೊಸೈಟಿಗೆ ಖರ್ಚು ಮಾಡುವುದಕ್ಕೆ ಹಣ ಬೇಕೆಂದು ತೆಗೆದುಕೊಂಡಿದ್ದರು. ಮನೆಗಳನ್ನು ಕಟ್ಟಿಸುವುದಕ್ಕೂ ಸಹ ಆ ಸೊಸೈಟಿಯಿಂದ ಆಗಿಲ್ಲ. ಅವರು ಆ ಹಣವನ್ನು ವ್ಯಾಪಾರಕ್ಕೆ ಉಪಯೋಗಿಸಿಕೊಂಡಿದ್ದಾರೆ. ಈಗ ಅದನ್ನು ವಸೂಲು ಮಾಡಿ ಎಂದು ಹೇಳಿದ್ದೇವೆ.

---

†Indicates that the remarks or speeches have not been revised by the member concerned.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ತಾವು ಸುಮ್ಮನೇ ಈ ಹಣವನ್ನು ವಸೂಲು ಮಾಡುತ್ತೀರಾ ಅಥವಾ ಅವರ ಮೇಲೆ ಕ್ರಿಮಿನಲ್ ಪ್ರೊಸೀಡಿಂಗ್ಸ್ ಏನಾದರೂ ಇನ್‌ಸ್ಟಿಟ್ಯೂಟ್ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಹಣ ದುರುಪಯೋಗವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಆ ಜಮೀನು ಸರಿಮಾಡಿಸಬೇಕಾದರೆ 10 ಸಾವಿರ ರೂಪಾಯಿ ಖರ್ಚಾಗಿದೆ, ಉಳಿದದ್ದು ಬೇರೆ ಬೇರೆ ಸೊಸೈಟಿಗಳಿಂದ Raw Materials ತೆಗೆದುಕೊಳ್ಳುವುದಕ್ಕೆ ಖರ್ಚು ಮಾಡಿದ್ದಾರೆ—4 ಸಾವಿರ ರೂಪಾಯಿ ಅವರಿಂದ ಬರಬೇಕಾಗಿದೆ ಎಂದು ಅಷ್ಟು ಮಾತ್ರ ಸರ್ಕಾರದವರ ಗಮನಕ್ಕೆ ಬಂದಿದೆ.

Sri K. S. SURYANARAYANA RAO.—What is the nature of the misuse made by the President ?

ಶ್ರೀಮತಿ ಯಶೋಧರ ದಾಸಪ್ಪ.—ಮಿಸ್‌ಯೂಸ್ ಅಲ್ಲ. ಮಿಸ್‌ಅಪ್ರೋಪ್ರಿಯೇಟ್ ಆಗಿದೆ. ಅವರು ಹಣವನ್ನು ಯಾವ ಮನೆಗಳಿಗೆ ಖರ್ಚು ಮಾಡಬೇಕಾಗಿತ್ತೋ ಅದಕ್ಕೆ ಮಾಡದೇ ವ್ಯಾಪಾರಕ್ಕೆ ಖರ್ಚು ಮಾಡಿದ್ದಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಯಾರ ವ್ಯಾಪಾರಕ್ಕೆ ? ಸೊಸೈಟಿಯ ವ್ಯಾಪಾರಕ್ಕೋ ? ಸ್ವಂತ ವ್ಯಾಪಾರಕ್ಕೋ ?

ಶ್ರೀಮತಿ ಯಶೋಧರ ದಾಸಪ್ಪ.—ಸೊಸೈಟಿಯ ವ್ಯಾಪಾರಕ್ಕೆ.

Government land reserved for assignment to Scheduled Castes and Scheduled Tribes in South Kanara District.

*Q.—585. Sri S. GOPALA SALENNA (Mudabidri).—

Will the Government be pleased to state :—

(a) the total number of acres of Government land reserved for assignment to Scheduled Castes and Scheduled Tribes in South-Kanara District prior to 1958 ;

(b) how many acres of the above reserved land have been assigned to the Scheduled Castes and Scheduled Tribes people and also to other communities ;

(c) the number of such acres that have been assigned to other communities who do not come under the scheme of Reservation lands during last four years.

(d) whether the Director of Social Welfare, Bangalore, or the District Social Welfare Officer, Mangalore, have agreed for any non-reservation of lands to assign it to other than Scheduled Castes and Scheduled Tribes people.

A.—Sri M. V. KRISHNAPPA (Minister for Revenue).—

(a) 17,948-42 acres.
(b) 5,487-90 acres.
(c) 56-61 acres.
(d) Yes.

ಶ್ರೀ ಎ. ಕೃಷ್ಣಶೆಟ್ಟಿ.—(ಡಿ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ಹೇಳಿದ್ದೀರಿ, ಸಮಾಜದ ಹಿತದೃಷ್ಟಿಯಿಂದ ಸಾಂಪತ್ತಿಕವಾಗಿ ಹಿಂದುಳಿದವರಿಗೆ ಸ್ವಲ್ಪ ಭಾಗವನ್ನು ಪ್ರತಿ ಜಿಲ್ಲೆಯಲ್ಲೂ ಕೊಡುವುದು ಅಗತ್ಯವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು; ಈಗ ಎಲ್ಲೆಲ್ಲಿ ಎಷ್ಟೆಷ್ಟು ಭೂಮಿ ಇದೆಯೋ ಅದರಲ್ಲಿ 50 ಭಾಗ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅವರಿಗೆ ಕಾದರಿಸಿದ್ದೇವೆ. ಮಿಕ್ಕದ್ದರಲ್ಲಿ ಅದರಲ್ಲೂ ಒಂದು ಪ್ರಯಾರಿಟಿ ಇದೆ. ಅದರಲ್ಲಿ ಲ್ಯಾಂಡ್‌ಲೆಸ್ ಪೀಪಲ್ ಮತ್ತು ಬಡವರು ಎಲ್ಲಾ ಬರುತ್ತಾರೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಹರಿಜನ ಗಿರಿಜನರಿಗೆ 17,918 ಎಕರೆ ಭೂಮಿ ಇಟ್ಟಿದ್ದೀರಿ. ಇದರಲ್ಲಿ ಹರಿಜನರಿಗೆ ಎಷ್ಟು, ಗಿರಿಜನರಿಗೆ ಎಷ್ಟು ಎಂಬುದನ್ನು ಪ್ರತ್ಯೇಕವಾಗಿ ಹೇಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರತ್ಯೇಕ ಅಂಕಿ ಅಂಶಗಳಿಲ್ಲ.

ಶ್ರೀ ಎಸ್. ಗೋಪಾಲ ಸಾರೆನ್ನ.—17,000 ಎಕರೆ ಇರುವಾಗ ಅಲ್ಲಿ ದರಖಾಸ್ತು ಕೊಡುವಂತಹ ಕೆಲಸವು ಬಹಳ ಹಿಂದೆ ಬಿದ್ದಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ತಮಗೇ ಗೊತ್ತಿದೆ. ಸೌತ್ ಕೆನರಾದಲ್ಲಿ ಬಹಳ ಕಾಡು ಇದೆ. ಆದ್ದರಿಂದ ಕಾಡು ಹಂಚಬೇಕಾದರೆ ಮರ ಕಡಿದು ಆ ಪ್ರದೇಶ ವಿಂಗಡಿಸಬೇಕಾದರೆ ಮಾಲ್ಕಿಗಾಗಿ ಫಾರೆಸ್ಟ್ ಇಲಾಖೆಯವರ ಬಳಿ ಹೋಗಬೇಕಾಗುತ್ತದೆ. ಆ ದೃಷ್ಟಿಯಿಂದ ನಿಧಾನವಾಗಿದೆ. ನಾನು ಮೊನ್ನೆ ಸೌತ್ ಕೆನರಾಕ್ಕೆ ಭೇಟಿ ಕೊಟ್ಟಾಗ ಇದೇ ವಿಷಯ ಚರ್ಚೆ ಮಾಡಿದೆ. 1,600 ಎಕರೆ ಸಾಗುವಳಿ ಚೀಟಿ ನನ್ನ ಕೈಯಲ್ಲೇ ಹಂಚಿಕೆ ಮಾಡಿಸಿದರು. ಕಾಡಿರುವುದರಿಂದ ಹಂಚಿಕೆ ನಿಧಾನವಾಗಿದೆ ಎಂದು ಅಧಿಕಾರಿಗಳು ಹೇಳಿದರು; ಆದ್ದರಿಂದ ಅಷ್ಟು ಬೇಗ ಕೊಡುವುದಕ್ಕೆ ಆಗುವುದಿಲ್ಲ.

Sri S. RAJAGOPAL.—How many persons and families were given 56-61 acres ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರಣೆ ಇಲ್ಲ.

ಶ್ರೀ ಎಸ್. ಗೋಪಾಲ ಸಾರೆನ್ನ.—ಅಲ್ಲಿ ಕಾಡು ಬೇಕಾದಷ್ಟು ಇದ್ದರೂ ಕೃಷಿಗೆ ಬೇಕಾದಷ್ಟು ಸ್ಥಳ ಕೊಟ್ಟಿಲ್ಲ. ಕೇವಲ ಅರ್ಧ-ಒಂದು ಎಕರೆಯಿಂದ ಹೆಚ್ಚೆಂದರೆ 5 ಎಕರೆಯವರೆಗೂ ಹಂಚಿದ್ದಾರೆ. ಸಾಧಾರಣವಾಗಿ ಕೃಷಿಗೆ ಅನುಕೂಲವಾಗುವ ರೀತಿಯಲ್ಲಿ 10 ಎಕರೆಯಷ್ಟು ಸ್ಥಳ ಕೊಡುವಂತೆ ಏಕೆ ನಿಗದಿ ಮಾಡಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಿ ಇದೆಯೋ ಅಲ್ಲಿ ಕೊಡುತ್ತಾರೆ. ಕೆಲವು ಕಡೆ ಮನೆ ಕಟ್ಟಿಕೊಳ್ಳುವುದಕ್ಕೂ ಸ್ಥಳ ಕೊಡಿ ಎಂದು ಕೇಳುತ್ತಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—5,487 ಎಕರೆಯಲ್ಲಿ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಎಕರೆ ಕೊಟ್ಟಿದೆ ಎಂಬ ಲೆಕ್ಕ ಕೊಡಬಲ್ಲಿರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕುಂದಾಪುರ ತಾಲ್ಲೂಕು, ಕಾರ್ಕಳ ತಾಲ್ಲೂಕು, ಉಡುಪಿ, ಮಂಗಳೂರು ಇವೆಲ್ಲಾ ಸ್ಥಳಗಳಿವೆ, ಅವುಗಳ ವಿವರ ಬೇಕಾದರೆ ಕೊಡುತ್ತೇನೆ.

Sri G. DUGGAPPA.—May I know the reason why the Director of Social Welfare agreed for it ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಕಡೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಹಂಚಬೇಕೆಂದು ರಿಸರ್ವ್ ಮಾಡಿದ್ದರೂ ಕೆಲವು ಸಂದರ್ಭಗಳಲ್ಲಿ ಒತ್ತುವರಿ ನಡೆದು ಬೇರೆ ಕ್ಯಾಸ್ಟ್‌ನವರಿಗೆ ಟಿ. ಟಿ. ಕೊಟ್ಟಿರುತ್ತಾರೆ. 6 ವರ್ಷ ಆಗಿದ್ದರೆ ಟಿ. ಟಿ. ಕೊಡಬೇಕೆಂದು ಕಾನೂನು ಇದೆ. ರಿಸರ್ವ್ ಏರಿಯಾ ಇದ್ದರೂ ಒತ್ತುವರಿ ಮಾಡಿಕೊಂಡು ಬೇಸಾಯ ನಡೆಸಿರುವುದರಿಂದ ಕಾನೂನು ಪ್ರಕಾರ ಅವರಿಗೆ ಕನ್‌ಫರ್ಮ್ ಮಾಡಬೇಕಾಗುತ್ತದೆ. 17,000 ಚಿಲ್ಲರೆ ಎಕರೆಯಲ್ಲಿ 50 ಸಾವಿರ ಎಕರೆ ಮಾತ್ರ ಆ ರೀತಿ ಒತ್ತುವರಿ ಆಗಿದ್ದರಿಂದ ಬೇರೆ ಕ್ಯಾಸ್ಟ್‌ನವರಿಗೆ ಕೊಟ್ಟಿದ್ದಾರೆ. ಅದನ್ನು ಕಿತ್ತುಕೊಳ್ಳುವುದಕ್ಕೆ ಕಾನೂನು ಮುಖಾಂತರ ಆಗುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಆ ಜಮೀನು ಅವರಿಗೇ ಅಸೈನ್ ಆಗಿದ್ದು, ಬಹಳ ಕಾಲದಿಂದಲೂ ಅವರೇ ಕಂದಾಯ ಕಟ್ಟಿಕೊಂಡು ಬರುತ್ತಿದ್ದಾಗ್ಯೂ ಅದನ್ನು ಕಿತ್ತು ಬೇರೆಯವರಿಗೆ ಕೊಡುವುದು ಅನ್ಯಾಯವಾಗುವುದಿಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—17,900 ಚಿಲ್ಲರೆ ಎಕರೆಗಳಲ್ಲಿ ಎಲ್ಲೋ ಸ್ವಲ್ಪ ಜಮೀನು ಬೇರೆಯವರಿಂದ ಎನ್‌ಕ್ರೋಚ್ ಆಗಿದ್ದು ಅದು ಟಿ. ಟಿ. ತಕರಾರಿನಲ್ಲಿ ಇದ್ದ ಕಾರಣದಿಂದ ಅದನ್ನು ಬೇರೆಯವರಿಗೆ ಕೊಡಲಾಗಿದೆ. Though it has been reserved in most cases for the scheduled castes and scheduled tribes, it has to be confirmed in the name of the person who is in unauthorised possession of it and has paid T. T.

Sri SANJEEVANATH AIKALA.—Has it come to the notice of the Government whether large tracks of land which have been assigned

to the scheduled castes and scheduled tribes have not been got either because of the unsuitability of land or for other reasons and will the Government consider whether it is necessary to de-reserve those lands and give it to others ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಅದೂ ಒಂದು ಕಾರಣವಿದೆ. ಮೊನ್ನೆತಾನೆ ಶ್ರೀಮಾನ್ ರಾಚಯ್ಯನವರೂ ಸಹ ಹೇಳಿದ್ದಾರೆ. ಅದಕ್ಕಾಗಿ ಈಗ ತಾಲ್ಲೂಕ್ ಲೆವಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಅವರು ಇದನ್ನೆಲ್ಲ ತೀರ್ಮಾನ ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹದಿನೇಳು ಸಾವಿರ ಚಿಲ್ಲರೆ ಎಕರೆಗಳಲ್ಲಿ ವ್ಯವಸಾಯಕೆ ಯೋಗ್ಯವಾದ ಭೂಮಿ ಎಷ್ಟಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲ ಭೂಮಿಯೂ ಯೋಗ್ಯವಾಗಿಯೇ ಇದೆ.

ಶ್ರೀ ಕೆ. ಎಚ್. ರಂಗನಾಥ.—ಯಾರು ಎನ್‌ಕ್ರೋಚ್ ಮಾಡಿಕೊಂಡು ಕಂದಾಯ ಕಟ್ಟಿಕೊಂಡು ಬಂದಿರುತ್ತಾರೋ ಅಂಥವರಿಗೇ ಆ ಜಮೀನನ್ನು ಕೊಡಬೇಕೆಂದು ಮಂತ್ರಿಗಳು ಹೇಳಿದರು. ಆ ರೀತಿ ಲ್ಯಾಂಡ್ ರೆವಿನ್ಯೂ ಕೋಡಿನಲ್ಲಾಗಲೀ ರೂಲ್ಸಿನಲ್ಲಾಗಲೀ ಎಲ್ಲಿಯೂ ಹೇಳಿಲ್ಲವಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಒಂದು ಸರ್ಕ್ಯುಲರ್ ಇದೆ. ಅನ್-ಎಕನಾಮಿಕ್ ಹೋಲ್ಡಿಂಗ್ಸ್ ಇದ್ದ ಜಮೀನುದಾರರಿಗೇ ಆ ಜಮೀನನ್ನು ಕೊಡಬೇಕೆಂದು ಸರ್ಕ್ಯುಲರ್ ಇದೆ.

ಶ್ರೀ ಎ. ಕೃಷ್ಣಸೆಟ್ಟಿ.—ಷೆಡ್ಯೂಲ್ಡ್ ಕ್ಯಾಸ್ಟಿನವರಿಗೂ, ಷೆಡ್ಯೂಲ್ಡ್ ಟ್ರೈಬಿನವರಿಗೂ ಕೊಡತಕ್ಕ ಜಮೀನೇನಿದೆ ಅದನ್ನು ಅವರು ಮಾರಾಟಮಾಡಿಕೊಳ್ಳಬಹುದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—15 ವರ್ಷಗಳತನಕ ಮಾರಾಟ ಮಾಡುವಹಾಗಿಲ್ಲ. They cannot alienate it without the permission of the Government.

ಶ್ರೀ ಎ. ಕೃಷ್ಣಶೆಟ್ಟಿ.—ಒಂದೇ ಸಂಸಾರದಲ್ಲಿರತಕ್ಕ 5-6 ಜನಗಳು ಬೇರೆ ಬೇರೆ ಹೆಸರುಗಳನು ಕೊಟ್ಟು ಜಮೀನು ಪಡೆದಿರತಕ್ಕ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಮೀನಿಲ್ಲದವರು ಆ ರೀತಿ ಮಾಡಿದರ ತಪ್ಪೇನಿದೆ ?

ಶ್ರೀ ಎಸ್. ಗೋಪಾಲ ಸಾಲೆನ್ನ.—ಈಗ ರಿಜರ್ವ್ ಮಾಡಿರತಕ್ಕ ಜಮೀನಿನಲ್ಲಿ ಮುಕ್ಕಾಲು ಬರಿ ಗುಡ್ಡಗಳಿಂದಲೇ ಆವರಿಸಿರುತ್ತಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥ ಜಮೀನೇ ಬಹಳ ಅನುಕೂಲವಾದುದೆಂದು ಕೇಳುತ್ತಾರೆ. ಅಲ್ಲಿ ಕ್ಯಾಪ್ಯುನಟ್ಸ್ ವಗೈರೆ ಬೆಳೆಯಲು ಅನುಕೂಲವಾಗಿರುತ್ತದೆ.

Hospitals in North Kanara District.

*Q.—591. Sri S. P. PHAYADE (Ankola).—

Will the Government be pleased to state :—

(a) the number of hospitals in North Kanara District ;
(b) of them, the number of hospitals that are provided with doctors;
(c) the number of hospitals which are not provided with doctors ;
(d) since how long these hospitals are running without doctors ;
(e) whether steps would be taken to provide doctors for these hospitals ?

A.—Sri K. NAGAPPA ALVA (Minister for Health).—

(a) Thirty-five.
(b) Eighteen.
(c) Seventeen.
(d) From ten months to four years.
(e) Yes.

Answers as printed, but with one correction that in June, one Doctor has been posted to the Dispensary at Manchakeri.

ಶ್ರೀ ಎಸ್. ಪಿ. ಫಾಯದೆ.—ವೈದ್ಯರಿಲ್ಲದಿರುವ 17 ಆಸ್ಪತ್ರೆಗಳಲ್ಲಿ ಸಿಂಗಲ್ ಡಾಕ್ಟರುಗಳಿರ ತಕ್ಕ ದವಾಖಾನೆಗಳೆಷ್ಟು ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲಿ ಕೊಟ್ಟಿರತಕ್ಕ 17 ಆಸ್ಪತ್ರೆಗಳೂ ಸಿಂಗಲ್ ಡಾಕ್ಟರುಗಳಿರ ತಕ್ಕವುಗಳೇ ಆಗಿವೆ.

ಶ್ರೀ ಎಸ್. ಪಿ. ಫಾಯದೆ.—ಈ 17 ದವಾಖಾನೆಗಳೂ ಸಿಂಗಲ್ ಡಾಕ್ಟರುಗಳ ದವಾಖಾನೆ ಆಗಿರುವುದರಿಂದ ಇವುಗಳನ್ನು ಅಲೋಪತಿಕ್ ಸಿಸ್ಟಂನಿಂದ ಆಯುರ್ವೇದ ಸಿಸ್ಟಂಗೆ ಪರಿವರ್ತನೆ ಮಾಡಬೇಕೆಂದು ತಾಲ್ಲೂಕ್ ಬೋರ್ಡಿನವರಿಂದಲೂ, ಗ್ರಾಮಪಂಚಾಯಿತಿಯವರಿಂದಲೂ ಮನವಿ ಗಳು ಬಂದಿಲ್ಲವೆ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿವರಗಳು ಈಗ ನನ್ನಲಿಲ್ಲ.

ಶ್ರೀ ಎಸ್. ಗೋಪಾಲ ಸಾರೆನ್ನ.—ದವಾಖಾನೆಗಳಲ್ಲಿ ಡಾಕ್ಟರುಗಳೇ ಇಲ್ಲದಿರುವಾಗ ಯಾರು ಔಷಧಿಗಳನ್ನು ಕೊಡುತ್ತಾರೆ ? ಜನರ ಗತಿಯೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಸಮೀಪದ ಸ್ಥಳದಲ್ಲಿರತಕ್ಕ ಬೇರೆ ಡಾಕ್ಟರುಗಳು ವಾರಕ್ಕೆ ಒಂದೆ ರಡಾವರ್ತಿ ಅಲ್ಲಿಗೆ ಬಂದು ನೋಡಿಕೊಳ್ಳುತ್ತಾರೆ, ಔಷಧಿ ವಗೈರೆಗಳನ್ನು ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರತಿದಿನವೂ ಸರ್ಕಾರದವರು ಪರದೇಶಗಳಿಗೆ ಡಾಕ್ಟರಿಲ್ಲದಿರು ವಾಗ ಹೇಗೆ ಡಾಕ್ಟರುಗಳನ್ನು ಕಳುಹಿಸುತ್ತಾರೆ ?

ಶ್ರೀ ಕೆ. ನಾಗಪ್ಪ ಆಳ್ವ.—ಪ್ರತಿ ದಿನವೂ ಹಾಗೇನೂ ಕಳುಹಿಸುವುದಿಲ್ಲ, ಪೋಸ್ಟ್‌ಗ್ರಾಜು ಯೇಟ್ ಟ್ರೈನಿಂಗಿಗೆ ಮಾಮೂಲಿನಂತೆ ಕಳುಹಿಸಲಾಗುತ್ತಿದೆ.

Sri SANJEEVANATH AIKALA.—When there is dearth of Allopathic Doctors, why not appoint people qualified in the integrated system of medicine to those rural dispensaries as is being done in the Madras State ?

ಶ್ರೀ ಕೆ. ನಾಗಪ್ಪ ಆಳ್ವ.—ಕೆಲವು ಸಣ್ಣ ಆಸ್ಪತ್ರೆಗಳಿಗೆ ಇಂಟಿಗ್ರೇಟೆಡ್ ಸಿಸ್ಟಂ ಅನ್ವಯಿಸ ಬಹುದೆಂದು ಆದೇಶ ಕೊಡಲಾಗಿದೆ.

Sri GANJI VEERAPPA.—Sir, is it due to non-availability of Doctors or is it due to the scales of pay being unattractive for them ?

Sri K. NAGAPPA ALVA.—As it is, it is due to non-availability of Doctors.

Sri S. SIVAPPA.—Has it come to the notice of the Government that the scarcity of Doctors in the Mysore State is largely dependent upon the policy of the Government in not enhancing the pay scales of the Doctors in accordance with the salary available in the neighbouring States and also because of the Government not coming forward to make the services of Doctors permanent ?

Sri K. NAGAPPA ALVA.—Sir, the pay scales have been revised. To some extent, it is true that it is due to non-confirmation of these Doctors.

ಶ್ರೀ ಎಸ್. ಪಿ. ಫಾಯದೆ.—ಸ್ವಾಮಿ, ಅಲೋಪತಿಕ್ ಡಿಸ್ಪೆನ್ಸರಿಗಳನ್ನು ಆಯುರ್ವೇದಕ್ಕೆ ಪರಿವರ್ತನೆ ಮಾಡತಕ್ಕ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಸರಿಯಾದ ರೀತಿಯಲ್ಲಿ ಬಂದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಕ್ಕದ ತಾಲ್ಲೂಕಿನ ಡಾಕ್ಟರು ಬಂದು ಔಷಧಿ ಕೊಡುತ್ತಾ ರೆಂದು ಹೇಳೋಣವಾಯಿತು. ಅಲ್ಲಿಯತನಕ ಆ ಪೇಷಂಟುಗಳ ಗತಿಯೇನಾಗಬೇಕು ? ಬೇರೆ ಸ್ಟೇಟುಗಳಲ್ಲಿ ಜಾಸ್ತಿ ಸಂಬಳ ಕೊಡುತ್ತಿರುವಾಗ ಇವರು ನಮ್ಮಲ್ಲಿ ಹೇಗೆ ಉಳಿಯಲು ಸಾಧ್ಯವಿದೆ ? ಅವರು ಸತ್ತಮೇಲೆ ಔಷಧಿ ಕೊಡುತ್ತಾರೋ ಅಥವಾ ಮುಂಚೆಯೇ ಕೊಡುತ್ತಾರೋ ?

Mr. SPEAKER.—I am disallowing that question.

Sri S. RAJAGOPAL.—Are there E.S.I. Hospitals in this area ? if so are the Doctors inadequate ?

Sri K. NAGAPPA ALVA.—E.S.I. Hospital is working properly with full strength.

Sri G. DUGGAPPA.—In view of this paucity of Doctors, is the Government now making any recruitment of Doctors ?

Sri K. NAGAPPA ALVA.—Already 168 vacancies have been advertised through the Public Service Commission.

Sri G. DUGGAPPA.—Is it that only 168 vacancies are available or are there some more vacancies ?

Sri K. NAGAPPA ALVA.—In the course of next month the rest of the vacancies will be advertised.

Sri S. SIVAPPA.—Till such time that the Government can find enough doctors to man all these hospitals properly, will the Government consider the desirability of organising mobile doctors so that they visit these hospitals where there are no doctors, as yet posted ?

Sri K. NAGAPPA ALVA.—It is a suggestion for action.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಲೇಜುಗಳಲ್ಲಿ ಡಿಗ್ರಿ ಪಡೆದಂಥ ಡಾಕ್ಟರುಗಳು ನಾಲ್ಕಾರು ವರ್ಷ ಕೆಲಸ ಮಾಡಬೇಕೆಂಬುದು ನೇಮಕ ಮಾಡುವಾಗ್ಗೆ ಏನಾದರೂ ಕ್ರಮ ಇದೆಯೇ ?

Mr. SPEAKER.—Some procedure has to be followed.

Sri C. J. MUCKANNAPPA.—How many of them went out of the State ?

Sri K. NAGAPPA ALVA.—All those who have applied have been appointed.

Sri S. RAJAGOPAL.—While you are having doctors for the E.S.I. hospitals, what is the reason for the Government for not being able to find an adequate number of doctors to man the departmental hospitals ?

Sri K. NAGAPPA ALVA.—There is nothing like a comparison like that.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ.—ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನಲ್ಲಿ ಕೆಲವು ಕಡೆ ಮೂರು ವರ್ಷಗಳಿಂದ ಡಾಕ್ಟರು ಇಲ್ಲ. ಅಂಥಲ್ಲಿ ಡಾಕ್ಟರ್ ಯಾವಾಗ ಬರುತ್ತಾರೆ ?

ಶ್ರೀ ಕೆ. ನಾಗಪ್ಪ ಆಳ್ವ.—ಆದಷ್ಟು ಜಾಗ್ರತೆ ಡಾಕ್ಟರನ್ನು ಕಳಿಸಿಕೊಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇವರ ಬಗ್ಗೆ ಕೇಡರ್ ರೂಲ್ಸ್ ಯಾವಾಗ ಮಾಡುತ್ತೀರಿ ?

Mr. SPEAKER.—I think that it was answered yesterday.

Sri C. J. MUCKANNAPPA.—It was said four days ago that it was under consideration.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮೆಡಿಕಲ್ ಕಾಲೇಜುಗಳಲ್ಲಿ ಓದಿದಂಥವರು ಮೈಸೂರು ರಾಜ್ಯದಲ್ಲಿ ಇಷ್ಟು ಕಾಲ ಸರ್ವಿಸ್ ಮಾಡಬೇಕೆಂದು ನಿಗದಿ ಮಾಡಿದ್ದೀರಾ ?

Sri K. NAGAPPA ALVA.—They have to work for three years in rural areas. That is the only condition.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮೈಸೂರು ರಾಜ್ಯದಲ್ಲಿ ಸರ್ವಿಸಿಗೆ ಸೇರಿ ಆಮೇಲೆ ಎಷ್ಟು ಜನ ರಾಜೀನಾಮೆ ಕೊಟ್ಟು ಬೇರೆ ಪ್ರಾಂತಕ್ಕೆ ಹೋಗಿದ್ದಾರೆ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿವರ ಇಲ್ಲಿ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಾದರೆ ಆ ವಿವರ ಯಾವಾಗ ಒದಗಿಸುತ್ತೀರಿ ?

(ಉತ್ತರವಿಲ್ಲ).

Sanctioning of a Maternity Hospital for Chikkanayakanahalli Town.

Q.—616. Sri C. H. LINGADEVARU (Chikkanayakanahally).—

Will the Government be pleased to state :—

(*a*) whether it is not a fact that requests are being made repeatedly since a long time for sanctioning a Maternity Hospital for Chikkanayakanahalli Town ;

(*b*) the steps they have taken in this behalf ?

A.—Sri K. NAGAPPA ALVA (Minister for Health).—

(*a*) No.

(*b*) Does not arise.

ಶ್ರೀ ಸಿ. ಎಚ್. ಲಿಂಗದೇವರು.—ಚಿಕ್ಕನಾಯಕನಹಳ್ಳಿಗೆ ಒಂದು ಹೆರಿಗೆ ಆಸ್ಪತ್ರೆ ಕೊಡಬೇಕೆಂದು ಇರುವ ಬೇಡಿಕೆ ಸರಕಾರದಲ್ಲೇ ಎಷ್ಟು ದಿವಸಗಳಿಂದ ಪೆಂಡಿಂಗ್ ಇದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿವರ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಚಿಕ್ಕನಾಯಕನಹಳ್ಳಿಗೆ ಒಂದು ಹೆರಿಗೆ ಆಸ್ಪತ್ರೆ ಕೊಡಬೇಕೆಂದು ಬಹಳ ಕಾಲದಿಂದ ಒತ್ತಾಯ ಮಾಡುತ್ತಿದ್ದರೂ ಹೆರಿಗೆ ಆಸ್ಪತ್ರೆ ಏಕೆ ಕೊಟ್ಟಿಲ್ಲ ?

ಶ್ರೀ ಕೆ. ನಾಗಪ್ಪ ಆಳ್ವ.—ಜನ ಕೇಳುತ್ತಿರುವುದು ಸರಿಯಾದ ರೀತಿಯಲ್ಲಿಲ್ಲ. ಸರಕಾರಕ್ಕೆ ಕೇಳುವುದರಲ್ಲಿ ಒಂದು ಕ್ರಮ ಇದೆ. ಯಾವ ರಿಪ್ರೆಜೆಂಟೇಷನ್ನೂ ಸರಕಾರಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದು ಯಾವ ಕ್ರಮ, ಸ್ವಾಮಿ ? ಅದು ಯಾವ ಸರ್ಕ್ಯುಲರ್ ? ಅದರಲ್ಲಿ ಯಾವಯಾವ ಕಾಲಂ ಇವೆ, ದಯವಿಟ್ಟು ತಿಳಿಸಬೇಕು.

ಶ್ರೀ ಕೆ. ನಾಗಪ್ಪ ಆಳ್ವ.—ಪಂಚಾಯಿತ, ತಾಲ್ಲೂಕ್ ಬೋರ್ಡ್ ಮುಖಾಂತರ ಬೇಡಿಕೆ ಬರಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಲ್ಲಿಯ ಜನಸಂಖ್ಯೆ ಎಷ್ಟು ? ಹೆರಿಗೆ ಆಸ್ಪತ್ರೆ ಇಲ್ಲದೆ ಜನ ಯಾವರೀತಿ ನಿರ್ವಹಿಸುತ್ತಿದ್ದಾರೆ ಎನ್ನುವುದನ್ನು ಅಪ್ಪಣೆ ಕೊಡಿಸಬೇಕು.

ಶ್ರೀ ಕೆ. ನಾಗಪ್ಪ ಆಳ್ವ.—ಪ್ರೈಮರಿ ಹೆಲ್ತ್ ಸೆಂಟರ್ ಅಲ್ಲಿ ಮಾಡಿದೆ. ಅದರಲ್ಲಿ ನಾಲ್ಕು ಬೆಡ್ಸ್ ಪ್ರತ್ಯೇಕವಾಗಿ ಹೆರಿಗೆಗಾಗಿ ಕೊಟ್ಟಿದೆ.

Sri GANJI VEERAPPA.—Is it not the policy of the Government to provide proper maternity facilities in all taluk headquarters ?

Sri K. NAGAPPA ALVA.—Yes, Sir.

Sri GANJI VEERAPPA.—Does not Chiknaikanahalli being a taluk headquarter come under that category ?

Sri K. NAGAPPA ALVA.—That is why it is already there.

ಶ್ರೀ ಸಿ. ಎಚ್. ಲಿಂಗದೇವರು.—ಯಾವಾಗ ಯಾರು ರೆಪ್ರಜೆಂಟೇಷನ್ ಕೊಡಬೇಕು ?

ಶ್ರೀ ಕೆ. ನಾಗಪ್ಪ ಆಳ್ವ.—ತಾಲ್ಲೂಕ್ ಬೋರ್ಡ್ ಮುಖಾಂತರ ಮುನಿಸಿಪಾಲ್ಟಿಯಿಂದ ರೆಪ್ರಜೆಂಟೇಷನ್ಸ್ ಬರಬೇಕು.

ಶ್ರೀ ಸಿ. ಎಚ್. ಲಿಂಗದೇವರು.—ಮುನಿಸಿಪಾಲ್ಟಿಯು ಒಂದು ರೆಜಲ್ಯೂಷನ್ ಪಾಸ ಮಾಡಿ ಕಳಿಸಿದೆ. ಅದು ಸರಕಾರಕ್ಕೆ ಬರಲಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ, ಈ ಪ್ರೈಮರಿ ಹೆಲ್ತ್ ಸೆಂಟರಿನಲ್ಲಿ ನಾಲ್ಕು ಬೆಡ್ಡುಗಳನ್ನು ಹೆರಿಗೆಗಾಗಿ ಪ್ರತ್ಯೇಕವಾಗಿ ಇಟ್ಟಿದೆಯೆಂದು ಹೇಳಿದರು. ಹಾಗಾದರೆ ಅಲ್ಲಿ ಒಂದು ದಿವಸಕ್ಕೆ ಎಷ್ಟು ಹೆರಿಗೆಗಳು ಆಗುತ್ತವೆ ? ಹೆರಿಗೆಗಾಗಿ ಎಷ್ಟು ದಿವಸಕ್ಕೆ ಒಂದು ಬೆಡ್ಡು ದೊರೆಯಬೇಕು ? ಒಂದು ದಿವಸದಲ್ಲಿ ಎಲ್ಲರಿಗೂ ಈ ನಾಲ್ಕು ಬೆಡ್ಡುಗಳನ್ನು ಹೇಗೆ ಒದಗಿಸುತ್ತಾರೆ ?

Mr. SPEAKER.—The Hon'ble Member is giving discourses. But he is not putting any supplementaries.

ಶ್ರೀ ಕೆ. ನಾಗಪ್ಪ ಆಳ್ವ.—ನಾಲ್ಕು ಬೆಡ್ಸ್ ಇವೆ. ನಾಲ್ಕು ಜನ ಮಿಡ್‌ವೈವ್ಸ್ ಬೇರೆಬೇರೆ ಕಡೆ ಹೋಗಿ ಕೆಲಸ ಮಾಡುತ್ತಾರೆ. ಹೆರಿಗೆಗಾಗಿ ಬೇಕಾದಷ್ಟು ಅನುಕೂಲ ಮಾಡಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಚಿಕ್ಕನಾಯಕನಹಳ್ಳಿ ಟೌನಿನಲ್ಲಿ ಏನಾದರೂ ಹೆರಿಗೆ ಆಸ್ಪತ್ರೆ ಅನುಕೂಲ ಮಾಡಿಕೊಟ್ಟಿದ್ದೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಟೌನಿನಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಇದೆ. ಅದರಲ್ಲಿ ನಾಲ್ಕು ಬೆಡ್ಡುಗಳನ್ನು ಹೆರಿಗೆಗಾಗಿ ಪ್ರತ್ಯೇಕವಾಗಿ ಇಟ್ಟಿದೆ.

ಶ್ರೀ ಸಿ. ಎಚ್. ಲಿಂಗದೇವರು.—ನಾಲ್ಕು ಬೆಡ್ಸ್ ಅನುಕೂಲಮಾಡಿಕೊಟ್ಟಿದೆ ಎಂದು ಹೇಳಿದಿರಿ. ಅಲ್ಲಿ ಲೇಡಿ ಡಾಕ್ಟರ್ ಇದ್ದಾರೆಯೇ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ. ಅಸಿಸ್ಟಂಟ್ ಸರ್ಜನ್ ಇದ್ದಾರೆ.

1-00 P.M.

Abolition of Sub-Registrars' Offices situated in places other than Taluk Headquarters in South Kanara District.

*Q.—622. Sri SANJEEVANATH AIKALA (Surathkal).—

Will the Government be pleased to state :—

(a) whether it is a fact that they have proposed to abolish all Sub-Registrars' Offices situated in places other than Taluk Headquarters in the District of South Kanara ;

(b) if so, what are the reasons for the same ;

(c) how many Sub-Registrars' Offices are there in South Kanara and where they are situated ?

A.—Sri M. V. KRISHNAPPA (Minister for Revenue).—

(a) The matter is under examination.

(b) *Vide* reply to clause (a) above.

(c) 15.

The Offices are situated as follows :—

	Place	*No. of offices*
1	Mangalore	2
2	Kundapur	1
3	Udipi	1
4	Karkal	1
5	Puttur	1
6	Buntwal	1
7	Belthangadi	1
8	Mulki	1
9	Baindur	1
10	Shankaranarayana	1
11	Brahmavar	1
12	Mudabidri	1
13	Sullia	1
14	Vittal	1
	Total ...	15

Sri SANJEEVANATH AIKALA.—Have reasons been found out after examination for the closure of the Sub-Registrars' Offices?

ಶ್ರೀ ಎಂ. ವಿ. ಕೃಷ್ಣಪ್ಪ.—ರಿಸೋರ್ರ್ಸಸ್ ಮತ್ತು ಎಕಾನಮಿ ಕಮಿಟಿಯವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಸಬ್-ರಿಜಿಸ್ಟ್ರಾರ್ ಕಛೇರಿಗಳಿವೆ, ಅವುಗಳಲ್ಲಿ ಕೆಲವನ್ನು ಮುಚ್ಚಬೇಕೆಂದು ಸಲಹೆ ಮಾಡಿದ್ದಾರೆ. ಸಂಸ್ಥಾನದಲ್ಲೆಲ್ಲಾ ತಾಲ್ಲೂಕಿಗೆ ಒಂದೇ ಸಬ್-ರಿಜಿಸ್ಟ್ರಾರ್ ಕಛೇರಿ ಇದೆ. ಹೈದರಾಬಾದ್ ಕರ್ಣಾಟಕದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಸಬ್-ರಿಜಿಸ್ಟ್ರಾರ್ ಆಫೀಸೇ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ 2-3 ಕಚೇರಿಗಳಿವೆ, ಅವು ನೂರು ವರ್ಷಗಳಿಂದ ಇವೆ. ಏಕೆ ಜಾಸ್ತಿ ಇವೆ ಎಂದರೆ ಹಿಂದಿನ ಕಾಲದಲ್ಲಿ ತಾಲ್ಲೂಕು ಹೆಡ್‌ಕ್ವಾರ್ಟರ್ಸಿಗೆ ಬರುವುದಕ್ಕೆ ದೊಡ್ಡ ನದಿಗಳನ್ನು ದಾಟಬೇಕಾಗಿತ್ತು, ಅವುಗಳಿಗೆ ಸೇತುವೆಗಳಿರಲಿಲ್ಲ, ಆದ್ದರಿಂದ ಜನಗಳಿಗೆ ಅಲ್ಲಿಗೆ ಬರುವುದಕ್ಕೆ ಆಗುತ್ತಿರಲಿಲ್ಲ. ಆದ್ದರಿಂದ ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಹೊರಗಡೆ ಬೇರೆಕಡೆಯೂ ಸಬ್-ರಿಜಿಸ್ಟ್ರಾರ್ ಕಚೇರಿಗಳನ್ನು ಮಾಡಿದರು. ಈಗ ಆ ಜಿಲ್ಲೆಯ ಎಲ್ಲಾ ನದಿಗಳಿಗೂ ಸೇತುವೆಗಳಾಗಿರುವುದರಿಂದ ಎಲ್ಲಾ ಜನರು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಬರಲು ಅನುಕೂಲವಿರುವುದರಿಂದ, ಅಲ್ಲಿ ಕೆಲವು ಸಬ್ ರಿಜಿಸ್ಟ್ರಾರ್ ಕಚೇರಿಗಳನ್ನು ತೆಗೆದುಹಾಕಬಹುದೆಂದು ರಾಮಚಂದ್ರರಾವ್ ಕಮಿಟಿಯವರು ಶಿಫಾರಸ್ಸು ಮಾಡಿದ್ದಾರೆ.

ಶ್ರೀ ಜಿ. ವಿ. ಗೌಡ.—ದೊಡ್ಡ ತಾಲ್ಲೂಕುಗಳಲ್ಲಿ ಒಂದೇ ಕಚೇರಿ ಇದ್ದರೆ ತೊಂದರೆಯಾಗುವುದಿಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೇ ಮೈಸೂರು ಸಂಸ್ಥಾನದಲ್ಲಿ ಕೂಡ ಕೆಲವು ದೊಡ್ಡ ತಾಲ್ಲೂಕುಗಳಲ್ಲಿ 2 ಕಚೇರಿಗಳಿವೆ. ಒಂದು ವರ್ಷಕ್ಕೆ ಮಿನಿಮಮ್ ನಾಲ್ಕು ಸಾವಿರ ಡಾಕ್ಯುಮೆಂಟುಗಳು ಒಂದು ಕಚೇರಿಯಲ್ಲಿ ರಿಜಿಸ್ಟರ್ ಆಗಿದ್ದರೆ, ಒಂದು ಕಚೇರಿ ಕೊಡಬಹುದು ಮತ್ತು 4,000ಕ್ಕೆ ಕಡಮೆ ಇದ್ದರೆ ಸಾಧ್ಯವಾದಷ್ಟು ಅಂಥ ಕಚೇರಿಗಳನ್ನು ಕಡಮೆಮಾಡಬೇಕೆಂದು ರಿಸೋರ್ಸಸ್ ಮತ್ತು ಎಕಾನಮಿ ಕಮಿಟಿಯವರು ಹೇಳುತ್ತಾರೆ. ಸೌತ್ ಕೆನರಾದಲ್ಲಿ ಕೆಲವು ತಾಲ್ಲೂಕುಗಳಲ್ಲಿ 300–400 ಡಾಕ್ಯುಮೆಂಟುಗಳು ರಿಜಿಸ್ಟರಾಗುತ್ತಿವೆ. 4,000ಕ್ಕೆ ಕಡಮೆ ಇರಬಾರದು ಎಂದು ಆ ಕಮಿಟಿಯವರು ಹೇಳುವಾಗ, ಕೆಲವು ತಾಲ್ಲೂಕುಗಳಲ್ಲಿ 400 ರಿಜಿಸ್ಟ್ರೇಷನ್ ಇಲ್ಲದೆ ಇರುವಾಗ ನಷ್ಟವಾಗುತ್ತಿದೆ. ಉದಾಹರಣೆಗೆ, ಬೆಳ್ತಂಗಡಿ ಮತ್ತು ಶಂಕರನಾರಾಯಣ ಕಚೇರಿಗಳಲ್ಲಿ ರಿಜಿಸ್ಟ್ರೇಷನ್ ಬಹಳ ಕಡಿಮೆ ಇರುವುದರಿಂದ ಸರಕಾರಕ್ಕೆ ನಷ್ಟವಾಗುತ್ತಿದೆ.

ಶ್ರೀ ಜಿ. ವಿ. ಗೌಡ.—4,000ಕ್ಕ ಕಡಮೆ ರಿಜಿಸ್ಟ್ರೇಷನ್ ಆಗುವ ಸ್ಥಳಗಳೆಷ್ಟಿವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕಿಂತ ಕಡಮೆ ರಿಜಿಸ್ಟ್ರೇಷನ್ ಆಗುವ ಸ್ಥಳಗಳಿದ್ದರೂ, ತಾಲ್ಲೂಕು ಹಿತದೃಷ್ಟಿಯಿಂದ ಕೆಲವು ಕಡೆ ಆ ಕಚೇರಿಗಳನ್ನು ಇಟ್ಟುಕೊಂಡು ಮುಂದುವರಿಸಿಕೊಂಡು ಬಂದಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 14 ರಿಜಿಸ್ಟ್ರೇಷನ್ ಕಚೇರಿಗಳುಂಟು ಎಂದು ತೋರಿಸಿದ್ದೀರಿ. ಅವುಗಳಲ್ಲಿ 4,000 ರಿಜಿಸ್ಟ್ರೇಷನ್ ಆಗುವ ಆಫೀಸುಗಳೂ ಉಂಟೊ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಂದೂ ಇಲ್ಲ. 1,300-1,500 ಹೀಗಿದೆ. ಮಂಗಳೂರು ಸಿಟಿಯಲ್ಲಿ ಮಾತ್ರ 3,250 ರಿಜಿಸ್ಟ್ರೇಷನ್ ಆಗುತ್ತಾ ಇದೆ.

ಶ್ರೀ ಎಸ್. ಡಿ. ಸಾಮ್ರಾಜ್ಯ.—ಎಲ್ಲಾ ನದಿಗಳಿಗೆ ಸೇತುವೆಗಳಾಗಿರುವುದರಿಂದ ಕಚೇರಿಗಳನ್ನು ಕಡಮೆಮಾಡಬಹುದು ಎಂದು ಹೇಳಿದ್ದಾರೆಂದಿರಿ. ವಿಠಲ, ಸೂಳ್ಯ ಮತ್ತು ಮೂಡಬಿದ್ರೆಗಳ ಕಚೇರಿಗಳಿಲ್ಲದಿದ್ದರೆ ಯಾವ ನದಿಗಳ ಮೂಲಕವೂ ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಹೋಗುವುದಕ್ಕಾಗುವುದಿಲ್ಲ. ಆದ್ದರಿಂದ ಅವು ಇರುವುದು ಬಹಳ ಅಗತ್ಯ.

ಶ್ರೀ ಎಂ. ವಿ. ಕೃಷ್ಣಪ್ಪ.—ರಿಸೋರ್ಸಸ್ ಮತ್ತು ಎಕಾನಮಿ ಕಮಿಟಿಯವರು ಹೇಳಿದ್ದಾರೆ; ನಾವು ಮಾಡಿಲ್ಲ. ಪರಿಶೀಲನೆ ಮಾಡುತ್ತಾ ಇದ್ದೇವೆ. ಸರ್ಕಾರಕ್ಕೆ ನಷ್ಟವಾಗುತ್ತಿದ್ದರೂ ಜನರ ಹಿತದೃಷ್ಟಿಯಿಂದ ಅವುಗಳನ್ನು ಇಟ್ಟುಕೊಂಡ ಬಂದಿದ್ದೇವೆ. 15 ಕಚೇರಿಗಳಲ್ಲಿ 1-2ನ್ನು ಕಡಮೆ ಮಾಡಬೇಕಾಗಿ ಬರಬಹುದು.

Sri SANJEEVANATH AIKALA.—If we are in South Kanara, even smaller documents carry heavier stamp fees. There are hundreds of such documents coming up for registration.

ಶ್ರೀ ಎಂ. ವಿ. ಕೃಷ್ಣಪ್ಪ.—ಆದಾಯ ಮತ್ತು ವೆಚ್ಚದ ವಿವರಗಳು ಇವೆ. ಬೆಳ್ತಂಗಡಿ ಕಚೇರಿಯಿಂದ ರೂ. 6,100 ಇದ್ದರೆ, 7 ಸಾವಿರ ಚಿಲ್ಲರೆ ಖರ್ಚಿದೆ. ಶಂಕರನಾರಾಯಣ ಕಚೇರಿಯಿಂದ ರೂ. 4,600 ಆದಾಯ ಇದೆ, ಆದರೆ ಸುಮಾರು ರೂ. 5 ಸಾವಿರ ಖರ್ಚಾಗುತ್ತಾ ಇದೆ. ಈ ಇನ್‌ಕಂ ದೃಷ್ಟಿಯಿಂದ ಕೂಡ ಈ ಎರಡು ಸ್ಥಳಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಭೀಮಣ್ಣ.—ಹೈದರಾಬಾದ್ ಕರ್ಣಾಟಕದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಸಬ್-ರಿಜಿಸ್ಟ್ರಾರರ ಕಚೇರಿ ಇಲ್ಲದ್ದರಿಂದ ಒಂದೊಂದು ಕಚೇರಿಯನ್ನು ಕೊಡಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದೇ ಪ್ಲಾನಿದೆ. ಹೈದರಾಬಾದ್ ಕರ್ಣಾಟಕದಲ್ಲಿ ಒಂದು ತಾಲ್ಲೂಕಿಗೆ ಒಂದು ಸಬ್-ರಿಜಿಸ್ಟ್ರಾರ್ ಆಫೀಸು ಮಾಡಲೇಬೇಕು ಎಂದು ಹೇಳಿದ್ದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

Sri M. C. BASAPPA.—With reference to the answer to (a), it is said that the matter is under examination. Has the Government agreed with the principle of the recommendation of the Resources and Economy Committee ?

Sri M. V. KRISHNAPPA.—In some points we have agreed and in some points we have not agreed. ಈ ವಿಷಯದಲ್ಲಿ ಕ್ಯಾಬಿನೆಟ್ ತೀರ್ಮಾನವಾಗಿದೆ.

ಶ್ರೀ ಎಸ್. ಗೋಪಾಲ ಸಾರೆನ್ನ.—ಈ ಸಂದರ್ಭದಲ್ಲಿ ಮಂತ್ರಿಗಳು ಯಾವುದಾದರೂ ಸ್ಥಳಕ್ಕೆ ಸಂದರ್ಶನ ಕೊಟ್ಟು ಆ ಕಛೇರಿಗಳನ್ನು ತೆಗೆದುಹಾಕಲು ಸಾಕಾದಷ್ಟು ಕಾರಣಗಳಿವೆಯೇ, ನಷ್ಟವಾಗುತ್ತಿದೆಯೆ, ಎಂದು ತಿಳಿದುಕೊಂಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವಿಚಾರವನ್ನು ಇನ್ನೂ ಯೋಚನೆ ಮಾಡುತ್ತಾ ಇದ್ದೇವೆ, ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಇಡೀ ರಾಜ್ಯದಲ್ಲಿ 2-3 ಕಛೇರಿಗಳು ಒಂದೇ ಕಡೆ ಇರುವ ಕಡೆಯಿಂದ ಬೇರೆ ಕಡೆಗೆ ಬದಲಾಯಿಸಲು ಸರ್ಕಾರದವರು ಒಪ್ಪಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮ್ಮ ತಾಲ್ಲೂಕಿನಲ್ಲಿ 2 ಇದ್ದವು; ಅದರಲ್ಲಿ ಒಂದನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಿ ಎಂದು ಹೇಳಿದಿರಿ, ಅದು ನಡೆದಿದೆ.

ಶ್ರೀ ಎಸ್. ಡಿ. ಸಾಮ್ರಾಜ್ಯ.—ಬ್ರಹ್ಮಾವರದಲ್ಲಿ, ಮಂಗಳೂರನ್ನು ಬಿಟ್ಟರೆ, ಜಾಸ್ತಿ ರಿಜಿಸ್ಟ್ರೇಷನ್ ಆಗುತ್ತಿದೆ. ಅನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಲ್ಲಿ ಎಷ್ಟು ಲಾಭ ಎಷ್ಟು ನಷ್ಟವಾಗುತ್ತಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಲಾಭ ದೃಷ್ಟಿ ಬೇಕಾಗಿಲ್ಲ. ಲಾಭವಿಲ್ಲದಿದ್ದರೂ ಸರ್ಕಾರ ತಾಲ್ಲೂಕಿಗೆ ಒಂದರಂತೆ ಕೊಡಲು ಪ್ರಯತ್ನಿಸುವುದು. ಬ್ರಹ್ಮಾವರದಲ್ಲಿ 1,086 ಅರ್ಜಿಗಳು ವರ್ಷದಲ್ಲಿ ರಿಜಿಸ್ಟರ್ ಆಗುತ್ತಿವೆ. 11 ಸಾವಿರ ರೂಪಾಯಿ ಉತ್ಪತ್ತಿ ಇದ್ದು, 7 ಸಾವಿರ ರೂಪಾಯಿ ಖರ್ಚು ಇದೆ.

ಶ್ರೀ ಟಿ. ಕೆ. ಕಂಬಳಿ.—ರಿಜಿಸ್ಟ್ರೇಷನ್ ಆದ ಮೇಲೆ ಕಾಗದ ಬೇಗ ಕೊಡಲು ಫೋಟೊ ಪದ್ಧತಿ ಜಾರಿಗೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿನಲ್ಲಿ ಅದು ನಡೆದಿದೆ. ಬಾಕಿಕಡೆ ಈ ಸಿಸ್ಟಮ್ಮನ್ನು ಜಾರಿಗೆ ಕೊಟ್ಟು ಕಾಪಿಗಳನ್ನು ಬೇಗ ಕೊಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಮಚಂದ್ರರಾವ್ ಕಮಿಟಿಯವರ ಸಲಹೆಯಂತೆ ಮಾಡಿದರೆ ಕಷ್ಟವಾಗುವುದು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ.ವಿ. ಕೃಷ್ಣಪ್ಪ.—ಹೌದು. ಅದನ್ನೆಲ್ಲಾ ನೋಡಿಯೇ ಆ ಸಮಿತಿಯ ಶಿಫಾರ್ಸನ್ನು ಪೂರ್ತಿಯಾಗಿ ಒಪ್ಪಿಲ್ಲ. ಅದನ್ನು ಪರಿಶೀಲನೆಮಾಡುತ್ತಾ ಇದ್ದೇವೆ. ನಾಲ್ಕು ಸಾವಿರಕ್ಕೆ ಕಡಿಮೆ ರಿಜಿಸ್ಟ್ರೇಷನ್ ಇರಕೂಡದು ಎಂದು ಹೇಳಿದ್ದಾರೆ, ಅದನ್ನು ಎಲ್ಲಾ ಸ್ಥಳಗಳಿಗೆ ಅನ್ವಯಿಸಿ ಇರುವ ಕಚೇರಿಗಳನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಸರ್ಕಾರ ವಿಶಾಲ ದೃಷ್ಟಿಯಿಂದ ವರದಿಯ ಶಿಫಾರಸನ್ನು ನೋಡುತ್ತಾ ಇದೆ.

ಶ್ರೀ ಎಸ್. ಪಿ. ಫಾಯದೆ.—ಉತ್ತರ ಕರ್ಣಾಟಕ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಈ ಕಚೇರಿಗಳು ಇಲ್ಲದೆ ಇರುವುದು ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದರಲ್ಲಿಯೂ ಹೈದರಾಬಾದ್ ಕರ್ಣಾಟಕದಲ್ಲಿ ಒಂದು ತಾಲ್ಲೂಕಿಗೆ ಒಂದು ಕಚೇರಿಯನ್ನು ಮಾಡಲೇ ಬೇಕು ಎಂದು ತೀರ್ಮಾನ ಮಾಡಿಕೊಂಡಿದ್ದೇವೆ. ಕೆಲವು ತಾಲ್ಲೂಕುಗಳಲ್ಲಿ ಸಬ್-ರಿಜಿಸ್ಟ್ರಾರ್ರು ಆಫೀಸು ಇಲ್ಲ. ಜಾಸ್ತಿ ಇರುವ ಕಡೆಯಿಂದ ಬೇರೇ ತಾಲ್ಲೂಕುಗಳಿಗೆ ಹಾಕಬಹುದು.

Bandh-Peons working in the Revenue Survey Department

*Q.—630. Sri R. N. LAKSHMIPATHI (Gouribidanur).—

Will the Government be pleased to state :—

whether the Bandh peons in the Revenue Survey Department are getting all the benefits of a regular Government employee ; and if not ; how are they treated ?

A.—Sri M. V. KRISHNAPPA (Minister for Revenue).—

The Bandh peons get all the benefits as per Mysore Civil Service Rules, 1958.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಬಾಂದ ಜವಾನರು ಕೆಲವಾರು ವರ್ಷ ಕೆಲಸ ಮಾಡಿದ್ದರೂ, ಎರಡು ವರ್ಷಕ್ಕೊಮ್ಮೆ ಒಂದು ತಿಂಗಳು ರಜಾಕೊಟ್ಟು ಕೆಲಸದಿಂದ ತೆಗೆಯುತ್ತಿರುವುದರಿಂದ, ಅವರುಗಳು 15—20 ವರ್ಷ ಕೆಲಸಮಾಡಿದ್ದರೂ, ಪೆನ್‌ಷನರಿ ಕಂಟ್ರಿಬ್ಯೂಷನ್ ಕೊಡದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ.ವಿ. ಕೃಷ್ಣಪ್ಪ.—ಸರ್ವೆ ಕೆಲಸ ಇರುವಾಗ ಹೆಚ್ಚಿಗೆ ಜವಾನರು ಬೇಕಾಗುತ್ತಾರೆ ಅದು ಇಲ್ಲದಾಗ ಕಡಿಮೆ ಮಾಡಿಕೊಳ್ಳುತ್ತಾರೆ. ಈ ದೃಷ್ಟಿಯಿಂದ 300 ಜನರನ್ನು ಖಾಯಂ ಆಗಿ ಇಟ್ಟುಕೊಂಡಿದ್ದಾರೆ. ಹೆಚ್ಚಾಗಿ ಸರ್ವೆ ಹಿಸ್ಸೆ, ರಿಸೆಟಲ್‌ಮೆಂಟ್, ಸೆಟಲ್‌ಮೆಂಟ್ ಕೆಲಸ ನಡೆದರೆ ಸಾವಿರಾರು ಜನರನ್ನು ನೇಮಿಸಿಕೊಳ್ಳುತ್ತಾರೆ. 2-3 ವರ್ಷ ಕೆಲಸ ಇರುತ್ತದೆ. ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟು ಜನರನ್ನು ಪರ್ಮನೆಂಟ್ ಪೋಸ್ಟುಗಳಲ್ಲಿ ಇಟ್ಟುಕೊಂಡು ಅಕಾಮಡೇಟ್ ಮಾಡುತ್ತಾ ಇದ್ದೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—15—20 ವರ್ಷ ಸರ್ವೀಸು ಆಗಿದ್ದ ಪಕ್ಷದಲ್ಲಿ ಅವರು ಕೆಲಸವಿಲ್ಲದಾಗ ರಜಾ ತೆಗೆದುಕೊಂಡದ್ದನ್ನು ಸರ್ವೀಸೆಂದು ಟ್ರೀಟ್ ಮಾಡಿ ಪೆನ್‌ಷನ್ ಕೊಡುವ ಹಾಗೆ ಮಾಡಿಕೊಟ್ಟರೆ ಬಡವರಿಗೆ ಅನುಕೂಲವಾಗುತ್ತದೆ, ಹಾಗೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಳಗಾಂ ಡಿವಿಜನ್ನಿನಲ್ಲಿ ಬೊಂಬಾಯಿ ಪದ್ಧತಿ ಇಟ್ಟುಕೊಂಡು 8 ತಿಂಗಳು ಫೀಲ್ಡ್ ವರ್ಕ್, 4 ತಿಂಗಳು ಬರಸಾತ್ ಕೆಲಸ ಕೊಡುತ್ತಾರೆ. ಬರಸಾತ್ ವರ್ಕ್‌ನಲ್ಲಿ ಸರ್ವೆಯರುಗಳನ್ನು ಡಿಸ್‌ಪೆನ್ಸ್ ಮಾಡುತ್ತಾರೆ. ಪ್ರಮೋಷನ್ ವಗೈರೆಗೆ ಇದನ್ನು ಗಣನೆಗೆ ತೆಗೆದುಕೊಂಡು ಈ 4 ತಿಂಗಳಗಳನ್ನು ಸೇರಿಸಿಕೊಳ್ಳುತ್ತಾರೆ. ಇಲ್ಲಿಯೂ ಆ ರೀತಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆ.

Purchase of a Lorry by the Taluk Agricultural Produce Marketing Co-operative Society, Ltd., Channapatna.

*Q.—633. Sri B. J. LINGE GOWDA (Channapatna).—

Will the Government be pleased to state :—

(a) when a Lorry was purchased by the Taluk Agricultural Produce Marketing Co-operative Society, Ltd., Channapatna, and at what cost ;

(b) what is the total mileage run by it ;

(c) what is the net profit earned by hiring the lorry for the year 1931-62 ;

(d) what are the remarks of the Auditor on the use of the lorry belonging to the Society ?

A.—Sri RAMAKRISHNA HEGDE (Minister for Co-operation and Development).—

(*a*) On 5-5-1961 at a total cost of Rs. 33,703.60 nP.

(*b*) 43,557 miles upto 31-3-1963 (*i.e.* 21,803 miles up to 30-6-1962 *plus* 21,754 miles from 1-7-1962 to 31-3-1963).

(*c*) Rs. 521.50 nP.

(*d*) The remarks of the auditor for the year 1961-62 are as follows:—

"The society has purchased a lorry and the cost of the same including the body built amounted to Rs. 33,703-60 nP. As shown in the lorry income and expenditure account, the total income and expenditure account the total income during the year was Rs. 18,323.27 and the total expenditure incurred under various items including Rs. 6,000 being the provision made for depreciation amounts to Rs. 17,876.77 earning a profit of Rs. 446.50 nP. only and this is negligible. The total number of miles run was 21,803 earning a sum of Rs. 18,323.50 and it works out at 84 nP. per mile. This is very poor and it can be very well said that the lorry is not properly managed. It has been noticed that the lorry has been sent for transporting fuel and stores for low hire, for example, that the lorry was sent to Ramanagaram for a hire of Rs. 20 only for transporting the load of fuel. Diesel and Oil account were not properly maintained up to the end of December 1961, and trip sheets were not maintained. In a number of instances, hire charges are recoverd after months and this is very irregular and unsatisfactory."

ಶ್ರೀ ಬಿ. ಜೆ. ಲಿಂಗೇಗೌಡ.—33,703 ರೂಪಾಯಿಗಳಲ್ಲಿ ಸರ್ಕಾರದವರು ಕೊಟ್ಟಿರುವ ಸಾಲ ವೆಷ್ಟು, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—25,000 ರೂಪಾಯಿ.

ಶ್ರೀ ಬಿ. ಜೆ. ಲಿಂಗೇಗೌಡ.—(ಸಿ)ಗೆ ಉತ್ತರವಾಗಿ ರೂ. 521.50 ಲಾಭ ಸಂಪಾದನೆಯಾಗಿದೆ ಎಂದು ಹೇಳಿದ್ದೀರಿ. ಆಡಿಟ್ ರಿಪೋರ್ಟ್ ಪ್ರಾಕಾರ 446.50 ಎಂದು ಇದೆ. ಇದ್ದರಲ್ಲಿ ಯಾವುದು ಸರಿ, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—521.50 ರೂಪಾಯಿ ಸರಿ. Clerical mistake ನಿಂದ ಆ ರೀತಿ ಆಗಿದೆ.

ಶ್ರೀ ಸಿ. ಆರ್. ರಂಗೇಗೌಡ.—ಆಡಿಟ್ ರಿಪೋರ್ಟಿನಲ್ಲಿ ಬಂದಿರುವ 446.50 ರೂಪಾಯಿಲಾಭ very negligible ಎಂದು ಹೇಳಿದ್ದಾರೆ. ಈ ಸೊಸೈಟಿಯಲ್ಲಿ ಲಾರಿಯನ್ನು ಇಟ್ಟಿರುವುದು ಪ್ರೈಮರಿ ಸೊಸೈಟಿಗಳಿಗೆ ದೊಡ್ಡ ಸೊಸೈಟಿಯಿಂದ ಸಾಮಾನುಗಳನ್ನು ಸಾಗಿಸುವುದಕ್ಕೆ ಎಂಬ ಮುಖ್ಯ ಉದ್ದೇಶದಿಂದಲೇ ಹೊರತು ಲಾಭ ಸಂಪಾದನೆ ಮಾಡಬೇಕೆಂದಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ನಿಜ.

ಶ್ರೀ ಬಿ. ಜೆ. ಲಿಂಗೇಗೌಡ.—ಲಾರಿಯನ್ನು ಸೌದೆ ಮತ್ತು ಕಲ್ಲುಗಳ ಸಾಗಾಣಿಕೆಗೆ ಕಡಮೆ ಬಾಡಿಗೆಗೆ ಕೊಟ್ಟಿರುವುದಾಗಿ ಕಂಡು ಬಂದಿದೆ ಎಂದು ಲೆಕ್ಕ ಪರೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ತಾವು ಏನು ಹೇಳುತ್ತೀರಿ, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇನ್ನು ಮುಂದೆ ಆ ರೀತಿ ಕೊಡದೆ ಇರುವ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಈ ಸೊಸೈಟಿಗೆ ಲಾರಿ ವ್ಯವಹಾರ ಹೊಸದು, ಮೊದಲಿನ ಆರು ತಿಂಗಳಲ್ಲಿ ಅಲ್ಪಸ್ವಲ್ಪ ಲೋಪದೋಷ ಕಂಡು ಬಂದಿದ್ದರೂ ಈಚೆಗೆ ಸುವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆಡಿಟ್ ರಿಪೋರ್ಟ್ ಬಂದ ಮೇಲೆ ಅದರ ಮೇಲೆ ಕ್ರಮ ತೆಗೆದು ಕೊಂಡ ನಂತರ ಯಾವ ಪರಿಣಾಮವಾಗಿದೆ ಎನ್ನುವುದು ಗೊತ್ತಿಲ್ಲ. ಇನ್ನು ಮುಂದೆ ಆ ರೀತಿಯ ದೋಷ ಆಗದ ಹಾಗೆ ನೋಡಿಕೊಳ್ಳುತ್ತೇವೆ.

Officials lent to M.S.R.T.C.

* *Q.*—648. Sri J. L. KABADI (Baradol).—

Will the Government be pleased to state:—

(*a*) whether it is not a fact that the General Manager and Chief Accounts Officer should be only lent officials to M.S.R.T.C. as per Act ;

(*b*) why the Government have given more hands to M.S.R.T.C. other than the above persons and how many in each section ?

A.—Sri D. DEVARAJ URS (Minister for Labour, Housing and Transport).—

(*a*) Under Section 14 (1), Chapter 2 of the Road Transport Corporation Act, 1950, (64 of 1950) General Manager and the Chief Accounts Officer of the Corportation are to be appointed by the State Government ;

(*b*) The act does not prevent taking any officer from the State Government on deputation in the interest of work. The number of lent officers now working are.—

Secretarial Section ...	1
Security Section ...	1
Accounts Section ...	7
Civil Engineering Section ...	19

†ಶ್ರೀ ಡಿ.ದೇವರಾಜ ಅರಸ್.—ಅಚ್ಚಾದ ಉತ್ತರದಲ್ಲಿ (ಬಿ) ಭಾಗಕ್ಕೆ ಕೊಟ್ಟಿರುವುದರ ಜೊತೆಗೆ ಇಬ್ಬರು ಅಧಿಕಾರಿಗಳನ್ನು ಸರ್ಕಾರದಿಂದ ಕಾರ್ಪೊರೇಷನ್ನಿಗೆ ತೆಗೆದುಕೊಂಡಿದ್ದೇವೆ ಎಂದು ಸೇರಿಸಿ ಕೊಳ್ಳಬೇಕು.

ಶ್ರೀ ಜೆ. ಎಲ್. ಕಬಾಡಿ.—ಕಾರ್ಪೊರೇಷನ್ನಿಗೆ ತೆಗೆದುಕೊಂಡಿರುವ ಅಧಿಕಾರಿಗಳನ್ನು ಯಾವ ಯಾವ ಇಲಾಖೆಗಳಿಂದ ತೆಗೆದುಕೊಂಡಿದ್ದೀರಿ ?

ಶ್ರೀ ಡಿ.ದೇವರಾಜ ಅರಸ್.—ಅಕೌಂಟ್ಸ್ ಸೆಕ್ಷನ್ನಿಗೆ 7 ಜನರನ್ನು ಸರ್ಕಾರದ ಅಕೌಂಟ್ಸ್ ಸೆಕ್ಷನ್ನಿನಿಂದ ತೆಗೆದುಕೊಂಡಿದ್ದೇವೆ; ಸೆಕ್ಯೂರಿಟಿ ಸೆಕ್ಷನ್ನಿಗೆ ಪೋಲೀಸು ಇಲಾಖೆಯಿಂದ ಒಬ್ಬ ಅಧಿಕಾರಿಯನ್ನು ತೆಗೆದುಕೊಂಡಿದ್ದೇವೆ, ಸಿವಿಲ್ ಇಂಜಿನಿಯರಿಂಗ್ ಸೆಕ್ಷನ್ನಿಗೆ ಲೋಕೋಪಯೋಗಿ ಶಾಖೆಯಿಂದ ತೆಗೆದು ಕೊಂಡಿದ್ದೇವೆ.

Sri J.P. SARWESH.—Sir, what is the minimum pay that the officers daw in their parent departments and what is the pay they are drawing now ?

Mr. SPEAKER.—Is it not too big a question ?

ಶ್ರೀ ಜೆ. ಎಲ್. ಕಬಾಡಿ.—ಸೆಕ್ರೆಟೇರಿಯಲ್ ಸೆಕ್ಷನ್ನಿಗೆ ಯಾವ ಇಲಾಖೆಯಿಂದ ತೆಗೆದು ಕೊಂಡಿದ್ದೀರಿ ?

ಶ್ರೀ ಡಿ.ದೇವರಾಜ ಅರಸ್.—ಅವರನ್ನು ರೆವೆನ್ಯೂ ಇಲಾಖೆಯಿಂದ ತೆಗೆದುಕೊಂಡಿದ್ದೇವೆಂದು ಕಾಣುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಈಗ ಡಿವಿಜನಲ್ ಕಂಟ್ರೋಲರ್ ಹತ್ತಿರ ಕೆಲಸ ಮಾಡತಕ್ಕ ಜನರು ಆರ್. ಟಿ. ಒ. ಆಫೀಸಿನಿಂದ ಬಂದದ್ದು ಹೌದೋ ಅಲ್ಲವೊ ?

ಶ್ರೀ ಡಿ. ದೇವರಾಜ ಅರಸ್.—ಅವರೆಲ್ಲ ಇಂಟಿಗ್ರೇಷನ್ ಆದಾಗ ಬಂದ ಅಧಿಕಾರಿಗಳು ಯಾವ ಆಫೀಸಿನಿಂದ ಬಂದವರು ಎನ್ನುವುದು ಗೊತ್ತಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಈಗ ಕಾರ್ಪೊರೇಷನ್ನಿನಲ್ಲಿರುವ ಅಧಿಕಾರಿಗಳಲ್ಲಿ ಟೆಕ್ನಿಕಲ್ ಸೆಕ್ಷನ್ನಿನಲ್ಲಿ ಯಾವುದೂ ಗೊತ್ತಿಲ್ಲದೇ ಇರುವವರು ಎಷ್ಟು ಜನರಿದ್ದಾರೆ?

(ಉತ್ತರವಿಲ್ಲ.)

Appointment of Village Accountant—cum—V.P. Secretaries in Shimoga District.

* *Q.*—649. Sri V. S. LAKSHMIKANTHAPPA (Sagar).—

Will the Government be pleased to state:—

(*a*) the number of people that are trained and appointed as Village Accountants—*cum*—V.P. Secretaries in Shimoga District (taluk-wise figures may be furnished):

(*b*) the agency that has been empowered to disburse the salary for such officials and since when?

A.—Sri M. V. KRISHNAPPA (Minister for Revenue).—

(*a*) 191 as per details shown below:—

1.	Shimoga	...	...	16
2.	Bhadravathi	...	...	10
3.	Sagar	...	...	23
4.	Shikaripur	...	...	22
5.	Honnali	...	...	27
6.	Hosanagar	...	...	10
7.	Thirthally	...	...	33
8.	Channagiri	...	...	32
9.	Sorab	...	...	18

The Deputy Commissioner is the drawing officer and the Tahsildars are the disbursing officers.

(*b*) Since November 1962.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಸರ್ಕಾರದಿಂದ ಈ ನೌಕರರಿಗೆ ಗೊತ್ತುಪಡಿರುವ ಸಂಬಳ ಬಹಳಕಡಮೆಯಾಗಿರುವುದರಿಂದ ಅವರು ಬೇಕಾದಷ್ಟು ಸಂಖ್ಯೆಯಲ್ಲಿ ಬರದೆ ಅನೇಕ ಪಂಚಾಯಿತಿಗಳಿಗೆ ಕಾರ್ಯದರ್ಶಿಗಳಿಲ್ಲದೆ ಬಹಳ ತೊಂದರೆಯಾಗಿರುವುದನ್ನು ತಪ್ಪಿಸಲು ಸರ್ಕಾರ ಏನು ಪರಿಹಾರ ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೆ 65 ರೂಪಾಯಿ ಸಂಬಳ ನಿಗದಿ ಮಾಡಿ ಕನಿಷ್ಠ ಅರ್ಹತೆ ಎಸ್. ಎಸ್. ಎಲ್. ಸಿ. ಎಂದು ಇಟ್ಟಿದ್ದೆವು. ಈ ಅರ್ಹತೆ ಇರುವವರಿಗೆ 65 ರೂಪಾಯಿ ಬಹಳ ಕಡಮೆ. ಆದುದರಿಂದ ಕನ್ನಡದಲ್ಲಿ ಚೆನ್ನಾಗಿ ಓದು ಬರಹ ಬರುವವರನ್ನು, ಎಲ್. ಎಸ್. ಪಾಸಾಗಿದ್ದರೆ ನೇಮಿಸಿಕೊಳ್ಳಬೇಕೆಂದು ಮಾಡಿರುವುದರಿಂದ ಈಗ ಸಾಕಷ್ಟು ಜನರು ಸಿಕ್ಕುತ್ತಿದ್ದಾರೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಪಂಚಾಯಿತಿಗಳಿಗೆ ಸೆಕ್ರಟರಿಗಳನ್ನು ನೇಮಕ ಮಾಡಿಲ್ಲ. ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಕಾರಣ ಕಡಮೆ ಸಂಬಳವಲ್ಲ. ನಮಗೆ ಬೇಕಾಗಿರುವ 7,500 ಜನ ಕರಣಿಕರಲ್ಲಿ ಐದು ಸಾವಿರ ಚಿಲ್ಲರೆ ಜನರನ್ನು ರಿಕ್ರೂಟ್ ಮಾಡಬೇಕು. ಅದರಲ್ಲಿ ಅರ್ಧ ಭಾಗವನ್ನು ತೆಗೆದುಕೊಂಡು ಅವರಿಗೆ ಟ್ರೈನಿಂಗ್ ಕೊಡುವುದರೊಳಗೆ ಹೈಕೋರ್ಟಿನಲ್ಲಿ ರಿಟ್ ಅರ್ಜಿ ದಾಖಲಾಗಿ ಶಾನುಭೋಗರು ಮತ್ತು ಪಟೇಲರ ಜಾಗ ಖಾಲಿಯಾಗಲಿಲ್ಲ. ಆದುದರಿಂದ ರಿಕ್ರೂಟ್ ಮಾಡುವುದನ್ನು ನಿಲ್ಲಿಸಿದ್ದೇವೆ. ಮೊದಲು ತೆಗೆದುಕೊಂಡವರಿಗೆ ಸುಮ್ಮನೆ ಸಂಬಳ ಕೊಡಬಾರದೆಂದು ಪಂಚಾಯಿತಿಗಳಿಗೆ ಕಾರ್ಯದರ್ಶಿಗಳಾಗಿ ಕೆಲಸ ಮಾಡಲು ಹಾಕಿದ್ದೇವೆ.

Sri GANJI VEERAPPA.—Is there no restriction with regard to the age in the matter of recruitment of these people ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಶ್ಯಾನುಭೋಗರ ಮತ್ತು ಪಟೇಲರ ವಂಶಸ್ಥರಾಗಿದ್ದರೆ 40 ವರ್ಷದವರೆಗೂ ರಿಯಾಯಿತಿ ಕೊಟ್ಟಿದೆ.

ಶ್ರೀ ಬಿ. ಎಲ್. ಗೌಡ.—ಸಂಬಳವನ್ನು ರೆವಿನ್ಯೂ ಇಲಾಖೆಯಿಂದ ಕೊಡುತ್ತೀರೋ ಅಥವಾ ಪಂಚಾಯಿತಿಗಳಿಂದ ಕೊಡುತ್ತೀರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇವರ ಸಂಬಳವನ್ನು ಯಾವ ಹೆಡ್ಡಿಗೆ ಹಾಕಬೇಕು ಎಂದು ಅಕೌಂಟೆಂಟ್ ಜನರಲ್ ಅವರು ಸಂಬಳವನ್ನು ಕೊಡದೆ ನಿಲ್ಲಿಸಿಬಿಟ್ಟಿದ್ದರು. ಈಗ ರೆವೆನ್ಯೂ ಇಲಾಖೆಯಿಂದ ಕೊಡಲು ತೀರ್ಮಾನವಾಗಿದೆ.

ಶ್ರೀ ಕೆ. ವಿ. ಬೈರೇಗೌಡ.—ಗ್ರಾಮ ಪಂಚಾಯಿತಿಗಳಲ್ಲಿ ಸಾಕಷ್ಟು ಹಣವಿಲ್ಲದೆ ಇರುವುದರಿಂದ ಇಷ್ಟು ಹಣವನ್ನೂ ಪಂಚಾಯಿತಿಗೆ ಖರ್ಚು ಹಾಕಿದರೆ ಅವರಿಗೆ ತೊಂದರೆಯಾಗುತ್ತದೆಂದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಗಳ ತೀರ್ಮಾನವಾದ ತಕ್ಷಣ ಬಹುಶಃ ಈ ತೊಂದರೆ ನಿವಾರಣೆಯಾಗುತ್ತದೆ.

ಶ್ರೀ ಎಂ. ಸಿ. ಬಸಪ್ಪ.—ಬಹಳ ಸ್ಥಳಗಳು ಖಾಲಿ ಇರುವುದರಿಂದ ರಿಕ್ರೂಟ್ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಿಕ್ರೂಟ್‌ಮೆಂಟ್ ನಡೆಯುತ್ತಿದೆ. ಮೊದಲನೆಯ ತಂಡವನ್ನು ರಿಕ್ರೂಟ್ ಮಾಡಿದ್ದೇವೆ. ಹೈಕೋರ್ಟ್‌ನವರ ತೀರ್ಮಾನ ನಮ್ಮ ಪರವಾಗಿಯೇ ಆಗುತ್ತದೆಂಬುದರಲ್ಲಿ ಅನುಮಾನವಿಲ್ಲ. ಅವರ ತೀರ್ಮಾನವಾದ ತಕ್ಷಣ ಇನ್ನೊಂದು ತಂಡವನ್ನು ತೆಗೆದುಕೊಂಡು ತಯಾರು ಮಾಡುತ್ತೇವೆ.

Sri SANJEEVANATH AIKALA.—On a point of order, Sir. Can the Hon'ble Minister say that the judgment of the High Court will be in favour of Government ? Will it not go against the case ?

Sri M. V. KRISHNAPPA.—Government always think that they are right and they hope to get a right decision.

Mr. SPEAKER.—Every party is entitled to hope that the judgment would be in its favour ; Government is also a party.

Sri SANJEEVANATH AIKALA.—I question the propriety of his Statement.

Mr. SPEAKER.—From a point of order the Hon'ble Member has come to propriety.

ಶ್ರೀ ವಿ. ಎಂ. ದೇವ್.—ಸೆಕೆಟ್ರರಿಗಳ ಸಂಬಳವನ್ನು ರೆವೆನ್ಯೂ ಇಲಾಖೆಯಿಂದ ಕೊಡುತ್ತಿದ್ದೀರಿ. ಇನ್ನು ಮುಂದೆ ಕಂದಾಯದ ವಸೂಲಿ ಕ್ರಮವನ್ನೂ ಅವರಿಗೇ ವಹಿಸುತ್ತೀರೋ ಅಥವಾ ಈಗಿರುವಂತೆಯೇ ಅಮಲ್ದಾರರು ಮತ್ತು ಅವರ ಕೈಕೆಳಗಿನ ಅಧಿಕಾರಿಗಳು ವಸೂಲು ಮಾಡಬೇಕು ಎಂದು ಇದ್ದೀರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇವರಿಗೆಲ್ಲ ತರಬೇತಿ ಕೊಟ್ಟು, ಅವರು ಕೆಲಸಕ್ಕೆ ಹೋದ ಅನಂತರ ಆ ವಿಚಾರವನ್ನು ನೋಡೋಣ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಒಂದಕ್ಕಿಂತ ಹೆಚ್ಚು ಪಂಚಾಯಿತಿಗಳಲ್ಲಿ ತಾವು ನೇಮಕ ಮಾಡಿರತಕ್ಕ ವಿಲೇಜ್ ಅಕೌಂಟೆಂಟ್ ಕೆಲಸ ಮಾಡುವುದಕ್ಕೆ ಅವಕಾಶ ಉಂಟೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ನಾವು ಮಾಡಬೇಕೆಂದಿರುವುದು ಎಷ್ಟು ಪಂಚಾಯಿತಿಗಳಿವೆಯೋ ಅಷ್ಟೇ ಜನರನ್ನು ನೇಮಕ ಮಾಡಬೇಕೆಂದಿದ್ದೇವೆ. 7,500 ಜನರನ್ನು ನೇಮಕ ಮಾಡಬೇಕೆಂದಿದ್ದೇವೆ ; ಅಷ್ಟೇ ಪಂಚಾಯಿತಿಗಳು ಇವೆ.

ಶ್ರೀ ಎನ್. ನಂಜೇಗೌಡ.—ಪಂಚಾಯಿತಿ ಸೆಕ್ರೆಟರಿ ಇಲ್ಲವೇ ಇರುವ ಕಡೆ ವಿಲೇಜ್ ಲೆವಲ್ ವರ್ಕರನ್ನೇ ಆ ಕೆಲಸ ಮಾಡುವುದಕ್ಕೆ ನೇಮಿಸಿಕೊಳ್ಳಲು ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಬೇರೆ ಪ್ರಶ್ನೆ ಹಾಕಿದರೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೈ ಕೋರ್ಟ್ ತಮ್ಮ ಕಡೆ ತೀರ್ಮಾನ ಕೊಡುವ ಭರವಸೆ ಇದೆ ಎಂದು ತಾವು ಹೇಳಿದಿರಿ. ಈಗ ಪಂಚಾಯಿತಿ ಸೆಕ್ರೆಟರಿ ನೇಮಕ ಮಾಡುವುದಕ್ಕೆ ಅಡ್ಡಿ ಇರುವುದರಿಂದ ಎಷ್ಟು ತಿಂಗಳೊಳಗೆ ಹೈಕೋರ್ಟಿನಿಂದ ಕಡೆಯ ತೀರ್ಪನ್ನು ನಿರೀಕ್ಷೆ ಮಾಡಿದ್ದೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಸಿಗೆ ರಜ ಬರುವುದರೊಳಗೆ ತೀರ್ಮಾನವಾಗುತ್ತದೆ ಎಂದು ಕಾದಿದ್ದೆವು. ಕಾರಣಾಂತರದಿಂದ ಮುಂದಕ್ಕೆ ಹೋಗಿದೆ—ಅದು ಹೈ ಕೋರ್ಟಿಗೆ ಸಂಬಂಧಪಟ್ಟದ್ದು.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ವಿಲೇಜ್ ಆಫೀಸರುಗಳನ್ನು ರದ್ದು ಮಾಡುವುದಕ್ಕೆ ಒಂದು ನಿಶ್ಚಯವಾದ ತೀರ್ಮಾನವಾಗಿರುವುದರಿಂದ ಆ ಸೆಕ್ರೆಟರಿಗಳಿಗೆ ತರಪೇತು ಕೊಡುವುದಕ್ಕೆ ಇರತಕ್ಕ ಅಡ್ಡಿ ಏನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ತಾನೆ ಖಾಲಿ ಆಗುತ್ತಿದ್ದರೆ ಯಾರನ್ನು ನೇಮಕ ಮಾಡಬಹುದು, ಎಂಬ ವಿಷಯ ನಮ್ಮ ಮುಂದೆ ಇದೆ. ಈಗಾಗಲೇ ಹಳೆ ಶಾನುಭೋಗರು ಇದ್ದಾರೆ ಅವರೆಲ್ಲಾ ಹೋದ ಮೇಲೆ ಈ ಟ್ರೈನಿಂಗ್ ಆದವರನ್ನು ನೇಮಕಮಾಡಬೇಕಾಗುತ್ತದೆ. ಈಗ ಟ್ರೈನಿಂಗ್ ಮೂರು ತಿಂಗಳು ಕೊಟ್ಟ ಮೇಲೆ ಅವರನ್ನು ಇಟ್ಟುಕೊಂಡು ಸುಮ್ಮನೆ ಸಂಬಳ ಕೊಡಬೇಕಾಗುತ್ತದೆ. ಅದೂ ಅಲ್ಲದೆ ಹೈ ಕೋರ್ಟು ನಿಧಾನ ಮಾಡಿರುವುದು ನಮಗೆ ಅನುಕೂಲವೇ ಆಗಿದೆ. ಏಕೆಂದರೆ ಕಂದಾಯ ವಸೂಲು ಮಾಡುವಾಗ ಮಧ್ಯೆ ಶಾನುಭೋಗರನ್ನು ಮನೆಗೆ ಕಳುಹಿಸುವುದಕ್ಕಿಂತ ವಸೂಲಾದ ಮೇಲೆ ಕಳುಹಿಸುವುದು ಒಳ್ಳೆಯದು ಎಂದು ಸುಮ್ಮನೆ ಇದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರಿಟ್ ಅರ್ಜಿ ಒಬ್ಬ ಜಡ್ಜ್ ಮುಂದೆ ಆರ್ಗ್ಯುಮೆಂಟ್ ಆಗಿ ಆ ಜಡ್ಜ್ ರಿಟೈರ್ ಆಗಿದ್ದಾರೆ. ಇನ್ನೂ ಜಡ್ಜ್‌ಮೆಂಟ್ ಕೊಡದೇ ಇರುವುದರಿಂದ ಇನ್ನೊಂದು ಸಾರಿ ಚರ್ಚೆ ಆಗುವುದಕ್ಕೆ ಅವಕಾಶವಿದೆಯೇ ?

Mr. SPEAKER.—It does not arise.

Sri S. SIVAPPA.—The Minister said that because of the low salary offered, Government had reduced the qualifications from S.S.L.C. to non-S.S.L.C. Is it the policy of the Government to go on reducing the qualifications or would they recruit persons having the requisite qualification ?

ಶ್ರೀ ಎಂ. ವಿ. ಕೃಷ್ಣಪ್ಪ.—65 ರೂಪಾಯಿ ಸಂಬಳ ಎಸ್.ಎಸ್.ಎಲ್.ಸಿ. ಕ್ವಾಲಿಫಿಕೇಷನ್ ಇದ್ದವರಿಗೆ ಕೊಡುವುದು ಸರಿಯಲ್ಲ—ಎಸ್.ಎಸ್.ಎಲ್. ಸಿ. ಆದವರಿಗೆ ಮೇಷ್ಟರ ಕೆಲಸವಾದರೂ ಸಿಕ್ಕುತ್ತದೆ. ಮೇಷ್ಟರ ಕೆಲಸಕ್ಕೆ 80 ರೂಪಾಯಿ ಇರುವಾಗ ಈ ಕೆಲಸಕ್ಕೆ 65 ರೂಪಾಯಿಗೆ ಯಾರೂ ಬರುವುದಿಲ್ಲ. ಮತ್ತು ಎಲ್. ಎಸ್. ಪಾಸ್ ಮಾಡಿದವರು ಶ್ಯಾನುಭೋಗರ ವಂಶಸ್ಥರು ಇದ್ದಾರೆ. ಅವರಿಗೆ ಇವರಿಗಿಂತ ನಾಲ್ಕರಷ್ಟು ಅನುಭವ ಇರುತ್ತದೆ. ಅಂತಹವರು ಎಸ್.ಎಸ್.ಎಲ್.ಸಿ. ಆಗಿಲ್ಲದಿದ್ದರೂ ಸಾಕು. ಎಲ್.ಎಸ್. ಆಗಿ ಒಳ್ಳೆಯ ಕನ್ನಡ ಬರೆಯುವುದಕ್ಕೆ ಓದುವುದಕ್ಕೆ ಲಕ್ಷಣವಾಗಿ ತಿಳಿದುಕೊಂಡಿದ್ದರೆ ಶ್ಯಾನುಭೋಗರ ವಂಶಸ್ಥರಾಗಿದ್ದರೆ ಅವರಿಗೂ ಕೊಡಬಹುದು ಎಂದು ತೀರ್ಮಾನವಾಗಿದೆ.

Sri M. Y. GHORPADE.—Since the Minister said that the village Accountants would also act as panchayat secretaries, will these people continue to be servants of the Revenue Department or whether Government will consider transfering their services to the panchayat raj bodies as in Maharashtra ?

Sri M. V. KRISHNAPPA.—They will be under dual control.

Mr. SPEAKER.—*Question No. 651 will be held over.

Industries owned by the Government of India in Mysore State.

*Q.—657. **Sri H. R. KESHAVA MURTHY** (Gandasi).—

Will the Government be pleased to state.—

(a) the names of Industries owned by the Government of India in Mysore State;

(SRI H. R KESHVAMURTH Y)

(*b*) the facilities and concessions given by the State Government to such industries;

(*c*) the percentage of shares owned by the State Government ;

(*d*) whether there is any understanding between the Central Government and State Government to allot 50 per cent of the appointments to be filled up by taking the advice of the State Government ?

A.—Sri K. MALLAPPA (Minister for Industries and Commerce).—

(*a*) The following are the four Central Government Public Sector undertakings located in the Mysore State.

1. The Hindustan Aircrafts, Ltd., Bangalore.
2. The Hindustan Machine Tools, Ltd., Bangalore.
3. The Indian Telephone Industries, Ltd., Bangalore.
4. The Bharat Electronics, Ltd., Bangalore.

(*b*) In accordance with the general policy of Government, assistance was given in the acquisition of land and supply of water.

(*c*) 1. *Hindustan Aircrafts, Limited*—Mysore Government's investment in the total subscribed share capital is a little over 3 per cent.

2 *Indian Telephone Industries*—Mysore Government's investment in the total subscribed share capital is $7\frac{1}{2}$ per cent.

3. Hindustan Machine Tools. } NIL
4. Bharat Electronics, Ltd. }

(*d*) No.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮೈಸೂರು ಸರ್ಕಾರದವರು ಈ ಇಂಡಸ್ಟ್ರೀಗಳಿಗೆ ಇದುವರೆಗೂ ತೋರಿಸಿರತಕ್ಕ ಕನ್‌ಸೆಷನ್ ಮೊತ್ತ ಒಂದು ಅಂದಾಜು ಮೊತ್ತ,—ಎಷ್ಟಾಗಬಹುದು ?

† ಶ್ರೀ ಕೆ. ಮಲ್ಲಪ್ಪ.—ಬರೀ ಜಾಗ ಕೊಟ್ಟಿದ್ದೇವೆ, ನೀರು ಕೊಟ್ಟಿದ್ದೇವೆ, ಪವರ್ ಕೊಟ್ಟಿದ್ದೇವೆ ಅದಕ್ಕೆ ಅವರು ಚಾರ್ಜ ಕೊಡುತ್ತಾ ಇದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇದು ಎಷ್ಟು ಕೋಟಿ ರೂಪಾಯಿ ಆಗಬಹುದು ?

ಶ್ರೀ ಕೆ, ಮಲ್ಲಪ್ಪ.—ಇದೆಲ್ಲಾ ಲ್ಯಾಂಡ್ ಕನ್‌ಸೆಷನ್ ರೂಪದಲ್ಲಿ ಕೊಟ್ಟಿರಬಹುದು—ಅಕ್ವಿಸಿಷನ್ ಪ್ರೊಸೀಡಿಂಗ್ಸ್‌ಗೆ ಸಹಾಯ ಮಾಡಿರಬಹುದು ; ಅಷ್ಟೇ ವಿನಾ ಕೋಟ್ಯಾಂತರ ರೂಪಾಯಿ ಅನು ಆಗುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಕನ್‌ಸೆಷನ್ ಕೊಟ್ಟಿರುವುದಕ್ಕೆ ಪ್ರತಿಫಲವಾಗಿ ಅವರು ಮೈಸೂರು ದೇಶದ ಜನರಿಗೆ ಅಲ್ಲಿ ನೇಮಕ ಮಾಡಿಕೊಳ್ಳುವ ವಿಷಯದಲ್ಲಿ ಏನಾದರೂ ಕನ್‌ಸೆಷನ್ ತೋರಿಸುತ್ತಾ ಇದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಯೋಗ್ಯರಿಗೆ ಹುದ್ದೆಗಳನ್ನು ಕೊಡುತ್ತಾ ಇದ್ದಾರೆ.

Sri H. R. KESHAVA MURTHY.—I want to know whether any preference is shown to Mysoreans over non-Mysoreans ?

ಶ್ರೀ ಕೆ. ಮಲ್ಲಪ್ಪ.—ಪ್ರಿಫರೆನ್ಸ್ ಹೇಗೆ ಆಗುತ್ತದೆ? ಕೆಳ ದರ್ಜೆಗೆ ಲೋಕಲ್ ಜನರು ಬೇಕಾಗುತ್ತಾರೆ—ಆ ಕೆಲಸಗಳನ್ನು ಅವರಿಗೆ ಕೊಡುತ್ತಾರೆ—ಮೇಲ್ದರ್ಜೆಯ ಕೆಲಸಗಳನ್ನು ಯೋಗ್ಯತೆಯ ಮೇಲೆ ಕೊಡಬೇಕಾಗುತ್ತದೆ. ಯೋಗ್ಯತೆಯುಳ್ಳವರು ಮೈಸೂರಿನವರು ಇದ್ದರೆ ಅವರಿಗೂ ಕೊಡುತ್ತಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವು ಇಂಡಸ್ಟ್ರೀಗಳಲ್ಲಿ ಇತ್ತೀಚೆಗೆ ಮೈಸೂರಿನವರಿಗೆ ಕೊಡಬೇಕಾದಷ್ಟು ಪ್ರಾಶಸ್ತ್ಯ ಕೊಡುತ್ತಿಲ್ಲ; ಹೊರಗಿನವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.— ಇಲ್ಲ.

ಶ್ರೀ ಇ. ನಾರಾಯಣ ಗೌಡ.—ಅಲ್ಲಿ ಮೈಸೂರಿನವರು ಎಷ್ಟು ಪರ್ಸೆಂಟ್ ಇದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಪ್ರತಿಯೊಂದು ಫ್ಯಾಕ್ಟರಿನಲ್ಲೂ ಪ್ರತ್ಯೇಕ ಪ್ರತ್ಯೇಕವಾಗಿ ಅಂಕಿ ಸಂಖ್ಯೆಗಳನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಮೈಸೂರಿನವರು ಎಷ್ಟು ಜನ, ಹೊರಗಿನವರು ಎಷ್ಟು ಜನ ಎಂದು ಪ್ರತ್ಯೇಕವಾಗಿ ರಿಜಿಸ್ಟರ್ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಬೆಂಗಳೂರಿನಲ್ಲಿ ತೆಲುಗು ಮಾತನಾಡುವವರು ತಮಿಳು ಮಾತನಾಡುವವರು ಬೇಕಾದಷ್ಟು ಜನ ಇದ್ದಾರೆ ; ಅದ್ದರಿಂದ ಅವರೂ ಇರುತ್ತಾರೆ. ಆದರೆ ಮೈಸೂರಿನವರಿಗೆ ಕೆಲಸ ಕೊಡುತ್ತಿಲ್ಲ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ ಮತ್ತು ಅದು ನಮ್ಮ ತಿಳಿವಳಿಕೆಗೆ ಬಂದಿಲ್ಲ.

Sri S. SIVAPPA.—Is there a representative of Mysore in the Board of Appointments of these industries ?

Sri K. MALLAPPA.—There is an officer from the Mysore Government in the Committee.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಫ್ಯಾಕ್ಟರಿಗಳಲ್ಲಿ ಉನ್ನತ ಹುದ್ದೆಗಳಲ್ಲಿರುವವರೆಲ್ಲರೂ ಬೇರೆ ಪ್ರಾಂತ್ಯದವರೇ ಇದ್ದಾರೆ; ಮೈಸೂರಿನವರಿಗೆ ಕೆಲಸ ದೊರೆಯುವುದು ಬಹಳ ಕಷ್ಟವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.— ಆ ರೀತಿ ಹೇಳುವುದು ಸರಿಯಲ್ಲ. ಎಚ್.ಎಂ.ಟಿ., ಐ.ಟಿ.ಐ. ಇಂಥ ಎಲ್ಲಾ ಫ್ಯಾಕ್ಟರಿಗಳಲ್ಲೂ ಉನ್ನತ ಅಧಿಕಾರಿಗಳು ಮೈಸೂರಿನವರೂ ಇದ್ದಾರೆ.

ಶ್ರೀ ಎಸ್. ಎಮ್. ಕೃಷ್ಣ.—ಹಿಂದೂಸ್ಥಾನ್ ಮೆಷೀನ್ ಟೂಲ್ಸ್ ಫ್ಯಾಕ್ಟರಿಯ ಆಡಳಿತ ಮಂಡಲಿಯಲ್ಲಿ ಮೈಸೂರು ಸರ್ಕಾರದವರು ತಮ್ಮ ಪ್ರತಿನಿಧಿಯನ್ನು ಹೊಂದಿದ್ದಾರೆಯೇ ?

Sri K. MALLAPPA.—We have not invested any money. We have not taken any shares at all. It is purely a concern of the Government of India.

Sri S. RAJAGOPAL.—What is the reason for this Government not buying shares in H.M.T. and B.E.L ?

Sri K. MALLAPPA.—It is a Government of India undertaking. They did not ask the Mysore Government to subscribe. They have subscribed the entire amount themselves.

ಶ್ರೀ ಕೆ. ವಿ. ಬೈರೇ ಗೌಡ.—ಈ ಕೈಗಾರಿಕೆಗಳಿಗೆ ಎಷ್ಟು ಜಮೀನನ್ನು ನಮ್ಮ ಮೈಸೂರು ಸರ್ಕಾರದಿಂದ ತೆಗೆದುಕೊಂಡಿದ್ದಾರೆಯೋ ಅದಕ್ಕೆ ಪ್ರತಿಫಲವಾಗಿ ನಾನ್-ಅಗ್ರಿಕಲ್ಚರಲ್ ಅಸೆಸ್‌ಮೆಂಟ್ ಕೊಟ್ಟಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಕೊಟ್ಟಿದ್ದಾರೆ.

ಶ್ರೀ ಇ. ನಾರಾಯಣ ಗೌಡ.—ಈಗಲೂ ಎಚ್.ಎಂ.ಟಿ. ಒಂದು ಬಿಟ್ಟು ಉಳಿದ 3 ಕಾರ್ಖಾನೆಗಳಲ್ಲಿ ಮೈಸೂರಿನವರಿಗೆ ಸರಿಯಾದ ಪ್ರಾತಿನಿಧ್ಯ ಕೊಡಬೇಕು ಅಥವಾ ನಿರ್ದಿಷ್ಟವಾದ ಪರ್ಸೆಂಟೇಜ್ ಇಡಬೇಕೆಂದು ಒಂದು ಒಪ್ಪಂದ ಮಾಡಿಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಮಲ್ಲಪ್ಪ.— ಮೊದಲನೆಯ ಪ್ರಶ್ನೆಯನ್ನು ಒಪ್ಪುವ ಹಾಗಿಲ್ಲ; ಏಕೆಂದರೆ ಮೈಸೂರಿನವರಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಟ್ಟಿದ್ದಾರೆ. ಎರಡನೆಯದಾಗಿ ಇಷ್ಟೇ ಪರ್ಸೆಂಟ್ ಇಡಬೇಕೆಂದು ನಿರ್ಧರ ಮಾಡಲಿಕ್ಕೆ ಆಗುವುದಿಲ್ಲ ; ಕಾರಣವೇನೆಂದರೆ, ಕೆಲವರಲ್ಲಿ ನಾವು ಬಂಡವಾಳ ಹಾಕಿದ್ದೇವೆ ಮತ್ತೆ ಕೆಲವರಲ್ಲಿ ಬಂಡವಾಳ ಹಾಕಿಲ್ಲ. ಆದ್ದರಿಂದ ಮೈಸೂರಿನವರಿಗೆ ಇಷ್ಟೇ ಪ್ರಾತಿನಿಧ್ಯ ಇಡಬೇಕೆಂದು ನಿರ್ಧರ ಮಾಡುವುದಕ್ಕೆ ಕಷ್ಟವಾಗುತ್ತದೆ.

1-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೋದ ಬಜೆಟ್ ಅಧಿವೇಶನದ ಕಾಲದಲ್ಲಿ, ಕನ್ನಡಿಗರಿಗೆ ಎಂದರೆ ಮೈಸೂರಿನವರಿಗೆ ಕೇಂದ್ರ ಸರ್ಕಾರದ ಕಾರ್ಖಾನೆಗಳಲ್ಲಿ ಕೆಲಸ ಸಿಕ್ಕುವುದರಲ್ಲಿ ಅನ್ಯಾಯವಾಗಿದೆ ಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆ, ಅದನ್ನು ಸರಿಪಡಿಸಲು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ, ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೆ. ಮಲ್ಲಪ್ಪ.—ಮೈಸೂರಿನವರಲ್ಲಿ ತೆಲುಗರು, ತಮಿಳರು, ಕನ್ನಡ ಮಾತನಾಡುವವರು ಎಲ್ಲರೂ ಇದ್ದಾರೆ. ಕೆಲಸ ಕೊಡುವುದರಲ್ಲಿ ಮೈಸೂರಿನವರಿಗೆ ಅನ್ಯಾಯವಾಗುತ್ತಿಲ್ಲವೆಂದು, ವಿಚಾರ ಮಾಡಿದನಂತರ, ತಿಳಿದುಕೊಂಡಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಲ್ಲಿ ಯಾವುದಾದರೂ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಕೇಳುವುದರ ಉದ್ದೇಶ, ನಮ್ಮ ಜನರಿಗೆ ಹೆಚ್ಚು ನೌಕರಿಗಳು ದೊರಕಲಿ, ಇಲ್ಲಿನವರಿಗೆ ಹೆಚ್ಚಿನ ಪ್ರೋತ್ಸಾಹ ದೊರಕಲಿ ಎಂಬುದು. ಈಗ ಕೇವಲ ಶೇಕಡ 20ರಷ್ಟು ಇಲ್ಲಿನವರಿಗೆ ಸಿಕ್ಕಿದೆಯೆಂದು ಹೇಳುತ್ತೀರಿ, ಇನ್ನೂ ಹೆಚ್ಚು ಜನರನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಿದ್ದೀರಾ?

ಶ್ರೀ ಕೆ ಮಲ್ಲಪ್ಪ.—ಕೆಲವು ಕಡೆ ಶೇಕಡ 20ರಷ್ಟಿದೆ, ಮತ್ತೆ ಕೆಲವು ಕಡ ಶೇಕಡ 50—60 ರಷ್ಟಿದೆ. Non technical jobs ಬಹಳವಾಗಿ ನಮ್ಮವರಿಗೇ ಕೊಟ್ಟಿದ್ದಾರೆ. Technical jobs ಮಾತ್ರ ಅಖಿಲ ಭಾರತದ ಆಧಾರದ ಮೇಲೆ ಕೊಡಬೇಕಾಗುತ್ತದ. ಆದುದರಿಂದ ಇಷ್ಟೇ ಕೊಡಬೇಕೆಂದು ನಿರ್ಧಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಂಜೀವನಾಥ್ ಐಕಳ.—ಆ ಕೈಗಾರಿಕೆಗಳಿಗೆ ನಮ್ಮ ಸರ್ಕಾರದಿಂದ ಕೊಟ್ಟಿರುವ ಜಮೀನಿನ ಸುತ್ತಲೂ ಅವರು ಮುಳ್ಳುಬೇಲಿ ಹಾಕಿ, ಆ ಸ್ಥಳಗಳಲ್ಲಿ ನಮ್ಮ ಸ್ಥಳೀಯ ಜನರಿಗೆ ತೊಂದರೆ ಕೊಟ್ಟಿರುವುದು ನಿಜವೆ?

ಶ್ರೀ ಕೆ. ಮಲ್ಲಪ್ಪ.—Security ದೃಷ್ಟಿಯಿಂದ, ಈ ತುರ್ತು ಪರಿಸ್ಥಿತಿಯಲ್ಲಿ ಆ ರೀತಿ ಬೇಲಿ ಹಾಕಬೇಕೆಂದು ಹೇಳಿದ್ದಾರೆ.

Sri S. SIVAPPA.—Has at any time the Government of Mysore discussed with the Central Government authorities the disparity in making appointments in these industries and the injustice done to the Mysoreans in giving appointments and what steps were taken by them to discuss these things?

Sri K. MALLAPPA.—Sir, we have made representations; assurance has been given and that has been carried out.

Mr. SPEAKER.—Questions are over.

QUESTIONS FOR ANSWERS ON THE DAY
(but not taken up)

Large Scale Co-operative Societies working in Malavalli Taluk.

*Q.—424. Sri G. MADE GOWDA (Malavalli).—

Will the Government be pleased to state :—

the number of large-scale Co-operative Societies that are working in Malavalli Taluk?

A.—Sri RAMAKRISHNA HEGDE (Minister for Co-operation and Development).—

Two.

Loan Advanced by Government and other Agencies to the M. S. K. Mills, Gulbarga.

*Q.—563. Sri M. S. PATIL (Koppal).—

Will the Government be pleased to state :—

(a) the loan advanced by the Government and the other agencies on Government guarantees to the M. S. K. Mills, Gulbarga;

(b) the rate of interest charged for the loan ;

(c) the working capital required for efficient running of the mills;

(d) the loan that can be advanced on the book value of the fixed assets of the Mills as per balance sheet up to date ?

A.—Sri K. MALLAPPA (Minister for Industries and Commerce).—

(a) (i) Loan advanced by the Government is Rs. 38 lakhs.

(ii) Other Agencies on Government guarantee—Nil.

(b) 6 per cent

(c) About Rs. 25 lakhs.

(d) The loan has not been advanced with reference to the assets of the Mills as per its balance sheet.

Fair held every year at Ulvi Kshetra in Karwar District

*Q.—568. Sri VALI CHANNAPPA SHANKARAPPA (Sampagaon I).-

Will the Government be pleased to state:—

(a) whether they are aware that a big fair is held every year at Ulvi Kshetra in Karwar District;

(b) whether they are aware that more than a lakh of people assemble there every year ;

(c) whether they are aware that there is no road, motorable or otherwise to this religious place and that the ex-Minister of P.W.D. had promised to construct one ;

(d) whether they are aware that there is no water even for drinking in that place;

(e) whether Government had authorised the officers to collect 25 nP. from every pilgrim who visited the place during the last paurnima (i.e., 8-2-1963) and what was the amount so collected and why no receipts were giv n for the collection ?

A.—Sri M. V. KRISHNAPPA (Minister for Revenue).—

(a) Yes.

(b) No; about 25,000 people visit the fair at Ulvi.

(c) No. There are three roads to Ulvi which are motorable during fair season.

No information is available regarding any promise by the ex-Minister of P W.D.

(d) It is true that there is no permanent water supply arrangements at Ulvi. But temporary arrangements are being made at the time of the fair every year.

(e) The District Magistrate, North Kanara, had authorised the local officers under Section 43 of the Bombay Police Act, 1951 to levy pilgrim tax at 25 nP. per pilgrim above the age of 15 years and at 12 nP. per pilgrim of the age 15 years and below (infants in arms were

(SRI M. V. KRISHNAPPA)

admitted free) during the perid of the fair from 31st January, 1963 to 9th February 1963. The total collection of pilgrim tax during the period of fair held in January and February 1963 was Rs. 4,335.28. Printed receipts were issued in all cases of pilgrim tax collection.

Average yield of different crops per acre in Bijapur, Gulbarga, Raichur and Bellary Districts.

*Q—642. Sri S. RUDRAPPA (Kalgi).—

Will the Government be pleased to state :—

what is the average yield per acre in the Districts of Bijapur, Gulbarga, Raichur and Bellary ?

A.—Sri G. NARAYANA GOWDA (Minister for Agriculture).—

A statement showing the average yield of different crops per acre is given below.

STATEMENT

Showing the average yield of different crops on which the crop cutting experiments were conducted during 1961-62 in Bijapur, Gulbarga, Raichur and Bellary Districts.

Sl. No.	District	Crop	Average yield in Kgs./Hect.	Average yield in lbs./acre	Remarks
1	2	3	4	5	6
1.	Bijapur ...	Kh. Jowar ...	221.3	197.6	
		Bajra ...	157.1	140.2	
		Tur	399.4	356.6	
		Groundnut ...	187.5	167.4	Dried Nuts in shells.
		Sesamum ...	99.8	89.1	
		Rabi Jowar ...	297.7	265.8	
		Wheat ...	179.6	160.4	
		Linseed ...	397.0	353.8	
		Cotton	140.4	125.1	In terms of Kapas.
2.	Gulbarga ...	Kh Jowar ...	404.3	360.1	
		Bajra ...	296.8	265.0	
		Tur ...	359.1	320.6	

1	2	3	4	5	6
		Groundnut ...	446.0	398.2	Dried nuts in shells.
		Sesamum ...	208.8	186.4	
		Rabi Jowar ..	300 3	268.5	
		Wheat ...	197.6	176.4	
		Gram ...	221.1	197.4	
		Linseed ...	159.2	142.1	
		Cotton ...	111.4	99.5	In terms of Kapas.
3.	Raichur ...	Kh. Jowar ...	354 9	316.9	
		Bajra ...	161.5	117.4	
		Tur ...	321.5	287.1	
		Groundnut ...	444.0	395.7	
		Castor ...	282 7	252.4	Dried nuts in shells.
		Rabi Jowar ...	320.1	285.8	
		Sesamum ...	206.2	184.1	
		Wheat ...	136.3	122.1	
		Gram ...	114.9	102.6	
		Linseed ...	227.3	202.9	
		Sugarcane ...	78.5 (Metric Tons)	31.3 (Tons)	Dressed Canes
		Cotton	187.1	166.9	In terms of Kapas
4.	Bellary ...	Kh. Jowar ...	481.0	429.5	
		Bajra ...	265.5	237.1	
		Tur ...	295.7	264.0	
		Groundnut ...	603.5	538.8	Dried nuts in shells.
		Castor ...	319.8	285.5	
		Rabi Jowar ...	153.5	137.1	
		Sugarcane ...	99.9 (Metric Tons)	39.8 (Tons)	Dressed canes
		Cotton ...	246.5	220.1	In terms of Kapas

PAPERS LAID ON THE TABLE.

SRI S. NIJALINGAPPA (Chief Minister).—Sir, I beg to lay Notification No. GAD 62 GMR 63, dated 26th August 1963 [The Mysore Residences of Parliamentary Secretaries (furnishing) Rules, 1963], as required under sub-section (2) of section 8 of the Mysore Parliamentary Secretaries Allowances Act, 1963.

SRI B. D. JATTI (Minister for Finance).—Sir, I beg to lay the Appropriation Accounts of the State of Mysore for the year 1961-62, the Audit Report 1963 and the Finance Accounts for the year 1961-62, in pursuance of clause (2) of article 151 of the Constitution of India.

SRI M. V. KRISHNAPPA (Minister for Revenue).—Sir, I beg to lay Order No. RD 45 GST 61, dated 12th August 1963 (Remission of stamp duty payable), as required under sub-section (2) of section 9 of the Mysore Stamp Act, 1957.

SRI K. MALLAPPA (Minister for Commerce and Industries).—Sir, I beg to lay the annual report of the Hindustan Aircraft, Ltd., for the year 1961-62, as required under sub-section (2) of section 639 of the Companies Act, 1956 (Central Act No. I of 1956).

Madras Hindu Religious and Charitable Endowments (Mysore Amendment) Bill, 1963 as passed by the Legislature Council.

Motion to consider:

SRI M. V. KRISHNAPPA (Minister for Revenue).—Sir, I beg to move :

> "That the Madras Hindu Religious and Charitable Endowments (Mysore Amendment) Bill, 1963 as passed by the Legislative Council be taken into consideration."

MR. SPEAKER.—Motion moved :

> "That the Madras Hindu Religious and Charitable Endowments (Mysore Amendment) Bill, 1963 as passed by the Legislative Council, be taken into consideration."

Member's Representation

SRI C. J. MUCKANNAPPA (Sira).—Sir, during Budget Session 1962, I had tabled some questions and you had asked me to repeat them. I repeated them for the 1963 Budget Session. Even after repeating, they have not yet come up.

MR. SPEAKER.—I will look into it.

The Madras Hindu Religious and Charitable Endowments (Mysore Amendment) Bill, 1963.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಇದು ಬಹಳ ಚಿಕ್ಕ ತಿದ್ದುಪಡಿ ಮಸೂದೆ. ಇದು ಹಿಂದೆಯೇ ಬರಬೇಕಾಗಿತ್ತು. ಕಾರಣಾಂತರದಿಂದ ಈಗ ಬಂದಿದೆ. ಬಳ್ಳಾರಿ ಪ್ರಾಂತದಲ್ಲಿ ಅಲ್ಲಿಗೆ ಅನ್ವಯಿಸುವ

ರೀತಿ ಹಿಂದೆ The Madras Hindu Religious and Charitable Endowments Act, 1951 ಜಾರಿಯಲ್ಲಿತ್ತು. ಹಾಗಿರಬೇಕಾದರೆ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಯಾರ್ *vs.* ಮದರಾಸ್ ಕಮಿಷನರ್, ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಮೊಕದ್ದಮೆಯಲ್ಲಿ ಮದರಾಸ್ ಹೈಕೋರ್ಟ್ 76 (1) ಸೆಕ್ಷನ್ ಕಾನೂನು ಬದ್ಧವಲ್ಲವೆಂದು ರದ್ದುಪಡಿಸಿತು. ಆ ಸೆಕ್ಷನ್ ಪ್ರಕಾರ ಮುಜರಾಯಿ ದೇವಸ್ಥಾನಗಳ ಉತ್ಪತ್ತಿಯಲ್ಲಿ ಶೇಕಡ 5 ರಷ್ಟನ್ನು ಸರ್ಕಾರಕ್ಕೆ ಕೊಡಬೇಕಾಗಿತ್ತು. ಮದರಾಸಿನ ಹೈಕೋರ್ಟ್ ತೀರ್ಮಾನವಾದಮೇಲೆ, ಸುಪ್ರೀಮ್ ಕೋರ್ಟಿಗೆ ಹೋದರು. ಅಲ್ಲಿಯೂ ಮದರಾಸ್ ಹೈಕೋರ್ಟಿನ ತೀರ್ಮಾನವನ್ನೇ ಎತ್ತಿಹಿಡಿದರು. ಇದಾದ ಮೇಲೆ ಮದರಾಸು ಸರ್ಕಾರದವರು ಕಾನೂನನ್ನು ತಿದ್ದುಪಾಟು ಮಾಡಿದರು. ಅಷ್ಟರಲ್ಲಿ ಮೈಸೂರಿಗೆ ಬಳ್ಳಾರಿ ಸೇರಿತು. ಆ ತಿದ್ದುಪಡಿಯನ್ನು ಅಲ್ಲಿ ಜಾರಿಗೆ ತರಲು ಆಗಲಿಲ್ಲ. ಆದಕಾರಣ ಈಗ ನಾವು ತಿದ್ದುಪಡಿ ಮಾಡಬೇಕಾಗಿದೆ. ಈ ತಿದ್ದುಪಡಿ ಮಾಡಿ ಈ ಸರ್ಕಾರಕ್ಕೆ ಬರಬೇಕಾದ ಉತ್ಪತ್ತಿಯನ್ನು ಪಡೆಯಬೇಕೆಂದು ಮಾಡಿದ್ದೇವೆ. ಮಾನ್ಯ ಸಭೆ ಇದರ ಮೇಲೆ ಚರ್ಚೆಯಿಲ್ಲದೆ ಇದನ್ನೊಪ್ಪಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. SPEAKER.—The question is:—

"That the Madras Hindu Religious and Charitable Endowments (Mysore Amendment) Bill, 1963 as passed by the Legislative Council, be taken into consideration."

The motion was adopted.

MR. SPEAKER.—The question is :—

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

MR. SPEAKER.—The question is :—

"That clause 1, the Title and the Preamble stand part of the Bill."

The motion was adopted.

Clause 1, the title and the Preamble were added to the Bill.

Motion to pass.

SRI M. V. KRISHNAPPA.—Sir, I beg to move :—

"That the Madras Hindu Religious and Charitable Endowments (Mysore Amendment) Bill, 1963 as passed by the Legislative Council be passed."

MR. SPEAKER.—The question is :—

"That the Madras Hindu Religious and Charitable Endowments (Mysore Amendment) Bill, 1963, as passed by the Legislative Council, be passed."

The motion was adopted.

Official Resolution : *re* : Ratification of 15th amendment to the Constitution of India.

OFFICIAL RESOLUTIONS.

Sri S. NIJALINGAPPA (Chief Minister).—Sir, I beg to move:

"That this House ratifies the amendments to the Constitution of India, proposed to be made by the Constitution (15th amendment) Bill, 1963 as passed by the Houses of Parliament."

Mr. SPEAKER.—Resolution moved:

"That this House ratifies the amendments to the Constitution of India, proposed to be made by the Constitution (15th amendment) Bill, 1963 as passed by the Houses of Parliament."

†Sri S. NIJALINGAPPA.—This amendment to the Constitution is the 15th in the list. Because this amendment has been accepted by Parliament in both the Houses and has to be ratified by the State Legislatures, it has been placed before this House. There are certain amendments to the Constitution and the Bill, as placed and accepted, consists of 12 clauses and they refer to various important amendments to the Constitution which have been found necessary.

The first of them, namely clause 2, refers to the age of the Judge of the Supreme Court to be decided by such authority and in such manner as Parliament may, by law, provide. Whenever there is any difficulty about it, it will be decided by such authorities. It sometimes happens that the Supreme Court may find it difficult to find judges to act on the Bench of the Supreme Court. In spite of the provision that the retired judges of the Supreme Court may sit on the Bench and decide, it sometimes happens that they may not be available. Therefore, it is said that the retired High Court Judges may be appointed by the President in consultation with the Chief Justice for this purpose.

Clause 4 refers to the amendment which is sought to be made for increasing the age of retirement of judges of the High Court from 60 to 62 years. In fact, the Law Commission has made a recommendation that it may be raised up to 65 years. The amendment is only for 62 years and it is found to be enough for the present.

Similarly in the case of High Court Judges, their age has to be decided whenever such an occasion arises, by the President, after consultation with the Chief Justice of India.

Under clause 5 there is a provision for the payment of compensatory allowance. When a judge of a High Court is transferred from one place to another, it is found necessary to provide compensatory allowance in addition to salary and in the meanwhile Parliament will have to fix what it should be until it is done, so as not to inconvenience Judges so transferred, the President may fix this allowance order.

Clause 6 follows as a result of clause 4, namely raising the retirement age of High Court Judges to 62 years.

(ಗ್ರಂಥಾಲಯ) (13)
ಅಭ್ಯಪ್ತಿ ಕ್ರಮಾಂಕ Accession No. ....
ದಿನಾಂಕ Date......4795..................

Clause 7 with the consent of the President, the Chief Justice of a High Court may request a retired High Court Judge to sit on the Bench to decide cases.

Clause 8 refers to certain difficulties which are inherent in the jurisdiction of the Punjab High Court. In order to provide facilities for the litigants, this clause is inserted. It enables them to litigate in other High Courts.

Clause 9 refers to jurisdiction of India–extending sovereign right over certain territories outside the territorial waters.

Clause 10 refers to making the enquiries against officers to make it very speedy and expeditious.

Clause 11 refers to cases where either in the Union Public Service Commission or in the State Public Service Commission, whenever there is a vacancy, people may be asked to act on the Commission as Members thereof whenever the Chairman of either the U.P.S.C. or the P.S.C. of the State is on leave. The word 'vacancy' has not been mentioned there. It may give rise to some difficulties. Therefore, the word 'vacancies' has to be added.

These are simple matters which have been agreed to by the Parliament I think this House gives its consent and ratifies what has been already accepted by the two Houses of Parliament.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನಾನು ತಮ್ಮನ್ನು ಒಂದು ವಿವರಣೆಯನ್ನು ಕೇಳುತ್ತೇನೆ. ಅದೇನೆಂದರೆ ಈಗ ಕೌನ್ಸಿಲ್‌ನಲ್ಲಿ ಕಾನ್ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಬಿಲ್ಲಿನ ಮೇಲೆ ಚರ್ಚೆ ನಡೆಯುತ್ತಿದೆ. ಈಗ ನಮ್ಮ ಸಭೆಯಲ್ಲೂ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕನ್ಸಿಡರೇಷನ್ನಿಗೆ ಇಟ್ಟಿದ್ದಾರೆ. ಆ ಸಭೆಯಲ್ಲಿ ಏನು ಮಾಡುತ್ತಾರೆಂಬುದು ಗೊತ್ತಿಲ್ಲ. ಒಂದು ಪಕ್ಷ ಅವರು ಇದನ್ನು ಟರ್ನ್-ಡೌನ್ ಮಾಡಿ ನಾವು ಪಾಸು ಮಾಡಿದರೆ ಆಗ ಪರಿಸ್ಥಿತಿ ಏನಾಗುತ್ತದೆ ?

Mr. SPEAKER.—What is it that the Hon'ble Member is saying ?

Sri C. J. MUCKANNAPPA.—It is simultaneously discussed in both the Houses here.

Mr. SPEAKER.—There is nothing wrong in it.

Sri C. J. MUCKANNAPPA.—What is to happen if they agree and we do not agree or we agree and they do not agree ?

Mr. SPEAKER.—If this House wants to agree it will agree. This is not like the passing of a Bill.

Sri C. J. MUCKANNAPPA.—There is no specific provision under our rules on this subject. That is why I wanted a clarification as to what would happen if the subject was debated simultaneously in both Houses.

Mr. SPEAKER.—The Hon'ble Member is having in his mind some idea that the resolution has to go to the other House.

Sri C. J. MUCKANNAPPA.—What is the procedure followed in other Legislatures ? If the Chair says it can be discussed as an independent resolution, I agree. That is why I raised this issue.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈಗ ಕೆಳಮನೆ ಮತ್ತು ಮೇಲ್ಮನೆ ಎಂದು ಎರಡು ಮನೆಗಳನ್ನು ಮಾಡಿದ್ದಾರೆ. ಯಾವ ವಿಷಯವನ್ನೇ ಆಗಲೀ ಮೊದಲು ಈ ಸಭೆಯಲ್ಲಿ ಡಿಸ್‌ಕಸ್‌ಮಾಡಿ ಅನಂತರ ಮೇಲ್ಮನೆಯಲ್ಲಿ ಡಿಸ್‌ಕಸ್ ಮಾಡಬೇಕು, ಡಿಸಿಷನ್ ತೆಗೆದುಕೊಳ್ಳಬೇಕೆಂದು ಬುದ್ಧಿವಂತರು ಹೇಳಿದ್ದಾರೆ. ಒಂದು ವೇಳೆ ಈ ಮನೆಯವರು ತಪ್ಪು ರೆಕಮೆಂಡೇಷನ್ ಮಾಡಿದ್ದರೆ ಮೇಲ್ಮನೆಯವರು

(ಶ್ರೀ ವಿ. ಎಂ. ದೇವ್)

ಅದನ್ನು ಸರಿಪಡಿಸಬಹುದು. ಆ ದೃಷ್ಟಿಯಿಂದ ಅಲ್ಲಿ ಇದರ ಮೇಲೆ ಚರ್ಚೆ ನಡೆಯುತ್ತಿರುವಾಗ ಇಲ್ಲಿಯೂ ಈ ವಿಷಯವನ್ನು ಚರ್ಚೆಗೆ ತಂದಿರುವುದು ಸರಿಯಲ್ಲ. ಮೊದಲು ಇಲ್ಲಿ ಚರ್ಚೆಯಾಗಿ ಅನಂತರ ಅಲ್ಲಿಗೆ ಹೋಗಬೇಕಾಗಿತ್ತು.

Mr. SPEAKER.—There is really no conflict. There is some confusion that because a resolution is passed by this House, it requires consideration, or concurrence of the other House. Therefore this resolution is to be treated independently.

Sri C. J. MUCKANNAPPA. There is a difference between a Bill and this resolution. What about rule 141 and what is the scope of discussion on the resolution ?

Mr. SPEAKER.—It means that the Hon'ble Member confines discussion to the contents of the resolution. If he goes beyond that, I will pull him up.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಭಾರತ ಸಂವಿಧಾನದ (15ನೆಯ ತಿದ್ದುಪಡಿಯ) ವಿಧೇಯಕ, 1963ರ ಮೇಲೆ ತಂದಿರುವ ತಿದ್ದುಪಡಿ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ನಮ್ಮ ಈ ಪವಿತ್ರವಾದಂಥ ರಾಜ್ಯಾಂಗಕ್ಕೆ ಈಗ ತಂದಿರುವುದು 15ನೆಯ ತಿದ್ದುಪಡಿ. ರಾಜ್ಯಾಂಗ ಶಾಸನಗಳನ್ನು ಪದೇ ಪದೇ ತಿದ್ದುಪಡಿ ಮಾಡತಕ್ಕ ಹವ್ಯಾಸ ನಮ್ಮ ಸರ್ಕಾರಕ್ಕೆ ಏಕಪ್ರಕಾರವಾಗಿ ಬಂದಿರುವ ಹಾಗೆ ಕಾಣುತ್ತಾ ಇದೆ. ರಾಜ್ಯಾಂಗ ಎಷ್ಟು ಪವಿತ್ರವಾದುದು ಎಂಬುದನ್ನು ಮನಗಂಡು ಯಾವ ಸರ್ಕಾರವೇ ಆಗಲೀ ರಾಜ್ಯಾಂಗದ ಪ್ರಕಾರವಾಗಿ ನಡೆಯತಕ್ಕದ್ದು ನ್ಯಾಯ ಮತ್ತು ಧರ್ಮ. ಆದರೆ ಕೆಲವುವೇಳೆ ಅದಕ್ಕೆ ಅನುಗುಣವಾಗಿಯೋ ಅಥವಾ ಅದಕ್ಕೆ ವಿರೋಧವಾಗಿಯೋ ಅಥವಾ ತಮ್ಮ ಅನುಕೂಲಕ್ಕೆ ತಕ್ಕಂತೆಯೋ ಅನೇಕ ರೀತಿಯಲ್ಲಿ ಈ ಶಾಸನಗಳ ಮೇಲೆ ತಿದ್ದುಪಡಿಗಳನ್ನು ಮಾಡಿಕೊಳ್ಳುವ ಒಂದು ಪದ್ಧತಿ ಇತ್ತೀಚೆಗೆ ಬಂದಿದೆ.

Mr. SPEAKER.—What the Honourable Chief Minister means is as 'passed by them, and not as passed by us'.

Sri S. SIVAPPA.—We are as much a part and parcel of India as anybody else. The very reason why it has come here for ratification is to know our feelings. We must express our feelings about this amendment. Otherwise, there is no use discussing the resolution. Whether we are competent to modify what the Parliament has done is a different thing. ಆದರೆ ಪದೇ ಪದೇ ರಾಜ್ಯಾಂಗ ತಿದ್ದುಪಡಿಗೆ ಕೈಹಾಕುವುದು ಒಳ್ಳೆಯ ಪದ್ಧತಿಯಲ್ಲವೆಂದು ನಾನು ಬಹಳ ತೀವ್ರತೆಯಿಂದ ಹೇಳುತ್ತೇನೆ. ಯಾವುದಾದರೂ ಒಂದು ಸಂದರ್ಭದಲ್ಲಿ ಇವರಿಗೆ ಅನುಕೂಲ ಸಿಂಧು ಆಗತಕ್ಕ ಸಮಯ ಬಂದಾಗ್ಗೆ ರಾಜ್ಯಾಂಗವನ್ನು ತಿದ್ದುಪಡಿ ಮಾಡತಕ್ಕ ಹವ್ಯಾಸವನ್ನು ಆಗಾಗ್ಗೆ ಇಟ್ಟುಕೊಳ್ಳುತ್ತಾರೆ. ಇದುವರೆಗೂ 15 ತಿದ್ದುಪಡಿಗಳನ್ನು ತಂದಿರುವುದು ಸಿದ್ಧಾಂತವಾಗಿದೆ. ಈಗ ತಂದಿರುವ ತಿದ್ದುಪಡಿಯ ಮುಖ್ಯಾಂಶವೇನೆಂದರೆ ಸುಪ್ರೀಂಕೋರ್ಟು ಮತ್ತು ಹೈಕೋರ್ಟು ಜಡ್ಜುಗಳ ಸರ್ವಿಸ್ಸಿನ ವಯೋಪರಿಮಿತಿಯನ್ನು ಹೆಚ್ಚು ಮಾಡತಕ್ಕ ವಿಷಯಕ್ಕೆ ಸಂಬಂಧಪಟ್ಟುದಾಗಿದೆ. ನಮ್ಮ ದೇಶ ಉಷ್ಣದೇಶ. ಆದ್ದರಿಂದ ಆಯುಷ್ಯ ಪರಿಮಿತಿಯೇ ಸ್ವಲ್ಪ ಕಡಮೆ. ಇಂಗ್ಲೆಂಡ್ ಮುಂತಾದ ಪ್ರದೇಶಗಳಲ್ಲಾದರೆ ಅಂತಹವರು ಸರ್ವಿಸ್ಸಿನಲ್ಲಿ 65 ನೆಯ ವಯಸ್ಸಿನವರೆಗೂ ಇರಬಹುದು. ಆದರೆ ಭಾರತ ದೇಶದಲ್ಲಿಯಾದರೋ ವಯೋಮಿತಿಗೆ ಸರಾಸರಿ ವಯಸ್ಸಿನ ಪ್ರಮಾಣ ಬಹಳ ಕಡಮೆಯಾಗಿರುತ್ತದೆ. ಕೇವಲ ಅರವತ್ತಕ್ಕೇ ಅರುಳೋ ಮರುಳೋ ಎಂಬ ಒಂದು ಗಾದೆ ಬೇರೆ ಇದೆ. ಅಂದಮೇಲೆ ಈಗಿರತಕ್ಕ 60 ವರ್ಷ ಸರ್ವಿಸ್ ವಯೋಮಿತಿಯನ್ನು 62ಕ್ಕೆ ಏರಿಸಬೇಕೆಂದು ತಂದಿರುವುದು ಅಷ್ಟು ಸೂಕ್ತವಾದುದಲ್ಲ. ಏಕೆಂದರೆ ಈ ದೇಶದಲ್ಲಿ ಕೇವಲ 60 ವರ್ಷಗಳು ತುಂಬಿದರೆ ಸಾಕು ಆ ಮನುಷ್ಯ ತನ್ನ ಶಕ್ತಿಯನ್ನು ಸಾಕಷ್ಟು ರೂಪದಲ್ಲಿ ಖರ್ಚುಮಾಡಿರುತ್ತಾನೆ.

Mr. SPEAKER.—Not all people.

Sri S. SIVAPPA.—There may be exceptions like our Hon'ble Speaker. Even under the present provisions those exceptions can be found.

ಲೋಕಾಭಿಮಾನವಾಗಿ ಇದು ಖಂಡಿತ ಸರಿಯಲ್ಲ. ತಾವು ಹೇಳಿದಹಾಗೆ ಮುಖ್ಯ ಮಂತ್ರಿಗಳು ಮತ್ತು ತಾವು ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿರುತ್ತೀರಿ. ಮಂತ್ರಿಗಳಾಗ ಬೇಕಾದರೆ ಅದಕ್ಕೇನೂ ವಯೋಮಿತಿ ಇಲ್ಲವೆಂದು ನನ್ನಾಗನ್ನಿಸುತ್ತದೆ. ಹಾಗಯೇ ನ್ಯಾಯಾಧೀಶರು ರಿಟೈರ್ ಆದಮೇಲೆ ರಾಜಕೀಯದಲ್ಲಿ ಬರಬಹುದು. ಅವರಿಗೇನೂ ತೊಂದರೆಯಿಲ್ಲ. ಆದರೆ ನ್ಯಾಯಸ್ಥಾನದಲ್ಲಿರತಕ್ಕ ವ್ಯಕ್ತಿಗೆ ಅವನ ಮನಸ್ಸಿನ ಚಲನ ಬಹಳ ಆರೋಗ್ಯಕರವಾಗಿರಬೇಕು. ಆದ್ದರಿಂದ ನಮ್ಮ ಭಾರತ ದೇಶದಲ್ಲಿ ಇಂತಹವರಿಗೆ 60 ವರ್ಷಗಳ ಸರ್ವಿಸ್ ವಯಸ್ಸಿನ ಪರಿಮಿತಿಯೇ ಸಾಕು ಎಂದು ನಮ್ಮ ಅಭಿಪ್ರಾಯ. ಇದನ್ನು ಈಗ ಹೆಚ್ಚು ಮಾಡುವ ರೀತಿ ನೀತಿ ಅಷ್ಟು ಸಾಧು ವಾದುದಲ್ಲ. ಈ ಭಾರತ ದೇಶದಲ್ಲಿ ಅನೇಕರು ಇನ್ನೂ ನ್ಯಾಯಾಧೀಶರು ಆಗತಕ್ಕ ಅವಕಾಶ ವಿರುವುದರಿಂದ ಈ ಹೈಕೋರ್ಟುಗಳಲ್ಲಿರುವ ನ್ಯಾಯಾಧೀಶರುಗಳು 60 ರಿಂದ 62ರ ವರೆಗೂ ಅಷ್ಟು ವಯಸ್ಸಿನವರೆಗೂ ಸರ್ವಿಸ್ಸಿನಲ್ಲಿಯೇ ಕುಳಿತರೆ ಅವರ ಕೆಳಗಿನ ನೌಕರರಿಗೆ ಒದಗುವ ಸದವಕಾಶ ವನ್ನು ತಪ್ಪಿಸಿದ ಹಾಗಾಗುತ್ತದೆ. ಅಂತಹ ನೌಕರಿಗಳೂ ಸಹ ಇತ್ತೀಚೆಗೆ ಬಹಳ ಕಡಮೆಯಾಗಿವೆ, ಸುಪ್ರೀಂ ಕೋರ್ಟು ನ್ಯಾಯಾಧೀಶರ ಹುದ್ದೆಗಳು ಬಹಳ ಅಲ್ಪ. ಅಂತಹ ಕಡೆಗಳಲ್ಲಿ ವಯೋ ಮಿತಿಯನ್ನು ಜಾಸ್ತಿಮಾಡಿದರೆ ನ್ಯಾಯವಲ್ಲ. ಆದ್ದರಿಂದ ಈ ಪ್ರಾವಿಷನ್ ಏನಿದೆ ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಇನ್ನೊಂದು ವಿಷಯ. ಬಹಳ ಮುಖ್ಯವಾಗಿರತಕ್ಕ ಈ ತಿದ್ದುಪಡಿ ಮಸೂದೆಯ 311ನೆಯ ಸೆಕ್ಷನ್ನಿನ ತಿದ್ದುಪಡಿ ಮಾಡುವುದು ಇದೆ. ಅದರಂತೆ ಸಾಕಷ್ಟು ಅಧಿಕಾರವನ್ನು ಈ ಅಧಿಕಾರಿಗಳಿಗೆ ಕೊಡುವುದಾಗಿದೆ. ಒಂದು ವೇಳೆ ಅವರು ತಪ್ಪುಮಾಡಿದರೆ ಡಿಸ್‌ಮಿಸ್ ಮಾಡುವುದು, ರಕ್ಷಣೆ ಕೊಡುವುದು ಎಲ್ಲೂ ಇದರಲ್ಲಿ ಅಡಕವಾಗಿಲ್ಲ. ಇಂತಹ ಕಾನೂನುಗಳನ್ನು ರಚನೆಮಾಡುವಾಗ ರಾಜ್ಯಾಂಗದಲ್ಲಿ ಆಗಿದಂಥ ಕಾನೂನಿನ ಪರಿಮಿತಿಯನ್ನು ಇವರು ಇನ್ನೂ ವಿಸ್ತರಣೆಮಾಡಿ ಏತಕ್ಕೋಸ್ಕರ ಈಗ ಈ ತಿದ್ದುಪಡಿಯನ್ನು ತಂದರೋ ನನಗಂತೂ ಅರ್ಥವಾಗಲಿಲ್ಲ. ಈಗ ನಮ್ಮ ದೇಶದಲ್ಲಿರತಕ್ಕ ಕಾನೂನುಗಳ ಒಂದು ಒಳಚೌಕಟ್ಟಿನಲ್ಲಿ ಎಂತಹ ಕಾನೂನನ್ನಾದರೂ ಜಾರಿಗೆ ತರಬಹುದು. ಶಿಕ್ಷೆಕೊಡಬಹುದು. ಇವತ್ತಿನದಿವಸ ಅಧಿಕಾರ ಇದೆಯೆಂದು ಹೇಳುವಾಗ ಈಗಿರುವ ಕಾನೂನುಗಳ ರೀತ್ಯ ಆ ಅಧಿಕಾರವನ್ನು ಚಲಾವಣೆಮಾಡತಕ್ಕ ಶಕ್ತಿ ಈ ಸರ್ಕಾರಕ್ಕೆ ಇಲ್ಲವೇ? ರಾಜ್ಯಾಂಗದ ತಿದ್ದುಪಡಿಯ ಮುಖಾಂತರ ಅವರಿಗೆ ಈ ಒಂದು ಹೆಚ್ಚಿನ ಅಧಿಕಾರವನ್ನು ಕೊಟ್ಟು ಏತಕ್ಕೋಸ್ಕರ ಇದರಲ್ಲಿ ಈಗ ತಿದ್ದುಪಡಿ ಮಾಡಬೇಕೋ ನನಗರ್ಥವಾಗಲಿಲ್ಲ. ನಮ್ಮ ಸರ್ಕಾರ ದವರೇ ಆ ವಿಚಾರದ ಬಗ್ಗೆ ಮೇಲ್ವಿಚಾರಣೆ ಮಾಡುವುದು ಸೂಕ್ತವಲ್ಲವೇ ? ಈ ರೀತಿ ರಾಜ್ಯಾಂಗ ಮುಖೇನ ಅವರಿಗೆ ಹೆಚ್ಚಿನ ಅಧಿಕಾರಕೊಡುವುದು ಖಂಡಿತವಾಗಿ ಸಾಧುವಲ್ಲ. ಈ ರಾಜ್ಯಾಂಗ ತಿದ್ದುಪಡಿಯನ್ನು ಹೇಗೆ ಮಾಡಬೇಕೆಂದರೆ ಈಗಿರತಕ್ಕ ರಾಜ್ಯಾಂಗದಿಂದೇನಾದರೂ ಧಕ್ಕೆ ಬಂದು ಜನತೆಗೆ ಅಪಾರವಾಗಿ ಅನ್ಯಾಯ ಅನೀತಿ ತಲೆದೋರಿದರೆ ಆಗ ರಾಜ್ಯಾಂಗದ ತಿದ್ದುಪಡಿಗೆ ನಾವು ಕೈಹಾಕಬೇಕು. ಈ ರೀತಿಯಾಗಿ ಸಣ್ಣ ಪುಟ್ಟ ಕೆಲಸಕಾರ್ಯಗಳಿಗೋಸ್ಕರ ರಾಜ್ಯಾಂಗ ತಿದ್ದುಪಡಿ ಮಾಡುವುದು ಖಂಡಿತವಾಗಿ ಸರಿಯಲ್ಲ. ರಾಜ್ಯಾಂಗಕ್ಕೆ ಏನು ಪವಿತ್ರವಾದಂಥ ಮರ್ಯಾದೆಯನ್ನು ಕೊಡಬೇಕೋ ಅದನ್ನು ಕೊಟ್ಟಹಾಗೆ ಆಗುವುದಿಲ್ಲ. ರಾಜ್ಯಾಂಗ ತಿದ್ದುಪಡಿಯನ್ನು ಆಗಿನ ಕಾಲದ ಹಾಗೆ ಬಹಳ ಸಲೀಸಾಗಿ ತಿದ್ದುಪಡಿ ಮಾಡುವ ಒಂದು ಪದ್ಧತಿ ಇತ್ತೀಚೆಗೆ ಬಂದಿದೆ. ಆದರೆ ಇವತ್ತು ಆಡಳಿತ ಪಕ್ಷದವರಿಗೆ ಭಯವಿರಬಹುದು. ರಾಜ್ಯಾಂಗದಲ್ಲಿ ನಮೂದಿಸಿದೆಯೆಂದು ಅದರಲ್ಲೂ ತಮ್ಮ ಪಕ್ಷದವರಿಗೆ ಮೆಜಾರಿಟಿ ಇದೆಯೆಂದು ಏನುಬೇಕಾದರೂ, ಹೇಗೆಬೇಕಾದರೂ ರಾಜ್ಯಾಂಗವನ್ನು ತಿದ್ದುಪಡಿ ಅಥವಾ ಬದಲಾವಣೆ ಮಾಡಬಹುದು ಎಂಬ ಒಂದು ಮನೋಭಾವ ಇತ್ತೀಚೆಗೆ ಇವರಿಗೆ ವಿಶೇಷವಾಗಿ ಬೆಳೆದುಬಂದಿದೆ. ಈಗಾಗಲೇ 15 ಸಾರಿ ಇದರಲ್ಲಿ ತಿದ್ದುಪಡಿ ಮಾಡಿದ್ದಾರೆ. ಏನು ಪವಿತ್ರವಾದ ಉದ್ದೇಶದಿಂದ ಇದನ್ನು ಮಾಡಿದರೋ ಆ ಪವಿತ್ರತೆಯನ್ನು ಹೋಗಲಾಡಿಸುವುದಕ್ಕೆ ಆಗಲೇ ಇವರು ಕೈಹಾಕಿದ್ದಾರೆ. ಈ ಒಂದು ಹವ್ಯಾಸದಿಂದ ಪವಿತ್ರತೆ ಎಷ್ಟು ರಾಜ್ಯಾಂಗಕ್ಕೆ ಸಲ್ಲಬೇಕೋ ಅಷ್ಟೂ ಈಗ ಸಡಿಲವಾಗಿದೆ. ಈ ದೃಷ್ಟಿಯಿಂದ ರಾಜ್ಯಾಂಗಕ್ಕೆ ತಿದ್ದುಪಡಿಗಳನ್ನು ಮಾಡುವಾಗ ಭಾರತ ಸರ್ಕಾರದವರು ಎಚ್ಚರಿಕೆಯಿಂದ ಪರಿಗಣಿಸಬೇಕಾಗಿತ್ತು. ಈ ತರಹ ತಿದ್ದುಪಡಿಗಳನ್ನು ಮಾಡು ವುದರಿಂದ ಆಡಳಿತ ಪಕ್ಷದವರು ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಂಡು ಬೇಡವಾದವರಿಗೆ ನಾನಾರೀತಿಯಲ್ಲಿ ಅನನುಕೂಲಗಳನ್ನುಂಟುಮಾಡಿಕೊಂಡು ಹೋಗತಕ್ಕ ಒಂದು ಹವ್ಯಾಸಕ್ಕೆ ಕೈಹಾಕಿ ತಮ್ಮ ಹಕ್ಕು ಭಾದ್ಯತೆಗಳನ್ನು ಸಾಧಕಪಡಿಸಿಕೊಳ್ಳುವುದಕ್ಕೆ ಮತ್ತು ಸಾರ್ಥಕಪಡಿಸಿ

(SRI S. SIVAPPA)

ಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಇವರು ಈ ರಾಜ್ಯಾಂಗ ತಿದ್ದುಪಡಿಗೆ ಕೈಹಾಕುವುದು ಬಹಳ ಶೋಚನೀಯ ಮತ್ತು ಒಂದು ಕೆಟ್ಟ ಪರಿಣಾಮವನ್ನುಂಟು ಮಾಡುವುದಾಗಿದೆ.

ಇಷ್ಟನ್ನು ಹೇಳಿ ರಾಜ್ಯಾಂಗದ ಈ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಮತ್ತು ತೀವ್ರವಾಗಿ ವಿರೋಧಿಸುತ್ತೇನೆ.

Sri G. V. GOWDA (Palya).—Mr. Speaker, Sir, both the Houses of Parliament have adopted the Constitution (15th Amendment) Bill and the Honourable Chief Minister has moved a resolution for getting the ratification of this House. As we are all aware, an independent judiciary is essential for the proper functioning of democracy. Nothing should be done which is in any way likely to impair in the least the independence of the judiciary and nothing should be done, in my opinion, to alter or vary the terms and conditions of a Judge, whether during his tenure of office or afterwards.

CLAUSE 2 READS AS :

> "the age of a Judge of the Supreme Court shall be determined by such Authority and in such manner as Parliament, may, by law, provide."

CLAUSE 4 (3) READS AS :

> "If a question arises as to the age of a Judge of a High Court the question shall be decided by the President after Consultation with the Chief Justice of India and the decision of the President shall be final."

So, two modes of procedure for the determination of the age of the Supreme Court Judge and High Court Judge are envisaged in the amendment. I realy do not understand why there must be a distinction in the determination of the age of a Supreme Court Judge and a High Court Judge. Under clause (2), it says "...Parliament may by law provide". That is so far as the Supreme Court Judge is concerned. So far as the High Court Judge is concerned, it is the President of India who will decide it in consultation with the Chief Justice of India. At the time of their appointment itself their age would have been determined and I do not understand how a dispute would arise later on. We are all aware that conditions like physical fitness, required qualifications and age are all to be satisfied at the time of appointment itself. When that is done, why should there be any need at a later stage to raise this point either by the Judge or the State ? It is also not proper because it will not be in keeping with the dignity of the office of the High Court or Supreme Court Judge. All this could have been gone through while making the appointment. For the appointments already made, if there is some such dispute, they could have been left to take their own course.

2-00 P.M.

Mr. SPEAKER.—How ? Without a procedure ?

Sri G. V. GOWDA.—The President should determine the age while appointing them. If that is done, how can any dispute arise at a later stage ?

Mr. SPEAKER.—Supposing there is a mistkae committed unwittingly......

Sri G. V. GOWDA.—How can it happen, Sir ? He would not have raised this point while he passed his B.A. Degree or his Law Examination or at the time of appointment. That being so, is it proper for any judge to say that his age was not mentioned correctly at the Degree stage or the appointment stage ?

Sri S. NIJALINGAPPA.—It may some time happen that somebody else may raise this question.

Sri G. V. GOWDA.—Likewise, it is not open to the State to dispute the age at a later stage. The President, while making the appointment, must determine the age and it must be final and if any such cases are already there, they should have been left to take their own course.

Mr. SPEAKER.—The Hon'ble Member wants that once an appointment is made, nobody should correct it even if there is a mistake.

Sri G. V. GOWDA.—How can such mistakes creep in when such high appointments are made, Sir ? Even the determination of age of a Supreme Court Judge by Parliament and age of a High Court Judge by the President in consultation with the Chief Judge of India, is also not relevant. Therefore, I submit that amendments sought to be moved to article 124 and 217 (*a*) are not quite relevant.

Clause (5) under article 222 reads:

> "When a *Judge has been* or is so transferred, he shall, during the period he serves, after the commencement *of the Constitution (Fifteenth Amendment) Act*, 1963, as a Judge of the other High Court, be entitled to receive in addition to his salary such compensatory allowance as may be determined by Parliament by law and, until so determined, such compensatory allowance as the President may by order fix".

Sir, article 222 empowers the President to effect transfers of the High Court Judges from one State to another State. The additional clause makes provision for the payment of allowance as would be determined by Parliament. Sir, in my opinion, no compensatory allowance need be paid to any Judge who is transferred for the simple reason that it creates differentiation. Suppose a Judge of Mysore is not transferred at all ; he does not get any allowance. But a Judge, though transferred to another State in the same country, that is, India, he gets the compensatory allowance. After all, they are citizens of India. So, discrimination is sought to be created. It is not proper before the eye of law also. Therefore, I submit, that it does not stand to reason.

(SRI G. V. GOWDA)

So far as increase in the retirement age from 60 to 62 is concerned, in fact, the Law Commission has recommended that it must be raised to 65. As you are aware, Sir, the service conditions are the same as regards the appointement of Judges to the High Courts or the Supreme Court. Persons who are appointed to High Courts can be appointed to the Supreme Court also. Such being the case, when the age of the Supreme Court Judge is made 65, there appears to be no reason why the age of a High Court Judge should be only 62. Either it should have been kept at 60 or made it equal to the age of the Supreme Court Judge, *i.e.*, 65 yeaas, as the Law Commission has recommended. So far as Civil Servants are concerned, the Government of India have enhanced the retiring age of their civil servants by three years. In some other States also they have enhanced it by 3 years. So far as our State is concerned, the Government have not taken a definite stand on this matter. Government want to give extensions to service personnel at their whims and fancies or retire a person if they do not like him at his 55th year. The time has come when the Government should take a definite stand on this issue. Otherwise complications would result leading to abuse of power.

MR. SPEAKER.—The Hon'ble Member may touch the point on another occasion. This concerns the retirement age of judges.

SRI G. V. GOWDA.—Sir, there is no difference in the discharge of duties by judges of the Supreme Court and those of the High Court. The age could have been raised even to 65 years in the case of High Court judges. I am, however, opposed to the appointment of *ad hoc* judges. Already Article 224 provides for such appointment by the President on the recommendation of the Chief Justice of the Supreme Court.

I welcome the clause which permits filing a writ at the High Court under whose jurisdiction a cause of action arose irrespective of whether the Government has an office there or not. This is a welcome change.

The amendments to Article 311 are really disappointing. Under the present Article and under the interpretations given by the judiciary, the Government servants have certain guarantees. Before the executive can reduce or dismiss a civil servant they have to scrupulously follow certain procedures. They must first indicate the charges, hear the individual and then show cause way he should not be punished. Now the second opportunity of showing cause why such and such punishment should not be inflicted is sought to be eliminated. The appointing officer may conduct some kind of an enquiry and straightaway proceed to punish individual, who would have no chance to prove that the punishment sought to be imposed on him, is too heavy and not commensurate with the nature of his delinquency. Secondly, the enquiry officer can dispense with the enquiry if he so considers. He should only record it in writing. Such a procedure is dangerous and arbitrary. The affected person cannot prove his innocence. The essence of Article 311 is thus sought to be taken away and this will make the Government servants tend to cater to the pleasure of the executive. They cannot perform

their duties independently and their aim would be to keep themselves in the good books of the superior officers. Otherwise they are liable to be punished even without an enquiry. This is certainly not in the interest of the smooth functioning of the administration and is against all canons of justice and fairplay.

Under clause 12, even vacations are to be decided by the executive. The declaration of vacations should be left to the discretion of the Chief Justice or the Judges of the Supreme Court. Though this may be a trifle matter I feel the executive should keep out of the picture and should not dominate judiciary. The judges would begin looking up to the executive to carry favour and they cannot function in an atmosphere of detachment Therefore I oppose this clause also.

† SRI GANJI VEERAPPA (Harihar).--I have only a few observations to make with regard to the Constitutional Amendment Bill. Under Article 128, in the proposed amendment, provision is sought to be made enabling the President to make an appointment of a retired High Court Judge to the Supreme Court. The Hon'ble Chief Minister was pleased to say that due to paucity of competent judges to be appointed to the Supreme Court, this provision was necessary. I submit that this is not a healthy provision. I do not mind increase in the age of retirement of High Court Judges—it may be raised even to 63, but appointment of retired Judges of the High Court to the Supreme Court is undesirable. Sir, I think it is not proper to put a man in the Supreme Court who has lost touch with the adjudication of cases in High Courts for a few years. It is not a very healthy amendment. So far as amendment of article 128 is concerned, it is not correct. With regard to the age, as I already submitted, I have no objection even if it is 63 or 64 because longevity nowadays in our country is more. People live long and we see men of even 70 years. In fact, our revered Prime Minister is 73 and we want him for several years more. Even if the age of retirement of the Judges in the High Court is extended to 65 years, perhaps it may not matter. So, instead of putting the other way, I submit that the age of retirement may be extended to 63 or 64 and the provision with regard to the appointment of retired High Court Judges may be avoided.

With regard to the other provision, *viz.*, article 311, perhaps this amendment has been made after getting wisdom from a number of interpretations given by the High Courts and Supreme Court under article 311. In this case, the power given under the former article 311 was many a time used arbitrarily. So several government officers thought of taking the matter to the High Courts and the Supreme Court. In this case, law of cassius has been there on the question of administration of justice and in the matter of punishment whether the principles have been followed or not. So, instead of the words that were used in article 311, they have carefully avoided them and inserted the words "giving reasonable opportunity for showing cause. It would have been better if only provision for show-cause notice giving a reasonable opportunity had been made. No provision for enquiry was made. This enquiry before taking any action is absolutely necessary because enquiry

(SRI GANJI VEERAPPA)

contemplates giving an opportunity and even to take a defence evidence, if any, and taking a decision on full particulars. So, I think, in the light of the interpretations given by the several High Courts and the Supreme Court on this point, the Parliament has brought this change and has introduced the word 'enquiry' in all sub-clauses. It is a very healthy thing and we welcome that change.

I think there is not much to speak on the other provisions. So, I welcome this amendment with these observations.

[SMT. BASAVARAJESWARI (CHAIRMAN) in the Chair.]

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, ರಾಜ್ಯಾಂಕ್ಕೆ ಈ 15ನೇ ಮತ್ತು 16ನೇ ತಿದ್ದುಪಡಿ ಸೂಚನೆ ಮಾಡಿ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ ಒಪ್ಪಿಕೊಂಡಮೇಲೆ ಈಗ ರಾಜ್ಯ ವಿಧಾನ ಮಂಡಲವು ಒಪ್ಪಿಕೊಳ್ಳಬೇಕು ಎಂದು ಕಳಿಸಿದ್ದಾರೆ. ರಾಜ್ಯಾಂಗಕ್ಕೆ ಯಾವಾಗ ತಿದ್ದುಪಡಿ ಮಾಡುತ್ತಾರೆಯೋ ಅಗ್ಗೆ ರಾಜ್ಯಾಂಗದ ಮೇಲೆ ಮಾತನಾಡಲು ಈ ಸಭೆಗೆ ಹಕ್ಕು ಬರುತ್ತದೆ. ಇಂಥ ಸಂದರ್ಭ ಈಗ ಒದಗಿರುವುದರಿಂದ ಈ ಸಭೆ ಏನು ಅಭಿಪ್ರಾಯ ಕೊಡುತ್ತದೆ ಎನ್ನುವುದನ್ನು ಲೋಕ ಸಭೆಗೆ ತಿಳಿದುಕೊಳ್ಳಲು ಮಾರ್ಗವಾಗುತ್ತದೆ. 15 ಮತ್ತು 16ನೆಯ ತಿದ್ದುಪಡಿಗಳನ್ನು ಏತಕ್ಕೋಸ್ಕರ ಮಾಡಿದೆ ಎಂಬುದನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿದ್ದಾರೆ. ಇದರಿಂದ ಅನುಕೂಲವಾಗುತ್ತದೆ, ಈ ಸಭೆ ಒಪ್ಪಿಕೊಳ್ಳಬೇಕೆಂದು ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಇದರ ಹಿಂದೆ ಏನು ಇದೆ ಎಂಬುದನ್ನು ನಾವು ಇಂದು ಅರ್ಥಮಾಡಿಕೊಳ್ಳಬೇಕು. ಮೈಸೂರಿನಲ್ಲಿ ರಾಜ್ಯಾಂಗ ಬರುವುದಕ್ಕೆ ಮುಂಚೆ ವಯೋಮಿತಿ 55ವರ್ಷ ಇದ್ದಿತು. ನ್ಯಾಯಾಧೀಶರ ವಯಸ್ಸು 60 ವರ್ಷಕ್ಕೆ ಹೋಯಿತು. ಸಿವಿಲ್ ಸರ್ವಿಸಿನಲ್ಲಿ 55ರಿಂದ 58ವರ್ಷ ಮಾಡಬೇಕೋ ಬೇಡವೋ ಯೋಚನೆಯಲ್ಲಿದೆ. ಕೆಲವು ರಾಜ್ಯಗಳು ಇದನ್ನು ಒಪ್ಪಿಕೊಂಡಿವೆ. ಇದನ್ನು ಸ್ವಲ್ಪ ಯೋಚನೆ ಮಾಡೋಣ. ನಿಜವಾಗಿಯೂ ನ್ಯಾಯಾಧೀಶರ ವಯಸ್ಸು 60ರಿಂದ 70 ವರ್ಷದವರೆಗೆ ಇಟ್ಟರೂ ಪೊಲಿಟಿಕಲ್ ಸ್ಟಿಗ್ಮಾ ಇರುವವರೆಗೆ, ಸರಿಯಾದ ನ್ಯಾಯ ದೊರೆಯಲಾರದು. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಟ್ರಾನ್ಸ್‌ಫರ್ ಮಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಬಹಳ ಕಾಲ ಒಂದು ಕಡೆ ಇದ್ದರೆ ರಾಜಕೀಯದಲ್ಲಿ ಕೈಹಾಕುತ್ತಾರೆ. ಆದ್ದರಿಂದ ಇನ್ನೊಂದು ರಾಜ್ಯಕ್ಕೆ ಹೋಗುವುದು ಒಳ್ಳೆಯದು. ಆದ್ದರಿಂದಲೇ ಐ. ಎ. ಎಸ್ ಅವರನ್ನು ಒಂದು ಡಿಪಾರ್ಟ್‌ಮೆಂಟಿನಿಂದ ಇನ್ನೊಂದಕ್ಕೆ ಟ್ರಾನ್ಸ್‌ಫರ್ ಮಾಡುತ್ತಾರೆ. ಅಂದರೆ ಆಡಳಿತೆಯಲ್ಲಿ ಕೈಹಾಕುವುದು ಕಡಿಮೆಯಾಗುತ್ತದೆ. ಈಗ ಈ ವಯಸ್ಸಿನ ಮಿತಿಯನ್ನು ಹೆಚ್ಚಿಸುವುದಕ್ಕೆ ಕಾರಣವೇನು? ಯಾರಿಗೂ ತಿಳಿಯದೇ ಇರತಕ್ಕ ಗೌಪ್ಯ ವಿಚಾರವೇ? ಸರಿಯಾದ ಜನ ಸಿಕ್ಕುವುದಿಲ್ಲ. ಆದ್ದರಿಂದ ವಯೋಮಿತಿ ಏರಿಸಬೇಕಾಗಿದೆ ಎಂದು ಹೇಳಿದರು. ಹೈಕೋರ್ಟಿಗಾಗಲಿ, ಸುಪ್ರೀಂ ಕೋರ್ಟಿಗಾಗಲಿ ನ್ಯಾಯ ಶಾಸ್ತ್ರ ಓದಿದ ಪಂಡಿತರು ಸಿಕ್ಕುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಅಂಥ ಜನ ಸಿಕ್ಕುತ್ತಾರೆ. ಆದ್ದರಿಂದ ಮುಖ್ಯಮಂತ್ರಿಗಳು ಹೇಳುವುದನ್ನು ಒಪ್ಪಿಕೊಳ್ಳುವುದು ಕಷ್ಟ. ಅನುಭವಸ್ಥರೂ ನಮ್ಮ ರಾಜ್ಯದಲ್ಲಿದ್ದಾರೆ. ಅವರಿಗೆ ಬೇಕಾದವರು ಸಿಕ್ಕುವುದಿಲ್ಲವೋ ಏನೋ? ಬುದ್ಧಿವಂತರಾದವರು ನ್ಯಾಯ ಶಾಸ್ತ್ರ ಪರಿಣತರು ಅನುಭವ ಇದ್ದವರು ಸಿಕ್ಕುತ್ತಾರೆ. ನಮ್ಮ ರಾಜ್ಯದಲ್ಲಿ ಹಿಂದಕ್ಕೆ ಎಷ್ಟೋ ಜನ ಜಡ್ಜುಗಳು ಅಂಥವರು ಕೆಲಸ ಮಾಡಿದ್ದಾರೆ 60ರಿಂದ 62ವರ್ಷ ವಯಸ್ಸು ಏಕೆ ಮಾಡಬೇಕೆಂದು ಕೇಂದ್ರ ಸರಕಾರವನ್ನೂ ರಾಜ್ಯ ಸರಕಾರವನ್ನೂ ಕೇಳುತ್ತೇನೆ.

2-30 P.M.

ಸ್ವಾಮಿ, ಈ ಹೈಕೋರ್ಟು ಜಡ್ಜಿಗಳ ರಿಟೈರ್‌ಮೆಂಟ್ ವಯಸ್ಸನ್ನು 60 ಇರುವುದನ್ನು 62 ಮಾಡಬೇಕೆಂದು ಏತಕ್ಕೋಸ್ಕರ ಹೊರಟಿದ್ದೀರ? ಹೀಗೆ ಮಾಡಿದರೆ ಚಿಕ್ಕ ವಯಸ್ಸಿನವರೆಲ್ಲಾ ನಿಷ್ಠೆಯಿಂದ, ತೃಪ್ತಿಯಿಂದ ಕೆಲಸ ಮಾಡುವುದಕ್ಕಾಗುತ್ತದೆಯೇ? ಅವರು ನಾಳೆ ಬೆಳಿಗ್ಗೆ ತಮಗೆ ನಿವೃತ್ತರಾದವರ ಜಾಗದಲ್ಲಿ ಪ್ರಮೋಷನ್ ಸಿಕ್ಕುತ್ತದೆಂದು ಕಾದುಕೊಂಡಿರುತ್ತಾರೆ. ಈಗ ಈ ನಿಮ್ಮ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟಿನಿಂದ ಏನಾಗುತ್ತದೆಂದರೆ, ಒಬ್ಬ ಡಿಸ್ಟ್ರಿಕ್ಟ್ ಜಡ್ಜ್ ಇನ್ನೊಂದು ವರ್ಷದಲ್ಲಿ ಹೈಕೋರ್ಟ್ ಜಡ್ಜ್ ಆಗುತ್ತೇನೆಂದು ನಂಬಿಕೆ ಇಟ್ಟುಕೊಂಡಿದ್ದರೆ, ಆತನಿಗೆ ಪ್ರಮೋಷನ್

ಸಿಕ್ಕುವುದಕ್ಕೆ ಸಾಧ್ಯವಾಗುವುದಿಲ್ಲ; ಅದನ್ನು ಬ್ಲಾಕ್ ಮಾಡುತ್ತೀರಿ. ಈ ಅಮೆಂಡ್‌ಮೆಂಟನ್ನು ರಾಟಿಫೈ ಮಾಡಿ ರಿಟೈರ್‌ಮೆಂಟ್ ವಯಸ್ಸನ್ನು 62 ರವರೆಗೆ ಏರಿಸಿದರೆ, ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆಯನ್ನು ಕೊಟ್ಟುಬಿಟ್ಟರೆ, ಅಧ್ಯಕ್ಷರು ಸಹಿ ಹಾಕಿಬಿಟ್ಟರೆ, ಯಾವ ಒಬ್ಬ ಸದ್ಯದಲ್ಲೇ ರಿಟೈರ್ ಆಗುವ ಡಿಸ್ಟ್ರಿಕ್ಟ್ ಜಡ್ಜ್‌ಗಳು ಹೈಕೋರ್ಟ್ ಜಡ್ಜ್ ಪ್ರಮೋಷನ್ ನಿರೀಕ್ಷಣೆ ಮಾಡುತ್ತಿರುತ್ತಾನೆಯೋ, ಅವರಿಗೆ ನಿರಾಸೆಯಾಗುತ್ತದೆ. ಅವರುಗಳು ಈಗ ಇರುವ ಜಾಗದಲ್ಲಿಯೇ ಕೆಲಸ ಮಾಡಿಕೊಂಡು ನಿಂತುಹೋಗುತ್ತಾರೆ. ನಮ್ಮ ರಾಜ್ಯದಲ್ಲಿ 10–15 ಹೈಕೋರ್ಟ್ ನ್ಯಾಯಾಧೀಶರ ಸ್ಥಾನಗಳಿರಬಹುದು, ಇಡೀ ಭಾರತಭೂಮಿಯಲ್ಲಿ 150–250 ಸ್ಥಾನಗಳಿರಬಹುದು. ಅದರಲ್ಲಿ ಡಿಸ್ಟ್ರಿಕ್ಟ್ ಜಡ್ಜ್‌ಗಳ ಪ್ರಮೋಷನ್ ರೇಶ್ಯೋ ಪ್ರಕಾರ ಆಗಬೇಕು. ಇಷ್ಟು ಇತಿಮಿತಿಗಳಲ್ಲಿ, ಅವರ ಪ್ರಮೋಷನ್ನಿಗೆ ಇನ್ನೂ ಅಡ್ಡಿ ತಂದರೆ, ಅವರಲ್ಲಿ ಅಸಮಾಧಾನ ಉತ್ಪತ್ತಿ ಮಾಡಿದಂತಾಗುವುದಿಲ್ಲವೇ ? ಹೀಗೆ ಮಾಡಿದರೆ ಜುಡಿಶಿಯಾರಿಯವರು ವೇಗದಿಂದ, ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆಯೇ ? ಈ ಅಮೆಂಡ್‌ಮೆಂಟಿನಲ್ಲಿ ರ್‍ಯಾಟಿಫೈ ಮಾಡುವುದು ತಪ್ಪು, ನ್ಯಾಯವಲ್ಲ, ಎಂದು ನನಗಾದರೂ ಅನ್ನಿಸುತ್ತದೆ. ಲಾ ಕಮಿಷನ್ನಿನವರು ಹೇಳಿದ ಹಾಗೆ ಮಾಡಿದ್ದೇವೆಂದು ಹೇಳಿದ್ದಾರೆ. ಹಾಗಾದರೆ ಲಾ ಕಮಿಷನ್ನಿನವರು ಶಿಫಾರಸು ಮಾಡಿರುವಂತೆ ಈ ನ್ಯಾಯಮೂರ್ತಿಗಳ ನಿವೃತ್ತಿ ವಯೋಮಿತಿಯನ್ನು 65 ಮಾಡಿಬಿಡಿ. ನಾನು ಲೋಕಸಭೆಯ ಪ್ರೊಸೀಡಿಂಗ್ಸನ್ನು ನೋಡಿದೆ. ಅಲ್ಲಿ ಯೂನಿಯನ್ ಲಾ ಮಿನಿಸ್ಟರು ಲಾ ಕಮಿಷನ್ನಿನವರು ಹೇಳಿರುವುದನ್ನು ಚಾಚೂ ತಪ್ಪದೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಲಾ ಕಮಿಷನಿನವರು ಹೇಳಿದ್ದನ್ನು ಏತಕ್ಕೆ ಒಪ್ಪಲಿಲ್ಲ ? 62 ಎಂದು ಏಕೆ ಮಾಡಿದಿರಿ ? 65 ಎಂದು ಮಾಡಬೇಕಾಗಿತ್ತು. ಇದರಿಂದ ನಮಗೆ ಏನನ್ನಿಸುತ್ತದೆಯೆಂದರೆ, ಇದರಲ್ಲಿ ಒಳಗಡೆ ಏನೋ ಗುಟ್ಟು ಇರಬೇಕು; ಅದನ್ನು ಹೇಳಿಬಿಟ್ಟರೆ 'ಒಪ್ಪಿಕೊಳ್ಳುವುದಕ್ಕೆ ಸಾಧ್ಯ, ಇಲ್ಲದೆ ಹೋದರೆ ಆಗುವುದಿಲ್ಲ. ಕಾನ್‌ಸ್ಟಿಟ್ಯೂಷನ್ ಒಂದು ಪವಿತ್ರವಾದ ಗ್ರಂಥ. ಈ ಒಂದು ಪವಿತ್ರವಾದ ಗ್ರಂಥವನ್ನು ಈ ರೀತಿ ಪದೇ ಪದೇ ಅಮೆಂಡ್‌ಮೆಂಟನ್ನು ತಂದು ಕಾಲ ಕಾಲಕ್ಕೆ ಬೇಕಾದ ರೀತಿಯಲ್ಲಿ ಬದಲಾಯಿಸುತ್ತಾ ಹೋದರೆ, ಅದನ್ನು ಎಷ್ಟು ಅಗ್ಗ ಮಾಡುತ್ತೀರಿ ! ನನ್ನ ಸ್ನೇಹಿತರೊಬ್ಬರು ಮೇಲ್ಮನೆಯಲ್ಲಿ ಫ್ರಾನ್ಸಿನಲ್ಲಿರತಕ್ಕಂಥ ರಾಜ್ಯಾಂಗದಂತೆ ನಮ್ಮದೂ ನಗೆಪಾಟಲಾಗಬಾರದು ಎಂದು ಹೇಳಿದ್ದಾರೆ. ಆ ರೀತಿಯಾಗಬಾರದೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ತಾನೆ ನಮ್ಮ ಮಾನ್ಯ ಕಂದಾಯ ಸಚಿವರು ಹೆರಿಡಿಟರಿ ರೈಟ್ಸ್ ಅಬಾಲಿಷನ್ ಬಿಲ್ಲು ಸರ್ಕಾರ ಮಾಡಿದ್ದು ಸರಿಯಲ್ಲವೆಂದು ಹೈಕೋರ್ಟಿಗೆ ರಿಟ್ ಹಾಕಿದ್ದಾರೆಂದೂ, ಅವರಲ್ಲಿ ಇನ್ನೂ ತೀರ್ಪು ಕೊಟ್ಟಿಲ್ಲವೆಂದೂ ಅಪ್ಪಣೆ ಕೊಡಿಸಿದರು. ಆ ಕಾಯಿದೆಯಾಗಿ 8 ತಿಂಗಳಾಯಿತು. ಅದರಲ್ಲಿ ಇನ್ನೂ ಜಡ್ಜ್‌ಮೆಂಟ್ ಕೊಟ್ಟಿಲ್ಲವೆಂದರೆ ಎಷ್ಟರಮಟ್ಟಿಗೆ ಹೈಕೋರ್ಟು ಕೆಲಸಕಾರ್ಯಗಳು ನಡೆಯುತ್ತಾ ಇವೆಯೆಂದು ತಾವೇ ಸ್ವಲ್ಪ ಅರ್ಥ ಮಾಡಿಕೊಳ್ಳಬಹುದು. ತಮಗೆ ಗೊತ್ತಿಲ್ಲ ಎಂದು ನಾನು ಇದನ್ನು ಹೇಳುತ್ತಿಲ್ಲ. ಆ ಕೇಸಿನಲ್ಲಿ ಸ್ಟೇ ಆರ್ಡರು ಇರುವುದರಿಂದ ಸರ್ಕಾರ ಮುಂದಕ್ಕೆ ಹೋಗುವುದಕ್ಕಾಗುತ್ತಿಲ್ಲ; ಆದ್ದರಿಂದ ಸರ್ಕಾರದ ಕೆಲಸಕಾರ್ಯಗಳಿಗೂ ತಡೆ ಬಂದಿದೆ. ಆದ್ದರಿಂದ 62–65ರ ವಯೋಮಿತಿಯನ್ನು ವಿಚಾರ ಮಾಡಿದರೂ, ಶ್ರೇಷ್ಠ ನ್ಯಾಯಮೂರ್ತಿಗಳ ಸ್ಥಾನಗಳಿಂದ ಯುವಕರನ್ನು ತಡೆಗಟ್ಟಿದಂತೆ ಆಗುತ್ತದೆ. ಇವರುಗಳ ನಿವೃತ್ತಿ ವಯೋಮಿತಿಯನ್ನು ಹೆಚ್ಚು ಮಾಡತಕ್ಕಂಥಾದ್ದು ಅಷ್ಟು ಸಮಾಧಾನಕರವಾಗಿ ಕಾಣುವುದಿಲ್ಲವೆಂದು, ತಮ್ಮ ಮುಖಾಂತರ, ಮುಖ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ; ಅವರು ಕೇಂದ್ರ ಸರ್ಕಾರಕ್ಕೆ ಈ ಸಭೆಯ ಅಭಿಪ್ರಾಯವನ್ನು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಈಗತಾನೆ ಹೊಸದಾಗಿ ನೇಮಕವಾದ ಸಂಸ್ಥಾನದ ಅಡ್ವೊಕೇಟ್–ಜನರಲ್ಲರು, ಮೊನ್ನೆ ತಾನೆ ರಿಟೈರ್ ಆದ ಮೈಸೂರಿನ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಿಗೆ ಫೇರ್‌ವೆಲ್ ಪಾರ್ಟಿ ಕೊಟ್ಟಾಗ, ಅವರು ಎರಡು ವರ್ಷಗಳು ಜಡ್ಜ್‌ಮೆಂಟನ್ನು ಕೆಲವು ಕೇಸುಗಳಲ್ಲಿ ಬರೆದಿರಲಿಲ್ಲವೆಂದು ಹೇಳಿದರು. ಈ ಎರಡು ವರ್ಷಗಳೂ ಅವರು ಏನು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದರೋ ಜಡ್ಜ್‌ಮೆಂಟ್ ಬರೆಯಲು ಏನೋ ಕಷ್ಟವಿತ್ತು ಎಂದು ಹೇಳಿದ್ದಾರೆ ಎಂದು ಕೇಳಿದ್ದೇನೆ. ಅವರ ಕಷ್ಟವೇನಿತ್ತೋ ಅರ್ಥವಾಗಲಿಲ್ಲ. ಅವರು ಅಷ್ಟು ಹೇಳಿ ಅಲ್ಲಿಗೇ ಮುಗಿಸಿಬಿಟ್ಟರು.

ಶ್ರೀ ಎಸ್. ನಿಜಲಿಂಗಪ್ಪ.—ನೀವೂ ಅಲ್ಲಿಗೇ ಮುಗಿಸಿಬಿಡಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜಡ್ಜ್‌ಮೆಂಟನ್ನು ಇಷ್ಟು ದಿವಸ ತಡಮಾಡಲು ಯಾವ ಒಂದು ಯೋಚನೆ ಮಾಡಬೇಕಾಗಿತ್ತು ? ಇಷ್ಟು ವಿಳಂಬ ಮಾಡಿ ಜಡ್ಜ್‌ಮೆಂಟ್ ಬರೆದರೆ ಪಾರ್ಟಿಗಳಿಗೆ ಎಷ್ಟು ಕಷ್ಟವಾಗುತ್ತದೆ ? ಹೈಕೋರ್ಟಿನ ನ್ಯಾಯಾಧೀಶರೇ ಹೀಗೆ ಜಡ್ಜ್‌ಮೆಂಟ್ ಬರೆಯುವದನ್ನು ಮುಂದಕ್ಕೆ ಹಾಕಿದರೆ ಅವರು ಅವರ ಕೆಳಗಿರುವ ಡಿಸ್ಟ್ರಿಕ್ಟ್ ಕೋರ್ಟು, ಸಿವಿಲ್ ಜಡ್ಜ್ ಕೋರ್ಟು, ಮುನಿಸೀಫ್ ಮತ್ತು ಮೇಜಿಸ್ಟ್ರೇಟ್ ಸಬಾರ್ಡಿನೇಟ್ ಕೋರ್ಟ್‌ಗಳನ್ನು ಇನ್‌ಸ್ಪೆಕ್ಟ್ ಮಾಡಿ ಅವರ ಕೆಲಸ ಕಾರ್ಯ ಅಸಮರ್ಪಕವಾಗಿದೆ, ನಿರ್ಧಾರವಾಗಿ ತೀರ್ಪು ಕೊಡುತ್ತಿದ್ದಾರೆಂದು ಹೇಗೆ ಹೇಳು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವುದು ? ಶ್ರೇಷ್ಠ ನ್ಯಾಯಮೂರ್ತಿಗಳೇ ಈ ರೀತಿ ನಡೆದುಕೊಂಡರೆ, ಇನ್ನು ಅವರ ಕೆಳಗಿರುವಂಥ ನ್ಯಾಯಾಧೀಶರುಗಳು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಾರೆಂದು ಊಹಿಸಿಕೊಳ್ಳಬಹುದು. ನ್ಯಾಯಾಲಯಗಳಲ್ಲಿ ದಕ್ಷತೆಯ ಮಟ್ಟ ಹೆಚ್ಚಲಿ ಎಂದು ತಮ್ಮ ನೋಟೀಸಿಗೆ ಇದನ್ನು ತರುತ್ತಿದ್ದೇನೆಯೇ ಹೊರತು, ಅನ್ಯತಃ ಇನ್ನಾವ ದೃಷ್ಟಿಯಿಂದಲೂ ಮುಖ್ಯಮಂತ್ರಿಗಳ ಅವಗಾಹನೆಗೆ ತರುತ್ತಿಲ್ಲ.

ಡಿಸ್ಟ್ರಿಕ್ಟ್ ಜಡ್ಜ್ ಆದವರನ್ನು ಹೈಕೋರ್ಟು ಜಡ್ಜ್ ಆಗಿ ಮಾಡುವುದರಲ್ಲಿ ನ್ಯಾಯವಿದೆ. ಆದರೆ ಹೈಕೋರ್ಟ್ ಜಡ್ಜ್ ಆದವರನ್ನು ಡಿಸ್ಟ್ರಿಕ್ಟ್ ಜಡ್ಜ್‌ಗಳು ಇರಬೇಕಾದಂಥ ಸ್ಥಾನಗಳಿಗೆ ನೇಮಿಸುವುದು ಸರಿಯಲ್ಲ. ಹೈಕೋರ್ಟ್ ನ್ಯಾಯಾಧೀಶರ ಸ್ಥಾನ ಪೂಜ್ಯಪೀಠ. ನಮ್ಮ ರಾಜ್ಯದಲ್ಲಿ ಒಂದೆರಡು ಇಂಡಿವಿಜುಯಲ್ ಕೇಸುಗಳಲ್ಲಿ ಈ ಸ್ಥಾನದಲ್ಲಿರುವವರು ರಾಜಕೀಯಕ್ಕೆ ಹೋಗಿದ್ದಾರೆ, ರಾಜಕೀಯ ಜನಗಳ ಜೊತೆಯಲ್ಲಿ ಓಡಾಡಿದ್ದಾರೆ. ಅಂಥವರನ್ನು ಈ ಪೂಜ್ಯಸ್ಥಾನಕ್ಕೆ ನೇಮಕ ಮಾಡುವುದು ಸರಿಯೆ ? ಅವರು ಎಕ್ಸಿಕ್ಯೂಟಿವ್ ಕಡೆಯೇ ನೋಡುತ್ತಿರುತ್ತಾರೆ, ಅವರ ಹೆಸರನ್ನು ಯಾವುದಾದರೂ ಸ್ಥಾನಗಳಿಗೆ ಶಿಫಾರಸು ಮಾಡಲಿ ಎಂದು ಎಕ್ಸಿಕ್ಯೂಟೀವ್ ಮತ್ತು ಜುಡಿಶಿಯರಿ ಸೆಪರೇಷನ್ ಪ್ರಶ್ನೆ ಈ ಸಭೆಯಲ್ಲಿ ಚರ್ಚೆಗೆ ಬಂದಿದ್ದಾಗ ಈ ತರಹ ಹೈಕೋರ್ಟು ಜಡ್ಜುಗಳನ್ನು ಕೆಳದರ್ಜೆ ಸ್ಥಾನಗಳಿಗೆ ಪೋಸ್ಟು ಮಾಡಬಾರದು ಎಂದು ಅಭಿಪ್ರಾಯ ಕೊಟ್ಟಿದ್ದೆವು, ಅದನ್ನು ನೀವು ಒಪ್ಪಿದಿರಿ. ಮತ್ತೆ ಎಕ್ಸಿಕ್ಯೂಟೀವ್ ಕ್ಷೇತ್ರದ ಈ ತರಹ ನೇಮಕಗಳಲ್ಲಿ ಪ್ರಾರಂಭವಾಗಿದೆ. ರಿಟೈರ್ಡ್ ಹೈಕೋರ್ಟು ಜಡ್ಜಿಗಳನ್ನು ಲೇಬರ್ ಅಪಿಲೇಟ್ ಟ್ರಿಬ್ಯೂನಲ್ಲಿಗೆ ಛೇರ್ಮನ್ನಾಗಿ ನೇಮಕ ಮಾಡಿದ್ದೀರಿ. ಅವರು ರಾಜ್ಯದ ಹೈಕೋರ್ಟಿನಲ್ಲಿ ಒಂದು ಉನ್ನತ ಸ್ಥಾನವನ್ನು ಹೊಂದಿದ್ದರು. ಅಂಥವರನ್ನು ಮತ್ತೆ ಒಬ್ಬ ಡಿಸ್ಟ್ರಿಕ್ಟ್ ಜಡ್ಜ್ ಮಾಡತಕ್ಕಂಥ ಕೆಲಸಕ್ಕೆ ಅಪಾಯಿಂಟ್ ಮಾಡಬಾರದು. ಅದು ನ್ಯಾಯವಲ್ಲ. ಅವರ ಸ್ಥಾನಮಾನವನ್ನು ಕಡಮೆ ಮಾಡಬಾರದು.

†ಶ್ರೀ ಡಿ. ದೇವರಾಜ ಅರಸ್.—ಕಾರ್ಮಿಕ ವಸತಿ ಮತ್ತು ಸಾರಿಗೆ ಶಾಖೆಗಳ ಮಂತ್ರಿಗಳು ಕಾನೂನಿಲ್ಲದೆ, ಹಾಗೆ ಮಾಡಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜುಗಳನ್ನೇ ಆ ಸ್ಥಾನಕ್ಕೆ ನೇಮಕ ಮಾಡುತ್ತೇವೆ, ರಿಟೈರ್ಡ್ ಹೈಕೋರ್ಟು ಜಡ್ಜುಗಳನ್ನು ನೇಮಕ ಮಾಡುವ ಗೋಜಿಗೆ ಹೋಗುವುದಿಲ್ಲ ಎಂದು ತಾವೇ ಈ ಸಭೆಯಲ್ಲಿ ಮಾತು ಕೊಟ್ಟಿದ್ದಿರಿ. ಅದರ ಮೇಲೆ ನಾವು ಸುಮ್ಮನಾಗಿ ಒಪ್ಪಿಗೆ ಕೊಟ್ಟೆವು.

†ಶ್ರೀ ಡಿ. ದೇವರಾಜ ಅರಸ್.—ಇದು ಕಾನೂನಿನಲ್ಲಿದೆ. ಲೇಬರ್ ಅಪೆಲೇಟ್ ಟ್ರಿಬ್ಯೂನಲ್ಲಿಗೆ ಹೈಕೋರ್ಟ್ ಜಡ್ಜ್ ಅಥವ ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜುಗಳನ್ನು ನೇಮಕ ಮಾಡಬಹುದೆಂದು, ಎಲ್ಲಿ ಹೈಕೋರ್ಟು ಜಡ್ಜುಗಳು ಅವೇಲಬಲ್ ಆಗಿರುತ್ತಾರೆಯೋ, ಅವರನ್ನು ತೆಗೆದುಕೊಂಡು ಅವರ ಸೇವೆಯ ಲಾಭ ಹೊಂದುವುದು ಒಳ್ಳೆಯದು. ಹೀಗೆ ಅವರು ಟ್ರಿಬ್ಯೂನಲ್ಲಿನಲ್ಲಿ ಸೇವೆ ಸಲ್ಲಿಸಿದರೆ, ಅದು ಕೆಳದರ್ಜೆ ಕೆಲಸ ಎಂದು ನಾವು ಭಾವಿಸಬಾರದು. ಹೈಕೋರ್ಟ್ ಜಡ್ಜಿಗಳನ್ನು ಆ ಕೆಲಸಕ್ಕೆ ತೆಗೆದುಕೊಳ್ಳುವುದಾದರೆ ಎಲ್ಲರಿಗೂ ಸಂತೋಷದ ವಿಚಾರ; ಲೇಬರ್ ಕೂಡ ಸಂತೋಷದಿಂದ ಅವರ ನೇಮಕವನ್ನು ಅಪೇಕ್ಷಿಸುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನು ಆ ವಿಷಯವನ್ನು ಮುಂದುವರಿಸದೆ ಅಲ್ಲಿಗೇ ಬಿಡುತ್ತೇನೆ. ಆದರೆ ರಿಟೈರ್ ಆದಮೇಲೆ ಹೈಕೋರ್ಟ್ ಜಡ್ಜಿಗಳು ಲಾಯರಾಗಿ ಪ್ರಾಕ್ಟೀಸು ಮಾಡುವ ಅವಕಾಶವಿರಬೇಕೆಂದು ಅಂದರೆ ಸರಿಯಲ್ಲ. ಅವರು ಹೈಕೋರ್ಟು ಜಡ್ಜಾಗಿ ಬೇಕಾದಷ್ಟು ಜಡ್ಜ್‌ಮೆಂಟುಗಳನ್ನು ಡೆಲಿವರ್ ಮಾಡಿರುತ್ತಾರೆ. ಒಂದು ಪಾರ್ಟಿಗೆ ವಿರೋಧವಾಗಿ, ಅನುಕೂಲವಾಗಿ, ಎಲ್ಲಾ ತೀರ್ಪು ಕೊಟ್ಟಿರುತ್ತಾರೆ. ಅವರು ಕಟ್ಟುಗಳನ್ನು ಬಗಲಲ್ಲಿ ಹೊತ್ತುಕೊಂಡು ಪ್ರಾಕ್ಟೀಸ್ ಮಾಡುವುದೆಂದರೆ ಸೋಜಿಗ ; 62ಕ್ಕೆ ಕೈಕಾಲುಗಳು ನಡುಗುತ್ತಿರುತ್ತವೆ, ತಲೆ ನಡುಗುತ್ತಿರುತ್ತದೆ. ಆರ್ಗ್ಯುಮೆಂಟ್ ಮಾಡಬೇಕಾದರೆ ಕುಳಿತುಕೊಂಡು ಮಾಡಬೇಕಾಗುತ್ತದೆ. 62 ವಯಸ್ಸು ಆದಮೇಲೆ ಇನ್ನೂ ಆಸೆಯೇ ? ಪ್ರಾಕ್ಟೀಸು ಮಾಡಲು ಅವಕಾಶವಿಲ್ಲದಿದ್ದರೆ ಅವರ fundamental right affect ಆಗುತ್ತದೆಯೇ ?

ಈ ರೀತಿ ನಿವೃತ್ತರಾದ ಜಡ್ಜರಿಗೆ ಅವಕಾಶವಿಲ್ಲದೆಯಿರುವುದರಿಂದ, ರಾಜ್ಯಾಂಗವು ಅಡ್ಡಿ ಬರುತ್ತದೆ, ಅವಕಾಶವಿಲ್ಲವೆಂದು ನಿವೃತ್ತ ನ್ಯಾಯಾಧೀಶರು ಅಲ್ಲಿ ಮೊರೆ ಇಟ್ಟರೋ ಏನೋ; ಅದಕ್ಕೋಸ್ಕರ ಅವರನ್ನು ಪ್ರಾಕ್ಟೀಸ್ ಮಾಡಿ ಎಂದು ಹೇಳಿದ್ದಾರೆಂದು ಕಾಣುತ್ತದೆ......

ಶ್ರೀ ಎಸ್. ನಿಜಲಿಂಗಪ್ಪ.—ಪ್ರಾಕ್ಟೀಸ್ ಮಾಡಿ ಎಂದು ನಾವು ಹೇಳುವುದಿಲ್ಲ. ಅವರೇ ಹೋಗಿ ಪ್ರಾಕ್ಟೀಸ್ ಮಾಡುತ್ತಾರೆ.

Sri C. J. MUCKANNAPPA.—Under this Amendment, they get anction.

Sri S. NIJALINGAPPA.—It is an enabling Section.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಿಂದ ಏನಾಗುತ್ತದೆಂದರೆ, ಅವರ ಗಿರಾಕಿಗಳಿರುತ್ತಾರೆ. ಅವರು ಒಂದು ಅಪೀಲು ಹಾಕುತ್ತಾರೆ. ಆಗ he may bring some pressure. ಅದರ pros and cons ಏನು ? ಯಾವ ರೀತಿ ನಡೆಯುತ್ತದೆ ಎಂದು ನಾನು ಸಭೆಯ ಮುಂದೆ ಹೇಳುತ್ತಿದ್ದೇನೆ. ಅವರಿಗೆ ಪೆನ್‌ಷನ್ ಕೊಡುತ್ತೀರಿ. ಹೈಕೋರ್ಟ್ ನ್ಯಾಯಾಧೀಶರಾಗಿ ಐದು ವರ್ಷ, ಹತ್ತು ವರ್ಷ ಕೆಲಸವಾಡಿ ಬೇಕಾದಷ್ಟು ಹಣವನ್ನು ಗಳಿಸಿರುತ್ತಾರೆ. ಅವರಿಗೆ ಮತ್ತೊಮ್ಮೆ ಪ್ರಾಕ್ಟೀಸು ಮಾಡಲು ಅವಕಾಶ ಏಕೆ ಕೊಡುತ್ತೀರಿ. ಆ ರೀತಿಯ ಅವಕಾಶವಿರಬಾರದೆಂದು ನನ್ನ ಅಭಿಪ್ರಾಯ. ಬೇರೆ ಕಡೆಗೆ ವರ್ಗಮಾಡುವುದು ಇಲ್ಲ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಸ್ವಾಮಿ.

[MR SPEAKER in the Chair]

ಹೈಕೋರ್ಟಿನವರು ಕೆಲಸಮಾಡದೆ, ಅವರ ಕೆಲಸದಲ್ಲಿ lethargic ಆಗಿ ಇರುತ್ತಾರೆ. ಸರ್ಕಾರದವರಿಗೆ ಜಡ್ಜರ ಸ್ಥಾನಕ್ಕೆ ಇಂಥವರಿರಬೇಕು ಎಂದು ಶಿಫಾರಸು ಮಾಡುವುದಕ್ಕೆ ಅವಕಾಶ ಇದೆ. ಅವರು ಎಷ್ಟುಮಟ್ಟಿಗೆ ಕೆಲಸ ಮಾಡುತ್ತಾರೆಂದು ನೋಡಬೇಕು. ವಯಸ್ಸಿನ ಮಿತಿಯನ್ನು ಜಾಸ್ತಿಮಾಡಿ ಎಲ್ಲ ಸವಲತ್ತುಗಳನ್ನೂ ಕೊಟ್ಟ ಮೇಲೂ ಎಷ್ಟರಮಟ್ಟಿಗೆ ನ್ಯಾಯವನ್ನು ಕೊಡುವುದರಲ್ಲಿ ವೇಗವಾಗಿ ಹೋಗುತ್ತಿದ್ದಾರೆ.....

Mr. SPEAKER.—Is the Hon'ble member talking on hypothetical grounds ? Has he any basis to show that High Court Judges are lethargic ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎರಡು ವರ್ಷ ಅವರು ಜಡ್ಜ್‌ಮೆಂಟನ್ನು ಕೊಡಲಿಲ್ಲ. ಅದು lethargy ಅಲ್ಲವೇ ?

Mr. SPEAKER.—Complicated points are involved.. ...

Sri C. J. MUCKANNAPPA.—Two years after the hearing of cases, they forget whatever they heard and their age comes in the way. Something will be wrong with their physique.

Mr. SPEAKER.—That is why I say that his presumption is wrong. He presumes that something is wrong. Absolutely not. Please come to the next point.

Sri C. J. MUCKANNAPPA.—They have not delivered judgment till to-day. They have kept Government, and Patels and the Shanbogues and the entire country under suspense. We do not know what will happen. The Hon'ble Minister hopes that he will get judgment in his favour. Kindly accept the Law Commission Report. We are prepared to accept 65 years, but you don't want to do it. You are accepting piecemeal; now you want to make it 62 years; after two years you will make it 64 years......

Mr. SPEAKER.—All the force of his argument has gone. He says that 60 years is bad; 62 years is worse, but 65 years is good.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—62 ವರ್ಷಗಳಿಗೆ ಹೈಕೋರ್ಟ್ ನ್ಯಾಯಾಧೀಶರ ವಯಸ್ಸನ್ನು ಹೆಚ್ಚಿಸಬೇಕು ಎಂದು ಹೇಳುವಾಗ ಲಾ ಕಮಿಷನ್ನಿನವರು ಹೇಳಿರುವ ವಿಷಯಗಳನ್ನೆಲ್ಲಾ ಪರ್ಯಾಲೋಚನೆ ಮಾಡಬೇಕು. ತಮ್ಮ ಪಕ್ಷದವರೂ ಅದನ್ನು ಅಲ್ಲಿ ಹೇಳಿದ್ದಾರೆ. ಶ್ರೀ ಮಹಾವೀರ ತ್ಯಾಗಿಯವರೂ ಹೇಳಿದ್ದಾರೆ. ಅವರು ಒಂದು ತಿದ್ದುಪಡಿಯನ್ನು ತಂದು ಒಪ್ಪಿಕೊಳ್ಳಿ ಎಂದು ಹೇಳಿದಾಗ ಅವರಿಗೂ ನ್ಯಾಯಾಂಗ ಮಂತ್ರಿಗಳಿಗೂ ಸ್ವಲ್ಪ ಮಾತು ನಡೆದು ಅವರಿಗೆ ಮಾತನಾಡಲು ಅವಕಾಶವಿದೆ, ಮಾತನಾಡಬಹುದು ಎಂದರು. ಅವರು ಮಾತನಾಡಿದ ಮೇಲೆ ತಿದ್ದುಪಡಿಯನ್ನು ಆ ಹೊತ್ತಿನಲ್ಲಿ ಒತ್ತಾಯ ಮಾಡಬೇಡಿ, ಅದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರು. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ತಾವು ಇವೊತ್ತು ಯುವಕರನ್ನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕೋರ್ಟ್‌ಗಳಲ್ಲಿ ನೇಮಕ ಮಾಡುತ್ತಿದ್ದೀರಿ. ಅವರಿಗೆಲ್ಲ ಹೈಕೋರ್ಟಿಗೆ ಹೋಗಬೇಕೆಂಬ ಆಸೆ, ಆಶೋತ್ತರಗಳಿರುತ್ತವೆ. ಅವರನ್ನೆಲ್ಲ deprive ಮಾಡಿದ ಹಾಗೆ ಆಗುವುದಿಲ್ಲವೇ ಎಂಬುದನ್ನು ತಾವು ಕೂಲಂಕಷವಾಗಿ ಯೋಚನೆ ಮಾಡಬೇಕು. ಇದು ಮೇಲಿನಿಂದ ಬಂದಿದೆ, ಪಾರ್ಲಿಮೆಂಟ್ ಒಪ್ಪಿಕೊಂಡಿದ್ದೆ, ನೀವೂ ಒಪ್ಪಿಕೊಳ್ಳಿ ಎಂದು ಹೇಳುವುದು ಮತ್ತು ಪದೇ ಪದೇ ರಾಜ್ಯಾಂಗಕ್ಕೆ ತಿದ್ದುಪಡಿಯನ್ನು ತರುವುದೂ ಸರಿಕಾಣುವುದಿಲ್ಲ. ನಮ್ಮ ರಾಜ್ಯದಲ್ಲಿ ನಾವು ಪಾಸು ಮಾಡಿದಂಥ ಅನೇಕ ವಿಧಿ ನಿಯಮಗಳಿಗೆ, ಕಾನೂನುಗಳಿಗೆ, ನಮ್ಮ ಸರ್ಕಾರದವರು ಒಂದು ತಿದ್ದುಪಡಿಯನ್ನು ತರಬೇಕಾದರೆ ಹತ್ತಾರು ಸಾರಿ ಯೋಚನೆ ಮಾಡುತ್ತಾರೆ. ಹೀಗಿರುವಾಗ ರಾಜ್ಯಾಂಗಕ್ಕೆ ಹೆಚ್ಚು ಮಾತನಾಡಿದರೆ contempt ಆಗುತ್ತದೆಯೋ ಏನೋ ಎಂದು ಕಾಣುತ್ತದೆ. ಆಯವ್ಯಯ ಅಧಿವೇಶನದಲ್ಲಿ ಮಾತನಾಡಿದರೆ "You have no right to speak" ಎಂದು ಹೇಳುತ್ತೀರಿ.

ಪ್ರಧಾನ ಮಂತ್ರಿಗಳು ಮೊನ್ನೆ ಮಾತನಾಡುವಾಗ ಸುಪ್ರೀಂಕೋರ್ಟ್‌ನ ಜಡ್ಜ್‌ಮೆಂಟಿಗೆ ಪಂಜಾಬಿನ ಮುಖ್ಯಮಂತ್ರಿ ಕೈರಾನ್ ಅವರು ಪಾರ್ಟಿ ಅಲ್ಲವೆಂದು ಹೇಳಿದರು. ಇನ್ನೊಂದು ಸಂದರ್ಭದಲ್ಲಿ ಸಹ ಅದೇ ರೀತಿ ಹೇಳಿದರು. ಅದನ್ನೇ ನಾನು ಈ ಸಭೆಯಲ್ಲಿ ಹೇಳಿದ್ದರೆ contempt ಆಗುತ್ತಿತ್ತು. ಏಕೆಂದರೆ ಆ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ, ಅದನ್ನು ಚರ್ಚೆ ಮಾಡಬಾರದು.

ನಾನು ಮತ್ತೊಂದು ವಿಷಯವನ್ನು ಹೇಳುತ್ತೇನೆ. ನಿವೃತ್ತರಾದ ಜಡ್ಜಿಗಳಿಗೆ ಇನ್ನೂ ಒಂದು ಆಸೆಯನ್ನು ತೋರಿಸುತ್ತಿದ್ದಾರೆ. ಒಬ್ಬರನ್ನು ಇಂಗ್ಲೆಂಡಿಗೆ ರಾಯಭಾರಿಯಾಗಿ ಕಳಿಸಿದರು. ಆಗ ಜನರೆಲ್ಲ ಟೀಕೆ ಮಾಡಿದರು. ಹೈಕೋರ್ಟ್ ಜಡ್ಜಿಗಳನ್ನು, ಮುಖ್ಯ ನ್ಯಾಯಾಧೀಶರನ್ನು ಸರ್ಕಾರದವರು ಎಕ್ಸಿಕ್ಯೂಟಿವ್ ಕೆಲಸಕ್ಕೆ ನೇಮಕ ಮಾಡಬಾರದು, ಇದರಿಂದ ಅವರೆಲ್ಲ ಎಕ್ಸಿಕ್ಯೂಟಿವ್ ಕಡೆ ನೋಡುತ್ತಾರೆ ಎಂದು. ನಾನು ಒಂದು ನಿದರ್ಶನವನ್ನು ಹೇಳುತ್ತೇನೆ. ಶ್ರೀ ಚಾಗ್ಲ ಅವರನ್ನು ನೇಮಕ ಮಾಡಿದಾಗ ದೇಶದಲ್ಲಿ ದೊಡ್ಡ ಕಳವಳವೇ ಉಂಟಾಯಿತು; ಆ ರೀತಿ ಮಾಡುವುದು ಸರಿ ಕಾಣುವುದಿಲ್ಲ ಎಂದು. ಹೀಗಾದರೆ ಅವರೆಲ್ಲ ಯಾರ ಕಡೆ ನೋಡುತ್ತಾರೆ? ಹೈಕೋರ್ಟ್ ಜಡ್ಜಿಗಳೆಲ್ಲ executiveನ good booksನಲ್ಲಿದ್ದರೆ, ನಾನು ನಿವೃತ್ತನಾದ ಮೇಲೆ ನನಗೆ ಏನಾದರೂ ಒಂದು ಸ್ಥಾನ ಸಿಕ್ಕಬಹುದು.

Mr. SPEAKER.—Is the Hon'ble member very serious to go as an Ambassador?

Sri C. J. MUCKANNAPPA.—You are already aged. Therefore I request the Government to recommend your case for being sent as an Ambassador to some country. We will be happy, because you can do much service to the country.

Mr. SPEAKER.—I am not going.

Sri C. J. MUCKANNAPPA.—God bless you!

ಇದರಲ್ಲಿರುವ ಎಲ್ಲ ಭಾಗಗಳನ್ನೂ ನಾನು ವಿರೋಧಿಸುವುದಿಲ್ಲ. ಒಂದನ್ನು ಮಾತ್ರ ವಿರೋಧಿಸುತ್ತಿದ್ದೇನೆ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರನ್ನು ವರ್ಗ ಮಾಡಬಹುದು. ಅದು ನಮ್ಮ ಅನುಭವದಲ್ಲಿದೆ. ಅವರು ಏನೇನೋ ರಾಜಕೀಯವನ್ನು ಇಟ್ಟುಕೊಂಡು ಹೈಕೋರ್ಟಿನಲ್ಲಿ treat ಮಾಡುತ್ತಾರೆನ್ನುವುದು ನಮ್ಮ ಅನುಭವದಲ್ಲಿದೆ. ಅವರು ಎಲ್ಲಿ ಹುಟ್ಟಿ ಬೆಳೆದವರು, ಯಾರ ಕಡೆಯವರು, ಎತ್ತ ಕಡೆಯವರು ಎಂದು ನೋಡುವಂಥ ಒಂದು political pull ಇದೆ.

ಒಂದು ಉದಾಹರಣೆಯನ್ನು ಹೇಳುತ್ತೇನೆ—ಈ ರಾಜ್ಯದಲ್ಲಿ ಈ ಸಭೆಗೆ ನಡೆದಂಥ ಚುನಾವಣೆಗೆ ಅಂಥ ಮಾಡಬಾರದಂಥ ಒಂದು ಇಕ್ಕಟ್ಟಿಗೆ ಒಳಗಾಗಿ ಅವರು ಇವತ್ತು ಚುನಾವಣೆಗೆ ನಿಲ್ಲುವುದಕ್ಕೆ ಆಗುತ್ತಿಲ್ಲ. ಇದಕ್ಕೇ ಈ ಟ್ರಾನ್ಸ್‌ಫರ್ ಮಾಡತಕ್ಕದ್ದು ವಿಧಿ ಏನಿದೆ ಇದನ್ನು ಒಪ್ಪಿಕೊಳ್ಳುತ್ತೇನೆ. ಇನ್ನೊಂದು ರಿಟೈರ್ಡ್ ಜಡ್ಜುಗಳು ಕೆಲಸಕ್ಕಾಗಿ ಕೋರ್ಟಿನಿಂದ ಹೋಗತಕ್ಕ ಪ್ರಾಕ್ಟೀಸ್‌ಗೆ ತಾವು ಕೊಡತಕ್ಕ ಕಾಂಪೆನ್‌ಸೇಟರಿ ಅಲೋಯನ್ಸ್ ಇದೆಲ್ಲಾ ಒಪ್ಪುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನೆಲ್ಲಾ ತಿಳಿದುಕೊಂಡು ತಾವು ಇದನ್ನು ಕಳುಹಿಸುವಾಗ ಸ್ವಲ್ಪ ತಮ್ಮ ಅಸಮಾಧಾನವನ್ನು ಈ ವಿಷಯದಲ್ಲಿ ವ್ಯಕ್ತಪಡಿಸಬೇಕಾಗಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†Sri V. S. PATIL (Belgaum I).—Sir, I will not take much of the time of this august House while discussing the amendment No. 15 to the Constitution. So far as clause 2 is concerned, that is about determining the age of the Supreme Court Judge I do not understand why such small matters should necessitate an amendment to the Constitution which is the basis of all that we have to do in this country. The Constitution is meant for basic principles and not for such minor details. I think, it is due to dispute regarding the age of one of the judges that this matter has moved the Parliament to amend the Constitution. That is not a good precedent.

MR. SPEAKER.—Does the member not therefore think that the absence of a provision was the handicap?

Sri V. S. PATIL.—But this is not a good precedent to bring an amendment to the Constitution for the sake of one or two instances.

In clause 4, the age of High Court Judges has been increased to 62. On this, there is a great controversy and from the point of view of giving employment to the rising generation, to the younger people and the promising youths, it is better to restrict the age to 60 rather than extend it to 62. The argument that is advanced is about experience. Unless youngers people are employed and given a chance, how can we get experienced people? So, this bogey of experience is not at all good. When we want to solve the big and grave problem of the educated, it is not feasible to increase the age of retirement of these judges.

Then, Sir, I will only touch clause 10. Here, the rights of the civil servants are curtailed. Under article 311, some fundamental rights have been given to the services before they are punished or reduced or dismissed from the service. Here, some arbitrary powers are to be delegated to the superior officers and this will definitely come in the way of honourably and independently executing ones duty as a Government servant. Sub-clause (a) of clause 10 (2) reads:

> "where a person is dismissed or removed or reduced in rank on the ground of conduct which has led to his conviction on a criminal charges.........

What is this criminal charge? It has not at all been defined in the Constitution. Sir, now all the Legislatures of the States and the Central Legislature are making laws by which we are creating new kinds, or several types of offences. Even smoking beedy or cigaraette in a cinema house or a prohibited area is an offence. It is also a criminal charge. So, criminal charge of this type may go to the very root of the case. So what is criminal charge, must be clearly defined. A moral turpitude or something like that must be there. Merely to say 'criminal charge' is rather dangerous.

Sub-clause (b) of the same clause reads:

> "where the authority empowered to dismiss or remove a person or to reduce him in rank is satisfied that for some reason, to be recorded by that authority in writing, it is not reasonably practicable to hold such inquiry;"

(SRI V. S. PATIL)

That is a most arbitrary power that is being given the persons who can dismiss or remove a Government servant. It clearly denies the fundamental right to serve honestly and efficiently in any department. This is wiping out of any right that has been given under the law or practice to the Government servant and definitely this will destroy the morale of the staff.

Then, Sir, sub-clause (3) reads:

> "If, in respect of any such person as aforesaid, a question arises whether it is reasonably practicable to hold such inquiry as is referred to in clause (2), the decision thereon of the authority empowered to dismiss or remove such person or to reduce him in rank shall be final."

This is too much. So, I submit that these amendments covered by clause 10, are radical and these provisions will reduce the Government servant to mere slavery.

They will have to obey the orders of the superiors implicitly whether such orders are illegal, good, authorised or not. If they do not implement the orders, their services are likely to be in jeopardy and they have no remedy as to the reasonableness of the opportunity. I submit that this clause is detrimental to the best interests of the administration and would demoralise the services. This amendment should not be supported by this House.

3-00 P.M.

SRI K. H. RANGANATH (Mudabidri).—I rise to oppose the amendments as brought before this House. Many Members have pointed out that frequent meddlings with the Constitution would not be good. This is the 15th amendment to the Constitution in 15 years and this is not a good trend.

As regards the age of Judges of High Court, I am opposed to the enhancement from 60 to 62 years. As my friends argued it would work against the interests of the young people who are sufficiently equipped, qualified and experienced. With regard to clause 3 of Article 128 enabling retired High Court Judges to become Supreme Court Judges; in the original article only judges of High Court can become Judges of the Supreme Court. Now what will happen is that taking advantage of the amendment, inexperienced judges are likely to be appointed to the Supreme Court. Retired Judges who could not have had a chance, become Judges of the Supreme Court in the normal course that could be brought by the back-doors. I do not know why this amendment is brought when the present provision is working well and no difficulties are experienced.

With regard to clause 5 of Article 222, I fully endorse the view that Judges should be liable to be transferred from one High Court to another

but I do not understand the need to pay such transferred judges compensatory allowances. Officers in the Central Cadres like the I.A.S. or the I.P.S. are liable to be transfered anywhere in the country and yet are not entitled to any allowances other than what is normally due to them as salary. That being so, I do not know why Judges should be treated differently.

As regards Article 224, it presents a peculiar situation. As it is, the article provides for the President to appoint Additional Judges on the advice of the Chief Justice, if it is found that there are large arrears. But under the amendment now proposed it is the Chief Justice that would appoint such additional judges in consultation with the President. This would once again give scope for retired people to go with a mercy petition or representation to the Chief Justice and seek his favour. After all, human beings are open to temptation and the Chief Justice of the Supreme Court is no exception to it. I oppose this amendment also.

The most important amendment concerns Article 311. It is not the big officers with pull and influence that would suffer but the petty officials, who are more prone, to be dealt with severely. Under the amendment they would be subject to a good deal of harassment. Even the present Article gives limited scope to a Government servant and this is further sought to be curtailed by the amendment. In fact under sub-clause (b) discretion is given to the enquiring officer even to dispense with the enquiry, if only he can record it in writing. This would give unwarranted discretion to the executive officers and would result in injustice. There is no right of appeal against this action and the appointing authority is the final authority. This clause is detrimental to the interests of the administration. The decision of the appointing authority cannot be Solomen's judgment. There is much likelihood of abuse of power. I oppose the amendments to Article 311.

[MR. DEPUTY SPEAKER in the Chair.]

† ಶ್ರೀ ಎಂ. ವಿ. ದೇವ್ (ಗುಬ್ಬಿ).—ಇದುವರೆಗೆ ಅನೇಕ ಮಾನ್ಯ ಸದಸ್ಯರು ಈ ತಿದ್ದುಪಡಿಯ ಬಗ್ಗೆ ವಿಮರ್ಶಾತ್ಮಕವಾಗಿ ಮಾತನಾಡಿದ್ದಾರೆ. ನಾನು ಇದನ್ನು ಬೇರೆ ದೃಷ್ಟಿಯಿಂದ ನೋಡಲು ಇಚ್ಛೆ ಪಡುತ್ತೇನೆ. ಈಗ ರಾಜ್ಯಾಂಗಕ್ಕೆ ತಿದ್ದುಪಡಿ ತರಬೇಕಾಗಿದೆ ಎಂಬುದು ಮುಖ್ಯ ಪ್ರಶ್ನೆ. ಒಂದು ವೇಳೆ ತಿದ್ದುಪಡಿ ತಂದರೂ ಕೂಡ ಹೇಗೆ ಇರಬೇಕು ಎಂಬುದು ಮೂಲಪ್ರಶ್ನೆ. ಅದು ಬಹಳ ಮುಖ್ಯವಾದುದು. ಒಟ್ಟಿನಲ್ಲಿ ರಾಜ್ಯಾಂಗವನ್ನು ಯಾವ ದೃಷ್ಟಿಯಿಂದ ಮಾಡಿದ್ದಾರೆ? ಅದರಲ್ಲಿ ನ್ಯೂನತೆಗಳು ಇದ್ದರೆ ಖಂಡಿತವಾಗಿ ಸರಿಪಡಿಸಬೇಕು. ಸಾಮಾನ್ಯವಾಗಿ ನ್ಯಾಯ ದೃಷ್ಟಿಯಿಂದ ರಾಜ್ಯಾಂಗ ಮಾಡಿದ್ದಾರೆ. ಅದರ ಹಿರಿಮೆ ಬಹಳ ದೊಡ್ಡದು. ಅದು ತಿದ್ದುಪಡಿಗೆ ಅತೀತವಾದುದು. ಈ ತಿದ್ದುಪಡಿಯಲ್ಲಿ ಜಡ್ಜುಗಳ ವಯಸ್ಸಿನ ಪರಿಮಿತಿ ಹೆಚ್ಚಿಸುವ ಬಗ್ಗೆ ಕೇಳಿರುವುದು ಶಾನೆ ಸಣ್ಣ ಪುಟ್ಟ ವಿಚಾರವಾಗಿದೆ. ಇದರಿಂದ ಖಂಡಿತವಾಗಿ ಪ್ರಗತಿ ಸಾಧನೆಯಾಗುವುದಿಲ್ಲ. ಬಹಳ ಅಭಾಸವಾಗಿದೆ. ಒಂದು ವೇಳೆ ನಾನು ಪಾರ್ಲಿಮೆಂಟಿನಲ್ಲಿ ಸದಸ್ಯನಾಗಿದ್ದರೆ ಚೆನ್ನಾಗಿತ್ತು. ಒಟ್ಟಿನಲ್ಲಿ ಹೇಳುವುದಾದರೆ ಈ ತಿದ್ದುಪಡಿ ತರುವುದಕ್ಕೆ ಕಾರಣವಿರಲಿಲ್ಲ. ಸಮಾಜವಾದೀ ಸಮಾಜ ರಚನೆ ಮಾಡಬೇಕೆಂಬುದೇ ನಮ್ಮ ರಾಜ್ಯಾಂಗದ ಮುಖ್ಯ ಉದ್ದೇಶವಾಗಿದೆ. ಇಂಥ ತಿದ್ದುಪಡಿ ತರುವುದು ಸರಿಯಲ್ಲ. ಕ್ಲಾಜ್ ಹತ್ತು ಈ ರೀತಿ ಇದೆ :—

(b) "where the authority empowered to dismiss or remove a person or to reduce him in rank is satisfied that for some reason,

(ಶ್ರೀ ಎಂ. ವಿ. ದೇವ್)

to be recorded by that authority in writing, it is not reasonably practicable to hold such inquiry..."

(c) "where the President or the Governor, as the case may be, is satisfied that in the interest of the security of the State it is not expedient to hold such inquiry..."

ನ್ಯಾಯಾಧೀಶರು 55 ವರ್ಷಕ್ಕೆ ರಿಟೈರ್ ಆಗಿಬಿಟ್ಟು ದೇಶಸುತ್ತಿ ಜನಕ್ಕೆ ತಿಳಿಹೇಳಬೇಕು. ಇದು ಮುಖ್ಯ ಉದ್ದೇಶ. ವಯಸ್ಸು ಇದಕ್ಕೆ ಕಾರಣವಲ್ಲ. ನಾನು ನೆಹರು ಅವರನ್ನು ನೋಡಿದ್ದೇನೆ. ಅವರಿಗೆ ಇಷ್ಟು ವಯಸ್ಸು ಆಗಿದ್ದರೂ ಇನ್ನೂ ತರುಣರಾಗಿ ಕಾಣುತ್ತಾರೆ. ಅವರಷ್ಟು ನಾನು ತರುಣನಾಗಿ ಕಾಣುವುದಿಲ್ಲ. ಮುಖ್ಯವಾಗಿ ಬುದ್ಧಿಶಕ್ತಿ ಅವರವರ ಶರೀರದ ಮೇಲೆ ಹೋಗುತ್ತದೆ. ವಯಸ್ಸಿನಿಂದ ಬುದ್ಧಿಶಕ್ತಿ ಕಡಮೆಯಾಗುತ್ತದೆಂದು ನಾನು ಒಪ್ಪುವುದಿಲ್ಲ. ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಬುದ್ಧಿಶಕ್ತಿ ಬೆಳೆದು ತರುಣನಾಗಿ ಕಾಣುತ್ತಾನೆ. ಎಲ್ಲರಿಗೂ ಅಧಿಕಾರ ಉಳಿಸಿಕೊಳ್ಳಬೇಕಾಗಿದೆ. ಕಾಮರಾಜರ ಯೋಜನೆ ಇಲ್ಲಿ ಏಕೆ ಅನ್ವಯಿಸಿಲ್ಲ ? ಸಮಾಜವಾದವನ್ನು ಯಾರು ಒಪ್ಪುವುದಿಲ್ಲವೋ ಅಂಥವರು ಮಂತ್ರಿಮಂಡಲದಿಂದ ಬಿಟ್ಟು ಹೋಗಬೇಕು. ಹೊರಗೆ ಹೋಗಿ ಒಳ್ಳೆಯವರು ಆಗಿ ಬನ್ನಿರಿ, ವಯಸ್ಸು ಆದಮೇಲೆ ರಿಟೈರ್ ಆದರೆ ಪೆನ್‌ಷನ್ ಬರುತ್ತದೆ. ಅಂಥವರು ತಮ್ಮ ಅನುಭವವನ್ನು ಸದುಪಯೋಗಪಡಿಸಿಕೊಳ್ಳಬೇಕು. ನನ್ನ ಜೀವನದಲ್ಲಿ ಒಂದು ಉದಾತ್ತವಾದ ಧ್ಯೇಯವಿದೆ. ಒಂದು ರೀತಿಯ ಡೈರೆಕ್ಷನ್ ಇರುವುದರಿಂದ ನಾನು ಮುಂದೆ ಮುಂದೆ ಸಾಗುತ್ತೇನೆಯೇ ಹೊರತು ಎಂದಿಗೂ ಹಿಂದೆ ಹೋಗುವುದಿಲ್ಲ.

ನ್ಯಾಯ ಪಂಚಾಯತಿ ರಾಜ್ಯದಲ್ಲಿ ಬರುತ್ತವೆ, ಮತ್ತು complicated cases ಒಂದೂ ಇರುವುದಿಲ್ಲ. ಆಗ ನ್ಯಾಯ ಪಂಚಾಯಿತಿಗೆ ಮಾಡಬೇಕಾದ ಖರ್ಚು ಬಹಳ ಕಡಮೆ. ಆವಾಗ conscientious ಲಾಯರುಗಳು ವೃತ್ತಿಯಲ್ಲಿದ್ದು ನ್ಯಾಯವಾಗಿ ವರ್ತಿಸುತ್ತಿರುತ್ತಾರೆ. ಕೆಲಸದ ಪ್ರಮಾಣ ಜಾಸ್ತಿ ಇರುತ್ತದೆ. There will be more jobs than man to man then. ಈ ಸಂದರ್ಭ ಬರುತ್ತದೆ. ಈಗ ಜನಗಳ ಪರಿಸ್ಥಿತಿ ಏನು ಅಂದರೆ ಅವರಿಗೆ ಅನುಗುಣವಾಗಿ ಕೆಲಸ ನಿರ್ಮಾಣವಾಗುತ್ತಿದೆ. ಹಿಂದಿನ ಕಾಲದ ಜಡ್ಜುಗಳ ದೃಷ್ಟಿ ಕಾಲ ಮಹಿಮೆ ಬದಲಾವಣೆಯಾಗಿರುವಂತೆ ಅವರ ದೃಷ್ಟಿ ಏನು ಇರುತ್ತದೆ, ಅದು ಬದಲಾಣೆಯಾಗುತ್ತಿಲ್ಲ, ಹಿಂದಿನ ಕಾಲದ್ದೆ ಇರುತ್ತದೆ; ಅವರಿಗೆ ಸಮಾಜ ನ್ಯಾಯದ ದೃಷ್ಟಿ ಇರುವುದಿಲ್ಲ. ಈಗಿನ ಕಾಲಮಹಿಮೆ ದೃಷ್ಟಿ ಇಲ್ಲದ ಹಳೆಯ ಜಡ್ಜಿಗಳು ಅಧಿಕಾರದಲ್ಲಿದ್ದರೆ, ತಪ್ಪು ಜಡ್ಜಮೆಂಟುಗಳು ಇರುತ್ತವೆ; ಈ ವಿಷಯ ಬಹಳ ದೊಡ್ಡ ಮನುಷ್ಯರಿಂದ ಒಂದು ಸಾರಿಯಲ್ಲ, ಎಷ್ಟೋ ಸಾರಿ ಚರ್ಚೆಯಾಗಿದೆ, ಇದೇ ಸಂದರ್ಭದಲ್ಲಿ ಆದಕ್ಕೆ ಅನ್ವಯಿಸುವಂಥ ಕೆಲವು ಮಾತುಗಳನ್ನು ಜವಹರಲಾಲ್ ನೆಹರುರವರು ಮತ್ತು ಸೆಟಲ್‌ವಾಡರು ಹೇಳಿದ್ದಾರೆ. ಇದನ್ನು ನೋಡಿ ಕಾಲಕ್ಕೆ ಅನುಗುಣವಾಗಿ ನ್ಯಾಯ ಕೊಡಬೇಕಾದರೆ ಒಂದು ಏಜನ್ಸಿಬೇಕು. ಆ ದೃಷ್ಟಿಯಿಂದ ಕೆಲಸ ಮಾಡಿದರೆ ಏನಾಗುತ್ತದೆ ? ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ಮಾಡಿದ್ದಾರೆ ಕಾನ್‌ಸ್ಟಿಟ್ಯೂಷನ್ನಿನೊಂದಿಗೆ ಸದರ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಬಿಲ್ಲನ್ನು ಹೀಗೆಯೇ ಇಟ್ಟುಬಿಡಿ. ಬೇಕಾದರೆ ಇನ್ನೊಂದು ಸಾರಿ ಸೇರಿದಾಗ, ಸಭೆಯ ಅನುಮತಿ ಪಡೆಯಬಹುದು. ಅಷ್ಟರೊಳಗೆ ಪಂಚಾಯಿತಿ, ನ್ಯಾಯ ಪಂಚಾಯಿತಿ, ಇವನ್ನೆಲ್ಲಾ ಮಾಡಿ. ಆವಾಗ ನಮ್ಮ ಸ್ಟೇಟಿನಲ್ಲಿ ಮಾತ್ರ ಇಂಥ ಸಂದರ್ಭಗಳು ಉದ್ಭವಿಸಿಲ್ಲ ಎಂದು ಕೇಂದ್ರದಲ್ಲಿ ಹೋಗಿ ಹೇಳಿದರೆ, ಅವರು ಮೈಸೂರು ರಾಜ್ಯ, ಆದರಿಂದ ಪಾಠ ಕಲಿಯಬೇಕೆಂದು ಹೇಳುತ್ತಾರೆ. ಆವಾಗ ನಿಜವಾದ ದೇಶಸೇವೆ ಮಾಡಿದ ಹಾಗಾಗುತ್ತದೆ ಈ ತಿದ್ದುಪಡಿ ನಮಗೆ ಬೇಕಾಗಿಲ್ಲವೆಂದು ತಿರಸ್ಕರಿಸಿದರೆ ಕಟ್ಟ ಕಡೆಯಲ್ಲಿ ಅದಕ್ಕೆ ಬರುವ ಬೆಲೆ ಒಂದೇ ಒಂದು. ಮೈಸೂರು ರಾಜ್ಯ ಮಾಡಿರುವುದು ಇತರರಿಗೆ ಮೇಲ್ಪಂಕ್ತಿಯಾಗುತ್ತದೆ. ನಮ್ಮ ರಾಜ್ಯದ ಮಂತ್ರಿ ಮಂಡಲ ಈ ತರಹ ಮಾಡಿದರೆ, ನಮ್ಮ ಇಡೀ ಭಾರತಕ್ಕೇ ಆದರ್ಶ ಕೊಡುವುದಕ್ಕೆ ದಾರಿಯಾಗುತ್ತದೆ.

ಒಟ್ಟಿನಲ್ಲಿ ಏನಾಯಿತು ? ಕಾನ್‌ಸ್ಟಿಟ್ಯೂಷನ್ ಅಮೆಂಡ್ ಮಾಡುವುದಕ್ಕೆ ಯಾವತ್ತು ರೈಟ್ ಸಿಕ್ಕುತ್ತದೆ, ಮುಂದೆ ನೋಡೋಣ. ಕಾನ್‌ಸ್ಟಿಟ್ಯೂಷನ್ ಬರೆದಿರುವುದು ಮುಖ್ಯವಾದ ಪಾಯಿಂಟು ಸಮಾಜ ನ್ಯಾಯದೃಷ್ಟಿ; ಅದನ್ನು ಮಾಡಿರುವುದು with the idea of social justice. ಆ ದೃಷ್ಟಿಯಿಂದ ನೀವು ಯೋಚನೆ ಮಾಡಬೇಕು. ಊರಿಂದ ಊರಿಗೆ ಈ ಜಡ್ಜುಗಳನ್ನು ಬದಲಾಯಿಸುವುದು ಏಕೆ ? ಎಲ್ಲೆಲ್ಲಿರುತ್ತಾರೆಯೇ ಅಲ್ಲಿಯೇ ಕೆಲಸಗಳನ್ನು ಮಾಡಲಿ. ಸುಮ್ಮನೆ ಬಾಯಿತುಂಬ ಇಂಗ್ಲೀಷು ಮಾತನಾಡುವುದಕ್ಕೆ ಬರುತ್ತದೆಂದು ಏನೇನೋ ಬರೆದಿದ್ದಾರೆ. ನೀವೆಲ್ಲಾ ಯೋಚನೆ

ಮಾಡಿ ನೋಡಿ. ಈಗ ಒಂದು ವಿಶೇಷ ಕಾಲ ರಾಷ್ಟ್ರಕ್ಕೆ ಒದಗಿದೆ; ಈ ತುರ್ತು ಪರಿಸ್ಥಿತಿಯಲ್ಲಿ ನೀವೆಲ್ಲಾ ಚುರುಕಾಗಿ ಇದ್ದುಕೊಂಡು ಕೆಲಸ ಮಾಡಬೇಕು. ಈ ದೃಷ್ಟಿಯನ್ನು ಕಾಂಗ್ರೆಸ್ಸು ಇಟ್ಟುಕೊಂಡು ಒಂದು ಕಾರ್ಯ ನೀತಿಯನ್ನೂ ಹಾಕಿಕೊಂಡ ಬಂದ ಹಾಗೆ ಕಾಣುವುದಿಲ್ಲ. ಅದಕ್ಕೋಸ್ಕರ ಈ ತಿದ್ದುಪಡಿಯನ್ನು ಈ ಸಭೆಯ ಮುಂದೆ ಒತ್ತಾಯ ಮಾಡದೆ, ಇಲ್ಲಿಗೇ ನಿಲ್ಲಿಸಿ ಬಿಡಿ; ಹೀಗೆಯೇ ಕಾನ್‌ಸ್ಟಿಟ್ಯೂಷನ್ ಇರಲಿ. ಮುಖ್ಯವಾಗಿ ಇದು ಬರುವುದಕ್ಕೆ ಕಾರಣವೇ ಇಲ್ಲ. ಇದಕ್ಕೆ ಮೊದಲು social justice ಮತ್ತು ನ್ಯಾಯ ಪಂಚಾಯಿತಿಯನ್ನು ಕಾರ್ಯ ರೂಪದಲ್ಲಿ ತರ್ಜುಮೆ ಮಾಡಿ. ಆವಾಗ ನಿಮ್ಮ ಪ್ರತಿಭೆ ಜಾಸ್ತಿಯಾಗುತ್ತದೆ ಮತ್ತು ನೀವು ನಿಜವಾದ ದೇಶಸೇವೆಮಾಡಿದ ಹಾಗೂ ಆಗುತ್ತದೆ. ಅಲ್ಲಿಂದ ಕಳುಹಿಸಿದ್ದಕ್ಕೆ ನೀವು ರಬ್ಬರ್ ಸ್ಟಾಂಪ್ ಸುಮ್ಮನೆ ಒತ್ತಿದರೆ, ಅದರಿಂದ ಏನೂ ಉಪಯೋಗವಾಗುವುದಿಲ್ಲ. ಗಾಂಧೀಜಿ ಒಂದು ಕಡೆ ಹೇಳುತ್ತಾರೆ: 'The freedom that we gain without struggle is not worth that' ಸಾಕ್ರೆಟೀಸ್ ಅದೇ ಹೇಳುತ್ತಾನೆ: "That which is gained easily has gone easily" ಎಂದರೆ ಇವರಿಬ್ಬರ ದೃಷ್ಟಿ, ತತ್ವ ಒಂದೇ ಆಗುತ್ತದೆ. ಆದ್ದರಿಂದ ದೆಹಲಿಗೆ ಹೋಗಿ ನಮ್ಮ ರಾಜ್ಯಕ್ಕೆ ಇದನ್ನು ಒಪ್ಪುವುದಕ್ಕೆ ಕಷ್ಟವಾಗುತ್ತದೆ, ನಾವು ಮೊದಲು ಕೆಲಸ ಮಾಡಿ ತೋರಿಸುತ್ತೇವೆ, ಅಲ್ಲಿಯವರೆಗೆ ಇದನ್ನು ಹಾಗೆಯೇ ಇಡಿ ಎಂದು ಹೇಳಿ. ಇದನ್ನು ಸ್ಪಷ್ಟಪಡಿಸುವುದಕ್ಕೆ ಒಂದು ನಿಯೋಗವನ್ನೇ ತೆಗೆದುಕೊಂಡು ಹೋಗಿ, ಇದು ಮುಖ್ಯವಾದ ಪ್ರಶ್ನೆ ಎಂದು ಹೇಳಿ. ನಾನು ಈ ತಿದ್ದುಪಡಿಯನ್ನು oppose ಮಾಡುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೆ, ಈ ತಿದ್ದುಪಡಿಯನ್ನು ತಂದಿರತಕ್ಕಂಥ ಮುಖ್ಯ ಮಂತ್ರಿಗಳೇ ಈ ಸಭೆಯಲ್ಲಿ ಇಲ್ಲದಿರುವಾಗ ಈ ವಿಷಯವನ್ನು ಚರ್ಚೆ ಮಾಡುತ್ತಾ ಇದ್ದೇವೆ. ಈ ಕಾಂಗ್ರೆಸ್ ಸರ್ಕಾರ ಯಾವ ಯಾವುದನ್ನು ಯಾವ ಯಾವ ತರಹ ತೆಗೆದುಕೊಂಡು ಬಂದು ಅನುಮತಿ ಪಡೆಯುತ್ತಾರೆಂದು ಈ ತಿದ್ದುಪಡಿಯಿಂದ ತಿಳಿದುಕೊಳ್ಳಬಹುದು. ಈ ತಿದ್ದುಪಡಿಯನ್ನು ಲೋಕಸಭೆಯಲ್ಲಿ ಮತ್ತು ರಾಜ್ಯ ಸಭೆಯಲ್ಲಿ ತೀರ್ಮಾನಮಾಡಿ ಬಿಟ್ಟು ಈ ಶಾಸನ ಸಭೆಗಳ ಒಪ್ಪಿಗೆ ಪಡೆಯಬೇಕೆಂದು ತಂದಿದ್ದಾರೆ. ಎಲ್ಲಾ ಜಟಿನ ಮೇಲೆ ನಿಷ್ಕರ್ಷೆಯಾಗುವುದರಿಂದ, ಮತ್ತು ಡಿಸೈಡ್ ಆಗಿ ಹೋಗಿರುವುದರಿಂದ, ನಾವು ಎಷ್ಟೇ ನ್ಯಾಯವಾಗಿ ಮಾತನಾಡಿದರೂ ಏನೂ ಪ್ರಯೋಜನವಾಗುವುದಿಲ್ಲ, ಎನ್ನುವುದು ತಾನಾಗಿಯೇ ವ್ಯಕ್ತವಾಗುತ್ತದೆ. ರಾಜ್ಯಾಂಗಕ್ಕೆ ತಿದ್ದುಪಡಿ ತರಬೇಕಾದರೆ, ಹಿಂದೂಸ್ಥಾನದಲ್ಲಿರತಕ್ಕಂಥ ಬಹು ಸಂಖ್ಯೆಯ ಜನಗಳಿಗೆ ಏನಾದರೂ ಅಭದ್ರತೆಯಿದ್ದು, ಬಹಳ ತೊಂದರೆ ಇದ್ದರೆ ಒಂದು ತಿದ್ದುಪಡಿ ತರಬೇಕಾದ್ದು ಸರ್ಕಾರದ ಕರ್ತವ್ಯ. ಏನೋ ಯಾರೋ ತಮಗೆ ಬೇಕಾದವರಿಗೆ ಅಥವಾ ತಮ್ಮ ಹತ್ತಿರದ ಬಂಧುಗಳಿಗೆ ಸರ್ವೀಸಿನಲ್ಲಿ ಇನ್ನೂ ನಾಲ್ಕು ವರ್ಷ ಇರಲು ಅವಕಾಶ ಮಾಡಿಕೊಟ್ಟು ಮುಂದುವರಿಸಬೇಕು ಎಂದು, ಇಂಥ ಇಂಥ ಸಣ್ಣ ಕೆಲಸಕ್ಕೆ ಕೈ ಹಾಕಿದರೆ ಏನೆಂದು ಹೇಳೋಣ.

Mr. DEPUTY SPEAKER.—The Hon'ble member cannot impute motives.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮೋಟೀವ್ ಇಲ್ಲದೆ ಇಂಥದ್ದನ್ನು ತರುವುದಕ್ಕೆ ಅವಕಾಶ ಇಲ್ಲವೆ ಇಲ್ಲ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಯಾರಿಗಾದರೂ ತಮಗೆ ಬೇಕಾದವರಿಗೆ ಒಂದು ನೌಕರಿಯನ್ನು ಸರ್ಕಾರದವರು ಕೊಡಬೇಕಾದರೆ, minimum qualification, L. S. ಎಂದು ಫಿಕ್ಸ್ ಮಾಡುತ್ತಾರೆ. ಆ ಪೋಸ್ಟಿಗೆ ಗ್ರಾಜುಯೇಟುಗಳು, ಡಬಲ್ ಗ್ರಾಜುಯೇಟುಗಳಿಂದ ಅರ್ಜಿಗಳು ಬಂದಿರುತ್ತವೆ. ತಮಗೆ ಬೇಕಾದವನೊಬ್ಬನನ್ನು ತೆಗೆದುಕೊಂಡು, ಮಿಕ್ಕವರನ್ನೆಲ್ಲಾ ಗ್ರಾಜುಯೇಟಾದವರನ್ನೇ ತೆಗೆದುಕೊಳ್ಳುತ್ತಾರೆ. ತಮಗೆ ಬೇಕಾದವನು S.S.L.C. ಯಲ್ಲಿ ಫೇಲಾಗಿದ್ದರೆ, S.S.L.C. faield qualification ಇರಬೇಕೆಂದು advertise ಮಾಡುತ್ತಾರೆ Intermediate passed, B.A., ಮುಂತಾದ ಜಾಸ್ತಿ ಅರ್ಹತೆ ಇರುವದರಿಂದ ಆ ಪೋಸ್ಟಿಗೆ ಸಾವಿರಾರು ಅರ್ಜಿಗಳು ಬಂದಿರುತ್ತವೆ. ಆದರೆ ಅ S.S.L.C. ಫೇಲ್ ಆದವನನ್ನೇ ಕೆಲಸಕ್ಕೆ ಆರಿಸಿಕೊಳ್ಳುತ್ತಾರೆ. ಹಾಗೆಯೇ ನಿವೃತ್ತ ವಯಸ್ಸಿನ ಪರಿಮಿತಿಯನ್ನು ಹೆಚ್ಚಿಸುವ ಒಂದು ಸಣ್ಣ ವಿಷಯವನ್ನು ರಾಜ್ಯಸಭೆ, ಲೋಕಸಭೆ, ಶಾಸನ ಸಭೆಗಳ ಮುಂದೆ ತಂದು, ಚರ್ಚೆಮಾಡಿ, ರಾಜ್ಯಾಂಗವನ್ನು ತಿದ್ದುಪಡಿ ಮಾಡುವುದು ಎಂದರೆ ಈ ರಾಷ್ಟ್ರಕ್ಕೆ ಗೌರವ ತರುವ ವಿಷಯವಲ್ಲ. ಮೋಟೀವ್ ಇಲ್ಲದೆ ಈ ತಿದ್ದುಪಡಿ ಬಂದೇ ಇಲ್ಲ. ಯಾವ ನ್ಯಾಯಾಧೀಶರುಗಳ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ತಂದರೋ, ಅವರು ಈಗ ಸರ್ವೀಸಿನಲ್ಲಿ ಇದ್ದಾರೋ ಇಲ್ಲವೋ, ಅಥವಾ ಒಪ್ಪಿಗೆ ಪಡೆಯುವವರೆಗೂ ಇರುತ್ತಾರೋ, ಇಲ್ಲವೋ. ಇಂಥ ಮಸೂದೆಗಳನ್ನು ತರುವುದು ಅನ್ಯಾಯ. ಹಿಂದೂಸ್ತಾನದಲ್ಲಿ ಪ್ರತಿಯೊಂದು ಸಣ್ಣ ಸಂದರ್ಭದಲ್ಲಿಯೂ, ತಮ್ಮ ಹಿತಾಕಾಂಕ್ಷಿಗಳಿಗೆ ಉಪಕಾರ ಮಾಡಬೇಕು, ತಮಗೆ ಬೇಕಾದವರಿಗೆ ಉದ್ಯೋಗ ಅವಕಾಶ ಕಲ್ಪಿಸಬೇಕು ಎಂಬ ಭಾವನೆಯಿಂದಲೇ ಈ ಅಮೆಂಡ್‌ಮೆಂಟನ್ನು ತಂದಿದ್ದಾರೆಂಬುದು ನಿರ್ವಿವಾದ ಎಂದು ಹೇಳುತ್ತೇನೆ.

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಒಬ್ಬ ಅಧಿಕಾರಿಯನ್ನು ಬೇರೊಬ್ಬ ಅಧಿಕಾರಿ enquiry ಮಾಡಿ ಅವನು ತಪ್ಪಿತಸ್ಥನೆಂದರೆ ಅದೇ final judgement ಎಂದರೆ ನಾವು ಆ ಅಧಿಕಾರಿಗೆ ನಿಜವಾಗಿಯೂ ನ್ಯಾಯವನ್ನು ದೊರಕಿಸಿ ಕೊಟ್ಟ ಹಾಗೆ ಆಯಿತೇ ? ಒಬ್ಬ ಅಧಿಕಾರಿಗೆ ಇನ್ನೊಬ್ಬ ಅಧಿಕಾರಿಯ ಮೇಲೆ ದ್ವೇಷವಿದ್ದರೆ, ಅವನಿಗೆ ವಿರೋಧವಾಗಿ ತೀರ್ಪು ಕೊಡುವುದಕ್ಕೆ ಅವಕಾಶವಿರುತ್ತದೆ. ಆದ್ದರಿಂದ ಇನ್ನೊಬ್ಬರ ಹತ್ತಿರ enquiry ಮಾಡಿಸಿದರೆ ಆಗತಕ್ಕ ತೊಂದರೆಯಾದರೂ ಏನು ? ಅವನಿಗೆ ನ್ಯಾಯ ದೊರೆಯುವುದಕ್ಕೆ ಅವಕಾಶ ವಿರಬೇಕು.

3-30 P.M.

ಜಡ್ಜಿಗಳ transfer ವಿಷಯದಲ್ಲಿ ಅಲೋಯನ್ಸ್ ಕೊಡಬೇಕು ಎಂದು ಇದೆ. ಹಿಂದೂಸ್ಥಾನ ದಲ್ಲಿ ಎಲ್ಲಿ ಬೇಕಾದರೂ ಸರ್ವಿಸ್ ಮಾಡಬೇಕು ಎಂದಿದೆ. ಆಯಾಯಾ ದೇಶದ ಜನರನ್ನು ಆಯಾ ದೇಶದಲ್ಲಿ ನೇಮಕ ಮಾಡಿಕೊಳ್ಳುವುದರ ಅಗತ್ಯವಿಲ್ಲ. ಇಲ್ಲಿಯವರನ್ನು ಬೇರೆ ಕಡೆಗೆ ಹಾಕಿ, ಬೇರೆ ಕಡೆಯವರನ್ನು ಇಲ್ಲಿಗೆ ಹಾಕುವುದು ಉತ್ತಮ.

ರಾಜ್ಯಾಂಗಕ್ಕೆ ಪದೇ ಪದೇ ಇಂಥ ತಿದ್ದುಪಡಿಗಳನ್ನು ತಂದರೆ ನಮ್ಮ ಹಿಂದೂಸ್ಥಾನದ ರಾಜ್ಯಾಂಗಕ್ಕೆ ಅಪಮಾನ ಮಾಡಿದ ಹಾಗೆ ಆಗುತ್ತದೆಂದು ಹೇಳುತ್ತೇನೆ.

[Mr. Speaker in the Chair.]

† Sri S. NIJALINGAPPA.—This Resolution is before the House for the ratification of the 15th amendment of the Constitution. The one point that has been urged by many Hon'ble Members is that we should not lightly deal with the Constitution and amend it at all. After all, let me submit that our Constitution is a written Constitution but flexible. Unless the Constitution becomes flexible, it is very difficult that it can subserve the interests of the nation for any purpose. At a time when we are building up this nation, many changes will have, of necessity, to be made and it is, therefore, that it is sometimes thought necessary to amend the Constitution and it is not so except under grave necessity and imperative necessity. This is the 15th amendment and immediately thereafter we have the 16th amendment. During the past 16 years we have had only 16 amendments, one amendment a year on an average. I do not think it is much, considering the vast amount of change that is taking place in this nation, politically and much more so to subserve the interests of the nation in building up its economy. Therefore, to that end, we have to see that the Constitution subjects itself usefully and pliably.

Regarding the present amendment, of course, some friends, like my friend Sri Revnnasiddappa, always find suspicion ; he thinks that something is there which we mean it is not very strange. I have absolutely no idea that there is anything which motivates the Central Government and the Parliament in having passed this Bill. Absolutely nothing except that sometimes it becomes necessary to appoint Judges and retired Supreme Court Judges are not available in a particular contingency. Therefore, they go to High Court Judges. It is not a common thing ; it is most unusual. Even for unusual things we have to prepare ourselves. No doubt, the Law Commission has recommended

that the age of retirement of High Court Judges may be raised to 65 years; I for one would have it at 65 years. Let nobody mistake at it. The Judges who are to be appointed would be men of mature knowledge, probity and wisdom and as time goes on, they are supposed to become more mellow to appreciate matters placed before them for adjudication. I am told in England, time was when the Judges would retire at will and in America even today there is no time limit for retirement, though sometimes they retire at 70 years. In England, the law has been amended to let them retire at 72 years. 65 years in India would not be much. You are living for a longer period than before; the span of life has increased during the last 16 years from 26 to 42 years. Therefore, 65 years is not much. But all the same, I would now stand at 62 years because it is a compromise as it were. The Law Commission has recommended that even Judges of the High Court may be allowed to retire at the age of 65; but they put in another clause, namely, that those that are already there should retire at 60 years. To bring about a compromise and, according to some friends, to see that the younger men will not lose chances, it has been made 62 years. I think it is a very welcome compromise and the Parliament in its wisdom has accepted 62 years.

Much was made of the amendment to Article 311. In fact, as one who knows something about administration, to punish erring officials has become a problem. Therefore, it is to be made quicker and more expeditious. I do not think even the amendment, as it is today will satisfy me, but it is something better than the old, more cumbersome procedure in dealing out punishment to erring officers. Therefore, it is an improvement over what is existing today. And regarding other clauses of the Bill as it has been passed by the Parliament, nothing much has been made out except regarding transfer of Judges. Transfer of Judges is not made on any political grounds. To bring about a sort of integration even in the judicial service, they have to go from one place to another. I do not mean if judges are allowed to remain in their native State, they will not be behaving well. In fact, there is absolutely not even a whisper of suspicion about the integrity of our Judges. It is a matter of pride for every Indian that the Indian Judges as a class, are very much respected and very much honoured not only in our country but also outside. I have got everything to say in their favour. This question of transfer is contemplated because we want that they should go from one place to another. For a Judge who has lived in a particular State, to go from that State and live in a different State is very difficult because he has accustomed himself to a particular standard of living. Therefore, when he goes out, it is but natural that he must be enabled to go there and live in comfort. We are in the habit of saying that they get a lot of money. They do get a lot of money, but people who get a lot of money, spend a lot of money. I know the case of an Advocate who was made Judge of the Bombay High Court. He could not remain in that position for more than 4 months. I asked him the reason. He said: 'I cannot cope with this pay. It does not satisfy me even in regard to paying off my establishment." As an Advocate, that gentleman was

(SRI S. NIJALINGAPPA)

getting quite a lot of money. Therefore, we shall not say that what is paid to them is very high. No doubt, from a common point of view, it may look a bit high. They must be kept free of troubles, free of economic difficulties; therefore, their pay is made purposely high and when they are transferred they have to adjust themselves. Therefore, something more has to be given.

I do not think there is any thing more for me to say. There is welcome for this, except that certain criticisms were made. I request the House to ratify the Resolution. Possibly they will read the Debate as published. I request the House to ratify the Resolution.

MR. SPEAKER.—The question is:

"That this House ratifies the amendments to the Constitution of India, proposed to be made by the Constitution (15th Amendment) Bill, 1963, as passed by Houses of Parliament."

The Resolution was Adopted.

Official Resolution re: Ratification of the 16th Amendment to the Constitution

SRI S. NIJALINGAPPA (Chief Minister).—I beg to move:

"That this House ratifies the amendments to the Constitution of India, proposed to be made by the Constitution (16th Amendment) Bill, 1963 as passed by Houses of Parliament."

MR. SPEAKER.—Resolution moved:

"That this House ratifies the amendments to the Constitution of India, proposed to be made by the Constitution (16th Amendment) Bill, 1963 as passed by Houses of Parliament."

† SRI S. NIJALINGAPPA.—Sir, this is a simple measure and I think nobody will speak against the spirit underlying the passing of this Bill by the Parliament. I am sure that what has been urged already would not be urged again. Enough has been said and there is nothing in urging the same point. Sir, there are certain attempts to interfere with the unity of this country. There are certain political parties which think of disintegrating the country. This has to be put an end to. It is with that end in view, that the Government appointed the National Integration Council who recommended that when Members set up as candidates to the Legislatures or the Central Legislature, they must make it a point and take an Oath that they stand for the integration of this country. Therefore, it is a simple amendment and I do not think Members may speak much about it. I commend it for the ratification of the House.

† ಶ್ರೀ ವಿ. ಎಂ. ದೇವ್.—ಸ್ವಾಮಿ, ಇದರಲ್ಲಿ ನಾನು ಒಂದು ಮುಖ್ಯವಾದ ಅಂಶವನ್ನು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ. ಅದೇನೆಂದರೆ ನಮ್ಮ ರಾಜ್ಯಾಂಗದ ತಿರುಳಾದ ಸಾಮಾಜಿಕ

ನ್ಯಾಯಪಡೆಯಲಿಕ್ಕೆ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಎನ್ನುವ ನಿಮ್ಮ ಧ್ಯೇಯವನ್ನು ಪರಿಪಾಲಿಸಿದರೆ ಒಳ್ಳೆಯದಾಗುತ್ತದೆ ಎಂದು ಅನಿಸುತ್ತದೆ. ಇಂತಹ ನಿರ್ಣಯವನ್ನು ಸ್ವಾತಂತ್ರ್ಯ ಬಂದ ತಕ್ಷಣ ತೆಗೆದುಕೊಂಡು ಬಂದಿದ್ದರೆ ಇದಕ್ಕೆ ಅರ್ಥ ಇರುತ್ತಾ ಇತ್ತು—ಸಾಮಾಜಿಕ ನ್ಯಾಯ ದೊರಕುವ ಹಾಗೆ, ರಾಜ್ಯಾಂಗದ ಪ್ರಕಾರ ಕೆಲಸ ಮಾಡುತ್ತೇವೆ ಎಂದು ಪ್ರಮಾಣ ತೆಗೆದುಕೊಳ್ಳುವುದಕ್ಕೆ ಅದು ಒಂದು ಸಂದರ್ಭವಾಗಿತ್ತು. ಅದರೆ ಈಗ ಇಂತಹ ಒಂದು ಉಗ್ರ ಪರಿಸ್ಥಿತಿ ಇರುವಾಗ ಇದನ್ನು ತಂದದ್ದರಿಂದ ಏನಾಗಿದೆ ಎಂದರೆ ಇದು ಒಂದು ಅಂಶವನ್ನು ಚೆನ್ನಾಗಿ ತೋರಿಸುತ್ತದೆ—ಸ್ವಾತಂತ್ರ್ಯ ಬಂದು 16 ವರ್ಷಗಳ ವರೆಗೂ ಸುಮ್ಮನೆ ಇದ್ದು ಈಗ ತಂದಿರಬೇಕಾದರೆ ಇದು ಸರ್ಕಾರದ ಫೇಲ್ಯೂರು ಎಂದು ಚೆನ್ನಾಗಿ ಗೊತ್ತಾಗುತ್ತದೆ. ಇದು ಒಂದು ದೃಷ್ಟಿಯಿಂದ ಹಾರ್ಟ್‌ಸರ್ಚಿಂಗ್ ಆಗಿರಬೇಕು, ಆ ದೃಷ್ಟಿಯಿಂದ ತಾರ್ಕಿಕವಾಗಿ ನೋಡಿದರೂ ಸಾಮಾಜಿಕ ನ್ಯಾಯಕೊಡಬೇಕೆಂದು ನಿಮ್ಮ ಮನಸ್ಸಿನಲ್ಲಿ ಇದೆ. ಅದಕ್ಕೆ ಸಾಧನವಾಗಿ ಏನು ಮಾಡಬೇಕೆಂದರೆ ಅದನ್ನು ನೀವೇ ಹೇಳಿದ್ದೀರಿ... ಆದರೆ ಅದು ಪರಿಣಾಮಕಾರಿಯಾಗಿ ಜಾರಿಗೆ ತರಲು! ಆಡಳಿತ ವರ್ಗದಲ್ಲಿ—ಮಂತ್ರಿ ಮಂಡಲದಲ್ಲಿ—ಒಟ್ಟಿನಲ್ಲಿ ಸರ್ವೇಸಾಮಾನ್ಯವಾಗಿ ನಿಮ್ಮ ತತ್ವದವಿಚಾರದಲ್ಲಿ ಹೊಂದಾಣಿಕೆಯಾದ ತಿಳಿವಳಿಕೆ ಇದೆಯೇ ? ಒಂದು ವೇಳೆ ಅದನ್ನು ಜಾರಿ ಮಾಡಿದ್ದರೆ ಈ ತರಹ ಸಂದರ್ಭ ಬರಬಾರದಾಗಿತ್ತು ಎಂದು ಹೇಳುತ್ತೇನೆ. ಸೋಷಿಯಲ್ ಜಸ್ಟಿಸ್‌ನ್ನು ಬೆಳಸಬೇಕಾದರೆ ಅದಕ್ಕೆ ಮುಖ್ಯವಾದ ಆಯುಧ ಯಾವುದು ಎಂದರೆ ಸಮಾಜವಾದದ ತತ್ವ. ಅದ್ದರಿಂದ ನಾವು ಬಹಳ ಚೆನ್ನಾಗಿ ಆಲೋಚನೆ ಮಾಡಬೇಕು. ಏಕೆಂದರೆ ನೀವು ಎಲ್ಲೆಲ್ಲೂ ತಪ್ಪುದಾರಿ ಹಿಡಿದಿರುತ್ತೀರಿ. ಇದನ್ನು ಅನಲೈಸ್ ಮಾಡಬೇಕಾದರೆ ಸಮಾಜವಾದದ ತಿರುಳನ್ನು ಅನ್ವಯ ಮಾಡುವುದರಲ್ಲಿ ತಪ್ಪಿದ್ದೀರಿ ಎಂದು ಬಹಳ ಚೆನ್ನಾಗಿ ಗೊತ್ತಾಗುತ್ತದೆ. ಅದ್ದರಿಂದ ನಾನು ಹೇಳುವುದು ಇಷ್ಟು—ರಾಜ್ಯಾಂಗ ಎನ್ನುವುದು ಬಹಳ ಪವಿತ್ರವಾದುದು. ಅದು ಎಷ್ಟು ಅಗಾಧವಾಗಿದೆ ಎಂದರೆ ಅದಕ್ಕೆ ಒಂದೂ ತಿದ್ದುಪಡಿ ತರಬಾರದು ಎಂದರೆ ಅದು ತಪ್ಪಾಗುತ್ತದೆ. ಅವಶ್ಯಕವಿದ್ದಾಗ ತರಬೇಕಾಗುತ್ತದೆ. ಆದರೂ ಕೂಡ ರಾಜ್ಯಾಂಗದ ಧ್ಯೇಯಕ್ಕೆ ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ತೊಂದರೆ ಬಂದರೆ ಅಂಥ ತಪ್ಪು ಆದರೆ ಆಗ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ತುರ್ತು ಪರಿಸ್ಥಿತಿ ಇದೆ; ಆದ್ದರಿಂದ ಇದನ್ನು ತಂದಿದ್ದೀರಿ. ಅದರೆ ಹಾರ್ಟ್‌ಸರ್ಚಿಂಗ್ ಇದ್ದರೆ ಸಮಾಜವಾದದ ರೀತಿಯಲ್ಲಿ ಇದನ್ನು ಜಾರಿ ಮಾಡುವುದರಲ್ಲಿ ಎಲ್ಲೆಲ್ಲಿ ಭ್ರಷ್ಟತೆ ಇದೆಯೋ, ಅದನ್ನು ಚೀಫ್ ಮಿನಿಸ್ಟರು ದೆಹಲಿಯಿಂದ ಬಂದ ಮೇಲೆ ಹೇಳಬೇಕೆಂದು ಹೇಳುತ್ತೇನೆ. ಸಮಾಜವಾದ ಎಂದು ಇಷ್ಟು ದಿವಸಗಳಿಂದ ಮಾತನಾಡುತ್ತಾ ಇದ್ದೇವೆ, ಎಲ್ಲರಿಗೂ ಗೊತ್ತಿದೆ. ಅದನ್ನು ಅನುಸರಣೆಯಲ್ಲಿ ತಂದಾಗ ಅದರ ಪರಿಣಾಮ ಜನರಿಗೆ ಗೊತ್ತಾಗುತ್ತದೆಯೇ ಹೊರತು—ಸಮಾಜವಾದ ಎಂದರೆ ಸೋಷಿಯಲ್ ಪ್ಯಾಟ್ರನ್ ಎಂದು ಗೊತ್ತಾಗುತ್ತದೆಯೇ ಹೊರತು ಇನ್ನೇನೂ ಅಲ್ಲ. ಆದರಿಂದ ತುರ್ತು ಪರಿಸ್ಥಿತಿಯ ದೃಷ್ಟಿಯಿಂದ ಸಮಾಜವಾದದ ದೃಷ್ಟಿಯಲ್ಲಿ ಯಾವ ತರಹ ಇದನ್ನು ಜಾರಿ ಮಾಡಬೇಕೋ. ಆ ತರಹ ಜಾರಿ ಮಾಡಿದರೆ ಒಳ್ಳೆಯ ಮನೋಭಾವ ಹುಟ್ಟಿ ಈ ತರಹ ಬಿಲ್ಲನ್ನು ತರತಕ್ಕ ಒಂದು ಅವಕಾಶ ಇಲ್ಲದ ಹಾಗೆ ಆಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri S. M. KRISHNA.—Sir, I am in agreement with the principles of this amendment. It primarily underlines the unity of this country. There have not been many instances wherein that unity has been questioned effectively. It is always a salutory principle which the Legislatures have to bear in mind that the Constitution is something sacred and should not be tampered with too often, as is being done in this country. Our Constitution is the product of a great deal of deliberation, contemplation, debate and consideration at the hands of the founding-fathers of our Constitution. It will be worth our time to ponder over the question as to, in similar circumstances, how democratic Republics in other countries would have acted. My own thoughts go to that of the United States of America. It has been a democratic Republic for 170 or 180 years and in all their existence they have amended their Constitution about 17 or 18 times.

•Mr. SPEAKER.—How many articles are there in that Constitution?

Sri S. M. KRISHNA.—They have far fewer articles than we have. That is all the more the reason why we should not have attempted to amend the Constitution so frequently. The fact that we have given the highest consideration to every article enshrined in the Constitution goes to strengthen my argument that it should not be amended of and on.

Sir, the amendment before the House is certainly something to be lauded. All of us know that in certain parts of our country there has been a tendency, a lose talk of cessation or division. The Dravida Munnetra Kazhagam of Madras State want to create a separate Dravidanad in India, or out of India. If anybody advocates the theory of separation we will have to look at such attitude or movement with great suspicion. We will have to suspect their *bona fides*, their loyalty, etc. This particular amendment goes to strengthen the unity that can be seen in all parts of the country today. But one thing really bothers me, that is the time factor involved in this. We are trying to amend the Constitution when the nation is under an Emergency. External dangers and external aggression, have alarmed the country and even a political party which speaks of cessation has declared that when the Chinese are menacing the borders of India, they as a political party will fight the Chinese menace. This has been the declared policy of even an extreme political party like the D. M. K. of Madras. It would have been quite reasonable to have taken them by the assurance to the country. Nonetheless this amendment has been passed by the Houses of Parliament and it is now before us for ratification. The Chief Minister, while introducing this official resolution, pointed out that this was a very simple measure. I am likely to agree with the Chief Minister. This is a simple measure inasmuch as it claims of every person, who wants to be a candidate either to the Lok Sabha or the Rajya Sabha or to a State Legislature, to take an oath that he would work within the framework of the Constitution and also that he would not endanger the unity of this country. I have personally no hesitation in taking an oath like this. All the Legislatures of our country, in fact every fact of our activity, are within the framework of the Constitution. If anybody tries to endanger the situation, we can always take resort to the court of law to establish the supremacy of the Constitution. After all the oath to be made by a Member of the Legislature of a State is a very simple one. We have all taken the oath before we started functioning as Members of this august House. One thing we shall have to bear in mind, that is, the unity of this country must not be taken for granted. The unity may be threatened not only by forces which cry hoarse about separation but, also forces that work in the name of language, in the name of one community or the other, in the name of establishing a national language and so on. They might at a particular time take dangerous shapes and go out-of-hand. We will have to be eternally vigilant where the unity of this country is concerned, where the supremacy of the Constitution is threatened. This measure might ultimately go to reinforce the unity of this country and it might also be a source of inspiration to one and all, to defend the frontiers, to defend the invoilability of this sacred country of ours.

MR. SPEAKER.—I will extend the time of discussion on this resolution till 4.30 P. M.

4-00 P.M.

†SRI V.S. PATIL (Belgaum):—Sir, as the Hon'ble Chief Minister said this is a simple measure, I agree with him because it covers a few words and about two pages. But, the intention and the purpose which underlines it, at the present moment during the emergency, is laudable. There is no question about it. The integrity of our country must be maintained at any cost and there are no two opinions about that. But, we have to make some distinction between the imposed loyalty and the loyalty that springs from the heart. We must create such conditions in our country that loyalty to the Constitution must spring from the heart of every citizen. It should not be the one imposed by force of law and we have got a very bad experience of this at the time when our country achieved independence. Because of certain suspicions of the Muslim community which is the majority community in the present Pakistan, they felt that they must have their own separate State. Their suspicion was that when once they were included in India, they might not get their legitimate rights and our politicians at that time failed to convince them. Even now, we are independent. It means the people of this country are independent. As we have seen in recent times, the imposition of Hindi is opposed by some of the States or people from South India. If we impose such things upon them, it is likley that this imposition may come in the way of integrity itself because forcing something upon unwilling people may create the contrary effect for the prevention of which we are now trying through this amendment. If these schedules and amendments to the Constitution are enforced, many people from South India will come forward and say that "our liberty of speech is gagged by the Northeners." This will definitely be the reaction especially of those who are suspicious about the *bona fide* of the national language and other matters in our country. They clearly say "allegiance to the Constitution of India as by law established"—it is perfectly right. Further, it is said: "I will uphold the sovereignty". That is also correct. But, about the integrity, some people may.........

MR. SPEAKER.—Integrity of the country is unassociated with any language whatsoever.

SRI V. S. PATIL.—That is the fear that was expressed by D. M. K.

MR. SPEAKER.—It is unfounded.

SRI V. S. PATIL.—That is why I suggest that we have to convince the people; it is not separation of those people but for maintaining the unity of India and for making our country as strong as possible, and for the purpose of defending it against any aggression either internal or external, that we are amending this. They must be convinced. Without conviction, it will defeat the very purpose for which we simply

(SRI V. S. PATIL)

impose the law. That is why I give qualified support to this measure. Our Government must take proper steps to see that the people are convinced that the fissiparous policies that are now and for a long time creating some sort of disturbance in the country are not proper and conducive so far as the integration of the country is concerned. The conviction must come from the hearts, but not imposed by law. That must be done by our leaders. This alone will be more practicable and then no question of taking an oath will arise.

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಸಂಸತ್ತು ಅಂಗೀಕರಿಸುವ ಈ ರಾಜ್ಯಾಂಗಕ್ಕೆ ತಂದಿರುವ ಹದಿನಾರನೆಯ ತಿದ್ದುಪಡಿ ಬಗ್ಗೆ ಈಗ ತಾನೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಪಾಟೀಲರವರು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಯೋ ಅದನ್ನು ನಾನೂ ಸಮರ್ಥಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಾವು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೇವೆ, ಆದರೆ ಅದು ಕೆಲವರಿಗೆ ಕಾಣುವುದಿಲ್ಲ, ಕೆಲವರಿಗೆ ಕೇಳಿಸುವುದಿಲ್ಲ ಎಂದು ಮಾನ್ಯ ಮುಖ್ಯ ಸಚಿವರು ಹೇಳಿದರು. ಆದರೆ ಅವರು ನಮ್ಮನ್ನು ಬಹಳ ಸಂಶಯ ದೃಷ್ಟಿಯಿಂದ ನೋಡುತ್ತಿದ್ದಾರೆ. ಆದುದರಿಂದ ನಮ್ಮನ್ನು ಹಾಗೆ ಅಪಾದಿಸುತ್ತಾರೆ. ನಿಜವಾಗಿಯೂ ಅವರು ಒಳ್ಳೆಯ ಕೆಲಸ ಮಾಡುತ್ತಾ ಹೋಗಿದ್ದರೆ ಕಾಮರಾಜ ಸೂತ್ರ ಬೇಕಾಗಿರಲಿಲ್ಲ. ಕೃಷ್ಣಮೆನನ್ನರು ರಾಜೀನಾಮೆ ಕೊಡಬೇಕಾಗಿರಲಿಲ್ಲ.

Mr. SPEAKER.—Kindly come to the subject matter.

ಶ್ರೀ ಎಸ್. ಗೋಪಾಲಗೌಡ.—ಅವರು ಹೇಳುವ ಮಾತಿನಲ್ಲಿ ಒಳ್ಳೇ ಉದ್ದೇಶ ಇದ್ದಹಾಗೆ ಕಾಣುವುದಿಲ್ಲ. ಅವರು ಮಾಡಿದ ಕೆಲಸ ಎಲ್ಲಾ ಒಳ್ಳೆಯದಾಗಿಲ್ಲ ಎಂದು ಈ ಸಂದರ್ಭದಲ್ಲ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಬಯಸುತ್ತೇನೆ. ಪದೇ ಪದೇ ಈ ರೀತಿ ರಾಜ್ಯಾಂಗಕ್ಕೆ ತಿದ್ದುಪಡಿ ತರುವುದು ಒಳ್ಳೆಯದಲ್ಲ. ರಾಜ್ಯಾಂಗ ಒಂದು ಪವಿತ್ರವಾದ ಗ್ರಂಥ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಆದರೆ ಮನ ಬಂದಾಗ್ಗೆ ಅದನ್ನು ತಿದ್ದುಪಡಿ ಮಾಡುವುದು ಸಮಂಜಸವಲ್ಲ. ನಮ್ಮ ಅನುಕೂಲಕ್ಕೆ ತಕ್ಕಹಾಗೆ ತಿದ್ದುಪಡಿ ಮಾಡುವುದು ಸರಿಯಲ್ಲ. ಇಡೀ ಜನಾಂಗದ ಹಿತ ಅನುಲಕ್ಷಿಸಿ ಮಾಡದೇಹೋದರೆ ಅದು ಸರಿಯಲ್ಲ. ಈಚೆಗೆ ನಮ್ಮ ದೇಶದಲ್ಲಿ ಕೆಲವು ಗಡಿಗಳಲ್ಲಿ ಪ್ರತ್ಯೇಕವಾದ ನಾಡನ್ನು ಸ್ಥಾಪನೆ ಮಾಡುವಂತೆ ಕೇಳಿಬರುತ್ತದೆ.

ಆ ಭಾವನೆಗಳಿಂದ ಹೋಗಲಾಡಿಸುವುದಕ್ಕಾಗಿ, ತಿದ್ದುಪಡಿ ಬಹಳ ಅವಶ್ಯಕ ಎಂದು ಸಂಸತ್ತಿನವರು ಭಾವಿಸಿ ತಂದಿದ್ದಾರೆ. ಯಾವ ಪುಸ್ತಕದಲ್ಲಿಯೇ ಆಗಲಿ ಬಹಳ ಕಟುವಾಗಿ, ನಿಷ್ಠುರವಾಗಿ ಬರೆದಿರತಕ್ಕಂಥಾದನ್ನು, ಜಗತ್ತಿನ ಯಾವುದಾದರೂ ದೇಶದಲ್ಲಿ ಜನತೆ ಒಪ್ಪಿಕೊಂಡು ಅದರಂತೆ ನಡೆದದ್ದು ಉಂಟೋ ಎಂಬುದು ಪ್ರಶ್ನೆ. ಬ್ರಿಟನ್ನಿನ ಜನ ರಾಜ್ಯಾಂಗವನ್ನು ಬರೆದಿಡದಿದ್ದರೂ ಅವರು ಬಹಳ ಒಳ್ಳೆಯ ರೀತಿಯಲ್ಲಿ ರಾಜ್ಯಭಾರ ಮಾಡಿಕೊಂಡು ಹೋಗುತ್ತಿದ್ದಾರೆ. ಯಾವುದಾದರೂ ಒಂದು ದೇಶದಲ್ಲಿ ಒಳ್ಳೆಯ ಗ್ರಂಥ ಬರೆದಿಡಲ್ಪಟ್ಟಾಗ ಅದು ನಮ್ಮನ್ನು ಆಳುತ್ತದೆ, ಆದರಿಂದ ನಾವು ಸುರಕ್ಷಿತ, ನಾವು ಐಕ್ಯತೆಯನ್ನು ಕಾಪಾಡಿಕೊಂಡು ಬರಹುದು ಎನ್ನುವ ಭಾವನೆ ನಮಗೆ ಸಮರ್ಥನೆ ಕಂಡುಬರಲಿಲ್ಲ. ಭಾರತದ ಸಾರ್ವಭೌಮತ್ವ ಮತ್ತು ಸಮಗ್ರಕತೆ, ಇವೆರಡನ್ನೂ ಕಾಪಾಡಬೇಕು. ಭಾರತದ ಪ್ರತಿಯೊಬ್ಬ ನಾಗರಿಕನೂ ಈ ಭಾವನೆಯನ್ನು ಹೊಂದಿರಬೇಕು. ಇದು ಈ ತಿದ್ದುಪಡಿಯ ಮೂಲ ಭಾವನೆ. ಕೇವಲ ಭಾವನೆಗಳಿಂದ, ಅಥವಾ ಕೇವಲ ಒಳ್ಳೆಯ ಭಾವನೆಗಳಿಂದ, ನಾವು ಈ ರಾಷ್ಟ್ರದ ಸಾರ್ವಭೌಮತ್ವಕ್ಕೆ ಮತ್ತು ಸಮಗ್ರಕತೆಗೆ ಏನಾದರೂ ಮಾಡುವುದಕ್ಕೆ ಸಾಧ್ಯವೆ ಅನ್ನುವುದನ್ನು ವಿಚಾರ ಮಾಡುವಾಗ, ಅದು ಸಾಧ್ಯವಿಲ್ಲ ಅನ್ನುವುದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಮನೆಯಲ್ಲಿ ಅನೇಕ ಅಣ್ಣತಮ್ಮಂದರಿದ್ದರೆ, ಆ ಮನೆಯಿಂದ ಹೊರಟು ಹೋಗುವಾಗ ಯಾವನಿಗೂ ಆಸ್ತಿಪಾಸ್ತಿ ದೊರೆಯುವುದಿಲ್ಲ ಎಂಬ ಒಂದು ಕಾನೂನನ್ನು ನಾವು ಮಾಡಿಕೊಳ್ಳಬಹುದೇ ಹೊರತು, ಹೊರಕ್ಕೆ ಹೋಗುವುದಕ್ಕೆ ನನಗೆ ಸಮ್ಮತಿಯಿಲ್ಲ ಅನ್ನುವುದು ಬಹಳ ಕಷ್ಟದ ಪ್ರಶ್ನೆಯಾಗುತ್ತದೆ. ಹಾಗೇನೆ ದೇಶವಲ್ಲಿ ಇವತ್ತು ನಾವು ಒತ್ತಾಯವನ್ನು ಹಾಕಿ ಪ್ರತಿಯೊಬ್ಬನೂ ರಾಷ್ಟ್ರಕ್ಕೆ ನಿಷ್ಠೆಯನ್ನು ತೋರಿಸಬೇಕು ಎಂದು ಯಾವಾಗಲೂ ಕೇಳಿದ್ದೇ ಆದರೆ, ಎಷ್ಟರ ಮಟ್ಟಿಗೂ ಆ ಮಾತಿನಲ್ಲಿ ಅರ್ಥವಿಲ್ಲ, ಪ್ರಾಯಶಃ ಆ ಮಾತನ್ನು ಪರಿಪಾಲಿಸುತ್ತೇವೆಯೇ ಎನ್ನುವುದು ಇನ್ನೊಂದು ಪ್ರಶ್ನೆ.

ಮುಖ್ಯವಾಗಿ ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಐಕ್ಯದ ಮಾತುಗಳನ್ನಾಡಿ, ಅಗತ್ಯದ ಕೃತಿಯಲ್ಲಿ ಕೇಂದ್ರ ಸರ್ಕಾರವಾಗಲಿ, ಸಂಸತ್ತಾಗಲಿ, ಐಕ್ಯತೆಗೆ ಭಂಗ ತರತಕ್ಕಂಥ ರೀತಿಯಲ್ಲಿ ನಡೆದುಕೊಂಡರೆ, ಈ ತಿದ್ದುಪಡಿಯಿಂದ ಕೇವಲ ಮನಸ್ಸಿಗೆ ಸಂತೋಷ ಉಂಟಾಗಬಹುದೇ ಹೊರತು, ಒಳ್ಳೆಯ ಕೃತಿಯ, ಏನೂ ಸಾಧನೆಯಾಗುವುದಿಲ್ಲ. ಈ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದ್ದರಿಂದ ಈ ದೇಶದ ಐಕ್ಯತೆಯನ್ನು ಕಾಪಾಡಿಕೊಳ್ಳಬೇಕಾದರೆ ಕನ್ಯಾಕುಮಾರಿಯಿಂದ ಹಿಮಾಚಲದವರೆಗೆ ನಾವು ಐಕ್ಯತೆ ಭಾವನೆಯನ್ನು ಉಂಟುಮಾಡಬೇಕು. ದೇಶದಲ್ಲಿರತಕ್ಕಂಥ, ಎಲ್ಲ ರಾಜ್ಯಗಳಲ್ಲಿರತಕ್ಕಂಥ ಎಲ್ಲ ಜನರೂ ಸಮಾನರು ಎನ್ನುವ ಭಾವನೆಯಿಂದ ಆಡಳಿತ ನಡೆಸಿಕೊಂಡು ಬರಬೇಕು. ಮುಖ್ಯವಾಗಿ ಕೇಂದ್ರ ಸರ್ಕಾರ ತನ್ನ ದೃಷ್ಟಿಯಿಂದ ಯಾರು ಹೊರಗಡೆ ಹೋಗುತ್ತಿದ್ದಾರೆ ಎಂದು ಹೇಳಿ ಆಪಾದನೆ ಮಾಡುತ್ತದೆಯೋ, ಅವರು ಸಂಶಯದಿಂದ ನೋಡುತ್ತಾರೆ; ಆದ್ದರಿಂದ ಅವರ ಯೋಗ್ಯವಾದ, ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಹೆಚ್ಚಿನ ಶ್ರಮ ಮತ್ತು ಆಸಕ್ತಿಯನ್ನು ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

† **Sri S. RAJAGOPAL** (K. G. F.).—I would like to speak in Tamil, Sir.

Mr. SPEAKER.—The Hon'ble Member may speak in any language. But he must be brief. Let the Hon'ble Member take five minutes. The Hon'ble Member has already told me that he is supporting it.

Sri S. RAJAGOPAL.—[Spoke in Tamil.]

* * *

Sri S. RAJAGOPAL.—The ruling party is responsible for that.

Mr. SPEAKER.—Is it here or elsewhere ?

Sri S. RAJAGOPAL.—Ruling Party of India is responsible, Sir.

[He continued his speech in Tamil.]

Sri G. V. GOWDA (Palya).—Sir, taking oath or making affirmation to Parliament and Legislature has already been provided for in the Constitution and that is being amended. I may also say that affirmation or oath to be made by a candidate for election to Parliament, that is, even before the election takes place is necessary. A candidate duly nominated is required to take oath or make affirmation. I do not know what is the real need for such a provision in this amending Bill, because the purpose is served by the inclusion of such a provision under the Representataion of the People Act. If really there was any need for it, there was every scope for making a provision in the Representation of the People Act, to make it incumbent on the candidate to make the affirmation or to take the oath.

It is not known whether after the oath is taken, he may retire or he may withdraw from the contest ? Such a contingency is there. Why should there be any provision in the Constitution, that too for a candidate who seeks to contest the election to Parliament or Houses of Legislature, to take an oath or affirmation ? That could have been avoided by making suitable provisions in the Representation of the People's Act. But the other amendments are really welcome.

Mr. SPEAKER.—Article 173 pertains to qualification for membership of the State Legislature. A condition to be fulfilled before he becomes eligible to offer himself as a candidate is provided in that article. How does Hon'ble Member say that it can be done under the People's Representation Act?

Sri G. V. GOWDA.—As a pre-requisite to file a nomination it could have been done. I do not think there is anything wrong in making such a provision in the Representation of the Peoples Act. Why it has been specially provided in the Constitution has not been clearly enunciated.

So far as other matters are concerned, they are matters to be welcomed. In order to maintain the integrity of India, this provision was included when the original Constitution was adopted, but if there are other methods open even now to put an end to this tendency, it could have been done. There are other remedies open to curb that tendency instead of frequently seeking amendments to the Constitution.

† Sri S. NIJALINGAPPA.—I am glad that all members have welcomed this measure and felt that this may be ratified. Sri G. V. Gowda seems to have certain suspicion as to why this clause is necessary, why this oath is necessary even at the time of filing nomination. There are certain elements in this country who want to make a political capital, a political campaign at the time of election; just to prevent that, this clause has been added that he must make the oath at the time of filing the nomination. I do not think there is any necessity to give a detailed reply to the arguments made by my friends because they have supported the measure. But I am inclined to meet the points raised by my friend from Shimoga District. He made one point that merely passing it would not help. In the law, certain offences are made punishable and have to be made punishable and because the people may commit offences in spite of the law, we cannot argue that there will have to be no law. People who do carry on propaganda against the integrity, the sovereignty of the country, must be punished. Even when they file nominations, when they contest elections and when they become members, it is necessary to take the oath of allegiance to the sovereignty and integrity of this country. My friend from K. G. F. said that it was the ruling party that had been responsible. Possibly, he has nothing more to say except by way of argument. If we want to encourage such things, why should we bring any Bill at all? Therefore, I commend this Bill for the ratification of the House.

Mr. SPEAKER.—I will put it to vote. The question is:

"That this House ratifies the amendments to the Constitution of India, proposed to be made by the Constitution (16th Amendment) Bill, 1963, as passed by the Houses of Parliament."

The motion was adopted.

INDUSTRIAL DISPUTES (MYSORE AMENDMENT) BILL, 1963.

Motion to consider.

Sri D. DEVARAJ URS (Minister for Labour, Housing and Transport). —Sir, I move:

"That the Industrial Disputes (Mysore Amendment) Bill, 1963, be taken into consideration."

Mr. SPEAKER.—Motion moved:

"That the Industrial Disputes (Mysore Amendment) Bill, 1963, be taken into consideration."

† Sri D. DEVARAJ URS.—I need hardly say anything because the Bill is so simple. It is merely to effect a small amendment to the existing clause 7 (a). The reasons for such an amendment are given in the Statement of Objects and Reasons. It is merely to say that whenever a District Judge is to be appointed as the Presiding Officer of a Tribunal, he should have put in a certain number of years of service as such. Last time in 1962 an Amendment has been brought to the effect that even a District Judge entitled to become a presiding officer. Now it was thought it would not be correct to allow any District Judge who may not have put in a certain number of years of service to be the presiding officer. The Government of India also have suggested that a minimum period of 3 years at least may be prescribed for any District Judge to qualify himself to become the presiding officer. That is the amendment sought to be made. I shall commend the Bill for acceptance.

Mr. SPEAKER.—I do not think any discussion is necessary. I will put the motion to vote. The question is:

"That the Industrial Disputes (Mysore Amendment) Bill, 1963, be taken into consideration."

The motion was adopted.

Mr. SPEAKER.—Now consideration of clauses of the Bill. Clause 2. The question is:

"That clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 1, the Title and the Preamble. The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri D. DEVARAJ URS.—Sir, I move:

"That the Industrial Disputes (Mysore Amendment) Bill, 1963, be passed."

Mr. SPEAKER.—The question is:

"That the Industrial Disputes (Mysore Amendment) Bill, 1963, be passed."

The motion was adopted.

MYSORE RELIGIOUS AND CHARITABLE INSTITUTIONS AND TRUSTS BILL, 1962.

Sri M. V. KRISHNAPPA (Minister for Revenue).—Sir, I move:

"That the Mysore Religious and Charitable Institutions and Trusts Bill, 1962, be taken into consideration."

Mr. SPEAKER.—Motion moved:

"That the Mysore Religious and Charitable Institutions and Trusts Bill, 1962, be taken into consideration."

4-30 P. M.

†ಶ್ರೀ ಎಂ. ವಿ. ಕೃಷ್ಣಪ್ಪ.—ಈ ಮಸೂದಾ ಕಾನೂನು ಈಗ ಕನ್ನಡದೇಶ ಆದಮೇಲೆ ಅನೇಕ ಭಾಗಗಳಿಂದ ಬಂದ ಈ ಕರ್ನಾಟಕದಲ್ಲಿ ಏಕರೂಪತೆಯ ಮಸೂದೆಗಳನ್ನು ಮಾಡುವ ಸರ್ಕಾರದ ಮಹತ್ ಕಾರ್ಯದಲ್ಲಿ ಒಂದು ಕಾರ್ಯವಾಗಿದೆ. ಈಗ 4-5 ವರ್ಷಗಳಿಂದ ಆ ರೀತಿಯಲ್ಲಿ ಈ ರೆವಿನ್ಯೂ ಇಲಾಖೆಯಲ್ಲಿ ಅನೇಕ ಯೂನಿಫಾರಂ ಕಾನೂನುಗಳನ್ನು ತರುತ್ತಾ ಇದ್ದೇವೆ. ರೆವಿನ್ಯೂ ಕೋಡ್ ಒಂದು ಬಂದಿದೆ. ಅದು ಈಗ ಸೆಲೆಕ್ಟ್ ಕಮಿಟಿಗೆ ಹೋಗಿರುವುದು ಮಾನ್ಯ ಸಭೆಗೆ ಗೊತ್ತಿದೆ. ಅದೇ ರೀತಿಯಲ್ಲಿ ಈಗ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಮೈಸೂರ್ ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್ ಟ್ರಸ್ಟ್ ಬಿಲ್ 1962 ರಲ್ಲಿ ಸೂಚಿಸಿರುವ ಪ್ರಕಾರ 5 ಭಾಗಗಳಲ್ಲಿ 5 ರೀತಿಯಾದ ಕಾನೂನುಗಳು ಇವೆ.

[SMT. BASAVARAJESWARI (Chairman in the chair.)]

ಈ ಐದು ಕಾನೂನುಗಳ ಅನುಸಾರವಾಗಿ ರಿಲಿಜಿಯಸ್ ಮತ್ತು ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗಳನ್ನು ಮ್ಯಾನೇಜ್ ಮಾಡಬೇಕಾಗಿದೆ. ಈ 5 ಕಾನೂನುಗಳನ್ನು ರಿಪೀಲ್ ಮಾಡಬೇಕು ಮತ್ತು ಅದರ ಜೊತೆಗೆ 4 ಸೆಂಟ್ರಲ್ ಆಕ್ಟ್‌ಗಳೂ ಇವೆ. ಅದರ ಪ್ರಕಾರವಾಗಿ ಕೂಡ ಈಗ ಈ ಇಲಾಖೆ ಕೆಲಸ ಮಾಡಬೇಕಾಗಿದೆ. ಆದ್ದರಿಂದ ಇವನ್ನೆಲ್ಲಾ ಒಟ್ಟುಗೂಡಿಸಿ ಒಂದು ಯೂನಿಫಾರಂ ಲೆಜಿಸ್ಲೇಷನ್ ಮಾಡಬೇಕೆಂಬ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದೆ. ಇದು 1959ನೇ ಇಸವಿಯಲ್ಲೇ ತಯಾರಾಗಿ ಕೇಂದ್ರದ ಒಪ್ಪಿಗೆಯನ್ನು ಪಡೆದಿತ್ತು—ಈ ಮಾನ್ಯ ಸಭೆಯ ಮುಂದೆ ಬಂದಿತ್ತು. ಅನಂತರ ಈ ಸಭೆಯ ಡಿಸಲ್ಯೂಷನ್ ಆದ್ದರಿಂದ ಮತ್ತೆ ಈ ಮಸೂದೆ ಅದೇ ರೂಪದಲ್ಲಿ ಈ ಮಾನ್ಯ ಸಭೆಯ ಮುಂದೆ ಈಗ ಬಂದಿದೆ. ಈ ಆಕ್ಟಿನ ಪ್ರಕಾರ ಮೈಸೂರು ಸಂಸ್ಥಾನದಲ್ಲಿರುವ ಈ 9 ಆಕ್ಟ್‌ಗಳನ್ನೂ ರಿಪೀಲ್ ಮಾಡಲು ಅಧಿಕಾರವನ್ನು ತೆಗೆದುಕೊಳ್ಳಲಾಗಿದೆ. ಇದರಲ್ಲಿ ಬಹಳ ಮುಖ್ಯವಾದ ವಿಷಯವೇನೆಂದರೆ ಮೈಸೂರು ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್ ಟ್ರಸ್ಟ್ ಬಿಲ್

ಪ್ರಕಾರ ಈ ಸಂಸ್ಥೆಗಳನ್ನು ಸಾಮಾನ್ಯವಾಗಿ ಮೂರು ವಿಧವಾಗಿ ವಿಂಗಡಿಸಿದ್ದೇವೆ-ಇಕಸ್ಟಿಟ್ಯೂಷನ್ಸ್ ಅಂಡರ್ ಟ್ರಸ್ಟ್-ನೋಟಿಫೈಡ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಮೂರನೆಯದು ಮಠಗಳು. ಮಠಗಳ ವಿಷಯದಲ್ಲಿ ಹೊಸದಾಗಿ ಅವನ್ನು ಸೇರಿಸಿದ್ದೇವೆ ಎಂದು ಯಾರೂ ತಿಳಿದುಕೊಳ್ಳಬೇಡಿ. ಹಿಂದಿನ ಮುಜರಾಯ್ ಆಕ್ಟ್‌ನಲ್ಲೂ ಕೂಡ ಅದು ಇದೆ. ಅದನ್ನೇ ಈ ಆಕ್ಟ್‌ನಲ್ಲಿ ತೆಗೆದುಕೊಂಡು ಬಂದಿದ್ದೇವೆ. ಬಹುಮಟ್ಟಿಗೆ ಈ ಆಕ್ಟನ್ನು ಬೊಂಬಾಯಿ ಪಬ್ಲಿಕ್ ಟ್ರಸ್ಟ್ ಆಕ್ಟ್ 1950 ಎಂದು ನಿನಿದೆಯೋ ಅದಕ್ಕನುಸಾರವಾಗಿಯೇ ಇದೆ, ಅಲ್ಲದೆ ಮೈಸೂರು ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್ ಆಕ್ಟಿನಲ್ಲಿರುವ ಕೆಲ ಕೆಲವು ಅಂಶಗಳನ್ನೂ ಕೂಡ ತೆಗೆದುಕೊಂಡು ಈ ಆಕ್ಟನ್ನು ಈ ಸಭೆಯ ಮುಂಪೆ ಇಟ್ಟಿದ್ದೇನೆ. ಒಟ್ಟಿನಲ್ಲಿ ಈ ಇನ್‌ಸ್ಟಿಟ್ಯೂಷನ್‌ಗಳವರೆಲ್ಲಾ ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಇದು ಎಲ್ಲಾ ಇನ್‌ಸ್ಟಿಟ್ಯೂಷನ್‌ಗಳಿಗೂ ಸಂಬಂಧಪಟ್ಟದ್ದು ಆಗುತ್ತದೆ. ಇದುವರೆಗೂ ಚರ್ಚ್‌ಗಳು, ಖಾಸಗಿ ಇನ್‌ಸ್ಟಿಟ್ಯೂಷನ್‌ಗಳು ಎಂದು ಹೇಳಿ ಅವುಗಳ ಮೇಲೆ ನಮಗೆ ಅಧಿಕಾರವಿಲ್ಲ. ಈ ಆಕ್ಟ್ ಪಾಸ್ ಆದರೆ ಇದರ ಪ್ರಕಾರ ಚರ್ಚ್‌ಗಳೂ ಸೇರುತ್ತವೆ. ಜೈನರ ಬಸ್ತಿಗಳು ಬರುತ್ತವೆ, ಗುರುದ್ವಾರಗಳು ಬರುತ್ತವೆ. ಮಸೀದಿಗಳು ಬರುತ್ತವೆ, ದೇವಸ್ಥಾನಗಳು ಬರುತ್ತವೆ. ಈ ರೀತಿ ಎಲ್ಲಾ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್‌ಗಳೂ ರಿಜಿಸ್ಟರ್ ಮಾಡಿಸಿಕೊಳ್ಳಬೇಕಾಗುತ್ತದೆ. ಸರ್ಕಾರದವರು ಈ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಕೆಲವನ್ನು ನೇರವಾಗಿ ಈಗಾಗಲೇ ಮ್ಯಾನೇಜ್ ಮಾಡುತ್ತಾ ಇದ್ದಾರೆ, ಅವು ಮುಜರಾಯ್ ಇನ್‌ಸ್ಟಿಟ್ಯೂಷನ್‌ಗಳ ಹೆಸರಿನಲ್ಲಿ ಬರುತ್ತವೆ, ಕೆಲವದರ ಮೇಲೆ ಓವರ್ ಆಲ್ ಸೂಪರ್‌ವಿಷನ್ ಇರುತ್ತದೆ. ಕೆಲವಕ್ಕೆ ಆಡಿಟರ್ಸ್‌ನ್ನು ನೇಮಕ ಮಾಡಿ ಖರ್ಚು ಹೆಚ್ಚು ಕಡಮೆ ಆಗುವ ಕಾಲಕ್ಕೆ ದೂರುಗಳು ಬಂದರೆ ಅವನ್ನು ಸರಿಪಡಿಸುವ ಅಧಿಕಾರ ಸರ್ಕಾರಕ್ಕೆ ಬರುತ್ತದೆ. ಈ ರೀತಿ ಹಿಂದಿನ ಆಕ್ಟ್‌ನ್ನು ರಿಪೀಲ್ ಮಾಡಿ ಒಂದು ಯೂನಿಫಾರಂ ಆಕ್ಟ್‌ನ್ನು ತರುವ ದೃಷ್ಟಿಯಿಂದ ನಾವು ಇದನ್ನು ಮಾಡುತ್ತಾ ಇದ್ದೇವೆ. ಅದರಲ್ಲೂ ನಮ್ಮ ಸಂಸ್ಥಾನದಲ್ಲಿ ಕೆಲವು ದೇವಸ್ಥಾನಗಳ ಹಣ ಬಹಳವಾಗಿ ಪೋಲಾಗುತ್ತಾ ಇದೆ. ಕೆಲವಕ್ಕೆ ಈಗಾಗಲೇ ಟ್ರಸ್ಟೀಸ್‌ನ್ನು ನೇಮಕ ಮಾಡಬೇಕಾಗಿದೆ--ಕೆಲವು ನಮ್ಮ ಸ್ವಾಧೀನದಲ್ಲಿ ಇಲ್ಲ ಪ್ರೈವೇಟ್ ಪ್ರಾಪರ್ಟಿ ರೀತಿಯಲ್ಲಿ ನಡೆದುಕೊಂಡು ಹೋಗುತ್ತಾ ಇದೆ. ಧರ್ಮಸ್ಥಳ ಪ್ರೈವೇಟ್ ಪ್ರಾಪರ್ಟಿ ಎಂದು ಹೇಳಿ ಅವರು ಏನಾದರೂ ಮಾಡಿಕೊಳ್ಳಬಹುದು. ಲಕ್ಷಾಂತರ ರೂಪಾಯಿ ಉತ್ಪನ್ನ ಬಂದರೂ ಸ್ವಂತ ಆಸ್ತಿಯಂತೆ ಅದು ನಡೆಯುತ್ತಾ ಇದೆ. ಇವುಗಳೆಲ್ಲಾ ನಾಳೆ ದಿವಸ ಯಾವಾಗ ಅವರು ರಿಜಿಸ್ಟರ್ ಮಾಡುತ್ತಾರೋ ಆಗ ನಮ್ಮ ಸರ್ಕಾರದ ಹತೋಟಿ ಅವುಗಳ ಮೇಲೆ ಬರುತ್ತದೆ-ಆ ಉದ್ದೇಶ ಸಫಲವಾಗುವ ದೃಷ್ಟಿಯಿಂದ ಕೆಲವು ಪ್ರೊವಿಷನ್‌ಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಪ್‌ನಲ್ಲಿ ನೂರಾರು ಮಾರಿಯಮ್ಮಗಳು ಇವೆ--ಅವಕ್ಕೂ ಇದು ಅನ್ವಯವಾಗುತ್ತದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾರಿಯಮ್ಮ ಎಂದರೆ ರೇಣುಕಾದೇವಿ, ಚಾಮುಂಡಿ ಎನ್ನುತ್ತಾರೆ. ಹಳ್ಳಿಯವರು ಅದನ್ನೇ ಮಾತಮ್ಮ ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ ಬಹಳ ಪ್ರಸಿದ್ಧವಾದ ಎಲ್ಲಮ್ಮ ದೇವಸ್ಥಾನ ಇದೆ, ಬಹುಶಃ ಮೈಸೂರು ಸಂಸ್ಥಾನದಲ್ಲಿ ಬಹಳ ದೊಡ್ಡ ದೇವಸ್ಥಾನ ಲಕ್ಷಾಂತರ ಜನ ಸೇವೆಗೆ ಹೋಗತಕ್ಕ ದೇವಸ್ಥಾನ ಈ ಎಲ್ಲಮ್ಮನ ದೇವಸ್ಥಾನ. ಎಲ್ಲಮ್ಮ ಎಂದರೂ ಕೂಡ ರೇಣುಕಾದೇವಿ--ರೇಣುಕಾದೇವಿಗೂ ಎಲ್ಲಮ್ಮ ಎನ್ನುತ್ತಾರೆ, ಪಾರ್ವತಿ ಎನ್ನುತ್ತಾರೆ, ಚಾಮುಂಡಿ ಎನ್ನುತ್ತಾರೆ, ಮಾರಿ, ಮಸಣಿ ಎನ್ನುತ್ತಾರೆ, ಎಲ್ಲವೂ ಕೂಡ ರೇಣುಕೆಯ ಅವತಾರವೇ. ಆದ್ದರಿಂದ ಮುಕ್ಕಣ್ಣಪ್ಪನವರು ಅದರಲ್ಲಿ ಏನೂ ಅನುಮಾನ ಪಡಬೇಕಾಗಿಲ್ಲ. ಉತ್ತರ ಕರ್ಣಾಟಕದಲ್ಲಿ ಮಾರಿ ನಂಬರ್ 1, ಮಾರಿ ನಂಬರ್ 2 ಎಂದು ಇದೆ. ಆ ದೇವಸ್ಥಾನಗಳನ್ನೂ ಬಹಳ ಚೆನ್ನಾಗಿ ನಡೆಸಿಕೊಂಡು ಹೋಗುತ್ತಾ ಇದ್ದಾರೆ. ಒಟ್ಟಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಕೆಲವು ದೇವಸ್ಥಾನಗಳಂತೂ ಬಹಳ ಪವಿತ್ರವಾದ ದೇವಸ್ಥಾನಗಳು ಇವೆ; ಅಲ್ಲಿಗೆ ಲಕ್ಷಾಂತರ ಜನರು ಹೋಗುತ್ತಾರೆ. ಅಲ್ಲಿ ಬರತಕ್ಕ ಉತ್ಪನ್ನ ಸರಿಯಾಗಿ ವಿನಿಯೋಗವಾಗುತ್ತಾ ಇಲ್ಲ. ಸರಿಯಾಗಿ ವಿನಿಯೋಗವಾಗುತ್ತಾ ಇರುವ ಒಂದು ಉದಾಹರಣೆಯನ್ನು ಹೇಳಬೇಕಾದರೆ, ತಿರುಪತಿಯನ್ನು ಅನೇಕರು ನೋಡಿದ್ದೀರಿ, ತಿರುಪತಿ ದೇವಸ್ಥಾನವೂ ಹಿಂದೆ ಹೀಗೆಯೇ ಒಬ್ಬ ಮಹಂತರ ಕೈ ವಶದಲ್ಲಿತ್ತು. ಆಗ ತಿರುಪತಿಯ ಉತ್ಪನ್ನವೆಲ್ಲಾ ಆ ಮಹಾಂತರ ಸ್ವಾಧೀನಕ್ಕೆ ಸಿಕ್ಕಿ ಅವರು ಅದನ್ನು ಮಾಯಮಾಡುತ್ತಾ ಇದ್ದರು. ಅವರು ಏನು ಮಾಡುತ್ತಾ ಇದ್ದರೋ ಗೊತ್ತಿಲ್ಲ. ಆಮೇಲೆ ಮದ್ರಾಸ್ ಸರ್ಕಾರದವರು ಅದನ್ನು ತಮ್ಮ ಕೈಗೆ ತೆಗೆದುಕೊಂಡು ಅದಕ್ಕೆ ಒಂದು ಆಕ್ಟ್ ಮಾಡಿ ಅದರ ಆಡಳಿತವನ್ನು ವಹಿಸಿಕೊಂಡಮೇಲೆ-ನಾವು ನೋಡಿದಾಗಲೇ ಅದರ ಉತ್ಪನ್ನ 15-20 ಲಕ್ಷ ರೂಪಾಯಿ ಇತ್ತು-ಈಗ 1 ಕೋಟಿ 75 ಲಕ್ಷ ರೂಪಾಯಿ ಆಗಿದೆ; ಒಂದು ವರ್ಷಕ್ಕೆ 2 ಕೋಟಿ ರೂಪಾಯಿಗಳ ವರೆಗೂ ಉತ್ಪನ್ನ ಮಾಡುತ್ತೇವೆ ಎಂದು ಹೇಳುತ್ತಾರೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ಇದಕ್ಕೆ ಕಾರಣ ಇಷ್ಟೆ ಅದು ಸರ್ಕಾರದವರ ಹತೋಟಿಯಲ್ಲಿರುವುದರಿಂದ ಸರ್ಕಾರದವರು ಟ್ರಸ್ಟಿಗಳನ್ನು ನೇಮಕವಮಾಡಿ ಅವರು ಬಹಳ ಚೆನ್ನಾಗಿ ಮ್ಯಾನೇಜ್‌ಮೆಂಟ್ ಮಾಡುತ್ತಾ ಬಂದದ್ದರಿಂದ ಅಲ್ಲಿ ಬಂದ ಉತ್ಪನ್ನವನ್ನು, ಭಕ್ತಾದಿಗಳು ಕೊಟ್ಟ ಹಣವನ್ನು ಅವರ ಉಪಯೋಗಕ್ಕೆ ವಿನಿಯೋಗಿಸಿ, ನೂರಾರು ಛತ್ರಗಳನ್ನು ಕಟ್ಟಿಸಿದ್ದಾರೆ, ಕಾಲೇಜಸ್‌ನ್ನು ಕಟ್ಟಿಸಿದ್ದಾರೆ; ನೀರಿನ ಅನುಕೂಲ ಮಾಡಿ ಕೊಟ್ಟಿದ್ದಾರೆ, ಜನರೂ ಹೋಗಿ ಅಲ್ಲಿ ತಂಗುವುದಕ್ಕೆ ಒಳ್ಳೆಯ ಛತ್ರಗಳು ಇವೆ. ಈ ರೀತಿ ಒಂದು ಏರ್ಪಾಡು ಮಾಡಿರುವುದರಿಂದ ಸಾವಿರಾರು ಜನರು ಅಲ್ಲಿಗೆ ಹೋಗುತ್ತಾರೆ-ವರ್ಷೇ ವರ್ಷೇ 10-20 ಲಕ್ಷ ರೂಪಾಯಿ ಅದರ ಉತ್ಪನ್ನ ಜಾಸ್ತಿಯಾಗುತ್ತಾ ಇದೆ. 2 ಕೋಟಿ ರೂಪಾಯಿ ಉತ್ಪನ್ನ ಇನ್ನೆರಡು ವರ್ಷಗಳಲ್ಲಿ ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗಿರುವ ಕಾಲದಲ್ಲಿ ನಾವು ಮಂತ್ರಿಗಳಾಗಿರುವಾಗ ಮೈಸೂರು ಸಂಸ್ಥಾನದ ಉತ್ಪನ್ನ 3 ಕೋಟಿ ರೂಪಾಯಿಗಳು ಆಗಿದೆ. ಅದೇ ತಿರುಪತಿ ದೇವಸ್ಥಾನದ್ದು 2 ಕೋಟಿ ರೂಪಾಯಿ ಆಗಿದೆ. ರೆವಿನ್ಯೂ ಮಂತ್ರಿಯಾಗಿ ನಾವು ಇಲ್ಲಿ ಕುಳಿತು, 20 ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಸುಮಾರು 200 ಜನ ಅಸಿಸ್ಟೆಂಟ್ ಕಮಿಷನರುಗಳು, ಶ್ಯಾನುಬೋಗರು, ಪಟೇಲರು ಎಲ್ಲರನ್ನೂ ಇಟ್ಟುಕೊಂಡು ವಸೂಲು ಮಾಡುವುದು 3 ಕೋಟಿ ರೂಪಾಯಿ ಆಗಿದೆ. ತಿರುಪತಿ ತಿಮ್ಮಪ್ಪ ಬೆಟ್ಟದಲ್ಲಿ ಕುಳಿತುಕೊಂಡು 2 ಕೋಟಿ ರೂಪಾಯಿಗಳನ್ನು ಸುಲಭವಾಗಿ ವಸೂಲುಮಾಡುತ್ತಾ ಇದ್ದಾನೆ, ಸುಲಭವಾಗಿ ಹಣ ಬರುತ್ತಾ ಇದೆ. ನಾನು ಸ್ವಲ್ಪ ಹಾಸ್ಯಾಸ್ಪದ ರೀತಿಯಲ್ಲಿ ಹೇಳಿದರೂ ಅಲ್ಲಿ ಬಹಳ ಹೆಚ್ಚಿನ ಅನುಕೂಲ ಮಾಡಿಕೊಟ್ಟಿದ್ದಾರೆ ಆದ್ದರಿಂದ ಹೆಚ್ಚು ಜನ ಹೋಗುತ್ತಾ ಇದ್ದಾರೆ, ಅದರಿಂದ ಉತ್ಪನ್ನವೂ ಹೆಚ್ಚಾಗಿ ಬರುತ್ತಾ ಇದೆ.

ಇದೇ ರೀತಿ ಆ ಶ್ರೀಶೈಲವನ್ನೂ ಡೆವಲಪ್ ಮಾಡಬೇಕೆಂದು ಮಾಡಿದ್ದಾರೆ. ನಾನು ಈಗ ಮೈಸೂರು ಸಂಸ್ಥಾನದ ರೆವಿನ್ಯೂ ಮಂತ್ರಿಯಾದಮೇಲೆ ಈ ಒಂದೂ ವರೆ ವರ್ಷದಲ್ಲಿ ಕಾಡು, ಬೆಟ್ಟ, ಗುಡ್ಡಗಳನ್ನೆಲ್ಲ ತಿರುಗಿ, ಒಳ್ಳೆಯ ಐದು ಸ್ಥಳಗಳನ್ನು ಹುಡುಕಿದ್ದೇನೆ. ನಮ್ಮಲ್ಲಿಯೂ ಆ ತಿರುಪತಿ, ಶ್ರೀಶೈಲಕ್ಕಿಂತ ಶ್ರೇಷ್ಠವಾದ ಸ್ಥಳಗಳಿವೆ. ಮೊಟ್ಟಮೊದಲನೆಯದಾಗಿ ಮಹದೇಶ್ವರಸ್ವಾಮಿ ಬೆಟ್ಟದಲ್ಲಿರುವ ದೇವಸ್ಥಾನ ಇಡೀ ಇಂಡಿಯಾದೇಶಕ್ಕೇ ಹೆಸರುವಾಸಿಯಾದಂಥ ದೇವಸ್ಥಾನ. ಇದು ಆ ತಿರುಪತಿ ಬೆಟ್ಟಕ್ಕಿಂತ ಚೆನ್ನಾಗಿದೆ. ಈಗ ಆ ದೇವಸ್ಥಾನಕ್ಕೆ ಶ್ರೀ ಜಿ. ವಿ. ಗೌಡರು ಛೇರ್‌ಮನ್ನರಾಗಿದ್ದಾರೆ. ಅವರಿಗೆ ಇದರ ವಿಷಯವೆಲ್ಲ ಚೆನ್ನಾಗಿ ಗೊತ್ತಿದೆ. ನಾವು ಈ ಸ್ಥಳವನ್ನು ಎಷ್ಟರಮಟ್ಟಿಗೆ ಅಭಿವೃದ್ಧಿಗೆ ತರಬಹುದು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಈಗ ಅಲ್ಲಿ 6 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆಯನ್ನು ಮಾಡಲಾಗಿದೆ. ದೇವಸ್ಥಾನದವರು 6ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ ಆ ದೇವಸ್ಥಾನಕ್ಕೆ ಸೇರಿದ ಮೂರು ಬಸ್ಸುಗಳು ನಡೆಯುತ್ತಿವೆ. ಕೇವಲ 8-9 ತಿಂಗಳಲ್ಲಿ 49 ಸಾವಿರ ರೂಪಾಯಿಗಳ ನಫೆ ಬಂದಿದೆ. ಒಂದು ವರ್ಷದಲ್ಲಿ 2 ಲಕ್ಷ ರೂಪಾಯಿಗಳ ವರಮಾನ ಬಂದಿದೆ. ಈಗ ವರಮಾನ ಮೂರು ಲಕ್ಷಕ್ಕೆ ಏರತಕ್ಕ ಚಿನ್ಹೆಗಳಿವೆ. ನಾವೀಗ ಇನ್ನು 2 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಇದರ ಉತ್ಪತ್ತಿ 5 ಲಕ್ಷ ರೂಪಾಯಿಗಳಿಗೆ ಏರತಕ್ಕ ಸಂಭವವಿದೆ. ಇಲ್ಲಿ ಯಾತ್ರಾರ್ಥಿಗಳ ಗಿ ಬರತಕ್ಕ ಜನಗಳಿಗೆ ಹೆಚ್ಚಿನ ಸೌಕರ್ಯವನ್ನು ಕಲ್ಪಿಸಲಾಗಿದೆ. ಒಳ್ಳೆ ಕುಡಿಯುವ ನೀರಿನ ಸೌಕರ್ಯ ಒದಗಿಸಲಾಗಿದೆ. ಈಗ ಖರ್ಚು ಮಾಡಿರುವ ಹಣವನ್ನು ಒಂದೆರಡು ವರ್ಷಗಳಲ್ಲೇ ಬರಮಾಡಿಕೊಳ್ಳಬಹುದು.

ಇನ್ನು ಎರಡನೆಯದು: ಬಿಳಿಗಿರಿ ರಂಗನಬೆಟ್ಟದಲ್ಲಿರುವ ರಂಗಸ್ವಾಮಿ ದೇವಸ್ಥಾನ. ಇಡೀ ಹಿಂದೂಸ್ಥಾನದಲ್ಲೇ ಇಂಥ ಪ್ರಕೃತಿಸೌಂದರ್ಯದಿಂದ ಕೂಡಿರತಕ್ಕ ದೇವಾಲಯ ಮತ್ತೊಂದಿಲ್ಲ. ದಾರಿ ಉದ್ದಕ್ಕೂ, ಆನೆಗಳು, ಕರಡಿಗಳು ಯಥೇಚ್ಛವಾಗಿ ತಿರುಗಾಡುತ್ತಿರುತ್ತವೆ. ದೇವಸ್ಥಾನದ ಹತ್ತಿರ ಹತ್ತಿರಕ್ಕೆ ಹೋದಹಾಗೆಲ್ಲ ಯಾತ್ರಾರ್ಥಿಗಳು ಈ ಪ್ರಪಂಚವನ್ನೇ ಮರೆತು ದೇವರಸಾನಿಧ್ಯಕ್ಕೇ ಹೋದಂತೆ ಭಾಸವಾಗುವುದು. ಈಗ ಈ ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಈ ದೇವಸ್ಥಾನ ಹಿಂದೆ ಯಳಂದೂರು ಜಹಗೀರುದಾರರ ಸುಪರ್ದಿನಲ್ಲಿತ್ತು. ಇದು ಪ್ರಪಂಚದಲ್ಲೇ ಶ್ರೀಮಂತ ದೇವರು. 22 ಚದುರಮೈಲಿ ವಿಸ್ತೀರ್ಣವುಳ್ಳ ಬಹು ಬೆಲೆಯುಳ್ಳಕಾಡು ಈ ದೇವಸ್ಥಾನಕ್ಕೆ ಸೇರಿರುತ್ತದೆ. ಇದರ ಉತ್ಪತ್ತಿಯನ್ನೆಲ್ಲ ಹಿಂದೆ ಆ ಜಹಗೀರುದಾರರೇ ತಿಂದುಹಾಕುತ್ತಿದ್ದರು. ಈಗ ಇದು ಸರ್ಕಾರದವರ ಸುಪರ್ದಿಗೆ ಬಂದಿದೆ. ಈ ದೇವಸ್ಥಾನಕ್ಕೆ ಸೇರಿರತಕ್ಕ 4 ಲಕ್ಷ ರೂಪಾಯಿಗಳ ಒಡವೆಗಳು ಈಗ ಟ್ರೆಜರಿಯಲ್ಲಿರುತ್ತದೆ. ಆದರೆ ದೇವಸ್ಥಾನ ಬೀಳತಕ್ಕ ಸ್ಥಿತಿಯಲ್ಲಿದೆ. ಆ ದೇವಸ್ಥಾನದ ಅಭಿವೃದ್ಧಿಗೆ ಇಲ್ಲಿಯತನಕ ಯಾರೂ ಗಮನ ಕೊಟ್ಟಿಲ್ಲ. ಈಗ ಸರ್ಕಾರದವರು ಇದನ್ನೆಲ್ಲ ಅಭಿವೃದ್ಧಿಗೆ ತರಬೇಕಾಗಿದೆ.

ಇನ್ನು ಮೂರನೆಯದಾಗಿ ಶ್ರವಣಬೆಳಗೊಳ ದೇವಸ್ಥಾನ: ಆ ಬಿಳಿಗಿರಿ ರಂಗನಬೆಟ್ಟದಲ್ಲಿರತಕ್ಕ ಸ್ವಾಮಿ, ಮಹದೇಶ್ವರ ಬೆಟ್ಟದಲ್ಲಿರತಕ್ಕ ಸ್ವಾಮಿ ಇವು ಬಡವರ ದೇವರಾದರೆ, ಶ್ರವಣಬೆಳಗೊಳದಲ್ಲಿರತಕ್ಕ ದೇವರು ಶ್ರೀಮಂತರ ದೇವರು. ಇದು ಶ್ರೀಮಂತರ ದೇವರಾಗಿದ್ದರೂ, ಇಲ್ಲಿಗೆ ಬರತಕ್ಕ ಯಾತ್ರಾರ್ಥಿಗಳ ಬಗ್ಗೆ ಅಷ್ಟು ಚೆನ್ನಾಗಿ ದುಡ್ಡನ್ನು ಖರ್ಚುಮಾಡಿಲ್ಲ. ಈ ದೇವರ ಮಹಾಮಸ್ತಕಾಭಿಷೇಕ ಇನ್ನು ಒಂದು ಅಥವಾ ಒಂದೂವರೆ ವರ್ಷದಲ್ಲಿ ನಡೆಯಲಿದೆ. ಆಗ್ಗೆ ಇಲ್ಲಿಗೆ ಬಹಳ ಜನಗಳು ಯಾತ್ರಾರ್ಥಿಗಳಾಗಿ ಬರುತ್ತಾರೆ. ಆ ವಿಶೇಷ ಸಮಾರಂಭ ಸುಮಾರು 1965 ನೆಯ ಫೆಬ್ರುವರಿಯಲ್ಲಿ ನಡೆಯಬಹುದು. ಜೈನರು ಸಾಮಾನ್ಯವಾಗಿ ಶ್ರೀಮಂತರು. ಆ ಜನಗಳೆಲ್ಲ ಇಲ್ಲಿಗೆ ಬರುವ ವೇಳೆಗೆ ಸರಿಯಾಗಿ ಇಲ್ಲಿ 200 ರೂಮುಗಳನ್ನು ಕಟ್ಟಬೇಕೆಂದು ವ ನನ್ನು ಮಾಡಿದ್ದೇವೆ. ಹಿಂದೂಸ್ಥಾನದಲ್ಲೆಲ್ಲ ಡೊನೇಷನ್ ಎತ್ತಿ ಈ ರೂಮುಗಳನ್ನು ಕಟ್ಟಿಸಬೇಕೆಂದಿದ್ದೇವೆ. ಹಾಗೆ ಇಲ್ಲಿ ಒಂದು ಆರ್ಟ್ಸ್ ಮತ್ತು ಸೈನ್ಸ್ ಕಾಲೇಜನ್ನೂ ಮತ್ತು ಒಂದು ರಿಸರ್ಚ್, ಇನ್‌ಸ್ಟಿಟ್ಯೂಟನ್ನೂ ತೆರೆಯಬೇಕೆಂಬ ಆಲೋಚನೆಯಿದೆ.

ಹೀಗೆ ಉತ್ತರ ಕರ್ಣಾಟಕದಲ್ಲೂ ಎಲ್ಲಮ್ಮದೇವಸ್ಥಾನ ಎಂಬ ಒಂದು ದೇವಸ್ಥಾನವಿದೆ. ಅದಕ್ಕೆ ಬೇಕಾದಷ್ಟು ಉತ್ಪತ್ತಿ ಇದೆ. ಆದರೆ ಈಗ ಈ ದೇವತೆ ಮುನಿಸಿಪಾಲಿಟಿಯವರ ಕೈಗೆ ಸಿಕ್ಕಿಬಿದ್ದು, ವರಮಾನವೆಲ್ಲ ಮಾಯವಾಗುತ್ತಿದೆ. ದೇವಸ್ಥಾನಕ್ಕೆ ಬರುವ ಯಾತ್ರಾರ್ಥಿಗಳಿಗೆ ಯಾವ ಅನುಕೂಲತೆಗಳೂ ಇಲ್ಲ. ಅಲ್ಲಿಯ ಮುನಿಸಿಪಾಲಿಟಿಯವರು ಒಂದು ಕಾಯಿಗೆ ಒಂದಾಣೆ ಇದ್ದರೆ, ಅವರು ಎರಡಾಣೆ ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ದೇವಸ್ಥಾನಕ್ಕೆ ಬರಬೇಕಾಗಿದ್ದ ಆದಾಯವೆಲ್ಲ ಮುನಿಸಿಪಾಲಿಟಿಯವರ ಪಾಲಾಗಿ, ದೇವಸ್ಥಾನಕ್ಕೆಬರತಕ್ಕ ಜನರಿಗೆ ಯಾವ ಅನುಕೂಲವೂ ಇಲ್ಲ. ಅಲ್ಲಿ ಸರಿಯಾದ ಒಂದು ರಸ್ತೆ ಇಲ್ಲ; ನೀರಿನ ವ್ಯವಸ್ಥೆ ಇಲ್ಲ.

ಹೀಗೆ ಆ ಗೋಕರ್ಣಕ್ಷೇತ್ರವೂ ಬಹಳ ಸೊಗಸಾದ ಕರಾವಳಿ ಭಾಗದಲ್ಲಿ ಇರುತ್ತದೆ. ಆದರೆ ಈ ದಿವಸ ಗೋಕರ್ಣಕ್ಕೆ ಹೋದರೆ ಅಲ್ಲಿ ಆ ಅರ್ಚಕರ ಕಾಟ ತಪ್ಪಿಸಿಕೊಳ್ಳುವುದೇ ಒಂದು ದೊಡ್ಡ ಕಷ್ಟ. ಅವರ ಗಲಾಟೆಯಲ್ಲಿ ಆ ದೇವರೇ ಮರೆತುಹೋಗಿಬಿಡುತ್ತದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲೂ ಹೀಗೆ ಕೆಲವು ಬಹಳ ಪ್ರಸಿದ್ಧಿಯಾದ ದೇವಸ್ಥಾನಗಳಿವೆ. ಅವುಗಳಲ್ಲಿ ಒಂದು ಧರ್ಮಸ್ಥಳದ ಮಂಜುನಾಥಸ್ವಾಮಿ, ಇನ್ನೊಂದು ಕುಕ್ಕೆ ಸುಬ್ರಹ್ಮಣ್ಯಸ್ವಾಮಿ.

ಒಬ್ಬ ಮಾನ್ಯ ಸದಸ್ಯರು:—ಕೊಲ್ಲೂರಿನ ಮೂಕಾಂಬಿಕೆಯ ದೇವಾಲಯವೊ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇವೆ, ಬೇಕಾದಷ್ಟಿವೆ. ಆದರೆ ನಾವೀಗ ಈ ಪಂಚದೇವಾಲಯಗಳನ್ನು, ಪಂಚಲಿಂಗದರ್ಶನವೆಂದು ಹೇಳುವಹಾಗೆ, ಒಂದು ಶ್ರೀಮಹದೇಶ್ವರ, ಎರಡು ಶ್ರೀಬಿಳಿಗಿರಿ ರಂಗಸ್ವಾಮಿ, ಮೂರು ಗೋಮಟೇಶ್ವರ, ನಾಲ್ಕು ಎಲ್ಲಮ್ಮ ದೇವರು, ಐದು ಗೋಕರ್ಣ ಅಥವಾ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ಇಷ್ಟು ದೇವಾಲಯಗಳನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವಿದೆ.

ಒಬ್ಬ ಮಾನ್ಯ ಸದಸ್ಯರು:—ಬೇಲೂರಿನ ಚೆನ್ನಕೇಶವ ದೇವಾಲಯವೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಈಗಾಗಲೆ ಭಾರತ ಸರ್ಕಾರದವರ ಸುಪರ್ದಿನಲ್ಲಿದೆ. ಈಗಾಗಲೆ ನಾನು ಹೇಳಿದ ಐದು ದೇವಾಲಯಗಳ ಬಗ್ಗೆ ಒಂದು ಹೈ ಪವರ್ ಕಮಿಟಿಯನ್ನು ರಚಿಸಿ; ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಿ, ಆ ಐದು ಸ್ಥಳಗಳಿಗೂ 50-60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ಅಲ್ಲಿಗೆ ಬರತಕ್ಕ ಭಕ್ತಾದಿಗಳಿಗೆ ಒಳ್ಳೇ ಸೌಕರ್ಯಗಳನ್ನು, ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ-ಇತ್ಯಾದಿಗಳನ್ನು ಏರ್ಪಡಿಸಿದರೆ ನಾವು ಖರ್ಚುಮಾಡಿದ ಹಣ 3-4 ವರ್ಷಗಳಲ್ಲೇ ವಾಪಸ್ಸು ಬರುತ್ತದೆ. ಈಗ ಆ ಮಹದೇಶ್ವರಸ್ವಾಮಿ ದೇವಾಲಯಕ್ಕೆ ಖರ್ಚುಮಾಡಿದ ಹಣದಮೇಲೆ ಉತ್ಪತ್ತಿ ಬಂದಿದೆ. ಈ ವಿಚಾರಗಳೆಲ್ಲ ಶ್ರೀ ಜಿ. ವಿ. ಗೌಡರಿಗೆ ಚೆನ್ನಾಗಿ ಗೊತ್ತಿವೆ. ಈ ದೇವಾಲಯಕ್ಕೆ ನಾವು ಈ ದಿವಸ ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೂ ಆ ಹಣವನ್ನು ನಾವು 10 ವರ್ಷದಲ್ಲೇ ವಾಪಸ್ಸು ಪಡೆಯಬಹುದು.

ಇತ್ತೀಚೆಗೆ ಜನರು ಅಕಡೆಗಳಲ್ಲಿ ಓಡಾಡಲಿಕ್ಕೆ ಪ್ರಾರಂಭಮಾಡಿದ್ದಾರೆ. ಟೂರಿಸ್ಟ್ ಜನ ಜಾಸ್ತಿಯಾಗಿದ್ದಾರೆ. ಜನ ದೇಶದಲ್ಲಿ ಹೆಚ್ಚಾಗಿ ಓಡಾಡಿದರೆ ಒಳ್ಳೆಯದು. ಹಿಂದಿನಕಾಲದಲ್ಲಿ ಯಾತ್ರಾ ಸ್ಥಳಗಳನ್ನು ಮಾಡಿರುವ ಉದ್ದೇಶ ಇದೇ ಆಗಿದೆ. ಜನ ದೇಶ ನೋಡುತ್ತಾರೆ. ಉತ್ತರ ಭಾರತದಲ್ಲಿರುವವರಿಗೆ ರಾಮೇಶ್ವರ ಮುಖ್ಯ ಯಾತ್ರೆಯಾಗಿದೆ. ಜೀವನದಲ್ಲಿ ರಾಮೇಶ್ವರ ಯಾತ್ರೆಯಿಂದ ಬಹಳ ಸಂತೋಷಪಡುತ್ತಾರೆ. ಇದೇರೀತಿ ದಕ್ಷಿಣದವರು ಉತ್ತರದಲ್ಲಿಯ ಕಾಶೀಯಾತ್ರೆಯಿಂದ ಕೃತಾರ್ಥರಾಗುತ್ತಾರೆ. ಇದರ ಮುಖ್ಯ ಉದ್ದೇಶ ಏನೆಂದರೆ ಜನ ದೇಶನೋಡಿ ಜ್ಞಾನ ಬೆಳಸಿಕೊಳ್ಳಬೇಕು ಎಂದು ಮಾಡಿದ್ದಾರೆ. ಆಲ್ ಇಂಡಿಯಾ ಲೆವೆಲ್ಲಿನಲ್ಲಿ ಅನೇಕ ಯಾತ್ರಾಸ್ಥಳಗಳಿದ್ದರೆ, ನಮ್ಮ ಮೈಸೂರು ರಾಜ್ಯದ ಲೆವೆಲ್ಲಿನಲ್ಲಿ ಪಂಚ ಸ್ಥಳಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಮಹದೇಶ್ವರ, ಬಿಳಿಗಿರಿರಂಗ ನೋಡುವುದಕ್ಕೆ ಬೆಳಗಾಂ ಕಡೆಯಿಂದ ಬರತಕ್ಕ ಟೂರಿಸ್ಟ್ ಜನರು

(ಶ್ರೀ ಎಂ. ಪಿ. ಕೃಷ್ಣಪ್ಪ)

ದಾರಿಯಲ್ಲಿ ತುಂಗಭದ್ರಾ ನೋಡಬಹುದು, ಬೆಂಗಳೂರು ನಗರ, ಶಿವನ ಸಮುದ್ರ, ಜಲಪಾತ, ಮೈಸೂರು ನೋಡಿಕೊಂಡು ಹೋಗಬಹುದು. ಇದರಿಂದ ಇಹ ಪರ ಎರಡೂ ಸಾಧನೆಯಾಗುತ್ತದೆ. ಹಾಗೆ ಕೆನರಾ ಕರಾವಳಿ, ಗೋಕರ್ಣ ಸಹ ನೋಡಿ ಹೋಗಬಹುದು. ದಕ್ಷಿಣದಲ್ಲಿರುವ ಮೈಸೂರಿನವರು ಎಲ್ಲಮ್ಮ ದೇವಸ್ಥಾನಕ್ಕೆ ಹೋದರೆ ಚೆನ್ನಾಗಿರುತ್ತದೆ. ದೇಶ ನೋಡುವುದರಿಂದ ಅನುಭವ ಬರುತ್ತದೆ, ಅಲ್ಲಲ್ಲಿಯ ಭಾಷೆ, ಸಂಪ್ರದಾಯ, ಜನ ಹೇಗೆ ಇದ್ದಾರೆ ಎಂಬುದು ಅರ್ಥವಾಗುತ್ತದೆ. ಈ ದೃಷ್ಟಿಯಿಂದ ಈ ಮಸೂದೆಯನ್ನು ತಯಾರು ಮಾಡಲಾಗಿದೆ. ಇಂಥ ದೊಡ್ಡ ಸಂಸ್ಥೆಗಳು ಸರಕಾರದ ಕೈಯಲ್ಲಿದ್ದರೆ ಬೇಕಾದಹಾಗೆ ಕೆಲಸ ಮಾಡಿ ಜನರಿಗೆ ಅನುಕೂಲ ಮಾಡಿ ಕೊಡಬಹುದು. ಅಂಥಲ್ಲಿ ಬರುವ ಯಾತ್ರಿಕರಿಗೆ ವಾಸ ಮಾಡಲು ಯೋಗ್ಯವಾದ ವಾಸಸ್ಥಳ ಕಲ್ಪಿಸಿ ಕೊಡಬಹುದು. ಬರುವ ಉತ್ಪತ್ತಿಯಿಂದ ವಿದ್ಯಾಭ್ಯಾಸಕ್ಕೆ ಹಣ ಉಪಯೋಗಿಸಬಹುದು. ತಿರುಪತಿ ವೆಂಕಟರಮಣ ದೇವಸ್ಥಾನದ ಉತ್ಪತ್ತಿಯಿಂದ ವೆಂಕಟೇಶ್ವರ ಯೂನಿವರ್ಸಿಟಿ ಫಂಡ್ ಎಂದು ಮಾಡಿ ಅದರಿಂದ ಒಂದು ದೊಡ್ಡ ವಿಶ್ವವಿದ್ಯಾನಿಲಯವನ್ನು ನಡೆಸುತ್ತಿದ್ದಾರೆ. ಮೆಡಿಕಲ್ ಕಾಲೇಜು ಇಂಜಿನಿಯರಿಂಗ್ ಕಾಲೇಜು, ಸಂಸ್ಕೃತ ಕಾಲೇಜು, ಸಾಯನ್ಸ್, ಆರ್ಟ್ಸ್ ಕಾಲೇಜು, ಸಂಗೀತ ಕಾಲೇಜು, ನಡೆಸುತ್ತಿದ್ದಾರೆ. ಅದೇರೀತಿ ನಾವೂ ಮಾಡಿದರೆ ಕೋಟ್ಯಾಂತರ ಜನರ ಉದ್ಧಾರವಾಗುತ್ತದೆ. ಯಾತ್ರಿಕರಿಗೆ ವಸತಿ, ನೀರು, ದೀಪ, ರಸ್ತೆ, ಈ ಸೌಕರ್ಯ ಕಲ್ಪಿಸಿಕೊಟ್ಟರೆ ಅನುಕೂಲವಾಗುತ್ತದೆ. ವಿದ್ಯಾ ಸಂಸ್ಥೆಗಳನ್ನು ದೇವರ ಹೆಸರಿನಲ್ಲಿ ನಡೆಸಬೇಕು. ಧಾರ್ಮಿಕ ಸಂಸ್ಥೆಗಳಲ್ಲಿ ಸರ್ಕಾರದ ಕಂಟ್ರೋಲ್ ಹೆಚ್ಚಾಗಿದ್ದರೆ ನ್ಯಾಯವಾದ ರೀತಿಯಲ್ಲಿ ಆಡಳಿತ ನಡೆಸಲು ಆಸ್ಪದ ಸಿಕ್ಕುತ್ತದೆ. ಈ ದೃಷ್ಟಿಯಿಂದ ಮೈಸೂರು ರಾಜ್ಯದಲ್ಲಿ ಒಂದು ಯೂನಿಫಾರ್ಮ್ ರೆಜಿಸ್ಟ್ರೇಶನ್ ಮಾಡಬೇಕೆಂದು ಈ ಮಸೂದೆಯನ್ನು ತರಲಾಗಿದೆ. ಈ ಸಂಸ್ಥೆಗಳು ರಿಜಿಸ್ಟರ್ ಮಾಡಬೇಕಾಗುವುದರಿಂದ ಮ್ಯಾನೇಜ್‌ಮೆಂಟು ಸರಕಾರದ ಕೈಯಲ್ಲಿ ಬಂದ ಹಾಗೆ ಆಗುತ್ತದೆ. ಇದಕ್ಕೂ ಮೊದಲು ಕೇಂದ್ರ ಸರಕಾರದವರು ಇದೇ ವಿಷಯಕ್ಕೋಸ್ಕರ ಶ್ರೀ ಸಿ. ಪಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. ಅವರು ಭಾರತ ದೇಶದಲ್ಲೆಲ್ಲಾ ಓಡಾಡಿ ಬಂದು ರಿಪೋರ್ಟ್ ಮಾಡಿದ್ದಾರೆ. ಅದನ್ನು ಅನುಸರಿಸಿಯೇ ಈ ಮಸೂದೆ ಇದೆ. ಒಟ್ಟಿನಲ್ಲಿ ಒಂದು ಯೂನಿಫಾರ್ಮ್ ಮಸೂದೆ ಮೈಸೂರು ರಾಜ್ಯದಲ್ಲಿ ಜಾರಿಗೆ ಬರಬೇಕೆಂಬುದು ಅವಶ್ಯವಾಗಿರುವುದರಿಂದ ಈ ಮಸೂದೆಯನ್ನು ತರಲಾಗಿದೆ. ಈ ಮಸೂದೆಯನ್ನು ಪರಿಶೀಲನೆಗಾಗಿ ಸೆಲೆಕ್ಟ್ ಕಮಿಟಿಗೆ ಕಳಿಸಲಾಗುವುದು. ಈ ಮಸೂದೆಗೆ ಸದಸ್ಯರೆಲ್ಲರೂ ಬೆಂಬಲ ಕೊಡುತ್ತಾರೆಂದು ನಾನು ಆಶಿಸುತ್ತೇನೆ.

† ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದಲ್ಲಿಯ ಧಾರ್ಮಿಕ ಸಂಸ್ಥೆಗಳ ಬಗ್ಗೆ ಇರುವ ಈ ವಿಧೇಯಕವನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ನಮ್ಮ ರಾಜ್ಯದ ವಿವಿಧ ಭಾಗಗಳಲ್ಲಿರುವ ಕಾನೂನುಗಳನ್ನು ಸಂಯೋಜಿಸಿ ಏಕರೂಪ ಕಾನೂನು ಮಾಡಲು ಈ ಮಸೂದೆ ತಂದಿರುವುದರಿಂದ ಮಾನ್ಯ ಕಂದಾಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ನಮ್ಮ ಸಂಸ್ಥಾನದಲ್ಲಿ ಈ ಧಾರ್ಮಿಕ ಸಂಸ್ಥೆಗಳ ಆಡಳಿತ ಎಷ್ಟು ಅಧೋಗತಿಗೆ ಇಳಿದಿದೆ; ಯಾವ ಮಟ್ಟಕ್ಕೆ ಇಳಿದಿವೆ ಎನ್ನುವುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಸ್ವಾಮಿ, ಈ ಕಾನೂನು ಪ್ರಕಾರ ಟ್ರಸ್ಟಿಗಳನ್ನು ಅಂದರೆ ಧರ್ಮದರ್ಶಿಗಳನ್ನು ನೇಮಕ ಮಾಡುವ ಅಧಿಕಾರ ಸರಕಾರ ಇಟ್ಟುಕೊಂಡಿದೆ. ಈ ಅಧಿಕಾರವನ್ನು ತಾವು ದುರುಪಯೋಗ ಮಾಡಿಕೊಳ್ಳಬಹುದು. ಇದರಿಂದ ಒಂದು ಪಕ್ಷದ ಮನೋಭಾವನೆ ಬೆಳೆದುಕೊಂಡು ಬಂದು ಜನರು ದೇವರ ಮೇಲಿನ ಭಕ್ತಿ ಶ್ರದ್ಧೆ ಕಳೆದುಕೊಳ್ಳುವ ಸಂದರ್ಭ ಬಂದಿದೆ ಎಂದು ಬಹಳ ವಿಷಾದದಿಂದ ತಮ್ಮ ಗಮನಕ್ಕೆ ತರುತ್ತೇನೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಚಿತ್ರದುರ್ಗದಲ್ಲಿ ಒಂದು ಜುಮ್ಮಾ ಮಸೀದೆ ಇದೆ. ಅಲ್ಲಿಯ ದೇಶ ಇಮಾಂ ನೇಮಕವನ್ನು ಸರಕಾರದವರು ಮಾಡಿದ್ದಾರೆ. ಚಿತ್ರದುರ್ಗ ಟೌನಿನಲ್ಲಿಯ ಮುಸ್ಲಿಂರ ಅಭಿಪ್ರಾಯ ಪಡೆದು ಈ ನೇಮಕ ಮಾಡಬೇಕಾಗಿತ್ತು. ಆದರಲ್ಲಿ ಒಂದು ದೊಡ್ಡ ಕೈವಾಡ ನಡೆದಿದೆ. ಅಲ್ಲಿಯ ಮುಸ್ಲಿಮರು ಚುನಾವಣೆಯಲ್ಲಿ ತಮಗೆ ಬೆಂಬಲ ಕೊಡಲಿಲ್ಲ, ಕಾಂಗ್ರೆಸ್ಸಿಗೆ ವಿರೋಧವಾಗಿ ನಡೆದುಕೊಂಡರು ಎಂದು ಕಾಂಗ್ರೆಸ್ ಮುಖಂಡರು ಕಾಂಗ್ರೆಸ್ ಪಕ್ಷದವರನ್ನು ಧರ್ಮದರ್ಶಿಗಳನ್ನಾಗಿಯೂ ದೇಶ ಇಮಾಂ ನೇಮಕ ಮಾಡಿದ್ದಾರೆ. ಅರ್ಥಿಕ ಉಪ ಮಂತ್ರಿಗಳು ಪಂಚಾಯಿತಿ ಮಾಡುವುದಕ್ಕೆ ಅಲ್ಲಿ ಬಂದಾಗ್ಗೆ ಲಾಠಿಚಾರ್ಜ್ ಆಯಿತು. ಸರಕಾರದ ಆರ್ಡರಿಗೆ ಜನರ ವಿರೋಧ ಬಹಳವಿದೆ. ಈ ರೀತಿಯಾದರೆ ಕಾನೂನು ಸರಿಯಾಗಿ ಜಾರಿಗೆ ಬರಬಹುದೇ ಎಂದು ಅನಿಸುತ್ತದೆ. ಪಾರ್ಟಿ ಮನೋಭಾವ ಬಿಡದಿದ್ದರೆ ದೇಶದ ಉದ್ಧಾರವಾಗುವುದಿಲ್ಲ. ಚಿತ್ರದುರ್ಗದಲ್ಲಿ ಈ ದೇಶ ಇಮಾಂ ನೇಮಕವನ್ನು ಎರಡುವರೆ ವರ್ಷ ಮುಂದೆ ತಳ್ಳಿದರು. ಏಕೆ ಈ ರೀತಿ ಮಾಡಿದರು ? ರೆವಿನ್ಯೂ ಮಂತ್ರಿ

ಗಳಿಗೆ ಎಲ್ಲ ಅಧಿಕಾರ ಇದೆ. ಆದರೂ ಈ ಪ್ರಕರಣವನ್ನು ಮುಖ್ಯ ಮಂತ್ರಿಗಳ ನಿರ್ಣಯಕ್ಕೆ ಏಕೆ ಕಳಿಸಿಕೊಡಬೇಕು ? ಹಾಗಾದರೆ ಇವರು ಏಕೆ ಮಂತ್ರಿಗಳಾಗಿರಬೇಕು ?

† ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಹಾಗೆ ಹೇಳಲಿಲ್ಲ. ಅಲ್ಲಿ ಕಾಂಗ್ರೆಸ್ ಮತ್ತು ಪಿ.ಎಸ್.ಪಿ. ಇವರಲ್ಲಿ ಜಗಳವಿದೆ. ಮುಖ್ಯ ಮಂತ್ರಿಗಳು ಆ ಸ್ಥಳದಿಂದ ಬಂದಿರುವವರು ಆಗಿರುವುದರಿಂದ ಅವರಿಗೆ ಎಲ್ಲ ವಿಷಯ ಚೆನ್ನಾಗಿ ಗೊತ್ತಿದೆ. ಆದುದರಿಂದ ಈ ವಿಷಯ ಇತ್ಯರ್ಥ ಮಾಡಲು ಮುಖ್ಯ ಮಂತ್ರಿಗಳಿಗೆ ಕಳಿಸಿ ಕೊಟ್ಟಿರುವೆನು ಎಂದು ಹೇಳಿದ್ದೇನೆ. ನನ್ನ ಅಧಿಕಾರ ಸೂಪರ್‌ಸೀಡ್ ಮಾಡಿ ಕಳಿಸಲಿಲ್ಲ. ಸ್ಥಳದವರಿಗೆ ಧಾರ್ಮಿಕ ವಿಷಯ ಚೆನ್ನಾಗಿ ಗೊತ್ತಿರುತ್ತದೆಂದು ಅವರಿಗೆ ಫೈಲು ಕಳಿಸಿದೆ.

5-00 P.M.

ಶ್ರೀ ಬಿ. ಎಲ್. ಗೌಡ.—ಈಗ ಮಾನ್ಯರೆವಿನ್ಯೂ ಮಂತ್ರಿಗಳು, ಸ್ಥಳದವರು ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೇ ಆ ವಿಚಾರವನ್ನು ತೀರ್ಮಾನ ಮಾಡಲು ಅಧಿಕಾರ ಕೊಡಲಾಯಿತು ಎಂದು ಅಪ್ಪಣೆ ಕೊಡಿಸಿದರು. ಈಗ ಆಗಿರುವುದು ಏನು ? ಅಲ್ಲಿಯ ಡೆಪ್ಯುಟಿ ಕಮಿಷನರು ವರ್ಗವಾಗಿ ಚಾರ್ಜುಕೊಟ್ಟು ಹೋಗುವ ಬೆಳಿಗ್ಗೆ ತಮಗೆ ಬೇಡದವರು ವಿರುದ್ಧ ಆರ್ಡರ್ ಮಾಡಿ, ತಮಗೆ ಬೇಕಾದಂಥವರನ್ನು ಪೇಷ್ ಇಮಾಂ ಆಗಿ ನೇಮಕ ಮಾಡಿದ್ದೇ ಎಂದು ಹೇಳಿಬಿಟ್ಟು ಹೊರಟು ಹೋದರು. ಸರಕಾರದವರು ಎರಡೂವರೆ ವರ್ಷಗಳಿಂದ ಬಗೆಹರಿಸುವುದಕ್ಕೆ ಆಗಿದಿದ್ದ ವ್ಯಾಜ್ಯವನ್ನು ಒಂದೇ ಒಂದು ರಾತ್ರಿಯಲ್ಲಿ ಒಪ್ಪಿಬಿಟ್ಟು ಡೆಪ್ಯುಟಿ ಕಮಿಷನರು ತೀರ್ಮಾನ ಮಾಡಿದ್ದಾರೆ. ಅದೂ ಅಲ್ಲದೆ ಸರಕಾರಕ್ಕೆ ಇದ್ದಂಥ ಒಂದು ತೀರ್ಮಾನದ ಅಧಿಕಾರವನ್ನು ಡೆಪ್ಯುಟಿ ಕಮಿಷನರಿಗೆ ಸರಕಾರದವರು ಟ್ರಾನ್ಸ್‌ಫರ್ ಮಾಡಿದ್ದಾರೆ. ಹಾಗೆ ಅಧಿಕಾರ ಚಲಾಯಿಸುವುದನ್ನು ವರ್ಗಾಯಿಸುವ ಅಂಥ ವಿಶೇಷ ಸಂದರ್ಭ ಏನಿತ್ತು ? ಸರಕಾರದವರೆ ಖುದ್ದು ಪರಿಶೀಲನೆ ಮಾಡದೆ ಈ ಕೇಸಿನಲ್ಲಿ ಅನ್ಯಾಯ ಮಾಡಿದ್ದಾರೆ. ಪೇಷ್ ಇಮಾಮನ್ನು ಮೈನಾರಿಟಿ ಪಂಗಡಕ್ಕೆ ಸೇರಿದವರನ್ನು ಒಂದು ಮಾಡಿರುವುದರಿಂದ ಬಾಕಿಯವರಿಗೆ ನಮಾಜಿಗೆ ಅಡ್ಡಿ, ಪ್ರತಿಬಂಧಕ ಬಂದಿದೆ ಅವರು ಪ್ರಾರ್ಥನೆಗೋಸ್ಕರ ಮಸೀದಿಗೆ ಹೋಗುವುದಕ್ಕೆ ಅನ್ಯಾಯವಾಗಿದೆ, ಅವರು ಪೋಲೀಸು ಕಾವಲನಲ್ಲಿ ಪ್ರಾರ್ಥನೆ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ತಾವು ಈ ಹೊಸ ಕಾನೂನನ್ನು ತರುವುದು ರಾಜ್ಯದಲ್ಲಿ ಕಾನೂನಿನ ಏಕ ರೂಪತೆಯನ್ನು ತರುವುದಕ್ಕೆಂದು, ಆದರೆ ನಾನು ಹೇಳಿದ ನಿದರ್ಶನದಿಂದ ಅದರ ಪ್ರಯೋಜನ ಜನಗಳಿಗೆ ಸಿಕ್ಕುವುದಿಲ್ಲ ಎಂದು ತಿಳಿದುಕೊಳ್ಳಬಹುದು.

ಚಿತ್ರದುರ್ಗದ ಜುಮ್ಮ ಮಸ್‌ಜೀದಿಗೆ ಅವರ ಖರ್ಚು ವೆಚ್ಚಕ್ಕೋಸ್ಕರ ಸ್ವಲ್ಪ ಜಮೀನು ಇದೆ. ಅದರ ವಿಚಾರದಲ್ಲಿ ಅರ್ಜಿಯನ್ನು ಕೊಟ್ಟಿದೆ. ಹೊಸ ಕಾನೂನು ಮಾಡುತ್ತೀರೆ. ಅದು ಯಥಾ ಪ್ರಕಾರ ಪುಸ್ತಕದಲ್ಲಿಯೇ ಉಳಿದು ಅದರಲ್ಲಿರುವುದನ್ನು ಕಾರ್ಯಗತ ಮಾಡದೆ ಹೋದರೆ ಏನು ಪ್ರಯೋಜನವಾಗುತ್ತದೆ ? ಎಷ್ಟೋಸ್ತಾರಿ ಅರ್ಜಿ ಕೊಟ್ಟರೂ, ಕೇಳಿಕೊಂಡರೂ ಅನ್ಯಾಯ ಕೆಲಸಗಳನ್ನು ತಡೆಗಟ್ಟದೆ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಕಾನೂನುಗಳು ಪುಸ್ತಕದಲ್ಲಿಯೇ ಉಳಿದಿರುತ್ತವಲ್ಲಾ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಸಣ್ಣಪುಟ್ಟ ಧಾರ್ಮಿಕ ಸಂಸ್ಥೆಗಳಲ್ಲಿ ಆಡಳಿತ, ವ್ಯವಹಾರ ಚೆನ್ನಾಗಿಲ್ಲ. ಭಕ್ತರುಗಳು ದೇವರಿಗೆ ಕಾಣಿಕೆಯನ್ನು ಕೊಡುತ್ತಾರೆ. ಅವರು ಕೊಟ್ಟ ಪ್ರತಿಯೊಂದು ಕಾಸೂ ಸದ್ವಿನಿಯೋಗ ವಾಗಬೇಕು. ಆದರೆ ಕೆಲವರು ಆ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ದುರ್ವಿನಿಯೋಗ ಮಾಡಿದ್ದಾರೆ. ಈ ತರಹ ನಡೆಯುತ್ತಿರುವುದರಿಂದ ನಿಮ್ಮ ಕಾನೂನನ್ನು ಪುಸ್ತಕದಲ್ಲಿ ಬರೆದು ಕೊಂಡಿರುತ್ತೀರ ಅಷ್ಟೆ. ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ತಿಪ್ಪೇಸ್ವಾಮಿ ಜಾತ್ರೆಯಲ್ಲಿ ಬೇಕಾದಷ್ಟು ಹಣವನ್ನು ಧರ್ಮವಾಗಿ ಕೊಡುತ್ತಾರೆ. ಕಾಣಿಕೆ ಹಣ ಸರಿಯಾಗಿ ವಸೂಲಾಗಿ ವಿನಿಯೋಗಿಸುವ ಸರಿಯಾದ ಕ್ರಮವಿಲ್ಲ. ನೀವು ಮಾಡುವುದೆಲ್ಲಾ ಕಾಗದದಲ್ಲೇ ಇರದ ಕಾರ್ಯಾಚರಣೆಯಲ್ಲಿ ಬರುವುದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಮುಜರಾಯಿಗೆ ಸಂಬಂಧಪಟ್ಟ ಅನೇಕ ಜಾತ್ರೆಗಳಲ್ಲಿ ನೀರು ನೆರಳಿನ ಯಾವ ಸೌಕರ್ಯವೂ ಇರುವುದಿಲ್ಲ. ದೊಡ್ಡ ಸಂಸ್ಥೆಗಳನ್ನು ಉದ್ಧಾರ ಮಾಡುತ್ತೀರ. ಸಣ್ಣ ಸಣ್ಣ ಸಂಸ್ಥೆಗಳಿಗೂ ಸಾಕಷ್ಟು ಒಳ್ಳೆಯ ಏರ್ಪಾಡು ಮಾಡಿಕೊಡಬೇಕು. ದನಗಳಿಗೆ ಜಾತ್ರೆಗಳಲ್ಲಿ ಕುಡಿಯುವ ನೀರಿನ ಏರ್ಪಾಡು ಮಾಡಿಕೊಡಬೇಕು, ಇಲ್ಲದಿದ್ದರೆ ಬೇಸಿಗೆ ಕಾಲದಲ್ಲಿ ರೈತರ ಕಷ್ಟ ಹೇಳತೀರದು. ದೊಡ್ಡ ದೊಡ್ಡ ಸಂಸ್ಥೆಗಳನ್ನೇ ನೋಡಿಕೊಂಡು ಹೋಗದೆ ಸಣ್ಣ ಸಣ್ಣ ಸಂಸ್ಥೆಗಳನ್ನೂ ಉದ್ಧಾರ ಮಾಡಬೇಕು.

ಸರಕಾರದವರು ಬೋರ್ಡ್ ಆಫ್ ಟ್ರಸ್ಟೀಸ್ ನೇಮಕ ಮಾಡುವ ಒಂದು ಅಧಿಕಾರವನ್ನು ಇಟ್ಟುಕೊಂಡಿದ್ದಾರೆ. ನಾನು ಈಗಾಗಲೆ ಹೇಳಿದಹಾಗೆ ದೇವರ ಮೇಲೆ ಭಾರ ಹಾಕಿ ಯಾರನ್ನು

(ಶ್ರೀ ಬಿ. ಎರ್. ಗೌಡ)

ಧರ್ಮದರ್ಶಿಗಳಾಗಿ ನೇಮಕ ಮಾಡುತ್ತಿರೋ ಅವರಿಗೇ ಸಂಸ್ಥೆಗಳ ಆಡಳಿತವನ್ನು ಬಿಟ್ಟುಬಿಡಿರಿ, ಇಲ್ಲದಿದ್ದರೆ ಈ ಕಾನೂನಿನ ಉದ್ದೇಶ ಸಫಲವಾಗುವುದಿಲ್ಲ.

ಈ ಕ್ಲಾಜಿನಲ್ಲಿ ಒಂದು ಒಳ್ಳೆಯ ಸಲಹೆ ಇದೆ. ಅದೇನೆಂದರೆ 70 ವರ್ಷಕ್ಕಿಂತ ಜಾಸ್ತಿ ವಯಸ್ಸಾದವರನ್ನು ಟ್ರಸ್ಟಿ ಆಗಿ ನೇಮಕ ಮಾಡುವ ಹಾಗಿಲ್ಲವೆಂದು. ಇದರಿಂದ ಯುವಕರಿಗೆ ಹೆಚ್ಚು ಹೆಚ್ಚು ಅವಕಾಶವನ್ನು ಕಲ್ಪಿಸಿದಂತೆ ಆಯಿತು. ಸರ್ಕಾರದವರು ಈ ಒಳ್ಳೆಯ ಸಲಹೆಯನ್ನು ಕೊಟ್ಟಿರುವುದಕ್ಕೆ ಅವರನ್ನು ಅಭಿನಂದಿಸುತ್ತೇನೆ.

ಈ ಕಮಿಟಿ ಆಫ್ ಟ್ರಸ್ಟೀಸ್ ಈಗಿನ ಕಾಲದಲ್ಲಿ ಒಂದು ಅಡ್ವೈಸರಿ ಕೆಪ್ಯಾಸಿಟಿಯಿರುತ್ತದೆ. ಅಧಿಕಾರಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಟ್ಟಿದ್ದಾರೆ. ಇದರಿಂದ ಧಾರ್ಮಿಕ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಬೋರ್ಡ್ ಆಫ್ ಟ್ರಸ್ಟೀಸ್ ಅವರು ಏನು ತೀರ್ಮಾನಮಾಡುತ್ತಾರೋ ಅದು ಬೈಂಡಿಂಗ್ ಆಗಿರಬೇಕು. ಧರ್ಮದರ್ಶಿಗಳು ಸ್ಥಳೀಯ ಅನುಕೂಲಕ್ಕೋಸ್ಕರ ಮಾಡಿಕೊಂಡ ತೀರ್ಮಾನವನ್ನು ಮೇಲಿನ ಅಧಿಕಾರಿಗಳು ಒಪ್ಪಿಕೊಳ್ಳಬೇಕು, ಆ ಅಧಿಕಾರವನ್ನು ಧರ್ಮದರ್ಶಿಗಳಿಗೆ ಕೊಡಬೇಕೆಂದು ಒತ್ತಾಯಮಾಡುತ್ತೇವೆ. ಧರ್ಮದರ್ಶಿಗಳು ದೇವಸ್ಥಾನಗಳಲ್ಲಿ ಕೆಲಸ ಮಾಡಿದವರು, ಯೋಗ್ಯವಾದ ತೀರ್ಮಾನವನ್ನೇ ತೆಗೆದುಕೊಂಡಿರುತ್ತಾರೆ.

46ನೆಯ ಸೆಕ್ಷನ್ನಿನಲ್ಲಿ ಅನುವಂಶಿಕ ಹಕ್ಕನ್ನು ರೆಕಗ್ನೈಸ್ ಮಾಡಿದ್ದೀರ. ಮುಜರಾಯಿ ಸಂಸ್ಥೆಗಳಲ್ಲಿ ಈಗಿರುವ ಒಂದು ದುರವಸ್ಥೆ, ಅವಾಂತರವನ್ನು ಹೋಗಲಾಡಿಸಲಿಕ್ಕೆ ಈ ಮಸೂದೆಯನ್ನು ತಂದಿದೆ ಎಂದು ಹೇಳಿದರು. ಆದರೆ ಈ ಎಲ್ಲ ಹೆರಿಡಿಟರಿ ಆಫೀಸುಗಳನ್ನು ರೆಕಗ್ನೈಸ್ ಮಾಡಿರುವುದರಿಂದ, ಯಾರು ಯೋಗ್ಯರೊ, ಅರ್ಹರೊ ಅಂಥವರು ಇವರ ಸ್ಥಾನಗಳಿಗೆ ಬರುವಹಾಗಿಲ್ಲ. ಒಬ್ಬನ ಅಪ್ಪ ಪೂಜಾರಿಯಾಗಿದ್ದ ಮತ್ತೆ ಇನ್ನೊಬ್ಬನ ಅಪ್ಪ ಧರ್ಮದರ್ಶಿಯಾಗಿದ್ದ ಎಂದು ಅನುವಂಶಿಕ ಹಕ್ಕುಗಳನ್ನು ಮುಂದುವರಿಸಿಕೊಂಡು ಬಂದರೆ, ನಿಮ್ಮ ಉದ್ದೇಶ ಸಫಲವಾಗುವುದಿಲ್ಲ. ಇಂಥ ಒಂದು ಕಾನೂನು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಕಾನೂನು. ಈಗಿನ ಕಾಲಕ್ಕೆ ಇಂಥ ಕಾನೂನು ಇರಬಾರದು.

ಒಂದು ಬಹಳ ಮುಖ್ಯವಾದ ಅಂಶದ ಬಗ್ಗೆ ಒಂದು ಕ್ಲಾಜನ್ನು ತಂದಿದ್ದಾರೆ. ಕೆಲವರು ಮಠದ ಹೆಸರಿನಲ್ಲಿ ಅದರ ಸ್ವತ್ತನ್ನು ದುರ್ವಿನಿಯೋಗ ಮಾಡುತ್ತಿದ್ದಾರೆ. ಸರಕಾರ, ಸಾರ್ವಜನಿಕರು ಮತ್ತು ಭಕ್ತಾದಿಗಳು ಕೊಟ್ಟ ಸಹಾಯವನ್ನು, ಹಣವನ್ನು ದುರುಪಯೋಗ ಮಾಡುತ್ತಿದ್ದರೆ, ಅಂಥ ಸಂದರ್ಭಗಳಲ್ಲಿ ಸರಕಾರದವರು ಹಸ್ತಕ್ಷೇಪ ಮಾಡಿ ಮಠದ ಆಡಳಿತಕ್ಕೆ ಸರಿಯಾದ ವ್ಯವಸ್ಥೆ ಮಾಡುವುದು ಅವಶ್ಯಕ. ಅಂಥ ಕಾನೂನನ್ನು ಇದರಲ್ಲಿ ಅಳವಡಿಸಿದ್ದು ಬಹಳ ಒಳ್ಳೆಯದು. ಇದರಿಂದ ಒಳ್ಳೆಯ ಪರಿಣಾಮವಾಗುವುದು ಎನ್ನುವುದನ್ನು ನಾನು ಒಪ್ಪುತ್ತೇನೆ.

ಮುಂದೆ ಒಂದು ಕಾನೂನಿನಲ್ಲಿ ಪ್ರತಿಯೊಂದು ಜಿಲ್ಲೆಗೂ ಒಬ್ಬ ಆಸಿಸ್ಟೆಂಟ್ ಕಮಿಷನರನ್ನು ಪ್ರತ್ಯೇಕವಾಗಿ ನೇಮಕ ಮಾಡುವ ಅವಕಾಶವನ್ನು ಮಾಡಿಕೊಂಡಿದ್ದೀರಾ. ಇದರಿಂದ ಹಣ ಹೆಚ್ಚು ಖರ್ಚಾಗುತ್ತದೆ; ಏನು ಹೆಚ್ಚು ಪ್ರಯೋಜನವೂ ಆಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇದನ್ನು ಯೋಚನೆ ಮಾಡಬೇಕು.

ಒಟ್ಟಿನಲ್ಲಿ ಹೇಳುವುದಾದರೆ ಈ ವಿಧೇಯಕವನ್ನು ಸ್ವಾಗತಿಸುತ್ತಾ, ಸರಕಾರ ಧಾರ್ಮಿಕ ಸಂಸ್ಥೆಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದು ಕಡಿಮೆಯಾಗಬೇಕು, ಧಾರ್ಮಿಕ ಸಂಸ್ಥೆಗಳೇ ಅವುಗಳ ಜವಾಬ್ದಾರಿಯನ್ನು ವಹಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

[Mr. Deputy Speaker in the Chair]

ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು-2):—ಸ್ವಾಮಿ, ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ಮಾನ್ಯ ರೆವಿನ್ಯು ಮಂತ್ರಿಗಳು ಈ ಬಿಲ್ಲಿನ ಬಗ್ಗೆ ವಿವರ ಕೊಟ್ಟಾಗ ಇದು ಬರೀ ಹಿಂದೂಗಳಿಗೆ ಸಂಬಂಧಪಟ್ಟಿದು, ಇದು ಬೇರೆ ಸಮಾಜಗಳಿಗೆ ಪೂರ್ತಿ ಅನ್ವಯಿಸುವುದಿಲ್ಲ ಎಂಬ ಸಂಶಯ ಕಂಡುಬಂದಿತು. ಈಗತಾನೆ ನಾವು ಘಟನೆಯ 16ನೇ ಆರ್ಟಿಕಲ್ಲಿಗೆ ತಿದ್ದುಪಡಿ ತಂದಿದ್ದೇವೆ ಇದರ ಉದ್ದೇಶ ದೇಶದಲ್ಲಿ ಒಂದು ಭಾವೈಕ್ಯತೆ ಬರಬೇಕು, ಅದೇ ಹೊತ್ತಿಗೆ ಎಲ್ಲ ಸಮಾಜಗಳವರೂ ಸಮತವಾದ ತತ್ವಕ್ಕೆ ಸರಿಯಾಗಿ ಮುಂದಕ್ಕೆ ಹೋಗಬೇಕು ಎಂದು. ಹಾಗಿರುವಾಗ ಒಂದು ಸಮಾಜಕ್ಕೆ ಅನ್ವಯಿಸುವ ರೀತಿಯಲ್ಲಿ, ಜಾತ್ಯತೀತ ರಾಷ್ಟ್ರದಲ್ಲಿ ಈ ಮಸೂದೆ ಬರುವುದು ಸರಿಯೋ ಅಲ್ಲವೋ ಎಂಬುದು ನನ್ನ ಒಂದು ಸಂಶಯ. ಎರಡನೆಯದಾಗಿ ಏನಾಗಿದೆಯೆಂದರೆ, ನಾವು ಈ ಕ್ಲಾಜುಗಳನ್ನೆಲ್ಲಾ ಮಾಡುವಾಗ ಈ ಧಾರ್ಮಿಕ ಸಂಸ್ಥೆಗಳಲ್ಲಿ ಕೂಡ ರಾಜಕೀಯವನ್ನು ತರುತ್ತಿದ್ದೇವೆ.

ನಾನು ರೆವಿನ್ಯೂ ಮಂತ್ರಿಗಳನ್ನು ಕೇಳುವುದು, ದೇವರನ್ನು ರಾಜಕೀಯದಿಂದ ಸ್ವಲ್ಪ ಮೇಲೆ ಇಡಿ ಎಂದು ರಾಜಕೀಯವನ್ನು ದೇವರಿಗೆ ಮುಟ್ಟಿಸಬೇಡಿ, ಏಕೆಂದರೆ ದೇವರು ಎಲ್ಲರಿಗೂ ಬೇಕಾದವನು ಎಲ್ಲ ಪಾರ್ಟಿಗಳಿಗೂ ಬೇಕಾದವನು. ಪಿ.ಎಸ್.ಪಿಗೂ ಬೇಕು, ಮತ್ತು ಕಾಂಗ್ರೆಸ್ಸಿಗೂ ಬೇಕು.

ಶ್ರೀ ಎಸ್. ಏಸ್. ಕೊಳಕೆಬೈಲ್ (ಕುಂದಾಪುರ).—ಕಮ್ಯೂನಿಸ್ಟರಿಗೂ ಬೇಕೊ ?

ಶ್ರೀ ಕೃಷ್ಣ ಶೆಟ್ಟಿ.—ಬೇಕು. ನಮ್ಮ ಆರೋಗ್ಯ ಮಂತ್ರಿಗಳು ನೋಡಿದ್ದಾರೆ, ಅವರಿಗೆ ಗೊತ್ತಿದೆ. ಶ್ರೀ ಕೊಳಕೆಬೈಲರಿಗೂ ಬೇಕು, ನಮಗೂ ಬೇಕು. ಆದರೆ ದೇವರಿಗೆ ಯಾವ ಒಂದು ಗುಣವನ್ನೂ ಕೊಡಬೇಡಿ. ಮಾನವೀಯತೆಯನ್ನು ಕಾಪಾಡಿ, ಮಾನವ ಸಮಾಜದ ಸಮಾನತೆಯನ್ನು ಬೆಳಸಬೇಕು ಎಂಬ ಒಂದೇ ಒಂದು ದೃಷ್ಟಿಯುಳ್ಳ, ಸಮಾಜವನ್ನು ಕಲ್ಯಾಣ ದಾರಿಯಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗಲು ಬುದ್ಧಿಕೊಡುವ ದೇವರು ನಮಗೆ ಬೇಕು.

ಹಾಗಿರುವಾಗ ಇಲ್ಲಿ ಈ ಬಿಲ್ಲನ್ನೇನೋ ತಂದಿದ್ದಾರೆ. ಇದನ್ನು 'ತಂದು' ಅದರ ವ್ಯಾಪಕತ್ವವನ್ನು ಎಲ್ಲ ಸಮಾಜದ ಸಂಸ್ಥೆಗಳಿಗೂ ಅನ್ವಯಿಸುವ ರೀತಿಯಲ್ಲಿ ಈ ಕೆಲಸವನ್ನು ಮಾಡಿಕೊಂಡು ಬಂದರೆ ಒಳ್ಳೆಯದು. ಇಲ್ಲದೆ ಇದ್ದರೆ, ಇದರಿಂದ ಜಾತೀಯತೆಯನ್ನು ಬೆಳೆಸಿದ ಹಾಗಾಗುತ್ತದೆ. ಮಾನ್ಯ ರೆವೆನ್ಯೂ ಮಂತ್ರಿಗಳು ಈ ಬಿಲ್ಲನ್ನು ಮಂಡಿಸುವಾಗ ಹೇಳಿದ್ದರಲ್ಲಿ ಕೆಲವು ಜನಾಂಗಗಳ ಸಂಸ್ಥೆಗಳನ್ನು ಬಿಟ್ಟ ಹಾಗೆ ಕಂಡುಬಂತು. ಕ್ರಿಶ್ಚಿಯನ್ ಹಾಗೂ ಮುಸಲ್ಮಾನರಿಗೆ ಇದನ್ನು ಅನ್ವಯಿಸುವುದಕ್ಕೆ ಬರುವುದಿಲ್ಲವೋ ಏನೋ ಅವರನ್ನು ಬಿಟ್ಟಿರಲಿಕ್ಕೆ ಸಾಕು. ಆದರೆ ಹಿಂದುಗಳ ಮಟ್ಟಿಗೆ ಏನಾದರೂ ಮಾಡಬಹುದು ಎಂದು ಇದನ್ನು ತಂದ ಹಾಗೆ ಕಾಣುತ್ತದೆ. ಇದರಿಂದ ನಮ್ಮಲ್ಲಿ ಪ್ರತ್ಯೇಕತೆಯನ್ನು ತರುವುದಕ್ಕೆ ದಾರಿ ಮಾಡಿದ ಹಾಗಾಗುತ್ತದೆ. ಜಾತ್ಯತೀತ ರಾಷ್ಟ್ರದಲ್ಲಿ ಜಾತೀಯತೆ ಸಮಗ್ರ ಸಮಾಜದಲ್ಲಿ ಬೆಳೆಯುವುದಕ್ಕೆ ಅವಕಾಶ ಮಾಡಿದ ಹಾಗಾಗುತ್ತದೆ. ಒಂದು ಧರ್ಮಕ್ಕೆ ಮಾತ್ರ ಸಂಬಂಧಪಡದೆ ಎಲ್ಲ ಧರ್ಮಗಳಿಗೂ ಅನ್ವಯಿಸುವಂತೆ ತರಬೇಕು. ಧರ್ಮದ ಹೆಸರಿನಿಂದ ದೊಡ್ಡ 'ಷೋ' ನಡೆಯುತ್ತದೆ. ಒಂದು ಕುಟುಂಬದವರು ದೇವರ ಹೆಸರಿನಲ್ಲಿ ಮಾಡಿಸಿದ್ದು ಒಬ್ಬನ ಅನುಕೂಲಕ್ಕೆ wakf ಎಂದು ನಡೆಯುತ್ತದೆ. ಅದೇ ರೀತಿ ಮನೆದೇವರು ಎಂದು ಹೇಳುತ್ತಾರೆ, ಹಿಂದುಗಳು. ಮನೆಯೂ ಇಲ್ಲ, ದೇವರು ಇಲ್ಲ, ಆದರೂ ಮನೆದೇವರಿಗೆ ಉಂಬಳಿ ಇರುತ್ತದೆ. ಮನೆ ಬಿದ್ದಿರಬಹುದು, ದೇವರಿಲ್ಲದೆ ಇರಬಹುದು.

ಭೂಮಸೂದೆ ಬರುವ ಹೊತ್ತಿಗೆ ಇಂಥ ಧಾರ್ಮಿಕ ಸಂಸ್ಥೆಗಳು ಹೊಂದಿರುವ ಭೂಮಿಗೆ ಅದರಿಂದ ವಿನಾಯಿತಿ ಕೊಡಿಸಬೇಕೆಂಬ ಉದ್ದೇಶದಿಂದ ಇದನ್ನು ತರುವಂಥ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ಸಮಾಜವು ಬೆಳೆದುಕೊಂಡು ಬರುವಾಗ, ಹೊಸ ಉದ್ದೇಶವನ್ನು ನೆರವೇರಿಸುವ ದೃಷ್ಟಿಯಿಂದ, ಆ ಒಂದು ದಿಕ್ಕಿನಲ್ಲಿ ಮುಂದುವರೆಯುತ್ತಿರುವಾಗ ಜಾತೀಯತೆಯನ್ನು ತೆಗೆಯುವ ರೀತಿಯಲ್ಲಿ ಜಾತ್ಯತೀತ ರಾಷ್ಟ್ರವಾಗಿ ಬೆಳೆದುಬರುವ ರೀತಿಯಲ್ಲಿ ಈ ಕಾನೂನುಗಳು ಉತ್ತಮವಾಗಿ ಅದಕ್ಕನುಗುಣವಾಗಿರಬೇಕೇ ಹೊರತು ಪ್ರತ್ಯೇಕತಾ ಭಾವನೆಯನ್ನು ಬೆಳೆಸುವ ರೀತಿಯಲ್ಲಿ, ಜನತೆಯಲ್ಲಿ ಪ್ರತ್ಯೇಕತೆಯನ್ನುಂಟುಮಾಡುವ ರೀತಿಯಲ್ಲಿ ಈ ಕೆಲಸವಾಗಬಾರದು, ರಾಜಕೀಯ ಬರಬಾರದು; ಇದು ಎಲ್ಲ ಜಾತಿಗಳಿಗೂ, ಸಮಾಜಗಳಿಗೂ, ಧರ್ಮಸಂಸ್ಥೆಗಳಿಗೂ ಅನ್ವಯಿಸುವಂಥ ರೀತಿಯಲ್ಲಿ ಒಳ್ಳೆಯ ರೀತಿಯಲ್ಲಿ ಹೊಸ ಕಾರ್ಯಕ್ರಮಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾರ್ಪಡಿಸುವುದಕ್ಕಾಗಿ ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿಕೊಡಬೇಕು. ಇದರಲ್ಲಿರುವ ಕೆಲವು ಕುಂದಕಗಳು ಹೋಗಿ ಬಿಲ್ ಪರಿಪೂರ್ಣವಾದ ರೀತಿಯಲ್ಲಿ ಸೆಲೆಕ್ಟ್ ಕಮಿಟಿಯಿಂದ ಬರಬೇಕೆಂದು ಕೇಳಿಕೊಂಡು ನಾನು ಈ ಬಿಲ್ಲನ್ನು ಸ್ವಾಗತಿಸುತ್ತೇನೆ.

†ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅಧ್ಯಕ್ಷರೇ ಮಾನ್ಯ ರೆವೆನ್ಯೂ ಸಚಿವರು ತಂದಿರುವ ಈ ಬಿಲ್ಲನ್ನು ನಾನು ಸ್ವಾಗತಿಸುತ್ತ ಇವರು ಬಹಳ ಸಾರಿ ತಿರುಪತಿಗೆ ಹೋಗಿ ಬಂದಮೇಲೆ ಇಂಥ ಒಂದು ಬಿಲ್ ತರಬೇಕಾದ ಆವಶ್ಯಕತೆ ಬಹಳ ಇದೆ ಎಂದು ಮನಗಂಡು, ಮೊದಲೇ ಮಾಡುವುದನ್ನೆಲ್ಲ ಮಾಡಿಬಿಟ್ಟರು. ಇಲ್ಲಿಂದ ಸಿಮೆಂಟ್ ವಗೈರೆ ಎಲ್ಲವನ್ನು ಕಳಿಸಿ ಛತ್ರಗಳನ್ನೆಲ್ಲ ಕಟ್ಟಿಸಿ ನಮ್ಮ ಸಂಸ್ಥಾನದಲ್ಲಿಯೇ ಅದನ್ನೆಲ್ಲ ಮಾಡಿದ್ದರೆ ಉತ್ತಮವಾಗುತ್ತಿತ್ತು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಐದು ಲಕ್ಷ ರೂಪಾಯಿ ಖರ್ಚುಮಾಡಿ 500 ಜನಗಳಿಗೆ ಅನುಕೂಲ ಮಾಡಿದ್ದೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅಲ್ಲಿ ಮಾಡಿದಿರಿ. ಕೆಟ್ಟ ಮೇಲೆ ಬುದ್ಧಿ ಬಂತು ಎನ್ನುವ ಹಾಗೆ ಈಗ ಬುದ್ಧಿ ಬಂದು ಇದನ್ನು ಮಾಡಿರುವುದು ಉತ್ತಮ. ತಿರುಪತಿಗೆ ಸುಮಾರು ಅರ್ಧಕ್ಕಿಂತಲೂ ಹೆಚ್ಚಿನ ಆದಾಯ ನಮ್ಮ ಸಂಸ್ಥಾನದಿಂದ ಹೋಗುತ್ತದೆಂದು ಕಾಣುತ್ತದೆ. ಆದರೆ ಅಲ್ಲಿ ನಮ್ಮ ದೇಶದ ಜನಗಳಿಗೆ ಕಟ್ಟಡಗಳ ಸೌಕರ್ಯಗಳನ್ನು ಅಲ್ಲಿಯ ಮ್ಯಾನೇಜ್‌ಮೆಂಟಿನವರು ಒದಗಿಸಿಕೊಡುವುದಿಲ್ಲ. ಅರಸೀಕೆರೆಯ ಪಕ್ಕದಲ್ಲಿ ಮಾಲೇಕಲ್ ತಿರುಪತಿ ಎಂಬ ಒಂದು ಬೆಟ್ಟವಿದೆ. ಅದು ಒಂದು ಪುಣ್ಯ ಸ್ಥಳ. ತಿರುಪತಿಯಲ್ಲಿ ಮಾತ್ರ ದೇವರಿದ್ದಾನೆ, ಅರಸೀಕೆರೆಯ ಹತ್ತಿರವಿರುವ ಮಾಲೇಕಲ್.

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ತಿರುಪತಿಯಲ್ಲಿ ದೇವರಿಲ್ಲವೇ? ಮಾನ್ಯ ಕಂದಾಯ ಮಂತ್ರಿಗಳು ಮಾಲೇಕಲ್ ತಿರುಪತಿಯಲ್ಲಿ ಬೇಕಾದಷ್ಟು ಕೊಠಡಿಗಳನ್ನು ಕಟ್ಟಿಸಿ ಅನುಕೂಲ ಮಾಡಿದ್ದರೆ, ಎಷ್ಟೋ ಚೆನ್ನಾಗಿರುತ್ತಿತ್ತು.

ದೇವಸ್ಥಾನಗಳ ಹೆಸರಿನಲ್ಲಿ ರಾಜಕೀಯದಿಂದ ನಿವೃತ್ತರಾಗತಕ್ಕ ಕೆಲವರಿಗೆ ಉದ್ಯೋಗವನ್ನು ಒದಗಿಸುವುದಕ್ಕೆ ಇದರಿಂದ ಅವಕಾಶವನ್ನು ಕಲ್ಪಿಸಿಕೊಡುತ್ತಾರೆಯೋ ಏನೋ ಎನ್ನುವ ಅನುಮಾನ ಕೂಡ ನನಗೆ ಬಂದಿದೆ. ಕಾಮರಾಜರ ಸೂತ್ರದ ಪ್ರಕಾರ ನಮ್ಮ ಸರ್ಕಾರದಲ್ಲಿಯೂ post-mortem ಆಗುವ ಸಂಭವವಿದೆ. ಅಂಥವರಿಗೆ ಒಂದು ಧರ್ಮದರ್ಶಿತ್ವಕೊಟ್ಟು ದೇವಸ್ಥಾನದ ಆಶ್ರಯ ಕೊಡಬೇಕೆಂದು ಇವರ ಮನಸ್ಸಿನಲ್ಲಿದೆಯೇನೋ ಎಂದು ಅನುಮಾನ ಬರುತ್ತದೆ. ಈ ತರಹ ಆಗುವುದಕ್ಕೆ ಅವಕಾಶವಿರಬಾರದು. ಆಡಳಿತ ವರ್ಗದ ನೇಮಕದಲ್ಲಾಗಲಿ, ಇತರ ವ್ಯವಹಾರಗಳಲ್ಲಾಗಲಿ ಕೈವಾಡವಿಲ್ಲದೆ ಧರ್ಮದರ್ಶಿಗಳನ್ನು ನೇಮಿಸಬೇಕು. ಚಿತ್ರದುರ್ಗದ ಮಸೀದಿ ವಿಷಯ ರೆವೆನ್ಯೂ ಶಾಖಾ ಸಚಿವರ ಕೈಬಿಟ್ಟು ಮುಖ್ಯಮಂತ್ರಿಗಳಿಗೆ ಹೋಗಿ, ರಾಜ್ಯಪಾಲರಿಗೂ ಹೋಗಿದೆ ಎನ್ನುವ ಪರಿಸ್ಥಿತಿಗೆ ಬರಬೇಕಾದರೆ, ಎಲ್ಲಿಗೆ ನಾವು ಇಳಿದಿದ್ದೇವೆ ಎಂದರೆ ಇರುವ ಮೆಟ್ಟಲುಗಳಲ್ಲಿ ಕಡೆಯ ಮೆಟ್ಟಲಿಗೆ ಇಳಿದಿದ್ದೇವೆ. ಹೀಗಾಗಬಾರದು. ಮೈಸೂರಿನ ಮಂತ್ರಿಗಳು ಕೂಡ ಇನ್ನು ಮೇಲ್ಮಟ್ಟದಲ್ಲಿರಬೇಕು. ತಾವು ಇನ್ನು ನಾಲ್ಕೈದು ತಿಂಗಳು ಮಂತ್ರಿಗಳಾಗಿರಬಹುದು. ಇರುವಷ್ಟು ಕಾಲವೂ ನಿಮ್ಮ ಅಧಿಕಾರವನ್ನು ಬಿಟ್ಟುಕೊಡದೆ ನನ್ನಲ್ಲಿರುವ ಅಧಿಕಾರವನ್ನು ನಾನೇ ಚಲಾಯಿಸುತ್ತೇನೆಂದರೆ ನಿಮಗೆ ಗೌರವ ಬರುತ್ತದೆ. ಇಲ್ಲದೆ ಇದ್ದರೆ ಶ್ರೀ ಕೃಷ್ಣಪ್ಪನವರಾಯಿತು, ಅವರು ಬಂದರು, ಇವರು ಬಂದರು, ಹೋದರು ಎಂದಾಗುತ್ತದೆ. ಶಾಶ್ವತವಾಗಿ ಉಳಿಯಬೇಕಾದರೆ ದಕ್ಷತೆಯಿರಬೇಕು. ಈ ಬಿಲ್ಲನ್ನು ಕೂಡ ನೀವು ರಾಜಕೀಯಕ್ಕೆ ಉಪಯೋಗಿಸಿಕೊಳ್ಳಬೇಡಿ. ಅನೇಕ ಉತ್ತಮವಾದ ದೇವಸ್ಥಾನಗಳು ನಮ್ಮ ಸಂಸ್ಥಾನದಲ್ಲಿವೆ. 'ದೇವರು' ಎಂದರೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಒಂದು ಉದಾಹರಣೆಯನ್ನು ಹೇಳಬೇಕಾದರೆ ತಿಪಟೂರು ಮತ್ತು ಅರಸೀಕೆರೆಯ ಮಧ್ಯೆ ಇರುವ ಒಂದು ಫರ್ಲಾಂಗ್ ಕಲ್ಲಿಗೆ ಯಾರೋ ಅರಸಿನ ಬಳಿದು, ಕುಂಕುಮವಿಟ್ಟು ಕಾಯಿ ಒಡೆದರು. ಈಗ ಸಾವಿರಾರು ಕಾಯಿಗಳು ಒಡೆಯುತ್ತಿವೆ. ಇಂಥ ಭಕ್ತ ಶಿರೋಮಣಿಗಳು ನಾವು! ನಾವು ನಿಮ್ಮಂಥ ಬುದ್ಧಿವಂತರ ಕೈಗೆ ಸಿಕ್ಕಿದ್ದೇವೆ. ಕಾಂಗ್ರೆಸ್ ಸಹ ಒಂದು ದೇವರು; ಬಸವಣ್ಣ ಒಂದು ದೇವರು. ಇಂಥ ಮೂಢ ನಂಬಿಕೆ ನಮ್ಮಲ್ಲಿ ಬಂದಿದೆ. ಒಬ್ಬ ಮುದುಕಿ ಓಟು ಮಾಡುವಾಗ ಮುಂದಿನ ಸಲ ನಾನು ಇರುತ್ತೇನೆಯೋ ಇಲ್ಲವೋ ಎಂದು ಬಸವಣ್ಣನ ಗುರುತಿಗೆ ಓಟು ಹಾಕಿದಳು. ನೀವು ತಿಂದು ತೇಗಿರುವ ಬಸವಣ್ಣಗಳು. ಹೀಗಾಗಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ಸ್ವಾಮಿ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಈ ಮುಜರಾಯಿ ಬಿಲ್ಲನ್ನು ಮಾನ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟು ವಿವರಣೆ ಮಾಡುವಾಗ ಈ ಬಿಲ್ಲಿನಲ್ಲಿ ಅಡಕವಾಗಿರುವ ವಿಷಯಗಳನ್ನು ನಮಗೆ ಹೇಳದೇ, ಮಾರಿಯಮ್ಮ, ಎಲ್ಲಮ್ಮ, ಬಿಳಿಗಿರಿರಂಗ, ಮಾದೇಶ್ವರ ದೇವಸ್ಥಾನಗಳಿವೆ—ವಾನಪ್ರಸ್ಥಾಶ್ರಮ, ಮಠ ಮಂದಿರಗಳು, ಗುಡಿ ಗೋಪುರಗಳು ನಮ್ಮ ಕಂಟ್ರೋಲಿಗೆ ಬರುತ್ತವೆ. ಅವುಗಳನ್ನೆಲ್ಲಾ ಕಂಟ್ರೋಲಿಗೆ ತೆಗೆದುಕೊಂಡು ರೆಗ್ಯೂಲೇಟ್ ಮಾಡುವುದಕ್ಕೆ ಸಮಗ್ರವಾದ ಕಾನೂನನ್ನು ತಂದಿದ್ದೇವೆ; ಒಪ್ಪಿಕೊಂಡು ಬಿಡಿ ಎಂದು ಹೇಳಿದರು. ಗೊಮ್ಮಟೇಶ್ವರನಿಗೆ ಒಂದು ಗುಡಿ ಕಟ್ಟಿಸುತ್ತೇವೆ, ಒಂದು ಸ್ಕೂಲು ತೆಗೆಯುತ್ತೇವೆ ಎಂದು ಹೇಳಿದರೆ ಹೊರತು ಯಾವ ಯಾವದು ಅನುಪಯೋಗವಾಗಿತ್ತು, ಯಾವ ಯಾವುದು ಅನಾನುಕೂಲವಾಗಿತ್ತು, ಅವರು ಈ ಹೊಸ ಕಾನೂನನ್ನು ತಂದ ಮೇಲೆ ಏನಾಯಿತು ಎಂದು ಹೇಳದೆ ತಿರುಪತಿಗೆ ಹೋಗಿ ನೋಡಿ, ತಿರುಪತಿ ವೆಂಕಟರಮಣನಿಗೆ 2 ಕೋಟಿ ರೂಪಾಯಿ ವರ್ಷಕ್ಕೆ ಉತ್ಪನ್ನ ಬರುತ್ತದೆ. ಅದೇ ನಾವು 20 ಜನ ಡೆಪ್ಯುಟಿ ಕಮಿಷನರು, 200 ಜನ ಅಸಿಸ್ಟೆಂಟ್ ಕಮಿಷನರು, 6,000 ಜನ ಕರಣಿಕರು ಎಲ್ಲರನ್ನೂ ಇಟ್ಟುಕೊಂಡು 3-4 ಕೋಟಿ ರೂಪಾಯಿ ವಸೂಲು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಭಕ್ತ ಪರಾಧೀನರನ್ನೆಲ್ಲಾ ಒಪ್ಪಿಸಿಕೊಳ್ಳುವುದಕ್ಕೆ ಹೊರಟಿರಿ. ಈ ಬಿಲ್‌ನಲ್ಲಿ ಏನು ಅಡಕವಾಗಿದೆ? ಯಾವ ಯಾವ ಮಠಗಳು, ಯಾವ ಯಾವ ಮಂದಿರಗಳು, ಯಾವ ಯಾವ ಆಶ್ರಮಗಳು, ಯಾವ ಯಾವ ಸಮಾಧಿಗಳು, ಯಾವ ಯಾವ ಚರ್ಚುಗಳು, ಯಾವ ಯಾವ ಮಸೀದಿಗಳು ಹೇಗೆ ನಿಮ್ಮ ಕಂಟ್ರೋಲಿಗೆ ಬರುತ್ತವೆ ಎಂಬುದನ್ನು ಹೇಳಲೇ ಇಲ್ಲ. ನೀವು ಪಂಚಲಿಂಗ ನೋಡಿರಿ—ತುಂಗಭದ್ರಾ ಮೇಲೆ ಬಂದರೆ ಅದನ್ನು ಕಾಣುತ್ತೀರಿ ಎಂದು ಹೇಳಿದರೇ ವಿನಾ, ಯಾವುದಾದರೂ ಒಂದು ಸೆಕ್ಷನ್ ವಿಷಯದಲ್ಲಿ ಅವರು ಏನಾದರೂ ಹೇಳಿದಿರಾ, ಸ್ವಾಮಿ? ಈ ಮಸೂದೆಗೆ 7 ಗಂಟೆ ಕಾಲ ಕೊಟ್ಟಿದ್ದೀರಿ, 7 ಗಂಟೆ ಕಾಲ ಪೂರ್ತಿಯಾಗಿ ಉಪಯೋಗಿಸಿಕೊಳ್ಳದೆ ಇದನ್ನು ಹಾಗೆಯೇ ಪಾಸ್ ಮಾಡಿಸಿಕೊಂಡು ಇನ್ನೊಂದು ಮಸೂದೆಗೆ ಹೋಗಬಹುದಾಗಿತ್ತಲ್ಲ? ಸರ್ಕಾರದವರು 5 ಪ್ರಾಂತ್ಯಗಳಲ್ಲಿರ

ತಕ್ಕ ಕಾನೂನುಗಳನ್ನೆಲ್ಲಾ ಒಂದು ಮಾಡಿ ಸಮಗ್ರವಾದ ಕಾನೂನನ್ನು ತರಬೇಕೆಂದಿರುವಾಗ ಕೊಡಗಿನಲ್ಲಿ ಏನಿದೆ, ಕೊಡಗಿನ ಜನ ಯಾವ ದೇವರನ್ನು ಪೂಜೆ ಮಾಡುತ್ತಾರೆ, ಅಲ್ಲಿ ಯಾವ ಮಠ ಇದೆ, ಅಲ್ಲಿಗೆ ಇಂಥಾ ಕಾನೂನು ಮಾಡುವುದಕ್ಕೆ ಬರುತ್ತದೆಯೋ ಇಲ್ಲವೇ ಎಂಬುದನ್ನೆಲ್ಲಾ ಯೋಚನೆ ಮಾಡಿ ಸಮಗ್ರವಾದ ಒಂದು ಸರ್ವೇ ನಡೆಸಿ, ಆಮೇಲೆ ಇದನ್ನು ತೆಗೆದುಕೊಂಡು ಬಂದಿದ್ದರೆ ಚೆನ್ನಾಗಿತ್ತು ಎಂದು ನನ್ನ ಅಭಿಪ್ರಾಯ. ಇಂಡಿಯಾ ಸರ್ಕಾರದವರು ಸರ್ ಸಿ. ಪಿ. ರಾಮಸ್ವಾಮಿ ಐಯರ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ನೇಮಕ ಮಾಡಿ ಅವರು ಭಾರತದಲ್ಲೆಲ್ಲಾ ಓಡಾಡಿ ಮಠಗಳು ಹೇಗಿರಬೇಕು, ಗುಡಿ ಗೋಪುರಗಳು ಹೇಗಿರಬೇಕು; ಮಸೀದಿಗಳು ಹೇಗಿರಬೇಕು ಎಂಬ ವರದಿಯನ್ನು ಕೊಟ್ಟಿದ್ದಾರೆ. ಅದು ಕೇಂದ್ರ ಸರ್ಕಾರದ ಮುಂದೆ ಇದೆ. ಅವರು ಆ ವಿಚಾರವಾಗಿ ಚರ್ಚೆ ಮಾಡಿಲ್ಲ, ಚರ್ಚೆ ಮಾಡಿ ಯಾವ ರೀತಿ ಕಾರ್ಯರೂಪಕ್ಕೆ ತರಬೇಕೆಂದು ಒಂದು ತೀರ್ಮಾನ ತೆಗೆದುಕೊಂಡ ಮೇಲೆ ಇದನ್ನು ತಂದಿದ್ದರೆ ಚೆನ್ನಾಗಿತ್ತು. ಈಗ ಅದರಲ್ಲಿ ಅಡಕವಾಗಿರತಕ್ಕ ಎಲ್ಲಾ ವಿಷಯಗಳೂ ಇದಕ್ಕೆ ವಿರುದ್ಧವಾಗಿದ್ದರೆ ಪುನಃ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಆದ್ದರಿಂದ ಇನ್ನೂ ಸ್ವಲ್ಪ ಕಾಲ ಕಾದಿದ್ದು ತಂದಿದ್ದರೆ ಏನಾಗುತ್ತಿತ್ತು ಎಂದು ಕೇಳುತ್ತೇನೆ. ಅನೇಕ ಮಠಗಳವರು ಅದಕ್ಕೆ ಬರತಕ್ಕ ಉತ್ಪನ್ನವನ್ನು ತಿಂದು ಹಾಕುತ್ತಿದ್ದಾರೆ; ಅದನ್ನು ರೆಗ್ಯೂಲೇಟ್ ಮಾಡುವುದಕ್ಕೆ ಕೂಡಲೇ ಯಾವುದಾದರೂ ಒಂದು ತರಹ ಚೆಕ್ ಕಂಟ್ರೋಲಿಂಗ್ ಅಥಾರಿಟಿ ಇಡಬೇಕೆಂದು ಹೇಳಿದಿರಿ; ಅದನ್ನು ಒಪ್ಪಿಕೊಳ್ಳುತ್ತೇನೆ. ನಾಳೆ ಒಂದು ಪಕ್ಷ ಇಂಡಿಯಾ ಸರ್ಕಾರದವರು ಸರ್ ಸಿ. ಪಿ. ರಾಮಸ್ವಾಮಿ ಐಯ್ಯರ್ ಅವರು ಕೊಟ್ಟಿರತಕ್ಕ ವರದಿಯನ್ನು ನೋಡಿ ಸಮಗ್ರ ಭಾರತಕ್ಕೆ ಅನ್ವಯವಾಗುವ ರೀತಿಯಲ್ಲಿ ಕಾನೂನು ತರಬೇಕೆಂದರೆ ಆಗ ಪುನಃ ಇನ್ನೊಂದು ತಿದ್ದುಪಡಿ ಮಸೂದೆಯನ್ನು ತರಬೇಕಾಗುತ್ತದೆ. ತಮಗೆ ನಾನು ಒಂದು ಅಂಶವನ್ನು ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಮುಜರಾಯಿ ಇನ್‌ಸ್ಟಿಟ್ಯೂಷನ್‌ಗಳು ಎಷ್ಟಿವೆ? ದೊಡ್ಡ ದೇವಸ್ಥಾನಗಳು ಎಷ್ಟು ಇವೆ? ದೊಡ್ಡ ಮಠಗಳು ಎಷ್ಟಿವೆ? ದೊಡ್ಡ ಮಸೀದಿಗಳು ಎಷ್ಟಿವೆ? ದೊಡ್ಡ ಜಾತ್ರೆಗಳ ನಡೆಯುತಕ್ಕ ಸ್ಥಳಗಳು ಎಷ್ಟಿವೇ? ಜಾತ್ರೆ ವಿಷಯ ಬಂದಾಗ ಒಂದು ಮಾತನ್ನು ಹೇಳಬೇಕಾಗಿದೆ. ಮುನಿಸಿಪಲ್ ಬಿಲ್ ಬಂದಾಗ ಈ ವಿಷಯ ಚರ್ಚೆಗೆ ಬಂತು ಎಲ್ಲಮ್ಮನ ಜಾತ್ರೆಯಲ್ಲಿ ತೆಂಗಿನಕಾಯಿ ಒಡೆಯುವುದಕ್ಕೆ ಸುಂಕ ಹಾಕಿ ಅದನ್ನು ಮುನಿಸಿಪಾಲಿಟಿಗೆ ಕೊಡಬಾರದು, ದೇವಸ್ಥಾನಕ್ಕೇ ಅದು ಸೇರಬೇಕು; ಅದರಿಂದ ದೇವಸ್ಥಾನವನ್ನು ಮೇನ್‌ಟೇನ್ ಮಾಡಿಕೊಳ್ಳುತ್ತಾರೆ ಎಂದು ಹೇಳಿದರು ಆ ರೀತಿ ಕೆಲವರ ವಾದ ಇತ್ತು. ಅದಕ್ಕೆ ಸಂಬಂಧಪಟ್ಟ ಸೆಲೆಕ್ಟ್ ಕಮಿಟಿ ರಿಪೋರ್ಟು ಸಭೆಯ ಮುಂದೆ ಬರುತ್ತದೆ—ಆದ್ದರಿಂದ ಇಲ್ಲಿ ತಾವು ಹೇಳಿರುವ ಕೆಲವು ವಿಷಯಗಳು ಆ ಸೆಲೆಕ್ಟ್ ಕಮಿಟಿಯವರು ಮಾಡಿರುವ ವರದಿಗೆ ಸ್ವಲ್ಪ ಕ್ಲಿಷ್ಟತರವಾಗುತ್ತದೆ.

[MR. SPEKER in the Chair.]

ಈ ಬಿಲ್‌ನಲ್ಲಿ ಕೆಲವು ಬಹಳ ಕಠಿಣವಾದ ವಿಷಯಗಳು ಇವೆ. ಮೊದಲನೆಯದಾಗಿ ಡೆಫಿನಿಷನ್ 10ರಲ್ಲಿ ಈ ರೀತಿ ಇದೆ:—

> "Muth", means a Hindu religious institution for the promotion of religion presided over by a person whose duty it is to engage himself in imparting religious instruction or rendering spiritual service to a body of disciples or who exercises or claims to exercise spiritual headship over such a body and includes places of religious worship or instruction which are appurtenant to the institution;"

ಮಠ ರಾಜಕೀಯ ಮಾಡಿದರೆ ಏನು ಮಾಡಬೇಕು ಎಂದು ಇದರಲ್ಲಿ ಹೇಳಿಲ್ಲ. ಈ ರಾಜ್ಯದಲ್ಲಿ ಎಷ್ಟೋ ಮಠಗಳು ಇವೆ. ಶೃಂಗೇರಿ ಮಠ ಇದೆ, ಚುಂಚನಗಿರಿ ಮಠ ಇದೆ. ಸಿರಿಗೆರೆ ಮಠ ಇದೆ, ಸುತ್ತೂರು ಮಠ ಇದೆ, ಮುರುಗಿ ಮಠ ಇದೆ, ಬಾಳೆ ಹೊನ್ನೂರು ಮಠ ಇದೆ. ಹೀಗೆ ಅನೇಕ ಮಠಗಳು ಇವೆ. ಆ ಮಠಗಳೆಲ್ಲವೂ ಕೂಡ ಈ ಡೆಫಿನಿಷನ್‌ನಲ್ಲಿ ಬರುತ್ತವೆ, ಅವರ ಕೆಲಸ ಏನು. ರಿಲಿಜಿಯಸ್ ಅಪ್‌ಲಿಫ್ಟ್ ಮಾಡುವುದು, ಜನರಿಗೆ ಬೋಧನೆ ಮಾಡುವುದು, ಅವರ ಇಂಟರೆಸ್ಟ್? ಕಾಪಾಡಿಕೊಳ್ಳುವುದು. ಅಷ್ಟಲ್ಲದೆ ರಾಜಕೀಯಕ್ಕೆ ಕೈ ಹಾಕಿದರೆ ಅಂಥ ಮಠಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುತ್ತೀರಾ? ಅಂಥವರು ರಾಜಕೀಯದಲ್ಲಿ ಪ್ರವೇಶ ಮಾಡಿ ತಾವೇ ರಾಜ್ಯಭಾರ ಮಾಡುವುದಕ್ಕೆ ಹೊರಟರೆ ಏನು ಮಾಡುತ್ತೀರಿ? ಇದನ್ನೆಲ್ಲಾ ಹೇಳಿದ್ದರೆ ಚೆನ್ನಾಗಿತ್ತು. ಸೆಲೆಕ್ಟ್ ಕಮಿಟಿಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹೋಗುತ್ತದೆ; ಅಲ್ಲಿ ಪರಿಶೀಲನೆ ಮಾಡಿ ಅವರು ಏನು ವರದಿ ಕೊಡುತ್ತಾರೋ ನೋಡೋಣ ಎಂದು ಹೇಳಿ ಅಲ್ಲಿಗೆ ಬಿಡುತ್ತೇನೆ.

ನನ್ನ ಸ್ನೇಹಿತರು ಇಬ್ಬರು ಮೂರು ಜನ ಮಾತನಾಡುವಾಗ ಮುತವಲ್ಲಿ ಎಷ್ಟು ಮಟ್ಟಿಗೆ ವ್ಯವಹಾರ ಮಾಡುತ್ತಾರೆ ಎಂಬುದನ್ನು ಹೇಳಿದ್ದಾರೆ. ಮುತವಲ್ಲಿ ವಿಷಯದಲ್ಲಿ ಹೇಳ ಬೇಕಾದ್ದು ಬಹಳವಾಗಿದ್ದರೂ ಅಸಿಸ್ಟೆಂಟ್ ಕಮಿಷನರು, ಇನ್‌ಸ್ಪೆಕ್ಟರುಗಳನ್ನು ನೇಮಕ ಮಾಡುವುದಕ್ಕೆ ಬಹಳವಾಗಿ ವಿರೋಧವಾಗಿದ್ದೇನೆ ಎಂದು ತಿಳಿಸಲು ಬಯಸುತ್ತೇನೆ? ಸೆಲೆಕ್ಟ್ ಕಮಿಟಿಯವರು ಇದನ್ನು ತೀರ್ಮಾನ ಮಾಡಬೇಕೆಂದು ಹೇಳಿ ಅಲ್ಲಿಗೆ ಬಿಡುತ್ತೇನೆ.

ತಾವು ಈ ಬಿಲ್‌ನಲ್ಲಿ ಎಲ್ಲಿ ನೋಡಿದರೂ ಕೂಡ ನಿಮಗೆ ಗೊತ್ತಾಗುತ್ತದೆ. ಅನೇಕ ಮಠಗಳು ಲಕ್ಷಾಂತರ ರೂಪಾಯಿಗಳ ಆಸ್ತಿ ಹೊಂದಿದ್ದು ಅವಕ್ಕೆ ಯಾವ ಹಕ್ಕು ಇರುವುದಿಲ್ಲ ಎಂಬದು. ಅದನ್ನು ನಡೆಸತಕ್ಕವರು ಅವು ಮಠ ಎಂಬ ಸೋಗಿನಲ್ಲಿ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿಕೊಂಡು ಕುಡಿತ ಮುಂತಾದ ಮಾಡಬಾರದ ಎಲ್ಲಾ ದುರ್ವ್ಯವಹಾರಗಳಿಗೂ ಸಂಪಾದನೆಯನ್ನು ಉಪಯೋಗಿಸಿಕೊಂಡು ಅವರು ಸಮಾಜಕ್ಕೆ ದ್ರೋಹ ಮಾಡುತ್ತಾ ಇದ್ದಾರೆ—ಅಂತಹ ಮಠಗಳನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳಲು ಒಂದು ಉಗ್ರವಾದ ಕಲಂನ್ನು ಈ ಮಸೂದೆಯಲ್ಲಿ ಒದಗಿಸಬೇಕಾಗಿತ್ತು.

ಸ್ವಾಮಿ ಮಂತ್ರಿಗಳು ಇಲ್ಲಿ ಒಂದು ಶಬ್ದವನ್ನು ಹೇಳಿದ್ದಾರೆ, ಅದು ನನಗೆ ಅರ್ಥವಾಗುತ್ತಿಲ್ಲ. ಧರ್ಮಾದಾಯ ಎಂದು ಹೇಳಿದ್ದರೆ ನನಗೆ ಅರ್ಥವಾಗುತ್ತಿತ್ತು; ಆದರೆ ಇಲ್ಲಿ ಧರ್ಮದ ಎಂಬ ಶಬ್ದ ಹೇಳಿದ್ದಾರೆ; ಇದು ನನಗೆ ಅರ್ಥವಾಗುತ್ತಿಲ್ಲ.

5.30. P.M.

ಅಧ್ಯಕ್ಷರು.—ಈಗ ತಾವು ಹೇಳುವ ಮಾತು ಬಹಳ ಬೆಲೆಯುಳ್ಳದ್ದು. ಇದನ್ನು ಸೆಲೆಕ್ಟ್ ಕಮಿಟಿಯ ಮುಂದೆ ಹೇಳಿ ಎಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇದೇನೋ ಸ್ವಾಗತಾರ್ಹವಾದ ಬಿಲ್ಲು. ಆದರೆ ಸಮಾಜದ್ರೋಹವೆಸಗತಕ್ಕ ಮಠಗಳನ್ನು ಸರ್ಕಾರದವರು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಆ ಸಂಸ್ಥೆಗಳಿಗೆ ಬರತಕ್ಕ ಆದಾಯವನ್ನು ವಿದ್ಯಾಭಿವೃದ್ಧಿಗೋ ಅಥವಾ ಮತ್ತೆ ಯಾವುದಾದರೊಂದು ಉಪಯುಕ್ತ ಕಾರ್ಯಕ್ಕೋ ವಿನಿಯೋಗವಾಗುವಂತೆ ಮಾಡಬೇಕೆಂದೂ, ಇದನ್ನು ಕಾನೂನು ಮಾಡಿ ಪುನಃ ಕೋಲ್ಡ್‌ಸ್ಟೋರೇಜಿನಲ್ಲಿಡದೆ, ಇದು ಪಾಸಾದ 3-4 ತಿಂಗಳಲ್ಲೇ ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ನಾನು ಈ ಮೈಸೂರು ಛಾರಿಟೆಬಲ್ ಎಂಡೋಮೆಂಟ್ ಮತ್ತು ಟ್ರಸ್ಟ್ ಬಿಲ್ಲನ್ನು ಸ್ವಾಗತಿಸುತ್ತ ಒಂದೆರಡು ಸೂಚನೆಗಳನ್ನು ಕೊಡಬಯಸುತ್ತೇನೆ. ಪ್ರಕೃತ ಭೂಲೋಕದಲ್ಲೇ ಎಲ್ಲೂ ಇಂಥ ಸಂಪಾದನೆ ಮಾಡತಕ್ಕ ದೇವರುಗಳು ಇಲ್ಲವಾದರೂ, ನಮ್ಮ ಇಂಡಿಯಾ ದೇಶದಲ್ಲಿ ಒಂದು ಕಡೆ ಮಾತ್ರ ಇಂಥ ದೇವರುಗಳಿರುತ್ತವೆ. ಇಂಡಿಯಾ ಬಿಟ್ಟರೆ ಇಂಥ ದೇವರುಗಳು ಪ್ರಪಂಚದಲ್ಲಿ ಇನ್ನೆಲ್ಲಿಯೂ ಇಲ್ಲ. ನಮ್ಮ ಸರ್ಕಾರ ಇಲ್ಲಿಯತನಕ ಜನರ ಸಂಪಾದನೆಯನ್ನೇ ಅವಲಂಬಿಸಿದ್ದು, ಈಗ ಈ ದೇವರುಗಳ ಮೂಲಕ ತಮ್ಮ ಸಂಪಾದನೆಯನ್ನು ಜಾಸ್ತಿ ಮಾಡಿಕೊಳ್ಳಬೇಕೆಂದು ಹೊರಟಿದ್ದಾರೆ. ಶ್ರೀ ಎಂ. ವಿ. ಕೃಷ್ಣಪ್ಪನವರು ಈ ಒಂದು ಮಸೂದೆಯನ್ನು ತಮ್ಮ ಸ್ವಂತಕ್ಕೆ ಮಾಡಿಕೊಂಡಿರುವಂತೆ ನನಗೆ ಭಾಸವಾಗುತ್ತಿದೆ. ಈ ಒಂದು ಅತಂತ್ರ ಇದರಲ್ಲಿದೆ. ಇವರು ಇಡೀ ದೇಶಕ್ಕೆ ಒಂದು ಸಮಗ್ರ ಸರಿಸಮಾನವಾದಂಥ ಕಾನೂನನ್ನು ತಂದಿದ್ದರೆ ಉಚಿತವಾಗಿತ್ತು ಎಂದು ನನ್ನ ಭಾವನೆ. ಈ ಕಾನೂನನ್ನು ಜಾರಿಗೆ ತಂದನಂತರ ಈಗಿರತಕ್ಕ ದೌರ್ಜನ್ಯ ಕೃತ್ಯಗಳನ್ನು ಹೇಗೆ ಸರಿಪಡಿಸುತ್ತಾರೆಂಬುದನ್ನು ತಿಳಿಸಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಈ ಟ್ರಸ್ಟುಗಳ ಬಗ್ಗೆ ನೇಮಕವಾಗತಕ್ಕ ಟ್ರಸ್ಟಿಗಳೇನಿದ್ದಾರೆ ಅವರ ನೇಮಕದ ವಿಚಾರದಲ್ಲಿ ಬಹಳ ಕೈವಾಡ ನಡೆಯುತ್ತಿದೆ. ಇಂಥ ಎಷ್ಟೋ ವಿಚಾರಗಳನ್ನು ನಾನೇ ನನ್ನ ಕಣ್ಣೆದುರಿಗೆ ನೋಡಿದ್ದೇನೆ. ಧರ್ಮದರ್ಶಿ ಎಂದರೆ ಟ್ರಸ್ಟಿಗಳಾಗತಕ್ಕವರು ಯಾರಿದ್ದಾರೆ ಅವರಿಗೆ ಧರ್ಮದೃಷ್ಟಿಯಲ್ಲಿ ಯಾವ ಅಭಿರುಚಿಯೂ ಇರುವುದಿಲ್ಲ. ಹೀಗಿರುವಾಗ ಅವರು ಹೇಗೆತಾನೆ ದೇವಸ್ಥಾನಕ್ಕೆ ಬರತಕ್ಕ ಭಕ್ತಾದಿಗಳ ಕ್ಷೇಮಕ್ಕೆ ಗಮನಕೊಟ್ಟಾರು? ಈಗ ತಾನೆ ಮಾನ್ಯ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಐದು ದೇವಸ್ಥಾನಗಳನ್ನು ಅಭಿವೃದ್ಧಿಗೆ ತರತಕ್ಕ ಬಗ್ಗೆ ಹೆಚ್ಚು ಹಣ ಖರ್ಚು

ಮಾಡಬೇಕೆಂದು ಹೇಳಿದರು. ಇದರಿಂದ ನಮ್ಮ ರಾಜ್ಯ ಬೊಕ್ಕಸಕ್ಕೂ ಸಂಪಾದನೆ ಆಗಬಹುದೆಂದು ಹೇಳಿದ್ದಾರೆ. ನಮ್ಮ ಉಡುಪಿಯಲ್ಲಿರತಕ್ಕ ದೇವಸ್ಥಾನ ಬಹಳ ಪುರಾತನ ದೇವಸ್ಥಾನ. ಇದಕ್ಕೆ ದುಡಿಮೆ ಬಹಳ ಚೆನ್ನಾಗಿದೆ. ಆದರೆ ಅಂಥ ದುಡಿಮೆಯಿದ್ದರೂ ಇವು ರಾಜಕೀಯಕ್ಕೆ ಬಿದ್ದು ಕೆಲಸ ಮಾಡುತ್ತಿಲ್ಲ ಎಂದು ಶ್ರೀ ಮುಕ್ಕಣ್ಣಪ್ಪನವರು ಹೇಳಿದ್ದು ಸರಿಯಾಗಿದೆ. ಆದರೆ ಈ ಬಿಲ್ಲಿನಲ್ಲಿ ಏನಿದೆ ಎಂಬುದನ್ನು ನಾನು ನೋಡಿಲ್ಲ; ಹೀಗೆ ಮಠಗಳು ರಾಜಕೀಯಕ್ಕೆ ಬೀಳುವುದಾಗಿದ್ದರೆ ಅಂಥವುಗಳ ಆಡಳಿತವನ್ನು ಸರ್ಕಾರ ತೆಗೆದುಕೊಂಡು ಅವುಗಳ ಸಂಪತ್ತು ಅಪವ್ಯಯವಾಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಕೆಲವು ದೇವಸ್ಥಾನಗಳಿಗೆ ತುಂಬಾ ಸಂಪಾದನೆ ಇದ್ದರೂ ಕೈಯಲ್ಲಿ ಮಾತ್ರ ದುಡ್ಡಿರುವುದಿಲ್ಲ. ಸಾವಿರಾರು ರೂಪಾಯಿಗಳ ಸಂಪಾದನೆ ಬಂದಾಗ್ಯೂ ಅವರು ಲೆಕ್ಕಗಳನ್ನೇ ಇಡುವುದಿಲ್ಲ. ಸಾವಿರಾರು ರೂಪಾಯಿಗಳ ವರಮಾನವಿದ್ದಲ್ಲಿ ಲೆಕ್ಕದಲ್ಲಿ ಕೇವಲ 5–10ರೂಪಾಯಿಗಳನ್ನು ಮಾತ್ರ ತೋರಿಸುತ್ತಾರೆ. ನಮ್ಮ ಕಾಪಿನಲ್ಲಿ ಮೂರು ಮಾರೆಮ್ಮಗಳಿವೆ. ಈ ದೇವಸ್ಥಾನಗಳಿಗೆ ಏನಿಲ್ಲ ಎಂದರೂ ವಾರಕ್ಕೆ ಮೂರುಸಾವಿರ ರೂಪಾಯಿಗಳ ಸಂಪಾದನೆ ಇದೆ. ಆದರೆ ಲೆಕ್ಕದಲ್ಲಿ ಒಂದು ಕಾಸೂ ಕೂಡ ಇರುವುದಿಲ್ಲ; ಇದು ಈ ದೇವಸ್ಥಾನಗಳ ಈಗಿರತಕ್ಕ ಪರಿಸ್ಥಿತಿ. ಅಲ್ಲಿರತಕ್ಕ ಜನರೆ ಎಲ್ಲ ತಿಂದು ಹಾಕುತ್ತಿದ್ದಾರೆ. ಇನ್ನಾದರೂ ದೇವರುಗಳಿಗೆ ಇಂಥ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಿ, ಸೆಲೆಕ್ಟ್ ಕಮಿಟಿಯವರು ಇದನ್ನೆಲ್ಲಾ ಚೆನ್ನಾಗಿ ಪರಿಶೀಲನೆ ಮಾಡಿ ತಿದ್ದುಪಡಿ ಮಾಡಿ ಈ ವಿಧೇಯಕವನ್ನು ಇಲ್ಲಿಗೆ ವಾಪಸ್ಸು ಕಳುಹಿಸಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಸ್ವಾಮಿ, ನಾನು ಹೆಚ್ಚು ವೇಳೆ ತೆಗೆದುಕೊಳ್ಳುವುದಿಲ್ಲ. ನಮ್ಮ ಸ್ನೇಹಿತರಾದ ಸೆಟ್ಟರು ಎಲ್ಲ ವಿಚಾರಗಳನ್ನೂ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಬಿಲ್ಲನ್ನು ಮಂಡಿಸತಕ್ಕ ಸಮಯದಲ್ಲಿ ಅನೇಕ ದೇವಾಲಯಗಳ ಹೆಸರನ್ನೇನೋ ಹೇಳಿದರು. ಆದರೆ ಅವರ ಮನಸ್ಸಿನಲ್ಲಿ ಏನಿದೆ ಎಂಬುದು ಸರಿಯಾಗಿ ಗೊತ್ತಾಗಲಿಲ್ಲ. ಇದರಿಂದ ಕೆಲವರ ಮನಸ್ಸಿನಲ್ಲಿ ಒಂದು ಸಂದೇಹ ಏಳಬಹುದು ಈ ಮುಸಲ್ಮಾನರ......

ಶ್ರೀ ಎಂ. ವಿ. ಕೃಷ್ಣಪ್ಪ.—ವಾಕ್ಫ್ ಎಂದು ಅದಕ್ಕೇ ಬೇರೆ ಇದೆ. ಈ ಬಿಲ್ಲಿನಲ್ಲಿ ಎಲ್ಲ ದೇವಸ್ಥಾನಗಳೂ ಬರುತ್ತವೆ.

ಶ್ರೀ ಗಂಗಾಧರ ನಾಮೋಷಿ.—ಮುಸಲ್ಮಾನರ ಹಾಗೂ ಕ್ರೈಸ್ತರ ದೇವಾಲಯಗಳು ಬೇರೆ ಇರುತ್ತವೆ. ಅವುಗಳ ಸೌಲಭ್ಯಕ್ಕೂ ನಾವು 1-2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಅವುಗಳಿಂದಲೂ ನಮಗೆ ಉತ್ಪತ್ತಿ ಬರುತ್ತದೆ. ಈಗ ತಾನೇ ಮಾನ್ಯ ಮಂತ್ರಿಗಳು ಶ್ರವಣಬೆಳಗೊಳದಲ್ಲಿ ಅಲ್ಲಿಗೆ ಬರತಕ್ಕ ಯಾತ್ರಾರ್ಥಿಗಳಿಗಾಗಿ 200 ರೂಮುಗಳನ್ನು ಕಟ್ಟಿಸಬೇಕೆಂದು ಹೇಳಿದರು. ಹೀಗೆ ಮುಸಲ್ಮಾನರ ಕೆಲವು ದರ್ಗಗಳೂ ಇರುತ್ತವೆ. ಅವರ ಎರಡು ಹೆಸರುವಾಸಿಯಾದ ದೇವಸ್ಥಾನಗಳೆಂದರೆ ಒಂದು ನಾನಿರುವ ಸ್ಥಳದಲ್ಲಿರತಕ್ಕ ಖಾಜಾ ಬಂದೇನವಾಜ, ಇನ್ನೊಂದು ಅಜ್ಮೀರದಲ್ಲಿರತಕ್ಕ ಖಾಜಾ ಬಂದೇ ನವಾಜ, ಈ ಎರಡೂ ಭರತಖಂಡದಲ್ಲಿ ಅವರಿಗೆ ದೊಡ್ಡ ಪವಿತ್ರ ಕ್ಷೇತ್ರಗಳಾಗಿರುತ್ತವೆ. ಆದರೆ ಈವರೆಗೂ ಈ ಸ್ಥಳಗಳೆಲ್ಲ ನವಾಬರ ಆಶ್ರಯದಲ್ಲಿದ್ದುದರಿಂದ ಅಲ್ಲಿ ಯಾವ ಅನುಕೂಲತೆಗಳೂ ಆಗಿಲ್ಲ. ನೈಜಾಮರಲ್ಲಿ ಲಕ್ಷಗಟ್ಟಲೆ ಹಣವಿದ್ದರೂ ಅಲ್ಲಿಗೆ ಬರತಕ್ಕ ಜನರಿಗೆ ಏನೂ ಅನುಕೂಲ ಕಲ್ಪಿಸಿಲ್ಲ. ಇಂಥ ಸ್ಥಳಗಳಿಗೆ ಮಳೆಗಾಲದಲ್ಲಿ ಜನರು ಬಂದರೆ ಅವರಿಗೆ ಇಳಿದುಕೊಳ್ಳಲು ಸ್ಥಳ ಇರುವುದಿಲ್ಲ. ಕೆಲವು ಕಡೆ ಗುಲಬುರ್ಗಾ ಜಿಲ್ಲೆಯಲ್ಲಿ ಮುನಿಸಿಪಾಲ್ಟಿಯವರು ಟ್ಯಾಕ್ಸ್ ತೆಗೆದುಕೊಂಡರೂ ಜನರಿಗಾಗಿ ಏನೇನೂ ವ್ಯವಸ್ಥೆ ಮಾಡುವುದಿಲ್ಲ. ಇಂಥ ವಿಷಯದಲ್ಲಿ ಜಾತೀಯ ಭಾವನೆ ಬರಬಾರದು. ಗುಲ್ಬರ್ಗಾದಲ್ಲಿ ಎಲ್ಲ ಸೌಲಭ್ಯ ಸಿಕ್ಕುವಹಾಗೆ ಏರ್ಪಾಡು ಮಾಡಬೇಕು. ಅಂದರೆ ದಕ್ಷಿಣ ಭಾರತದಲ್ಲಿ ಇದೊಂದು ಪ್ರೇಕ್ಷಣೀಯ ಸ್ಥಳವಾಗುತ್ತದೆ. ಕೊನೆಯದಾಗಿ ನನಗೆ ಮಾತನಾಡಲು ಎರಡು ನಿಮಿಷ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ದೇವ್.—ಸ್ವಾಮಿ, ನಮ್ಮ ರಾಜ್ಯದಲ್ಲಿ ಇರತಕ್ಕ ಎಲ್ಲ ಕಾನೂನುಗಳನ್ನು ಸಮನ್ವಯ ಮಾಡಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ತೆಗೆದುಕೊಂಡು ಬರಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ನನಗೂ ಹಾಗೇ ಅನಿಸುತ್ತದೆ. ಈ ಸಮನ್ವಯ ಮಾಡಬೇಕೆಂಬ ದೃಷ್ಟಿಯಿಂದ ಮಾತನಾಡಲು ನಾನು ಬಯಸುತ್ತೇನೆ. ನನಗೆ ಅನಿಸುತ್ತದೆ ಇಂಥ ಕಾನೂನು ತರುವಾಗ್ಗೆ ಸರಕಾರಕ್ಕೆ ಒಂದು ಸರಿಯಾದ ವಾಸ್ತವಾಂಶದ ದೃಷ್ಟಿ ಇಲ್ಲ ಎಂದು ಈ ಮಸೂದೆಯನ್ನು ಜನ ಚೆನ್ನಾಗಿ ಅರ್ಥ ಮಾಡಿಕೊಂಡಿಲ್ಲ. ಏಕೆಂದರೆ ನಮ್ಮ ಭಾರತ ದೇಶದ ಜನ ಭಾವಿಕರು, ದೈವಭಕ್ತಿಯುಳ್ಳವರು ಆಗಿದ್ದಾರೆ. ಆದುದರಿಂದ ಇಂಥ ಸುಧಾರಣೆ ಮಾಡಲು ಬಯಸುವಾಗ್ಗೆ ಹಳ್ಳಿಯ ಜನರ ಸಹಕಾರ ಮೊದಲು ಪಡೆಯಬೇಕಾಗುತ್ತದೆ. ಜನ ಜೀವನದ ಮಟ್ಟ ಯಾವ ರೀತಿ ಇದೆ ಎನ್ನುವುದನ್ನು ನಾವು ಮೊದಲು ಗಮನದಲ್ಲಿಟ್ಟುಕೊಳ್ಳತಕ್ಕದ್ದು ಅವಶ್ಯಕ.

(ಶ್ರೀ ವಿ. ಎಂ. ದೇವ್)

ದೇವರಿಗೆ ಹರಿಕೆ ಹೊತ್ತ ಜನ ಮುಡಪು ರೂಪದಿಂದ ಏನು ಹಣ ಕಾಸು ಕೊಡುತ್ತಾರೆಯೋ ಅದು ನಿಜವಾಗಿಯೂ ದೇವರ ಸೇವೆಗಾಗಿ ಉಪಯೋಗಿಸಲ್ಪಡಬೇಕು. ದೇವರ ಸೇವೆ ನಡೆಯಬೇಕು. ದೇವರ ಆಸ್ತಿಪಾಸ್ತಿಯಿಂದ ದೇವಸ್ಥಾನವನ್ನು ಅಭಿವೃದ್ಧಿಪಡಿಸಬೇಕು. ಒಂದು ವೇಳೆ ನಮ್ಮ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷದವರು ಅಧಿಕಾರಕ್ಕೆ ಬಂದರೆ ಏನು ಮಾಡುತ್ತಾರೆ ಗೊತ್ತಿದೆಯೇ? ಅವರು ಇಂಥ ಹಣವನ್ನೆಲ್ಲಾ ಸಮನಾಗಿ ಎಲ್ಲರಿಗೂ ಹಂಚಿಬಿಡುತ್ತಾರೆ. ಆದರೆ ಅಂಥ ವಿಚಾರ ತಲೆಯಲ್ಲಿ ಬಂದರೆ ನಿಜವಾಗಿಯೂ ಭಯ ಉಂಟಾಗುತ್ತದೆ.

Mr. SPEAKER.—The Hon'ble Member's arguments are so good and wide that they apply to all the Bills. But Sri Deo will please come to the provisions of the Bill. ?

ಶ್ರೀ ವಿ. ಎಂ. ದೇವ್.—ಒಳ್ಳೇ ಸವಿ ಮಾತಿನಲ್ಲಿಯೇ ಅಧ್ಯಕ್ಷರು ನನಗೆ ಒಂದು ಬಲವಾದ ಏಟು ಕೊಟ್ಟುಬಿಟ್ಟರಲ್ಲಾ ?

ನಾನು ಈಗ ಹೇಳುತ್ತಿರುವುದು ಇಷ್ಟೇ. ಮುಖ್ಯವಾಗಿ ದೇವರ ಸೇವೆ ಚೆನ್ನಾಗಿ ನಡೆಯಬೇಕು. ದೇವರ ಹೆಸರಿನಲ್ಲಿ ಆದಾಯ ಮೊದಲಿನಗಿಂತಲೂ ಈಗ ನಾಲ್ಕರಷ್ಟು ಬರುತ್ತಿದೆ. ಆದರೆ ಅದನ್ನು ಸರಿಯಾಗಿ ರೂಢಿಸಿಕೊಳ್ಳಲು ಸಾಧ್ಯವಾಗಿಲ್ಲ. ಅದಕ್ಕೆ ಕಾರಣವೇನೆಂದರೆ ನಮ್ಮ ಮನೋಭಾವನೆ ಎಲ್ಲಾ ವಿಚಾರದಲ್ಲೂ ಬಹು ಕಲುಷಿತವಾಗಿದೆ. ಅದು ಏನಪ್ಪಾ ಅಂದರೆ ಏನಾದರೂ ಹೇಳಿದರೆ ಅದಕ್ಕೆ ಮೊದಲು ಫೀ ಕೊಡಬೇಕು ಎನ್ನುತ್ತೀರಿ.

> "It is made obligatory for every trustee or manager of a religious or charitable Trust or Institution to apply for and get the trust or Institution registered on a payment of prescribed fee."

ಎಷ್ಟು ಕೊಡಬೇಕು ಎನ್ನುವಾಗ್ಗೆ ಅದರಲ್ಲಿ ಲಂಚಾವತಾರ ಷುರು ಆಗುತ್ತದೆ. ಅದು ಈಗ ನಮ್ಮ ಮನೋಭಾವದಿಂದ ದೂರ ಹೋಗುತ್ತಿದೆ. ಇದು ಹಾಗೇ ಉಳಿದರೆ ನಮ್ಮ ದೇಶದ ಭಾವೈಕ್ಯತೆಗೆ ಧಕ್ಕೆ ಬರುತ್ತದೆ ಎಂದು ನಾನು ಹೇಳುತ್ತೇನೆ. ಇದರಿಂದ ಏನಾಗುತ್ತದೆ ಅಂದರೆ ಜನರು ನಿಮ್ಮ ಪ್ರಾಮಾಣಿಕತೆಯನ್ನು ಅಂದರೆ ಬೊನಾಫೈಡ್ಸ್ ಪ್ರಶ್ನಿಸುತ್ತಾರೆ.

> "The application of the doctrine of cypres is restricted only to cases where the original object for which the trust was created has failed or where the income or any surplus balance is not utilised or is not likely to be utilised for purposes of the trust created."

ಸ್ವಾಮಿ, ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಈಗ ಕಾಲ ಮುಂದುವರಿಯುತ್ತಿರುವುದರಿಂದ ಸ್ವಲ್ಪ ಭಿನ್ನಾಭಿಪ್ರಾಯ ಉಂಟಾಗಿದೆ. ನಮ್ಮ ದೇಶದಲ್ಲಿ ಪಂಚಾಯಿತಿ ರಾಜ್ಯ ಇದೆ ಎಂಬುದನ್ನು ನೀವು ಮರೆತು ಬಿಡುತ್ತೀರಿ. ಪಂಚಾಯಿತಿಗಳಿಗೆ ಎಲ್ಲವನ್ನೂ ಒಪ್ಪಿಸಿಕೊಟ್ಟರೆ ಇಂಥ ಅಪಾಯ ತಪ್ಪಿಸಲಿಕ್ಕೆ ಸಾಧ್ಯವಿದೆ.

Mr. SPEAKER.—That is the principle that is found in all jurisprudence. A trust entirely should not be kept frozen. It can be diverted for an analogous purpose or associated with the primary object of the Trust.

ಶ್ರೀ ವಿ. ಎಂ. ದೇವ್.—ಒಟ್ಟಿನಲ್ಲಿ ಅಂಥ ಅಪಾದವೆ ಮಾಡುತ್ತಾರೆಂದು ಹೇಳುವುದಿಲ್ಲ. ಜನಜೀವನ ಮಟ್ಟ ಜಾಸ್ತಿ ಮಾಡಲು ಪ್ರಯತ್ನಿಸುತ್ತಿದ್ದೀರಿ. ಅದನ್ನು ಎಲ್ಲರೂ ಸಮರ್ಥಿಸುತ್ತಾರೆ. ಈ ದೃಷ್ಟಿಯಿಂದ ಹೇಳುವುದಾದರೆ ಕಾಲ ಪ್ರವಾಹ ಮುಂದೆ ಮುಂದೆ ಹೋಗುತ್ತಿರುವಾಗ್ಗೆ ಹಿಂದಿನ ಹಳೆಯದನ್ನು ಈ ಮಸೂದೆಯಲ್ಲಿ ಹಾಕಿ ಜನ ಹಿಂದೆ ಹೋಗುವಂತೆ ಮಾಡುತ್ತಿದ್ದೀರಿ. ಇದು ಬಹಳ ಅಪಾಯಕರ. ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ರಚನೆ ಮಾಡಲು ಈ ಕಾನೂನು

ಸಮನ್ವಯ ಮಾಡಬೇಕಾದುದು ಮುಖ್ಯ ವಿಷಯ. ಅದು ಏನೇ ಇರಲಿ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಪರಿಶೀಲನೆಗಾಗಿ ಹೋಗತಕ್ಕದ್ದಿದೆ. ಈ ದೃಷ್ಟಿಯಿಂದ ಸೆಲೆಕ್ಟ್ ಕಮಿಟಿಯ ಸದಸ್ಯರು ಪರ್ಯಾಲೋಚನೆ ಮಾಡಬೇಕಾದುದು ಅಗತ್ಯ. ಜನಜೀವನ ಮಟ್ಟ ಜಾಸ್ತಿಯಾಗಬೇಕು. ಈ ಉದ್ದೇಶ ಇಟ್ಟುಕೊಂಡು ಅಗತ್ಯವಿರುವ ತಿದ್ದುಪಡಿ ಮಸೂದೆಯಲ್ಲಿ ಮಾಡಬೇಕು ಎಂದು ಸೂಚಿಸುತ್ತೇನೆ,

"Provision has been made for payment out of the above Fund to the State Government such cost as the Government may determine on account of the pay, pension, leave and other allowances on account of the establishment referred to above."

"The Bill does not impose any additional burden on the finances of the State as the expenditure involved in the payment of establishment charges and incidental expenses will be met out of the above Fund."

ಕೊನೆಯದಾಗಿ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟ ಬಗ್ಗೆ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ (ಸೂರತ್‌ಕಲ್).—ಮಾನ್ಯ ಸಭಾಪತಿಗಳೇ, ನೂರು ಕ್ಲಾಜು ಗಳಿರುವ ಈ ಬಿಲ್ಲಿನ ಉದ್ದೇಶವನ್ನು ಆರು ವಾಕ್ಯಗಳಲ್ಲಿ ಹೇಳಿದ್ದಾರೆ. ಮಾನ್ಯ ರೆವಿನ್ಯೂ ಮಂತ್ರಿ ಗಳು ಈ ಬಿಲ್ಲಿನ ಉದ್ದೇಶವನ್ನು ಕುರಿತು ಹೇಳಿದಾಗ ನಾನು ಬಹಳ ಭಾವೋದ್ರೇಕನಾಗಿ ಬಹಳ ನಿಷ್ಠೆಯಿಂದ ಆಲಿಸಿದ್ದೂ ಅಲ್ಲದೆ ನಿಜವಾಗಿ ಇದು ಬಹಳ ಒಳ್ಳೆಯ ಮಸೂದೆಯಾಗಿದೆ ಎಂದುಕೊಂಡೆ. ಇದರ ಹಿಂದೆ ಇರುವ ಉದ್ದೇಶವು ಬಹಳ ಘನವಾದ ಉದ್ದೇಶವಾಗಿದೆ, ಬಹಳ ದೊಡ್ಡ ಉದ್ದೇಶ ವಾಗಿದೆ. ಒಂದಾನೊಂದು ಕಾಲದಲ್ಲಿ ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಿಕೊಂಡು ಬಂದ, ನಮ್ಮ ಕಲೆಗಳಿಗೆ ಆಶ್ರಯ ಸ್ಥಾನವಾಗಿದ್ದ, ನಮ್ಮ ಸಾಹಿತಿಗಳಿಗೆ ಪ್ರೋತ್ಸಾಹ ಕೇಂದ್ರವಾಗಿದ್ದಂಥ ದೇವಸ್ಥಾನ, ಮಠ, ಮತ್ತಿತರ ಆಶ್ರಮಗಳೆಲ್ಲವೂ ಬಹಳ ದುರವಸ್ಥೆಗೆ ಬಂದು, ಅವುಗಳಿಂದ ಜನ ಗಳಿಗೆ ಆಗುವ ಉಪಕಾರಕ್ಕಿಂತ ಹೆಚ್ಚು ಅಪಕಾರವೇ ಆಗಿದೆ, ಇಂದು ದೇವರಿಗೂ ವಿರುದ್ಧವಾಗಿ ಕೆಲಸ ಮಾಡುವ ರೀತಿಯಲ್ಲಿರುವುದರಿಂದ, ಅವುಗಳನ್ನು ಸರಿಪಡಿಸುವುದಕ್ಕೋಸ್ಕರ ತಂದ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ.

ಹಿಂದಿನ ಕಾಲದಲ್ಲಿ ದೇವರಿಗೆ ಮತ್ತು ಮಠಗಳಿಗೆ ಜನ ಎಷ್ಟು ಹೆದರುತ್ತಿದ್ದರೆಂಬುದನ್ನು ನೀವು ಕೇಳಿರಬಹುದು. ರಾಮರಾಜ್ಯ ಕಾಲದಲ್ಲಿ ಒಂದು ದೇವಸ್ಥಾನದಲ್ಲಿ ಎಣ್ಣೆಯ ಬತ್ತಿಯನ್ನು ಉಳಿಸಿಕೊಂಡ ಹೋದ ಒಬ್ಬ ಮನುಷ್ಯ ಇನ್ನೊಂದು ಜನ್ಮದಲ್ಲಿ ನಾಯಿಯಾಗಿ ಹುಟ್ಟಿದನಂತೆ. ಈಗ ಎಷ್ಟೋ ಮಠಗಳ, ದೇವಸ್ಥಾನಗಳ ಉತ್ಪತ್ತಿಯನ್ನು ಸ್ವಾಹ ಮಾಡುವ ಉದಾಹರಣೆಯನ್ನು ಈಗ ತಾನೆ ನನ್ನ ಮಾನ್ಯ ಸದಸರಾದ ಶ್ರೀ ಭಾಸ್ಕರಶೆಟ್ಟರು ಹೇಳಿದರು. ಮೂರು ಮಾರಿ ಗುಡಿಗಳು ಹೇಗೆ ಆದುವು ಎಂದು ಹೇಳಿದರು ; ಮಾರಮ್ಮನಿಗೋಸ್ಕರ ಅಕ್ಕಿ, ಕಾಣಿಕೆ ಮುಂತಾದುವನ್ನು ಜನ ರಿಂದ ವಸೂಲು ಮಾಡುವುದಕ್ಕೆ ಅವರ ಮನೆಗಳಿಗೆ ಕಳುಹಿಸುವುದಕ್ಕೆ ಒಬ್ಬರು ಮಾಡಿಕೊಂಡರು, ಅದರಲ್ಲಿ ಬಂದ ಉತ್ಪನ್ನವನ್ನು ಹಂಚಿಕೊಳ್ಳುವಾಗ ಭಿನ್ನಾಭಿಪ್ರಾಯ ಬಂದು ಇನ್ನೊಂದು ಮಾರ ಮ್ಮನ ಗುಡಿ ಪ್ರಾರಂಭವಾಯಿತು. ದೇವರ ಹೆಸರನ್ನು ಸರಕಾರದವರು ಸಹ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. 'ಯಥಾರಾಜಾ ತಥಾ ಪ್ರಜಾ' ಅದೇ ರೀತಿಯಲ್ಲಿ ಪ್ರಜೆಗಳೂ ಸಹ ದೇವರ ಹೆಸರನ್ನು ದುರುಪಯೋಗಪಡಿಸಿಕೊಂಡು, ದೇವರ ಹೆಸರಿನಲ್ಲಿ ಲಾಭ ಪಡೆಯಲಿಕ್ಕೆ ಹೊರಟಿ ದ್ದಾರೆ. ನಾನು ಎಲ್ಲ ಮಠಗಳೂ, ದೇವಸ್ಥಾನಗಳೂ, ಆಶ್ರಮಗಳೂ ಈ ರೀತಿ ಮಾಡುತ್ತಿವೆ ಯೆಂದು ಹೇಳುವುದಕ್ಕೆ ಸಿದ್ಧನಿಲ್ಲ. ಕೆಲವು ಮಠಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿವೆ; ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿಯೂ ಮತ್ತು ಜನರಿಗೆ ಸಹಾಯಕವಾಗುವ ಬೇರೆ ಬೇರೆ ರೀತಿಯಲ್ಲಿಯೂ ಅವು ಚೆನ್ನಾಗಿ ಕೆಲಸ ಮಾಡುವುದನ್ನು ನಾನು ನೋಡಿದ್ದೇನೆ. ತುಮಕೂರು ಸಿದ್ಧಗಂಗೆ ಮಠ, ಹುಬ್ಬಳ್ಳಿಯ ಮಠ, ಬಾಳೆಹೊನ್ನೂರು ಮಠ, ಸುತ್ತೂರುಮಠ, ಶೃಂಗೇರಿಮಠ, ಹಾಗೂ ಉಡುಪಿಯಲ್ಲಿರುವ ಕೆಲವು ಮಠಗಳನ್ನು ಒಳ್ಳೆಯ ಉದಾಹರಣೆಯಾಗಿ ತೆಗೆದುಕೊಳ್ಳ ಬಹುದು. ಧರ್ಮಸ್ಥಳದಲ್ಲಿರುವ ದೇವಸ್ಥಾನ, ಮತ್ತು ಇದೇ ರೀತಿಯಲ್ಲಿರುವ ಇನ್ನೂ ಕೆಲವು ದೇವಸ್ಥಾನಗಳು ಏನಿವೆ, ಅವೂ ನಿಜವಾಗಿಯೂ ಜನರ ಸಾಂಸ್ಕೃತಿಕ ಕ್ಷೇತ್ರದಲ್ಲಿ ಶೈಕ್ಷಣಿಕ ಮತ್ತು ಧಾರ್ಮಿಕ ವಿಚಾರಗಳಲ್ಲಿ ಮತ್ತು ಯೋಗ್ಯ ಕಾರ್ಯಗಳಲ್ಲಿ ತಮಗೆ ಬರುವಂಥ ಉತ್ಪನ್ನವನ್ನು

(ಶ್ರೀ ಸಂಜೀವನಾಥ ಐಕಳ)

ಉಪಯೋಗಿಸುತ್ತಿವೆ. ಆದರೆ ಕೆಲವು ಮಠಗಳು ರಾಜಕೀಯಕ್ಕೆ ಕೈ ಹಾಕಿ ತಮಗಿರುವ ಬೆಂಬಲ ವನ್ನು ದುರುಪಯೋಗ ಮಾಡಿಕೊಂಡೂ ಇರಬಹುದು ನಾನು ಉದಾಹರಣೆ ಕೊಟ್ಟರೆ ತಪ್ಪಾಗು ತ್ತದೆ ; ಚಿತ್ರದುರ್ಗದಲ್ಲಿರುವ ಎರಡು ಪ್ರಸಿದ್ಧ ಮಠಗಳು ರಾಜಕೀಯದಲ್ಲಿ ಇತ್ತೀಚೆಗೆ ತಲೆ ಹಾಕಿರು ವಂತೆ ಕಾಣುತ್ತದೆ. ಅವುಗಳ ಉದ್ದೇಶ ರಾಜಕೀಯದಲ್ಲಿ ಪ್ರವೇಶಮಾಡಿ ಕೆಲವು ವ್ಯಕ್ತಿಗಳಿಂದ ಅನುಕೂಲತೆಗಳನ್ನು ಪಡೆದುಕೊಳ್ಳಬೇಕೆಂಬುದೇ ಈ ಮಸೂದೆಯ ಪ್ರಕಾರ ದೇವಸ್ಥಾನದ ಮತ್ತು ಮಠದ ಆಡಳಿತ ಮತ್ತು ಅವುಗಳಿಗೆ ಬರುವ ಉತ್ಪತ್ತಿಯನ್ನು ವಶಪಡಿಸಿಕೊಳ್ಳುವುದಕ್ಕೆ ಇದರಲ್ಲಿ ಬೇಕಾದಷ್ಟು ಪ್ರಾವಿಷನ್ನುಗಳಿವೆ. ಸರ್ಕಾರದವರು ಅವುಗಳ ಆಡಳಿತದಲ್ಲಿ ಕೈ ಹಾಕಿದರೆ ಮೈದಾಸ್ ಮುಟ್ಟಿದೆಲ್ಲಾ ಬಂಗಾರವಾಗುವುದು ನಿಂತು ಹೋಗುತ್ತದೆ ಸರ್ಕಾರ ಬಂಗಾರ ಮುಟ್ಟಿದರೂ ಮಣ್ಣಾಗುತ್ತಿದೆ. ಈಗ ಬಹಳ ಒಳ್ಳೆಯ ಕೆಲಸ ಮಾಡುತ್ತಿರುವಂಥ ಮಠಗಳು, ಆಶ್ರಮಗಳೂ ಮತ್ತು ದೇವಸ್ಥಾನಗಳ ಆಡಳಿತದಲ್ಲಿ ಸರಕಾರದವರು ಕೈ ಹಾಕಿದರೆ, ನಿಜವಾಗಿ ಒಳ್ಳೆಯದಾಗುವ ಬದಲಾಗಿ ಅವುಗಳು ದುರವಸ್ಥೆಗೆ ಬರುವ ಪರಿಸ್ಥಿತಿ ಬರುತ್ತದೆ ; ಅಂಥ ಒಂದು ಸನ್ನಿವೇಶ ಬರುತ್ತದೆ.

ನಾನು ಈ ಬಿಲ್ಲನ್ನು ನೋಡಿದಾಗ ಕೆಲವು ಬಹಳ ಮುಖ್ಯವಾದ ವಿಷಯಗಳು ಇದರಲ್ಲಿ ಅಡಕ ವಾಗಿಲ್ಲ ಎಂದು ಕಂಡು ಬಂದಿತು. ಮಠಗಳು, ದೇವಸ್ಥಾನಗಳೇ ಅಲ್ಲದೆ, ಇನ್ನೂ ಎಷ್ಟೋ ಆಶ್ರಮಗಳಿವೆ. ಬ್ರಹ್ಮ ಸಮಾಜ, ಆರ್ಯ ಸಮಾಜ, ರಾಮಕೃಷ್ಣಾಶ್ರಮ ಮುಂತಾದ ಇನ್ನೂ ಕೆಲವು ಬೇರೆ ಬೇರೆ ಪಂಥಗಳೂ, ಮಠಗಳು, ಧರ್ಮಸಂಸ್ಥೆಗಳೂ ಇರುತ್ತವೆ. 100ನೆಯ ಕ್ಲಾಜಿನಲ್ಲಿ ಇವುಗಳು ಅಡಕವಾದ ಹಾಗೆ ಇಲ್ಲ. ಈ ಕ್ಲಾಜನ್ನು ಇನ್ನೂ ಕ್ಲಿಯರ್ ಮಾಡಬೇಕು. ನಾನು ಹೇಳಿದ ಆಶ್ರಮಗಳು ಈ ರಾಜ್ಯದಲ್ಲಿ ರಿಜಿಸ್ಟರಾಗಿರುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ನೋಟೀಸು ಕೊಟ್ಟು ಅವುಗಳನ್ನು ರಿಜಿಸ್ಟರು ಮಾಡಿಸುತ್ತೇವೆ.

ಶ್ರೀ ಸಂಜೀವನಾಥ ಐಕಳ.—ಆದ್ದರಿಂದ ಈ ಎಲ್ಲಾ ಆಶ್ರಮಗಳು ಈ ಪ್ರಾವಿಷನ್ನಿನಲ್ಲಿ ಸೇರಿದ ಹಾಗೆ ಕಾಣುವುದಿಲ್ಲ.

ಆದರೆ ಇದೇ ಸಮಯದಲ್ಲಿ ನಾನು ನೋಡುತ್ತಿರುವಂತೆ, ಈ ಆಶ್ರಮಗಳು, ಮಠಗಳು ಅಥವಾ ಸಂಸ್ಥೆಗಳು ಯಾವಿವೆಯೋ ಅವುಗಳಿಗೆ ಪ್ರೋತ್ಸಾಹ ಕೊಡುವ ಬಗ್ಗೆ ಯಾವ ವ್ಯವಸ್ಥೆಯೂ ಕಾಣುವುದಿಲ್ಲ. ಕೆಲವು ಸಣ್ಣ ದೇವಸ್ಥಾನಗಳಿರುತ್ತವೆ, ಸ್ವಲ್ಪ ಉತ್ಪತ್ತಿ ಇರುತ್ತದೆ, ಆದರೂ ಬಹಳ ಕೆಲಸ ಮಾಡುತ್ತಿರುತ್ತವೆ. ಪೂಜಾ ವಿಧಿಗಳನ್ನು ಮತ್ತು ನೀತಿ ನಿಯಮಗಳನ್ನು ಅನುಸರಿಸು ವುದಕ್ಕೆ ಅವುಗಳಿಗಿರುವ ಉತ್ಪತ್ತಿ ಸಾಕಾಗುವುದಿಲ್ಲ. ಒಂದು ರೂಪಾಯಿ ಉತ್ಪನ್ನವಿರುವ ದೇವ ಸ್ಥಾನಗಳ ಉತ್ಪನ್ನದಲ್ಲಿ ಸ್ವಲ್ಪ ಅಂಶವನ್ನು ಸರ್ಕಾರ ತೆಗೆದುಕೊಳ್ಳುವುದು ಎಂಬ ಒಂದು ಪ್ರಾವಿ ಷನ್ ಇದರಲ್ಲಿದೆ. ಇದು ಬಹಳ ತಪ್ಪು. ಈಗ ಅವುಗಳಿಗಿರುವ ಉತ್ಪತ್ತಿಯೇ ಕಡಮೆಯಾಗಿರು ವಾಗ ಅವುಗಳ ಉತ್ಪನ್ನದಿಂದಲೇ ಸ್ವಲ್ಪ ಅಂಶವನ್ನು ಕಿತ್ತುಕೊಳ್ಳುವುದು ಬಹಳ ತಪ್ಪಾಗುತ್ತದೆ.

Mr. SPEAKER.—The Hous will now adjourn and meet tomorrow at half past Twelve.

The House adjourned at Six of the Clock to meet again at Thirty Minutes past Twelve of the Clock on Wednesday, the 11th September 1963.

WD 1045—GPB—900—23-11-63

MYSORE LEGISLATIVE ASSEMBLY.

FORTY-NINTH DAY.

Wednesday, 11th September 1963.

The House met in the Assembly Hall, Vidhana Soudha, Bangalore at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Construction of an additional bridge on the Tunga River near Shimoga.

***Q.—30.** Smt. RATNAMMA MADHAVA RAO (Shimoga).—

Will the Government be pleased to state :—

(*a*) whether it has come to the notice of the Government that there is urgent necessity for the construction of an additional bridge on the Tunga River near Shimoga to relieve the congestion in traffic on the existing bridge ;

(*b*) whether it is a fact that as far back as in 1956, the Department of Public Works prepared an estimate for the construction of a bridge near the Ramanna Setty Park for a sum of Rs. 1,90,000 and the Shimoga Municipal Council had agreed to meet one-fourth of the estimated cost ;

(*c*) if so, why there was a delay in taking up the work ;

(*d*) whether in view of the urgency and the necessity, the Government would go ahead with the work of the preparation of the Plans and Estimates connected with the said bridge and take up this work early ?

A.—Sri G. B. SHANKAR RAO (Parliamentary Secretary to Minister for Public Works).—

(*a*) There have been representations requesting for the construction of an additional bridge.

(*b*) Yes.

(*c*) The proposal was dropped because a foot bridge across major river is not considered stable and further at that time it was considered that another pucca bridge was not necessary.

(*d*) Yes.

ಶ್ರೀಮತಿ ರತ್ನಮ್ಮ ಮಾಧವರಾವ್.—ಕೊನೆಯ ಕ್ಲಾಜಿಗೆ ಉತ್ತರವಾಗಿ ಹೌದು ಎಂದು ಹೇಳಲಾಗಿದೆ. ಆದುದರಿಂದ ಇದರ ನಕ್ಷೆ, ಪ್ಲಾನು ಇತ್ಯಾದಿ ವಿಚಾರಗಳೆಲ್ಲ ಎಲ್ಲಿಯವರೆಗೆ ಬಂದಿವೆ? ಕೆಲಸವನ್ನು ಯಾವಾಗ ತಗೆದುಕೊಳ್ಳುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಈಗಿನ್ನೂ ಆ ಸೇತುವೆಯ ನಕ್ಷೆ, ಪ್ಲಾನು ಇತ್ಯಾದಿಗಳೆಲ್ಲ ತಯಾರಾಗುತ್ತಿವೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಅದಕ್ಕೆ ಇನ್ನೂ ಎಷ್ಟು ಕಾಲ ಹಿಡಿಯಬಹುದು?

ಶ್ರೀ ಜಿ. ಬಿ. ಶಂಕರರಾವ್.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಕೆಲಸವನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಮಾಡುತ್ತೇವೆ.

Establishment of an Agricultural Colony for the Depressed Class People in Nayindrahalli, Chintamani Taluk.

*Q.—303. Sri J. NARAYANAPPA (Mulbagal).—

Will the Government be pleased to state :—

(a) when the Agricultural Colony for Depressed Class in Nayindrahalli, Chintamani Taluk, Kolar District, was established ;

(b) whether they are aware that this Colony was established with a view to adjoin the gomal lands lying in the midst of Nayindrahalli, Neranakal, Gunnalli and Madaballi Villages to the said Colony ;

(c) the reasons for not taking steps so far with regard to the distribution of the said lands to them ;

(d) whether they are aware that even after the establishment of this Colony, the Hindus other than Harijans are in possession of the said lands and have encroached the Harijans' burial ground also ?

A.—Smt. YASHODARA DASAPPA (Minister for Social Welfare).—

(a) In the year 1950.

(b) Yes.

(c) 60 acres of land have already been distributed.

(d) No.

ಶ್ರೀ ಜೆ. ನಾರಾಯಣಪ್ಪ.—ಈ ಕಾಲೋನಿ ಸ್ಥಾಪಿತವಾಗಿ ಇಲ್ಲಿಗೆ 13 ವರ್ಷಗಳಾಯಿತು, ಅಲ್ಲಿ ಎಷ್ಟು ಮನೆಗಳಿವೆ?

† ಶ್ರೀಮತಿ ಯಶೋದರ ದಾಸಪ್ಪ.—ಅಲ್ಲಿ ಈವರೆಗೆ 33 ಜನಗಳಿಗೆ ಜಮೀನನ್ನು ಕೊಡಲಾಗಿದೆ.

ಶ್ರೀ ಜೆ. ನಾರಾಯಣಪ್ಪ.—ಇನ್ನೂ ಅಲ್ಲಿ 63 ಜನರಿಗೆ ಜಮೀನನ್ನು ಕೊಟ್ಟಿಲ್ಲ. ಒಂದೊಂದು ಸಂಸಾರಕ್ಕೆ ಎಷ್ಟು ಜಮೀನನ್ನು ಕೊಡಲಾಗಿದ?

ಶ್ರೀಮತಿ ಯಶೋದರ ದಾಸಪ್ಪ.—ಈಗ ಅವರಿಗೆ 60 ಎಕರೆ ಜಮೀನನ್ನು ಕೊಡಲಾಗಿದೆ. ಅವರು ಇದರ ಜೊತೆಗೆ 45 ಎಕರೆಗಳಷ್ಟು ಜಮೀನನ್ನು ಅಕ್ರಮದಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಇನ್ನೂ ಅಲ್ಲಿರತಕ್ಕ 20 ಎಕರ ಜಮೀನನ್ನು ಕೊಡಲಾಗುತ್ತದೆ. ಅಲ್ಲಿ ಇನ್ನುಳಿಯುತಕ್ಕ ಜಮೀನೆಲ್ಲ ಕಲ್ಲುಬಂಡೆಗಳಿಂದ ಕೂಡಿದ್ದಾಗಿರುತ್ತದೆ. ಇಷ್ಟಾದರೆ ಪ್ರತಿ ಸಂಸಾರಕ್ಕೂ ನಾಲ್ಕು ಎಕರೆ ಜಮೀನನ್ನು ಕೊಟ್ಟ ಹಾಗಾಗುತ್ತದೆ.

ಶ್ರೀ ಜೆ. ನಾರಾಯಣಪ್ಪ.—ಅಲ್ಲಿ ಹರಿಜನರಿಗೆ ಕೊಟ್ಟಿರತಕ್ಕ ಜಮೀನನ್ನು ಸವರ್ಣೀಯರು ಒತ್ತುವರಿ ಮಾಡಿಕೊಂಡು ಬಂದಿರತಕ್ಕ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ?

† Indicates that the remarks or speeches have not been revised by the member concerned

ಶ್ರೀಮತಿ ಯಶೋದರ ದಾಸಪ್ಪ.—ಮೊನ್ನೆ ತಾನೆ ತಾಸೀಲ್‌ದಾರರು ಸ್ಥಳಕ್ಕೆ ಹೋಗಿ ವಿಚಾರಣೆಮಾಡಿ ನಮಗೆ ವರದಿಯನ್ನು ಕಳುಹಿಸಿದ್ದಾರೆ. ಅಲ್ಲಿ 45 ಎಕರೆ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆಂದು ವರದಿ ಬಂದಿದೆ. ಇನ್ನು ಅಲ್ಲಿರತಕ್ಕ ಜಮೀನು ಗೋಮಾಳಕ್ಕೆ ಸೇರಿರತಕ್ಕದ್ದಾಗಿದೆ.

ಶ್ರೀ ಜೆ. ನಾರಾಯಣಪ್ಪ.—ಅಲ್ಲಿ ಈಗ ಬೇರೆ ಒಬ್ಬ ಸವರ್ಣೀಯರು 30 ಎಕರೆಗಳಲ್ಲಿ ಸರ್ವೆ ತೋಪನ್ನು ಮಾಡುತ್ತಿದ್ದಾರೆ. ಈ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಯಶೋದರ ದಾಸಪ್ಪ.—ಇಲ್ಲ.

Sri G. DUGGAPPA.—May I know from Government what is the minimum acreage that is allotted for each family in that colony ?

ಶ್ರೀಮತಿ ಯಶೋದರ ದಾಸಪ್ಪ.—ಈಗಾಗಲೆ ನಾನು ಹೇಳಿದಷ್ಟನ್ನು ಕೊಟ್ಟರೆ ಒಂದೊಂದು ಸಂಸಾರಕ್ಕೆ 4 ಎಕರೆ ಆಗುತ್ತದೆ.

Sri G. DUGGAPPA.—Is it sufficient for each family to live upon, in that Colony and what is the type of land allotted-whether it is first class, second class or third class ?

[illegible]

ಶ್ರೀಮತಿ ಯಶೋದರ ದಾಸಪ್ಪ.—ನಾವು ಆ ಕಾಲೋನಿಯಲ್ಲಿ ಹರಿಜನರಿಗೆ ತಲಾ 5 ಎಕರೆ ಜಮೀನನ್ನು ಕೊಡಬೇಕೆಂದು ಮಾಡಿಕೊಂಡಿದ್ದೆವು. ಆದರೆ ಅಲ್ಲಿದ್ದ ಜಮೀನೇ ಅಷ್ಟು.

Defalcation of money in Nanjangud Munsiff's Court.

*Q.—320. Sri M. C. BASAPPA (Chamarajanagar).—

Will the Government be pleased to state :—

(a) whether it is a fact that there was defalcation of money in Nanjangud Munsiff's Court;

(b) if so, what is the amount defalcated and the period in which it had taken place ;

(c) if the amount defalcated relates to deposits made by the parties in suits, what is the relief given by Government to such parties ;

(d) if the relief is to be given when it will be given ?

A.—Sri M. V. RAMA RAO (Minister for Law).—

(a) Yes.

(b) (1) Rs. 6,263·13 nP.

(2) From 1st January 1952 to end of June 1958.

(c) & (d) The matter is pending before the High Court for consideration.

ಶ್ರೀ ಎಂ. ಸಿ. ಬಸಪ್ಪ.—ಆರು ವರ್ಷಗಳ ಕಾಲದಲ್ಲಿ ಆರುಸಾವಿರ ಚಿಲ್ಲರೆಯಷ್ಟು ಹಣ ದುರುಪಯೋಗವಾಗಿದ್ದರೆ ಲೆಕ್ಕ ಪತ್ರಗಳನ್ನು ಸರಿಯಾಗಿ ಇಟ್ಟಿರಲಿಲ್ಲವೇ ?

ಶ್ರೀ ಎಂ. ವಿ. ರಾಮರಾವ್.—ಇದು ಅಲ್ಲಿರುವ ಕೋರ್ಟಿಗೆ ಸಂಬಂಧಪಟ್ಟ ಅಕೌಂಟುಗಳು, ಹೈಕೋರ್ಟಿನ ಮೂಲಕ ಇನ್ಸ್‌ಪೆಕ್ಷನ್ನಿಗಾಗಿ ಹೋದಾಗ ಇವು ಗೊತ್ತಾದವು.

MR. SPEAKER.—Is the matter *sub judice* or is it any Departmental enquiry by the High Court ? If it is *sub judice*, I do not want to allow the supplementary.

Sri M. V. RAMA RAO.—The matter had been the subject of a departmental enquiry by the District Judge and his findings have been challenged and taken in appeal before the High Court functioning as an administrative unit.

Sri G. V. GOWDA.—May I know when the District Judge conducted the enquiry and submitted the report ?

Sri M. V. RAMA RAO.—The enquiry by the District Judge appears to have been held sometime before 1959.

Sri G. V. GOWDA.—May I know whether any responsibility has been fixed on anybody by the enquiry officer ?

MR. SPEAKER.—When the matter is in appeal, why dissect it here? Why not wait for the disposal of the appeal ?

Sri G. V. GOWDA.—The enquiry is over, Sir...

MR. SPEAKER.—If the member refers to the rules, it is very clear. Even enquiry before a tribunal or a departmental enquiry cannot be the subject matter of the question here. Now the matter is pending in appeal. Is the enquiry over with that ?

Sri G. V. GOWDA.—We do not know who has preferred the appeal.

Mr. SPEAKER.—The Hon'ble Minister says that an appeal has been preferred. Whoever has preferred, the appeal is there.

Sri S. SIVAPPA.—The High Court in this case is only the administering authority. It is before the High Court for action.

Mr. SPEAKER.—Sri Sivappa has contributed nothing new. The House is proceeding on the assumption that it is an administrative matter.

Sri M. V. RAMA RAO.—The facts of the matter are that the District Judge, Mysore, held the enquiry into the alleged defalcation by the delinquent official. His report with such findings as may be contained therein, was submitted to the High Court. The delenquint official has preferred an appeal against that finding to the High Court, and the matter is with the High Court at the moment.

Sri D. M. SIDDAIYA.—When was the defalcation traced out, Sir ?

Sri M. V. RAMA RAO.—During September 1958 when an inspection was made, the High Court discovered that certain misappropriations had been made and made a report to the Government in that behalf.

Sri S. M. KRISHNA.—What will happen to the clients ? Government have stated in their answer that clients have made certain deposits and these deposits have been misappropriated.

Mr. SPEAKER.—Clients will not lose it.

Sri M. V. RAMA RAO.—I do not think so, because a court of justice is accountable for the moneys deposited in the court.

Sub-Inspectors and other Officers above that rank in the Police Department who have over-stayed in Bangalore.

*Q.—374. Sri B. NANJAPPA (Cubbonpet).—

Will the Government be pleased to state :—

(*a*) the number of Sub-Inspectors and other Officers above that rank in the Police Department working in Bangalore ;

(*b*) since how long they have been staying at Bangalore during their service ;

(*c*) whether action would be taken for the transfer of such of those who have over-stayed in the headquarters ?

A.—Sri R. M. PATIL (Minister for Home).—

(*a*) 272.

(*b*) 152 Officers are working in Bangalore for more than three years and the remaining have stayed for less than three years. (*Vide* statement placed on the table of the House). (Copy placed in Mysore Legislature Library *Vide* No. 27/11-9-63.)

(*c*) Yes ; transfers will be effected whenever necessary, keeping in view the interest of public service.

Sri B. NANJAPPA.—What was the policy of transferring these officials ?

†**Sri R. M. PATIL.**—The Policy is that it is done only in the interest of public administration.

Sri B. NANJAPPA.—Sl. No. 27 there are Sub-Inspectors who have put in 27 years of service in Bangalore ; why have they not been transferred ?

Sri R. M. PATIL.—They are persons who are in the reserve and Anti-Corrupton or C. I. D. Departments; such officials have been retained because of their specialisation.

Sri B. NANJAPPA.—Persons who have been frequently transferred for years together, have not been given an opportunity to be in Bangalore. What is the speciality in the case of some of these sub-inspectors who have put in 27 years of work in Bangalore ?

Sri R. M. PATIL.—Well, answer is given in (*c*) ; they will be transferred, keeping in view administrative interest.

Mr. SPEAKER.—I wish to make one suggestion. In the interpellation, the member had asked for numbers. In the statement laid, names have been given. That could have been avoided.

Sri G. V. GOWDA.—There are 272 officers in Bangalore. If the Government transfer one indivdual from one police station to another in the same city, is it considered as transfer ?

Sri R. M. PATIL.—In such cases, the consideration is only this much : Some of the sub-inspectors or people of lower rank who are in service, know about the criminals in Bangalore City.

Sri C. V. VENKATARAYAPPA.—In view of this answer, will the Government withdraw the order that no official should stay at any place for more than three years ?

Sri R. M. PATIL.—Not necessarily, Sir.

ಶ್ರೀ ಬಿ. ನಂಜಪ್ಪ.—ಈ ರೀತಿ ಬಹಳ ದಿನಗಳಿಂದ ಈ ಪೋಲೀಸು ಅಧಿಕಾರಿಗಳು ಒಂದೇ ಜಾಗದಲ್ಲಿರುವುದರಿಂದ ಕ್ರಿಮಿನಲ್ ಕೇಸುಗಳು ಜಾಸ್ತಿಯಾಗುತ್ತ ಬರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಕ್ರಿಮಿನಲ್ ಕೇಸುಗಳು ಜಾಸ್ತಿಯಾಗುತ್ತ ಬರುತ್ತಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಕ್ರಿಮಿನಲ್ ಕೇಸು ಬರುವುದು ಹೇಗಾದರೂ ಬರುತ್ತದೆ. ಆದರೆ ಬಹಳ ದಿವಸಗಳಿಂದ ಈ ಅಧಿಕಾರಿಗಳು ಇದ್ದಾರೆನ್ನುವುದರ ಬಗ್ಗೆ ವಿಚಾರಮಾಡಿ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಅಧಿಕಾರಿಗಳು ಒಂದೇ ಕಡೆಯಲ್ಲಿರುವುದರಿಂದ ಬೆಂಗಳೂರು ಸಿಟಿಯಲ್ಲಿ ಕ್ರಿಮಿನಲ್ ಕೇಸುಗಳು ಹೆಚ್ಚಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಆಗಲೇ ಇದಕ್ಕೆ ಉತ್ತರ ಕೊಡಲಾಗಿದೆ.

Sri N. O. SAMAJI.—(Marathi)

Sri R. M. PATIL.—This is nothing new to us.

Sri S. SIVAPPA.—The Hon'ble Minister was pleased to say that some sub-inspectors in Bangalore who were here knew the criminals very well. Is it not a fact that they know these criminals so well that they have developed friendship with them?

Sri R. M. PATIL.—It is an insinuating question, Sir. It cannot be known.

ಶ್ರೀ ಸಿದ್ದಯ್ಯ ಕಾಶೀಮಠ.—ಸರಕಾರದ ಅಧಿಕಾರಿಗಳು ಮೂರು ವರ್ಷಕ್ಕಿಂತ ಮೇಲ್ಪಟ್ಟು ಒಂದೇ ಸ್ಥಳದಲ್ಲಿರಕೂಡದು ಎನ್ನುವ ನಿಯಮದಂತೆ ಈಗಲಾದರೂ ಇವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಲು ಪರ್ಯಾಲೋಚಿಸುತ್ತೀರಾ ?

Sri R. M. PATIL.—Even the answer at (c) is sufficient for my hon'ble friend.

ಶ್ರೀ ಬಿ. ಎಲ್. ಗೌಡ.—ಎರಡು ವರ್ಷಗಳಾಗುವುದಕ್ಕೆ ಮುಂಚೆಯೇ ಕೆಲವು ಸರಕಾರದ ಅಧಿಕಾರಿಗಳನ್ನು ವರ್ಗಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri R. M. PATIL.—That is outside the purview of the present question.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—20 ವರ್ಷಗಳ ಕಾಲ ಒಂದೇ ಕಡೆ ಕೆಲಸ ಮಾಡಿರುವಂತಹ ಅಧಿಕಾರಿಗಳನ್ನು ಈ ದೇಶದ ಹೊರಗಡೆಗೂ ಕಳುಹಿಸುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಅವಶ್ಯ ಬಿದ್ದರೆ ಆಗ ಕಳುಹಿಸಬಹುದು.

Sri B. NANJAPPA.—On seveal occasions, the public have made complaints that some of the officers should be transferred. In such cases, Government have ordered transfers in the local area in Bangalore.

Sri R. M. PATIL.—It is a matter of too much detail. I will have to make an enquiry to answer that question.

Cost of production of important foodgrains like Paddy, Jola, Ragi, Wheat, etc.

*Q.—497. Sri G. A. THIMMAPPA GOWDA (Arkalgud).—

Will the Government be pleased to state.—

(a) whether they have made any attempt to determine the cost of production of important foodgrains like Paddy, Jola, Ragi, Wheat, etc.

(b) if not, whether they intend to take immediate steps to determine the cost of production of important foodgrains grown in the State in view of absolute necessity and urgency for the same.

A.—Sri M. V. KRISHNAPPA (Minister for Revenue).—

(a) Yes.

(b) Does not arise in view of reply to (a).

Sri G. A. THIMMAPPA GOWDA.—What is the basis or what are the factors that have been taken into consideration to determine the price of these important foodgrains ?

ಶ್ರೀ ಎಂ. ವಿ. ಕೃಷ್ಣಪ್ಪ.—ಗವರ್ನಮೆಂಟ್ ಆಫ್ ಇಂಡಿಯಾ ಅವರು ರೀಜನಲ್ ಫಾರಂ ಮೇನೇಜ್‌ಮೆಂಟ್ ಸ್ಕೀಮ್ ಎಂದು ಮಾಡಿ ಎಲ್ಲಾ ಸ್ಟೇಟುಗಳಲ್ಲಿಯೂ ಎರಡನೇ ಪ್ಲಾನಿನಲ್ಲಿ ಕಂಡಕ್ಟ್ ಮಾಡಿದರು. ಬೆಂಗಳೂರು ಜಿಲ್ಲೆಯಲ್ಲಿ ರಾಗಿ ಬೆಳೆಯುವುದಕ್ಕೆ per hundered lbsಗೆ ಎಷ್ಟಾಗುತ್ತದೆಂದು ಕ್ಯಾಲ್ಕ್ಯುಲೇಟ್ ಮಾಡಿದ್ದಾರೆ. ಮಾಡುವಾಗ labour cost per worker 137 ರೂಪಾಯಿ ಆಗುತ್ತದೆಂದು ಹೇಳಿದ್ದಾರೆ. Human side, family, annual labour, hired labour, bull cost ಇವೆಲ್ಲಾ 298 ರೂಪಾಯಿ ಎಂದು ಲೆಕ್ಕ ಮಾಡಿದ್ದಾರೆ. Variable cost ವಿಷಯವನ್ನು ಹೇಳಿದ್ದಾರೆ : seeds, manures, fertilisers, disease-control measures, miscellaneous charges on irrigation and repairs ಎಂದು ಸೂಚಿಸಿ ಒಂದು ಎಕರೆ ರಾಗಿ ಬೆಳೆಯುವುದಕ್ಕೆ 464 ರೂಪಾಯಿ 90 ನಯಾಪೈಸ ಆಗುತ್ತದೆಂದು ಹೇಳುತ್ತಾರೆ. ಅದರ ಪ್ರಕಾರ 100 ಪೌಂಡಿಗೆ 19 ರೂಪಾಯಿ ಆಗುತ್ತದೆಂದು ಹೇಳುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದರ ಪ್ರಕಾರ ಈಗ ತಾವು ಖರ್ಚು ತಿಳಿಸಿದ್ದೀರಿ. Per acre ಆದಾಯ ಎಷ್ಟು ಬರುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಷ್ಟು ಖರ್ಚಾದರೆ ಇಷ್ಟು ಆದಾಯ ಎನ್ನುವುದು individual cases ಮೇಲೆ ಹೋಗುತ್ತದೆ. Average ಹೇಳುವುದಕ್ಕಾಗುವುದಿಲ್ಲ. ಅದು market prices ಮೇಲೆ ಹೋಗುತ್ತದೆ. ಒಂದು ಎಕರೆಯಲ್ಲಿ ರಾಗಿ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ, ಬತ್ತ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ ಎಂದು ಖರ್ಚನ್ನು ತೋರಿಸುತ್ತಾರೆ. ಅವರು ಎಕರೆಗೆ ಖರ್ಚು ಮಾಡಿದ್ದನ್ನು ಇಲ್ಲಿ ಕೊಡುತ್ತಾರೆ. ಬೇರೆಯದನ್ನು ಅವರು ಕೊಡುವುದಕ್ಕಾಗುವುದಿಲ್ಲ. ಅವರು ಬೆಳೆವ ಕಡೆ ಮಳೆ ಸರಿಯಾಗಿದ್ದಿತೋ ಇಲ್ಲವೋ, ಆದಾಯ ಇಲ್ಲದೇನೂ ಹೋಗಬಹುದು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಲೆನಾಡು ಪ್ರಾಂತ್ಯದಲ್ಲಿ ಬತ್ತ ಬೆಳೆಯುವುದಕ್ಕೆ ಒಂದು ಎಕರೆಗೆ ಎಷ್ಟು ಖರ್ಚು ಆಗುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಮಲೆನಾಡು ಪ್ರಾಂತ್ಯದಲ್ಲಿ ಅಗತ್ಯವಿಲ್ಲವೆಂದು ಹೇಳಿ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಎಕ್ಸ್‌ಪೆರಿಮೆಂಟುಗಳನ್ನು 30 ಸ್ಥಳಗಳಲ್ಲಿ ಮಾಡಿ ಒಂದು ಆವರೇಜ್ ಕಾಸ್ಟ್ ಕೊಟ್ಟಿದ್ದಾರೆ.

ಶ್ರೀ ಜಿ. ರಾಮೇಗೌಡ.—ಈಗ ಮನೆಯವರೇ ಕೆಲಸ ಮಾಡಿದರೆ ಲೇಬರ್ ಚಾರ್ಜ್ ಎಷ್ಟು ಎಂದು ಲೆಕ್ಕ ಹಾಕಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಾಗಿ ಬೆಳೆಮಾಡುವಾಗ ಒಂದು ಎಕರೆಗೆ 34 ರೂಪಾಯಿ 82 ನಯಾಪೈಸೆ ಎಂದು ಲೆಕ್ಕ ಹಾಕಿದ್ದಾರೆ.

ಶ್ರೀ ಬಿ. ಚನ್ನಬೈರೆಗೌಡ.—ಒಂದು ಎಕರೆಗೆ 464 ರೂಪಾಯಿ ಖರ್ಚಾಗುತ್ತದೆಂದು ಹೇಳಿದಿರಿ. ಇದರ ಈಲ್ಡ್ ಲೆಕ್ಕಾಚಾರ ಹಾಕಿದರೆ 1¼ ರೂಪಾಯಿಗೆ 1 ಸೇರು ರಾಗಿ ಬೀಳುತ್ತದೆ. ಈ ರೇಟ್ ಫಿಕ್ಸ್‌ಮಾಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—Controlled conditionsನಲ್ಲಿ ಎಕ್ಸ್‌ಪೆರಿಮೆಂಟ್ ಕಂಡಕ್ಟ್ ಮಾಡಿ, failure of rains ಇದ್ದಾಗ, ಪ್ಯಾಡಿ ಲೆಕ್ಕ ತೆಗೆದು ಕೊಳ್ಳುತ್ತಾರೆ. ಕ್ವಾಲಿಟಿ ತೆಗೆದುಕೊಳ್ಳುತ್ತಾರೆ. ಇದನ್ನು 1960–61ನೇ ಇಸವಿಯಲ್ಲಿ ಕಂಡಕ್ಟ್ ಮಾಡಿದರು.

Sri G. DUGGAPPA.—What is the cost of production of wheat ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಪ್ಯಾಡಿ, ರಾಗಿ ತೆಗೆದುಕೊಂಡು ಮಾಡಿರುವುದು. ಜೋಳ ಮತ್ತೆರಡು ಬೆಳೆಗಳನ್ನು ತೆಗೆದುಕೊಂಡು ಮಾಡುವುದರಲ್ಲಿದ್ದಾರೆ. ಪ್ಯಾಡೀಗೆ 12 ರೂಪಾಯಿ 37 ನಯಾಪೈಸೆ per hundred pounds ಆಗುತ್ತದೆ. ಎಕರೆಗೆ 270–42 ರೂಪಾಯಿ ಆಗುತ್ತದೆ.

ಶ್ರೀ ವಿ. ಮುನಿಯಪ್ಪ.—ಈ ಬೆಳೆಗಳಿಗೆ ಬೆಂಗಳೂರನ್ನು ಮಾತ್ರ ಆರಿಸಿಕೊಂಡು ತನಿಖೆ ನಡೆಸಿದರು ಎಂದು ಅಪ್ಪಣೆ ಕೊಡಿಸಿದಿರಿ. ಮುಖ್ಯವಾಗಿರತಕ್ಕಂಥ ಆಹಾರ ಬೆಳೆಗಳಿಗೆ ಸಂಸ್ಥಾನಾದ್ಯಂತ ರೀಜನ್ ವೈಸ್ ತನಿಖೆ ನಡೆಸತಕ್ಕಂಥಾದ್ದು ಅಗತ್ಯವಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಬಹಳ ಅಗತ್ಯವಿದೆ. ಕೇಂದ್ರ ಸರ್ಕಾರದವರು ಅದರ ಕಾರ್ಯಕ್ರಮವನ್ನು ತೆಗೆದುಕೊಳ್ಳುತಿದ್ದಾರೆ.

ಶ್ರೀ ಎ. ಕೃಷ್ಣಶೆಟ್ಟಿ.—ಒಂದು ಧಾನ್ಯವನ್ನು ಬೆಳಸಲಿಕ್ಕೆ ಸ್ಥಳ, ಬೀಜ, ಗೊಬ್ಬರ, ನೀರು ಮುಂತಾದುವನ್ನು ಎಕರೆ ಪ್ರಕಾರ ಹಂಚಿ ತೀರ್ಮಾನ ಮಾಡುವುದೇ ಅಥವಾ ಪೌಂಡು ಪ್ರಕಾರ ಹಂಚಿ ತೀರ್ಮಾನ ಮಾಡುವುದು ಒಳ್ಳೆಯದೆ !

ಶ್ರೀ ಎಂ. ವಿ. ಕೃಷ್ಣಪ್ಪ.—ಇಷ್ಟು ಪೌಂಡು ಬೆಳೆಯುತ್ತದೆಂದು ಲೆಕ್ಕ ತೆಗೆದುಕೊಳ್ಳುತ್ತಾರೆ. ಅದು ಒಂದು ಯೂನಿಟ್. 100 ಪೌಂಡಿಗೆ ರೂಪಾಯಿ 12.37 ಆಗುತ್ತದೆ. ಅದು simple mathematics. ಎಷ್ಟಕ್ಕಾದರೂ ಲೆಕ್ಕ ಹಾಕಿಕೊಳ್ಳಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರದವರು ಸರ್ವೆಮಾಡಿ ಒದಗಿಸಿರತಕ್ಕ ಫಿಗರ್ಸು ಹಾಗೂ ಈಗ ಇರತಕ್ಕಂಥ ಬತ್ತದ ರೇಟು, ಮತ್ತು ಬಾಕಿ ಫುಡ್‌ಗ್ರೇನುಗಳದ್ದು ರೀಸನ್‌ಬಲ್ ಆಗಿದೆಯೋ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ರೈತರಿಗೆ reasonable foodgrains prices ಕೊಡುವುದಕ್ಕಾಗುವುದಿಲ್ಲವೆಂದು ಕೇಂದ್ರ ಸರ್ಕಾರದವರು ಹೇಳಿಬಿಟ್ಟಿದ್ದಾರೆ ಮತ್ತು ಕೊಡುವುದಕ್ಕೆ ಸರ್ಕಾರಕ್ಕೆ ಅಷ್ಟು ಶಕ್ತಿ ಇಲ್ಲ ಎಂದೂ ಹೇಳಿ ಬಿಟ್ಟಿದ್ದಾರೆ. 'If it touches an uneconomic level, price support policy will be enforced in the case of paddy and ragi. Government has not tried to give ecnomic prices.

ಶ್ರೀ ಎಸ್. ಶಿವಪ್ಪ.—ಸರಕಾರದವರು ರಾಗಿ ಮತ್ತು ಬತ್ತಕ್ಕೆ ಎಕರೆಗೆ ಇಷ್ಟು ಖರ್ಚಾಗುತ್ತದೆಂದು ಹೇಳಿದರು. ಈ ಖರ್ಚಿಗೂ, ಬೆಳೆಯಿಂದ ಬರತಕ್ಕಂಥ ಲಾಭಕ್ಕೂ ಸರಿಯಾಗದೆ ಹೋದರೆ ಸರ್ಕಾರದವರು ರೈತರಿಗೆ ಸಬ್‌ಸಿಡಿ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಏರ್ಪಾಡು ಮಾಡಿದ್ದರೆ food self-sufficiency ಬಂದುಬಿಡುತ್ತಿತ್ತು. ಪ್ಲಾನಿಂಗ್ ಕಮಿಷನ್ನಿನಲ್ಲಿ ಇದು ಬಹಳ ಚರ್ಚೆಯಾಗಿದೆ. ಕೇಂದ್ರ ಸರ್ಕಾರದವರು ಎಕನಾಮಿಕ್ ಪ್ರೈಸಸ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇಂಡಿಯನ್ ಎಕಾನಮಿಯಲ್ಲಿ 75 ಪರ್ಸೆಂಟ್ ಫಾರ್ಮರ್ಸ್, 25 ಪರ್ಸೆಂಟ್ ಬೇರೆಯವರು ಇದ್ದಾರೆ. ಅಮೇರಿಕದಲ್ಲಿ 90 ಪರ್ಸೆಂಟು ಬೇರೆಯವರು 10 ಪರ್ಸೆಂಟ್ ಫಾರ್ಮರ್ಸ್ ಇದ್ದಾರೆ. In America 10 per cent are farmers whereas in India it is the other way. Therefore the Government is not able to give economic prices to the farmers, ಎಂದು ಹೇಳುತ್ತಾರೆ.

ಶ್ರೀ ವಿ. ಮುನಿಯಪ್ಪ.—ಇದೇ ಆಹಾರ ಧಾನ್ಯಗಳನ್ನು ಬೆಳೆಯುತಕ್ಕ ಭೂಮಿಯಲ್ಲಿ ಅಷ್ಟೇ ಖರ್ಚು ಹಾಕಿದರೆ ಕಮರ್ಷಿಯಲ್ ಕ್ರಾಪ್ಸು ಬೆಳೆದು ಇನ್ನೂ ಹೆಚ್ಚಿನ ಆದಾಯವನ್ನು ತೆಗೆದುಕೊಳ್ಳಬಹುದು. ಇದೇ ಪರಿಸ್ಥಿತಿ ಇದ್ದು reasonable prices ಕೊಡದಿದ್ದರೆ ಆಹಾರ ಧಾನ್ಯಗಳ ಬೆಳೆ ಕಡಿಮೆಯಾಗ ಬಹುದು ಎಂಬುದನ್ನು ಸರಕಾರದವರು ಆಲೋಚನೆ ಮಾಡಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಹೌದು, ತಾವು ಹೇಳುವುದನ್ನೆ ನಾವು ಹೇಳುತ್ತೇವೆ ಕಾರಣಾಂತರದಿಂದ ನಾವು ರೈತರಿಗೆ ಒಂದು ಬೆಳೆ ಇಡಲಿಕ್ಕೆ ಎಷ್ಟು ಖರ್ಚಾಗುತ್ತದೆಯೋ ಅಷ್ಟು ಖರ್ಚನ್ನು ಅವರಿಗೆ ಕೊಡುತ್ತಾ ಇಲ್ಲ, ಅದೇ ಹಿಂದೂ ಸ್ಥಾನದಲ್ಲಿ ವ್ಯವಸಾಯ ಹಿಂದುಳಿದಿರುವುದಕ್ಕೆ ಕಾರಣವಾಗಿದೆ.

ಶ್ರೀ ಎಸ್. ಶಿವಪ್ಪ.—ಸರ್‌ಪ್ಲಸ್ ಆಹಾರ ಬೆಳೆಯುತ್ತಿರುವ ಹೊರ ದೇಶಗಳಲ್ಲಿಯೂ ಕೂಡ subsidy ಕೊಡುತ್ತಾ ಇರುವುದರಿಂದ, ಡಿಫಿಸಿಟ್ ಇರುವ ನಮ್ಮ ದೇಶದಲ್ಲಿ subsidy ಕೊಡುವುದು ನ್ಯಾಯವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ. ಆ ವಿಷಯವನ್ನು ಅನೇಕ ಸಲ ಪ್ಲಾನಿಂಗ್ ಕಮಿಷನ್ನಿನವರೊಂದಿಗೆ ಚರ್ಚೆ ಮಾಡಿದ್ದೇವೆ, ಅವರು ಮೈಸೂರು ಸರಕಾರಕ್ಕೆ ಹಾಗೆ ಫಿಕ್ಸ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಕೇಂದ್ರ ಸರಕಾರ ನಿಜವಾದ ಒಂದು ಪ್ರೈಸ್ ಫಿಕ್ಸ್ ಮಾಡಬೇಕಾಗುತ್ತದೆ. ನಾವು ಅನೇಕ ಸಲ ಈ ರೀತಿಯ ಒಂದು ತೀರ್ಮಾನಕ್ಕೆ ಬಂದಿದ್ದೇವೆ.

Share Capital of the Taluk Agricultural Produce Marketing Co-operative Society, Ltd., Channapatna.

*Q.—634. Sri B. J. LINGE GOWDA (Channapatna).—

Will the Government be pleased to state:—

(a) what is the share capital of the Taluk Agricultural Produce Marketing Co-operative Society, Ltd., Channapatna, as on 28th February 1963;

(b) what is the Government share of contribution towards share capital of the society as on 28th February 1963;

(c) what is the gross turnover of the total business of the society during the year 1961-62;

(d) what is the net profit of the society for 1961-62 ?

A.—Sri RAMAKRISHNA HEGDE (Minister for Co-operation and Development).—

	Rs. nP.
(*a*)	1,05610-00
(*b*)	90,000-00
(*c*)	5,59,939-66
(*d*)	6,646-53

ಶ್ರೀ ಬಿ. ಜೆ. ಲಿಂಗೇಗೌಡ.—ರೂ. 1,05,610ರ ಷೇರು ಬಂಡವಾಳದಲ್ಲಿ, individual ryots ನಿಂದ ಎಷ್ಟು ಹಣ ಬಂದಿದೆ ?

†ಶ್ರೀ ರಾಮಕೃಷ್ಣ ಹೆಗ್ಗಡೆ.—90 ಸಾವಿರ ರೂಪಾಯಿ ಬಿಟ್ಟು ಬಾಕಿಯುದೆಲ್ಲಾ individual ryots ನಿಂದ ಬಂದಿರುವುದೇ.

1 P.M.

ಶ್ರೀ ಬಿ. ಜೆ. ಲಿಂಗೇಗೌಡ.—90,000 ರೂಪಾಯಿಗಳಲ್ಲದೆ 28-2-1963 ರಿಂದೀಚೆಗೆ ಇನ್ನೇನಾದರೂ ಷೇರು ಬಂಡವಾಳವನ್ನು ಕೊಟ್ಟಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಲ್ಲ. 26-2-1963ರಲ್ಲಿ ಕೊಟ್ಟ 10,000 ರೂಪಾಯಿಗಳೂ ಸೇರಿ ರೂ. 90,000 ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—5,59,939 ರೂಪಾಯಿಗಳ ವಹಿವಾಟಿಗೆ 6,646 ರೂಪಾಯಿ ಲಾಭ ಸಾಕೇ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಕೋ ಸಾಲದೋ ಎಂದು ಹೇಳುವಂಥ ಪ್ರಶ್ನೆಯಲ್ಲ. ಆ ಸೊಸೈಟಿ ಸರಿಯಾಗಿ ಕೆಲಸ ಮಾಡುತ್ತಿದೆಯೇ ಇಲ್ಲವೇ ಎಂದು ಹೇಳುವಂಥಾದ್ದು ಮತ್ತು ಕೋ-ಆಪರೇಟಿವ್ ಸೊಸೈಟಿಗಳನ್ನು ಲಾಭ ಸಂಪಾದನೆ ಮಾಡುವ ಉದ್ದೇಶದಿಂದ ಸ್ಥಾಪನೆ ಮಾಡುವುದಿಲ್ಲ.

ಶ್ರೀ ಜಿ. ರಾಮೇಗೌಡ.—1961-62ರಲ್ಲಿ ಈ ಸೊಸೈಟಿಯಲ್ಲಿ ಡಿವಿಡೆಂಡ್ ಎಷ್ಟು ಕೊಟ್ಟಿದ್ದಾರೆ, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಈಗ ಹೇಳಲು ಸಾಧ್ಯವಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಸೊಸೈಟಿಯಲ್ಲಿ ಸರ್ಕಾರದಿಂದ 90,000 ರೂಪಾಯಿ ಬಂಡವಾಳವನ್ನು ಹಾಕಿರುವುದರಿಂದ ಸೊಸೈಟಿಯ ಆಡಳಿತವನ್ನು ಚೆನ್ನಾಗಿ ನಿರ್ವಹಿಸುವುದಕ್ಕೆ, ಸರ್ಕಾರದ ಹಿತವನ್ನು ಕಾಪಾಡುವುದಕ್ಕೆ ನಾಮಿನೇಷನ್ ಪದ್ಧತಿಯನ್ನು ಇಟ್ಟುಕೊಂಡಿದ್ದೀರಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾಮಿನೇಷನ್ ಪಡೆಯುವುದಕ್ಕೋಸ್ಕರ ನಾವು ಹೆಚ್ಚು ಹಣವನ್ನು ಕೊಡುತ್ತೇವೆಂದು ಹೇಳುವುದು ತೀರ ಅಸಮಂಜಸವಾದ ವಿಚಾರ.

Sri C. V. VENKATARAYAPPA.—It is not a fact that on a complaint to the Registrar of Co-operative Societies, he inspected the society personally and reported to Government that the society had been working satisfactorily?

Sri RAMAKRISHNA HEGDE.—The officers of the department inspect these institutions whenever they find it necessary and they also send reports.

ಶ್ರೀ ಗೋಪಾಲರಾವ್ ಮುಡಬಿ.—105,610 ರೂಪಾಯಿ ಷೇರು ಬಂಡವಾಳವಿದ್ದ ಕಾಲಕ್ಕೆ ಸರ್ಕಾರ 90,000 ರೂಪಾಯಿಗಳನ್ನು ಯಾವ ತತ್ವದಮೇಲೆ ಸೊಸೈಟಿಗೆ ಕೊಟ್ಟಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ ಎರಡು ವಿಚಾರಗಳಿವೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ವ್ಯವಹಾರಕ್ಕಾಗಿ ಕೊಟ್ಟಿದ್ದು ಮತ್ತು ಪ್ರೋಸೆಸಿಂಗ್ ಆಕ್ಟಿವಿಟಿಯ ಬಗ್ಗೆ ಕೊಟ್ಟದ್ದು ಎರಡೂ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ಹಣವನ್ನು ಸೊಸೈಟಿಗಳಿಗೆ ಕೊಡುವಾಗ, share capital subscribe ಮಾಡುವಾಗ, ಬೇರೆ ಬೇರೆ ರೀತಿನೀತಿಗಳನ್ನನುಸರಿಸುತ್ತಾರೆಯೋ ಅಥವಾ ಏಕರೂಪವಾದ ರೀತಿನೀತಿಗಳನ್ನನುಸರಿಸುತ್ತಾರೆಯೋ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬೇರೆ ಬೇರೆ ನೀತಿಯನ್ನನುಸರಿಸುವುದಿಲ್ಲ. ಪ್ರತಿಯೊಂದು ಸಂಘಕ್ಕೂ ಹೊಸ ನೀತಿಯನ್ನನುಸರಿಸಿದರೆ ಯೋಗ್ಯವಲ್ಲ. ನಾವು ಕೆಲವೊಂದು ತತ್ವಗಳಮೇಲೆ ಮತ್ತು ಕೇಂದ್ರ ಸರ್ಕಾರದವರು ಹಾಕಿಕೊಟ್ಟ ತತ್ವಕ್ಕನುಸಾರವಾಗಿ ಇದನ್ನು ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಕೋ-ಆಪರೇಟಿವ್ ಸೊಸೈಟಿಗಳಿಗೆ ಸರ್ಕಾರದವರು ನಾಮಕರಣ ಮಾಡತಕ್ಕ ನೀತಿಯನ್ನು ಬಿಟ್ಟುಬಿಡುತ್ತಾರೆಂದು ಮೂರು ನಾಲ್ಕು ತಿಂಗಳ ಕೆಳಗೆ ಭಾಷಣದಲ್ಲಿ ಮಾನ್ಯ ಮಂತ್ರಿಗಳು ತಿಳಿಸಿದ್ದರು. ಇವೊತ್ತಿನ ದೃಷ್ಟಿಯಲ್ಲಿ ಸರ್ಕಾರದವರು ಈ ನಾಮಕರಣ ಪದ್ಧತಿಯನ್ನು ಕೈ ಬಿಡುತ್ತಾರೆಯೇ ? ಆ ವಿಚಾರದಲ್ಲಿ ತಮ್ಮ ನಿಲುವು ಏನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮ ನಿಲುವು ಏನೆಂದು ಹೇಳಿದ್ದೇನೆ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಎಲ್ಲಿ ಸರ್ಕಾರ ಹಣವನ್ನು ಬಹಳ ದೊಡ್ಡ ಮೊತ್ತದಲ್ಲಿ ಹಾಕಿಲ್ಲವೋ ಅಂಥಲ್ಲಿ ನಾವು ಸರ್ಕಾರದ ಪತಿಯಿಂದ ಪ್ರತಿನಿಧಿಗಳನ್ನು ನೇಮಿಸಬಾರದೆಂದು ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಗೋಪಾಲರಾವ್ ಮುದಬಿ.—ತಾವು "processing unitಗೆ matching contribution" ಮಾಡಿದ್ದೇವೆಂದು ಹೇಳಿದ್ದೀರಿ. ಇನ್ನಿತರ ಸಂಸ್ಥೆಗಳಲ್ಲಿ ಈ ಪ್ರಕಾರ ಎಲ್ಲಾದರೂ ಸಾಲ ಕೊಟ್ಟಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅನೇಕ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಬಿದರೆಯಲ್ಲಿಯೂ ಕೊಟ್ಟಿದ್ದೇವೆಂದು ಕಾಣುತ್ತದೆ.

ಶ್ರೀ ಜಿ. ರಾಮೇಗೌಡ.—1961-62ನೇ ಸಾಲಿನ ಆಡಿಟ್ ವರದಿಯಲ್ಲಿ ಈ ಸೊಸೈಟಿಯು ಸಮರ್ಪಕವಾಗಿ ಕೆಲಸ ಮಾಡಿಲ್ಲವೆಂದು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಇನ್ನೊಂದು ಸಂದರ್ಭದಲ್ಲಿ ಈ ಮಾನ್ಯ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಬಿ. ಚನ್ನಬೈರೇಗೌಡ.—ಈ ಸೊಸೈಟಿಯ ಆಡಿಟ್ ರಿಪೋರ್ಟಿನಲ್ಲಿ, ಅಕ್ರಮಗಳು, ಅನ್ಯಾಯಗಳು ನಡೆದಿವೆ. ಸೊಸೈಟಿ ಸರಿಯಾಗಿ ನಡೆಯುತ್ತಿಲ್ಲವೆಂದು ತಿಳಿಸಿದ್ದಾರೆ. ಇನು ಮುಂದೆ ಇಂಥ ಅಕ್ರಮಗಳು ನಡೆಯದೆ ಇರುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಷೇರು ಬಂಡವಾಳವಲ್ಲದೆ ಸರ್ಕಾರದಿಂದ ಈ ಸೊಸೈಟಿಗೆ ಎಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಷ್ಟು ಹಣ ಕೊಟ್ಟಿದ್ದೇವೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಲಾರಿಯನ್ನು ಕೊಳ್ಳಲಿಕ್ಕೆ ಸಾಲ ಕೊಟ್ಟಿದ್ದೇವೆ, ಗೋಡೌನ್‌ಗಾಗಿ ಕೊಟ್ಟಿರಬಹುದೋ ಏನೋ, ಗೊತ್ತಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಸೊಸೈಟಿ ಸಮರ್ಪಕವಾಗಿ ಕೆಲಸ ಮಾಡದೆ ಇದ್ದರೂ ಒಂದು ಲಕ್ಷ ರೂಪಾಯಿ ಬಂಡವಾಳದಲ್ಲಿ 90,000 ರೂಪಾಯಿಗಳನ್ನು ಸರ್ಕಾರದವರು ಷೇರು ಕಾಂಟ್ರಿಬ್ಯೂಷನ್ ಆಗಿ ಕೊಟ್ಟಿದ್ದೀರಿ. ಅಂಥ ಹೆಚ್ಚಿನ ಮೆಹರಬಾನಿ ಏನು, ಸ್ವಾಮಿ ?

Sri RAMAKRISHNA HEGDE.—It is a hypothetical question. ಸಮರ್ಪಕವಾಗಿ ಕೆಲಸಮಾಡದೆ ಇದ್ದರೂ ಕೊಟ್ಟಿದ್ದೇವೆಂದು ಅವರು ಹೇಳುತ್ತಾರೆ, ನಾವು ಹಣವನ್ನು ಕೊಡತಕ್ಕ ಕಾಲದಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದು ಗ್ರಹಿಸಿಕೊಂಡು ಕೊಟ್ಟಿದ್ದೇವೆ. ಅಲ್ಲದೇ ಈ ಹಣವನ್ನು ಒಂದೇ ವರ್ಷದಲ್ಲಿ ಕೊಟ್ಟಿದ್ದಲ್ಲ. 1956-57 ರಿಂದ 1962-63ರ ವರೆಗೂ ಸೇರಿ 90,000 ರೂಪಾಯಿ ಕೊಟ್ಟಿದ್ದೇವೆ.

Indankal Medium Size Project in Chitapur Taluk, Gulbarga District.

*Q.—654. Sri S. RUDRAPPA (Kalgi).—

Will the Government be pleased to state ;—

(a) whether it is a fact that Indankal Medium Size Project in Chitapur Taluk, Gulbarga District, has been surveyed and necessary estimate has been prepared ?

(b) the number of medium sized projects in Gulbarga District included in Third Five-Year Plan ?

A.—Sri S. NIJALINGAPPA (Chief Minister).—

(*a*) No.
(*b*) Nil.

Sri S. RUDRAPPA.—May I know whether the Government is aware that the percentage of irrigation in Gulbarga District is only 1.25, which is the lowest compared to the other areas of the Mysore State?

† Sri S. NIJALINGAPPA.—Government is aware that it is very low.

Sri S. RUDRAPPA.—If so, what are the steps taken by Government to increase irrigation facilities in this district?

Sri S. NIJALINGAPPA.—Government are contemplating not only this scheme but ten other schemes in Gulbarga District. They are being worked out and one of them namely the Chandrapalli Project has been recommended.

Sri J. P. SARVESH.—What are reasons for not estimating the medium-sized projects and what are the reasons for this prolonged delay?

Sri S. NIJALINGAPPA.—I cannot answer for the past.

Sri C. J. MUCKANNAPPA.—Out of the ten projects just mentioned by the Chief Minister, may I know if this Indankal Project is also included?

Sri S. NIJALINGAPPA.—Yes. It is being investigated.

Construction of a new Over-bridge at Sriramapuram.

**Q.*—652. Sri K. DEVAYYA (Malleswaram).—

Will the Government be pleased to state:—

(*a*) whether it has come to the notice of the Government that the existing over-bridge at Sriramapuram, connecting the Greater Rajajinagar with its Industrial suburbs and Housing Colonies on the Western side and Malleswaram on the Eastern side, is only 11½ feet in width;

(*b*) whether they are aware of several accidents on the bridge resulting in deaths and serious injuries to persons, and school going girls and boys, by lorries and B. T. S. buses;

(*c*) how many times, the protecting walls on either side of the bridge had been damaged during the past six months;

(*d*) whether there is a proposal for the construction of a new bridge before the Corporation at a cost of Rs. 1,80,000;

(*e*) whether Government intend to taking-up the above scheme on top-priority basis as it has become too dangerous for vehicular and pedestrian crossing on the existing bridge?

A.—Sri K. PUTTASWAMY (Minister for Municipal Administration)—

(*a*) The width is 13½ feet.
(*b*) Yes.

(c) The walls were damaged during the month of December 1962 and repairs were effected during the month.

(d) Yes.

(e) Action has been taken by the Corporation to take up the work.

ಶ್ರೀ ಕೆ. ದೇವಯ್ಯ.—'ಬಿ'ಗೆ ಉತ್ತರವಾಗಿ ಈ ಸೇತುವೆಯ ಮೇಲೆ ಬೇಕಾದಷ್ಟು ಅಪಘಾತಗಳಾಗುತ್ತವೆಂದು ಒಪ್ಪಿಕೊಂಡಿದ್ದೀರಿ. ಕಳೆದ ತಿಂಗಳು 24ನೆಯ ರಾತ್ರಿ 7½ ಗಂಟೆಯಲ್ಲಿ ಎಚ್. ಎಂ. ಟಿ.ಯಲ್ಲಿ ಕೆಲಸ ಮಾಡುವ ತುಳಸಿ ಎಂಬ ಹುಡುಗಿ ಸೇತುವೆಯ ಗೋಡೆಗೂ ಮತ್ತು ಬಿ. ಟಿ. ಎಸ್. ಬಸ್ಸಿಗೂ ಮಧ್ಯೇ ಸಿಕ್ಕಿ ನಿನ್ನೆಯ ದಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸತ್ತದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಬಹಳ ವಿಷಾದಕರವಾದುದು ; ಆದರೆ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ದೇವಯ್ಯ.—'ಇ'ಗೆ ಉತ್ತರವಾಗಿ ಕಾರ್ಪೊರೇಷನ್ ಸೇತುವೆಯ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದೀರಿ. 1956ನೆಯ ಇಸವಿಯಲ್ಲಿ ಇಂಡಿಯಾ ಸರ್ಕಾರದಿಂದ ತಮ್ಮ ಮೂಲಕ ಕಾರ್ಪೊರೇಷನ್ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಬರೆದು ಓವರ್ ಬ್ರಿಡ್ಜಸ್ ಮತ್ತು ಅಂಡರ್ ಬ್ರಿಡ್ಜಸ್ ಕಟ್ಟುವುದಕ್ಕೆ ಅವರಲ್ಲಿ ಸಾಕಷ್ಟು ಹಣವಿಲ್ಲದೆ ಇದ್ದರೆ ನಾವು 30 ವರ್ಷಗಳಲ್ಲಿ ಪಾವತಿ ಮಾಡುವ ಸುಲಭ ರೂಪದಲ್ಲಿ ಸಾಲವನ್ನು ಕೊಡುತ್ತೇವೆಂದೂ ಸ್ಥಳೀಯ ಸಂಸ್ಥೆಗಳು ಅರ್ಜಿ ಹಾಕಿಕೊಳ್ಳಬಹುದೆಂದೂ ತಿಳಿಸಿದ್ದರು. ಅದಕ್ಕೆ ರಾಜ್ಯ ಸರ್ಕಾರದವರು ನಂಬಿಕೆ ಕೊಟ್ಟರೆ ಸಾಲ ಕೊಡುತ್ತೇವೆಂದೂ ತಿಳಿಸಿದ್ದರು. ಬೆಂಗಳೂರು ಕಾರ್ಪೊರೇಷನ್ನಿನವರು 15 ಲಕ್ಷ ರೂಪಾಯಿ ಬೇಕು ಎಂದು ಕೇಳಿರುವ ಅರ್ಜಿಯನ್ನು ಸರ್ಕಾರದಲ್ಲಿಯೇ ಇಟ್ಟುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ದೇವಯ್ಯ.—ಇತ್ತೀಚೆಗೆ ಟ್ರಸ್ಟ್ ಬೋರ್ಡಿನವರು ಶ್ರೀರಾಮಪುರಂ ಪಶ್ಚಿಮಕ್ಕೆ ಅಗಾಧವಾಗಿ ಬೆಳೆದಿರುವ ಎಕ್ಸ್‌ಟೆನ್‌ಷನ್ ಮಾಡಿದ್ದಾರೆ. ಈ ಬಡಾವಣೆಯ ಮೂಲಕ ಜನ ಸಂಚಾರ ಈ ಭಾಗದಲ್ಲಿ ಅತಿಯಾಗಿ ಬೆಳೆದಿರುವುದರಿಂದ ಟ್ರಸ್ಟ್ ಬೋರ್ಡಿನವರು ಈ ಬ್ರಿಡ್ಜ್ ಕಟ್ಟಲು ಆಗುವ ಖರ್ಚಿನಲ್ಲಿ ಅರ್ಧ ಭಾಗ ಕೊಡುತ್ತೇವೆಂದು ಭರವಸೆ ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಸಹ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ ಈ ವಿಷಯದ ಪೋರ್ಟ್‌ಫೋಲಿಯೋ ಪಡೆದಿರುವ ಮಂತ್ರಿಗಳ ಗಮನಕ್ಕೆ ಇಂಥ ಮುಖ್ಯ ವಿಷಯ ಬಾರದೇ ಇರುವುದಕ್ಕೆ ಕಾರಣವೇನು ? ಅವರ ಗಮನಕ್ಕೆ ಬರಲು ಏನು ಮಾಡಬೇಕು ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ದೇವಯ್ಯನವರು ಹಾಕಿದ ಪ್ರಶ್ನೆ ಅವರು ಕೇಳಲಿಲ್ಲ ಎಂದು ಕಾಣುತ್ತದೆ. ಈ ಪ್ರಶ್ನೆಗೆ ಸಂಬಂಧಪಟ್ಟ ವಿಷಯದ ಬಗ್ಗೆ ಅವರು ಕೇಳಲಿಲ್ಲ. ಅವರು ಪ್ರಶ್ನೆ ಕೇಳಿದ್ದು 13-3-1963ನೆಯ ದಿನಾಂಕದಲ್ಲಿ. ಅಲ್ಲಿಯವರೆಗಿನ ಸಮಾಚಾರವನ್ನು ಸಂಗ್ರಹಿಸಿ ಉತ್ತರ ಕೊಡಲಾಗಿದೆ. ಆ ನಂತರದ ವಿಷಯ ಅವರು ಹೇಳಿರುವುದು ನಿಜವಿರಬಹುದು. ಅದಕ್ಕಾಗಿ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಹೇಳುತ್ತೇನೆ.

ಶ್ರೀ ಕೆ. ದೇವಯ್ಯ.—ಬಳ್ಳಾರಿ ರೋಡ್ ಅಂದರೆ ಸಾಂಕೀ ರೋಡಿನಲ್ಲಿ ಒಂದು ಅಂಡರ್ ಬ್ರಿಡ್ಜ್ ಕಟ್ಟುವುದಕ್ಕೆ ಎಸ್ಟಿಮೇಟು ಸ್ಯಾಂಕ್ಷನ್ ಮಾಡಿದ್ದೀರಿ, ಅಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಗೆ ಸಂಬಂಧಪಟ್ಟ ವಿಷಯ ಅದು ಅಲ್ಲ.

ಶ್ರೀ ಕೆ. ದೇವಯ್ಯ.—ಶ್ರೀರಾಮಪುರಂ ಓವರ್ ಬ್ರಿಡ್ಜ್ ಬಳ್ಳಾರಿ ರೋಡ್ ಬ್ರಿಡ್ಜ್‌ಗಿಂತಲೂ ಬಹಳ ಪ್ರಾಮುಖ್ಯವಾದುದು, ಅಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ಒಪ್ಪುತ್ತೇನೆ. ಅದೂ ಪ್ರಾಮುಖ್ಯವಾದುದು ಇರಬಹುದು. ಅದರ ಬಗ್ಗೆ ನಿಖರವಾಗಿ ಉತ್ತರ ಹೇಳಬೇಕಾದರೆ ಬೇರೆ ಪ್ರಶ್ನೆ ಹಾಕಬೇಕು.

ಶ್ರೀ ಬಿ. ಚನ್ನಭೈರೇಗೌಡ.—ಈ ಶ್ರೀರಾಮಪುರಂ ಬ್ರಿಡ್ಜನ್ನು ಅಗಲವಾಗಿ ಮಾಡಬೇಕೆಂದು ಸರಕಾರದ ಗಮನಕ್ಕೆ ಬಂದು ಎಷ್ಟು ವರ್ಷವಾಯಿತು ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಬೆಂಗಳೂರು ಕಾರ್ಪೊರೇಷನ್ನಿನ ಜವಾಬ್ದಾರಿಗೆ ಒಳಪಟ್ಟದ್ದು. ಅವರು ಕಾರ್ಯಕ್ರಮ ಕೈಕೊಂಡಿದ್ದಾರೆ. ರೈಲ್ವೆ ಅಥಾರಿಟೀಸಿಗೆ ಎಸ್ಟಿಮೇಟ್ ಬಗ್ಗೆ 3,600 ರೂಪಾಯಿ ಹಣ ಕೊಟ್ಟಿದ್ದಾರೆ. ಎಸ್ಟಿಮೇಟು ಕಳಿಸಿದ ಮೇಲೆ ಮಂಜೂರಾತಿ ಪಡೆದು ಕೆಲಸ ತೆಗೆದುಕೊಳ್ಳುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ಬೆಂಗಳೂರು ನಗರವು ದಿನೇ ದಿನೇ ಬೆಳೆದು ಕಾರುಗಳು ಮನುಷ್ಯರು ಓಡಾಡುವುದು ಜಾಸ್ತಿಯಾಗಿರುತ್ತದೆ. ಈ ದೃಷ್ಟಿಯಿಂದ ಬೆಂಗಳೂರು ನಗರದಲ್ಲಿ ಇನ್ನೂ ಎರಡು ಓವರ್ ಬ್ರಿಡ್ಜ್ ಕಟ್ಟುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಬೆಂಗಳೂರು ನಗರದಲ್ಲಿ ಇನ್ನೂ ಅನೇಕ ಕಡೆ ಓವರ್ ಬ್ರಿಡ್ಜುಗಳ ಅವಶ್ಯಕತೆ ಇದೆ. ಈ ಜವಾಬ್ದಾರಿ ಕಾರ್ಪೊರೇಷನ್ನಿಗೆ ಸಂಬಂಧಪಟ್ಟದ್ದು. ಇದು ಅವರ ಗಮನದಲ್ಲಿ ಇದೆ.

Sri G. DUGGAPPA.—The answer to supplementary (*d*) is 'Yes'. May I know whether the Corporation has submitted this proposal to Government for sanction and whether the Corporation have requested Government for any assistance ?

Sri K. PUTTASWAMY.—The Corporation have requested the Railway authorities to give them the plan and estimate, and have also deposited Rs. 3,600 at cost thereof. When it is forwarded to the Corporation, the usual procedure will be followed.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಂಥ ಕೆಲಸ ಬೇಗನೆ ಮಾಡಲು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಕ್ರಮ ತೆಗೆದುಕೊಳ್ಳುತ್ತೇವೆ. ಈ ಬ್ರಿಡ್ಜು 50 ವರ್ಷಗಳ ಹಿಂದೆ ಕಟ್ಟಿಸಿದ್ದು. ಆಗ್ಗೆ ಹದಿಮೂರೂವರೆ ಅಡಿ ಅಗಲ ಇಡಲಾಗಿತ್ತು. ಇತ್ತೀಚೆಗೆ ಬೆಂಗಳೂರು ಪಟ್ಟಣ ಬೆಳೆದು ಜನ ಸಂಚಾರ ಹೆಚ್ಚಾಗಿದೆ. ವಿಶಾಲವಾದಂಥ ಬ್ರಿಡ್ಜ್ ಕಟ್ಟಿಸಬೇಕೆಂಬ ಬಗ್ಗೆ ಯಾವ ಭಿನ್ನಾಭಿಪ್ರಾಯವಿಲ್ಲ. ಈಗಾಗಲೇ ಕಾರ್ಪೊರೇಷನ್ನಿನವರು ರೈಲ್ವೆ ಅಥಾರಿಟೀಸ್ ಅವರಿಗೆ 3,600 ರೂಪಾಯಿ ಕೊಟ್ಟು ಪ್ಲಾನ್ ಎಸ್ಟಿಮೇಟು ಕೇಳಿದ್ದಾರೆ. ಪ್ಲಾನ್ ಎಸ್ಟಿಮೇಟ್ ಪ್ರಕಾರ ಬ್ರಿಡ್ಜ್ ಕಟ್ಟಿಸಬೇಕಾಗುತ್ತದೆ. ಪ್ಲಾನ್ ಎಸ್ಟಿಮೇಟು ಅವರು ಕಳಿಸಿದ ನಂತರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

Sri G. DUGGAPPA.—May I know whether the Corporation has requested the Government for financial assistance for the construction of this bridge ?

Sri K. PUTTASWAMY.—Not so far.

ಶ್ರೀ ಎಸ್. ಎಂ. ಕೃಷ್ಣ.—ಶೇಷಾದ್ರಿಪುರಂ ಅಂಡರ್ ಬ್ರಿಡ್ಜ್ ಕಟ್ಟಿಸಿರುವುದು ಯೋಗ್ಯವಾಗಿಲ್ಲ. ಈ ದೃಷ್ಟಿಯಿಂದ ಅದನ್ನು ರಿಪೇರಿ ಮಾಡಿಸಿ ಸರಿಪಡಿಸುವುದಕ್ಕೆ ಮೈಸೂರು ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಗೆ ಸಂಬಂಧಪಟ್ಟ ವಿಷಯ ಇದು ಆಗಿರುವುದಿಲ್ಲ. ಆ ಬ್ರಿಡ್ಜು ಸರಿಯಾಗಿಲ್ಲ ಎಂಬ ವಿಚಾರ ಎಲ್ಲರೂ ತಿಳಿದಂಥ ವಿಷಯ. ರೈಲ್ವೆ ಅಥಾರಿಟೀಸ್ ಅದನ್ನು ಎಗ್ಸಾಮಿನ್ ಮಾಡಿ ಅದನ್ನು ಸರಿಯಾದ ರೀತಿಯಲ್ಲಿ ಸರಿಪಡಿಸುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಬ್ರಿಡ್ಜ್ ಕಟ್ಟಿರುವುದನ್ನು ನೋಡಿದ ಮೇಲೆ ಇನ್ನು ಮುಂದೆ ಕಟ್ಟಿಸುವ ಬ್ರಿಡ್ಜ್‌ಗಳನ್ನು ಇದೇ ರೀತಿ ಕಟ್ಟಿಸಬೇಡಿ ಎಂದು ರೈಲ್ವೆ ಅಥಾರಿಟೀಸ್‌ಗೆ ಇನ್‌ಸ್ಟ್ರಕ್ಷನ್ಸ್ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ರೈಲ್ವೆ ಅಥಾರಿಟೀಸ್‌ಗೆ ನಾವು ರಿಕ್ವೆಸ್ಟ್ ಮಾಡಿಕೊಳ್ಳಬಹುದು; ಆದರೆ ಇನ್‌ಸ್ಟ್ರಕ್ಷನ್ಸ್ ಕೊಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜನರ ಕಷ್ಟ ಪರಿಹಾರ ಮಾಡಲು ಎಷ್ಟು ಶೀಘ್ರವಾಗಿ ಕೆಲಸ ಮಾಡಿಸಿ ಕೊಡುತ್ತೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ದಿನಗಳ ಹಿಂದೆಯೆ ರೈಲ್ವೆ ಅಥಾರಿಟೀಸ್‌ಗೆ 3,600 ರೂಪಾಯಿ ಕಳಿಸಿ ಡಿಪಾಜಿಟ್ ಮಾಡಿ ಪ್ಲಾನ್ ಎಸ್ಟಿಮೇಟು ಕಳಿಸಿಕೊಡಬೇಕೆಂದು ಕೇಳಿದೆ. ಅದು ಬಂದ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

Sri K. S. SURYANARAYANA RAO.—Has it come to the notice of the Government that when reference was made about the Seshadripuram Bridge Road, the Railway Authorities said that it was entirely the fault of the Corporation and not of the Railways ?

Mr. SPEAKER.—Is the Hon'ble Member giving the information ?

SRI K. S. SURYANARAYANA RAO.—If it is a fact, what action the Government propose to take against the officers responsible ?

SRI S. NIJALINGAPPA.—Sir, the Railways have not said so.

Connecting the B. H. Road to Banasandra-Hassan Road.

*Q.—659. SRI H. R. KESHAVA MURTHY (Gandasi).—

Will the Government be pleased to state :—

(a) whether they are aware that nearest route from Huliyar and (2) Yalamore (Centres for mining deposits) is to connect from B. H. Road to Banasandra-Hassan Road through the Konehalli-Tiptur-Dudda P. W. D. Road ;

(b) if so, whether they would take up this road ?

A.—SRI G. B. SHANKAR RAO (Parliamentary Secretary to the Minister for Public Works).—

(a) Yes.

(b) No, as the nearest route does not touch other mining areas.

SRI H. R. KESHAVA MURTHY.—Since the ore carrying road between Banasandra and Hassan is in a completion stage, is it not the intention of the Government to take up mines approaches ?

MR. SPEAKER.—It is a suggestion for action.

SRI G. B. SHANKAR RAO.—It is not the intention of the government.

SRI H. R. KESHAVA MURTHY.—If so, why should you not take up this as approach road ?

MR. SPEAKER.—Approach road is something different.

SRI H. R. KESHAVA MURTHY.—Since it is not possible to include this as a mine road, why not this be taken as an approach road ?

SRI G. B. SHANKAR RAO.—It is not included in the ore-road programme. The routes taken up for improvements are Huliyar, Yalamore and Konehalli-Tiptur roads.

Land Revenue assessment in the Bombay Karnatak area of the State.

*Q.—669. SRI V. S. PATIL (Belgaum-I).—

Will the Government be pleased to state :—

(a) whether they are aware that the land revenue assessment is very high in the Bombay Karnatak areas of the State ;

(b) whether Government have issued any instructions to the Revenue officers of that area to charge the surcharge as passed by the Mysore Land Revenue (Surcharge) Amendment Act 1962 ;

(c) whether there is any classification of lands in the Bombay Karnatak area, as wet, dry and garden ?

A.—Sri M. V. KRISHNAPPA (Minister for Revenue).—

(*a*) No.
(*b*) Yes.
(*c*) Yes.

Sri V. S. PATIL.—Sir, may I know what is the land revenue assessment in North Karnatak and old Mysore area?

Sri M. V. KRISHNAPPA.—There is unfortunately a wrong impression that in North Karnatak, rates of land revenue are very high. It is not so. Land revenue has been fixed on classification of land. If today people in Belgaum area are paying a little higher land revenue, it is because they have good soil there. The black cotton soil of those areas cannot be compared to the poor soils of Chitradurga or Challakere. The soil in these parts is very poor. If the Hon'ble Member is interested to know, there are areas in old Mysore also where the land revenue is higher than Belgaum. For example, in Kolar there is the maximum dry rate as much as Rs. 3.50. The minimum rates in Kolar are higher than in Belgaum. There is no force in saying that there are unduly higher rates in North Karnatak area.

Sri V. S. PATIL.—What are the wet rates in Belgaum and in these areas, Sir?

ಶ್ರೀ ಎಂ. ವಿ. ಕೃಷ್ಣಪ್ಪ.—ವೆಟ್ ಲ್ಯಾಂಡ್ ಬೆಳಗಾಂ ಡಿಸ್ಟ್ರಿಕ್ಟ್‌ನಲ್ಲಿ ಎಕರೆಗೆ 15 ರೂಪಾಯಿ, ಮಂಡ್ಯದಲ್ಲಿ 14.12 ರೂ. There is not much difference.

ಶ್ರೀ ಟಿ. ಭಾಸ್ಕರ ಸೆಟ್ಟಿ.—ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ಇಡೀ ಸ್ಟೇಟ್‌ನಲ್ಲೇ ಅತ್ಯಂತ ಹೆಚ್ಚಿನ ಲ್ಯಾಂಡ್ ರೆವಿನ್ಯೂ ಇದೆಯಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ.

Sri C. S. HULKOTI.—Is it not a fact that the rates in old Mysore area include water rate and irrigation cess?

Sri M. V. KRISHNAPPA.—For instance they take contribution of Rs. 60 – 70 per acre under the Ghataprabha. They cannot compare that with other areas. It is not reasonable.

Sri V. S. PATIL.—In addition to this assessment, is the Government aware that the land-owners have to pay water rate and irrigation cess and local fund in Belgaum area and in North Karnatak while all these cesses are not applied to the rest of the Mysore area?

Sri M. V. KRISHNAPPA.—The answer is, very soon we are going to have reclassification. Survey settlement is being taken up which is going to be completed within 1½ years. Then the entire land in the State will be classified and uniform rates for each class of land will be levied. Then there will not be any complaint about varied types of cesses, varied types of land tax in different parts of the State. They are bound to exist because they were parts of different States. There were five different systems in five different States and they have been brought together as one unit. Naturally, there are different rates existing.

Mr. SPEAKER.—Is there not a publication of the Government in which all these are given? "MYSORE IN FIGURES" is a publication where all these details are given up to 1960. After 1960 there has been no revision.

Sri C. S. HULKOTI.—Where surcharge and irrigation cess is not levied in some parts of Mysore State?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ಕಡೆ ಇರಿಗೇಷನ್ ಸೆಸ್ ಇದ್ದೇ ಇದೆ.

Sri V. S. PATIL.—Is the Government aware that surcharge is levied on different items in the Belgaum area—that is water rate, irrigation cess and local fund, apart from the assessment? If the amount comes to less than Rs. 15 then all these things are charged again. Suppose the water rate is Rs. 10 irrigation cess is Rs. 5 and local fund is Rs. 2 if it goes beyond 15 that is not the consideration. They are charging separately. Is that a correct procedure, Sir?

Sri M. V. KRISHNAPPA.—These things were brought to the notice of the Government and the Chief Minister by the Deputy Speaker and this case is taken up for examination. We are bringing amendments in this very session to see that this is removed.

Increasing the Staff in the Minor Irrigation Department.

*Q.—670. Sri C. R. RANGE GOWDA (Magadi).—

Will the Government be pleased to state:—

to what extent they have increased the staff in the Minor Irrigation Department to help the ryots to grow more food in Magadi Taluk during the National Emergency period?

A.—Sri ALUR HANUMANTHAPPA (Deputy Minister for Minor Irrigation).—

No staff has been increased during National Emergency However, the existing staff at Magadi has been directed to give more attention to Minor Irrigation Works.

† Sri ALUR HANUMANTHAPPA.—In addition to the existing staff at Magadi, the minor irrigation investigation staff at Ramanagaram is looking after the preparation of estimates and other things.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ ಇದುವರೆಗೂ ಮೈನರ್ ಇರಿಗೇಷನ್ ಇನ್ವೆಸ್ಟಿಗೇಷನ್ ನಡೆದಿಲ್ಲ ಎಂಬುದು ಗೊತ್ತೆ?

ಶ್ರೀ ಆಲೂರು ಹನುಮಂತಪ್ಪ.—ನಡೆದಿದೆ. ಆದರೆ ಹೆಚ್ಚಾಗಿ ಆಗಿಲ್ಲ, ಎಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ.—ಈಗ ಇರತಕ್ಕ ಸಿಬ್ಬಂದಿಯವರು ಅಲ್ಲಿ ಇರುವಷ್ಟು ಕೆಲಸವನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ತಾತ್ಕಾಲಿಕವಾದ ಸಿಬ್ಬಂದಿಯನ್ನಾದರೂ ಕೊಟ್ಟು ತ್ವರಿತವಾಗಿ ಈ ಮೈನರ್ ಇರಿಗೇಷನ್ ಕೆಲಸ ನಡೆಯುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಈಗ ಇರುವವರೇ ಹೋಗಿ ತಾಲ್ಲೂಕಾಮುಳೆ ಪರಿಶೀಲನೆ ಮಾಡಿ ಎಷ್ಟು ವರ್ಷಗಳಲ್ಲಿ ಅಲ್ಲಿನ ಕೆಲಸಕಾರ್ಯಗಳನ್ನು ಮಾಡಬಹುದು ಎಂಬ ಅಂಕಿಅಂಶಗಳನ್ನು ಶೇಖರಿಸುತ್ತಿದ್ದಾರೆ.

ಶ್ರೀ ವಿ. ಮುನಿಯಪ್ಪ.—ತುರ್ತು ಪರಿಸ್ಥಿತಿಯಿಂದಾಗಿ ಸಿಬ್ಬಂದಿ ಹೆಚ್ಚು ಮಾಡಲಿಕ್ಕೆ ಆಗಿಲ್ಲ ಎಂದು ಹೇಳಿದ್ದೀರಿ. ತುರ್ತು ಪರಿಸ್ಥಿತಿಯ ಕಾರಣವಾಗಿಯೇ ದೇಶದಾದ್ಯಂತ ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾಡಲು ಹೆಚ್ಚಿನ ಗಮನಕೊಡಬೇಕು ಮತ್ತು ತೆಗೆದುಕೊಂಡಿರತಕ್ಕ ಕೆಲಸಗಳನ್ನು ಜಾಗ್ರತೆ ಪೂರೈಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸರ್ಕಾರದವರು ನಿರ್ಧಾರಮಾಡಿ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇರುವುದರಿಂದ ಸಾರ್ವಜನಿಕರಿಂದಲೂ ಮತ್ತು ಇಲಾಖೆ

(ಶ್ರೀ ವಿ. ಮಸಿಯಪ್ಪ)

ಯವರಿಂದಲೂ ಎಲ್ಲಾ ಸಂದರ್ಭಗಳಲ್ಲಿ ಈ ಮೈನರ್ ಇರಿಗೇಷನ್ ಕಾಮಗಾರಿಗಳಿಗೆ ಸಿಬ್ಬಂದಿ ಹೆಚ್ಚು ಮಾಡತಕ್ಕದ್ದು ಅತ್ಯಗತ್ಯ ಎಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಈ ಪ್ರಶ್ನೆಯನ್ನು ಮಾಗಡಿ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಕೇಳಿದ್ದಾರೆ, ಮೈನರ್ ಇರಿಗೇಷನ್ ಇನ್ವೆಸ್ಟಿಗೇಷನ್ staff ಹೆಚ್ಚು ಮಾಡಬೇಕೆಂಬುದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

Amount spent annually for the Sanskrit College at Melkote, in Pandavapura Taluk.

*Q.—675. Sri J. SRINIVASA REDDY (Uttarahalli).—

Will the Government be pleased to state :—

(a) the amount that is being spent annually for the Sanskrit College at Melkote in Pandavapura Taluk ;

(b) of this, how much relates to Muzrai Funds and how much to Education Department ;

(c) the number of boys and girl students studying in the College :

(d) the particulars of classes run by this College ;

(e) the examinations passed by the Lecturers of this college ;

(f) the communitywar strenth of students of each class in this College ?

A.—Sri M. V. KRISHNAPPA (Minister for Revenue).—

(a) Rs. 17,128.

(b) Rs. 15,808 is out of Budget allotment under 26. Misc. (State Grant) and Rs. 1,320 from Education Department as scholorship grant. No grant is paid out of Muzrai Funds.

(c)—

Boys	...	48
Girls	...	33
Total	...	81

(d) 1. Vyakarana Vidwath-Final 2nd year

2. Vyakarana Vidwath-Madhyama 3rd year.

3. Alankar Vidwath-Final 2nd Year.

4. Tarka Vidwath-Madhyama 3rd year.

5. Sahitya Pareeksha-3rd year.

6. Sahitya Pareeksha-1st year.

7. Kavya-2nd year.

8. Kavya-1st year.

9. Primary-3rd year

10. Primary-2nd year.

11. Primary-1st year.
12. Veda Vidwath Ghana-1st year.
13. Veda Balabhaga
14. Tenkalai Prabandha (Madhyabhaga)
15. Vadagalai Prabhandha (do)

(e) *Vide* statement I given below.

(f) *Vide* statement II given below.

STATEMENT I.

Sl. No.	Name of Lecturers	The Examinations they have passed
1	Sri M. A. Alwarthirumala Iyergar	Naveena Nyaya Vidwan
2	Sri Cha. Sreenivasavaradachar	Krishna Yajurveda, Salakshana Ghanantha.
3	Sri Sreerangam Narasimhachar	Alankara and Vishistadwaita Vedanta Vidwath.
4	Sri N. S. Krishnamachar	Alankara and Vyakarana Vidwat.
5	Sri Kadambi Thirumalayan Iyengar	Vishistadwaita Vedanta Vidwat.
6	Sri S. Narasimhachar	Krishnayajurveda Salakshana Ghanantha and Smarthaprayoga Vidwat
7	Sri Jaggu Narasimhachar	Smskrita Sahitya Pareekshe passed and Divyaprabhandha Vidwan.
8	Sri Javali Krishnamachar	Divyaprabandha Examination passed.
9	Sri Mudambai Narasimhachar	Alankara Vidwat.

(SRI M. V. KRISHNAPPA)

STATEMENT II.

	Particulars regarding the classes run by the College	No. of Boys and Girls			Community
		Boys	Girls	Total	
1	Adv. Study Vyakarana Vidwath, Final 2nd year	—	1	1	Brahmin.
2	Vyakarana Vidwath, Madhyama 3rd year	—	1	1	do
3	Alankara Vidwath, Final 2nd year	—	1	1	do
4	Tharka Vidwath, Madhyama 3rd year	2	—	2	do
5	Sahitya Pareekshe III year	2	1	3	do
6	Sahitya Pareekshe I year	1	2	3	do
7	Kavya II year	5	1	6	do
8	Kavya I year	2	4	6	do
9	Primary III year	11	8	19	Four girls are non-brahmins.
10	Primary II year	4	6	10	One boy and one girl are non-brahmins.
11	Primary I year	12	8	20	All are brahmins
12	Vedavidwat Ghana I year	1	—	1	do
13	Veda Balabhaga	3	—	3	do
14	Thenkalai Prabandha (Madhyabhaga)	3	—	3	do
15	Vadagalai Prabbandha (Madyhabbaga)	2	—	2	do

ಶ್ರೀ ಜೆ. ಶ್ರೀನಿವಾಸ ರೆಡ್ಡಿ.—ಇಲ್ಲಿ ಕೆಲವು ವಿದ್ಯಾರ್ಥಿಗಳು ಸಂಸ್ಕೃತ ಬೋರ್ಡಿಗೆ, ಅಡ್ಮಿಷನ್ ಕೊಟ್ಟಿಲ್ಲ ಎಂದು ಅಪೀಲು ಹೋಗಿರುವುದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ವೇದಾಂತ ಬೋಧಿನಿ ಸಂಸ್ಕೃತ ಮಹಾ ಪಾಠಶಾಲಾ ಎಂದು ಹೆಸರು. ಈ ಪಾಠಶಾಲೆಯಲ್ಲಿ 3 ವರ್ಷದ ಕೋರ್ಸು ಇದೆ. ಇದರಲ್ಲಿ ಅಲಂಕಾರ, ತರ್ಕ, ವ್ಯಾಕರಣ, ವಿಶಿಷ್ಟಾದ್ವೈತ, ವೇದ ವಿದ್ವತ್ ಇಂತಹ 7-8 ವಿಷಯಗಳಲ್ಲಿ ಶಿಕ್ಷಣ ಕೊಡುತ್ತಾರೆ. ಮೈಸೂರು ಸರ್ಕಾರದ ವಿದ್ಯಾಭ್ಯಾಸ ಇಲಾಖೆಯವರು ನಡೆಸುವ ಪರೀಕ್ಷೆಗೆ ತಯಾರುಮಾಡಿ ಕಳುಹಿಸಿತ್ತಾರೆ. ಅದರಲ್ಲಿ ಪಾಸ್ ಆದವರಿಗೆ ಸರ್ಟಿಫಿಕೇಟ್ ಬರುತ್ತದೆ.

SRI J. P. SARWESH.—I should like to know whether the Sanskrit Committee at Melkote is following the same caste discrimination policy in admitting students? Why is there no candidate belonging to scheduled caste, or backward class, Sir?

Sri M. V. KRISHNAPPA.—There are no restrictions. There are students belonging to all Communities other than Brahmins.

Sri S. SIVAPPA.—Is this institution under the control of the Education Department or the Revenue Department ?

Sri M. V. KRISHNAPPA.—It is under the control of the Muzrai Department.

ಶ್ರೀ ಎಚ್. ನಂಜೇಗೌಡ.—ಸಾಹಿತ್ಯದ ಕ್ಲಾಸ್ ತೆಗೆದುಕೊಳ್ಳುತ್ತಾ ಇರುವವರು ಯಾರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೇಷ್ಟರು ಇದ್ದಾರೆ (ನಗು). ಆಳ್ವಾರ್ ತಿರುಮಲೆ ಅಯ್ಯಂಗಾರ್‌ರು ತೆಗೆದುಕೊಳ್ಳಬಹುದು ಎಂದು ಕಾಣುತ್ತದೆ.

ಶ್ರೀ ಜಿ. ವಿ. ಗೌಡ.— ಈ ಶಾಲೆಗೆ ಪ್ರವೇಶ ಪಡೆಯಲಿಕ್ಕೆ ಅರ್ಹತೆ ಪಡೆದಿರಬೇಕೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಅವರು ಟೆಸ್ಟ್ ಇಟ್ಟುಕೊಳ್ಳುತ್ತಾರೆ, ಅದರಲ್ಲಿ ಕೆಲವು ನಿಯಮ ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಪಾಸ್ ಮಾಡಿದವರನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೇರೆ ಜಾತಿಗೆ ಸೇರಿದವರೂ ಇದ್ದಾರೆ. ಎಂದು ಹೇಳಿದಿರಿ 48 ಜನ ಹುಡುಗರು, 37 ಜನ ಹುಡುಗಿಯರಲ್ಲಿ ಯಾವ ಯಾವ ಜಾತಿಯವರು ಇದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲರೂ ಬ್ರಾಹ್ಮಣರೇ ಆಗಬೇಕೆಂದೇನೂ ಇಲ್ಲ. ಪ್ರೈಮರಿ ಸೆಕೆಂಡ್‌ಇಯರ್‌ನಲ್ಲಿ ಒಬ್ಬ ಹುಡುಗ ಮತ್ತು ಒಬ್ಬ ಹುಡುಗಿ ಬ್ರಾಹ್ಮಣೇತರರು ಇದ್ದಾರೆ: 3ನೇ ತರಗತಿಯಲ್ಲಿ 4 ಜನ ಬ್ರಾಹ್ಮಣೇತರರು ಬಾಲಿಕೆಯರಿದ್ದಾರೆ.

ಶ್ರೀ ಇ. ನಾರಾಯಣ ಗೌಡ.—ಎಲ್ಲಾ ಶಾಲಾ ಕಾಲೇಜುಗಳಲ್ಲೂ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅವರಿಗೆ ಶೇಕಡ 18 ಸ್ಥಾನಗಳನ್ನು ಕಾದಿರಿಸಿರುವಂತೆ ಇಲ್ಲೂ ಕೂಡ ಇಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದರಲ್ಲಿ ರಾಜಕೀಯವೇನೂ ಇಲ್ಲ. ಆ ಜಾತಿಗಳವರಿಂದ ದೂರುಗಳೇನೂ ಬಂದಿಲ್ಲ. ಸೇರುವವರಿದ್ದರೆ ಅವರ ಹೆಸರು ಕೊಡಿ, ಸೇರಿಸುತ್ತೇವೆ.

ಶ್ರೀ ಜಿ. ವಿ. ಗೌಡ.—ಇದೇನು ಪ್ರೈಯವೇಟ್ ಪ್ರಾಪರ್ಟಿಯೇ ? ಅಥವಾ ಸರ್ಕಾರಕ್ಕೆ ಸೇರಿದ್ದೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಎರಡಕ್ಕೂ ಸೇರಿದ್ದಲ್ಲ. ಅಲ್ಲಿ ಕೆಲಸ ಮಾಡತಕ್ಕವರಿಗೆ ಪೆನ್‌ಷನ್ ಇಲ್ಲ. ಈ ವೇದ ಪಾಠಶಾಲೆ 114 ವರ್ಷಗಳ ಹಿಂದೆ ಪ್ರಾರಂಭವಾಯಿತು. 1918 ರಲ್ಲಿ ಮುಜರಾಯಿ ಇಲಾಖೆಗೆ ಸೇರಿತು. ಆ ಕಾಲದಿಂದ ನಾವು ಅದಕ್ಕೆ 18 ಸಾವಿರ ರೂಪಾಯಿಗಳನ್ನು ಕೊಟ್ಟುಕೊಂಡು ಬರುತ್ತಿದ್ದೇವೆ.

ಶ್ರೀ ಜಿ. ಮುರುಳಪ್ಪ.—ಇಲ್ಲಿ ಕೊಟ್ಟಿರತಕ್ಕ ಹೆಸರುಗಳೆಲ್ಲ ಬರಿ ಅಯ್ಯರ್ ಮತ್ತು ಅಯ್ಯಂಗಾರ್ ಎಂದು ಇದೆಯಲ್ಲ, ಅಂದರೆ ಅಲ್ಲಿ ಕೆಲಸಕ್ಕೆ ಬೇರೆಯವರಾರು ಸಿಕ್ಕಲಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರೇ ನಡೆಸಿಕೊಂಡು ಬರುತ್ತಿದ್ದಾರೆ.

ಶ್ರೀ ಎಸ್. ಭೀಮಣ್ಣ.—ಈ ಶಾಲೆಯಲ್ಲಿ ಓದಿದವರಿಗೆ ಸರ್ಕಾರಿ ನೌಕರಿಗಳು ಸಿಕ್ಕುತ್ತವೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ನಡೆಸತಕ್ಕ ಪರೀಕ್ಷೆಗಳು ಸರ್ಕಾರದವರಿಂದ ಅಂಗೀಕೃತವಾಗಿದ್ದಲ್ಲಿ, ಕೊಡಬಹುದು.

ಅಧ್ಯಕ್ಷರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು.

QUESTIONS FOR ANSWERS ON THE DAY
(but not taken up)

Schemes undertaken for the Upliftment of Harijans in North Kanara District.

*Q.—161. Smt. V. V. MIRJANKAR (Kumta).—

Will the Government be pleased to state :—

the Schemes undertaken in the district of North Kanara for the uplifit of Harijans ?

A.—Smt. YASHODARA DASAPPA (Minister for Social Welfare).—

The Schemes undertaken for the welfare of Harijans in the III Five-Year Plan in N. Kanara District, are as follows :—

EDUCATION :

1. Starting of Nurseries *cum* Women Welfare Centre for the benefit of Women and Children.

2. Award of merit scholarships for pre-matric students.

3. Starting of hostels for boys and girls.

4. Grant-in-aid to private hostels run for Scheduled Castes.

5. Increasing the strength in the Government and aided hostels for Scheduled Castes.

6. Payment of tuition fees to Scheduled Castes in private schools.

7. Construction of hostel buildings.

ECONOMIC UPLIFT :

1. Opening of Tailoring Units.

2. Aid to Co-operatives.

3. Subsidies to develop poultry farming, sheep breeding and grants for purchase of raw materials and tools.

4. Supply of plough bullocks.

5. Supply of milch cows and she-buffaloes.

HEALTH, HOUSING AND OTHER SCHEMES :

1. Acquisition of lands for house sites.

2. Construction of Community Centre buildings.

3. Sinking of drinking water wells and repairs to old wells.

4. Publicity and Propaganda.

5. Legal assistance.

CENTRAL SECTOR :

1. Improvement of the Working conditions of sweepers and scavengers (supply of hand-carts and wheel-barrows).

2. Subsidies for construction of houses and provision of house sites to sweepers and scavengers.

Acquisition of lands for village extension in Kethapura Village T.-Narasipura Taluk.

**Q.*—571. Sri S. SIDDAIAH (Bannur).—

Will the Government be pleased to state :—

(*a*) whether it is a fact that lands were acquired for village extension in Kethapura Village, T.-Narasipur Taluk ;

(b) whether sites have been formed on these lands and distributed to the villagers ?

(c) whether new buildings are being constructed on these sites and whether the buildings are being constructed as per plan ;

(d) whether they are aware that the villagers have enroached on the public land ?

A.—Sri RAMAKRISHNA HEGDE (Minister for Co-operation and Development).—

(a) Yes.

(b) Yes.

(c) Yes, except one.

(d) It is reported that one Sri Kariyappa has enroached upon the Government land.

1-30 P.M.

PAPERS LAID ON THE TABLE.

Sri RAMAKRISHNA HEGDE (Minister for Co-operation and Development).—Sir, I beg to lay the Annual Report and Accounts of the Mysore State Warehousing Corporation for the year 1961-62, as required under sub-section (9) of Section 52 of the Agricultural Produce (Development and Warehousing) Corporation Act, 1956.

Members' Representations.

Sri S. SIVAPPA (Shravanabelagola).—Sir, the Minister for Industries and other Ministers have placed several reports on the Table of the House. I want to know from the Chair whether this House would be given an opportunity to discuss these very important reports.

Mr. SPEAKER.—I will consider it. I want to inform the House that for the reference of Hon'ble Members a number of books relevant to the subject covered by this Bill have been placed on the Table. If any more are wanted, Members may kindly write to me. I have got a long list of Members who want to participate in the Debate. The whole of the day will be covered by the Debate and perhaps the reply by the Minister may be made tomorrow.

Sri C. J. MUCKANNAPPA (Sira).—Sir, yesterday I brought something to the notice of the Chair. It refers to 15,000 children. I request the Hon'ble Chief Minister........

Mr. SPEAKER.—All that was in the mind of the Hon'ble Member and not in his letter. Anyway, I will deal with it and let the member know later in the course of the day.

MYSORE RELIGIOUS AND CHARITABLE INSTITUTIONS AND TRUSTS BILL, 1962.

Motion to consider—(continued.)

Sri SANJEEVANATH AIKALA (Suratkal).—Sir, yesterday I was referring to the good-work being done by these temples........

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ನೆನ್ನೆ ದಿವಸ ಇವರು ಕನ್ನಡದಲ್ಲಿ ಭಾಷಣ ಮಾಡುತ್ತಿದ್ದರು. ಈಗ ಇವರು ಹೀಗೆ ಇಂಗ್ಲೀಷಿನಲ್ಲಿ ತಮ್ಮ ಭಾಷಣವನ್ನು ಬದಲಾಯಿಸಬಹುದೆ ?

Mr. SPEAKER.—The proper course is to speak in Kannada because the Hon'ble Member started his speech in Kannada yesterday.

ಶ್ರೀ ಸಂಜೀವನಾಥ ಐಕಳ.—ಸ್ವಾಮಿ ನನ್ನ ಗೆಳೆಯರ ಅಪೇಕ್ಷೆಯಂತೆ ಕನ್ನಡದಲ್ಲೇ ಮಾತ ನಾಡಲು ಪ್ರಯತ್ನಮಾಡುತ್ತೇನೆ. ನೆನ್ನೆಯ ದಿವಸ ನಾನು ಮಾತನಾಡುತ್ತಿದ್ದಾಗ ಅನೇಕ ಮಠ ಗಳು, ದೇವಸ್ಥಾನಗಳು ಆಶ್ರಮಗಳು, ಛತ್ರಗಳೂ ಬಹಳ ಚೆನ್ನಾಗಿ ಕೆಲಸ ನಡೆಸುತ್ತಿವೆ ಎಂದು ಹೇಳಿ, ಅವುಗಳ ಆಡಳಿತದ ಬಗ್ಗೆ ನನ್ನ ಪ್ರಶಂಸೆಯನ್ನು ನಾನು ವ್ಯಕ್ತಪಡಿಸಿದ್ದೆನು. ಎಲ್ಲಿಯೋ ಕೆಲವು ದೇವ ಸ್ಥಾನಗಳ ಆಡಳಿತ ಕೆಟ್ಟುಹೋಗಿದೆ, ಅಲ್ಲಿ ದುರಾಡಳಿತ ನಡೆಯುತ್ತಿದೆ ಎಂಬ ಒಂದು ನೆಪದ ಮೇಲೆ ಈಗ ಎಲ್ಲ ದೇವಸ್ಥಾನಗಳ, ಆಶ್ರಮಗಳ ಹಾಗೂ ಮಠಗಳ ಆಡಳಿತವನ್ನು ಸರ್ಕಾರ ಸಂಪೂರ್ಣವಾಗಿ ವಶಪಡಿಸಿಕೊಳ್ಳಬೇಕೆಂಬ ಅಭಿಪ್ರಾಯ ಇದರಲ್ಲಿದೆ. ಇದರಲ್ಲಿ ಬಸ್ತಿಗಳೂ, ಮಸೀದಿಗಳೂ ಎಲ್ಲವೂ ಸೇರಿರುತ್ತವೆ. ಈ ಒಂದು ನೆಪದ ಮೇಲೆ ಸರ್ಕಾರ ಇವುಗಳ ಆಡಳಿತದ ಬಗ್ಗೆ ಒಂದು ಬೋರ್ಡನ್ನು ಅಥವಾ ಒಂದು ಟ್ರಸ್ಟನ್ನು ರಚನೆ ಮಾಡುತ್ತೇವೆಂದು ಹೇಳುತ್ತಿರುವುದು ಸರಿಯಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಇಷ್ಟೇ ಅಲ್ಲದೆ ಕೆಲವು ಕಡೆಗಳಲ್ಲಿ ಒಳ್ಳೆಯ ಕೆಲಸ ಮಾಡುತ್ತಿರುವ ದೇವಸ್ಥಾನಗಳಲ್ಲಿ ಸರ್ಕಾರ ಕೈಹಾಕಿ ಅವುಗಳ ಆಡಳಿತವನ್ನು ವಹಿಸಿಕೊಂಡು ನಡೆಸಲಿಕ್ಕೆ ಹೋಗಿದ್ದಾರೆ. ಕೆಲವುಕಡೆ ಹಾಳಾಗಿ ಹೋಗಿರುವ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡುತ್ತೇವೆಂದು ಸರಕಾರ ತನ್ನ ವಶಕ್ಕೆ ತೆಗೆದುಕೊಂಡು ಅವುಗಳ ಮ್ಯಾನೇಜುಮೆಂಟನ್ನು ವಹಿಸಿಕೊಂಡಿರುವ ಉದಾಹರಣೆಗಳೂ ಇವೆ. ನಮ್ಮ ಜಿಲ್ಲೆಯಲ್ಲಿ ಇವುಗಳಿಗೆ ಟ್ರಸ್ಟು ಮತ್ತು ಮ್ಯಾನೇಜರುಗಳನ್ನು ನೇಮಿಸುವ ಸಂದರ್ಭದಲ್ಲಿ ಅನ್ಯಾಯ ಮಾಡಿರುವ ಉದಾಹರಣೆಗಳು ತುಂಬಾ ಇವೆ. ದೇವಸ್ಥಾನಗಳು ಚೆನ್ನಾಗಿ ಕೆಲಸ ಮಾಡುತ್ತಾ ಇರುವ ಕಡೆ, ಭಕ್ತರುಗಳಿಗೆ ಅನಾನುಕೂಲಗಳು ತೊಂದರೆಗಳು ಇಲ್ಲದೆಇದ್ದರೂ ಅಂಥ ಸಂದರ್ಭದಲ್ಲಿಯೂ ಸರ್ಕಾರದವರು ಪ್ರವೇಶಮಾಡಿದ್ದುದುಂಟು. ಇಂತಹ ಕಡೆಗಳಲ್ಲಿ ಸರಕಾರ ಕೈ ಹಾಕುವುದು ತಪ್ಪಾಗುತ್ತದೆ ಎಂದು ನನ್ನ ಅಭಿಪ್ರಾಯ. ಪೂಜೆ ಮಾಡುತ್ತಿರುವ ಸ್ಥಳಗಳನ್ನು ಇದರಲ್ಲಿ ಸೇರಿಸಿರುವಾಗ ನಮ್ಮ ಜಿಲ್ಲೆಯಲ್ಲಿರುವಂತಹ ಮಾರಿಯಮ್ಮನ ದೇವಾಲಯಗಳನ್ನು ಇದರಲ್ಲಿ ಸೇರಿಸಿಲ್ಲ ಎಂದು ನನಗೆ ಕಾಣುತ್ತದೆ. ಇಂತಹವುಗಳನ್ನೂ ಇದರಲ್ಲಿ ಸೇರಿಸಬೇಕೆಂದು ಹೇಳು ತ್ತೇನೆ. ದೇವಸ್ಥಾನಗಳು ಮತ್ತು ಮಠಗಳಲ್ಲಿ ಬರುವ ಹಣವನ್ನು ಧಾರ್ಮಿಕ ಕಾರ್ಯಗಳಿಗಾಗಿ ಉಪಯೋಗಿಸಬೇಕು. ನಮ್ಮ ಮಂತ್ರಿಗಳು ಹೇಳಿರುವಂತೆ ಜನರಲ್ಲಿ ಧಾರ್ಮಿಕ ಭಾವನೆಗಳು ಉಂಟಾಗುವಂತೆ ಮಾಡಬೇಕು ಮತ್ತು ಜನರನ್ನು ಸನ್ಮಾರ್ಗ ಪ್ರವರ್ತಕರಾಗಿ ಮಾಡಲು ತಕ್ಕ ಪ್ರಯತ್ನಮಾಡಬೇಕು. ಇದನ್ನು ಯಾವ ರೀತಿ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಇಲ್ಲಿ ವಿಚಾರ ಮಾಡಬೇಕು. ಕೆಲವು ಕಡೆಗಳಲ್ಲಿ ಇಂತಹ ಸಂಸ್ಥೆಗಳಲ್ಲಿ ಬರುವ ಹಣ ಒಂದು ರೀತಿಯಾದ ದುರುಪ ಯೋಗಕ್ಕೆ ಅವಕಾಶ ಮಾಡಿಕೊಡುವಂತಾದರೆ ಇದರ ಉದ್ದೇಶ ಸಾರ್ಥಕವಾದಂತಾಗುತ್ತದೆಯೇ? ಇದನ್ನು ವಿಚಾರ ಮಾಡಬೇಕು. ಸಾಮಾನ್ಯವಾಗಿ ಇದರ ಆಡಳಿತ ವ್ಯವಹಾರಗಳನ್ನು ಉತ್ತಮಗೊಳಿ ಸುವಂತಹ ಭಾವನೆಗಳು ಈ ಕಾನೂನಿನಲ್ಲಿ ಅಡಕವಾಗಿರಬೇಕು. ನಾವು ಐದು ಪ್ರದೇಶಗಳಿಂದ ಬಂದಿರುವುದರಿಂದ ನಮ್ಮಲ್ಲಿರುವ ಕಾನೂನುಗಳು ಬೇರೆ ಬೇರೆಯಾಗಿವೆ. ಇದನ್ನೆಲ್ಲಾ ಏಕರೂಪತೆಗೆ ತರುವಾಗ ಸಮನ್ವಯಗೊಳಿಸಿ ತರಬೇಕೆಂದು ಹೇಳಿ ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ಸಿದ್ದಪ್ಪ (ಚಾಮರಾಜನಗರ).—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರುವ ಧಾರ್ಮಿಕ ಹಾಗೂ ಮತಸಂಬಂಧ ವಾದ ಮಸೂದೆಯನ್ನು ಅನುಮೋದಿಸುತ್ತ ಕೆಲವು ವಿಷಯಗಳನ್ನು ಮಾತ್ರ ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ನಮ್ಮ ದೇಶದಲ್ಲಿರುವ ಈಗಿನ ಪರಿಸ್ಥಿತಿಯನ್ನು ನೋಡಿದಾಗ ಅನೇಕ ಪ್ರಮುಖ ಹಾಗೂ ಮತೀಯ ಸಂಬಂಧವಾದ ಸಂಸ್ಥೆಗಳು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಿ ಕೊಂಡು ಹೋಗುತ್ತಿದೆಯೆಂದು ಹೇಳಿದರೆ ಅದು ತಪ್ಪಾಗಲಾರದು. ಆದರೆ ಕೆಲವು ಸಂಸ್ಥೆಗಳು ಮುಜ ರಾಯಿ ಇಲಾಖೆಗೆ ಸಂಬಂಧ ಪಡದಂತಹವುಗಳೂ ಇವೆ. ಕೆಲವು ಸರಕಾರದ ಮುಜರಾಯಿ ಇಲಾಖೆಗೆ ಸೇರಿದವೂ ಇವೆ. ಈ ರೀತಿ ಅಲ್ಲಲ್ಲಿ ನಮ್ಮ ದೇಶದಲ್ಲಿ ಅನೇಕ ಸಂಸ್ಥೆಗಳು ಬೆಳೆದು ಒಂದು ರೀತಿ ಯಾದ ಹೆಚ್ಚಿನ ಸೇವೆಯನ್ನು ಮಾಡುತ್ತಿರುವುದನ್ನೂ ನಾವು ನೋಡಿದ್ದೇವೆ. ಈ ವಿಧೇಯಕದ ಮೇರೆಗೆ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಹಾಗೆ ಒಂದು ಇಲಾಖೆಗೆ ಅವುಗಳನ್ನೆಲ್ಲ ಒಳಪಡಿಸಿ ಅದಕ್ಕೆ ನಿರ್ದಿಷ್ಟವಾದ ರೂಪುರೇಖೆಗಳನ್ನು ಇಟ್ಟು ತಮ್ಮ ಒಂದು ಧ್ಯೇಯವನ್ನು ಸಾಧನೆ

ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಅಂತಹ ಒಂದು ಮಸೂದೆಯನ್ನು ಸರಕಾರದವರು ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಬಹಳ ಮುಖ್ಯವಾದ ಅಂಶವೇನು ಎನ್ನುವುದನ್ನು ಹೇಳುವುದಾದರೆ ಈಗಿರುವ ಪರಿಸ್ಥಿತಿಯಲ್ಲಿ ನಿಜವಾಗಿಯೂ ರೆವಿನ್ಯೂ ಇಲಾಖೆಗೆ ಸೇರಿದ ಅಧಿಕಾರಿಗಳಿಂದಲೇ ಈ ಸಂಸ್ಥೆಗಳ ಕಾರ್ಯಾಚರಣೆಯನ್ನೂ ನಡೆಸಿಕೊಂಡು ಹೋಗುತ್ತಿದ್ದಾರೆ. ಈಗಿರುವ ಅಸಿಸ್ಟೆಂಟು ಕಮಿಷನರವರು, ಡೆಪ್ಯುಟಿ ಕಮೀಷನರವರು, ಹಾಗೂ ಮುಜರಾಯಿ ಕಮೀಷನರುಗಳೂ ಅಲ್ಲದೆ ಈ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಒಂದು ಪ್ರತ್ಯೇಕವಾದ ಇಲಾಖೆಯನ್ನೇ ತಾಲ್ಲೂಕು ಹಾಗೂ ಕೆಳಗಿನ ಮಟ್ಟದಲ್ಲಿ ನೇಮಕ ಮಾಡಲಾಗುತ್ತದೆ ಎನ್ನುವ ಉದ್ದೇಶವನ್ನೂ ಈ ಮಸೂದೆಯಲ್ಲಿ ಅಡಕ ಮಾಡಿದ್ದಾರೆ. ಇನ್ನು ಹಣಕಾಸಿನ ವಿಚಾರವನ್ನು ಈ ಸಭೆಗೆ ತಿಳಿಸುತ್ತ ಇದಕ್ಕಾಗಿ ಸರಕಾರದ ಮೇಲೆ ಹೆಚ್ಚಿನ ಖರ್ಚೇನೂ ಬೀಳುವುದಿಲ್ಲ. ಸುಮಾರು 200 ರೂಪಾಯಿಗಳಿಗಿಂತ ಹೆಚ್ಚಾಗಿ ವಾರ್ಷಿಕ ವರಮಾನವಿಲ್ಲದಿರುವ ಸಂಸ್ಥೆಗಳನ್ನು ರಿಜಿಸ್ಟರು ಮಾಡಿಕೊಳ್ಳಬೇಕು. ಹಾಗೆ ರಿಜಿಸ್ಟರು ಮಾಡಿಕೊಂಡಮೇಲೆ ಅವರಿಗೆ ಬರತಕ್ಕ ವರಮಾನದ ಮೇಲೆ ಶೇಕಡಾ ಎಂಟರಷ್ಟನ್ನು ಕೊಡಬೇಕು, ಇದರಿಂದ ಆಡಳಿತವನ್ನು ನಡೆಸಿಕೊಂಡು ಹೋಗಲು ಸರಕಾರದ ಬೊಕ್ಕಸದಿಂದ ಯಾವ ವಿಧವಾದ ಖರ್ಚು ಮಾಡಬೇಕಾಗಿಲ್ಲ ಎನ್ನುವುದನ್ನೂ ಸೂಚನೆ ಮಾಡಿದ್ದಾರೆ. ಇಂತಹ ಒಂದು ಮಸೂದೆಯನ್ನು ಪರಿಶೀಲನೆ ಮಾಡುವಾಗ ಮುಖ್ಯವಾಗಿ ಮಠೀಯ ಸಂಬಂಧವಾದ ಹಾಗೂ ದೇವಸ್ಥಾನಗಳ ಆಡಳಿತವನ್ನು ನಾವು ಪರಿಶೀಲನೆ ಮಾಡಬೇಕು. ನಿನ್ನೆಯ ದಿವಸ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದಂತೆ ಅನೇಕ ದೇವಸ್ಥಾನಗಳು ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿವೆ. ದೇವರ ಸೇವೆಯನ್ನು ಮಾಡುವುದಕ್ಕಷ್ಟೇ ಅಲ್ಲದೆ ಸಮಾಜದ ಸೇವೆಯನ್ನು ಮಾಡುವುದಕ್ಕೆ ಅವಕಾಶಗಳನ್ನು ಕಲ್ಪನೆ ಮಾಡಿಕೊಂಡಿದ್ದಾರೆ. ಉದಾಹರಣೆಯಾಗಿ ತಿರುಪತಿ ದೇವಸ್ಥಾನವನ್ನು ನೋಡಬಹುದು. ಆ ದೇವಸ್ಥಾನ ತನ್ನ ಆಶ್ರಯದಲ್ಲೇ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದೆ. ಅದಕ್ಕಾಗಿ ತಗಲುವ ಖರ್ಚನ್ನು ಆ ದೇವಸ್ಥಾನದವರೇ ನೋಡಿಕೊಳ್ಳುತ್ತಿದ್ದಾರೆ. ನಮ್ಮ ಸಂಸ್ಥಾನದಲ್ಲಿಯೂ ಅನೇಕ ದೇವಸ್ಥಾನಗಳಲ್ಲಿ ಹೆಚ್ಚಿನ ಉತ್ಪತ್ತಿ ಬರುತ್ತಿದ್ದರೂ ಈ ರೀತಿ constructive aspect ಕಡೆಗೆ ಹೆಚ್ಚಿನ ಗಮನ ಕೊಟ್ಟು ಕೆಲಸ ಮಾಡುವತಂಹದನ್ನೇನೂ ಕಾಣಲಿಲ್ಲ. ಶ್ರೀಮಾನ್ ಮಾದೇಗೌಡರು ಹೇಳಿದ ಹಾಗೆ ಕೆಲವು ಮಠಗಳೂ ವಿದ್ಯಾಭ್ಯಾಸಕ್ಕಾಗಿ ಸಂಸ್ಥೆಗಳನ್ನು ತೆರೆದು ಸಮಾಜದ ಸೇವೆಯನ್ನು ಮಾಡುತ್ತಿವೆ.

ಆದರೆ ಈಗ ನಮ್ಮ ಮುಂದೆ ಇರತಕ್ಕ ಈ ಮಸೂದೆಯಲ್ಲಿ ದೇವಸ್ಥಾನದ ಆದಾಯ ಖರ್ಚು ಇವುಗಳ ಲೆಕ್ಕಪತ್ರ ಇಡಬೇಕೆಂದು ಇದೆ. ಬರುವ ಹಣವನ್ನು ಒಳ್ಳೇ ಉದ್ದೇಶಕ್ಕಾಗಿ ಉಪಯೋಗಿಸಬೇಕು. ಸೇವಿಂಗ್ಸ್ ಆಕೌಂಟ್ಸ್ ಅಥವಾ ಸರಕಾರದ ನಿರ್ದಿಷ್ಟವಾಗಿ ಹೇಳತಕ್ಕ ಷೆಡ್ಯೂಲ್ ಬ್ಯಾಂಕಿನಲ್ಲಿ, ಅಥವಾ ಸರಕಾರದ ಯಾವುದಾದರೂ ಖಜಾನೆಯಲ್ಲಿ ಹಣ ಇಡಬೇಕೆಂದು ಮಸೂದೆಯಲ್ಲಿದೆ. ಉದ್ದೇಶ ಇಷ್ಟೇ. ಹಣ ಪೋಲು ಆಗಬಾರದು. ದುರ್ವಿನಿಯೋಗವಾಗದ ಹಾಗೆ ಬಂದೋಬಸ್ತು ಮಾಡಬೇಕು. ಅದಕ್ಕಾಗಿ ಸೂಪರ್‌ವೈಜ್ ಮಾಡಬೇಕೆಂದು ಇದೆ. ಹಣದ ದುರುಪಯೋಗದ ಕ್ರಮ ತೆಗೆದುಕೊಳ್ಳಲು ಅವಕಾಶವಿದೆ.

ಇನ್ನೊಂದು ವಿಚಾರವನ್ನು ಪರಿಶೀಲನೆ ಮಾಡಬೇಕಾಗಿದೆ. ಈ ಧಾರ್ಮಿಕ ಸಂಸ್ಥೆಗಳಿಗೆ ಬರತಕ್ಕ ವರಮಾನದಿಂದ ವಿದ್ಯಾಸಂಸ್ಥೆಗಳನ್ನು ಸ್ಥಾಪನೆ ಮಾಡಿ ನಡೆಸುವುದಕ್ಕೆ ಸಾಧ್ಯವಿದೆಯೇ ಎಂದರೆ ಅದಕ್ಕೆ ಅವಕಾಶವಿಲ್ಲ. ಟ್ರಸ್ಟಿನವರು ಬೇಕಾದರೆ ಮಾಡಬಹುದು ಬೇಡವಾದರೆ ಬಿಡಬಹುದು. ದೇವಸ್ಥಾನಗಳಿಗೆ ಅಪಾರವಾದ ಐಶ್ವರ್ಯವಿದೆ. ಆದರೆ ಈ ಹಣ ಸದುಪಯೋಗವಾಗುತ್ತಿಲ್ಲ. ಈ ಐಶ್ವರ್ಯವನ್ನು ನಮ್ಮ ದೇಶದ ಒಳ್ಳೆ ಪ್ರಗತಿಸಾಧನೆಗಾಗಿ ಉಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡಿಲ್ಲ ಎಂದು ಹೇಳಬಹುದು. ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪರಿಶೀಲನೆಗಾಗಿ ಹೋಗುತ್ತಿರುವುದರಿಂದ ಸಮಿತಿಯ ಸದಸ್ಯರು ಇದಕ್ಕೆ ಹೆಚ್ಚು ಗಮನ ಕೊಟ್ಟು ದೇಶದ ಪ್ರಗತಿಗೋಸ್ಕರ ಹಣ ಒದಗಿಸುವುದಕ್ಕೆ ಸೂಕ್ತ ತಿದ್ದುಪಡಿ ಮಾಡಲು ಪ್ರಯತ್ನ ಮಾಡುತ್ತಾರೆಂದು ನಾನು ಆಶಿಸುತ್ತೇನೆ.

ಇನ್ನೊಂದು ಮುಖ್ಯ ಅಂಶವನ್ನು ನಾವು ಗಮನಿಸಬೇಕಾಗಿದೆ. ಪ್ರತಿಯೊಂದು ಸೆಕ್ಷನ್ನಿನಲ್ಲಿಯೂ ಒಂದು ಒಂದು ಪ್ರಾವಿಜೋ ಹಾಕಿದ್ದಾರೆ. ಉದಾಹರಣೆಗಾಗಿ ಹೇಳುವುದಾದರೆ 14ನೇ ಕಲಮಿನಲ್ಲಿ ಹೀಗೆ ಇದೆ.

> "Provided that the rules may provide that in the case of any or religious or charitable institutions and trusts, it shall not be necessary to give particulars of the property of the institution or trust of such value and such kind as may be specified therein."

(ಶ್ರೀ ಎಂ. ಸಿ. ಸಿದ್ದಪ್ಪ)

ಈ ರೀತಿ ಪ್ರಾವಿಜೋಗಳನ್ನು ಹೆಚ್ಚಾಗಿ ಹಾಕಿರುವುದು ಒಳ್ಳೆಯದಲ್ಲ ಎಂದು ನನ್ನ ಭಾವನೆ. ಈ ಪ್ರಾವಿಜೋ ಮಟ್ಟಿಗೆ ಹೇಳುವುದಾದರೆ, ಸೆಕ್ಷನ್‌ನಲ್ಲಿ ಹೇಳಿರುವ ಮೂಲ ಉದ್ದೇಶ ವಿಫಲವಾಗುವ ಸಂದರ್ಭ ಬರುತ್ತದೆ. ಉದ್ದೇಶ ಸಾಧನೆ ಮಾಡಲು ಸಾಧ್ಯವಿಲ್ಲದಂತಾಗುತ್ತದೆ. ಆದುದರಿಂದ ಈ ಪ್ರಾವಿಜೋಗಳನ್ನು ಕಿತ್ತು ಹಾಕಬೇಕು ಎಂದು ಹೇಳುತ್ತೇನೆ. ಯಾವಾಗಲೂ ಕಾನೂನು ನಿರ್ದಿಷ್ಟವಾಗಿರಬೇಕು; ಅಲ್ಲದೆ ಎಲ್ಲರಿಗೂ ಅನ್ವಯಿಸುವಂತೆ ಇರಬೇಕು. ಕೆಲವರಿಗೆ ರಿಯಾಯಿತಿ ಕೊಟ್ಟು ತಾರತಮ್ಯ ಮಾಡುವುದು ಚೆನ್ನಾಗಿ ಕಾಣುವುದಿಲ್ಲ ಎಂದು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ.

ಇನ್ನೊಂದು ವಿಷಯ ಅಂದರೆ ಅರ್ಚಕರ ನೇಮಕ ವಿಷಯದಲ್ಲಿ ಹೆರೆಡಿಟರಿಯಾಗಿ ಇರುವುದನ್ನು ಈ ಮಸೂದೆಯಲ್ಲಿ ತಂದಿದ್ದಾರೆ. ಹೆರೆಡಿಟರಿ ಪದ್ಧತಿಯ ನೇಮಕ ಎಲ್ಲಿಯೂ ಇರಕೂಡದು ಎಂಬ ಉದ್ದೇಶ ಇದೆ. ಅನೂಚಾನವಾಗಿ ನೆಡೆದುಕೊಂಡು ಬಂದಿರತಕ್ಕ ಪದ್ಧತಿಯನ್ನು ತೆಗೆಯುತಕ್ಕಂಥಾದ್ದು ನ್ಯಾಯವಲ್ಲಎಂಬ ಒಂದು ಅಭಿಪ್ರಾಯ ಸಹ ಇದೆ. ಅದಕ್ಕೆ ಅನುಗುಣವಾಗಿ ಅರ್ಚಕರ ನೇಮಕ ಹೆರೆಡಿಟರಿಯಾಗಿ ಕೊಡಬೇಂದು ಹೇಳಿದ್ದಾರೆ. ಆದರೆ ಇದು ಅಷ್ಟು ಸರಿಯಾಗಿಲ್ಲ ಎಂದು ಹೇಳಬಹುದು. ಇದಲ್ಲದೆ ಅರ್ಚಕರ ನೇಮಕ ಮಾಡುವಾಗ್ಗೆ ಅವರಿಗೆ ಇಂಥ ಅರ್ಹತೆ ಇರಬೇಕೆಂದು ಮಸೂದೆಯಲ್ಲಿ ನಿಗದಿ ಮಾಡಬೇಕಾದುದು ಅಗತ್ಯ. ಮತ್ತು ಅದಕ್ಕೆ ಅನುಸಾರವಾಗಿ ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಂಥ ಅರ್ಚಕರಿಗೆ ಅರ್ಹತೆ ಇದ್ದು ಲಾಯಖ್ ಆಗಿದ್ದರೆ ನೇಮಕ ಮಾಡಬಹುದು. ಆದುದರಿಂದ ಈ ಒಂದು ಅಂಶವನ್ನು ಆಕ್ಟಿನಲ್ಲಿ ಕೈಬಿಡುವುದು ಸಾಧು ಎಂದು ಅಭಿಪ್ರಾಯಪಡುತ್ತೇನೆ,

ಕೊನೆಯದಾಗಿ ರಿಪೀಲ್ ಅಂಡ್ ಸೇವಿಂಗ್ಸ್ ಸೆಕ್ಷನ್ನಿನಲ್ಲಿ ನಾಲ್ಕೈದು ಆಕ್ಟುಗಳನ್ನು ರಿಪೀಲ್ ಮಾಡಲಾಗುತ್ತಿದೆ. ಸೆಂಟ್ರಲ್ ಆಕ್ಟ್ ರಿಪೀಲ್ ಮಾಡುವುದ ಸಹ ಇದರಲ್ಲಿವೆ. ಈ ರೀತಿ ಮಾಡುವಾಗ್ಗೆ ಮುಸ್ಲಿಂ ಸ್ನೇಹಿತರಅಭಿಪ್ರಾಯದಂತೆ ಅವರ ಧರ್ಮಕ್ಕೂ ಅನ್ವಯಿಸುವ ವರ್ಕ್ಸ್ ಬೋರ್ಡ್ ಸಹ ರದ್ದಾಗುತ್ತದೆ ಮತ್ತು ಎಲ್ಲ ಧಾರ್ಮಿಕ ಸಂಸ್ಥೆಗಳ ಅಸ್ತಿಪಾಸ್ತಿ ನಿಯಂತ್ರಿಸುವುದಕ್ಕೆ ಈ ಮಸೂದೆಯಲ್ಲಿ ಅವಕಾಶವಿರುವಾಗ ಮುಸ್ಲಿಂ ಸ್ನೇಹಿತರ ಮತಕ್ಕೆ ಸಂಬಂಧಪಟ್ಟ ಧಾರ್ಮಿಕ ಸಂಸ್ಥೆಗಳ ವಿಚಾರಣೆಗಾಗಿ ಸಂಸ್ಥಾನದ ಮಟ್ಟದಲ್ಲೂ ವರ್ಕ್ಸ್ ಬೋರ್ಡು ಇರಬೇಕೆಂದು ಹೇಳುವುದು ಸಾಧುವಲ್ಲ.

ಆದ್ದರಿಂದ ಒಂದೊಂದು ಪಂಗಡಕ್ಕೆ ಅಥವಾ ಗುಂಪಿಗೆ ಅಥವಾ ಟ್ರಸ್ಟಿಗೆ ಬೇರೆ ಬೇರೆ ಕಾನೂನು ಮಾಡುವುದರ ಬದಲು ಈ ಮಸೂದೆಯಲ್ಲಿ ಏನು ಏನು ಆಕ್ಟುಗಳನ್ನು ಸೂಚಿಸಿದ್ದಾರ ಅವುಗಳನ್ನು ರಿಪೀಲ್ ಮಾಡಿ, ಈ ಕಾನೂನನ್ನು ತರತಕ್ಕಂಥಾದ್ದು ಎಲ್ಲಾ ದೃಷ್ಟಿಯಿಂದಲೂ ಒಳ್ಳೆಯದಾಗಿದೆ. ಇದರಿಂದ ಎಲ್ಲಾ ಮತಗಳ ಧರ್ಮಗಳು ಮತ್ತು ಸಂಸ್ಥೆಗಳ ಆಡಳಿತವನ್ನು ನಿರ್ವಹಣೆ ಮಾಡತಕ್ಕಂಥ ಒಂದು ಇಲಾಖೆ ನಿರ್ಮಾಣವಾಗುತ್ತದೆ. ಹೀಗೆ ಆಗತಕ್ಕಂಥಾದ್ದು ಈ ಸಂಸ್ಥೆಗಳ ಬೆಳವಣಿಗೆ ದೃಷ್ಟಿಯಿಂದ ಮತ್ತು ಧರ್ಮದ ಬೆಳೆವಣಿಗೆ ದೃಷ್ಟಿಯಿಂದ ಬಹಳ ಅವಶ್ಯಕ. ಈ ಕಾನೂನನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

2 P.M.

[MR. DEPUTY SPEAKER in the Chair.]

ಶ್ರೀ ಜಿ. ಮರುಳಪ್ಪ (ಕಡೂರು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರೆವಿನ್ಯೂ ಮಂತ್ರಿಗಳು ತಂದಿರುವ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಅದರಲ್ಲಿ ಏನಾದರೂ ಸ್ವಲ್ಪ ಸಣ್ಣ ಪುಟ್ಟ ಬದಲಾವಣೆಗಳು ಆಗಬೇಕಾಗಿದ್ದರೆ ಅದನ್ನು ಸಲೆಕ್ಟ್ ಕಮಿಟಿಯವರು ಮಾಡುತ್ತಾರೆ.

ನಿನ್ನೆ ದಿವಸದಿಂದ ಶ್ರೀ ಕೃಷ್ಣಶೆಟ್ಟರು ಮುಂತಾದ ಅನೇಕ ಜನ ಮಾನ್ಯ ಸದಸ್ಯರು ಈ ಮಸೂದೆಯ ಮೇಲೆ ಮಾತನಾಡಿದರು. ಕೆಲವು ಸ್ನೇಹಿತರು ಇದರಲ್ಲಿ ಮುಖ್ಯವಾದ ಅಂಶ ಇಲ್ಲವೇಇಲ್ಲ ಎಂದು ಹೇಳಿದರು; ಅದು ಏನು ಅಂದರೆ ಮಠಾದಿಪತಿಗಳು ರಾಜಕೀಯದಲ್ಲಿ ಭಾಗವಹಿಸುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಏನಾದರೂ ಕಾನೂನು ಮಾಡಬೇಕು. ಅದು ಸರಿಯಲ್ಲ ಎಂದು. ಅವರು ರಾಜಕೀಯದಲ್ಲಿ ಭಾಗವವಹಿಸುತ್ತಿದ್ದಾರೆಂದು ಅನ್ನತಕ್ಕಂಥ ಭಾವನೆ ಬರುವ ಹಾಗೆ ಕೆಲವು ಸ್ನೇಹಿತ ಈ ವಿಷಯವನ್ನು ಸಭೆಯ ಮುಂದಿಟ್ಟರು. ನನಗೆ ಅನ್ನಿಸುತ್ತದೆ ಯಾವ ಕಾರಣದ ಮೇಲೆ ಮಠಾದಿಪತಿಗಳು ರಾಜಕೀಯದಲ್ಲಿ ಭಾಗವಹಿಸುತ್ತಾರೆಂದು ತೀರ್ಮಾನವನ್ನು ಮಾಡುತ್ತಾರೆ? ಮಠಾದಿಪತಿಗಳು ಅವರೂ ಮನುಷ್ಯರೇ, ಅವರಿಗೂ ದೇಶದಲ್ಲಿ ಅಸ್ತಿತ್ವವಿರುತ್ತದೆ. ಅವರಿಗೂ ಓಟು ಮಾಡತಕ್ಕಂಥ ಹಕ್ಕಿದೆ, ಅದನ್ನು ಯಾವ ಕಾನ್‌ಸ್ಟಿಟ್ಯೂಷನ್ನೂ ಬದಲಾವಣೆ ಮಾಡಿಲ್ಲ. ಅವರಿಗೆ ಮಾತಕೊಡುವುದಕ್ಕೆ ಹಕ್ಕಿಲ್ಲವೆಂದು ಯಾರೂ ಸಾರಿಲ್ಲ. ಅವರು ರಾಜಕೀಯದಲ್ಲಿ ಪ್ರವೇಶಿಸಿದ್ದಾರೆಂದು ಅವರು ಆಡಳಿತ

ಪಕ್ಷಕ್ಕಾಗಲೀ ಅಥವಾ ತದ್ವಿರುದ್ಧವಾದ ಪಕ್ಷಗಳಿಗಾಗಲೀ ಮತನೀಡಿದ್ದಾರೆಂಬ ಭಾವನೆಯಿಂದ ಹೇಳುತ್ತಿದ್ದಾರೆಯೇ? ಈ ಮಠಾದಿಪತಿಗಳು ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪನೆ ಮಾಡಿದ್ದಾರೆ. ಆ ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥವರು ಅಥವಾ ಆ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಅಲ್ಲಿ ಓದಿ ಬೇರೆ ಕಡೆ ಇರುವವರು, ರಾಜಕೀಯದಲ್ಲಿ ಭಾಗ ವಹಿಸಿದರೆ ಈ ಮಠಾದಿಪತಿಗಳು ಭಾಗವಹಿಸುತ್ತಿದ್ದಾರೆಂದು ಆ ಮಠಗಳಿಗೆ ಆಗದವರು ಪ್ರಸಂಗಳಿಗೆ ಏನಾದರೂ ಕೈಹಾಕಿದ್ದಾರೆಯೊ ಒಂದು ಸಂಸ್ಥೆಯ ವಿದ್ಯಾರ್ಥಿಗಳು ಒಂದು ಒಂದು ಪ್ರತ್ಯೇಕ (particular) ಮತಕ್ಕೆ ಸೇರಿದ್ದರೆ, ಆ ಮಠಾಧಿಪತಿಗಳು ರಾಜಕೀಯದಲ್ಲಿ ಭಾಗವಹಿಸುತ್ತಿದ್ದಾರೆಂದು ತೀರ್ಮಾನ ಮಾಡುತ್ತಾರೆಯೇ. ವೀರಶೈವರಿಗೆ ಒಂದು ಧರ್ಮವಿದೆ. ಆ ಸಂಸ್ಥೆಗಳ ಗುರುಗಳಲ್ಲಿಗೆ ಹೋಗಿ ''ಕ್ರಿಯ'' ತೆಗೆದುಕೊಳ್ಳುತ್ತಾರೆ. ಹಾಗೆಂದರೆ ಪಾದಪೂಜೆ ಮಾಡುವುದು. ಒಂದು ವೇಳೆ ಚುನಾವಣೆ ಟೈಮಿನಲ್ಲಿ ಯಾರಾದರೂ ರಾಜಕರಣಿಗಳು ಅವರ ಮಠದ ಸ್ವಾಮಿಗಳಿಗೆ ಪಾದಪೂಜೆ ಮಾಡಿದರೆ, ಆ ಸ್ವಾಮಿಗಳು ರಾಜಕೀಯದಲ್ಲಿ ಒಳಗೊಳಗೇ ತೊಡಗಿದ್ದಾರೆಂದು ಏನಾದರೂ ತೀರ್ಮಾನಕ್ಕೆ ಬಂದು ಈ ರೀತಿ ಅವರ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆಯೇ? ಮಠಾಧಿಪತಿಗಳು ರಾಜಕೀಯಕ್ಕೆ ಕೈಹಾಕಬಾರದೆಂದು ಯಾವ ಕಾನೂನೂ ಹೇಳುವುದಿಲ್ಲ. ಅವರಿಂದ ಆ fundamental rightನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ? ಯಾವ ಆಧಾರದಮೇಲೆ ನಮ್ಮ ಸ್ನೇಹಿತರು ಮಠಾಧಿಪತಿಗಳಿಗೆ ರಾಜಕೀಯದಲ್ಲಿ ಭಾಗ ವಹಿಸಲು ಹಕ್ಕಿರಬಾರದು, ಅದನ್ನು ಪ್ರತಿಬಂಧಿಸಬೇಕೆಂದು ಈ ರೀತಿ ಮಾತನಾಡುತ್ತಾರೆ? ಅವರ ವಾದವಂತೂ ನನಗೆ ಅರ್ಥವಾಗುವುದಿಲ್ಲ. ಇದು ಯಾರು ಯಾರೋ ವ್ಯಕ್ತಿಗಳನ್ನು ದೃಷ್ಟಿಯಲ್ಲಿಟ್ಟು ಮಾತನಾಡಿದುದರ ಪರಿಣಾಮ. ಯಾರಾದರೂ ಅಧಿಕಾರಕ್ಕೆ ಬಂದರೆ ಅಥವಾ ಅಧಿಕಾರ ಬಿಟ್ಟಿದ್ದರೆ, ಅಥವಾ ಅಧಿಕಾರದಲ್ಲಿದ್ದರೆ ಅವರಿಗೆ ಯಾವುದಾದರೂ particular ಮಠದ ಮೇಲೆ ಏನಾದರೂ ಭಾವನೆ ಇದ್ದಲ್ಲಿ ಅವರು ಏನು ಮಾಡಿದರೂ, ಅವರು ಸೇರಿದ ಮಠದವರು ರಾಜಕೀಯದಲ್ಲಿ ಕೈಹಾಕುತ್ತಾರೆ. ಬೇರೆಯವರಿಗೆ ಅಡ್ಡಿಬರುತ್ತಾರೆ, ತೊಂದರೆ ಮಾಡುತ್ತಾರೆಂಬ ಭಾವನೆ ಬಂದೇ ಬರುತ್ತದೆ. ಇವತ್ತು ಒಬ್ಬರಿಗೆ ಆ ಭಾವನೆ ಬಂದರೆ, ಅವರು ಹೋಗಿ ನಾಳೆ ದಿವಸ ಬೇರೆಯವರು ಅಧಿಕಾರಕ್ಕೆ ಬಂದರೆ ಅವರನ್ನೂ ಅದೇ ಸಂಶಯ ದೃಷ್ಟಿಯಿಂದ ನೋಡುತ್ತಾರೆ. ಆದ್ದರಿಂದ ಯಾರಾದರೂ ಸಲಹೆ ಮಾಡಿದರು ಅನ್ನುವ ದೃಷ್ಟಿಯಿಂದ, ಮಠಾಧಿಪತಿಗಳು ರಾಜಕೀಯದಲ್ಲಿ ಕೈಹಾಕಬಾರದು, ಅವರ ಈ fundamental ರೈಟಿಗೆ ಧಕ್ಕೆ ಬರುವಂಥ ಕಾನೂನು ಮಾಡಬೇಕು ಎಂದು ಏನಾದರೂ ಹೇಳಿದರೆ, ಅದು ಅಷ್ಟು ಒಳ್ಳೆಯದಲ್ಲ ಮತ್ತು ಅದರಿಂದ ಒಳ್ಳೆಯ ಪರಿಣಾಮವಾಗುವುದಿಲ್ಲ. ಹಾಗೆ ಮಾಡಿದರೆ ಹೆಚ್ಚಿಗೆ ವಿರುದ್ಧ ಪರಿಣಾಮ ಗಳಾಗಬಹುದು. ರಾಜಕೀಯದಲ್ಲಿ ಯಾವ ಮಠಾಧಿಪತಿಗಳು ಕೈಹಾಕುವುದಿಲ್ಲ. ಮಠಾಧಿಪತಿಗಳಿಗೆ ಅನಾವಶ್ಯಕವಾಗಿ ತೊಂದರೆ ಕೊಡಬೇಕೆಂದು ಹೀಗೆ ಮಾತನಾಡುತ್ತಿದಾರೆ. ಮಠಾಧಿಪತಿಗಳ ವಿರುದ್ಧ ವಿನಾಕಾರಣ ಅಪಪ್ರಚಾರ ಮಾಡುವ ಒಂದು ವೃತ್ತಿ ಕೆಲವರಿಗಿದೆ ಅದರಲ್ಲಿ ಅವರು ಜೀವನ ನಡೆಸುತ್ತಾರೆ. ಇವರಿಗೆ ಧರ್ಮವೇ ಒಂದು ಹೆಡಂಭೂತ. ಮಹಾತ್ಮ ಗಾಂಧಿಯವರು ಹೇಳಿದ ಹಾಗೆ ರಾಜಕೀಯಕ್ಕೂ ಸತ್ಯ ಮತ್ತು ಅಹಿಂಸೆಯೇ ತಳಹದಿ. ಚುನಾವಣೆಯಲ್ಲಿ ಗೆಲ್ಲುವುದು ಸೋಲುವುದು ಈ ಧ್ಯೇಯಗಳ ಮೇಲೆ ಇರುತ್ತದೆಯೇ ವಿನಾ ಮಠಾಧಿಪತಿಗಳು ರಾಜಕೀಯದಲ್ಲಿ ಕೈಹಾಕಿದರೆ ಒಂದು ಚುನಾವಣೆಯಲ್ಲಿ ಗೆಲ್ಲಬಹದು ಸೋಲಬಹುದು ಎನ್ನುವುದು ಸುಳ್ಳು. ಇದಕ್ಕೋಸ್ಕರ ಮಠಾಧಿಪತಿಗಳ ಫಂಡಮೆಂಟಲ್ ರೈಟುಗಳನ್ನು ಮೊಟಕು ಮಾಡುವುದು ಧರ್ಮವಲ್ಲ. ಹೀಗೆ ಮಾಡುವುದಕ್ಕೆ ಪ್ರಯತ್ನ ಮಾಡುವುದು ಪ್ರಜಾಪ್ರಭುತ್ವದಲ್ಲಿ ಎಷ್ಟರ ಮಟ್ಟಿಗೆ ಸಾಧುವಾದುದು ಎನ್ನುವುದನ್ನು ಯೋಚನೆ ಮಾಡಬೇಕು.

ಈ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ನುಗಳು ಬ್ರಿಟಿಷರ ಕಾಲದಿಂದ ಕೂಡ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಬಂದಿವೆ. ಈಗ ಕ್ರಿಶ್ಚಿಯನ್ ಸಂಸ್ಥೆಗಳನ್ನೇ ತೆಗೆದು ಕೊಳ್ಳಿ ಅವು ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು, ಆಸ್ಪತ್ರೆಗಳನ್ನು ಕಟ್ಟಬೇಕು ಎಂದು ಯಾವ ಕಾನೂನೂ ಇರಲಿಲ್ಲ; ಕಟ್ಟಲೆಯೂ ಇರಲಿಲ್ಲ. ಅವರು ಒಂದು ಧರ್ಮ ಬುದ್ಧಿಯಿಂದ ಮಾಡಿದರು. ಅದೇ ರೀತಿಯಲ್ಲಿ ಕರ್ಣಾಟಕದಲ್ಲಿ ಅನೇಕ ಮಠಗಳು ಒಳ್ಳೆ ಒಳ್ಳೆಯ ಕೆಲಸ ಮಾಡಿವೆ. ಅನೇಕ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿವೆ. ಹಾಸ್ಟಲುಗಳನ್ನು ನಡೆಸಿ ಸಹಸ್ರಾರು ವಿದ್ಯಾರ್ಥಿಗಳನ್ನು ಓದಿಸಿ ದೊಡ್ಡ ದೊಡ್ಡ ವಿದ್ಯಾವಂತರನ್ನಾಗಿ ಮಾಡಿವೆ. ತೋಟದಪ್ಪನವರೇ ತೆಗೆದು ಕೊಳ್ಳಿ ಅವರು ಟ್ರಸ್ಟ್ ಮಾಡಬೇಕೆಂದು ಯಾವ ಕಾನೂನು ಹೇಳಿತ್ತು? ಆದರೂ ಉದಾರವಾದ ಲೋಕೋಪಕಾರ ಕೆಲಸಗಳನ್ನು ಮಾಡಿಕೊಂಡು ಬಂದರು ಸುತ್ತೂರು ಮಠದ ಸ್ವಾಮಿಗಳು ಎರಡು ಸಹಸ್ರ ಜನಕ್ಕೆ ಅನ್ನ ಹಾಕುತ್ತಾ ಇದ್ದಾರೆ. 10–20 ಹೈಸ್ಕೂಲುಗಳನ್ನು ನಡೆಸುತ್ತಾ ಬಂದಿದ್ದಾರೆ.

ಇನ್ನೊಂದು ದೃಷ್ಟಿಯಿಂದ ಹೇಳುವುದಾದರೆ ಇಂಥ ಬುದ್ಧಿ ನಮ್ಮ ಸ್ನೇಹಿತರಿಗೆ ಬರುವಂಥಾದ್ದು ಒಳ್ಳೆಯದಲ್ಲ. ಯಾರು ದೇಶದ ಪುರೋಭಿವೃದ್ಧಿಗೆ ಕೆಲಸ ಮಾಡಿದ್ದಾರೆ ಅಂಥವರಿಗೆ ಹೆಚ್ಚಿಗೆ ಮಹತ್ವ

(ಶ್ರೀ ಜಿ. ಪಾರುಳಪ್ಪ)

ಹೆಚ್ಚಿಗೆ ಪ್ರೋತ್ಸಾಹ ಕೊಡಲು ಇದರಲ್ಲಿ ಏನಾದರೂ ಅವಕಾಶವಿದ್ದರೆ ಬಹಳಒಳ್ಳೆಯದು. ರಾಮಕೃಷ್ಣ ಮಿಷನ್ನಿನವರು ವಿದ್ಯಾ ಪ್ರಗತಿಗೆ ಬಹಳ ಕೆಲಸ ಮಾಡಿದ್ದಾರೆ. ಇಲ್ಲಿ ಕೆಲವು ಕ್ರಿಶ್ಚಿಯನ್ ಸ್ಕೂಲು ಗಳಲ್ಲಿ ಸೀಟೇ ಸಿಕ್ಕುವುದಿಲ್ಲ. ಆ ಸ್ಕೂಲುಗಳಲ್ಲಿ 3-4 ವರ್ಷಗಳ ಮುಂಚಿತವಾಗಿ ಕೇಳಿದಷ್ಟು ಫೀಸ್ ಕೊಟ್ಟು ಸೀಟು ರಿಜರ್ವ್ ಮಾಡುತ್ತಾರೆಂದು ಹೇಳಿದರೆ, ಅದು ಜಾತಿವಾದ ಎಂದು ಹೇಳುವುದಕ್ಕಾಗು ತ್ತದೆಯೇ? ಸರ್ಕಾರದ ಆಡಳಿತದಲ್ಲಿರುವ ಸ್ಕೂಲುಗಳಿಗಿಂತ ಅಲ್ಲಿಯವರು ಅತ್ಯಂತ ಸಮರ್ಥತೆಯಿಂದ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಕೊಡುತ್ತಾರೆ ಮತ್ತು ಚೆನ್ನಾಗಿ ಕೆಲಸಮಾಡುತ್ತಾರೆ, ಅಲ್ಲಿಗೆ ಕಳುಹಿಸಿ ದರೆ, ತಮ್ಮ ಮಕ್ಕಳು ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಮುಂದುವರಿಯುತ್ತಾರೆಂಬ ಸದುದ್ದೇಶದಿಂದ ಕಳುಹಿಸುತ್ತಾರೆ. ಜಾತಿಯ ಆಧಾರದಮೇಲೆ ಯಾರು ಮಾಡುತ್ತಾರೆ? ಆ ಮಾತೇಇಲ್ಲ, ಕರ್ಣಾಟಕ ದಲ್ಲಿರತಕ್ಕಂಥ 1,400 ಹೈಸ್ಕೂಲುಗಳಲ್ಲಿ 400 ಹೈಸ್ಕೂಲುಗಳನ್ನು ಹೆಚ್ಚು ಕಡಿಮೆ, ಸಾಧಾರಣವಾಗಿ ಮಠಾಧಿಪತಿಗಳೆ ನಡೆಸುತ್ತಾ ಬಂದಿದ್ದಾರೆ; ಮೊದಲನಿಂದಲೂ ನಡೆಸಿಕೊಂಡು ಬಂದಿದ್ದಾರೆ. ಕೆಲವರಂತೂ ಸ್ವಾತಂತ್ರ್ಯ ಬರುವುದಕ್ಕೆ ಮೊದಲೇ ಮಹಾತ್ಮ ಗಾಂಧಿಯವರು ಏನು ತತ್ವಗಳನ್ನು ಹೇಳುತ್ತಿದ್ದರು ಅವುಗಳನ್ನು ಅನುಸರಿಸಿ, ಜಾತ್ಯಾತೀತ ರಾಷ್ಟ್ರ ಕಟ್ಟುವ ಮನೋಭಾವನೆಯಿಂದ ರಚ ನಾತ್ಮಕ ಕೆಲಸಗಳನ್ನು ಮಾಡುತ್ತಾ ಬಂದಿದ್ದಾರೆ. ಅವರು ಇವತ್ತಿನ ದಿವಸ ಕೆಲವರ ದೃಷ್ಟಿಯಲ್ಲಿ ಮಹಾ ಪಾಪಿಗಳು, ದೇಶದ್ರೋಹಿಗಳು, ರಾಜದ್ರೋಹಿಗಳು ಆಗಿಬಿಟ್ಟಿದ್ದಾರೆ. ಯಾರ್‍ಯಾರು ತಮ್ಮ ಮತವನ್ನು ಬೆಳೆಸಿಕೊಂಡು, ಪ್ರೋತ್ಸಾಹಿಸಿ, ಇಲ್ಲದ ಸಲ್ಲದ ಕೀಟಲೆಗಳನ್ನು ಮಾಡಿ ಇನ್ನೂ ಮತೀಯ ದೃಷ್ಟಿ ಇಟ್ಟು ಕೊಂಡಿದ್ದಾರೆಯೋ ಅವರು ಸತ್ಯವಾದಿಗಳು, ಧರ್ಮಿಗಳು, ನೀತಿವಂತರು ಎಂದು ಎನ್ನಿಸಿಕೊಂಡು ಬರುತ್ತಿದ್ದಾರೆ. ಈ ಬಿಲ್ಲಿನಲ್ಲಿ ಏನಾದರೂ ಅಲ್ಪಸ್ವಲ್ಪ ಬದಲಾವಣೆಗಳಿದ್ದರೆ ಅವನ್ನು ಮಾಡಿಕೊಳ್ಳಬಹುದೇ ಹೊರತು, ಯಾರಾದರೂ ಮಠಾಧಿಪತಿಗಳಿಗೆ ಫಂಡಮೆಂಟಲ್ ರೈಟ್ಸ್ ಅನುಭವಿಸಲು ಅಧಿಕಾರವಿಲ್ಲ, ಅವರು ರಾಜಕೀಯ ಮಾತನಾಡಬಾರದು. ಆ ಹಕ್ಕು ನಮಗೆ ಮಾತ್ರವಿದೆ ಎಂದು ಮೈಸೂರು ಸಂಸ್ಥಾನದಲ್ಲಿ ಅವರ ಹಕ್ಕನ್ನು ಅಡಗಿಸಲು ಪ್ರಯತ್ನ ಪಡುವುದಾ ದರೆ ಅದರಿಂದ ಕ್ಷೇಮಕರ ಪರಿಣಾಮಗಳಾಗುವುದಿಲ್ಲ.

ಇದರಿಂದ ಒಳ್ಳೆಯದಾಗುವುದರ ಬದಲು ದೊಡ್ಡ ಕೆಡಕು ನಮ್ಮ ದೇಶದಲ್ಲಿ ಉಂಟಾದೀತು. ದಯವಿಟ್ಟು ಇಂಥದ್ದಕ್ಕೆ ಸರ್ಕಾರದವರು ಗಮನಕೊಡಬಾರದೆಂದು ವಿನಂತಿಸಿಕೊಳ್ಳುತ್ತೇನೆ.

ಸ್ವಾಮಿ ಈ ಬಿಲ್ಲಿನ ಕ್ಲಾಸ್ (2) ರಲ್ಲಿ ಹೀಗೆ ಹೇಳಿದೆ :

> "charitable purpose" includes relief of poverty or distress, advancement of education, medical relief and the advancement of any other object of general public utility, but does not include a purpose which relates exclusively to sports or to religious teaching or worship."

ನಾವು ತಿಳಿದಮಟ್ಟಿಗೆನೋಡಿದರೆ ಮುಜರಾಯಿ ಸಂಸ್ಥೆಯಲ್ಲಿ ಸೇರಬೇಕಾದರೆ ಯಾವುದಾದರೂ ಒಂದು ಪರ್ಪಸ್ ಇರಲೇಬೇಕು.

ಎಂದರೆ ಪೂಜೆ ಧಾರ್ಮಿಕ ಕೆಲಸಗಳಲ್ಲಿ ಬರುತ್ತದೆ. ಅದು ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿದೆ. ಗುಲ್ಬರ್ಗದ ಚನ್ನಬಸವೇಶ್ವರ ದೇವಸ್ಥಾನ, ಮುರುಘಿ ಮಠದ ಕರ್ತರ ಗದ್ದುಗೆ ಇಂಥವು ಪೂಜೆ ಮಾಡಿಸತಕ್ಕ ಸ್ಥಳಗಳು. ಅಲ್ಲಿ ಪೂಜೆ ಮಾಡಿಸುವುದರಿಂದ ಬಹಳ ಕಷ್ಟಗಳು ನಿವಾರಣೆ ಯಾಗುತ್ತವೆ, ಅವು ಪುಣ್ಯ ಕ್ಷೇತ್ರಗಳು ಎನ್ನತಕ್ಕ ಅಭಿಪ್ರಾಯ ಮೊದಲನಿಂದಲೂ ಬೆಳೆದುಕೊಂಡು ಬಂದಿವೆ. ಅಲ್ಲಿ ಪೂಜೆ ಮಾಡಲೇಬೇಕು! ಅದಕ್ಕೆ ತಕ್ಕಷ್ಟು ಸಿಬ್ಬಂದಿ ಇರಲೇಬೇಕು, ಅಲ್ಲಿಯ ಕೆಲಸ ಕಾರ್ಯಗಳನ್ನು ನಡೆಸಲಿಕ್ಕೆ ಅಲ್ಲಿ ಬರುವ ವರಮಾನವನ್ನು ಪೂಜಾ ಕಾರ್ಯಗಳಿಗೆ ಖರ್ಚು ಮಾಡುವುದಾದರೆ ನಾವು ಒಪ್ಪುವುದಿಲ್ಲವೆಂದರೆ ಆ ಸಿಬ್ಬಂದಿ ಹೇಗೆ ಬಾಳಬೇಕು? Worship ಮುಂತಾದುವು fundamental rights, constitutional right ಎಂದು ನಾವು ರಾಜ್ಯಾಂಗ ದಲ್ಲಿ ಒಪ್ಪಿಕೊಂಡಿದ್ದೇವೆ. ಹೀಗಿರುವಾಗ ನಾವು ಅದನ್ನು ಒಪ್ಪುವುದಿಲ್ಲ, ಒಪ್ಪುವುದಕ್ಕಾಗುವುದಿಲ್ಲ ಎಂದು ಈ ಮಸೂದೆಯನ್ನು ತಂದರೆ ಅದು ಎಷ್ಟರಮಟ್ಟಿಗೆ ಉಳಿಯಬಹುದು ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಯೋಚಿಸಬೇಕಾಗಿದೆ.

ಈ ಕಾನೂನನ್ನು ಮಾಡಬೇಕಾದರೆ ನಮಗಿರತಕ್ಕ fundamental right ಏನು, constitutional right ಏನು, ಅದಕ್ಕೂ ಇದಕ್ಕೂ ಏನು ವ್ಯತ್ಯಾಸವಾಗುತ್ತದೆ, ರಾಜ್ಯಾಂಗ

ದತ್ತವಾದ ಮೂಲಭೂತ ಹಕ್ಕನ್ನು ದೇಶೀಯ ಸಂಸ್ಥಾನಗಳಲ್ಲಿ ಇಂಥ ಮಸೂದೆಯನ್ನು ತಂದು ಬದಲಾಯಿಸಬೇಕಾಗಿದೆ ಎಂದು ಯೋಚನೆಮಾಡಿ ಆ ಅಂಶಗಳನ್ನು ಇಲ್ಲಿ ಸೇರಿಸತಕ್ಕದ್ದು ಉತ್ತಮ. ಇಲ್ಲದೆ ಹೋದರೆ ಕೋರ್ಟಿನಲ್ಲಿ ಇದು ಯಾವುದೂ ನಿಲ್ಲುವುದಿಲ್ಲ.

ಮತ್ತೊಂದು ವಿಷಯವೇನೆಂದರೆ ಮಂತ್ರಿಗಳು ಹೇಳಿದ್ದಾರೆ: ಇದಕ್ಕೆ ಸರ್ಕಾರದ ಕಡೆಯಿಂದ ದುಡ್ಡು ಖರ್ಚಾಗುವುದಿಲ್ಲ, ಇದಕ್ಕೆಲ್ಲ ಅವರಿಂದಲೇ ದುಡ್ಡನ್ನು ವಸೂಲ್ಮಾಡುತ್ತೇವೆ, ಅದರಿಂದಲೇ ಖರ್ಚು ಮಾಡುತ್ತೇವೆ ಎಂದು. ಈ ಬಿಲ್ಲಿನಲ್ಲಿ ಒಂದು ಕಡೆ ಹೇಳುತ್ತಾರೆ ಒಟ್ಟು ವರಮಾನದ ಶೇಕಡ ಎಂಟರಷ್ಟು ಸರ್ಕಾರಕ್ಕೆಕೊಡಬೇಕು ಎಂದು. ನಿವ್ವಳ ವರಮಾನದ ಮೇಲೆ ತೆರಿಗೆಗಳನ್ನು ಹಾಕಿ ವಸೂಲ್ಮಾಡತಕ್ಕ ಪದ್ಧತಿ ಇದೆ. ಒಟ್ಟು ವರಮಾನದ ಮೇಲೆ ವಸೂಲ್ಮಾಡತಕ್ಕದ್ದು ಸರಿಯೇ ಅಥವಾ ನಿವ್ವಳ ವರಮಾನದ ಮೇಲೆ ವಸೂಲ್ಮಾಡತಕ್ಕದ್ದು ಸರಿಯೇ ಎನ್ನುವುದನ್ನು ಪ್ರವೀಣರಾಗಿರತಕ್ಕ ನ್ಯಾಯ ಶಾಸ್ತ್ರದಲ್ಲಿ ತಜ್ಞರಾಗಿರುವವರು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಈಗಾಗಲೇ ಬೇಕಾದಷ್ಟು ಜನ ಅಡಿಷನಲ್ ಡೆಪ್ಯುಟಿ ಕಮಿಷನರನ್ನು ನೇಮಕ ಮಾಡುತ್ತ ಬಂದಿದ್ದೀರಿ. ಮೊದಲು ಡೆಪ್ಯುಟಿ ಕಮಿಷನರಿಗೆ ಇದ್ದ ಅಭಿವೃದ್ಧಿ ಕಾರ್ಯಗಳು, ಸಾರಿಗೆಗೆ ಸಂಬಂಧಪಟ್ಟ ವ್ಯವಹಾರಗಳು ಇವುಗಳಿಗೆಲ್ಲ ಬೇರೆ ಬೇರೆ ಇಲಾಖೆಗಳನ್ನು ಮಾಡಿದ್ದೀರಿ. ಒಂದು ಜಿಲ್ಲೆಯಲ್ಲಿ ಧಾರ್ಮಿಕ ಸಂಸ್ಥೆಗಳು ಕೇವಲ ಆರೋ, ಎಂಟೋ ಹತ್ತೋ ಸಿಕ್ಕಬಹುದು. ಅದಕ್ಕಿಂತ ಹೆಚ್ಚಿಗೆ ಸಿಕ್ಕಲಾರವು. ಇದಕೋಸ್ಕರ ಒಂದು ಇಲಾಖೆಯನ್ನೇ ಮಾಡಿ ಅದಕ್ಕೆ ಒಬ್ಬ ಐ. ಎ. ಎಸ್. ಅಥವಾ ಎಂ. ಸಿ. ಎಸ್. ಅಧಿಕಾರಿಯನ್ನು ಹಾಕಿ ಯಾರು ಯಾರಿಗೆ ಜಾಗ್ರತೆಯಾಗಿ ಪ್ರಮೋಷನ್‌ಕೊಡಬೇಕು, ಯಾರಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂದು ತಿಳಿದುಕೊಂಡು ಹೊಸದಾಗಿ ಈ ಒಂದು ಇಲಾಖೆಯನ್ನು ಮಾಡಿ ಹೆಚ್ಚು ನೌಕರಿಗಳನ್ನುಕೊಡಬೇಕೆಂದು ಮಾಡಿದ್ದಾರೆಂದು ಕಾಣುತ್ತದೆ. ಆ ರೀತಿ ಮಾಡಬಾರದು. ಈಗಿರತಕ್ಕವರಿಗೆ ಕೆಲಸ ಕಡಮೆ ಯಾಗುತ್ತಿದೆ, ಸಂಬಳ ಜಾಸ್ತಿಯಾಗುತ್ತಿದೆ. ಈಗಿರುವವರಿಗೇ ಧಾರ್ಮಿಕ ಸಂಸ್ಥೆಗಳ ಕೆಲಸವನ್ನೂಕೊಡಬೇಕೇ ಹೊರತು ಆ ಸಂಸ್ಥೆಗಳಿಂದ ಸೇಕಡಾವಾರು ವಸೂಲ್ಮಾಡುವ ಹಣವನ್ನು ಬೇರೆ ವಿಧವಾದ ಖರ್ಚುಗಳಿದ್ದರೆ ಅವಕ್ಕೆ ಉಪಯೋಗಿಸಬೇಕಾಗಿದೆ. ಇದಕ್ಕಾಗಿಯೇ ಪ್ರತ್ಯೇಕವಾಗಿ ಒಂದು ಇಲಾಖೆಯನ್ನು ನಿರ್ಮಾಣ ಮಾಡಿ ಸಂಸ್ಥೆಗಳಿಂದ ವಸೂಲ್ಮಾಡಿದ ದುಡ್ಡನ್ನೆಲ್ಲ ಖರ್ಚು ಮಾಡಬೇಕೆಂದಿರುವುದನ್ನು ಕೈ ಬಿಡಬೇಕೆಂದು ಹೇಳುತ್ತೇನೆ.

ಈ ಮಸೂದೆ ಸೆಲೆಕ್ಟ್ ಕಮಿಟಿಯಿಂದ ಬರುವುದಕ್ಕೆ ಮೊದಲು ಒಂದು ಕೆಲಸ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ದೊಡ್ಡ ದೊಡ್ಡ ಮುಜರಾಯಿ ಸಂಸ್ಥೆಗಳಿರುವ ಕಡೆಗೆ ಈ ಬಿಲ್ಲನ್ನು ಕಳಿಸಿ ಅವರ ಅಭಿಪ್ರಾಯವನ್ನು ಕೇಳಿ, ಇದರಿಂದ ನಿಮಗೆ ಏನು ತೊಂದರೆ ಇದೆ, ಇದರಲ್ಲಿ ಒಳ್ಳೆಯದು ಯಾವುದು ? ಕೆಟ್ಟದ್ದು ಯಾವುದು ? ನಿಮ್ಮ ಸಲಹೆಗಳನ್ನುಕೊಡಿ ಎಂದು ಅವರ ಸಲಹೆಗಳನ್ನು ತೆಗೆದುಕೊಂಡು—ಅವರ ಸಲಹೆಗಳನ್ನು ಒಪ್ಪಬಹುದು ಅಥವಾ ಬಿಡಬಹುದು, ಅವರು ನಿಮಗೆ ತಿಳಿಯದೆ ಇರುವ ಒಳ್ಳೆಯ ಸಲಹೆಗಳನ್ನುಕೊಡಬಹುದು—ಅವನ್ನು ಸೆಲೆಕ್ಟ್ ಕಮಿಟಿಯ ಮುಂದೆ ಇಟ್ಟು ಸೂಕ್ತವಾದ ಬದಲಾವಣೆಗಳನ್ನು ಮಾಡಬೇಕೆಂದು ಹೇಳಿ ಈ ಮಸೂದೆಯನ್ನು ಸ್ವಾಗತಿಸಿ, ಇದನ್ನು ತಂದಿರುವ ಮಂತ್ರಿಗಳನ್ನು ಅಭಿನಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri KADIDAL MANJAPPA (Sringeri).—Mr. Speaker, Sir, after listening to the speeches of some Hon'ble Members, I was tempted to participate in the Debate and say a few words in support of this Bill. Some Hon'ble Members were of the view that this Bill would interfere with the day to day religious activities or practices of the religious institutions. As the Hon'ble Minister has already said, this Bill is intended to enact a uniform law in the State on this subject and to ensure proper management of religious institutions and to prevent misapplication, misappropriation and such other malpratices in these institutions.

According to the scheme of the Bill, Institutions and Trusts are divided into three categories. The first category of institutions are the ordinary institutions. The second category consists of those that are called 'Notified Institutions' and the third group of the institutions are the Mutts and similar institutions. In the Bill, provisions have been made for the appointment of a Commissioner, Deputy Commissioners and

(SRI.KADIDAL MANJAPPA)

Assistant Commissioners and subordinate officers. These officers will function under the provisions of this Bill. There is provision in the Bill for registering religious and charitable institutions and trusts in every district are for every two or three districts, there may be a Registration Office. The religious trusts and institutions will have to be registered under the provisions of the Bill. The Trustee or the Manager has to maintain correct accounts and has to submit the budget every year or once in three years and the accounts maintained by the Trustees and Managers have to be audited in accordance with the rules to be prescribed. These audit reports will be scrutinised by the Assistant Commissioners and the Deputy Commissioners and rectification will have to be made according to the directions of the Assistant Commissioner or the Deputy Commissioner. These provisions apply to the ordinary institutions and trusts.

The second category of instituions are Notified Institutions which derive help from Government either in the shape of grant or in the shape of inams or tasdik allowance. Such institutions are dealt with in Chapter VII of the Bill.

In the case of these institutions, Government have larger powers with regard to their management. Trustees will have to be appointed under the provisions of the Bill and the trustees will carry out the object of the trust and manage the trust properties. There is provision for the removal of the trustees and the appointment of hereditary *Archaks* or other servants. One Hon'ble Member observed that heriditary rights should not be recognised in the year of Grace, 1963. I entirely agree with him but in certain cases the person or persons who have created the trust laid down a condition that the Members of a particular family or families should have something to do with the management of the trust. In such cases the hereditary right will have to be recognised. There are cases in which some of the offices, including those of *Archaks*, have been held for generations as hereditary offices. In such cases also, Goverment felt it was necessary to recognise those rights. Apart from these two categories, generally, the presumption is not to recognise hereditary rights under this Bill.

There is provision for creating or establishing a fund. The fund will consist of contributions to be given by the trustees and institutions and also fees like licence fee collected under the provisions of the Bill. This fund will be spent for the benefit of the trusts or institutions. There are a number of institutions in the State.—I believe there are nearly 40,000 temples and churches–people frequently request the Government to grant money for the upkeep or repair of the institutions and temples. Government found it difficult to meet the requests. Therefore provision is made for the establishment of a fund. The scheme is self-supporting. There is no idea of throwing additional burden on the State exchequer. My friend Sri Marulappa was saying that Government

was going to create a new Department with additional burden on the State Exchequer. There is no such idea at all. As I observed earlier, the scheme is self-supporting.

Another suggestion was made that the surplus income of these institutions should be spent for educational purposes. I entirely agree with this idea but at the time the Bill was drafted, the legal *pundits* were against the incorporation of a clause to this effect. They brought to the notice of the Government that there are a few decisions of the Supreme Court that bar the application of the funds of these institutions for secular purposes. I have gone through the law on the subject and personally I feel it is possible to incorporate a clause enabling the surplus trust funds to be applied for educational purposes, in the area in which the institution is situated.

The third group of institutions are the mutts. In the case of muts Government will not come into the picture unless the Manager himself comes forward with an application that the management of the properties of the Mutt should be taken over by Government or when the manager has ceased to function or when he is a minor and no legal Guardian is appointed or when there is gross mismanagement and the disciples of the institution complain to the Government that the manager or trustee should be removed. Only in such cases Government can interfere. There are safeguards in favour of those institutions. As I submitted, it is not the intention of the Bill that the Government or its officers should interfere in the day-to-day religious practices of any community or sect.

One Hon'ble Member was pleased to say that the contribution of 8 percent was exhorbitant. The Select Committee may consider the suggestion to reduce the percentage, to 5 per cent. I think 5 per cent would be reasonable though the Bill provides for collection of contribution upto 8 per cent.

I fail to understand how this Bill would affect the fundamental rights of the citizens guaranteed under the Constitution. We have declared that our country is a secular State. Though we have made that declaration, religious sentiments pervade the day-to-day life of the majority of the people of this country. Therefore we will have to tolerate these things without wounding the religious sentiments of the people. At the same time, there is nothing in the Bill which affects fundamental rights. Only when the Manager or the Trustee acts against the interests of the institutions, Government will step in and take suitable steps to see that the management is done properly, that the accounts are maintained properly, that those accounts are audited properly and that the funds are not misapplied or misused. Therefore, I feel that the Bill deserves the support of the House. The Bill is going to the Select Committee and the suggestions made can be taken into consideration there.

With regard to certain provisions contained in the Bill, my friend Sri Basappa found fault with some of them. He said that they were taking away the spirit of the intended legislation. Those provisions are

(SRI KADIDAL MANJAPPA)

necessary in view of the fact that there are certain religious denominations who are not willing to come within the purview of this Bill. For instance certain communities like Christians and Muslims may not like to come under the scope of this Bill. They would like to be governed by the WAKF in the case of Muslims and the conventions in the case of Christians. To provide for such contingencies provisos are incorporated in the Bill.

With these observations, I support the Bill.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಸಭಾಪತಿಗಳೆ, ಈ ದಿವಸ ಮಂಡಿಸಿರತಕ್ಕ ಬಿಲ್ಲನ್ನು ನಾನು ಸ್ವಾಗತಿಸುತ್ತ ಒಂದೆರೆಡು ಸೂಚನೆಗಳನ್ನು ಕೊಡಲು ಇಚ್ಛೆಪಡುತ್ತೇನೆ.

2-30 P.M.

ಈ ಸಭೆಯಲ್ಲಿ ಸುಮಾರು ಸೇಕಡ ಮೂವತ್ತರಷ್ಟು ಜನರು ಕನ್ನಡ ಮಾತನಾಡತಕ್ಕವರಿದ್ದಾಗ್ಯೂ ನಮಗೆಲ್ಲ ಇಂಗ್ಲೀಷಿನಲ್ಲಿರತಕ್ಕ ಬಿಲ್ ಕಾಪಿಗಳನ್ನೇ ಒದಗಿಸಿದ್ದಾರೆ. ಇದರಿಂದ ನಮಗೆ ನಮ್ಮ ಅಭಿಪ್ರಾಯಗಳನ್ನು ಸೂಚಿಸಲು ಬಹಳ ತೊಂದರೆಯುಂಟಾಗಿದೆ.

ಈ ದೇವಸ್ಥಾನಗಳಿಗೆ ಟ್ರಸ್ಟಿಗಳನ್ನು ನೇಮಕ ಮಾಡುವಾಗ ಸರ್ಕಾರದವರು ಕೆಲವು ಜನರನ್ನು ಅದಕ್ಕೆ ನಾಮಿನೇಟ್ ಮಾಡುವಂಥ ಒಂದು ಪದ್ಧತಿಯನ್ನಿಟ್ಟುಕೊಂಡಿದ್ದಾರೆ. ಆದರೆ ಎಲ್ಲಿ ಯಾವ ದೇವಸ್ಥಾನಗಳಲ್ಲಿ, ಮಠಗಳಲ್ಲಿ, ಬಡವರಿಗೆ ಅನ್ನದಾನ, ವಿದ್ಯಾದಾನ ಇಂಥ ಪದ್ಧತಿಯನ್ನಿಟ್ಟುಕೊಂಡಿರುತ್ತಾರೋ ಅಂಥ ಕಡೆಗಳಲ್ಲಿ ಮಾತ್ರ ಈ ನಾಮಿನೇಷನ್ ಪದ್ಧತಿಯನ್ನು ರದ್ದುಮಾಡಿ, ಅಲ್ಲಿ ಓಟಿಂಗ್ ಮೂಲಕ ಟ್ರಸ್ಟಿಗಳು ಚುನಾವಣೆ ಹೊಂದಿ ಬರುವಂಥ ಒಂದು ಪದ್ಧತಿಯನ್ನು ಜಾರಿಗೆ ತರಲು ಈ ಮಸೂದೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಬೇಕೆಂದು ನಾನೀಸಂದರ್ಭದಲ್ಲಿ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎಲ್ಲಿ ಯಾವ ದೇವಸ್ಥಾನಕ್ಕೆ ವಾರ್ಷಿಕ ಉತ್ಪತ್ತಿ 200 ರೂಪಾಯಿಗಳಿಗಿಂತ ಜಾಸ್ತಿಯಾಗಿರುತ್ತದೆಯೋ ಅಂಥ ಕಡೆಗಳಲ್ಲಿ ಆ ದೇವಾಲಯಕ್ಕೆ ಬರತಕ್ಕ ವರಮಾನದಲ್ಲಿ ಸೇಕಡ 20 ರಷ್ಟನ್ನು ವಿದ್ಯಾಭಿವೃದ್ಧಿಗೆ ಮೀಸಲಾಗಿಡುವಂತೆ ಮಾಡಿ ಒಂದು ಫಂಡನ್ನು ಬೆಳಸಬೇಕೆಂದು ಹೇಳುತ್ತೇನೆ. ಇದು ನನ್ನ ಒಂದು ಸಲಹೆ. ಇದು ತಾಲ್ಲೂಕ್ ಮಟ್ಟದಲ್ಲಿರಬೇಕೆಂದು ಹೇಳುತ್ತೇನೆ.

ಇನ್ನು ಇಂಥ ದೇವಾಲಯಗಳ ಬಗ್ಗೆ ಇರತಕ್ಕ ಜಮೀನುಗಳೇನಿವೆ ಅವುಗಳನ್ನು ಯಾರಾದರೂ ಮುಂದೆ ಬಂದು, ನಾವು ಅನಾಥಾಲಯ ಮತ್ತು ವಿದ್ಯಾಭಿವೃದ್ಧಿಗೆ ಅದರ ಉತ್ಪನ್ನವನ್ನು ವಿನಿಯೋಗ ಮಾಡುತ್ತೇವೆಂದು ಹೇಳಿದರೆ ಅದಕ್ಕೆ ಒಂದು ಅವಕಾಶವಿರುವಂತೆ ಈ ಮಸೂದೆಯಲ್ಲಿ ಸೂಕ್ತ ಕ್ಲಾಜನ್ನು ಅಳವಡಿಸಬೇಕೆಂದು ಸೂಚಿಸಲಿಚ್ಛಿಸುತ್ತೇನೆ.

ಇನ್ನು ಕೆಲವು ಕಡೆ ದೇವಸ್ಥಾನಕ್ಕೆ ಸೇರಿರತಕ್ಕ ಅಪಾರ ಜಮೀನಿನಲ್ಲಿ ವರ್ಷಕ್ಕೆ ಒಂದಾವರ್ತಿ ಜಾತ್ರೆ ನಡೆದು ಅನಂತರ ಆ ಜಮೀನೆಲ್ಲ ಹಾಗೆ ಪಾಳುಬಿದ್ದಿರುತ್ತದೆ. ಕೆಲವು ದೇವಸ್ಥಾನಗಳಿಗೆ ಇಂಥ ನೂರಾರು ಎಕರೆ ಜಮೀನಿವೆ. ಯಾರಾದರೂ ಆ ಜಮೀನನ್ನು ರೂಢಿಸಿ ಅಲ್ಲಿ ಅನಾಥಾಲಯ ಮಾಡುತ್ತೇವೆಂದು ಮುಂದೆ ಬಂದರೆ, ಆ ಜಾತ್ರೆ ಕಾಲಕ್ಕೆ ಮಾತ್ರ ಆ ಜಮೀನನ್ನು ಬಿಟ್ಟುಕೊಟ್ಟು ಉಳಿದ ದಿನಗಳಲ್ಲಿ ಅದನ್ನು ಬಳಸಲು ಒಪ್ಪುವುದಾದರೆ ಆ ಜಮೀನನ್ನೂ ಬಿಟ್ಟುಕೊಡಲು ಅವಕಾಶವಿರುವಂತೆ ಇದರಲ್ಲಿ ಒಂದು ಕಲಮನ್ನು ಸೇರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಹೇಮಗಿರಿ ಜಾತ್ರೆ ಸೇರತಕ್ಕಂಥ ಸ್ಥಳದಲ್ಲಿ ಇಂಥ ಒಂದು ವ್ಯವಸ್ಥೆ ಮಾಡಲು ಅವಕಾಶವಿದೆ. ಅಲ್ಲಿ ನಾಲಾ ಕೆಳಗೆ ತರಿ ಜಮೀನಾಗುವಂಥ 40 ಎಕರೆ ಭೂಮಿ ಇದೆ. ಫೆಬ್ರವರಿ ತಿಂಗಳಲ್ಲಿ ಜಾತ್ರೆ ಆಗುತ್ತದೆ. ಈಗ ಅಲ್ಲಿಯ ಜನರು ಅಲ್ಲಿ ಒಂದು ಅನಾಥಾಲಯವನ್ನು ಮಾಡಬೇಕೆಂದು ಮಾಡಿಕೊಂಡಿದ್ದಾರೆ. ಅದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ನೂರಾರು ಜನಗಳಿಗೆ ಅನಾಥರಿಗೆ ಊಟದ ವ್ಯವಸ್ಥೆಯನ್ನೂ ವಿದ್ಯಾದಾನದ ವ್ಯವಸ್ಥೆಯನ್ನೂ ಮಾಡಲು ಬಹಳ ಅನುಕೂಲವಾಗಿದೆ. ಇದಕ್ಕೆ ಈ ಕಾನೂನಿನಲ್ಲಿ ಒಂದು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೆನ್ನೆಯ ದಿವಸ ಈ ಬಿಲ್ಲನ್ನು ಮಂಡಿಸತಕ್ಕ ಕಾಲದಲ್ಲಿ ನಮ್ಮ ಮಾನ್ಯ ರೆವಿನ್ಯೂ ಸಚಿವರು ಐದು ಸ್ಥಳಗಳಿಗೆ ಮಾತ್ರ ಅನ್ವಯಿಸತಕ್ಕ ಒಂದು ಮಾಸ್ಟರ್ ಪ್ಲಾನನ್ನು ತಯಾರಿಸುವುದಾಗಿ ಹೇಳಿದರು. ನಮ್ಮ ಹೇಮಗಿರಿ ದೇವಸ್ಥಾನವೂ ಕೂಡ ಬಹಳ ಪುರಾತನವಾದದ್ದು. ಅಲ್ಲಿ ಚಿನ್ನವಿದೆ ಎಂದು ಹೇಳುತ್ತಾರೆ. ಪಶ್ಚಿಮವಾಹಿನಿ ನದಿ ಪಕ್ಕದಲ್ಲೇ ಹರಿಯುತ್ತಿದೆ. ಆ ನದಿ ದಡದಲ್ಲೇ ಬೆಟ್ಟವಿದೆ. ಇಂಥ ಸುಂದರವಾದ ನೀರು ಹರಿಯುತಕ್ಕ ಜಾಗ ನಮ್ಮ ಮೈಸೂರಿನಲ್ಲೇ ಇನ್ನೆಲ್ಲಿಯೂ ಇಲ್ಲ. ಒಂದು ಕಡೆ ಬೆಟ್ಟದಸಾಲು, ಇನ್ನೊಂದು

ಕಡೆ ಹಚ್ಚನೆ ಹಸುರಾಗಿರತಕ್ಕ ಬತ್ತದ ಗದ್ದೆಗಳು, ಹೀಗೆ ಒಳ್ಳೇ ಪ್ರಕೃತಿ ಸೌಂದರ್ಯದಿಂದ ಕೂಡಿರತಕ್ಕ ಪ್ರದೇಶ ಅದು. ಈ ಸ್ಥಳವನ್ನೂ ಮಾಸ್ಟರ್ ಪ್ಲಾನಿಗೆ ಸೇರಿಸಬೇಕೆಂದು ಹೇಳುತ್ತೇನೆ. ಮೇಲಾಗಿ ಅಲ್ಲಿರತಕ್ಕ ಜನರು ಅಲ್ಲಿ ಒಂದು ಅನಾಥಾಲಯವನ್ನು ಮಾಡಲು 18 ಸಾವಿರ ರೂಪಾಯಿಗಳನ್ನು ಕೊಡಲು ಈಗ ಮುಂದೆ ಬಂದಿದ್ದಾರೆ. ಆದುದರಿಂದ ಅಲ್ಲಿ ಒಂದು ಎಜುಕೇಷನ್ ಸೊಸೈಟಿಯನ್ನು ಅವಕಾಶಮಾಡಿಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. S. SURYANARAYANA RAO (Mysore City).—Sir, I stand to support the provisions of this Bill whole-heartedly to the extent it goes. Why I say, is this: The Bill, if we read from the first section to the last section, we only feel that it is provided as if to police these institutions and nothing more. From time immemorial, these institutions have been in existence and are being run, whether under any provisions of law, deeds, trust or under any Registration Act or not. Even without these legal provisions for the purposes of registration and carrying out the wishes of the donor or the charity, things have gone on without any difficulty and the Bill seems to infer that something wrong has occurred somewhere that every thing seems to go wrong and that tightening up the belt is necessary alround. I do not feel that that is the intention of the Bill. There must be some regulation, restriction or some method by which these institutions are to be run. To that extent it should be there. As a matter of fact the funds of this institution are to be earmarked—a certain portion for the establishment. If we look at the size of the establishment, it is as if we are establishing a separate Secretariat of the size of the Government of Mysore or something less than that. What is the purpose? It makes no specific condition to minimise the establishment. They are appointing a Commissioner or Commissioners. It is not one Commissioner, but they may appoint as many Commissioners as they may deem fit from time to time. A time may come for the appointment of half a dozen Commissioners and these Commissioners, I believe, holding the high office, must be of the rank of Deputy Commissioners or I.A.S. officers. What is the cost involved in all these matters? Not only that there are Deputy Commissioners, but there are Assistant Commissioners, Subordinate officers and Inspectors. When this hierarchy of officials is provided in this Act and the establishment, I believe, it will be too cumbersome and will be too much, I cannot understand how they have calculated this at 8 per cent. Sri Kadidal Manjappa said that 5 per cent was sufficient and the financial memorandum says that no additional expenditure is necessary. From the size of the administration that we are providing, 8 per cent may not be sufficient. Then, what is the way out? The State Government has to pay for it. If the State Government has to pay, the financial memorandum should have said it. If the State Government are not spending, then the size will have to be cut to the size of the fund that is to be created. Therefore, I feel there is scope for liberalising this Act and making the administration as simple and making the control as little as possible. Otherwise, the charities cease to become charities, the charitable intention or the religious sentiment that is attached to these endowments will be lost and they become nothing but administrative units.

(Sri K. S. Suryanarayana Rao)

As a matter of fact, the process starts only after applying for registration. There are half a dozen appeals provided before the final order is passed. So, this *Archaka* or Manager or Trustee, whoever he is, instead of attending to the religious duties that are cast upon him under the endowment, will go on attending the Courts and officers, be it the Tahsildar, Assistant Commissioner or the Deputy Commissioner, because successive appeals and revisions or reviews are provided under this Bill. Possibly, by the time the process is over, the charity will have lost its importance and the public cease to have interest because there will be nothing left.

The priest or the manager is the man interested to do it and if he should go and stand at the doors of these officers, he will also lose interest.

How the administration has become cumbersome in these matters—about the budget. I fail to understand how a budget could be framed? It is very difficult. You cannot expect a poojari of a small temple—because the dimension fixed for this purpose of registration and contribution is less than Rs. 200 per annum. Possibly, it is not even one rupee per day. So, whether such a poojari whose income is less than Re. 1 per day should come within the perview of this Bill, is a matter which should be properly examined and in my opinion it should receive radical thought. The poojari of a small Hanuman temple is not a paid officer of the Government. He just performs temple worship. You want him to frame a budget and present it to the Commissioner and get his approval. This is a thing which possibly may not be within the educational competence of the poojari of the temple. There must be some other way of controlling. We can say that institutions which have a particular limit shall maintain account and it shall be open to audit and subject to inspection. That we can understand. You cannot expect the poojari of a small Hanuman temple to run an office. As we go to Mysore, on the way you find a small Hanuman temple. People stop there, they offer worship and pay two annas or three annas and go away. It there is a provision to pay him regular salary, I do not mind the Government taking away all that is paid to him by way of *Mangalarathi kanike*. In many of the institutions, he is not paid. He has to sustain himself out of the *kanike* paid like that. The devotee also knows that his money goes to the poojari and he willingly gives it.

Sri V. S. PATIL (Belgaum-I).—On a point of order, Sir. My friend has said at the outset that he is supporting the Bill and that he will deal with section to section to the end. At the same time, I am finding for the past five minutes that he is criticising every clause. Is it permissible for any Member to contradict himself on the floor of the House?

Sri G. V. GOWDA (Palya).—He made a qualified statement—'to the extent to which it goes.'

Mr. DEPUTY SPEAKER.—There is no point of order.

Sri K. S. SURYANARAYANA RAO.—Possibly my friend Sri V. S. Patil did not hear me saying: "The principles of the Bill are alright. There are other provisions in the Bill which need some amendment or clarification." It is something like policing the institution. The rigour of the provision should be liberalised and there should be as little control as possible and to that extent my friend Sri V. S. Patil should not find fault with me.

Mr. DEPUTY SPEAKER.—He disagrees in details only.

Sri K. S. SURYANARAYANA RAO.—So far as the heritable nature of the office is concerned, I have a suggestion to make. As our friend Sri Manjappa puts it correctly, if it is the intention of the donor or the person making the trust or the charity that a particular line of succession of a particular family is to be associated with the conduct of the pooja or worship in the temple, I fail to understand how we can overcome that difficulty. Sir, in other cases, the difficulty will be this. I am not one of those who wish that perpetuity of succession should be continued, in this twentieth century. But you must consider the financial aspect if you do not continue hereditary poojaries and appoint salaried *archaks* for these institutions. If we can make other arrangements for the proper maintenance of these institutions by persons employed in these temples, for worship and so on, possibly we may not find difficulty in removing these offices. What is happening in the temple like the one at Nanjangud? The main difficulty is that the basic salary of the *archak* or the *poojari* is less than the minimum wages paid to the worker in a factory or a mill. If that is made equal to the salary of a first division clerk or a second division clerk, possibly nobody will be anxious to hanker after these offices and would not desire to hang on to them in perpetuity. This will not be the position, because the *archak* or the *poojari* is a very poorly paid person. It is not for the sake of a few chips that he sticks on to that post, but out of a sense of dedication that he takes up the worship in the temple and it is for the good of the community that he takes it up. We must view that in that way. The example that comes to my mind is this: supposing we think of a changeover in the system, what happens? We have already got a little experience when we abolished the village officers at an enormous cost. The maximum emolument of the biggest shanbhogue or patel or talati might not have been more than Rs. 500 a year. But the person we are now appointing for those posts is to be paid a salary of Rs. 75 per mensem. What is the cost and who is to bear that cost? What would be the cost of replacing 10,000 village officers at that rate? We have already committed ourselves to that position and we have got to pay them. There is no other way out. But the lessons of this venture should not altogether be lost on us when we consider similar steps in other spheres of activity. This is not a matter which comes under any prohibition under the Constitution. There is nothing unconstitutional or illegal about it.

Sri G. V. GOWDA.—Does the Hon'ble Member suggest that the *poojari* or the *archak* should be appointed treating it as a hereditary office?

Sri K. S. SURYANARAYANA RAO.—It should be. I appreciate the sentiments expressed in certain provisions of the Bill, giving respect to the sentiments and the wishes of the donors, giving respect to the religious susceptibilities of the people. To that extent, it is good. So, to keep up with the atmosphere, to keep up with the tempo in the particular place, the question of monetary consideration should not come in. Therefore, I suggest that the provisions as they are in the Bill must be retained.

Coming to the details of the Bill, I have a few suggestions to make. Sir, in the very first clause of the Bill, it is said:

> "...........the State Government may, by notification, direct that such of the provisions of this Act shall not apply to such class of religious or charitable institution or trust as may be specified in such notification and may by notification, cancel or vary such direction :"

Sir, this takes away the very effect of the Bill, because immediately this Bill becomes law, there will be so many pulls and pressures by all influential sections and they will begin to exert pressure on the authorities and say that their institutions should be exempted because of the special nature of the institution or the special nature of work that is done by that institution and so on. Sir, this will be the flood gate that we are leaving open in this Bill. Therefore, I suggest that this provision should be deleted and that it may be exercised to a minimum extent.

Sri M. C. BASAPPA.—Even if it is to a minimum extent, there should be some provision.

Sri K. S. SURYANARAYANA RAO.—But the wording should be so changed as to not give scope to any abuse of power. And, under what circumstances an institution could be exempted is a point which is not tackled in this Bill at all. Then there is a long list of delegated legislation. Framing of rules, I can understand; but to say from section to section that this shall be done and that shall be done at the proper time, is not good.

Sir, clause 100 says that Government should have power to remove difficulties. By notification, they may make provisions. They will be as if they are the regular provisions of this Act. I believe that the Rules of Procedure provide for such notifications and modifications being placed on the Table of the House. I do not know why they have not contemplated it in this Bill.

Another important aspect is about limitation. Sir, no limitation is fixed so far as disposition of the property is concerned. Suppose a person has acquired certain rights; but no limitation is fixed. The question of limitation is very important. If in the year 1920 some

institution has sold its land to a person who has bought it for *bona fide* use, today we cannot go to the court of law and say that this land belongs to the institution and we must get it back; that contingency is there. Not only clause 65, but there are other clauses also like this. If the purpose of the Act is defeated by the due process of the common law, I do not mind making a little more liberal concession so far as limitation is concerned. But, we must fix up some time limit. Then, Sir, what about adverse possession ? Then again there will be difficulty.

Clause 26 says:

"..............Any person acquiring any immovable property belonging to a religious or charitable institution or trust which has been registered under this Chapter or any part of or any share or interest in such property of such institution or trust, shall be deemed to have notice of the relevant particulars relating to such institution or trust entered in the register maintained..............."

That would be wrong because the trust or the charitable institution may include many things. But they will have to be scrutinised whether they belong to the institutions or not. No doubt there is an enquiry provided for. It is a one sided enquiry and it is an enquiry by the registering authority of the property of the Mutt as declared by the Manager or the Trustee of the Institution. Suppose, these properties do not belong to the Mutt or they have left the hands of the Mutt long long back; then, where is the safeguard to the person ? To say that because it is included in the register and therefore you are barred by the law of limitation and so give it up, would not be correct. I suggest that if the Commissioner feels that the property is alienated but still in the list of properties of the Mutt, he can issue notice and take legal steps and appropriate procedure must be followed.

Mr. DEPUTY SPEAKER.—please refer to clause 24.

Sri K. S. SYARNARYANA RAO.—Underclause 24 it is not to be sent to the person. So far as local authorities and the revenue authorities are concerned, the provision is perfectly allright. That will have to be registered because if tomorrow any property has to be bought or sold, we have to take an encumbrance certificate up-to-date. To that extent the revenue records of the Sub-Registrar and the local bodies should be there. But in Clause 26 instead of saying that notice shall be sent to the person in possession or the person who has a right to the property, the registering authority shall direct that steps may be taken against such persons for the recovery of those properties.

3-00 P.M.

There is another provision, *viz.*, clause 30 which states that there should be an audit. The auditor will in the normal course of his work give a list of objections which he may find. But to ask him to say

(SRI K. S. SURYANARAYANA RAO)

whether any item of expenditure is a misappropration or valid or is an omission or waste, is not within the competence of the auditor. The auditor can say whether an expenditure is properly accounted or whether it is properly authorised or not, but to say that the auditor shall say whether it is misappropriation or not, is not proper because it is not within his province. It is a matter for further investigation or further action if the Commissioner after going through the report feels that it is necessary. Therefore that provision regarding audit needs modification. There is another provision. Even though the auditor makes observations about the expenditure, if it has been sanctioned by the Assistant Commissioner, then to that extent it is okayed. Why should there be an audit objection ? Even with the consent of the authority concerned, if the expenditure is not proper or according to the principles, it will have to be answered. To take away that right merely because the Assistant Commissioner has sanctioned an unauthorised payment, should not be allowed.

Something was mentioned about the application of funds. The question is how the surplus funds, after meeting the contingencies, should be administered. In the Bill there is no provision, "except that it shall be deposited in Government securities or the bank or as directed by the Government." Thus the funds will be locked up. But our friends deal with it at length namely using the funds for 'other' purposes, that is, purpose other than that for which the trust exists. If that is to be done, there should be a provision by which the Commissioner or the Government can give permission to the institutions to spend money in a particular way, either as the mutt or institution desires to spend it or within the discretion of the Government, whichever is suitable. Sri Kadidal Manjappa spoke about the Constitutional provisions. I recollect there was a case in the Supreme Court regarding the diversion of the funds of the Venkateswara temple. The court said that the Constitution did not come in the way of the trust funds being spent for educational or other purposes. But the difficulty may arise, I feel if the fund is to be diverted for any purpose other than the one for which the charity is being managed or maintained. Otherwise to make provision for the spending of this amount for the original purpose of the trust itself, is not a thing which can be contemplated and I feel the Select Committee will have the wisdom to examine that position also.

I believe that clause 35 is against the provisions now existing regarding banking. Here, the Commissioner by a direction can appropriate the funds. I believe that this is a thing which the Banking Companies Act may not permit. The person or institution in whose name and under whose signature the funds are operated are all matters defined in the Indian Banking Companies Act and we cannot say that a person other than the person in whose name the account stands, has a right to appropriate the funds by reason of an order. This may not be permissible under the law. I therefore request that this question may be looked into.

About clause 41, which speaks about the Chairmanship of the Board of Trustees, the discretion is left to the Board. I wish the election or the selection of the Chairman would co-exist with that of the life of the Board. Supposing a Chairman is elected once, that is during the first meeting, then he should continue till the Board exists or unless he is removed by the appropriate authority for valid reasons. Otherwise to allow it as it is, may bring in certain difficulties in so far as the administration of the particular institution is concerned.

Sa far as mutts are concerned, there is a provision in clause 55. There again, the question of succession is not mentioned. I feel that whatever be the order that is accepted or instituted by the charitable trust, such a succession must be approved by Government. Under the old Mysore Charitable Endowments Act,there is a provision where a mutt is to be succeeded by a *Mahant*, *Manager* or *Pujari*, such office has to be recognised by Government. I believe such a provision would have a salutary effect in matters of succession and avoid disputes. While giving effect to the personal wishes or the directions of the trust, I feel, approval or the concurrence of the Commissioner is necessary. That will set at naught all controversies about succession. To that extent there should be restriction. Otherwise, Government need not interfere with the law of succession as may be determined by individual mutts for their own convenience.

Sir, there is another provision, which is rather not very happy; this is about applying for directions to the Court. In section 68 if the trustees, as Sri Keshava Murthy put it, for any reason try to take the decisions or guidance of the Court at every stage, and this is very likely, then it will adversely affect the finances of the Mutt, a lot of time will be lost by the time they are taken up by the Courts. Of course, if the Courts are exclusively meant to deal with these matters, it is alright. Therefore, I feel, section 68 is very likely to cause hardship to the management of the institution and to that extent that provision will have to be modified. In this Bill, there is no reference as to what should happen to the properties of the institutions or the Mutts that are existing outside the jurisdiction of the Commissioner, *i.e.*, beyond the jurisdiction of the State. We do not get proper guidance from this Bill regarding that. Also, so far as enquiries are concerned, there appears to be some duplication in clauses 19 and 20 and that will have to be overcome because there can be registration in only one place. Though the property is situated in more than one District, the registration should be only at one place. The enquiry shall have to take place at that place, and if enquiry is held simultaneously at different places, it may cause hardship. So, the Government should have a second thought regarding this provision.

I have already said about the Budget and once in three years it can be done. Instead of making such arbitrary rules or sections, it is better that the institutions be permitted to run as they are doing it to-day and subjecting them to regular audit. As a matter of fact, day-to day audit is provided under this Bill for such institutions which

(SRI K. S. SURYANARAYANA RAO)

can afford to have it. Such a provision is quite welcome. But, to say that it should frame a budget is a thing which is likely to cause hardship. There are many more things which the Select Committee may go through and give their suggestions.

With these observations, I conclude. Thank you, Sir,

ಶ್ರೀ ಟಿ. ಎನ್. ಮಾದಪ್ಪ ಗೌಡ.—(ನಾಗಮಂಗಲ)—ಸ್ವಾಮಿ, ಮಾನ್ಯ ಮಂತ್ರಿಗಳು ನಮ್ಮ ಮುಂದೆ ಈ ಮಸೂದೆಯನ್ನು ತಂದಾಗ ಏನೇನು ತಮ್ಮ ಬಾಯಿಂದ ಹೇಳಿದರೋ ಅದು ಒಂದೂ ಇದರಲ್ಲಿಲ್ಲ. ಅವರು ಇದನ್ನು ಓದಿ ನೋಡಿದ್ದಾರೆಯೋ ಇಲ್ಲವೋ ಎಂದು ನನಗನ್ನಿಸುತ್ತದೆ. ಆದರೂ ಬಹಳ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಇದನ್ನು ತಂದಿದ್ದಾರೆ. ಅದಕ್ಕಾಗಿ ನಾನು ಸಚಿವರನ್ನು ಅಭಿನಂದಿಸಬೇಕಾಗಿದೆ.

Definitions ನಲ್ಲಿ ಏಳನೆಯ ಕಲಮಿನಲ್ಲಿ, 'Hindu', ಎಂದು ಇದೆ. ಅದಕ್ಕೆ ವಿವರಣೆಯನ್ನು ಕೊಡುತ್ತ Hindu includes Jains, Buddhists, Sikhs, ಎಂದು ಮಾತ್ರ ಹೇಳಿದ್ದಾರೆ. ಈಗ ಎರಡು ವರ್ಷಗಳ ಹಿಂದೆ, ಈ ದೇಶದಲ್ಲಿ ಜನಗಣತಿ ನಡೆಯುತ್ತಿರುವಾಗ ನಮ್ಮ ರಾಜ್ಯದ ಒಂದು ಮತವನ್ನನುಸರಿಸತಕ್ಕ ವೀರಶೈವರು ಅಥವಾ ಲಿಂಗಾಯತರು ಎನ್ನುವವರು ನಾವು ಹಿಂದುಗಳಲ್ಲವೇ ಅಲ್ಲ ಎಂದು ಹೇಳಿದರು. ಇದನ್ನು ನೋಡಿದರೆ, ಈಗ ಹೆಚ್ಚಿಗೆ ಇರತಕ್ಕ ಮಠಗಳು ಲಿಂಗಾಯತರವೇ ಆಗಿರುವುದರಿಂದ ಅವರಿಗೆಲ್ಲ ರಿಯಾಯಿತಿಯನ್ನು ಕೊಡುತ್ತಾರೆಯೇ ಎಂದು ನನಗನಿಸುತ್ತದೆ.

ನನ್ನ ಮಾನ್ಯ ಮಿತ್ರರು ಕೆಲವರು ಈಗಾಗಲೇ ಸಭೆಯ ಗಮನಕ್ಕೆ ಕೆಲವು ವಿಷಯಗಳನ್ನು ತಂದರು. ಮತ್ತೆ ಕಮಿಷನರಿಂದ ಇನ್‌ಸ್ಪೆಕ್ಟರುಗಳವರೆಗೆ ಒಂದು ದೊಡ್ಡ ಸಿಬ್ಬಂದಿಯನ್ನು ಏರ್ಪಾಡು ಮಾಡಲು ಅವಕಾಶ ಈ ಮಸೂದೆಯಲ್ಲಿದೆ. ಇದಕ್ಕಾಗಿ ಖರ್ಚು ಮಾಡತಕ್ಕ ಹಣವೂ ಕೂಡ ಧರ್ಮ ಸಂಸ್ಥೆಗಳಿಗೆ ಬರತಕ್ಕ ಉತ್ಪತ್ತಿಯಲ್ಲಿ ಸ್ವಲ್ಪ ಭಾಗವನ್ನು ತೆಗೆದುಕೊಂಡು ಖರ್ಚು ಮಾಡತಕ್ಕದ್ದಾಗಿದೆ ಎಂದೂ ಹೇಳುತ್ತಾರೆ. ಹಾಗೆ ಮಾಡುವುದು ಸರಿಯಲ್ಲವೆಂದು ನನಗೆ ಅನ್ನಿಸುತ್ತದೆ. ಹಾಲಿ ಇರತಕ್ಕ ವ್ಯವಸ್ಥೆಯಲ್ಲಿ Commissioner, Deputy Commissioner, Assistant Commissioner, Tahsildar ಎಂದು ಏನಿದ್ದಾರೆ ಅವರಿಗೇ ಈ ಮುಜರಾಯಿ ಸಂಸ್ಥೆಗಳ ಆಡಳಿತದ ಮೇಲೆ ವಿಚಾರಣೆ ಮಾಡತಕ್ಕ ಅಧಿಕಾರವಿದ್ದೇ ಇದೆ. ಇದೇ ಸಿಬ್ಬಂದಿಯು ಮುಂದೆಯೂ ಸಾಕಾಗುತ್ತದೆ. ಆದರೆ ಯಾವ ಒಂದು ಸದುದ್ದೇಶಕ್ಕಾಗಿ ಅವುಗಳ ಉತ್ಪತ್ತಿಯನ್ನು ಖರ್ಚು ಮಾಡಬೇಕೆಂದು ದತ್ತಿ ಕೊಟ್ಟಂಥ ಧರ್ಮಾತ್ಮರು ಹೇಳಿದ್ದಾರೆಯೋ ಅದಕ್ಕೆ ಚ್ಯುತಿ ಬರತಕ್ಕ ಕೆಲಸವನ್ನು ಮಾಡಬಾರದು. ದೇಶದಲ್ಲಿ ಜನ ಸತ್ಯಶೀಲರಾಗಿ ಬಾಳಬೇಕು, ಧರ್ಮವಂತರಾಗಿರಬೇಕು, ನೀತಿಪರರಾಗಿ ಜೀವನವನ್ನು ಸಾಗಿಸಬೇಕು ಎನ್ನುವ ವಿಚಾರದಲ್ಲಿ ಈ ಸರ್ಕಾರವೂ ಭಾಗಿಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ನಾವು ರಾಜ್ಯಾಂಗದಲ್ಲಿ ಜಾತ್ಯತೀತವಾದ ರಾಷ್ಟ್ರವನ್ನು ನಿರ್ಮಿಸುತ್ತೇವೆಂದು ಹೇಳಿಕೊಂಡಿದ್ದರೂ ನಮ್ಮ ದೇಶದ ಸಂಸ್ಕೃತಿ ಮತ್ತು ಧರ್ಮದ ಮೇಲೆ ನಿಂತಿದ್ದೇವೆಂದು ನನಗಾದರೂ ಅನ್ನಿಸುತ್ತದೆ.

ಮಾನ್ಯ ಶ್ರೀ ಮರುಳಪ್ಪನವರು ಇಲ್ಲಿ ಇಲ್ಲದೆ ಇರುವ ಒಂದು ವಿಚಾರವನ್ನು ನಮ್ಮ ಮುಂದೆ ಎತ್ತಿ ನಮಗೆ ಏನೊಂದು ಅನುಮಾನವಿದೆಯೋ ಅದಕ್ಕೆ ಇನ್ನೂ ಸ್ವಲ್ಪ ಪುಷ್ಟಿ ಕೊಟ್ಟು ಮತ್ತೆ ಅನುಮಾನ ಪಡತಕ್ಕ ಪರಿಸ್ಥಿತಿಯನ್ನು ತಂದರು. ಅವರು ಆ ಮಾತನು ಆಡಬಾರದಾಗಿತ್ತು. ಕೆಲವರ ಅಭಿಪ್ರಾಯದಲ್ಲಿ ಕೆಲವು ಮಠಗಳು ರಾಜಕೀಯದಲ್ಲಿ ಕೈ ಹಾಕುತ್ತವೆ, ಅದರಿಂದ ದೇಶದ ವಾತಾವರಣದ ಮೇಲೆ ದುಷ್ಪರಿಣಾಮವನ್ನುಂಟುಮಾಡುತ್ತವೆ, ಎಂದು ಹೇಳತಕ್ಕ ವಿಚಾರಗಳಿದ್ದರೂ ನಮ್ಮಲ್ಲಿ ಈ ಮಠಗಳೂ, ದೇವಸ್ಥಾನಗಳೂ ಇರತಕ್ಕ ಉದ್ದೇಶ ನಮಗೆ ಧರ್ಮ ಸಂಬಂಧವಾದ ಬೋಧನೆ ಮಾಡುವುದಕ್ಕಾಗಿಯೇ ವಿನಾ ರಾಜಕೀಯ ಕೈವಾಡವನ್ನು ನಡೆಸುವುದಕ್ಕಲ್ಲ.

ಮೈಸೂರು ಜಿಲ್ಲೆಯಲ್ಲಿ ಕೆಲವು ಮಠಗಳಿವೆ. ದೊಡ್ಡ ಮೀನು ಸಣ್ಣ ಮೀನನ್ನು ಹೇಗೆ ತಿಂದು ಬದುಕುತ್ತವೆಯೋ ಹಾಗೆಯೇ ಕೆಲವು ಇವೆ. ಕೆಲವು ಮಠಗಳು ಹಿಂದೆ ಬಹಳ ಒಳ್ಳೆಯ ಕೆಲಸ ಮಾಡಿಕೊಂಡು ಬರುತ್ತಿದ್ದುವು, ನಿದರ್ಶನಕ್ಕೆ ಹೇಳುವುದಾದರೆ ನಂಜನಗೂಡು ಹತ್ತಿರ ದೇವನೂರಿನಲ್ಲಿ ಒಂದು ಮಠವಿದೆ.

ಇವತ್ತು ಅದು ಮತ್ತೊಂದು ಮಠದ ಪ್ರಭಾವಕ್ಕೆ ಒಳಗಾಗಿ ಅದರ ಅಸ್ತಿತ್ವವನ್ನು ಕಳೆದುಕೊಂಡಿರತಕ್ಕ ಪರಿಸ್ಥಿತಿ ಇದೆ. ನಾಳೆ ಧಾರ್ಮಿಕವಾದ ಈ ಎಲ್ಲಾ ಮಠಗಳಿಗೂ ಸ್ವತಂತ್ರವಾಗಿ ಆಡಳಿತ

ಮಾಡಲು ಅವರಿಗೇ ಬಿಟ್ಟರೂ ಸಾರ್ವಜನಿಕ ಕೆಲಸಗಳನ್ನು ಮಾಡತಕ್ಕ ಕಾಲದಲ್ಲಿ ನಾನು ಹಿಂದೆ ಹೇಳಿದ ಹಾಗೆ ಜಾತ್ಯಾತೀತವಾದ ಒಂದು ರಾಷ್ಟ್ರವನ್ನು ನಾವು ಕಟ್ಟಬೇಕಾಗಿರುವುದರಿಂದ ಇದರ ಪ್ರಭಾವಕ್ಕೆ ಹೆಚ್ಚು ಬಾರದ ಹಾಗೆ ಮಾಡಬೇಕು. ನೆನ್ನೆ ಮಾನ್ಯ ಶ್ರೀ ಕೃಷ್ಣಪ್ಪನವರು ತಿರುಪತಿ ವೆಂಕಟೇಶ್ವರನ ದೇವಸ್ಥಾನದ ಮತ್ತು ಅಲ್ಲಿ ಟ್ರಸ್ಟಿಗಳು ಮಾಡುತ್ತಾ ಇರತಕ್ಕ ಕೆಲಸಕಾರ್ಯಗಳನ್ನು ಮೆಚ್ಚಿ ಅದರ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿದರು. ಅಲ್ಲಿ ಬರತಕ್ಕ ಬಹು ಭಾಗದ ಉತ್ಪನ್ನವನ್ನು ಅವರು ವಿದ್ಯಾಭ್ಯಾಸ ಮತ್ತು ಇತರ ಆರೋಗ್ಯ ಮುಂತಾದವುಗಳಿಗೆ ಮತ್ತು ಭಕ್ತರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡತಕ್ಕ ಸಾಹಿತ್ಯವನ್ನು ರಚನೆ ಮಾಡುವುದಕ್ಕೆ, ಸೃಷ್ಟಿ ಮಾಡುವುದಕ್ಕೆ ಖರ್ಚು ಮಾಡುತ್ತಾ ಇದ್ದಾರೆ ಎಂದು ಅವರು ಹೇಳಿದರು. ಇಲ್ಲಿ ನಮ್ಮ ದೇಶದಲ್ಲಿ 40 ಸಾವಿರ ಹಳ್ಳಿಗಳಿವೆ, ಪ್ರತಿಯೊಂದು ಹಳ್ಳಿಯಲ್ಲೂ ದೇವರುಗಳಿಗಂತೂ ಲೆಕ್ಕವೇ ಇಲ್ಲ. ಇವತ್ತು 44 ಕೋಟಿ ಜನಗಳು ಇದ್ದೇವೆ—44 ಕೋಟಿಗಳಿಗಿಂತಲೂ ಜಾಸ್ತಿಯಾಗಿ ದೇವತೆಗಳು ಇವೆ, ಪ್ರತಿಯೊಂದು ದೇವರ ಹೆಸರಿನಲ್ಲೂ ಪ್ರತಿಯೊಂದು ಗ್ರಾಮದಲ್ಲೂ ಕೂಡ 2 ಎಕರೆ, 1 ಎಕರೆ, 10 ಎಕರೆ, 100 ಎಕರೆಯಂತೆ ದತ್ತಿ ಕೊಟ್ಟಿರುತ್ತಾರೆ. ದತ್ತಿ ಕೊಟ್ಟಿರತಕ್ಕ ಆ ಜಮೀನಿನಲ್ಲಿ ಏನು ಒಂದು ಕಾಟಾಚಾರದ ವ್ಯವಸ್ಥೆ ಇದೆ ಎಂದರೆ ಕೆಲವು ಕಡೆ ಪೂಜಾರಿಗಳು ಆ ಜಮೀನನ್ನು ಮಾಡಿಕೊಂಡು ಬಂದಿದ್ದಾರೆ—ಬರುತ್ತಾ ಇದ್ದಾರೆ. ಅದಕ್ಕೆ ನನ್ನ ತಕರಾರು ಏನೂ ಇಲ್ಲ. ಏಕೆಂದರೆ ಅವರು ನಿಷ್ಠೆಯಿಂದ ಪೂಜೆ ಪುನಸ್ಕಾರ ಮಾಡಿಕೊಂಡು ಬರಬೇಕಾಗುತ್ತದೆ. ಅದರಿಂದ ಬರತಕ್ಕ ಉತ್ಪನ್ನವನ್ನು ಅವರು ಅನುಭವಿಸುವುದರಲ್ಲಿ ತಪ್ಪೇನೂ ಕಾಣುವುದಿಲ್ಲ. ಮತ್ತೆ ಕೆಲವು ಕಡೆ ಬಹಳ ಬೆಲೆ ಬಾಳತಕ್ಕ ಸ್ವತ್ತು ಆದರೂ ಕೂಡ ಒಂದು ನಿದರ್ಶನವನ್ನು ಈ ಸಂದರ್ಭದಲ್ಲಿ ಕೊಡಬೇಕೆನಿಸುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ನಮ್ಮ ಊರಿನಲ್ಲಿ ಸೋಮೇಶ್ವರ ಸ್ವಾಮಿ ದೇವಸ್ಥಾನ ಬಹಳ ದೊಡ್ಡ ದೇವಸ್ಥಾನ. ಅದಕ್ಕೆ ಸ್ವಲ್ಪ ಜಮೀನು ಇದೆ. ಆ ಒಂದು ಗ್ರಾಮದಲ್ಲಿ ಆ ಒಂದು 10 ಎಕರೆ ಪ್ರದೇಶ ಬಹಳ ಉತ್ಕೃಷ್ಟವಾದ ಭೂಮಿ. ಬಹಳ ಕಾಲದಿಂದ ಈ 10 ಎಕರೆಗೆ ಬರೀ 23 ರೂಪಾಯಿ ಪಂಚಸಾಲ್ ಗುತ್ತಿಗೆ ಬಿದ್ದಿದೆ. ಇಲ್ಲಿ ಅನೇಕ ಸದಸ್ಯರು ಮತ್ತು ಮಾನ್ಯ ಮಂತ್ರಿಗಳು ಆ ದೇವಸ್ಥಾನವನ್ನು ನೋಡಿದ್ದಾರೆ. ಅದು ಈಗ ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟಿಗೆ ಸೇರಿದೆ. ಆ ದೇವಸ್ಥಾನವನ್ನು ಒಳ್ಳೆಯ ಉತ್ತಮ ರೀತಿಯಲ್ಲಿ ಇಟ್ಟುಕೊಳ್ಳಬೇಕಾದರೆ ಸಾವಿರಾರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅಂಥ ಒಂದು ಸಂದರ್ಭದಲ್ಲಿ ಬಹಳ ಫಲವತ್ತಾದ ಭೂಮಿ ಅಲ್ಲಿ ಇದ್ದರೂ ಆ 20 ರೂಪಾಯಿ ಅದರಿಂದ ಬರತಕ್ಕ ವರಮಾನ—ಮಾಮೂಲು ಅದಕ್ಕೆ ಇದಕ್ಕೆ ಆಗಿ—ಆ ಪೂಜಾರಿಗೆ ಸೇರುವ ಹೊತ್ತಿಗೆ ಏನೇನೂ ಇರುವುದಿಲ್ಲ. ಅನೇಕರು ನನ್ನನ್ನು ಕೇಳಿದ್ದಾರೆ, ಆ ಜಮೀನನ್ನು ಕೊಡಿಸಿಕೊಡುವುದಾದರೆ 25 ಸಾವಿರ ರೂಪಾಯಿಗಳವರೆಗೂ ಬೆಲೆ ಕೊಡುತ್ತೇವೆ ಎಂದು. ಇದು ಒಂದು ಸಣ್ಣ ನಿದರ್ಶನವಾದರೂ ನಮ್ಮ ದೇಶದಲ್ಲಿರತಕ್ಕ ಈ ದೇವಸ್ಥಾನಗಳಿಗೆ ಸಂಬಂಧಪಟ್ಟ ಎಲ್ಲಾ ಭೂಮಿಯನ್ನೂ ಕೂಡ ಅದು ಪೂಜೆ ಪುನಸ್ಕಾರ ಮಾಡತಕ್ಕ ಜನಗಳು ಯಾರಿದ್ದಾರೆ ಅವರ ಸ್ವಾಧೀನದಲ್ಲಿದ್ದರೆ ಬಿಟ್ಟು ಬಾಕಿಯದನ್ನು ಹರಾಜು ಮಾಡಿ ಆ ಮೂಲಕ ಬರತಕ್ಕ ಹಣವನ್ನು ಒಂದು ನಿಧಿ ಮಾಡಿ ಆಯಾಯಾ ದೇವಸ್ಥಾನ ಅಥವಾ ಮಠದ ಹೆಸರಿಗೆ ಸೇರಿಸಿದರೆ ಅದರಿಂದ ಬಹಳ ಉತ್ಪತ್ತಿ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂದು ನನಗಾದರೂ ಅನಿಸುತ್ತದೆ. ಈಗ ನಂಜನಗೂಡನ್ನು ತೆಗೆದುಕೊಳ್ಳಿ. ನೆನ್ನೆ ಶ್ರೀಮಾನ್ ಕೃಷ್ಣಪ್ಪನವರು ಹೇಳಿದ ಹಾಗೆ ಬಿಳಿಗಿರಿ ರಂಗನಸ್ವಾಮಿ, ಮೇಲುಕೋಟೆ ಚಲುವರಾಯಸ್ವಾಮಿ ಈ ರೀತಿಯಾದ ದೇವಸ್ಥಾನಗಳಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ಒಡವೆಗಳು ಇವೆ—ದೇಶಕ್ಕೆ ಈ ದಿವಸ ಒದಗಿರತಕ್ಕ ಒಂದು ಇಕ್ಕಟ್ಟಿನ ಸಂದರ್ಭದಲ್ಲಿ—ದೇವರು ಯಾವಾಗಲೂ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ಒಡವೆಗಳನ್ನು ಹಾಕಿಕೊಂಡು ಮೆರೆಯುವುದಕ್ಕೆ ಸಾಧ್ಯವಿಲ್ಲ. ಇದು ನಮ್ಮ ಭಕ್ತಿಯ ಒಂದು ಕುರುಹು ಆಗಿ ಎಷ್ಟು ಬೇಕೋ ಅಷ್ಟನ್ನು ಇಟ್ಟು ಬಾಕಿಯದನ್ನೆಲ್ಲಾ ಹಣವನ್ನಾಗಿ ಪರಿವರ್ತನೆ ಮಾಡಿ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅದೂ ದೇವರ ಹೆಸರಿನಲ್ಲಿ ವಿನಿಯೋಗ ಮಾಡುವುದು ಸೂಕ್ತ ಎಂದು ನನಗೆ ಅನಿಸುತ್ತದೆ.

[MR. SPEAKER in the Chair]

ನಾವು ಸೆಪ್ಟೆಂಬರ್ 12ನೇ ತಾರೀಖಿನಲ್ಲಿದ್ದು ಇನ್ನೇನು ಮಹಾ ನವಮಿ ಬರುತ್ತಾ ಇದ್ದರೂ ನಾನು ಬಂದಿರತಕ್ಕ ಪ್ರಾಂತ್ಯದಲ್ಲಿ ಮಳೆ ಬೆಳೆ ಸುತರಾಂ ಇಲ್ಲ, ಬಹಳ ಭೀಕರವಾದ ಪರಿಸ್ಥಿತಿಯನ್ನು ನಾವು ಎದುರಿಸುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ದೇವರ ಹಣ ಇದ್ದಿದ್ದರೆ ಅದನ್ನು ರಿಲೀಫ್ ವರ್ಕ್ಸ್‌ಗೆ ಉಪಯೋಗ ಮಾಡಿ ಪರಿಹಾರ ಕಾರ್ಯಗಳನ್ನು ಮಾಡಬಹುದಾಗಿತ್ತು. ಆ ರೀತಿ ಮಾಡಿದ್ದೇ ಆದರೆ ನಾವು ಯಾವ ಭಗವಂತನಲ್ಲಿ ನಂಬಿಕೆ ಇಟ್ಟುಕೊಂಡಿರುತ್ತೇವೆಯೋ, ಪೂಜೆ ಮಾಡುತ್ತೇವೆಯೋ ಆ ಪೂಜೆ ಸಾರ್ಥಕವಾಗುತ್ತದೆ. ಮತ್ತು ದೇವರ ಹೆಸರಿನಲ್ಲಿ ಗುಡಿಯಲ್ಲಿರತಕ್ಕ ಹಣವನ್ನೂ ಕೂಡ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡು

(ಶ್ರೀ ಟಿ. ಎನ್. ಮಾದಪ್ಪಗೌಡ)

ತ್ತೇನೆ. ಇಲ್ಲಿ ಪೂಜಾರಿಗಳನ್ನು ಹಾಕುವಾಗ ಇಷ್ಟಬಂದವರನ್ನು ನೇಮಿಸಿಕೊಳ್ಳತಕ್ಕ ಒಂದು ನಿಯಮವನ್ನು ಹಾಕಿಕೊಂಡಿದ್ದೀರಿ. ಕೆಲವು ದೇವಸ್ಥಾನಗಳಲ್ಲಿ ಪೂಜೆ ಮಾಡಬೇಕಾದರೆ ಗೊತ್ತಾದ ಒಂದು ನಿಯಮ ಉಂಟು, ಅದು ಶಾಸ್ತ್ರೋಕ್ತವಾಗಿ ಮಾಡಬೇಕಾದ ಕೆಲಸ, ಆ ವಿಚಾರದಲ್ಲಿ ತರಪೇತಾದವರನ್ನೇ ಪೂಜಾರಿಗಳಾಗಿ ನೇಮಕ ಮಾಡುವುದರಿಂದ ಇಂಥ ಭಗವಂತನ ಪೂಜೆ ಹೀಗೆ ಮಾಡಬೇಕು ಎಂಬ ನಿಯಮದ ಪ್ರಕಾರ ಮಾಡುತ್ತಾರೆ. ಅದರಲ್ಲಿ ಏನೂ ಇಲ್ಲ ಎಂದು ನಾವು ತಿಳಿದುಕೊಂಡಿದ್ದರೂ ನಮ್ಮಲ್ಲಿ ಅನೂಚಾನವಾಗಿ ಬಂದಿರತಕ್ಕ ವ್ಯವಸ್ಥೆ ಏನಿದೆ, ಪದ್ಧತಿ ಏನಿದೆ ಆ ಪದ್ಧತಿಯ ಪ್ರಕಾರ ಪೂಜೆ ಪುನಸ್ಕಾರಗಳನ್ನು ನಡೆಸಬೇಕಾಗುತ್ತದೆ. ಆದ್ದರಿಂದ ವಂಶಪಾರಂಪರ್ಯವಾಗಿ ಬಂದಂಥವರನ್ನೇ ತೆಗೆದುಕೊಳ್ಳಬೇಕು ಅದರೆ ನಾಲಾಯಕ್ಕಾದವರನ್ನು ತೆಗೆದು ಹಾಕಿ ಅದಕ್ಕೆ ಬೇಕಾದಂಥ ದೊಡ್ಡ ಗುಣ, ಯೋಗ್ಯತೆ, ವಿದ್ವತ್ತು ಇರುವುದಾದರೆ ಅವರನ್ನು ವಂಶಪಾರಂಪರ್ಯವಾಗಿಯೇ ಆಯಾಯಾ ದೇವಸ್ಥಾನದ ಪೂಜಾರಿಗಳಾಗಿ ಉಳಿಸಿಕೊಂಡು ಬರುವುದು ಸರಿ ಎಂದು ನನಗೆ ಅನಿಸುತ್ತದೆ.

ಮಠಗಳ ವಿಚಾರದಲ್ಲಿ ನಾನು ಿಂದೆ ಹೇಳಿದ ಹಾಗೆ ಅವರವರಿಗೆ ಗೊತ್ತಾದಂಥ ವ್ಯವಹಾರಗಳನ್ನು ಮಾಡಿಕೊಳ್ಳುವುದಕ್ಕೆ ಅವರೇ ಪೂರ್ಣ ಸ್ವತಂತ್ರರು, ಆದರೂ ನಮ್ಮ ದೇಶದಲ್ಲಿ ದುರ್ದೈವವಶಾತ್ ಒಂದು ಪಂಗಡಕ್ಕೆ ಸೇರಿದಂತಹ ಜನ ಇಲ್ಲ, ಒಕ್ಕಲಿಗರು ಚುಂಚನಗಿರಿ ಮಠ ಇದೆ ಎನ್ನುತ್ತೇವೆ, ವೀರಶೈವರು ಸುತ್ತೂರು ಮಠ, ಮುರುಗಿ ಮಠ ಇದೆ ಎಂದು ಹೇಳುತ್ತಾರೆ, ಬ್ರಾಹ್ಮಣರು ಶೃಂಗೇರಿ ಮಠ ಇದೆ ಎಂದು ಹೇಳುತ್ತಾರೆ. ಹೀಗೆ ನಮ್ಮ ನಮ್ಮ ದೃಷ್ಟಿಯಿಂದ ನಮ್ಮ ಮಠಗಳೇ ಬಹಳ ಪವಿತ್ರವಾದುವು ಎಂದು ನಾವು ಹೇಳಿಕೊಳ್ಳುತ್ತೇವೆ. ಸಂಬಂಧವಿಲ್ಲದೇ ಇದ್ದರೂ ಒಬ್ಬರಿಗೊಬ್ಬರಿಗೆ ಪೈಪೋಟಿ ಬರತಕ್ಕ ಸಂಭವ ಇರುವುವರಿಂದ ಸಾರ್ವಜನಿಕವಾಗಿ ಇರತಕ್ಕ ಎಲ್ಲಾ ಮಠಗಳ ಮೇಲೂ ಸರ್ಕಾರದ ಪೂರ್ಣ ಹತೋಟಿ ಇರಬೇಕು. ಒಳ್ಳೆಯ ಕೆಲಸ ಮಾಡುವುದಕ್ಕೆ ಯಾರೂ ಅಡ್ಡಿ ಮಾಡುವುದಿಲ್ಲ. ಶ್ರೀಮಾನ್ ಕೃಷ್ಣಪ್ಪನವರು ನಿನ್ನೆಯ ದಿನ ಹೇಳಿದ ಹಾಗೆ ಎಷ್ಟು ನಿಷ್ಠೆಯಿಂದ ವಿಶ್ವಾಸದಿಂದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತೇವೆಯೋ ಅಷ್ಟಷ್ಟು ಕೂಡ ಭಕ್ತರು ಹೆಚ್ಚು ಹೆಚ್ಚಾಗಿ ಕಾಣಿಕೆಗಳನ್ನು ದೇವಾಲಯಗಳಿಗೆ, ಮಠಗಳಿಗೆ ಸಲ್ಲಿಸುವುದರಲ್ಲಿ ಯಾವ ಅಭ್ಯಂತರವೂ ನನಗೆ ಕಾಣುವುದಿಲ್ಲ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಅಲ್ಲಿ ಮಾನ್ಯ ಮಿತ್ರರು ಮತ್ತು ಮಾನ್ಯ ಮಂತ್ರಿಗಳು ಎಲ್ಲಾ ವಿಚಾರಗಳನ್ನೂ ಪರಿಶೀಲನೆ ಮಾಡಿ ಇದರಲ್ಲಿ ಸರ್ಕಾರದವರ ಉದ್ದೇಶವಾದರೂ ಯಾರಾದರೂ ಹಕ್ಕು ಬಾಧ್ಯತೆಗಳನ್ನು ಕಿತ್ತುಕೊಳ್ಳಬೇಕೆಂದು ಇಲ್ಲದೇ ಇರುವುದರಿಂದ ಸಾರ್ವಜನಿಕ ಕೆಲಸಗಳಿಗೆ ಉಪಯೋಗವಾಗುವ ದೃಷ್ಟಿಯಿಂದ ಧಾರ್ಮಿಕ ದತ್ತಿಗಳಿಂದ, ಮಠಗಳ ವರಮಾನದಿಂದ ಉತ್ಪನ್ನವನ್ನು ಪಡೆಯುವುದಕ್ಕೆ ಒಂದು ಅವಕಾಶ ಕಲ್ಪಿಸಿಕೊಡಬೇಕು, ಅದರಿಂದ ನಾಳೆ ಈ ದೇಶಕ್ಕೆ ಒಂದು ಒಳ್ಳೆಯದಾಗುತ್ತದೆ ಎಂದು ಹೇಳಿ ಈ ಸಂದರ್ಭದಲ್ಲಿ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ಮಠ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಮಸೂದೆಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತ, ನಾನೀಗ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ.

3-30 P.M.

ಸ್ವಾಮಿ, ಈ ದೇಶದಲ್ಲಿ ಅನೇಕ ಸಹಸ್ರಾರು ವರ್ಷಗಳಿಂದ ಯಾವ ಒಂದು ಕಾನೂನಿನ ಸಂಬಂಧವೂ ಇಲ್ಲದೆ, ನಮ್ಮ ದೇಶದಲ್ಲಿರತಕ್ಕ ಧಾರ್ಮಿಕ ಸಂಸ್ಥೆಗಳು ದೇಶದ ಸಂಸ್ಕೃತಿಯನ್ನು ಬೆಳೆಸಿಕೊಂಡು, ಜನತೆಯಲ್ಲಿ ಒಂದು ಸಂಘಟನೆಯನ್ನು ಬೆಳೆಸುತ್ತ ಅವು ತಮ್ಮ ಸೇವೆಯನ್ನು ದೇಶಕ್ಕೆ ಸಲ್ಲಿಸಿಕೊಂಡು ಬಂದಿರುತ್ತವೆ. ಇತ್ತೀಚೆಗೆ ಮೈಸೂರು ರಾಜ್ಯ ವಿಸ್ತಾರವಾದ ಮೇಲೆ ನಾಲ್ಕೈದು ಬೇರೆ ಬೇರೆ ಪ್ರದೇಶಗಳು ಒಟ್ಟುಗೂಡಿದ ಮೇಲೆ, ದೇಶದ ಎಲ್ಲ ಭಾಗಗಳಿಗೂ ಅನ್ವಯಿಸುವಂಥ ಒಂದು ಸಮಗ್ರ ಕಾನೂನನ್ನು ಮಾಡಿ ದೇಶದಲ್ಲಿರತಕ್ಕ ನಾನಾ ದೇವಾಲಯಗಳ ಹಾಗೂ ಮಠಗಳ ಉತ್ಪನ್ನವನ್ನು ಒಂದು ಸದ್ವಿನಿಯೋಗವಾಗತಕ್ಕ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂಬ ಉದ್ದೇಶದಿಂದ ಈಗ ಈ ಮಸೂದೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ದೇಶದಲ್ಲಿರತಕ್ಕ ಎಲ್ಲ ಮಠಗಳೂ, ದೇವಾಲಯಗಳೂ ಇಲ್ಲಿಯತನಕ ಈ ದೇಶದ ಸಂಸ್ಕೃತಿಯನ್ನು ಕಾಯ್ದುಕೊಂಡು ಬಂದಿವೆ ಎಂದರೆ ತಪ್ಪಾಗಲಾರದು.

ಇದು ಪ್ರತಿಯೊಬ್ಬರಿಗೂ ತಿಳಿದಿರತಕ್ಕ ವಿಚಾರ. ನಮ್ಮಲ್ಲಿ ಅನೇಕ ಪ್ರಸಿದ್ಧಿ ಹೊಂದಿದ ಮಠಗಳು ಬಹಳ ಹಿಂದಿನಿಂದಲೂ ಇಲ್ಲಿ ಧರ್ಮಪ್ರಚಾರ ಮಾಡಿಕೊಂಡು ಬಂದಿವೆ. ಆದರೆ ಈ ಮಠಗಳ ವಿಚಾರವನ್ನು ಪ್ರಸ್ತಾಪ ಮಾಡುತ್ತ ಶ್ರೀ ಜಿ. ಮರುಳಪ್ಪನವರು ಕೆಲವು ವಿಚಾರಗಳನ್ನು ಹೇಳಿದರು. ಆದರೆ ಅವುಗಳನ್ನು ಹಾಗೆ ಅವಲಂಬಿಸುವುದಕ್ಕೆ ಹೋಗುವುದು ಅಷ್ಟು ಸೂಕ್ತವೋ ಅಲ್ಲವೋ, ಆದುದರಿಂದ ಆ ವಿಚಾರಕ್ಕೆ ನಾನೀಗ ಹೋಗುವುದಿಲ್ಲ. ಆದರೆ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಕೆಲವು ಮಠಗಳು ವಿದ್ಯಾಭಿವೃದ್ಧಿಗೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟುಕೊಂಡು ಬಂದಿವೆ. ಅಂಥ ಮಠಗಳಲ್ಲಿ ಸಿದ್ಧಗಂಗೆ ಮಠ ಒಂದು. ಈ ಮಠದವರು ವಿದ್ಯಾಭಿವೃದ್ಧಿ ಹಾಗೂ ಸಮಾಜ ಸುಧಾರಣೆ ವಿಚಾರಣೆಗಳ ಬಗ್ಗೆ ವಿಶೇಷ ಗಮನ ಕೊಟ್ಟುಕೊಂಡು ಬಂದಿದ್ದಾರೆಂದರೆ ತಪ್ಪಾಗಲಾರದು. ಆದರೆ ಈ ದೇವಾಲಯ ಮತ್ತು ಮಠಗಳ ಆಡಳಿತ ಸರ್ಕಾರದವರ ಕೈಗೆ ಬಂದರೆ ಇವುಗಳ ಉತ್ಪತ್ತಿ ಇನ್ನೂ ಜಾಸ್ತಿ ಆಗುತ್ತದೆ ಎಂಬ ಉದ್ದೇಶದಿಂದ ಈ ಬಿಲ್ಲನ್ನು ತರಲಾಗಿದೆ. ಆದರೆ ಈ ದೇವಸ್ಥಾನಗಳಲ್ಲಿ ಆನುವಂಶೀಕವಾಗಿ ಕೆಲಸ ಮಾಡಿಕೊಂಡು ಬಂದಿರುವಂಥ ಜನಗಳು ಕೆಲವರಿದ್ದಾರೆ. ಈ ವಿಚಾರಕ್ಕೆ ಸರ್ಕಾರ ಸ್ವಲ್ಪ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಸರ್ಕಾರದವರ ಕೈಗೆ ಅಧಿಕಾರ ಬಂದರೆ ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ನಾವೀಗ ಈ ಬಿಲ್ಲನ್ನು ಪಾಸ್ ಮಾಡುತ್ತಿದ್ದೇವೆ. ನಾವು ಈಗಾಗಲೇ ಹಿಂದಿನಿಂದಲೂ ಜಾರಿಯಲ್ಲಿದ್ದಂತ ಇನಾಂತಿ ಇತ್ಯಾದಿಗಳನ್ನೆಲ್ಲ ರದ್ದುಮಾಡಿರುತ್ತೇವೆ. ಹೀಗೆ ಇನ್ನೂ ನಾವು ಅನೇಕ ಮಸೂದೆಗಳನ್ನು ಪಾಸ್ ಮಾಡಿದ್ದೇವೆ. ಆದರೆ ನಾವು ಈ ದಿವಸ ಏನು ಒಂದು ಉದ್ದೇಶವನ್ನು ಇಟ್ಟುಕೊಂಡು ಈ ಮಸೂದೆಗಳನ್ನು ಪಾಸ್ ಮಾಡುತ್ತಿದ್ದೇವೋ ಆ ಉದ್ದೇಶ ಸಫಲವಾಗುವಂತೆ ಸರ್ಕಾರದವರು ನೋಡಿಕೊಳ್ಳಬೇಕಾದುದು ಬಹಳ ಮುಖ್ಯವಾದಂಥ ವಿಷಯ. ನೆನ್ನೆಯ ದಿವಸ ನಮ್ಮ ಮಂತ್ರಿಗಳು ಶ್ರವಣಬೆಳಗೊಳದಲ್ಲಿ ಒಂದು ಆರ್ಟ್ಸ್ ಮತ್ತು ಸೈನ್ಸ್ ಕಾಲೇಜನ್ನು ಸ್ಥಾಪನೆ ಮಾಡುವುದಾಗಿ ಹೇಳಿದರು. ಆ ಮೂಲಕ ನಮ್ಮ ಕನ್ನಡನಾಡಿನ ಸಾಹಿತ್ಯ ಸೇವೆ ಮತ್ತು ಜನನಾಥನ ಸೇವೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಹಾಗೆ ಬಿಳಿಗಿರಿರಂಗನ ಬೆಟ್ಟದ ವಿಚಾರವನ್ನೂ ಹೇಳಿದರು. ಹಾಗೆ ಹೇಳುವುದಾದರೆ ನಮ್ಮಲ್ಲಿರತಕ್ಕ ಮುಳ್ಳಯ್ಯನಗಿರಿ ಶಿಖರ ಬಹಳ ಮುಖ್ಯವಾದುದು. ಅದರ ಪಕ್ಕದಲ್ಲಿರತಕ್ಕ ಬಾಬಾಬುಡನ್‌ಗಿರಿ ಕೂಡ ಪ್ರಸಿದ್ಧಿಯಾದ ಯಾತ್ರಾ ಸ್ಥಳವೊಂದೇ ಅಲ್ಲದೆ, ಅದು ಅನೇಕ ಗಿಡಮೂಲಿಕೆಗಳಿಗೂ, ವನ್ಯ ಮೃಗಗಳ ವೀಕ್ಷಣೆಗೂ ಬಹಳ ಪ್ರಸಿದ್ಧಿಯಾದ ಸ್ಥಳ. ಅಲ್ಲಿಗೆ ವಿಶೇಷವಾಗಿ ವಿದೇಶೀ ಪ್ರವಾಸಿಗಳು ಬರುತ್ತಿದ್ದಾರೆ. ಆದುದರಿಂದ ಆ ಸ್ಥಳವನ್ನೂ ಪ್ರವಾಸಿಗಳ ಒಂದು ಆನಂದ ವಿಹಾರ ಕೇಂದ್ರವನ್ನಾಗಿ ಏರ್ಪಡಿಸಲು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವರು ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಆದರೆ ಈಗ ಮಂಡಿಸಿರತಕ್ಕ ಕಾನೂನಿನ ಉದ್ದೇಶ ಅದಲ್ಲ. ಇದರಿಂದ ದೇಶಕ್ಕೆ ಇನ್ನೂ ಹೆಚ್ಚಿನ ಅನುಕೂಲವಾಗತಕ್ಕ ಅವಕಾಶವಿರುವುದರಿಂದ ಇದಕ್ಕೆ ಸರ್ವರೂ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಈ ಬಿಲ್ಲಿನ ಪರಿಮಿತಿಯೊಳಗೆ ಮುಸಲ್ಮಾನರ ಹಾಗೂ ಕ್ರೈಸ್ತರ ದೇವಾಲಯಗಳು ಬರುವುದರಿಂದ ಇವುಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕೆ ಒಂದು ಬೋರ್ಡನ್ನು ರಚನೆ ಮಾಡಬೇಕೆಂದು ಹೇಳಿದ್ದಾರೆ. ಇನ್ನು ಮುಂದೆ ಇವುಗಳ ಆಡಳಿತವನ್ನು ಒಂದು ಸುವ್ಯವಸ್ಥೆಯಿಂದ ನಡೆಸಿಕೊಂಡು ಹೋಗತಕ್ಕದ್ದು ಬಹಳ ಮುಖ್ಯವಾದ ವಿಷಯ. ಮುಂದೆ 'ನೇಮಕವಾಗಲಿರತಕ್ಕ ಅಸಿಸ್ಟೆಂಟ್ ಕಮಿಷನರ್ಸ್ ಮತ್ತು ಡೆಪ್ಯುಟಿ ಕಮಿಷನರ್'ಗಳಿಗೆ ಮತ್ತು ಈ ದೇವಾಲಯಗಳ ಆಡಳಿತ ನಡೆಸತಕ್ಕ ಸಮಿತಿಗಳಿಗೆ ಸರಿಯಾದ ನಿರ್ದೇಶನಗಳನ್ನಿತ್ತು ಈ ದೇವಾಲಯಗಳೂ, ಮಠಮಾನ್ಯಗಳೂ ತಮ್ಮ ಕೆಲಸಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ಈ ಮಸೂದೆ ರಚಿತವಾಗಬೇಕೆಂದು ಹೇಳಿ, ಸಭೆಯ ಮುಂದೆ ಈಗ ಮಂಡಿಸಿರತಕ್ಕ ಮಸೂದೆಗೆ ನನ್ನ ಸಂಪೂರ್ಣ ಬೆಂಬಲವನ್ನಿತ್ತು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರಿ).—ಮಾನ್ಯ ಸಭಾಧ್ಯಕ್ಷರೆ, ಈಗ ನಮ್ಮ ಮುಂದೆ ಮಂಡಿಸಿರತಕ್ಕ ಮಸೂದೆಯನ್ನು ನಾನು ನೋಡಿದೆನು. ನಮಗೆ ಸ್ವಾತಂತ್ರ್ಯ ಬಂದು 15 ವರ್ಷಗಳನಂತರ ಇಂಥ ಒಂದು ಮಸೂದೆಯನ್ನು ಸರ್ಕಾರದವರು ಸಭೆಯ ಮುಂದೆ ತರುತ್ತಾರೆಂದು ನಾನು ನಿರೀಕ್ಷಿಸಿರಲಿಲ್ಲ. ಈ ಬಿಲ್ಲನ್ನು ನಾನು ಬಹಳ ಜಾಗರೂಕತೆಯಿಂದ ಓದಿ ನೋಡಿದೆನು. ಇದರಲ್ಲಿ ಇಡೀ ರಾಷ್ಟ್ರದ ಒಂದು ಸಮಗ್ರ ದೃಷ್ಟಿಯಿಲ್ಲ. ಜನರಿನ್ನೂ ಒಂದು ಅಂಧಾಕಾರ ಭಾವನೆಯಿಂದಲೇ ಹೋಗುತ್ತಿರುವಂತೆ ಭಾಸವಾಗುತ್ತಿದೆ. ಈ ಮಸೂದೆಯಲ್ಲಿ ಜನತೆಯ ಪರಸ್ಪರ ಭಾವನೆಗಳ ಬೆಳವಣಿಗೆಗಾಗಲಿ, ಅಥವಾ ಸಹಜೀವನ ಭಾವನೆಯನ್ನು ಬೆಳೆಸುವುದಕ್ಕಾಗಲಿ, ಅಥವಾ ಒಂದು ಧಾರ್ಮಿಕ ಮನೋಭಾವನೆಯನ್ನು ಬೆಳೆಸುವುದಕ್ಕಾಗಲಿ ಈ ಮಸೂದೆಯಲ್ಲಿ ಅವಕಾಶವಿದ್ದಂತೆ ನನಗೆ ಕಂಡುಬರಲಿಲ್ಲ. ನಮ್ಮ ದೇಶದಲ್ಲಿ ಸಾವಿರಾರು ದೇವರುಗಳಿವೆ. ಭರತಖಂಡ

(ಶ್ರೀ ಗೋಪಾಲ ಸಾಲೆನ್ನ)

ದಲ್ಲಿರುವಷ್ಟು ಅಧಿಕ ಸಂಖ್ಯಾತ ದೇವರುಗಳು ಬೇರೆ ಯಾವ ದೇಶದಲ್ಲಿಯೂ ಇಲ್ಲ. ಈ ಮಸೂದೆಯಲ್ಲಿ ಹೀಗೆ ನಮ್ಮ ರಾಜ್ಯದಲ್ಲಿರತಕ್ಕ ದೇವರುಗಳ ಒಂದು ಖಾನೇಷುಮಾರಿ ಲೆಕ್ಕವನ್ನು ಸಂಗ್ರಹಿಸಲು ಅಥವಾ ತಯಾರು ಮಾಡಲು ಅವಕಾಶವಿದ್ದ ಹಾಗೆ ಕಂಡು ಬರುತ್ತಿಲ್ಲ. ಆದಾಗ್ಯೂ ಈಗ ಸರ್ಕಾರದವರ ಕಣ್ಣು ಎಲ್ಲೆಲ್ಲಿ ಯಾವ ಯಾವ ದೇವರಿದೆ, ಅದಕ್ಕೆಷ್ಟು ಧನಕನಕ ಇದೆ, ಯಾವ ದೇವರಿಗೆಷ್ಟು ಐಶ್ವರ್ಯವಿದೆ ಎನ್ನುವುದರ ಮೇಲೆ ಬಿದ್ದಂತೆ ಕಂಡುಬರುತ್ತಿದೆ. ಈ ಎರಡು ಉದ್ದೇಶಗಳಿಂದ ಸರ್ಕಾರ ಇವುಗಳನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕೆಂಬ ಒಂದು ವಿಚಾರ ವಿನಾ ಈ ಬಿಲ್ಲಿನಲ್ಲಿ ಮತ್ತೇನೂ ಇರುವುದಿಲ್ಲ. ರಾಜ್ಯದಲ್ಲಿ ಒಂದು ಧಾರ್ಮಿಕ ಆಂದೋಲವನ್ನು ತಂದು ಜನತೆಯಲ್ಲಿ ಒಂದು ಐಕ್ಯಮತ್ಯವನ್ನು ಸಾಧಿಸೋಣ, ನಮ್ಮ ಜನಾಂಗವನ್ನು ಸುಧಾರಣೆ ಮಾಡೋಣ ಎನ್ನತಕ್ಕ ಯಾವ ಒಂದು ಉದ್ದೇಶವೂ ಈ ಬಿಲ್ಲಿನಲ್ಲಿ ಇದ್ದಂತೆ ನನಗೆ ಕಂಡು ಬರುತ್ತಿಲ್ಲ. ಈ ಬಿಲ್ಲಿನಲ್ಲಿ ಹೇಳಿರತಕ್ಕ ಧೋರಣೆಯನ್ನು ನೋಡಿದರೆ ನಮ್ಮ ದೇಶದಲ್ಲ ದೇವರುಗಳ ಸಂಖ್ಯೆ ಇನ್ನೂ ಜಾಸ್ತಿಯಾಗುತ್ತಿದೆಯೇ ವಿನಾ ಇದರಿಂದ ಕಡಮೆಯಾಗತಕ್ಕ ಸೂಚನೆಗಳೇನೂ ಕಾಣುತ್ತಿಲ್ಲ. ಉದಾಹರಣೆಗಾಗಿ ಕೆಲವು ಉನ್ನತಮಟ್ಟದ ದೇವಸ್ಥಾನಗಳಿವೆ, ಇನ್ನೊಂದು ಮಟ್ಟದಲ್ಲಿ ನೀಚಮಟ್ಟದ ದೇವರುಗಳು ಎಂದಿರುತ್ತವೆ. ಉನ್ನತಮಟ್ಟದಲ್ಲಿರುವ ದೇವಸ್ಥಾನಗಳಲ್ಲಿ ಸಾಕಷ್ಟು ಉತ್ತಮ ರೀತಿಯಿಂದ ಆರಾಧನೆ ಮಾಡುತ್ತಿದ್ದಾರೆ. ಅಂತಹ ಕೆಲವು ದೇವಾಲಯಗಳು ಎಂದರೆ ಉಡುಪಿಯಲ್ಲಿರುವ ಶ್ರೀ ಕೃಷ್ಣನ ದೇವಸ್ಥಾನ, ಮಂಗಳೂರಿನಲ್ಲಿರುವ ಶ್ರೀ ವೆಂಕಟರಮಣ ದೇವರ ದೇವಸ್ಥಾನ, ಹಾಗೂ ಸುಬ್ರಹ್ಮಣ್ಯದಲ್ಲಿರುವ ದೇವಸ್ಥಾನ, ಇವುಗಳು ಉನ್ನತಮಟ್ಟದಲ್ಲಿ ಕೆಲಸ ಮಾಡುತ್ತಿವೆ. ಇನ್ನು ಕೆಲವು ನೀಚ ದೇವರ ದೇವಸ್ಥಾನಗಳಿವೆ.....

Mr. SPEAKER.—Are we to deal with the customs here or with the provisions of the Bill?

Sri GOPAL SALENNA.—That also comes within the provisions of the Bill. ಉನ್ನತಮಟ್ಟದಲ್ಲಿರುವ ದೇವಸ್ಥಾನಗಳನ್ನು ಹಾಗೂ ನೀಚ ದೇವರ ದೇವಸ್ಥಾನಗಳನ್ನು ರಿಜಿಸ್ಟರು ಮಾಡಿಕೊಳ್ಳಲು ಇದರಲ್ಲಿರುವಂತೆ ಅವಕಾಶವಿರಬೇಕು. ಉನ್ನತಮಟ್ಟದಲ್ಲಿರುವ ದೇವಸ್ಥಾನಗಳು ಎಂದರೆ ಉಡುಪಿಯಲ್ಲಿರುವ ಶ್ರೀ ಕೃಷ್ಣನ ದೇವಸ್ಥಾನ ಮತ್ತಿತರ ದೇವಸ್ಥಾನಗಳಲ್ಲಿ ಬ್ರಾಹ್ಮಣರಿಂದ ಆರಾಧನೆಗಳು ನಡೆಯುತ್ತಿವೆ. ಇನ್ನು ಸುಬ್ರಹ್ಮಣ್ಯದಲ್ಲಿ ಗೌಡ ಸಾರಸ್ವತ ಸಮಾಜದವರು ಆರಾಧನೆಗಳನ್ನು ನಡೆಸುತ್ತಿದ್ದಾರೆ. ನಮ್ಮ ಭಾಗದಲ್ಲಿ ಷೆಡ್ಯೂಲ್ಡು ಟ್ರೈಬ್ಸ್‌ನಲ್ಲಿ ಕೊರಗರು ಎಂಬ ಪಂಗಡದವರು ನೀಚ ದೇವರುಗಳನ್ನು ಪೂಜೆ ಮಾಡುವವರು ಸಾಧಾರಣವಾಗಿ ಕೆಲವು ಜನರಿದ್ದಾರೆ. ಅವರು ಪೂಜೆಯನ್ನು ಮಾಡಿ ಇತರ ದೇವಸ್ಥಾನಗಳಂತೆ ನೈವೇದ್ಯಕ್ಕೆ ಏನಿಡುತ್ತಾರೆಂದರೆ ಉತ್ಸವ ಕಾಲದಲ್ಲಿ ಸಾವಿರಾರು ಜನಕ್ಕೆ ಭೋಜನ ಮಾಡಿಸುವಾಗ ಅವರುಗಳು ತಿಂದ ಮಿಕ್ಕ ಎಂಜಲನ್ನು ಒಣಗಿಸಿ ಅದನ್ನು ನೈವೇದ್ಯ ಮಾಡುವ ಒಂದು ಪದ್ಧತಿ ಅವರಲ್ಲಿ ಬೆಳೆದು ಬಂದಿದೆ. ಇಂತಹ ನೀಚ ದೇವರನ್ನು ಪೂಜೆ ಮಾಡುವಂತಹ ದೇವರಿಗೆ ದಾನವಾಗಿಯೂ ಕೆಲವರು ಕೊಡುವ ಪದ್ಧತಿ ಇದೆ. ಇತರ ಹಿಂದೂಗಳು ಕೆಲವರು ಈ ಕೊರಗ ಜಾತಿಯವರನ್ನು ಕರೆದು ನೀಚ ದೇವರ ಪೂಜೆಗಾಗಿ ಅನ್ನ, ಎಣ್ಣೆ, ಇತ್ಯಾದಿಗಳನ್ನು ಕೊಡುತ್ತಾರೆ. ಹೀಗೆ ನೀಚ ದೇವರಿಗಾಗಿ ದಾನ ಪಡೆಯುವ ಪದ್ಧತಿ ಮಂಗಳೂರಿನಲ್ಲಿದೆ. ಇಲ್ಲಿರುವ ಪಟ್ಟಿಯಲ್ಲಿ ಬಿಳಿಗಿರಿ ರಂಗನ ಬೆಟ್ಟ ಹಾಗೂ ಸಿರಸಿಯಲ್ಲಿರುವ ಎಲ್ಲಮ್ಮ ದೇವರ ದೇವಸ್ಥಾನ ಇವುಗಳು ಬರುವಂತೆ ಅವಕಾಶ ಕಲ್ಪಿಸಿದ್ದಾರೆ. ಅದರಂತೆ ಈ ನೀಚ ದೇವಸ್ಥಾನಗಳನ್ನ ಈ ವಿಧೇಯಕದಲ್ಲಿ ತರಲು ಯಾವ ಕ್ಲಾಸಿನಲ್ಲಿ ಸೇರಿಸಬಹುದು ಎನ್ನುವುದರ ಕಡೆಗೂ ಗಮನಕೊಡಬೇಕು. ಇವೊತ್ತು ದೇವಸ್ಥಾನಗಳಿಗೆ ಉತ್ಪತ್ತಿ ಜಾಸ್ತಿಯಾಗುತ್ತಿದೆ. ಹರಕೆಗಳನ್ನು ಹೊತ್ತು ಅನೇಕರು ದೇವಸ್ಥಾನಗಳಿಗೆ ಅದನ್ನು ಕೊಡಲು ಜನರು ಮುಂದೆ ಬರುತ್ತಿದ್ದಾರೆ. ಇದು ಮೊದಲಿಂದಲೂ ಬರುತ್ತಿದೆ. ಒಂದು ಕಡೆ ಇದರಿಂದ ಜನರ ಶೋಷಣೆಯೂ ಆಗುತ್ತದೆ. (*Interruption.*) ಅಲ್ಲದೆ ನಮ್ಮಲ್ಲಿ ಒಂದು ಸಾರಿ ಏನು ನಡೆಯಿತೆಂದರೆ, ಹೆಂಗಸರ ವಶದಲ್ಲಿ ಒಂದು ಮೂರ್ತಿಯಿತ್ತು. ಅದನ್ನು ಪೂಜೆ ಮಾಡಲಿಕ್ಕಾಗಿ ಅನೇಕ ಜನರು ಹೆಚ್ಚಾಗಿ ಬರುತ್ತಿದ್ದರು. ಇದನ್ನು ತಪ್ಪಿಸಬೇಕೆಂದು ಕೆಲವರು ಆ ಮೂರ್ತಿಯನ್ನು ತೆಗೆದುಕೊಂಡು ಹೋಗಿ ಬಾವಿಗೆ ಹಾಕಿಬಿಟ್ಟರು. ಅದನ್ನು ಪೋಲೀಸು ಆಫೀಸರು ತನಿಖೆಮಾಡಿ ಈಗ ಆ ಮೂರ್ತಿಯನ್ನು ತಾಲ್ಲೂಕು ಆಫೀಸಿಗೆ ಕಳುಹಿಸಿದ್ದಾರೆನ್ನುವ ವರ್ತಮಾನ ಬಂದಿದೆ. ಆದರೆ ಈಗ ಆ ಮೂರ್ತಿಯನ್ನು ಯಾರೂ ಕೊಂಡೊಯ್ಯಲಿಕ್ಕೆ ಹೋಗುತ್ತಿಲ್ಲ. ಹಾಗೆ, ನಮ್ಮ ಭಾಗದಲ್ಲಿ ಒಂದು ಕಡೆ ಒಬ್ಬರು ಮುಸಲ್ಮಾನರು ಪುಣ್ಯತೀರ್ಥ ಎಂದು ಕೊಡುತ್ತಿರುವ ಸ್ವಲ್ಪ ನೀರನ್ನು ತೆಗೆದುಕೊಳ್ಳಲು ಸಾವಿರಾರು ಜನರು ಅಲ್ಲಿಗೆ ಬರುತ್ತಾರೆ. ಹೀಗೆ ಒಂದು

ರೀತಿಯಾದ ಅಂಧಶ್ರದ್ಧೆ ನಮ್ಮ ಜನಗಳಲ್ಲಿ ನಡೆದುಕೊಂಡು ಬರುತ್ತಿದೆ. ಹಾಗೇ ಇನ್ನು ಮುಂದೆ ನಮ್ಮ ದೇಶದ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರಿಗೂ ಒಂದು ದೇವಸ್ಥಾನವನ್ನು ಕಟ್ಟಿಸಬೇಕು ಎಂದು...

Mr. SPEAKER.—There should be no personal references.

ಶ್ರೀ ಗೋಪಾಲ ಸಾಲೆನ್ಸ್.—ಆದುದರಿಂದ ಇಂತಹ ಒಂದು ಅಂಧಶ್ರದ್ಧೆ ಮುಂದೆ ಹೆಚ್ಚಾಗಲಿಕ್ಕೆ ತುಂಬಾ ಅವಕಾಶವಿದೆ. ನಮ್ಮ ಜನರಲ್ಲಿ ಈ ಅಂಧಶ್ರದ್ಧೆಗಳು ಹೋಗಿ ಅವರು ವಿಶಾಲ ಭಾವನೆಯಿಂದ ಮುಂದೆ ಬರಬೇಕು. ನಮ್ಮ ಮೈಸೂರು ರಾಜ್ಯದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರಿಗೆ ಬಹಳ ಉದಾತ್ತವಾದ ಭಾವನೆ ಇದೆ ಎಂದು ನಾವೂ ಕೇಳಿದ್ದೇವೆ. ಅಷ್ಟು ಮಾತ್ರವಲ್ಲ, ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳೂ ವಿದೇಶಗಳಿಗೆ ಹೋಗಿ ಅಲ್ಲಿಯ ಕಾರ್ಯ ವಿಧಾನಗಳನ್ನೆಲ್ಲಾ ನೋಡಿಕೊಂಡು ಬಂದಿರುವಂತಹವರ ಕೈಯಲ್ಲಿಯೇ ಈ ರೀತಿಯಾದ ಮಸೂದೆ ಬಂದಿದೆ, ಅವರು ಹೊರದೇಶಗಳಲ್ಲಿ ನೋಡಿಕೊಂಡು ಬಂದಿರುವ ಅನುಭವದ ಮೇಲೆ ಒಂದು ವಿಶಾಲ ಮನೋಭಾವನೆಯಿಂದ ಇದನ್ನು ಪುನರ್ವಿಮರ್ಶೆ ಮಾಡುವುದು ಅಗತ್ಯ ಎಂದು ನಾನು ಭಾವಿಸುತ್ತೇನೆ. ಇಂತಹ ದೇವರುಗಳ ಪೂಜೆಯನ್ನು ರಿಜಿಸ್ಟರು ಮಾಡಿಸಿಕೊಳ್ಳಲು ಯಾವ ರೀತಿಯಾದ ಬದಲಾವಣೆಗಳನ್ನು ಮಾಡುವುದು ಸಾಧ್ಯ ಎನ್ನುವುದನ್ನು ಸುಧಾರಣೆ ಮಾಡಿ ತರಬೇಕು. ಇನ್ನು ಕೆಲವು ಕಡೆಗಳಲ್ಲಿರುವ ದೇವಸ್ಥಾನಗಳಲ್ಲಿ ಪೂಜೆ ಮಾಡುವವರು ಆರ್ಯ ಸಮಾಜದವರಿದ್ದಾರೆ, ಬ್ರಹ್ಮ ಸಮಾಜದವರಿದ್ದಾರೆ, ಅವರ ತತ್ವಕ್ಕೆ ಅನುಗುಣವಾಗಿ ಅವರೇ ಒಂದು ರೀತಿ ಅನುಸರಿಸುತ್ತಾರೆ.

ಸ್ವಾಮಿ, ದೇವಸ್ಥಾನಗಳಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಚೆನ್ನಾಗಿ ಪರಿಶೀಲಿಸಿ ನಾವು ಮುಂದೆ ಹೋಗುವ ಹಾಗೆ ಪ್ರಯತ್ನ ಮಾಡಬೇಕು. ದೇವಾಲಯಗಳ ಸಂಖ್ಯೆ ದೇಶದಲ್ಲಿ ಜಾಸ್ತಿಯಾಗುತ್ತಿವೆ. ಆದರೆ ಜನರಲ್ಲಿ ಧಾರ್ಮಿಕ ಅಂಧಭಾವನೆ ಹೆಚ್ಚಾಗಿದೆ. ದೇವರ ಮೇಲೆ ಪೂರ್ತಿ ಭಾರ ಇಟ್ಟು ಜನ ಅಂಧಶ್ರದ್ಧೆಯಿಂದ ಪ್ರಾಯಶ್ಚಿತ್ತ ಪಡಕೊಳ್ಳುತ್ತಾರೆ. ಅದಕ್ಕೆ ಒಂದು ಉದಾಹರಣೆಯನ್ನು ಹೇಳಬಹುದು. ನಮ್ಮಲ್ಲಿ ಒಂದು ಟ್ರೆಜರಿ ಎಂಬೆಜಲ್‌ಮೆಂಟ್ ಕೇಸು ಆಯಿತು. ಸುಳ್ಳು ಬಿಲ್ಲಿನಿಂದ ಮೂರು ಲಕ್ಷ ರೂಪಾಯಿ ಎತ್ತಿ ಹಾಕಿದ್ದರು. ಈ ರೀತಿ ಮೋಸದಿಂದ ಸಂಪಾದನೆ ಮಾಡಿದ ಹಣದಲ್ಲಿ ಕೆಲವೊಂದು ಭಾಗ ದೇವಾಲಯಕ್ಕೆ ಮುಡುಪು ಆಗಿ ಕೊಡುತ್ತಾ ಬಂದಿದ್ದರು. ಅನ್ಯಾಯದಿಂದ ಸಂಪಾದಿಸುವ ಒಂದು ರೂಪಾಯಿಯಲ್ಲಿ ನಾಲ್ಕಾಣೆ ದೇವರಿಗೆ ಕೊಟ್ಟುಬಿಡುತ್ತಾರೆ. ಈ ಪ್ರಕಾರ ಹಂಚಿ ಹಾಕಿದರೂ ಅವನು ಸಿಕ್ಕಿಬಿಟ್ಟು ಶಿಕ್ಷೆಯಾಯಿತು. ಆದರೆ ಹಣ ಮಾತ್ರ ಸಿಕ್ಕಲಿಲ್ಲ. ಇಂಥ ಹಣದಲ್ಲಿ ದೇವರ ಹೆಸರಿನಲ್ಲಿ ಒಂದು ಪಾಲು ಇರುತ್ತದೆ. ವ್ಯಾಪಾರ ಮಾಡುವವರು ಸಹ ಇದೇ ರೀತಿ ದೇವರಿಗೆ ಹಣ ಕೊಡುತ್ತಾರೆ. ಬ್ಲಾಕ್ ಮಾರ್ಕೆಟ್ಟಿನಿಂದ ಸಂಪಾದನೆ ಮಾಡುವವರು ಕೂಡ ಒಂದು ಡಬ್ಬಾ ಇಟ್ಟುಕೊಂಡು ಅದರಲ್ಲಿ ದೇವರ ಹೆಸರಿನಲ್ಲಿ ಕಾಣಿಕೆ ಹಾಕುತ್ತಾರೆ. ಅಂಧಭಾವನೆಯಿಂದಲೇ ದೇವರಿಗೆ ಹಣ ಬರುತ್ತಿದೆ. ಕಳ್ಳತನ ದರೋಡೆಮಾಡಿದ ಹಣದಲ್ಲಿ ಸಹ ದೇವಸ್ಥಾನಕ್ಕೆ ಪಾಲು ಬರುತ್ತದೆ. ಆದ್ದರಿಂದ ಈ ಮಸೂದೆಯಲ್ಲಿ ಒಂದು ನಿರ್ದಿಷ್ಟ ಅಂಶ ಇರಬೇಕು. ಅನ್ಯಾಯವಾಗಿ ಹಣ ಬರುವುದನ್ನು ನಿಲ್ಲಿಸಬೇಕು. ಇಷ್ಟೇ ಅಲ್ಲದೆ ಮಾರಮ್ಮ ಮುಂತಾದ ದೇವರಿಗೆ ಕೋಳಿ, ಕುರಿ ಬಲಿ ಕೊಡುವುದನ್ನು ನಿಲ್ಲಿಸಬೇಕು. ಶರಾಬ್ ಕೊಡುವುದನ್ನು ನಿಲ್ಲಿಸಬೇಕು. ಜನರಲ್ಲಿಯ ಅಂಧ ಭಾವನೆ ಹೋಗುವ ಹಾಗೆ ಮಾಡಬೇಕಾದುದು ಅಗತ್ಯ. ಇದಲ್ಲದೆ ಹಣ ಅಪವ್ಯಯವಾಗದಂತೆ ಜಾಗ್ರತೆ ವಹಿಸಬೇಕು. ಧಾರ್ಮಿಕ ಸಂಸ್ಥೆಗಳು ಒಳ್ಳೇ ಹೆಸರು ಸಂಪಾದನೆ ಮಾಡುವ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅದಕ್ಕೆ ತಕ್ಕಹಾಗೆ ಈ ಮಸೂದೆಯಲ್ಲಿ ಮಾರ್ಪಾಟ ಮಾಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಇದನ್ನು ನಮ್ಮ ರಾಷ್ಟ್ರದ ಹಿತಕ್ಕೋಸ್ಕರ ಮಾಡಬೇಕಾಗಿದೆ.

ಇನ್ನೊಂದು ವಿಷಯ. ಈ ಸಂಸ್ಥೆಗಳು, ದೇವಸ್ಥಾನಗಳು ನಮ್ಮ ದೇಶದಲ್ಲಿ ಜಾತಿ ವೈಷಮ್ಯವನ್ನು ಹೆಚ್ಚಿಸುತ್ತಿವೆ. ಇವುಗಳಿಂದಲೇ ಜಾತಿಗಳು ಹುಟ್ಟಿವೆ. ಹರಿಜನರು ಡಾಕ್ಟರರಾಗುತ್ತಾರೆ, ಇಂಜಿನಿಯರ್ ಆಗುತ್ತಾರೆ ಆದರೆ ಹರಿಜನರು ಅರ್ಚಕರು ಏಕೆ ಆಗಬಾರದು? ದೇವರ ಪೂಜೆ ಮಾಡಲು ಹರಿಜನರು ಏಕೆ ಇರಬಾರದು? ಹರಿಜನರೂ ಅರ್ಚಕರು ಆಗುವ ಹಾಗೆ ವ್ಯವಸ್ಥೆ ಮಾಡಬೇಕಾದುದು ಅಗತ್ಯ. ನಮ್ಮ ದೇಶದಲ್ಲಿಯ ಅಸ್ಪೃಶ್ಯತೆಯ ಮೂಲ ಈ ದೇವಸ್ಥಾನಗಳು. ಕಾನೂನು ಇದ್ದರೂ ಮನೋಧರ್ಮ ಬದಲಾವಣೆ ಆಗಿದೆಯೇ? ಆಡಳಿತ ವರ್ಗದ ಟ್ರಸ್ಟಿಗಳನ್ನು ನೇಮಕ ಮಾಡುವಾಗ್ಗೆ ದೇವರಿಗೆ ಯಾರು ಧನ, ಆಸ್ತಿ ಕೊಡುತ್ತಾರೆಯೋ ಅಂಥವರನ್ನು ಸೇರಿಸಬೇಕು. ಶ್ರದ್ಧಾಭಕ್ತಿ ಭಾವ ದೇವರಬಗ್ಗೆ ಬಾಕಿ ಜನರಿಗೆ ಇರುವ ಹಾಗೆ ಹರಿಜನರಿಗೂ ಇವೆ. ಹರಿಜನರಿಗೆ ಏನು ಅವಕಾಶ ಇದೆ? ಟ್ರಸ್ಟೀಸ್, ಪೂಜಾರಿ, ಆಡಳಿತ ವರ್ಗ, ಚೇರಮನ್ ಮುಂತಾದ ನೇಮಕಗಳಲ್ಲಿ ಹರಿಜನರಿಗೂ ಸಮಾನವಾದ ಅವಕಾಶ ಇರಬೇಕು. ಪ್ರತ್ಯೇಕ ಅಸಿಸ್ಟೆಂಟ್ ಕಮಿಷನರ್ ಅನ್ನು ನೇಮಕ ಮಾಡುವುದರ ಬದಲು ಈಗ ಇರತಕ್ಕಂಥವರ ಕೈಯಲ್ಲಿಯೇ ಏಕೆ ಅಧಿಕಾರ

(ಶ್ರೀ ಗೋಪಾಲ ಸಾಲೆನ್ನ)

ಕೊಡಬಾರದು ? ಇದನ್ನು ನೋಡಿದರೆ ಇದರಲ್ಲಿ ಏನೋ ಒಂದು ಉದ್ದೇಶವಿದೆ ಎಂದು ಕಾಣುತ್ತದೆ. ಇನ್ನೊಂದು ನಮೂನೆಯ ಸುಲಿಗೆ ಸರಕಾರದವರು ಮಾಡುತ್ತಾರೆಂದು ಕಾಣುತ್ತದೆ.

4-00 P.M.

ಇನ್ನು ಸ್ವಾಮಿ, ಈ ಧಾರ್ಮಿಕ ಸಂಸ್ಥೆಗಳು ಮತ್ತು ದೇವಸ್ಥಾನಗಳು ಎಂದು ಹೇಳಿದಾಗ, ನಮ್ಮಲ್ಲಿನ ಕೆಲವು ದೇವಸ್ಥಾನಗಳ ನೆನಪಾಗುತ್ತದೆ. ಮಂಗಳೂರಿನಿಂದ ಕುಂದಾಪುರಕ್ಕೆ ಹೋಗುವ ದಾರಿಯಲ್ಲಿ ನೂರಾರು ದೇವಸ್ಥಾನಗಳು ಹಾಳುಬಿದ್ದಿವೆ. ಆ ಸ್ಥಳಗಳಲ್ಲಿ ಸ್ನಾನಮಾಡಲಿಕ್ಕೆ, ಅಂಗಡಿ ಇಡಲಿಕ್ಕೆ, ಉಳಿದುಕೊಳ್ಳಲಿಕ್ಕೆ ಏರ್ಪಾಡು ಮಾಡಬೇಕು. ಈ ಮಸೂದೆಯಲ್ಲಿಯೇ ಏನಾದರೂ ದಾರಿಮಾಡಿ, ಹಾಳು ಬಿದ್ದಿರುವ ದೇವಸ್ಥಾನಗಳನ್ನು ಮಾರ್ಪಡಿಸಿ, ಅವುಗಳನ್ನು ಛತ್ರ ರೀತಿಯಲ್ಲಿರುವಂತೆ ವ್ಯವಸ್ಥೆಮಾಡಿ ಜನಗಳಿಗೆ ಉಪಯೋಗವಾಗಲಿಕ್ಕೆ ಅವಕಾಶವಾಗುವಂತೆ ಮಾಡಬೇಕು. ಇವು ನಮ್ಮ ಜಿಲ್ಲೆಯಲ್ಲಿಯೇ ಅಲ್ಲ, ಈ ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲಿಯೂ ಇವೆ. ಅವುಗಳು ಬಹಳ ಕ್ರಯ ಬರುವಂಥ ಆಸ್ತಿಗಳು. ಆದ್ದರಿಂದ ಅವುಗಳನ್ನು ಸಾರ್ವಜನಿಕರ ಹಿತಕ್ಕಾಗಿ ಉಪಯೋಗ ಮಾಡಬೇಕಾಗಿದೆ. ಸರಕಾರದವರು ಈ ಸ್ಥಳಗಳನ್ನು ಸಾರ್ವಜನಿಕರ ಹಿತಕ್ಕಾಗಿ ಮಾರ್ಪಡಿಸುವುದು ಕ್ಷೇಮ. ನನ್ನ ಹಾಗೆಯೇ ಬಾಕಿಯವರಿಗೂ ತಾವೇ ಆಸಕ್ತಿ ವಹಿಸಿ ಅವುಗಳನ್ನು ಮಾರ್ಪಡಿಸುವ ಧೈರ್ಯ ಬರುವುದಿಲ್ಲ. ಸರಕಾರವೇ ಮುಂದೆ ಬಂದು ಅವುಗಳನ್ನು ಸಾರ್ವಜನಿಕರ ಹಿತಕ್ಕಾಗಿ ಮಾರ್ಪಾಡು ಮಾಡಬೇಕು. ಹೊಸ ದೇವಸ್ಥಾನಗಳನ್ನು ಕಲ್ಪಿಸಿ ಎಂದು ಹೇಳುತ್ತಿಲ್ಲ. ಅವುಗಳನ್ನು ಸಮಾಜ ಕಾರ್ಯಗಳಿಗಾಗಿ ಮಾರ್ಪಡಿಸಬೇಕು. ಇವುಗಳೆಲ್ಲ ಹಾಳು ಬಿದ್ದಿವೆ, ಇವುಗಳಿಗೆ ಪೂಜೆ ಇಲ್ಲ; ಖರ್ಚು ಮಾಡುವವರೂ ಇಲ್ಲ.

ನಾನು ಈ ತರಹ ಸಲಹೆಯನ್ನು ತಮ್ಮ ಮುಂದಿಟ್ಟದ್ದಕ್ಕೆ ಅನೇಕರ ಮನಸ್ಸಿಗೆ ಬೇಸರವಾಗಬಹುದು. ಅನೇಕರ ಮನಸ್ಸಿಗೆ ನೋವಾಗಿರಬಹುದು. ಆದಾಗಬೇಕಾಗಿಲ್ಲ. ನಾನು ಯಾವ ದೇವರನ್ನೂ ನಿಂದಿಸುತ್ತಿಲ್ಲ. ನನಗೆ ದೇವರ ವಿಷಯದಲ್ಲಿ ನಿಷ್ಠಾವಂತ ಭಕ್ತಿ ಇದೆ. ಬಾಕಿಯವರಿಗೆ ಎಷ್ಟು ಭಕ್ತಿ ಇದೆಯೋ ಅದಕ್ಕಿಂತಲೂ ಹೆಚ್ಚು ಭಕ್ತಿ ನನಗಿದೆ. ನಾನು ಹೇಳಿರುವಂಥ ವಿಚಾರ ಜನರ ಹಿತಕ್ಕಾಗಿ, ಲೋಕೋಪಯೋಗಕ್ಕಾಗಿ. ನಾನು ಒಂದು ರಾಷ್ಟ್ರದ ಏಕಮಾತ್ರ ದೇವತ್ವ ಉಳ್ಳ ದೇವರನ್ನು ನಂಬುತ್ತೇನೆ. ಹೀಗಿರುವಾಗ, ನಾನು ಯಾವುದಾದರೂ ಉದ್ದೇಶವನ್ನು ಇಟ್ಟುಕೊಂಡು ಹೇಳಿದ್ದೇನೆ, ಮಾತನಾಡಿದ್ದೇನೆ ಎಂದು ಯಾರೂ ಗ್ರಹಿಸಬಾರದು. ರಾಷ್ಟ್ರದ ಸಮಗ್ರತೆ, ದೇಶದ ಬೆಳವಣಿಗೆ ಸಾಧಿಸುವ ಮತ್ತು ಜನತೆಯ ಅನಕ್ಷರತೆಯನ್ನು ಹೋಗಲಾಡಿಸುವ ಸೌಕರ್ಯಗಳನ್ನು ಈ ಹೊಸ ಮಸೂದೆಯಲ್ಲಿ ಒದಗಿಸಬೇಕಾಗುತ್ತದೆ. ಇದನ್ನೆಲ್ಲಾ ಸೆಲೆಕ್ಟ್ ಕಮಿಟಿಯವರು ಪರಿಶೀಲಿಸುತ್ತಾರೆಂದು ನಂಬಿದ್ದೇನೆ. ಹರಿಜನರಿಗೆ ಈ ಸೆಲೆಕ್ಟ್ ಕಮಿಟಿಯಲ್ಲಿ ಅವಕಾಶವಿರಬೇಕು. ಸೆಲೆಕ್ಟ್ ಕಮಿಟಿಯವರು ಎಲ್ಲಾ ಪರಿಶೀಲಿಸಿ ಈಗಾಗಲೆ ಬಂದಿರುವ ಮನೋಭಾವನೆಯನ್ನು ಇನ್ನಷ್ಟು ವಿಶಾಲ ರೀತಿಯಿಂದ ಬೆಳೆಯುವಂಥ ಮಸೂದೆಯನ್ನು ರಚಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಪರ್ಯಾಲೋಚನೆಗಾಗಿ ನಮ್ಮ ಮುಂದಿಟ್ಟಿರುವ ಮೈಸೂರು ರಾಜ್ಯದ ಧಾರ್ಮಿಕ ಮತ್ತು ದಾನೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಈ ವಿಧೇಯಕವನ್ನು ಪರಿಶೀಲನೆ ಮಾಡುವಾಗ ಕೆಲವು ಮಾತುಗಳನ್ನು ಹೇಳುವುದು ಉಚಿತ ಎಂದು ನಾನು ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಜನಸಂಖ್ಯೆಯಷ್ಟೆ ದೇವರುಗಳ ಸಂಖ್ಯೆಯೂ ಇದೆ ಎಂದು ಹೇಳಬಹುದು. ಮಾನ್ಯ ಗೋಪಾಲ ಸಾಲೆನ್ನರು ಅವುಗಳ ಸಂಖ್ಯೆ ಮತ್ತೆ ಮತ್ತೆ ಹೆಚ್ಚುತ್ತಾ ಇದೆಯೆಂದು ಹೇಳಿದರು.

ಸಮಾಜವಾದಿ ಸಮಾಜದಲ್ಲಿ ಈ ಧಾರ್ಮಿಕ ಹಾಗೂ ದಾನೀಯ ಸಂಸ್ಥೆಗಳ ಸ್ಥಾನಮಾನ ಏನು ಎನ್ನುವ ಪ್ರಶ್ನೆ ಗಂಭೀರವಾದುದು ಮಾತ್ರವಲ್ಲ, ಜಟಿಲವಾದುದು ಕೂಡ ಹೌದು. ನಾವು ಲಘುವಾಗಿ ಇಲ್ಲಿ ಏನಾದರೂ ಟೀಕ ಟಿಪ್ಪಣಿಗಳನ್ನು ಮಾಡಿದರೆ, ಅವು ಧರ್ಮಶ್ರದ್ಧೆ ಹಾಗೂ ದೈವಭಕ್ತಿ ಇರತಕ್ಕಂಥ ಆಸ್ತಿಕರ ಭಾವನೆಯನ್ನು ಕೆಣಕಬಹುದು. ಅವರಿಗೆ ಅದರಿಂದ ನೋವಾಗಬಹುದು.

ಮನುಷ್ಯನ ಇತಿಹಾಸದಲ್ಲಿ ಈ ದೈವಿಕಾಂಡ ಬಹಳ ವಿಸ್ತಾರವಾದುದು ಎಂದು ಹೇಳಬಹುದು. ಮನುಷ್ಯ ದೇವರನ್ನು ಯಾವತ್ತೂ ಸೃಷ್ಟಿಮಾಡಿದ ಎಂಬತಕ್ಕಂಥ ತಾರೀಖು ಇತಿಹಾಸದಲ್ಲಿ ಎಲ್ಲಿಯೂ ಖಚಿತವಾಗಿ ದೊರೆಯುವುದಿಲ್ಲ. ಆ ಭಾವನೆ ಅವನಲ್ಲಿ ಬೆಳೆದು, ಅವನ ದೇವರುಗಳು ಅವನ

ಮನಸ್ಸಿನಲ್ಲಿ ರೂಪಗೊಂಡು, ಅವು ಅವನಿಗೆ ಬೇಕಾದಂತೆ ಆಕಾರ ಹೊಂದಿ ಭೂಮಿಯ ಮೇಲೆ ವಾಸ ಮಾಡುವುದಕ್ಕೆ ಯಾವಾಗ ಪ್ರಾರಂಭಮಾಡಿದವು ಎನ್ನುವ ಇತಿಹಾಸ ಕೂಡ ಬಹಳ ಪ್ರಾಕೃತ ಮತ್ತು ಪುರಾತನವಾದುದು. ಬಹುಶಃ ಇವನಂತೆಯೇ ದೇವರ ಹಿಂದೆಯೂ ಅಷ್ಟೇ ಕಲ್ಪಾಂತರ ಕಾಲ ಇದೆ ಎಂದು ಅಂದುಕೊಳ್ಳಬಹುದು. ಮತ್ತು ದೇವರು ಮತ್ತು ಧರ್ಮದ ಹೆಸರಿನಲ್ಲಿ ಮನುಷ್ಯ ಹರಿಸಿದಷ್ಟು ರಕ್ತವನ್ನು ಬೇರೆ ಯಾವ ಉದ್ದೇಶಕ್ಕಾಗಿಯೂ ಹರಿಸಿರಲಾರ ಎಂದು ನಮಗೆ ಎನ್ನಿಸುತ್ತದೆ.

ಈಗ ಈ ಆಧುನಿಕ ಯುಗದಲ್ಲಿ, ವಿಜ್ಞಾನ ಯುಗದಲ್ಲಿ, ಸ್ವಾಭಾವಿಕವಾಗಿಯೆ ಮನುಷ್ಯ ತನ್ನ ದೃಷ್ಟಿಕೋಣವನ್ನು, ತನ್ನ ಸಂಬಂಧವನ್ನು ತನ್ನ ಜೀವನದ ಲಕ್ಷ್ಯವನ್ನು ಉತ್ತಮಮಾಡಿಕೊಳ್ಳುತ್ತಾ ನಡೆದಿದ್ದಾನೆ. ಆದಾಗ್ಯೂ ಸರಕಾರದ ಹೊಣೆ ಒಂದಿರುತ್ತದೆ. ಇವೊತ್ತು ನಾವು ನಮ್ಮ ರಾಜ್ಯವನ್ನು—ಭಾರತವನ್ನು ಜಾತ್ಯಾತೀತ ರಾಷ್ಟ್ರ ಎಂದು ಹೇಳಿ ಕರೆದಿದ್ದೇವೆ; ಇಲ್ಲಿ ಯಾವ ಮತ, ಜಾತಿಯ ಮೇಲ್ಮೆ, ಆದರೆ, ಈ ರಾಷ್ಟ್ರಕ್ಕಿಲ್ಲ ಅನ್ನುವುದನ್ನು ನಾವು ಒಪ್ಪಿಕೊಂಡಿದ್ದೇವೆ.

ಆದರೆ ಅದೇ ಸಂದರ್ಭದಲ್ಲಿ ಮತೀಯ ಭಾವನೆಯ ಉತ್ಕಟ ಘರ್ಷಣೆಯಿಂದಾಗಿ ನಮ್ಮ ದೇಶ ಇಬ್ಭಾಗ ಕೂಡ ಆಗಬೇಕಾಯಿತು; ಇದಕ್ಕಾಗಿ ಮಿಕ್ಕಿದ ಜನರ ಬಲಿ ಕೂಡ ಆಗಬೇಕಾಯಿತು ಎನ್ನುವುದನ್ನು ನಾವು ನೆನಪಿಟ್ಟುಕೊಳ್ಳಬಹುದು.

ಇವತ್ತು ನಮ್ಮ ಸಮಾಜದಲ್ಲಿ, ಮಾನವಸಮಾಜದಲ್ಲಿ ಹೇಗೆ ಧನಿಕರು, ಬಡವರು ಎನ್ನತಕ್ಕ ಭೇದವಿದೆಯೋ ಹಾಗೆಯೇ ಈ ಧಾರ್ಮಿಕ ವಿಶ್ವದಲ್ಲಿಯೂ ಕೂಡ, ದೇವರುಗಳ ರಾಜ್ಯದಲ್ಲಿಯೂ ಕೋಟ್ಯಾಧೀಶರಾದ ದೇವರುಗಳಿದ್ದಾರೆ, ಹೊತ್ತಿಗೆ ಹೊತ್ತಿಗೆ ತೆಂಗಿನಕಾಯಿ, ನೀರು, ಇಲ್ಲದೆ ಬರೀ ನೀರು ಮತ್ತು ಒಂದು ತುಳಸಿದಳ ತಲೆಯ ಮೇಲೆ ಬಿದ್ದಿರುತ್ತವೆ. ಅಲ್ಲದೆ ಹಾಗೆ ಏನೂ ಬೀಳದೆ ಇರತಕ್ಕ ನಿರ್ಗತಿಕರುಗಿರತಕ್ಕ ರಸ್ತೆಯ ಪಕ್ಕದಲ್ಲಿ ಕೇಳುವವರಿಲ್ಲದೆ ಬಿದ್ದಿರತಕ್ಕ ಎಷ್ಟೋ ದೇವರುಗಳನ್ನು ನೋಡಿ ನಾವು ಕನಿಕರ ಪಡುತ್ತೇವೆ. ನಮ್ಮ ಮಾನವ ಸಮಾಜದಲ್ಲಿರುವ ಆರ್ಥಿಕ ಏರು ಪೇರುಗಳನ್ನು ಇಲ್ಲಿಯೂ ನಾವು ಕಾಣುತ್ತೇವೆ. ಶ್ರೀಮಂತ ದೇವರುಗಳು ಇವೆ, ಅತಿಗರೀಬರಾದ ದೇವರುಗಳೂ ಇವೆ. ಈ ಮಾನವ ಸಮಾಜದಲ್ಲಿ ಹೇಗೆ ಇವೊತ್ತು ಒಬ್ಬ ಸಾಮಾನ್ಯ ಗೇಣೀದಾರ ಅಥವಾ ಬಹಳ ಕನಿಷ್ಠ ಜೀವನ ಮಾಡತಕ್ಕ ಒಬ್ಬ ಮನುಷ್ಯನ ಚರಿತ್ರೆಯನ್ನು ನೋಡಿದರೆ ಮೂರು ತಲೆಮಾರಿಗೆ ಹಿಂದೆ ಅವನು ಕೂಡ ಒಂದು ದೊಡ್ಡ ಆಸ್ತಿಯ ಮಾಲಿಕನಾಗಿದ್ದುದು ನಮಗೆ ಕಂಡು ಬರುತ್ತದೆ. ಎಷ್ಟೋ ದೇವರುಗಳನ್ನು ನಾವು ಇವತ್ತು ನೋಡಿದರೆ ಗುಡಿ ತಲೆಯ ಮೇಲೆ ಬಿದ್ದು, ಅದೂ ಬಚಾವಾಗದೆ ಉಸಿರು ಕಟ್ಟಿದಂತಾಗಿರುತ್ತದೆ. ಇಂಥ ದೇವರುಗಳ ಲೆಕ್ಕವನ್ನು ತೆಗೆದು ನೋಡಿದರೆ ಆ ದೇವರುಗಳ ಹೆಸರಿನಲ್ಲಿ ನೂರಾರು ಎಕರೆ ಜಮೀನು ನಾಲ್ಕಾರು ಜಿಲ್ಲೆಗಳಲ್ಲಿರುವುದು ಕಂಡು ಬರುತ್ತದೆ. ಆ ಜಮೀನುಗಳು ಅರೂಪವಾಗಿ ಅವುಗಳನ್ನು ಸರಿಯಾಗಿ ನಡೆಸಿಕೊಂಡು ಹೋಗದೆ ಅಲ್ಲಿ ಇದ್ದಂಥ ಪೂಜೆ ಪುನಸ್ಕಾರ ಮಾಡುವುದಕ್ಕೆ ಜವಾಬ್ದಾರರಾಗಿರುವವರಿಗೆ ಕಾಲ ಕಾಲಕ್ಕೆ ಸಲ್ಲಬೇಕಾದ ತಸ್ದೀಕುಗಳು ಸಲ್ಲದೆ ದೇಶಾಂತರರಾಗಿ ಹೋಗಿ ದೇವರು ದಿಕ್ಕು ಕಾಣದೆ, ಆಸ್ತಿಪಾಸ್ತಿ ಎಲ್ಲ ಬೇರೆಯವರ ಪಾಲಾಗಿ ಪೂಜಾರಿಯು ಸಂತ್ರಸ್ತನಾಗಿ ಬೇರೆ ಕಡೆ ಹೋಗಿ ಕೂಲಿ ಕೆಲಸ ಮಾಡುವುದು, ಅಡಿಗೆ ಮಾಡುವುದು ಕೊನೆಗೆ ಕಾಫಿ ಹೋಟಲಿನಲ್ಲಿ ಲೋಟ ತೊಳೆಯುವುದು ಈ ಮಟ್ಟಕ್ಕೆ ಪರಿಸ್ಥಿತಿ ಅವನನ್ನು ಗುರಿ ಮಾಡಿದೆ. ಬಹುಶಃ ಈ ಎಲ್ಲ ದೃಶ್ಯಗಳನ್ನೂ ನೋಡಿ ಮಾನ್ಯ ಕಂದಾಯ ಸಚಿವರಿಗೆ ಮರುಕ ಬಂದು ಈ ಮಸೂದೆಯನ್ನು ಸಭೆಯ ಪರ್ಯಾಲೋಚನೆಗೆ ಇಟ್ಟಿದ್ದಾರೆಂದು ನಾನು ತಿಳಿಯುತ್ತೇನೆ. ಮಾನವ ಸಮಾಜದಲ್ಲಿ ಹೇಗೆ ಬಾಯಿ ಇಲ್ಲದೆ ಇರುವ ಜನರ ಬಗ್ಗೆ ಮಾತನಾಡಲು ಆಶಿಸುತ್ತೇನೆಯೋ ಈ ಮಸೂದೆಯ ಸಂಬಂಧದಲ್ಲಿಯೂ ಕೂಡ ಅದೇ ರೀತಿ ತಮ್ಮ ಹಣಕಾಸಿನಬಲದಿಂದ ಸರ್ಕಾರವನ್ನು ಯಾರು ಎದುರಿಸಲಾರರೋ, ಯಾರ ಆಸ್ತಿಪಾಸ್ತಿಗಳು ಪರಾಧೀನವಾಗಿ ಹೋಗಿ ಬಿಟ್ಟಿದೆಯೋ, ಯಾರ ತಲೆಯ ಮೇಲೆ ಒಂದು ತುಳಸಿದಳ, ಒಂದು ಹನಿ ಒಳ್ಳೆಯ ಉದಕ ಕೂಡ ಬೀಳುತ್ತಿಲ್ಲವೋ ಅಂಥ ದೇವರ ಕಡೆ ಇವೊತ್ತು ಸರ್ಕಾರದ ಗಮನವನ್ನು ಸೆಳೆಯಬೇಕು. ಅಂಥ ದೇವರನ್ನು ನಾವು ಕೈಬಿಡಬಾರದು ಎಂದು ನಾನು ಇವೊತ್ತು ಹೇಳುತ್ತಿದ್ದೇನೆ.

ಮಾನವ ಸಮಾಜದಲ್ಲಿ ಹೇಗೆ ಉಚ್ಚ ಮತ್ತು ನೀಚ ಭಾವನೆಯಿದೆಯೋ ಹಾಗೆಯೇ ಈ ಧಾರ್ಮಿಕ ಕ್ಷೇತ್ರದಲ್ಲಿಯೂ, ದೇವರುಗಳ ರಾಜ್ಯದಲ್ಲಿಯೂ ಕೂಡ ನಾನು ಮೇಲು, ತಾನು ಮೇಲು, ನಿನಗೆ ಒಂದು ತಲೆ ಇದ್ದರೆ ನನಗೆ ಮೂರು ತಲೆ ಇವೆ, ನನಗೆ ಐದು ತಲೆ ಇವೆ, ನನ್ನ ಜನ್ಮದ ಪರಿ ಬೇರೆ, ನನ್ನ ವಿಶ್ವದ ಆಡಳಿತ ಕ್ರಮ ಬೇರೆ ಎಂದು ಹೇಳುತ್ತಾರೆ. ಬಹಳ ಹೆಚ್ಚಿನ ಪ್ರಶಂಸೆಗಳನ್ನು ಒಬ್ಬರ ಪರವಾಗಿ ಕೇಳುತ್ತೇವೆ. ಈಗತಾನೆ ಶ್ರೀ ಗೋಪಾಲ ಸಾಲೆನ್ನ ಅವರು ನೀಚ ದೇವರು ಎನ್ನುವುದನ್ನು ಹೇಳಿದರು. ಚಂಡಿ, ಚಾಮುಂಡಿ, ಮೂಕಾಂಬಿಕಾ, ಇವರೆಲ್ಲ ಒಂದು ಅಂತಸ್ತಿನಲ್ಲಿದ್ದಾರೆ, ಅವರ ಅಕ್ಕ ತಂಗಿಯರಾದ ಮಾರಿ, ಮಸಣಿ ಎಲ್ಲಮ್ಮ, ಇವರೆಲ್ಲ ಒಂದೇ ಪೀಳಿಗೆಯವರಾದರೂ, ಒಂದೇ ಮನೆತನದಲ್ಲಿ ಹುಟ್ಟಿದವರಾದರೂ ಇವರ ಅಂತಸ್ತೇ ಬೇರೆ. , ಇವರಿಗೆ ಗುಡಿ ಇದ್ದರೆ ಪೂಜಾರಿ ಇಲ್ಲ, ಪೂಜಾರಿ

(ಶ್ರೀ ಎಸ್. ಗೋಪಾಲಗೌಡ)

ಇದ್ದರೆ ಅವನಿಗೆ ಹೊಟ್ಟೆಗಿಲ್ಲ. ಇವು ಅನಾಥರಾಗಿ ದಾರಿಯಲ್ಲಿ ಹೋಗುವವರನ್ನು ಕೈ ಕೈ ಬೇಡುತ್ತವೆ. ದಾರಿಯಲ್ಲಿ ಹೋಗುವವರು ಕೈಮುಗಿಯುವುದಕ್ಕೆ ಬದಲಾಗಿ ಅವರೇ ಭಕ್ತರನ್ನು ಯಾಚಿಸಬೇಕಾಗಿದೆ. ದೇವರನ್ನು ಕೈಬಿಟ್ಟು ಹೋಗುವಷ್ಟು ಸ್ಥಿತಿ ಬಂದಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ತಮ್ಮ ಊರಿನಲ್ಲಿಯೂ ಈತರಹ ಅನಾಥರಾಗಿರತಕ್ಕ ದೇವರುಗಳಿರಬಹುದು. ಇದು ನಿಜಕ್ಕೂ ಕನಿಕರದ ವಿಷಯ. ಹಾಗೆಯೇ ಉಚ್ಚ ಮತ್ತು ನೀಚ. ಒಬ್ಬ ಪಂಚಕಜ್ಜಾಯವನ್ನು ತಿಂದರೆ, ಇತರರಿಗೆ ಕೋಳಿ, ಕುರಿ, ಕೋಣ, ಎಮ್ಮೆ ಈತರಹ non-vegetarian ಪದ್ಧತಿ ಇಲ್ಲಿ ಹೇಗಿದೆಯೋ ಅಲ್ಲಿಯೂ ಹಾಗೆಯೇ ಇದೆ. ಒಂದೊಂದು ನಲ ವಿಸ್ಮಯವಾಗುತ್ತದೆ, ಒಂದೊಂದು ನಲ ಗಾಬರಿಯಾಗುತ್ತದೆ. ಇಲ್ಲಿ ಏನೋ ಕಾನೂನು ಕಾಯಿದೆ ನಾವು ಮಾಡಬಹುದು, ಗೊಂದಲದಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ. ಹಾಗೆಯೇ ಯೋಚನೆ ಮಾಡುವಾಗ ದೇವರ ಸ್ಥಿತಿಯೂ ಅದೇ ರೀತಿ ಇರುವಂತೆ ಕಾಣುತ್ತದೆ. ನಾವು ನಿಜಕ್ಕೂ ಲೌಕಿಕವಾಗಿ ವಿಮರ್ಶಿಸುವುದಕ್ಕೆ ಈ ಸಭೆಯಲ್ಲಿ ಸೇರಿದ್ದರೂ ಆಧ್ಯಾತ್ಮಿಕ ಪ್ರಪಂಚವನ್ನು ಆ ಲೌಕಿಕ ಪ್ರಪಂಚವನ್ನು ಗಣನೆಗೆ ತಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸಚಿವರಿಗೆ ಕಣ್ಣಿಲ್ಲ ಅದರ ಆಸ್ತಿಪಾಸ್ತಿಗಳ ಮೇಲೆ ಎಂದು ಇಟ್ಟುಕೊಳ್ಳೋಣ. ಆದರೆ ಅದು ದುರುಪಯೋಗವಾಗಬಹುದು: ಶ್ರೀಮಾನ್ ಗೋಪಾಲ ಸಾಲೆನ್ನ ಅವರು ಹೇಳಿದ ಹಾಗೆ ಅವರನ್ನು ಶೋಷಣೆ ಮಾಡಿ ಖಜಾನೆಯನ್ನು ತುಂಬಿಕೊಳ್ಳಬೇಕು ಎನ್ನುವ ದುರುದ್ದೇಶ ಸರ್ಕಾರಕ್ಕಿಲ್ಲವೆನ್ನುವುದು ಸ್ಪಷ್ಟವಾಗಿದೆ, ಅವರು ಹೇಳುವ ಮಾತಿನಲ್ಲಿ, ಹಾಗೆ ಆರ್ಥಿಕವಾಗಿ, ಈ ದೇವರುಗಳಲ್ಲಿ, ದೇವಸ್ಥಾನಗಳಲ್ಲಿ ವಿಷಮತೆ......

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಕೆಲವರು ಬ್ರಹ್ಮಚಾರಿಗಳು, ಕೆಲವರಿಗೆ ಎರಡು ಮೂರು ಮದುವೆಗಳಾಗಿರುತ್ತವೆ.

ಶ್ರೀ ಎಸ್. ಗೋಪಾಲ ಗೌಡ.—ಅದೂ ಇದೆ. ಆದುದರಿಂದ ಒಂದು ಮಾತಿನಲ್ಲಿ ನಾವು ಹೇಳಬೇಕು ಎಂದರೆ ನಮ್ಮ ಮಾನವ ಸಮಾಜದಲ್ಲಿ ಪರಿಸ್ಥಿತಿ ಎಷ್ಟರಮಟ್ಟಿಗೆ ಹದಗೆಟ್ಟು ಹೋಗಿದೆಯೋ, ಸಮಾನತೆ ಇಲ್ಲದೆ ಪರಸ್ಪರರನ್ನು ಅರ್ಥಮಾಡಿಕೊಳ್ಳತಕ್ಕ ಸ್ಥಿತಿಯಿಲ್ಲದೆ ಗೊಂದಲಕ್ಕೀಡಾಗಿದ್ದೇವೆಯೋ ಅದಕ್ಕಿಂತ ಹೆಚ್ಚಿನ ಗೊಂದಲ, ಕಾರ್ಪಣ್ಯ, ದೋಷಲೋಪಗಳು ಈ ದೈವೀ ಸಾಮ್ರಾಜ್ಯದಲ್ಲಿಯೂ ಬಹಳವಾಗಿ ತುಂಬಿ ತುಳುಕಾಡುತ್ತಿವೆ ಎನ್ನುವುದನ್ನು ನಾವು ಈ ಸಂದರ್ಭದಲ್ಲಿ ಗಮನಿಸಬಹುದು.

ಇಷ್ಟು ಹೇಳಿ ಇನ್ನು ನಾವು ಹೇಗೆ ಈ ಗೊಂದಲಕ್ಕೆಲ್ಲ, ರಾಷ್ಟ್ರೀಕರಣ ಮತ್ತು ಸಮಾಜೀಕರಣ ಇವು ಪರಿಹಾರವೆಂದು ಭಾವಿಸುತ್ತೇವೆಯೋ ಹಾಗೆಯೇ ಆ ಒಂದು ಪ್ರಪಂಚಕ್ಕೂ ಕೂಡ ಇವೊತ್ತು ಅನಿವಾರ್ಯವಾಗಿ ರಾಷ್ಟ್ರೀಕರಣ, ಸಮಾಜೀಕರಣ ನಡೆಯಿಸಬೇಕಾಗಿ ಬಂದಿದೆ. ಆರ್ಥಿಕವಾಗಿ, ಧಾರ್ಮಿಕ ಶ್ರದ್ಧೆಯನ್ನು, ನಂಬಿಕೆಯನ್ನು ರಾಷ್ಟ್ರೀಕರಿಸುವುದು, ಅಥವಾ ಸಮಾಜೀಕರಿಸುವುದು ಅಥವಾ ಧಾರ್ಮಿಕ ಭಾವನೆಗಳ ಮೇಲೆ ಶ್ರದ್ಧೆಯನ್ನು ಹೊಂದತಕ್ಕದ್ದು, ಆ ಭಾವನೆಯನ್ನು ಮೊಟಕು ಮಾಡತಕ್ಕದ್ದು, ಆ ಭಾವನೆಯನ್ನು ವ್ಯಕ್ತ ಪಡಿಸುವುದಕ್ಕೆ, ಆ ಭಾವನೆಯ ಅಭಿವ್ಯಕ್ತಿಗೆ ಅಡ್ಡಿ ತರತಕ್ಕದ್ದು ಬಹಳ ಕ್ರೂರವಾದ ಹೆಜ್ಜೆಯಾಗುತ್ತದೆ. ಅವನ್ನು ಯಾರೂ ಬಹುಶಃ ಒಪ್ಪಲಾರರು. ಅದಕ್ಕಾಗಿ ಎಂಥ ಬಲಿಷ್ಠವಾದ ರಾಜ್ಯವೇ ಆಗಲಿ ಆ ಕೆಲಸ ಮಾಡುವುದಕ್ಕೆ ಹೋದರೆ ಬಹುಶಃ ಆ ರಾಜ್ಯದ ಜನತೆ ದೊಡ್ಡ ಹೋರಾಟವನ್ನು ಮಾಡಿಯಾರು. ಆದ್ದರಿಂದ ಆ ಪ್ರಶ್ನೆ ಆ ಉದ್ದೇಶ—ನಮಲ್ಲಿ ಇಲ್ಲವೇ ಇಲ್ಲ. ಆದರೂ ಈ ಆಸ್ತಿಪಾಸ್ತಿಗಳನ್ನು ಹೊಂದಿರತಕ್ಕ ಧಾರ್ಮಿಕ ಹಾಗೂ ದಾನೀಯ ಸಂಸ್ಥೆಗಳು ಯಾವುವು ಇವೆ ಇವುಗಳ ಆಡಳಿತವನ್ನು ಆದಷ್ಟೂ ಸುಗಮವಾದ ರೀತಿಯಲ್ಲಿ, ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು ಮತ್ತು ಆಯಾಯಾ ಸಂಸ್ಥೆಗಳಿಂದ ಬರತಕ್ಕ ಉತ್ಪತ್ತಿ ಸದ್ವಿನಿಯೋಗವಾಗಬೇಕು. ಸಮಾಜಕ್ಕೆ ಈ ಸಂಸ್ಥೆಗಳಿಂದ ಒಳಿತು ಉಂಟಾಗುವಂತೆ ವ್ಯವಹಾರಗಳನ್ನು ಸರಿಯಾಗಿ ಪರಿಷ್ಕರಿಸಿ ಅವುಗಳನ್ನು ಒಂದು ಕ್ರಮಕ್ಕೆ ತರುವಂಥದು ಈ ಮಸೂದೆಯ ಸ್ಥೂಲವಾದ ಉದ್ದೇಶವಾಗಿದೆ. ಈ ಉದ್ದೇಶದ ಬಗ್ಗೆ ಬಹುಶಃ ಯಾರೂ ಇಲ್ಲಿ ವಿರೋಧವನ್ನು ಮಾಡಲಾರರು ಎಂದು ನಾನು ತಿಳಿದುಕೊಂಡಿದ್ದೇನೆ. ವಾಸ್ತವವಾಗಿ ನಾನು ಇದುವರೆಗೂ ಏನು ಹೇಳಿದೆನೋ ಅದನ್ನು ಬಿಟ್ಟರೆ ಇದರಲ್ಲಿ ಈಗಿರತಕ್ಕ ಮುಜರಾಯಿ ಆಡಳಿತದ ವ್ಯವಸ್ಥೆಯಲ್ಲಿ ಬಹಳ ಲೋಪದೋಷಗಳಿವೆ, ಅವರು ಒಳ್ಳೆಯ ರೀತಿಯಲ್ಲಿ ಈ ಸಂಸ್ಥೆಗಳ ಆಡಳಿತವನ್ನು ನಡೆಸಿಕೊಂಡು ಹೋಗಿಲ್ಲ, ಹೋಗುತ್ತಾ ಇಲ್ಲ, ಅದನ್ನು ಸರಿಪಡಿಸಿಕೊಳ್ಳಬೇಕು ಎನ್ನತಕ್ಕ ಮಾತನ್ನು ನಾನು ಇಲ್ಲಿ ಒತ್ತಿ ಹೇಳುತ್ತೇನೆ. ಈ ಮಸೂದೆಯಲ್ಲಿ ಎರಡು-ಮೂರು ರೀತಿಯ ಉತ್ಪಾದನೆ ಕಡಮೆ ಇರತಕ್ಕ ದೇವಸ್ಥಾನಗಳನ್ನು ಸಂಸ್ಥೆ ಗಳನ್ನು ಕೈಬಿಡಲಾಗಿದೆ ಎಂದು ನನಗೆ ಅನಿಸುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಂದ ಏನೂ ವಸೂಲು ಮಾಡಿಕೊಳ್ಳುವುದಿಲ್ಲ, ಅವರು ರಿಜಿಸ್ಟರಾಗಿ ಲೆಕ್ಕದಲ್ಲಿ ಇರುತ್ತಾರೆ, ಅಷ್ಟೆ.

ಶ್ರೀ ಎಸ್. ಗೋಪಾಲ ಗೌಡ.—ಆಸ್ತಿಪಾಸ್ತಿಗೂ ವಿಷಯದಲ್ಲಿ ಒಂದು ಅಂಶವನ್ನು ನಾವು ಈಗಾಗಲೇ ಮಾನ್ಯ ಸಚಿವರ ಭಾಷಣದಲ್ಲಿ ಕಂಡುಕೊಂಡಿದ್ದೇವೆ. ಮೊದಲು ದೊಡ್ಡ ಭಾವನೆ, ಆದರ್ಶ ಮನುಷ್ಯನನ್ನು ಅದರ ಕಡೆಗೆ ಎಳೆಯುತ್ತದೆ ಅನಂತರದಲ್ಲಿ ಕ್ರಮ ಕ್ರಮೇಣ ಆದರ್ಶ ಹೋಗಿ—ಮನೆ ಇದ್ದರೆ ಅಲ್ಲಿಗೆ ಹೋಗುವುದು ಉಂಟು, ಕೊನೆಗೆ ಅದೂ ಹೋಗಿ ಆಸ್ತಿ ಕಡೆಗೆ ಬರುವುದು ಉಂಟು ಈ ರೀತಿಯಾಗಿ ಇವತ್ತು ಕಿತ್ತಿಟ್ಟುಕೊಳ್ಳುವುದೆಲ್ಲಾ ಹೆಚ್ಚಾಗಿ ಕಾಂಚನದಿಂದಲೇ ಉಂಟಾಗಿದೆ ಎಂಬುದು ನಮಗೆ ಚೆನ್ನಾಗಿ ಗೊತ್ತಾಗುತ್ತದೆ, ವಿನೋಬಾಜಿ ಅವರು ಹೇಗೆ ಕಾಂಚನ ಮುಕ್ತಿಯನ್ನು ಮಾಡಿಕೊಂಡಿದ್ದಾರೆಯೋ ಹಾಗೆ ಧಾರ್ಮಿಕ ಮತ್ತು ದಾನೀಯ ಸಂಸ್ಥೆಗಳೂ ಕೂಡ ಸ್ವತಃ ಅವೇ ಕಾಂಚನ ಮುಕ್ತಿಯನ್ನು ಮಾಡಿಕೊಳ್ಳಬೇಕಾಗುತ್ತದೆ, ಏಕೆಂದರೆ ವ್ಯವಹಾರಕ್ಕೆ ಇವು ಇಳಿದು ಬರುತ್ತಾ ಇವೆ.

ಕೆಲವು ಶಾಲೆಗಳನ್ನು ಕಟ್ಟಿಸಿ, ಕೆಲವು ಊಟದ ಛತ್ರದ ವ್ಯವಸ್ಥೆ ನಡೆಸಿ ಭಕ್ತರಾಗಿ ಸಮಾಜಕ್ಕೆ ಕೆಲವು ಸೇವೆಗಳನ್ನು ಕೆಲವು ಸಂಸ್ಥೆಗಳವರು ಮಾಡಿದ್ದಾರೆ. ಇನ್ನು ಕೆಲವು ಸಂಸ್ಥೆಗಳು, ಬೆಂಗಳೂರಿನಲ್ಲಿ ಎಷ್ಟೋ ನೋಡಿದ್ದೇನೆ, ವ್ಯಾಪಾರಿ ಸಂಸ್ಥೆಗಳಂತೆ ನಡೆದುಕೊಂಡು ಹೋಗುತ್ತಾ ಇವೆ, ಅವರು ಹೇಳುವುದು ನಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುತ್ತೇವೆ ಎಂದು. ನಮ್ಮ ಆವರಣದಲ್ಲಿ ಯಾರು ಇದ್ದಾರೆ ಅವರಿಗೂ ನಮಗೂ ಸಂಬಂಧವಿಲ್ಲ. ಬಾಡಿಗೆಗೆ ರೂಮು ಕೊಟ್ಟಿದ್ದೇವೆ. ಬಾಡಿಗೆ ಬರುತ್ತದೆ ಮಾರ್ಕೆಟ್ ರೇಟ್ ನಂತೆ—ಆದರಿಂದ ನಮ್ಮ ದುಡಿಮೆ ಹೆಚ್ಚಿಸಿಕೊಳ್ಳುತ್ತೇವೆ ಎಂದು ವಾದ ಮಾಡುತ್ತಾರೆ. ಒಂದು ಮಾತನ್ನು ಹೇಳಬಯಸುತ್ತೇನೆ, ದೇವರ ಆದಾಯ, ಧಾರ್ಮಿಕ ಸಂಸ್ಥೆಗಳ ಆದಾಯ ಹೆಚ್ಚಬೇಕು, ಏಕೆ ಹೆಚ್ಚಬೇಕೆಂದರೆ ತನ್ನ ಹಿರಿಮೆಯಿಂದ ಪ್ರಚಾರ ಮಾಡಿಕೊಳ್ಳುವ ಅಥವಾ ತನ್ನ ಆಡಳಿತ ಮಂಡಲಿಯನ್ನು ನಡೆಸುವ ಸಹಾಯಕ್ಕೆ ಆ ಹಣ ಆಗಬಾರದು. ವಿಸ್ತರಣಾ ಯೋಜನೆಯನ್ನು ಕೆಲವು ಸಂಸ್ಥೆಗಳು ಹಾಕಿಕೊಂಡು ಕೆಲಸ ಮಾಡುತ್ತಿವೆ ಎಂದು ಕೇಳಿದ್ದೇವೆ. ಅವರ ಉನ್ನತಿಗಾಗಿಯೇ ಅವರು ವಿಸ್ತರಣಾ ಯೋಜನೆಯನ್ನು ಅನುಸರಿಸುತ್ತಾ ಹೋದರೆ ಅದು ಬಹುಶಃ ಕೆಲವು ಸಲ ಜನರ ಉನ್ನತಿಗೆ ಅಡ್ಡಿಯನ್ನು ತರಬಹುದು. ಕೆಲವು ದೇವರುಗಳ ಹೆಸರನ್ನು ಧರ್ಮದರ್ಶಿಗಳು ಎಂದರೆ ಆ ದೇವರಿಗೆ ಊಟ ಉಪಚಾರಕ್ಕೆ ಹಾಕಿ, ದೇವರ ರಕ್ಷಣೆ ಮಾಡುವುದಕ್ಕೆ ಇದ್ದಂಥ ಮನುಷ್ಯರು ಆ ದೇವರ ಹೆಸರನ್ನೇ ತಮ್ಮ ಹೆಸರನ್ನಾಗಿಟ್ಟುಕೊಂಡು ಎರಡು ಮೂರು ತಲೆಮಾರಿನಲ್ಲಿ ಆ ದೇವರ ಹೆಸರಿನಲ್ಲಿ ಇದ್ದ ಖಾತೆಯನ್ನು ತಮ್ಮ ಹೆಸರಿಗೆ ಬದಲಾಯಿಸಿಕೊಂಡಿದ್ದಾರೆ. ಅದನ್ನು ನಮ್ಮ ಸ್ನೇಹಿತರಾದ ಗೌಡರು ಹೇಳಿದರು, ಇದು ಬಹಳ ಕಡೆ ನಡೆದಿದೆ. ಇನ್ನು ಕೆಲವು ಕಡೆ ವಾದ ಇರಬಹುದು. ದೇವರ ಮೇಲೆ ಕೇಸು ಹಾಕಿ ಅದಕ್ಕೆ ಸೇರಿದ ಆಸ್ತಿ ಯಾರಿಗೆ ಸೇರಬೇಕು ಅದಕ್ಕೆ ಹಕ್ಕುದಾರರು ಯಾರು ಎಂದು ಅನೇಕ ಕಡೆ ವಿವಾದಗಳು ಬಂದಿವೆ. ಇದು ನಡೆಯುತ್ತಾ ಇರುತ್ತದೆ. ದೇವರಿಗೆ ಇಷ್ಟವಿಲ್ಲದೇ ಇದ್ದರೂ ಪೂಜಾರಿಗಳು ಅವರ ಇಚ್ಛೆಯ ಪ್ರಕಾರ ನಡೆಸಿಕೊಂಡು ಹೋಗುತ್ತಾರೆ. ಸುಪ್ರೀಂ ಕೋರ್ಟ್‌ಗೂ ಹೋಗುತ್ತಾರೆ ಅದು ಕಾನೂನು ಮೂಲಕ ಹೋಗತಕ್ಕದ್ದು. ವ್ಯಕ್ತಿ ಇದ್ದ ಕಡೆ ವಿವಾದ ಬರುತ್ತದೆ, ಆದರಂತೆ ಧಾರ್ಮಿಕ ಸಂಸ್ಥೆಗಳೂ ಬರುತ್ತವೆ, ನನಗೆ ಮತ್ತು ಮಾನ್ಯ ಸಭೆಗೆ ಮಾನ್ಯ ಸಚಿವರು ಒಂದು ದೊಡ್ಡ ಉಪಕಾರ ಮಾಡಬಹುದಾಗಿತ್ತು; ಏನೆಂದರೆ ನಮ್ಮಲ್ಲಿರತಕ್ಕ ಎಲ್ಲಾ ಸಂಸ್ಥೆಗಳು ಎಷ್ಟು, ಅವುಗಳ ಆದಾಯ ಎಷ್ಟು ಎನ್ನುವ ಒಂದು ಅಂಕಿ ಅಂಶವನ್ನು ಸಂಗ್ರಹಿಸಿ ಒಂದು ಕ್ಯಾಟಲಾಗ್ ಮಾಡಿ ನಮಗೆ ಒದಗಿಸಿದ್ದರೆ ನಾವು ಆ ವಿಷಯದಲ್ಲಿ ಒಂದು ಸೂಕ್ಷ್ಮ ಪರಿಚಯವನ್ನು ಪಡೆಯುವುದಕ್ಕೆ ಅವಕಾಶವಾಗುತ್ತಿತ್ತು. ಅದು ನಮ್ಮ ಮುಂದೆ ಇಲ್ಲ. ಅಂತೂ ಯಾವುದೋ ಒಂದು ಅಂದಾಜಿನ ಮೇಲೆ ಇವೊತ್ತು ನಾವು ಸುಮಾರು ಇಷ್ಟಿರಬಹುದು ಎಂದು ಊಹಿಸಿ ಮಾತನಾಡುತ್ತಾ ಇದ್ದೇವೆ. ಈ ಮಸೂದೆಯಿಂದ ನಾನು ಬಯಸುವುದು ಎರಡು ವಿಷಯಗಳನ್ನು ಏನೆಂದರೆ ಒಂದು ಆಯಾಯಾ ಸಂಸ್ಥೆಗಳು ಹಣ, ಆಸ್ತಿಪಾಸ್ತಿಗಳು ಏನೇನನ್ನು ಹೊಂದಿದ್ದವು, ಈಗ ಆ ಸಂಸ್ಥೆಗಳಿಗೆ ಸೇರಿರತಕ್ಕ ಆಸ್ತಿಪಾಸ್ತಿಗಳು ಮತ್ತು ಬಂಗಾರ ಇತ್ಯಾದಿಗಳು ಪರಭಾರೆ ಆಗದೇ ಇರುವ ರೀತಿಯಲ್ಲಿ ಈ ಕಾನೂನು ಆ ದೇವರುಗಳಿಗೆ ಮತ್ತು ಸಂಸ್ಥೆಗಳಿಗೆ ರಕ್ಷಣೆ ಕೊಡುತ್ತವೆ ಮತ್ತು ಕೊಡಬೇಕು ಎನ್ನುವುದು ಒಂದನೆಯದು. ಎರಡನೆಯದು ಪರಸ್ಪರ ಒಬ್ಬರನ್ನೊಬ್ಬರು ನಂಬಿ ಕುಳಿತಿರುವ ದೇವರು ಮತ್ತು ಭಕ್ತರು ಇವರ ಅಭಿವೃದ್ಧಿ ವಿಷಯ—ನಾನು ಮನುಷ್ಯನ ಅಭಿವೃದ್ಧಿಯ ಕಡೆಗೆ ಈ ಸಂಸ್ಥೆಗಳು ಹೆಚ್ಚಿನ ಲಕ್ಷ್ಯವನ್ನು ಕೊಡಬೇಕೆಂದು ಹೇಳುವವನು ಆ ರೀತಿ ಆಗಬೇಕೆನ್ನುವುದು ಎರಡನೆಯ ಬಯಕೆ. ಹೆಚ್ಚಾಗಿ ವಿದ್ಯಾ ಸಂಸ್ಥೆಗಳಿಗೆ ಹಣವನ್ನು ಒದಗಿಸಬಹುದು ಮತ್ತು ಚೈನಾ ಗಡಿಯಲ್ಲಿ ನಡೆಯತಕ್ಕ ಹೋರಾಟಕ್ಕೆ ಚಿನ್ನವನ್ನು ಮತ್ತು ಹಣವನ್ನು ಒದಗಿಸಬಹುದು ಏಕೆಂದರೆ ರಾಷ್ಟ್ರ ರಕ್ಷಣೆ ನಮಗೆಷ್ಟು ಅಗತ್ಯವೋ ಹಾಗೆಯೇ ದೇವರುಗಳಿಗೂ ಅಷ್ಟೇ

(ಶ್ರೀ ಎಸ್. ಗೋಪಾಲಗೌಡ):

ಅಗತ್ಯ ; ಅದಕ್ಕೂ ಅವು ಹಣವನ್ನು ಹೊಂದಿಸಬಹುದು. ಬಲಾತ್ಕಾರ ಮಾಡಿ ಕಿತ್ತುಕೊಳ್ಳಬೇಕೆಂದು ಹೇಳುವುದಿಲ್ಲ. ರಾಷ್ಟ್ರ ಕಂಗೆಟ್ಟ, ಭಕ್ತರು ದಿಕ್ಕೆಟ್ಟು ಕುಳಿತಾಗ ಯಾವ ಧಾರ್ಮಿಕ ಸಂಸ್ಥೆಯೂ ರಾಷ್ಟ್ರದ ಮತ್ತು ತನ್ನ ಭಕ್ತರ ಜನತೆಯ ಹಿತವನ್ನು ಅಲಕ್ಷಿಸಿ ತನ್ನ ಹಿತವನ್ನೇ ತಾನು ಗಮನಿಸುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ರೀತಿ ಗಮನಿಸಿದರೆ ತಪ್ಪಾಗುತ್ತದೆ.

4-30 P.M.

ಆದುದರಿಂದ ಈ ಎರಡು ಉದ್ದೇಶಗಳನ್ನು ಸಾಧಿಸಲು ಸರ್ಕಾರದವರು ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಈ ಉದ್ದೇಶವನ್ನು ಸಾರ್ಥಕಗೊಳಿಸುವುದಕ್ಕೆ ಸರ್ಕಾರ ನೆರವು ನೀಡಬೇಕು. ನಮ್ಮ ಮುಜರಾಯಿ ಇಲಾಖೆಯಲ್ಲಿ ಆಸ್ತಿಪಾಸ್ತಿಗಳ ವಿಚಾರದಲ್ಲಿ ಒಂದು ಕ್ರಮಬದ್ಧವಾದ ವ್ಯವಸ್ಥೆ ಇರುವಂತೆಯೂ, ಅಲ್ಲಿ ಯಾವ ಕಿತ್ತಾಟ ವಗೈರೆಗಳಿಗೂ ಅವಕಾಶವಿರದಂತೆಯೂ ನೋಡಿಕೊಳ್ಳಬೇಕು. ಬಡದೇವರಾಗಿದ್ದರೆ ಅದನ್ನು ಯಾರೂ ಕೂಡ ನಮ್ಮದೆಂದು ಹೇಳುವುದಿಲ್ಲ, ಬಡತನದಲ್ಲಿರತಕ್ಕ ಜನರು ಸಂಬಂಧಿಕರಾಗಿದ್ದರೂ ಅವರನ್ನು ದೊಡ್ಡಸ್ಥಾನದಲ್ಲಿರತಕ್ಕವರು ನಮ್ಮ ಹತ್ತಿರದ ಸಂಬಂಧಿಗಳು ಎಂದು ಹೇಳಿಕೊಳ್ಳಲು ಇಷ್ಟಪಡುವುದಿಲ್ಲ. ಹೀಗೇ ಬಡದೇವರುಗಳ ವಿಚಾರವು ಇರುತ್ತದೆ. ದುಡ್ಡಿದ್ದ ದೇವರಾದರೆ ಇದು ನಮ್ಮ ದೇವರು, ಇದರ ಹಕ್ಕು ನಮಗೇ ಸೇರಬೇಕು, ವಂಶಪಾರಂಪರ್ಯವಾಗಿ ನಾನೆ, ಛತ್ರಿಹಿಡಿಯುತ್ತಿದ್ದವನು ಎಂಬುದಾಗಿ ಹಾಲಿ ಎಷ್ಟೋ ಕಡೆಗಳಲ್ಲಿ ವ್ಯಾಜ್ಯ ನಡೆಯುತ್ತಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಇವೆಲ್ಲ ದುಡ್ಡಿದ್ದ ದೇವರ ಹತ್ತಿರ ನಡೆಯತಕ್ಕ ವಿಚಾರಗಳು. ಈ ವಿವರಗಳನ್ನೆಲ್ಲ ಹೇಳುವುದಕ್ಕೆ ಹೋದರೆ ಅದೇ ಒಂದು ದೊಡ್ಡ ಅಧ್ಯಯನವಾಗುತ್ತದೆ. ಆದುದರಿಂದ ಈ ವ್ಯವಹಾರಗಳಿಗೆ ಆದಷ್ಟು ಬೇಗ ಪೂರ್ಣವಿರಾಮ ಹಾಕುವುದಕ್ಕೆ ಅವಕಾಶವಾಗಬೇಕೆಂದು ಹೇಳುತ್ತೇನೆ. ಇನ್ನಾದರೂ ಈ ಸಂಸ್ಥೆಗಳು ಒಂದು ಒಳ್ಳೆಯ ರೀತಿಯಲ್ಲಿ ನಡೆಯುವಂತೆ ಮಾಡೋಣ. ಆದರೆ ಆಯಾಯ ಧಾರ್ಮಿಕ ಸಂಸ್ಥೆಯವರು ಅವರವರ ಧರ್ಮದ ಹಿರಿಮೆಯ ಬಗ್ಗೆ ಪ್ರಚಾರ ನಡೆಸಲು ಯಾವ ಅಡ್ಡಿ ಆತಂಕಗಳೂ ಇರಬಾರದು. ಅವರು ಜನತೆಗೆ ಒಂದು ಒಳ್ಳೆಯ ತಿಳಿವಳಿಕೆಯನ್ನು ಕೊಡತಕ್ಕ ಬಗ್ಗೆ ಯಾವ ಅಡಚಣೆಗಳೂ ಇರಬಾರದು. ಈ ಸಂಸ್ಥೆಗಳು ಇನ್ನು ಹೆಚ್ಚಿನ ಆಸ್ತಿಪಾಸ್ತಿಗಳನ್ನು ವಿಸ್ತರಿಸುವುದಕ್ಕೆ ಅವಕಾಶವಿಲ್ಲದಿದ್ದರೂ ಹಾಲಿಬರತಕ್ಕ ಆದಾಯವೇನಿದೆ ಅದನ್ನು ಒಳ್ಳೇ ರೀತಿಯಲ್ಲಿ ಸದ್ವಿನಿಯೋಗವಾಗುವಂತೆ ಒಂದು ಯೋಗ್ಯವ್ಯವಸ್ಥೆಯನ್ನು ಏರ್ಪಡಿಸುವುದು ಒಳ್ಳೆಯದು. ಕೆಲವು ಕಡೆ ಈ ಉತ್ಪತ್ತಿಗೆ ಕೆಲವರು ಗುತ್ತಿಗೆದಾರರಾಗಿ ಜನರಿಂದ ಬರತಕ್ಕ ವರಮಾನವನ್ನು ತಮ್ಮ ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇಂಥಾದ್ದು ಮೊದಲು ತಪ್ಪಬೇಕು. ಆದರೆ ನನಗೆ ತಿಳಿದಮಟ್ಟಿಗೆ ಈ ರಿಜಿಷ್ಟ್ರೇಷನ್ ವಿಚಾರದಲ್ಲಿ ಕೆಲವರಿಗೆ ಬೇಜಾರಿರಬಹುದು. ಈ ಹಿಂದೆ ಒಂದು ಓಟರ್ಸ್ ಲಿಸ್ಟನ್ನು ತಯಾರಿಸಬೇಕೆಂದು ಹೊರಟಾಗ್ಗೆ ಕೆಲವರು ಆ ಲಿಸ್ಟಿನಲ್ಲಿ ತಮ್ಮ ಹೆಸರನ್ನು ಬರೆಸಲು ಒಪ್ಪಲಿಲ್ಲ. ಆದರೆ ಈಗ ನಮ್ಮ ರಾಜ್ಯದಲ್ಲಿ ಎಷ್ಟು ದೇವರುಗಳಿವೆ, ಎಷ್ಟು ಆಸ್ತಿಯಿದೆ, ಎಷ್ಟು ಜನ ಭಕ್ತಾದಿಗಳಿದ್ದಾರೆ, ಯಾರು ಭಕ್ತಾದಿಗಳಿಗೆ ಹಿಂಸೆ ಕೊಡುತ್ತಿದ್ದಾರೆ ಯಾವಯಾವ ದೇವರಲ್ಲಿ ಎಷ್ಟೆಷ್ಟು ಚಿನ್ನ ಇದೆ ಎಂಬುದೆಲ್ಲ ಲೆಕ್ಕದಲ್ಲಿರಬೇಕು. ಆ ಚಿನ್ನದ ದೆಶೆಯಿಂದ ದೇವರಿಗೂ ಬೀಗ ಬಿದ್ದಿದೆ. ನಾನೊಂದುಸಾರಿ ತಿರುಪತಿಗೆ ಹೋಗಿದ್ದೆ. ಅಲ್ಲಿ ದೇವರನ್ನು ಕೋಣೆಯಲ್ಲಿ ಕೂಡಿಸಿ ಬಲವಾದ ಕಬ್ಬಿಣದ ಸಲಾಕಿ ಬಾಗಿಲನ್ನು ಮಾಡಿಸಿ ಅದಕ್ಕೆ ಬಲವಾದ ಒಂದು ಕಬ್ಬಿಣದ ಬೀಗ ಹಾಕಿದ್ದರು. ಸಾಮಾನ್ಯವಾಗಿ ಆ ಬಾಗಿಲನ್ನು ತೆಗೆಯುವುದೇ ಇಲ್ಲವಂತೆ. ಯಾರಾದರೂ ಅಂಥ ದೊಡ್ಡ ಮನುಷ್ಯರು ಬಂದಾಗ ಮಾತ್ರ ಯಾರೋ ಒಬ್ಬರು ಸ್ನಾನಮಾಡಿ ಬಟ್ಟೆ ಹಾಕಿಕೊಂಡು ಬಂದು ಆ ಬೀಗವನ್ನು ತೆಗೆದು ದೇವರಿಗೆ ಪೂಜೆ, ನೈವೇದ್ಯಗಳನ್ನು ಮಾಡಿ ಮತ್ತೆ ಹಾಗೆ ಬೀಗ ಹಾಕಿಬಿಡುತ್ತಾರಂತೆ. ಅದನ್ನೆಲ್ಲ ನೋಡಿದಾಗ, ಜನರಿಗೇ ಈ ದೇವರಲ್ಲಿ ಭಕ್ತಿಯಿಲ್ಲವೋ, ಅಥವಾ ದೇವರಿಗೇ ಈ ಜನರಲ್ಲಿ ವಿಶ್ವಾಸವಿಲ್ಲವೋ ಎಂಬ ಅಭಿಪ್ರಾಯಗಳು ಬಂದು ಆ ದೇವರಬಗ್ಗೆ ನಾನು ಬಹಳ ಮರುಕಪಟ್ಟೆನು. ಅಂತೂ ನಾನೂ ಸಹಾ ಒಂದು ನಮಸ್ಕಾರಮಾಡಿ ಬಂದೆ. ದೇವರಿಗೆ ಚಿನ್ನದ ಮೇಲೆ ಅಷ್ಟು ಆಸೆಯಿದ್ದರೆ ಆ ದೇವರು ತನಗೆ ಭಕ್ತ ಬೇಡ ಎಂದು ಹೇಳಲಿ. ಇಲ್ಲವೆ ದೇವರಿಗೆ ಭಕ್ತ ಬೇಕಾಗಿದ್ದರೆ ಆ ಚಿನ್ನವನ್ನಾದರೂ ಬೇಡ ಎಂದು ಹೇಳಬೇಕು. ಈ ಎರಡೂ ಇದ್ದಲ್ಲಿ ಬಹಳ ತಾಪತ್ರಯ. ದುಡ್ಡಿದ್ದ ದೇವರಿಗೆ ಕೋಟಿಗಟ್ಟಲೆ ಭಕ್ತರಿರುತ್ತಾರೆ. ಬಂಗಾರದ ನೆಪದಿಂದ ಆ ದೇವರಮುಖಕ್ಕೆ ಬೀಗ ಹಾಕಿದ್ದಾರೆ. ನಾವೀಗ ಈ ದೇವರುಗಳನ್ನು ಸೆರೆಯಿಂದ ಮುಕ್ತಿ ಕಾಣಿಸಬೇಕಾಗಿದೆ. ಈ ಕಾನೂನಿನ ಮುಖ್ಯ ಉದ್ದೇಶ ಭಕ್ತಿಗೆ ಒಂದು ನಿಯಂತ್ರಣಮಾಡಬೇಕೆಂದಲ್ಲ, ದೇವರ ಹೆಸರಿನಲ್ಲಿ ಭಕ್ತರಿಂದ ವಸೂಲಾಗತಕ್ಕ ಹಣವೇನಿದೆಯೋ ಅದನ್ನ ಸದ್ವಿನಿಯೋಗ ಆಗತಕ್ಕ ಬಗ್ಗೆ ಒಂದು

ನಿಯಂತ್ರಣವಾಡಬೇಕೆಂಬುದು. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ನಿಗಾವಹಿಸಿ ಒಳ್ಳೆ ರೀತಿಯಲ್ಲಿ ಇವು ತಮ್ಮ ಆಡಳಿತವನ್ನು ನಡೆಸಿಕೊಂಡು ಹೋಗುವಂತೆ ಅವಕಾಶ ಕಲ್ಪಿಸಿಕೊಪುದುಡು ಉಚಿತ ಎಂದು ನಾನು ಭಾವಿಸುತ್ತೇನೆ. ಈ ಮಸೂದೆ ಮತ್ತೊಮ್ಮೆ ಸೆಲೆಕ್ಟ್ ಕಮಿಟಿಯಿಂದ ಈ ಸಭೆಯ ಮುಂದೆ ಚರ್ಚೆಗೆ ಬರತಕ್ಕ ಅವಕಾಶವಿರುವುದರಿಂದ ನಾನು ಹೆಚ್ಚು ಕಾಲಾವಕಾಶವನ್ನು ತೆಗೆದುಕೊಳ್ಳದೆ, ಮುಂದೆ ಈ ಮಸೂದೆ ಇಲ್ಲಿ ಚರ್ಚೆಗೆ ಬಂದಾಗ ಮಾತನಾಡಲು ನನಗೆ ಮತ್ತೊಮ್ಮೆ ಅವಕಾಶ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಮಾನ್ಯ ಸಭಾಪತಿಗಳೆ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ ವಿಧೇಯಕವನ್ನು ನಾನು ಸ್ವಾಗತಿಸುತ್ತ ಒಂದೆರಡು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಮಂಡಿಸತಕ್ಕ ಕಾಲದಲ್ಲಿ ದೈವಭಕ್ತರಿಂದ ಬರತಕ್ಕ ಹಣವನ್ನು ಸದ್ವಿನಿಯೋಗವಾಗುವಂತೆ ಮತ್ತು ಈ ಧಾರ್ಮಿಕ ಸಂಸ್ಥೆಗಳ ಉತ್ಪನ್ನ ಇನ್ನೂ ಹೆಚ್ಚಾಗುವಂತೆ ಮಾಡಿ, ದೇವಸ್ಥಾನಗಳಿಗೆ ಬರತಕ್ಕ ಭಕ್ತವೀಕ್ಷಕರುಗಳಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸತಕ್ಕ ಉದ್ದೇಶದಿಂದ ಈ ಮಸೂದೆಯನ್ನು ತರಲಾಗಿದೆ ಎಂದು ಅಪ್ಪಣೆ ಕೊಡಿಸಿದರು. ಇದನ್ನು ಕಾರ್ಯದಲ್ಲಿ ಜಾರಿಗೆ ತಂದರೆ ಬಹಳ ಒಳ್ಳೆಯದು. ದೇವರಲ್ಲಿ ಜನಗಳಿಗೆ ಭಕ್ತಿಯಿರುವುದು ಸ್ವಾಭಾವಿಕ. ಆದರೆ ಎಲ್ಲ ಜನರಲ್ಲೂ ಎಲ್ಲಾ ದೇವರ ಮೇಲೂ ಭಕ್ತಿಯಿರುವುದು ವಿರಳ. ನಮ್ಮ ಶ್ರೀಮಾನ್ ಕೃಷ್ಣಪ್ಪನವರಿಗೆ ತಿರುಪತಿ ತಿಮ್ಮಪ್ಪನಲ್ಲಿ ಭಕ್ತಿಯಿದ್ದರೆ ವಿದ್ಯಾಮಂತ್ರಿ ಗಳಿಗೆ ಯಡಿಯೂರು ಶಿದ್ಧಲಿಂಗೇಶ್ವರನಲ್ಲಿ ಭಕ್ತಿ ಇರುತ್ತದೆ. ಆದರೆ ಯಾರ ಕಣ್ಣಿಗೂ ಬೀಳದಂ ಮುರುಕು ದೇವಸ್ಥಾನಗಳಲ್ಲಿ ಇರತಕ್ಕ ದೇವರುಗಳು ದೇವರಲ್ಲವೆ ? ಆ ದೇವರನ್ನು ಆರಾಧಿಸತಕ್ಕ ಜನರಿಲ್ಲವೆ ? ಅಂಥ ದೇವರುಗಳನ್ನೂ ಪೂಜಿಸತಕ್ಕ ಜನಗಳಿದ್ದಾರೆ. ಆದರೂ ಅಂಥ ದೇವರುಗಳು ಜನರ ಕಣ್ಣಿಗೆ ಬೀಳುವುದು ಕಷ್ಟ. ಇಂಥ ದೇವರುಗಳಮೇಲೆ ಜನರ ಕಣ್ಣು ಹೆಚ್ಚಿಗೆ ಬೀಳುವಂತೆ ಮಾಡಿದರೆ ಅವುಗಳೂ ಪ್ರಖ್ಯಾತಿಯಾದ ದೇವರುಗಳಾಗಿ, ಅವುಗಳಿಗೂ ಹೆಚ್ಚಿನ ವರಮಾನ ಗಳಿಸತಕ್ಕ ಶಕ್ತಿ ಬರುತ್ತದೆ. ಇಂಥ ದೇವಾಲಯಗಳನ್ನು ಅಭಿವೃದ್ಧಿಮಾಡಲು ಜನರೀಗ ಮುಂದೆ ಬರಬೇಕಾ ಗಿದೆ. ಹೀಗೆ ಕಣ್ಣಿಗೆ ಕಾಣಿಸದೆ ಇರತಕ್ಕ ಅನೇಕ ದೇವಸ್ಥಾನಗಳು ನಮ್ಮ ತಾಲ್ಲೂಕಿನಲ್ಲಿವೆ. ಎರ ಡನೆಯದಾಗಿ ದೇವಸ್ಥಾನಗಳಲ್ಲಿ ಪೂಜೆ ಮಾಡುವ ಪೂಜಾರಿಯಲ್ಲಿಯೂ ಶೀಲ, ಸ್ವಚ್ಛತೆ, ಸಂಸ್ಕೃತಿ ಮತ್ತು ಆರೋಗ್ಯ ಇರಬೇಕು. ಪೂಜಾರಿಗಳು ಪೂಜೆಗೆ ಸಂಬಂಧಪಟ್ಟಂಥ ಕೆಲವು ವಿದ್ಯೆಗಳಲ್ಲಿ ಪರಿಣಿತರಾಗಿರಬೇಕು. ಕೆಲವು ಮಂತ್ರಗಳನ್ನು ಅಭ್ಯಾಸ ಮಾಡಿರುವವರಾಗಬೇಕು. ಕೊನೆಯ ಪಕ್ಷ ಕುಂಕುಮಾರ್ಚನೆ, ಸಹಸ್ರನಾಮ, ಅಷ್ಟೋತ್ತರ, ಇವೇ ಮೊದಲಾದ ಮಂತ್ರಗಳನ್ನಾದರೂ ಅಭ್ಯಾಸ ಮಾಡಿರುವರಾಗಿರಬೇಕು; ಎನ್ನುವ ನಿಬಂಧನೆಯಿರಬೇಕು. ಕೆಲವು ದೇವಸ್ಥಾನಗಳ ಪೂಜಾರಿಯ ಮೈಮೇಲಿರುವ ಕಿಗ್ಗಲುನಾಮಸಂವತ್ಸರದ ಮುಗ್ಗಲುಮಡಿ ಮಾಯವಾಗಬೇಕು, ಕೆಲವು ಕಡೆ ಕುಷ್ಠ ರೋಗದ ಕ್ಷಯರೋಗದ ಪೂಜಾರಿಗಳಿದ್ದಾರೆ. ಅವರಿಂದ ಭಕ್ತಾದಿಗಳು ತೀರ್ಥ ತೆಗೆದು ಕೊಳ್ಳಲು ಹಿಂಜರಿಯುತ್ತಾರೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರಕಾರದವರು ದೇವಸ್ಥಾನ ಗಳ ವ್ಯವಸ್ಥೆ ಮಾಡಿದರೆ ಮಾತ್ರ ದೇವರ ಹೆಸರಿನಲ್ಲಿ ಸಂಪಾದನೆ ಅಧಿಕವಾಗುವುದರಲ್ಲಿ ಸಂದೇಹವಿಲ್ಲ. ದೇವರ ಹೆಸರಿನಲ್ಲಿ ಯಾರೋ ಒಬ್ಬರು ಮಾತ್ರ ದೇವರ ಆಸ್ತಿಯನ್ನು ಅನುಭವಿಸುವುದು ತಪ್ಪಬೇಕು. ಜೀವ ಕೋಟಿಗಳ ಸೃಷ್ಟಿಕರ್ತನಾದ ದೇವರ ಅನುಗ್ರಹ ಭಕ್ತಾದಿಗಳೆಲ್ಲರಿಗೂ ಸಲ್ಲುವಂತಾಗಬೇಕು. ಅನ್ನ ಛತ್ರಗಳಿಗೆ ವಿದ್ಯಾಭ್ಯಾಸಕ್ಕೆ ಮತಸಂಬಂಧವಾದ ತತ್ವ ಶಾಸ್ತ್ರದ ಅಭ್ಯಾಸವನ್ನು ಮಾಡಿ ಪಾರಮಾರ್ಥಿಕ ಸಾಧನೆಗೆ ಅವಕಾಶವಾಗುವಂಥ ಜ್ಞಾನ ಶಾಲೆಗಳಿಗೆ ವಿನಿಯೋಗವಾಗಬೇಕು. ತಿರುಪತಿ ತಿಮ್ಮಪ್ಪನ ಹೆಸರಿನಲ್ಲಿ ಆತನ ಉತ್ಪತ್ತಿಯಿಂದ ನಡೆಸುತ್ತಿರುವ ಕಾಲೇಜು ಬಹು ಶ್ಲಾಘ ನೀಯವಾದುದು. ತುಮಕೂರಿನಲ್ಲಿರುವ ದೇವರಾಯನ ದುರ್ಗದಲ್ಲಿರುವ ಶ್ರೀ ನರಸಿಂಹಸ್ವಾಮಿ ದೇವಸ್ಥಾನವು ನಮ್ಮ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯದೇ ಇರಲಾರದು. ತುಮಕೂರಿಗೆ ಅವರು ಬಂದರೆ ಅವರು ಅಲ್ಲಿಗೆ ಭೇಟಿ ಕೊಡದೆ ಹೋಗುವುದಿಲ್ಲ. ಅಲ್ಲಿಗೆ ಬರುವ ಜನರೂ ಹೆಚ್ಚು ತ್ತಿದ್ದಾರೆ. ಇಲ್ಲಿಗೆ ಬರುವ ಭಕ್ತಾದಿಗಳ ಉದ್ದೇಶಗಳು ಅನೇಕ ತರಹವುಗಳಾಗಿವೆ. ಮೊದಲನೆಯ ದಾಗಿ ದೇವರಲ್ಲಿರುವ ಭಕ್ತಿ, ಎರಡನೆಯದಾಗಿ ಪ್ರಕೃತಿ ಸೌಂದರ್ಯದ ಸವಿ ನೋಟ, ಮೂರನೆಯ ದಾಗಿ ಇಲ್ಲಿನ ಶಾಂತ ವಾತಾವರಣ, ಇದರಿಂದ ಇದನ್ನು ಒಂದು ಹಿಲ್ ಸ್ಟೇಷನ್ನು ಮಾಡಬೇಕೆಂದು ನಮ್ಮ ಸರಕಾರದ ಅಭಿಪ್ರಾಯವಾಗಿತ್ತು. ಆದರೆ ಅದು ಈಗ ಯಾವ ಹಂತದಲ್ಲಿದೆ ಎಂಬುದು ತಿಳಿಯದು. ಇದರಂತೆಯೇ ಮತ್ತೊಂದು ಕೊರಟಗೆರೆ ತಾಲ್ಲೂಕಿನಲ್ಲಿ ಸಿದ್ಧರಾಮೇಶ್ವರ ಎನ್ನು ವುದು ಬೆಟ್ಟದ ಮೇಲಿದೆ. ಇದನ್ನು ಹಿಲ್ ಸ್ಟೇಷನ್ನು ಮಾಡಬಹುದು. ಇಲ್ಲಿ ಒಂದು ಕ್ಷಯದ ಆಸ್ಪತ್ರೆಯನ್ನೂ ತೆರೆಯಬೇಕೆಂಬ ಉದ್ದೇಶವಿತ್ತು. ಇಲ್ಲಿಯ ಹವಾಮಾನವನ್ನು ಗಮನಿಸಿ ಇಲ್ಲಿ ಒಂದು ಕ್ಷಯದ ಆಸ್ಪತ್ರೆಯನ್ನು ನಿರ್ಮಿಸಿದ್ದಾದರೆ, ಅನುಕೂಲವಾಗುತ್ತದೆ ಮತ್ತು ದೇವರ ಅನುಗ್ರಹ ಭಕ್ತಾದಿಗಳಿಗೆ ದೊರಕುತ್ತದೆ.

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ಕೆಲವು ಧಾರ್ಮಿಕ ಸಂಸ್ಥೆಗಳು ಮತ್ತು ಮಠಾಧಿಪತಿಗಳು ದೇವರ ಹೆಸರಿನಲ್ಲಿ ಬರುತ್ತಿರುವ ಆದಾಯವನ್ನು ಸದ್ವಿನಿಯೋಗ ಮಾಡುತ್ತಿರುವುದು ಶ್ಲಾಘನೀಯವಾದುದು. ಉದಾಹರಣೆಯಾಗಿ ತುಮಕೂರಿನಲ್ಲಿರುವ ಶ್ರೀ ಸಿದ್ಧಗಂಗಾ ಮಠ ಹೇಳಬಹುದು. ಇಲ್ಲಿ ವಿದ್ಯಾಭ್ಯಾಸಕ್ಕೆ, ಸಂಸ್ಕೃತಿಗೆ, ಅನ್ನದಾನಕ್ಕೆ, ಹೀಗೆ ಎಲ್ಲ ವಿಧದಲ್ಲಿಯೂ ಅದರಲ್ಲೂ ಪ್ರಜಾಜ್ಞಾನೋದಯಕ್ಕೆ ಮುಖ್ಯ ಅಂಶವಾದ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಶ್ರಮ ವಹಿಸುತ್ತಿರುವ ಸಂಸ್ಥೆ ಮೈಸೂರು ದೇಶದ ಸಿದ್ಧಗಂಗಾ ಮಠ ಎಂದು ಹೇಳಿದರೆ ಅದು ತಪ್ಪಾಗಲಾರದು. ಇದೇ ರೀತಿ ಬಾಕಿ ಧಾರ್ಮಿಕ ಸಂಸ್ಥೆಗಳ ಹಣವು ಸದ್ವಿನಿಯೋಗವಾಗುವಂತೆ ಮಾಡುವುದಕ್ಕಾಗಿ ನಮ್ಮ ಮುಂದೆ ತಂದಿರುವ ಈ ವಿಧೇಯಕವನ್ನು ಸಮರ್ಥಿಸುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

†**Sri V. S. PATIL** (Belgaum-I).—Sir, at the outset, I shold like to appreciate the efforts made by the Hon'ble Minister in bringing this uniform law regarding the trusts and religious institutions.

This Bill was really over due. Now I hope that during this perticular session, we will be able to pass it into law. But at the same time, Sir, I feel that there ought to be some changes which will be suitable for all the different tracts of the State. We are at present governed by the Bombay Public Trusts Act. But it does not practically touch many matters which are included in the present Bill.

An over-all examination or the reading of this Bill shows that practically the whole power of administering the religious trusts or institutions or temples or mosques, etc., vests in the executive Government. I think and I feel, Sir, that some people are likely to be a affected and they may complain that the liberty of managing their own affairs so far as religion is concerned and which is granted by the Constitution is being encroached upon under the provisions of this Bill. We have to convince those people that we are not going to encroach upon the religious liberty granted by the Constitution, but we want to see that no misappropriations or wastage of public funds is committed and there must be some check upon the use of public funds; and for that purpose I should like to request the Hon'ble Minister that a separate branch of the executive should be there instead of mixing the powers with the present revenue Department. A separate branch from the Assistant Commissioner, Commissioner, the Revenue Appellate Tribunal, and the Government and the High Court. That should be a separate branch from the institution to the Government. At present, we know Sir, that the Deputy Commissioner of every district is really overworked. They were the centres of power in the Pre-independence days and their main business was the collection of revenue, maintenance of law and order etc., But since Independence, the number of our Ministers is increasing day by day and these Deputy Commissioners have to arrange for their programmes and they have to travel and tour along with our Ministers. These poor fellows are practically deprived of their legitimate work and they have to attend to our Hon'ble Ministers day and night. That is why the legitimate duty entrusted to them, will suffer and it is likely to be so in future, because there is no hope of any reduction of the number of members of the Cabinet or their assistants.

There is some atmosphere outside the State of reducing the number of Cabinet Members but that is not so here. The Kamaraj Plan has not appeared here. I do not know what happens in future. So, I suggest that there should be a different branch altogether. Do not mix up these matters of religion with the executive of the Deputy Commissioner. Keep them separate and thereby make it an effective administration in this particular branch which you are creating.

In some provisions powers have been given to the Deputy Commissioner either to decide or to hear appeals, etc. Instead of giving this power to the Deputy Commissioner, give it to the Assistant Commissioner who is to be held responsible for the management. Let there be an appeal from the Assistant Commissioner to the Deputy Commissioner, who is to be appointed for this purpose. From the Commissioner certain matters may come to the Revenue Appellate Tribunal and if it is an administrative matter, it may go to the Government. The final appeal should be to the High Court. All these provisions are good except that the Deputy Commissioner has been invested with certain powers in some of the provisions of this Bill. I suggest that there should be a separate channal from bottom to top and that will be the most practical system and the purpose for which this Bill is brought before the House can be very easily and effectively served.

Then, there is one doubt which I should like to get cleared by the Hon'ble Minister as to whether this Act applies to all the trusts-private as well as public. So far as Bombay area people are concerned, the Bombay Trust Act applies only to the Public Trust and not to the private trust. In this Bill no such distinction is made and the word used is only "Trust". It will affect the public trusts and there is no doubt about it; but what about private trusts? There are so many rulings of the Bombay High Court that private trusts are exempted from the provisions of that Act. So, what is the definite line of thinking should be explained by the Hon'ble Minister.

In clause 3 of Chapter II it is said that the State Government 'may' by notification appoint. When we are definitely going to enforce this Act, I do not know why the word 'may' is used ; it ought to have been 'shall'. So far as clause 4, etc. is concerned, I have expressed that Deputy Commissioner in all these clauses must be dropped.

In clause 18 (3), I do not understand the wording. In clause 75, any decision under this, is appealable already. Then, why this special wording is there again in this clause ? This is a repetition. This wording is not to be found in clauses 16, 18, 19, 23 and 32. So, this is redundent and must be deleted or include the wording in other clauses also. Otherwise, it will give room for doubt as to why this should be only in this particular clause. As this Bill is going to a Joint Select Committee, this matter and wording of several other clauses which are not very clear may be looked into.

Sir, when the Bill was introduced, I expected the Hon'ble Minister to explain at least broadly the provisions of the Bill. It appears that

(SRI V. S. PATIL)

this Bill has made some distinction between different categories of institutions. In the case of Mutts, there is a separate provision. In the case of Notified Institutions there is a separate provision. Which are these notified institutions and in which category they are to be placed? All these things must be clarified. Even now I expect the Hon'ble Minister to explain all this when he replies. That will enable us to appreciate the aspects of the Bill.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಮಾನ್ಯ ಕಂದಾಯ ಶಾಖೆಯ ಮಂತ್ರಿಗಳು ತಂದಿರತಕ್ಕಂಥ ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಕಾರಣಗಳ ಪಟ್ಟಿಯಲ್ಲಿ ಮಂತ್ರಿಗಳು ನಮಗೆ ತಿಳಿಸಿರುವಂತೆ ಹೊಸದಾಗಿ ಸೇರಿರತಕ್ಕಂಥ ಈ ಐದು ಭಾಗಗಳ ಕಾಯಿದೆಗಳನ್ನು ಒಂದು ಗೂಡಿಸಿ, ಈ ಹೊಸ ಮೈಸೂರಿನಲ್ಲಿ ವಿಶಾಲ ರಾಜ್ಯದಲ್ಲಿ ಏಕ ರೂಪವಾದಂಥ ಒಂದು ಕಾನೂನು ರಚಿಸುವುದು ಅವಶ್ಯಕವೆಂದು ತಿಳಿದು ನಾನು ಇದನ್ನು ಸ್ವಾಗತಿಸುತ್ತೇನೆ.

5 P.M.

ಈಗ ತಂದಿರತಕ್ಕಂಥ ಮಸೂದೆಯಲ್ಲಿ ಹೆಚ್ಚಾಗಿ ಹಿಂದೂ ಮತಕ್ಕೆ ಮಾತ್ರ ಸಂಬಂಧಪಟ್ಟ ವಿಷಯಗಳು ಅಡಕವಾಗಿದ್ದ ಹಾಗೆ ಕಾಣುತ್ತದೆ. ನಮ್ಮ ದೇಶ ಅನೇಕ ಮತಗಳಿಂದ, ಅನೇಕ ನಂಬಿಕೆಗಳಿಂದ ಕೂಡಿದ ದೇಶ. ಆದ್ದರಿಂದ ಬೇರೆ ಮತಗಳ ವಿಷಯಗಳೆಲ್ಲಾ ಸಾಧ್ಯವಾದಷ್ಟು ಮಟ್ಟಿಗೆ ಈ ಮಸೂದೆಯಲ್ಲಿ ಅಡಕವಾಗಿದ್ದರೆ, ಆ ಬಗ್ಗೆಯೂ ಇಲ್ಲಿ ಚರ್ಚೆ ನಡೆದಿದ್ದರೆ, ಅದು ಸ್ವಲ್ಪ ಮಟ್ಟಿಗಾದರೂ ಒಳ್ಳೆಯದಾಗುತ್ತಿತ್ತು ಎಂದು ನನ್ನ ಭಾವನೆ Statement of Objects and Reasons ನಲ್ಲಿ four Central Acts will not apply to Religious or Charitable Institutions or Trusts to which this Bill applies ಎಂದು ಹೇಳಿರುವುದರ ಅರ್ಥ ಮತ್ತು ಭಾವನೆ ಸ್ವಲ್ಪ ಸಡಿಲವಾಗಿದೆ.

ನಿನ್ನೆ ಮತ್ತು ಈ ದಿವಸ ಮಾತನಾಡಿದ ಕೆಲವು ಸದಸ್ಯರುಗಳು ಅನೇಕ ದೇವಾಲಯಗಳಲ್ಲಿ ಮತ್ತು ಮಠಗಳಲ್ಲಿ ನಡೆಯತಕ್ಕಂಥ ಕೆಲವು ವಿಚಾರಗಳನ್ನು ತಿಳಿಸಿ ಅವನ್ನು ಶುದ್ಧ ಮಾಡಬೇಕು, ಸರಿಪಡಿಸಬೇಕು, ಅದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಸಲಹೆಗಳನ್ನು ಮಾಡಿದ್ದಾರೆ. ಅನೇಕ ಮಠಗಳಲ್ಲಿ ಕಹಿವಾತಾವರಣವಿರಬಹುದು. ಆದರೆ ಅನೇಕ ಮಠಗಳಲ್ಲಿ ವಿಧಿಗಳು ಸರಿಯಾಗಿ ನಡೆಯುತ್ತಾ ಇವೆ, ಅವುಗಳಲ್ಲಿ ಜನಗಳಿಗೆ, ಭಕ್ತಾದಿಗಳಿಗೆ ನಂಬಿಕೆ ಇದೆ ಅನ್ನುವುದಕ್ಕೆ ಸಾಕಾದಷ್ಟು ಕಾರಣಗಳಿವೆ ಎಂದು ಹೇಳುತ್ತೇನೆ.

ಕೆಲವರು ಈ ಕಾನೂನು ತಂದಿರತಕ್ಕಂಥಾದ್ದು ದೇವರುಗಳನ್ನು ಅಧೀನಕ್ಕೆ ತರುವುದಕ್ಕೋಸ್ಕರ ಎಂಬ ಭಾವನೆ ಬರುವ ಹಾಗೆ ವಿತಂಡವನ್ನು ಮಾಡಿದ್ದರು. ಇಲ್ಲಿ ಓದಿ ನೋಡಿದರೆ, ಕಾನೂನಿನಲ್ಲಿ ಎಲ್ಲಿಯೂ ದೇವರುಗಳನ್ನು ಕಾಯಿದೆಗೆ ಒಳಪಡಿಸಿಲ್ಲ, ದೇವರುಗಳ ಪೂಜಾ ವಿಧಾನಗಳು ಇದರಲ್ಲಿ ಕಂಡು ಬರುವುದಿಲ್ಲ. ಆದರೆ ದೇವಾಲಯಗಳ ಆಸ್ತಿಪಾಸ್ತಿಗಳು ಮತ್ತು ಅವುಗಳಿಗೆ ಕೊಟ್ಟಿರತಕ್ಕಂಥ ಸಂಪತ್ತು, ಹಣಕಾಸಿನ ನಿಧಿ ಸದ್ವಿನಿಯೋಗವಾಗಬೇಕು, ಅವುಗಳು ದುರುಪಯೋಗವಾಗುವುದನ್ನು ತಪ್ಪಿಸಬೇಕು ಎಂಬತಕ್ಕಂಥ ಉದ್ದೇಶಗಳು ಈ ಮಸೂದೆಯಲ್ಲಿ ಅಡಕವಾಗಿವೆ ಎಂದು ನಾನು ಹೇಳುತ್ತೇನೆ.

ನಮ್ಮ ದೇಶ ಅನೇಕ ದೇವತೆಗಳನ್ನು ಪೂಜೆ ಮಾಡತಕ್ಕಂಥ ದೇಶ, ಇದು ಬಹಳ ಪ್ರಾಚೀನವಾದ ದೇಶ. ಅದಕ್ಕೋಸ್ಕರ ಯಾವ ಯಾವ ಕಾಲದಲ್ಲಿ ಯಾವ ಯಾವ ಸಾಧನೆಯಲ್ಲಿ ಯಾವ ಯಾವ ಮನುಷ್ಯನಿಗೆ ಯಾವ ಯಾವ ರೂಪದಲ್ಲಿ ಕಾಣಿಸಿಕೊಂಡರೋ, ಆ ಕಾಲದಲ್ಲಿ ದೇವರನ್ನು ಪೂಜೆ ಮಾಡುತ್ತಾ ಬಂದಿದ್ದಾರೆ. ಸ್ತ್ರೀ, ಪುರುಷ, ಪ್ರಾಣಿಗಳು, ಆಕಾರ ಮತ್ತು ಆಕಾರವಿಲ್ಲದ ಲಿಂಗಗಳು, ಹೀಗೆ ಅನೇಕ ಆಕಾರಗಳನ್ನಿಟ್ಟುಕೊಂಡು ನಮ್ಮ ದೇಶದಲ್ಲಿ ಪೂಜೆ ಮಾಡತಕ್ಕ ಪದ್ಧತಿ ಬಂದಿದೆ. ಒಂದಾನೊಂದು ಕಾಲದಲ್ಲಿ ತಪಸ್ಸು ಇತ್ತು. ತಪಸ್ಸೆಲ್ಲಾ ಹೋಗಿ ಯಾಗಗಳು ಬಂದವು, ಯಾಗ ಹೋಗಿ ಪೂಜೆ, ಭಜನೆ ಮಾಡುವುದು ಬಂದವು ಆ ಮೇಲೆ ಮನುಷ್ಯನ ಮನಸ್ಸು ಚಲ್ಲಾಪಿಲ್ಲಿಯಾಗಿ, ಆಕಾರವಿಟ್ಟುಕೊಂಡು, ವಿಗ್ರಹ, ನಿರಾಕಾರ, ಸಾಕಾರ ಇಟ್ಟುಕೊಂಡು, ದೇವರುಗಳು ಎಂದು ಕರೆದುಕೊಂಡು, ಅವುಗಳಿಗೆ ಹೆಸರಿಟ್ಟು, ಪೂಜೆ ಮಾಡಿಕೊಂಡು ಭಕ್ತರು ಬಂದರು ಎಂದು ಚರಿತ್ರೆ

ರರು ಹೇಳುವುದು ನಿಜವಾಗಿದೆ. ಹೀಗೆ ತಪಸ್ಸು, ಯಾಗ ಮೊದಲಾದವುಗಳು ಹೋಗಿ, ದೇವಾಲಯ ಗಳು ಬಂದ ಕಾಲದಲ್ಲಿ, ಭಕ್ತರುಗಳು ದೇವಸ್ಥಾನಗಳನ್ನು ಕಟ್ಟಿಕೊಂಡು, ಪೂಜಾದಿಗಳನ್ನು ಇಟ್ಟು ಕೊಂಡು, ಲಿಂಗ ಮತ್ತು ವಿಗ್ರಹಗಳನ್ನು ಪೂಜೆಮಾಡುವುದಕ್ಕೆ ಪ್ರಾರಂಭ ಮಾಡಿದರು. ದೇವಸ್ಥಾ ನಗಳು ಬಂದ ಮೇಲೆ ಭಕ್ತಾದಿಗಳು ಅವುಗಳಿಗೆ ಹೋಗ ಬೇಕಾಗಿ ಬಂದಿತು. ಅವರು ತಮ್ಮ ಭಕ್ತಿ ಗೋಸ್ಕರ ದೇವರ ಹೆಸರಿನಲ್ಲಿ ಧನವನ್ನು ಕೊಟ್ಟರು, ಹೀಗೆ ದೇವಾಲಯಗಳಿಗೆ ಆಸ್ತಿಪಾಸ್ತಿಗಳು ಬರುತ್ತಾ ಬಂದವು. ಈ ಆಸ್ತಿ ಪಾಸ್ತಿಗಳನ್ನು ಸರ್ಕಾರದವರು ಮುಜರಾಯಿ ಎಂಬ ಹೆಸರಿನಲ್ಲಿ ಅಥವಾ ಬೇರೆ ಹೆಸರುಗಳಲ್ಲಿ ಸಾಧ್ಯವಾದಷ್ಟುಮಟ್ಟಿಗೆ ಅಧೀನದಲ್ಲಿ ಇಟ್ಟುಕೊಳ್ಳುತ್ತಾ ಬಂದರು. ಇವು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿದ್ದವು. ಈಗ ಎಲ್ಲ ನಿಯಮಾವಳಿಗಳೂ ಒಂದೇ ರೀತಿ ಯಲ್ಲಿರಲಿ ಎಂದು ಈ ಕಾಯಿದೆ ಬಂದಿದೆ, ಅದನ್ನು ನಾನು ಸ್ವಾಗತಿಸುತ್ತೇನೆ.

ಆ ಮೇಲೆ ನಮ್ಮ ದೇಶದಲ್ಲಿ ಭಕ್ತಿ ಭಾವನೆ ಹೆಚ್ಚಿಕೊಂಡು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ವೆಂಬ ಆಧ್ಯಾತ್ಮಿಕ ತತ್ವಗಳು ದೈವ ಸಾಕ್ಷಾತ್ಕಾರಕ್ಕಾಗಿ ಬಂದವು. ಈ ಮಸೂದೆ ಮಠಗಳಿಗೆ ಸಂಬಂಧಪಟ್ಟಿರುವುದರಿಂದ, ಇದನ್ನೆಲ್ಲಾ ಹೇಳುತ್ತಿದ್ದೇವೆ. ಹೀಗೆ ಇಂಥ ತತ್ವಗಳನ್ನು ಭೋಧಿಸುವು ದಕ್ಕೋಸ್ಕರ, ನಮ್ಮ ಮನಸ್ಸಿನಲ್ಲಿ ಪವಿತ್ರ ಭಾವನೆಗಳನ್ನು ತುಂಬಿ ಅದನ್ನು ಮೇಲಕ್ಕೆ ಎಳೆಯುವು ದಕ್ಕೆ, ದೇವರ ಕಡೆ ತಿರುಗಿಸಿ, ಮೋಕ್ಷ ಸಾಧನೆ ಮಾರ್ಗ ತಿಳಿದುಕೊಳ್ಳುವುದಕ್ಕೆ ಮಠಗಳು ಹೆಚ್ಚು ಹೆಚ್ಚಾದವು.

ಈ ಮಠಗಳಿಗೂ ಆಸ್ತಿಪಾಸ್ತಿಗಳು ಹೆಚ್ಚುತ್ತಾ ಬಂದವು. ಅವುಗಳಿಗೆ ಬಂದ ಕಾಣಿಕೆ, ಧನ, ನಾಣ್ಯ, ಭೂಮಿ, ಆಸ್ತಿಪಾಸ್ತಿಗಳು ದುರುಪಯೋಗವಾಗದಂತೆ ನೋಡಿಕೊಳ್ಳಬೇಕೆಂದು ಈ ಕಾನೂ ನನ್ನು ಮಾಡಿದ್ದಾರೆ. ಅದನ್ನು ಅನೇಕ ಸದಸ್ಯರುಗಳು ಸ್ವಾಗತಿಸಿದ್ದಾರೆ, ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ಇದು ಸೆಲೆಕ್ಟ್ ಕಮಿಟಿಗೆ ಹೋಗತಕ್ಕಂಥಾದ್ದಿದೆ. ಅಲ್ಲಿ ಇದರ ವಿಷಯಗಳನ್ನೆಲ್ಲಾ ಬಹಳ ಚೆನ್ನಾಗಿ ಚರ್ಚೆ ಮಾಡಬೇಕು ಮತ್ತು ಕಾನೂನನ್ನು ಸರಿಯಾಗಿ ಯೋಚಿಸಿ, ಅದನ್ನು ಸಾಧಾ ರಣ ಜನರಿಗೆ ಅರ್ಥವಾಗುವ ರೀತಿಯಲ್ಲಿ ರೂಪಿಸಬೇಕು ಮತ್ತು ತರಬೇಕು.

ಪರಂಪರೆಯಾಗಿ ಬಂದಿರುವ ಪೂಜಾರಿಗಳು ಮೊದಲಾದವರನ್ನು ನೇಮಿಸುವ ವಿಷಯವನ್ನು ಪ್ರಸ್ತಾಪ ಮಾಡಲಾಯಿತು. ಅದರಲ್ಲಿ ಅಂಥದೇನೂ ತೊಂದರೆ ಇಲ್ಲ. ಅವರು ಪರಂಪರೆಯಾಗಿ ಬರ ಬೇಕಾದಂಥ ಒತ್ತಡವೇನೂ ಇಲ್ಲ. ವಂಶಪಾರಂಪರ್ಯವಾಗಿ ಬಂದವರೂ ಇರಬಹುದು; ಹೊಸಬ ರನ್ನೂ ನೀವು ನೇಮಿಸಿಕೊಳ್ಳಬಹುದು. ಆಗಮಶಾಸ್ತ್ರಗಳನ್ನು ತಿಳಿದಿರತಕ್ಕಂಥ ಪೂಜಾರಿಗಳನ್ನು ನೇಮಿಸಿಕೊಳ್ಳುವುದು ಒಳ್ಳೆಯದು. ಆದರೆ ಈಗ ನಮ್ಮ ದೇಶದಲ್ಲಿ ಪೂಜೆ ಮಾಡತಕ್ಕಂಥ ಅರ್ಚಕರಿಗೆ ಆಗಮ ಮೊದಲಾದ ಶಾಸ್ತ್ರಗಳಲ್ಲಿ ಜ್ಞಾನವನ್ನು ಪಡೆಯಲು ಸಾಕಾದಷ್ಟು ವ್ಯವಸ್ಥೆ ಇಲ್ಲ. ನಮ್ಮ ರಾಜ್ಯದಲ್ಲಿ 2—3 ಕಡೆಯಲ್ಲಾದರೂ ಪೂಜಾ ವಿಧಾನಗಳನ್ನು ಕಲಿಸತಕ್ಕಂಥ, ಆಗಮ ಪಾಠಗಳನ್ನು ವಿಧಿಗಳನ್ನು ಕಲಿಸತಕ್ಕಂಥ ಪಾಠಶಾಲೆಗಳನ್ನು ಸ್ಥಾಪಿಸಿ, ಉಪಾಧ್ಯಾಯರುಗಳನ್ನೂ, ಗುರುಗ ಳನ್ನೂ ಪಾಠ ಹೇಳಲು ನೇಮಿಸಬೇಕು.

ಮತ್ತು ನಮ್ಮ ದೇಶದಲ್ಲಿ ಅನೇಕ ದೇವಸ್ಥಾನಗಳು, ಸಂಸ್ಥೆಗಳು ರಿಜಿಸ್ಟರ್ ಆಗಿಯೇ ಇಲ್ಲ. ರಿಜಿಸ್ಟರ್ ಏಕೆ ಮಾಡಿಸಬೇಕು ಎಂಬತಕ್ಕಂಥ ಒಂದು ಅಸಮಾಧಾನ ಸ್ವಲ್ಪಮಟ್ಟಿಗೆ ಬರಬಹುದು, ಸಮಾಧಾನ ಮಾಡುವುದಕ್ಕೆ ಸರ್ಕಾರದವರು ಮತ್ತು ಸಭಿಕರು, ಮತ್ತು ತಿಳಿದ ಜನಗಳು ಜನರಿಗೆ ತಿಳಿಸುವುದಕ್ಕೆ ಪ್ರಯತ್ನ ಪಡಬೇಕಾಗಿದೆ.

ಶ್ರೀ ಗೋಪಾಲ ಸಾರೆನ್ನವರು ಒಂದು ಮಾತನ್ನು ಹೇಳಿದರು. ಅಸ್ಪೃಶ್ಯತೆ ಹುಟ್ಟಿದ್ದು ದೇವ ಸ್ಥಾನದ ಮೂಲೆಯಲ್ಲಿ, ಅದರ ಮೂಲ ಇರುವುದು ದೇವಸ್ಥಾನದಲ್ಲಿ ಎಂದು, ಒಂದು ವೇಳೆ ಇದ್ದರೂ ಇರಬಹುದು. ಮಹಾತ್ಮ ಗಾಂಧಿಯವರು ಹೇಳಿದ್ದಾರೆ; ಹಿರಿಯರು ಹೇಳಿದ್ದನ್ನು ಕೇಳಿದ್ದೇನೆ. ಅದಕ್ಕೋಸ್ಕರ ಈ ಸೆಲೆಕ್ಟ್ ಕಮಿಟಿಯಲ್ಲಿ ಕನಿಷ್ಠ ಪಕ್ಷ, 20 ಜನರಲ್ಲಿ, ಇಬ್ಬರು ಹರಿಜನರನ್ನಾದರೂ ನೇಮಿಸಬೇಕು ಎಂದು ಒಂದು ಸಲಹೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† Sri GANJI VEERAPPA (Harihar).—Mr. Speaker, Sir, Several Hon'ble Members of this House have offered their remarks on the several provisions of this Bill. What I feel is that, this Bill was long overdue, because in this land of Mutts and various kinds of religious institutions and temples, it was quite necessary to have some sort of legislation under which some control over these institutions had to be exercised. Many of the Temples and Mutts have enormous properties, but the difficulty is that there has been no legislation so far to control the management of these institutions. I am glad that this Bill provides for

(SRI GANJI VEERAPPA)

the management and control and the administration of several institutions. In fact, when I went through the definition clause, I was happy to note that religious institution means all conceivable temples of deities. Sri Sanjeevanath aikala said that in many parts *Bhootas* and deities are there, it is a very mysterious country wherein there are as many religions as the number of religious institutions are there. All conceivable temples and institutions that ought to come under the purview of this Bill are brought in here. One thing which I want to point out in this connection is that there is provision in Chapter IVfor a person to apply for registration of religious and charitable institutions and trusts. Here, it is provided that in the case of religious and charitable institutions, application will have to be made for registration. No doubt, under sub-section (1) of clause 15, it is made obligatory or compulsory for every such institution to come under the purview of this Bill and he is required to make an application for registration. Also, provision has been made in the subsequent clauses 14, 16 and 17 with regard to the procedure to be adopted in the case of applications received for registration. The procedure, no doubt, is simple, but penalty has also been provided in the provision of this Bill in the penalties Chapter for omission to opply for registration. In fact, clause 83 in Chapter XI provides for penalty for such an institution which does not apply for registration. The penalty prescribed for violation of the provision contained in clause 14 is Rs. 1000/- It is no doubt true. I conceive a case wherein a man contests that his institution is not governed by the this Bill; he may contend that it is not a religious or charitable institution. Suppose, he has got a genuine cause for contesting that he need not file an application for registration, I feel, when there is this lacuna of providing an opportunity for a man to contend that he does not come under the purview of this Bill, he need not apply for registration. Some remedy must be there for such a person. Every one who does not comply with the provision comes under 83 and he will be punished.

Mr. SPEAKER.—Is it on conviction? If no complaint is filed, nobody is going to be punished.

Sri GANJI VEERAPPA.—No doubt conviction pre-supposes that he will have an opportunity.

Mr. SPEAKER.—It pre-supposes an enquiry to be held for the purpose of punishment and on conviction to be punished with a fine which may extend to Rs. 1,000/-

Sri GANJI VEERAPPA.—He connot be punished even without an opportunity being given to him. What I feel is this; in Chapter VI, supposing a provision is made that any person who contends that he does not come under the purview may also apply to the Asssistant Commissioner, the remedy may be simple so that the Assistant Commissioner at this stag may have an opportunity of deciding and giving him relief.

Such a provision may be necessary and I suggest that this may be examined.

> " No office or service in a notified institution shall be deemed to desend by hereditary right, unless it has been conferred or recognised originally with an express stipulation to that effect in writing by a competent authority........."

Unless there is a decision of Court or some competent authority having laid down that the particular post is hereditary, no post will be hereditary under the provision. I welcome this. The object of religious institution is : it is a public property and they may have a right. It is also provided here in this clause.

> " Or has been held successively for three generations of the same family in succession in due legal course."

I feel that this may be omitted because if the head of a family has been the head of an institution, in such cases this hereditary right is not abolished. This does not affect such a case, and the fourthman also will be a successor.

MR. SPEAKER.—Which clause is that ?

SRI GANJI VEERAPPA.—Clause 44,Sir,which peovides that generally, no hereditary right should be accepted it is all right. We do agree that it is in consonence with the spirit of the times that hereditary rights should not be recognised because the institutions are public property. The wishes of the general public should be respected. You kindly see clause 46, it says.

> " No office or service in a notified institution shall be deemed to descend by hereditary right."

Therefore, if is held for less than three generations, it cannot be contended. It does not meen that if it is held for three generations-it shall be a hereditary right. Hereditary right is a proprietory right so far as private properties are concerned whether in public or private institutions. The very object of this Bill is to abloish the hereditary right so far as accession to offices of religious and charitable institutions, is concerned. If the spirit of this Bill is to abolish all hereditary rights, this latter portion, viz.,

> " Or has been held successively for three generations of the same family in succession in due legal course."

Should be deleted. I submit that it will be more perfect and the object better achieved if this provision is left out.

Clause 47 reads ;

> " When there is a dispute about the office of "pujari" or other servant of a notified institution, which by law or usage, descends by hereditary right, the Assistant Commissioner shall

(SRI GANJI VEERAPPA)

direct the parties to establish the rights in a competent court of law and pending the decision of the court, the Assistant Commissioner may make such arrangements as may be necessary for the discharge of the functions of such pujari or other servant."

Sir, at present, the rights of these pujaries are all dealt with by the Revenue Department. The Assistant Commissioner deal with these matters.

MR. SPEAKER.—Not in all areas. It is a civil right; it has to be litigated in a Civil Court.

SRI GANJI VEERAPPA—Under the Mysore Muzrai Act, it is so. But I do not know what obtains in the integrated areas. Any way, I feel that such powers regarding small offices like servants and pujaries should be left to the Assistant Commissioners'. Let them settle these small matters. Let them not be put to the necessity of going to a civill court.

MR. SPEAKER.—It is a good suggestion for the Select Committee to consider.

SRI GANJI VEERAPPA.—I feel that the provision contained in clause 47 may also be dealt with in the Select Committee.

In the case of mutts some traditions exist for finding the heads of such institutions. In the case of mutts now as it is, certain traditions have developed in the matter of selection of successors of heads of institutions. What is to be done in such cases is not covered here. It has been the practice in some mutts for hundreds of years for the disciples to select the successors in consultation with the wishes of the head of the mutt. That is how the next successor will be selected.

SRI M. V. KRISHNAPPA.—We respect it provided he is all right. We do not enter into it at all.

SRI GANJI VEERAPPA.—Better it is made specific. Let there be no doubt created in the minds of ancient institutions.

I am aware that the provision that has been made, is sufficent to deal with the mismanagement or maladministration of some of these Mutts. But time-honoured traditions must be respected in some of these cases. In cases contemplated under Clause 32, it has been the practice with some merchants who act as commission agents to collet some amount of money from the customers as *Dharma* fund. They say in clause 32 that they are accountable to the Government or the Assistant Commissioner whoever be the authority, they must within three months make payments of such amounts. It is a very healthy thing. I know the funds collected are utilised for the domestic affair or for their own

purposes. It is an effective remedy to prevent such misuse of funds. Section 65 says, my friend Sri Suryanarayana Rao also dealt with it,

> "Notwithstanding anything contained in the Indian limitation Act 1908, no suit against an assignee for valuable consideration of any immovable property of a religious or charitable institution or trust, which has been registered or deemed to have been registered under this Act, for the purpose of following in his hands such property or proceeds thereof or for an account of such property or proceeds shall be barred by any length of time."

I am afraid it offends against the general provisions of the Indian Limitation Act. It cannot be 'any length of time.' It means even after 100 years—when the property will have passed through several hands and the very nature of the property has been changed and so many litigations will have taken place so that the very character of the property will have been last.

Mr. SPEAKER.—Is it *ultra vires* ?

Sri GANJI VEERAPPA.—I think it is bad law.

Mr. SPEAKER.—Bad law may be of various kinds.

Sri GANJI VEERAPPA.—There is a specific provision in the limitation Act.

Mr. SPEAKER.—The provisions of limitation Act are not fundamental rights. The limitation Act is a procedural matter. If it is provided in any Act that it shall not apply, then it will have no operation

Sri GANJI VEERAPPA.—I am not against saying that the provision here offends against any of the provisions of the Limitation Act. It cannot be so vague as this, and further ......

Mr. SPEAKER.—Please do not mistake that a suit will always be decreed. All this is said because in the case of minors or institutions under disability the period of limitation is not generally reckoned. What this Bill provides is, let not the length of time be an effectual bar.

Sri GANJI VEERAPPA.—A *bona fide* transaction in the absence of any law to the contrary should not be affected by subsequent enactment. In that sense, I feel it is bad law and it may lead to several complications. I feel the Select Committee will seriously examine this aspect and do something at least to improve this section.

There is another section namely section 27 wherein it is laid down:

> "No suit to enforce a right on behalf of a religious or charitable institution or trust which has not been registered under this Act shall be heard or decided in any court."

Perhaps the object of the framers is to enforce that every institution should get itself registered. Otherwise it will have no remedy in the eye of the law.

Mr. SPEAKER.—The Hon'ble Member must remember that under the Indian Partnership Act, unless a partnership is registered, it shall not file a suit and though a suit is filed, it shall not be decreed. There is nothing wrong.

Sri GANJI VEERAPPA.—There is no need for this, because if there is no registration, there is provision to punish him. I think this is unnecessary. And further, Sir, in fact it is provided here that there will be a seperate Department to deal with these matters having Deputy Commissioners and Assistant Commissioners, Inspectors and so on. Any way, I leave the suggestion here for the time being, because my own impression is the Assistant Commissioner or Tahsildars have very little work. In fact I only feel that no seperate officers be appointed to administer the provisions of this Bill.

It is enough to entrust this work to the existing staff. No seperate department need be opened for this purpose.

With regard to clauses 66 and 67 it is suggested that if the conditions of any such trust are violated, certain remedies are there. Clause 67 says that the court can alter any scheme already settled or vary the terms of any decree, etc,. This has to be carefully examined whether such a provision has to be made or not ? The provision to obviate or to do away with the original trust created, to defeat the very purpose of the donor should be retained or not is a matter for close scrutiny and study by the Select Committee. Sir, on the whole, the Bill is very carefully drafted and some of the observations made here may be carefully considered by the Select Committee and if there is anything more we can discuss it when the Report of the Select Cammittee comes before the House. I welcome this Bill.

5-30 P.M.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, ಈಗ ಸಭೆಯಮುಂದೆ ಮಂಡಿಸಿರತಕ್ಕ ಮಸೂದೆಯೇನಿದೆ, ಇದನ್ನು ಸರ್ಕಾರದವರು, ದೇಶದಲ್ಲಿರತಕ್ಕ ಖಾಸಗಿ ದೇವಾಲಯಗಳ ಆಸ್ತಿಪಾಸ್ತಿಗಳೇನಿವೆ ಅವುಗಳಮೇಲೆ ತಮ್ಮ ಒಂದು ಹಕ್ಕನ್ನು ಸ್ಥಾಪಿಸಲು ತಂದಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳಿದ್ದು ಇದರಲ್ಲಿ ಬರುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹೆಸರಿಗೆ ಮಠ ಎಂದು ಇರುತ್ತದೆ. ಅಷ್ಟಿದ್ದರೆ ಸಾಕು. ತಮಗೆ ಈ 8 ಪರ್ಸೆಂಟೋ ಅಥವಾ 5 ಪರ್ಸೆಂಟೋ ಹಾಕುವುದಕ್ಕೆ ಅವಕಾಶವಾಗುತ್ತದೆ. ಆ ಉದ್ದೇಶದಿಂದಲೇ ಈಗ ಈ ಬಿಲ್ಲನ್ನು ತಂದಿದ್ದೀರಿ. ಈ ಬಿಲ್ಲು ನಾಳೆ ಪಾಸಾದ ಮೇಲೆ ಇದಕ್ಕೆ 20 ಜನ ಅಸಿಸ್ಟೆಂಟ್ ಕಮೀಷನರುಗಳು, ಒಬ್ಬ ಡೆಪ್ಯುಟಿ ಕಮೀಷನರ್, ಒಬ್ಬ ಕಮೀಷನರ್ ಇಷ್ಟೆಲ್ಲ ಜನರನ್ನೂ ನೇಮಿಸಬೇಕಾಗಿ ಬರುತ್ತದೆ. ಆಗ ಆ ಸ್ಥಾನಗಳಲ್ಲಿ ಮಂತ್ರಿಗಳ ಮಕ್ಕಳು, ಅವರ ಅಳಿಯಂದಿರು ಇವರುಗಳಿಗೆಲ್ಲಾ ಕೆಲಸ ಕೊಡಲು ಒಂದು ದಾರಿಯಾಯಿತು. ಆಗ ಇದೊಂದು ಪೊಲಿಟಿಕಲ್ ಮ್ಯಾನೇಜ್‌ಮೆಂಟಾಗುತ್ತದೆ. ಈ ಕಾರಣಗಳಿಂದಲೇ ಈ ಬಿಲ್ಲನ್ನು ತರವಾಗಿದೆ ಎಂದು ನಾವು ಇದನ್ನು ವಿರೋಧಿಸುವುದಕ್ಕೆ ಅವಕಾಶವಿದೆ. ಈ ಬಿಲ್ಲಿನ ಕ್ಲಾಜ್ 35ರಲ್ಲಿ ಧರ್ಮದ ಕಾಂಟ್ರಿಬ್ಯೂಷನ್ ಕೊಡದಿದ್ದರೆ 1,000 ರೂಪಾಯಿಗಳ ಜುಲ್ಮಾನೆ ವಿಧಿಸಬಹುದೆಂದು ಹೇಳಲಾಗಿದೆ. ಪುನಃ ಕ್ಲಾಜ್ 83ರಲ್ಲಿ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳದೆ ತಪ್ಪಿದಲ್ಲಿ ಅದಕ್ಕೂ 1,000 ರೂಪಾಯಿ ಜುಲ್ಮಾನೆ ಎಂದು ಹೇಳಿದೆ. ಈ ಎರಡು ಕ್ಲಾಜನ್ನೂ ಒಟ್ಟಾಗಿ ಕೂಡಿಸಿ ಒಂದೇ ಕ್ಲಾಜ್ ಮಾಡಬಹುದೆಂದು ಹೇಳುತ್ತೇನೆ.

ಕ್ಲಾಜ್ 39ರಲ್ಲಿ ಹೇಳಿರತಕ್ಕದ್ದು ಏಕ ಪಕ್ಷೀಯ ವಾದವಾಗಿದೆ. ಇದರಲ್ಲಿ ಬರಿ ಗಂಡಸರಿಗೆ ಮಾತ್ರ ಅವಕಾಶ ಕಲ್ಪಿಸಿದೆ. ಸ್ತ್ರೀಯರಿಗೂ ಅವಕಾಶವಿರಬೇಕೆಂದು ಹೇಳುತ್ತೇನೆ. ಇಲ್ಲಿ ಅವನು ಅಥವಾ ಅವಳು ಎಂಬ ಶಬ್ದಗಳಿರಬೇಕೆಂದು ಹೇಳುತ್ತೇನೆ.

ಕ್ಲಾಜ್ 41 ರಿಂದ 43ರರವರೆಗೆ ಟ್ರಸ್ಟಿಗಳೆ ತಮ್ಮಲ್ಲಿ ಯಾರಾದರೊಬ್ಬರನ್ನು ಬೋರ್ಡಿನ ಛೇರ್ಮನ್ನರನ್ನಾಗಿ ಆರಿಸಿಕೊಳ್ಳಬಹುದೆಂದು ತಿಳಿಸಲಾಗಿದೆ. ಈ ನೇಮಕವನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಅಳವಡಿಸಬೇಕೆಂದು ಹೇಳುತ್ತೇನೆ. ಇನ್ನು ಈ ಮಸೂದೆಯಲ್ಲಿ ಖಾಲಿ ಬೀಳತಕ್ಕ ಟ್ರಸ್ಟಿಗಳ ಸ್ಥಾನವನ್ನು ಭರ್ತಿಮಾಡತಕ್ಕ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಇದು ಸರಿಯಲ್ಲ. ಟ್ರಸ್ಟಿಗಳಿಂದ ಆರಿಸಲ್ಪಟ್ಟ ಒಬ್ಬ ಚೇರ್‌ಮನ್ ತನ್ನ ಅಧಿಕಾರಕ್ಕೆ ರಾಜೀನಾಮೆ ಕೊಟ್ಟರೆ ಆ ಸ್ಥಾನವನ್ನು ಭರ್ತಿಮಾಡತಕ್ಕ ಅಧಿಕಾರ ಸರ್ಕಾರದವರ ಕೈಯಲ್ಲಿರುತ್ತದೆ. ಸರ್ಕಾರದವರು ನೇಮಿಸತಕ್ಕ ವ್ಯಕ್ತಿ ನಾಮಕರಣ ಹೊಂದಿದವನಾಗುತ್ತಾನೇ ವಿನಾ ಅವನು ಚುನಾಯಿತ ಛೇರ್ಮನ್ ಆಗುವುದಿಲ್ಲ. ಇಂಥ ನಡವಳಿಕೆ ಸರಿಯಾದ್ದಲ್ಲ.

ಇನ್ನು ಕ್ಲಾಸ್ 47, 48 ಮತ್ತು 49 ಈ ಕ್ಲಾಜ್‌ಗಳಲ್ಲಿ ಇರತಕ್ಕದ್ದರಲ್ಲಿ ಪೂಜಾರಿಗಳಿಗೂ ಮತ್ತು ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನವರಿಗೂ ಒಂದು ವ್ಯವಹಾರವನ್ನು ತಂದು ಹಾಕತಕ್ಕ ರೀತಿಯಲ್ಲಿ ಹೇಳಿದ್ದಾರೆ. ಪೂಜಾರಿಗಳನ್ನು ನೇಮಿಸತಕ್ಕ ಹಕ್ಕನ್ನು ಸರ್ಕಾರ ಇಟ್ಟುಕೊಂಡಿದೆ. ಆದರೆ ಅವರನ್ನು ನೇಮಿಸಿಕೊಳ್ಳತಕ್ಕ ಅಧಿಕಾರವನ್ನು ಬೋರ್ಡಿಗೆ ಕೊಟ್ಟಮೇಲೆ ಈ ತೆಗೆಯತಕ್ಕ ಅಧಿಕಾರವನ್ನೂ ಸಹ ಅವರಿಗೇ ಕೊಡಬೇಕಾದ್ದು ಯೋಗ್ಯ. ಒಂದು ವೇಳೆ ಪೂಜಾರಿಗೇನಾದರೂ ಬೋರ್ಡಿನವರು ತೊಂದರೆ ಕೊಟ್ಟರೆ ಆಗ ಆತನಿಗೆ ಸರ್ಕಾರಕ್ಕೆ ಅಪೀಲ್ ಬರಲು ಅವಕಾಶವಿರಬೇಕು. ಆದರೆ ಈಗ ಆರೀತಿ ಮಾಡಿಲ್ಲ. ಇಲ್ಲಿ ಹೇಳಿರುವುದು ಒಬ್ಬರಿಗೊಬ್ಬರಿಗೆ ಕಚ್ಚಾಟ ತಂದಿಡತಕ್ಕ ರೀತಿಯಲ್ಲಿದೆ. 48ನೆಯ ಕಲಮಿನಲ್ಲಿ ಪೂಜಾರಿಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅವಕಾಶ ಇದೆ. ಇದರಲ್ಲಿ ಹೇಳಿರುವಂತೆ ಅಸಿಸ್ಟೆಂಟ್ ಕಮಿಷನರಾದವರು ತಮ್ಮ ಮನಸ್ಸಿಗೆ ಬಂದ ಹಾಗೆ ಯಾರನ್ನು ಬೇಕಾದರೂ ನೇಮಿಸಬಹುದು, ಇಲ್ಲವೇ ವಜಾ ಮಾಡಬಹುದು, ಈ ರೀತಿ ಇರುವುದು ಸರಿಯಾಗಿರುವುದಿಲ್ಲ. ಇದಕ್ಕೆ ಬದಲಾಗಿ ಬೋರ್ಡಿನವರಿಗೇ ಈ ಅಧಿಕಾರವನ್ನು ಕೊಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇನ್ನು ಕ್ಲಾಜ್ 50ರಲ್ಲಿ—

"Alienations or transfers of lands or other property granted to notified institutions" ವಿಚಾರವಿದೆ.

ವರ್ಗಾವಣೆಯ ವಿಚಾರದಲ್ಲಿ ಹೀಗೆ ಮಾಡಿದರೆ ಇದರಿಂದ ಸುಮ್ಮನೆ ಇಲ್ಲದ ವ್ಯವಹಾರಗಳಿಗೆ ಕಾರಣವಾಗುತ್ತದೆ. ಸ್ಥಿರ ಆಸ್ತಿಗಳು ಕದಲುವುದಕ್ಕೆ ಅವಕಾಶ ಕೊಡಬಾರದು. ಬೇಕಾದರೆ ಚರ ಆಸ್ತಿಗಳನ್ನು ವಿಲೇವಾರಿ ಮಾಡಬಹುದು. ಯಾವಾಗಲೂ ಸ್ಥಿರ ಆಸ್ತಿಗಳನ್ನು ಮಾರಲು ಅವಕಾಶ ಕೊಟ್ಟರೆ ಆ ಇನ್‌ಸ್ಟಿಟ್ಯೂಷನ್ನುಗಳು ಹಾಳಾಗಿ ಹೋಗುತ್ತವೆ. ಇದರಿಂದ ಇಲ್ಲದ ವ್ಯವಹಾರಗಳಿಗೆ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಇದರ ಬಗ್ಗೆ ಸ್ವಲ್ಪ ಸರಕಾರ ಯೋಚನೆ ಮಾಡಿ ಸೂಕ್ತವಾದ ಬದಲಾವಣೆಗಳನ್ನು ಇದರಲ್ಲಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕಲಮು 55ರಲ್ಲಿ—

"Management of math when Manager or trustee dies or is under disability" ವಿಚಾರವಿದೆ.

ಇದು ಸೂಪರ್‌ಫ್ಲ್ಯೂಯಸ್ ಆಗಿರುವಂತೆ ಕಾಣುತ್ತದೆ. ಇದನ್ನು ಸರಿಪಡಿಸಬೇಕು. ಹಾಗೆ 56ನೆಯ ಕಲಮನ್ನೂ ಸ್ವಲ್ಪ ಬದಲಾವಣೆ ಮಾಡುವ ಅವಶ್ಯಕತೆ ಇದೆ.

ಕಲಮು 58ರಲ್ಲಿ ಹೀಗಿದೆ :—

"*Power to spend Padakanika.*—The manager of a math shall keep regular accounts of receipt of padakanika that is to say any gift or properties made to him as head of the math. He shall be entitled to spend the said padakanika in accordance with the customs and usage of the math"

ಇದು ಸರಿಯೇ ಎಂದು ನಾನು ಕೇಳಬೇಕಾಗಿದೆ.

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಪೆನಾಲ್ಟಿ ಕ್ಲಾಸುಗಳು ಎಂದರೆ 84, 85, 86 ಇವುಗಳಲ್ಲಿ ಸಾಮಾನ್ಯವಾಗಿ 500 ದಿಂದ 1,000 ರೂಪಾಯಿಗಳವರೆಗೆ ಜುಲ್ಮಾನೆ ಎಂದು ಹಾಕಿದ್ದೀರಿ. ಇದರ ಜೊತೆಗೆ ಸಾಕಷ್ಟು ಶಿಕ್ಷೆಯನ್ನೂ ವಿಧಿಸಬೇಕೆಂದು ಸಲಹೆ ಮಾಡುತ್ತೇನೆ. ದುಡ್ಡನ್ನು ಹೇಗಾದರೂ ಕೊಡಬಹುದು ಎಂದು ಕೊಡುತ್ತಾರೆ, ತಪ್ಪು ಮಾಡಿದವರಿಗೆ ಸರಿಯಾದ ಶಿಕ್ಷೆಯನ್ನು ಬಲವಂತವಾಗಿ ವಿಧಿಸಲೇ ಬೇಕು. ಇದ್ದರಂತೆ ಇಲ್ಲಿ ಇದನ್ನು ಸರಿ ಮಾಡಬೇಕು.

ಕ್ಲಾಸು 56 (g)ನಲ್ಲಿ ಹೀಗಿದೆ :—

> "The State Government has reason to believe that the manager of the math has ceased to profess the religion or the religious tenents of the math......"

ಈ ರೀತಿ ಇದ್ದರೆ ಇದರಿಂದ ಅವರಿಗೆ ಒಂದು ತರಹದ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ, ಅಲ್ಲದೆ ದೇವರ ವಿಷಯದಲ್ಲಿ ಎಲ್ಲರಲ್ಲಿಯೂ ಒಂದು ಒಳ್ಳೆಯ ಭಾವನೆ ಬರುವಂತೆ ಮಾಡಬೇಕು. ಭಿನ್ನ ಭಾವನೆಗಳಿಗೆ ಅವಕಾಶ ಕೊಡಬಾರದು. ಸಾಧ್ಯವಾದ ಮಟ್ಟಿಗೂ ಭಿನ್ನ ಭಾವನೆಗಳು ಬರುವುದಕ್ಕೆ ಅವಕಾಶವಾಗದಂತೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೂ ಮತದಲ್ಲಿನ ಸ್ವಾಮಿಗಳು ಕ್ರೈಸ್ತ ಮತಕ್ಕೆ ಸೇರಿದರೆ ನಾವೇನು ಮಾಡಬೇಕು ?

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ರಿಲಿಜನ್ ವಿಚಾರವಾಗಿ ತಿಳಿದುಕೊಳ್ಳುವುದು ಸ್ವಲ್ಪ ಕಷ್ಟವಾದರೂ ಮತೀಯ ಭಾವನೆಗಳಲ್ಲಿ ಭಿನ್ನತೆ ಬರಲು ಅವಕಾಶ ಕೊಡದಂತೆ ಸಾಧ್ಯವಾದ ಮಟ್ಟಿಗೂ ಈ ಬಿಲ್ಲಿನಲ್ಲಿ ಅವಕಾಶಗಳನ್ನು ಮಾಡಬಹುದು. ಮಠಗಳವರೇ ಹೆಚ್ಚು ಹೆಚ್ಚಾಗಿ ವಿದ್ಯಾ ಸಂಸ್ಥೆಗಳನ್ನು ತೆರೆಯಬಹುದು, ಸರಕಾರದವರೇ ನೇರವಾಗಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜನ್ನು ತೆರೆಯುವುದಕ್ಕೆ ಬದಲಾಗಿ ಮಠಗಳವರೇ ವಿದ್ಯಾ ಕೇಂದ್ರಗಳನ್ನು ತೆರೆಯಲು ಅವಕಾಶ ಕೊಟ್ಟರೂ ಅದಷ್ಟೂ ಧಾರ್ಮಿಕ ವಿಚಾರಗಳಲ್ಲಿ ಉನ್ನತವಾದ ಭಾವನೆಗಳಿರುವುದನ್ನು ಮತ್ತು ವ್ಯತ್ಯಾಸಗಳನ್ನೂ ಅದಷ್ಟೂ ಕಡಿಮೆ ಮಾಡಬೇಕು. ದೇವರ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. ನನ್ನ ಅಭಿಪ್ರಾಯದಲ್ಲಿ ದೇವರು ಎಂದರೆ it is a supernatural force controlling nature. ದೇವರ ವಿಷಯಗಳಲ್ಲಿರುವ ವ್ಯತ್ಯಾಸಗಳನ್ನು ಅದಷ್ಟು ಕಡಿಮೆ ಮಾಡಬೇಕು. ಸೋಷಿಯಲಿಸ್ಟ್ ಪ್ಯಾಟರನ್ ಆಫ್ ಸೊಸೈಟಿ ಎಂದು ಸರಕಾರ ಮಾಡಬೇಕೆಂದು ಹೋಗುತ್ತಿರುವಾಗ ಅದಕ್ಕನುಗುಣವಾದಂತೇ ಈ ಬಿಲ್ಲನ್ನೂ ಸೂಕ್ತವಾಗಿ ಪರಿಶೀಲನೆ ಮಾಡಿ ಎಲ್ಲರಿಗೂ ಸಮಾನವಾದ ಅವಕಾಶವನ್ನು ಕಲ್ಪನೆ ಮಾಡಿ ಕೊಡಬೇಕು ಎಂದು ಸೂಚಿಸುತ್ತೇನೆ.

†SRI ANNA RAO GANAMUKHI (Afzalpur).—While welcoming the Bill, I should like to offer a few comments on the provisions of the Bill. In the Statement of Objects and Reasons, the objectives of this Bill have been stated. I think that the very foundations of our society are based on religion and if we rock that base, we will be losing our spiritual values.

Therefore, I think that there should be minimum interference with the religious institutions of our State. We know that Constitution has conferred upon us free exercise of religion, religious beliefs and religious, practices. It must be only in consonence with morality. Ours is a secular country in contrast to other countries like Burma where the Buddhist religion is recognised and Rome where the Roman Catholic Church is the recognised Church, where the majority of the population are professing that faith. But, here, in India we have become perfectly secular, at the same time we have not become irreligious.

Religious freedom has been conferred by our Constitution and article 26 says :

"Subject to public order, morality and health, every religious denomination or any section thereof shall have the right

(*a*) to establish and maintain institutions for religious and charitable purposes ;

(*b*) to manage its own affairs in matters of religion .

(*c*) to own and acquire movable and immovable property; and

(*d*) to administer such property in accordance with law."

Therefore, Sir, I think that there is a violation of this Constitution in some respects. So far as sub-clause (*d*) referred to above is concerned, I want to refer to the distinction made between religious and charitable institutions which are notified institutions and others which are non-notified. For these notified institutions there is no compulsion for registration because they are already on the list of the Government. There is one more distinction with regard to the institutions which are already under the management of the State Government and also those institutions which get some benefit from the State in the shape of monthly or annual grant that is made from public revenue. Supposing an institution gets about Rs. 100 as grant from the Government, is there any justification for the Government to manage or assume the management of such an institution ? I want to ask that question. I feel that the Government should have entrusted it to a public body, if any. If there is any Mahant or any other head, then it is quite reasonable that such management should be entrusted to him. It is the duty of the Government to impose some conditions and to lay down some regulations so that the whole activity connected with religion may be regulated by law. Instead of doing that, if the Government itself assumes the responsibility of managing these religious and charitable trusts, I do not think it would be proper for us because, being a secular State, the State has no religion. Even Schools and Colleges are not imparting religious education. If there are any religious institutions which are doing these things, they are giving free religious education gratis. Therefore, I should like to state here that the State Government should not become a Manager. Our Constitution clearly provides for in article 26 and the Mysore High Court and the Supreme Court both have upheld, the right to administer property in accordance with the law made by the State Government. It is the privilege of that particular religious institution. If these fundamental rights are not taken into consideration while preparing this Bill, I think, it is necessary for the Select Committee to go into these things and do the needful.

Clause 38 refers to the Controlling authority, but not the regulatory authority nor any authority prescribing some rules for the good conduct

(SRI ANNA RAO GANAMUKHI)

of those institutions or their efficient management. Instead of that if the Government themselves become Poojaries and administer every thing, I do not think what efficiency will be there in the public sector. The same efficiency will be found in the private sector also, *viz.*, these religious and charitable institutions. Therefore, I should like to say that only regulatory policies should be laid down by the Government and not seek powers to manage the whole property itself.

In clause 32 it is stated that Dharmada can be collected by these bodies. In sub-clause (3) it is stated as follows.—

> "The Assistant Commissioner shall have power to make such enquiry as he thinks fit, to verify the correctness of the accounts submitted and may pass orders for the disposal of the amount in the manner prescribed......"

In this sub-clause, it is said that the amount will vest in the person charging or collecting the same. I have no quarrel as far as the scrutiny of the accounts is concerned. But, so far as the disposal of those amounts for the purpose for which it is collected is concerned, here the Assistant Commissioner tress pas on the very power which a trustee has got under the Constitution and the law. The trustee collects the money and it vests with him. He is the proper person to spend the money on various objects which have been laid down by the Government and the law itself. But, if the Assistant Commissioner is empowered to dispose of this amount, it is not proper and it will be *ultra vires.*

And then "assumption of management". I perfectly agree with the provision. But as for the removal of the manager of the mutt, I think in Bombay Act there is a wholesome provision. First an enquiry should be held and the whole thing should be ascertained and then instead of taking over the management, is it not the duty of the Government to find a heir to the manager ? If he is disqualified permanently, let the heir take the management of the property.

6 P.M.

Sri M. V. KRISHNAPPA.—Till then ?

Sri ANNA RAO GANAMUKHI.—Till then, you can take it over.

Mr. SPEAKER.—It is a very nice suggestion for the Select Committee to consider.

Sri ANNA RAO GANAMUKHI.—Therefore, Sir, I think we should keep in view article 26 and see whether any of the provisions contained in this Bill contravene the Constitution.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಈ ಮಸೂದಾ ಕಾನೂನು ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ನಾನು ಹೆಚ್ಚಾಗಿ ಉತ್ತರ ಕೊಡುವ ಪ್ರಮೇಯವಿಲ್ಲ. ಆದ್ದರಿಂದ ನಾಳೆ 10 ನಿಮಿಷ ಈ ಬಗ್ಗೆ ಉತ್ತರ ಕೊಡುತ್ತೇನೆ.

HALF-AN-HOUR DISCUSSION ON QUESTION No. 284

Re : Incurring of loss by the Road Transport Corporation from their Bus Service in the old Mysore Area.

†ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ಮಾನ್ಯ ಸಭೆಗೆ 284ನೇ ಪ್ರಶ್ನೆಗೆ ಉತ್ತರ ಕೊಡುತ್ತಾ ಸರಕಾರದವರು ಅಂಕಿಅಂಶಗಳನ್ನು ಒದಗಿಸಿದ್ದಾರೆಯೋ ಆ ವಿಷಯದಲ್ಲಿ ಇನ್ನೂ ಹೆಚ್ಚಿನ ಅಂಕಿಅಂಶಗಳನ್ನು ಪಡೆದುಕೊಳ್ಳುವ ದೃಷ್ಟಿಯಿಂದ ನಾನು ಈ ಅರ್ಧ ತಾಸು ಚರ್ಚೆಯನ್ನು ಮಾಡಬೇಕು ಎಂದು ಮಾನ್ಯ ಅಧ್ಯಕ್ಷರನ್ನು ಕೇಳಿಕೊಂಡೆ, ಅದಕ್ಕೆ ಅವರು ಒಪ್ಪಿಗೆ ಕೊಟ್ಟಿದ್ದಾರೆ ಮತ್ತು ಮಾನ್ಯ ಸಚಿವರು ಈ ಚರ್ಚೆಗೆ ಉತ್ತರ ಕೊಡುವುದಕ್ಕೆ ಸಿದ್ಧರಿದ್ದಾರೆ ಎಂಬುದನ್ನು ನೋಡಿ ನನಗೆ ಸಂತೋಷವಾಯಿತು.

ಒಂದು ಮಾತು ನನಗೆ ಈ ಚರ್ಚೆಯಲ್ಲಿ ಹೆಚ್ಚು ವ್ಯಥೆ ಉಂಟುಮಾಡಿತು ಅದು ಏನೆಂದರೆ; ರಾಷ್ಟ್ರೀಕರಣ ನೀವು ಮುಂದುವರಿಸುತ್ತೀರ ಎಂದು ಕೇಳಿದ್ದಕ್ಕೆ ಚೇಸಿಗಳು ಸಿಕ್ಕುತ್ತಿಲ್ಲ ಎಂದು ಹೇಳಿದ್ದು ಕೇಳಿ ಹಾಗೇ ಕುಸಿದು ಹೂತುಹೋಗಿಬಿಟ್ಟೆ. ರಾಷ್ಟ್ರೀಕರಣ ಮುಂದುವರಿಸುತ್ತೀರ ಎಂದು ಕೇಳಿದ್ದಕ್ಕೆ ಅವರು ಚೇಸಿಗಳು ಇಲ್ಲ ಎಂದು ಸರಕಾರದವರು ಹೇಳಿದರೆ ಅದು ವಿಚಾರ ಮಾಡಬೇಕಾದ ವಿಷಯವೇ—ಸರಕಾರವೂ ವಿಚಾರ ಮಾಡಬೇಕು, ಬೇರೆ ಜನರೂ ವಿಚಾರ ಮಾಡಬೇಕಾಗುತ್ತದೆ. ಅದನ್ನು ಅವರ ಬಾಯಿನಿಂದ ತಿಳಿದುಕೊಳ್ಳುವುದಕ್ಕೆ ನಾನು ಈ ಸಂದರ್ಭದಲ್ಲಿ ಚರ್ಚೆಗೆ ಹೆಚ್ಚು ಮಹತ್ವವನ್ನು ಕೊಡುತ್ತೇನೆ.

ಇನ್ನು ಈ ರಾಷ್ಟ್ರೀಕೃತ ಸಾರಿಗೆ ಸೇವೆ ಅಥವಾ ವ್ಯವಸ್ಥೆ ಎಂದು ಏನು ಕರೆಯಬಹುದು, ಇದರಲ್ಲಿ ಬೆಂಗಳೂರು ಸಾರಿಗೆ ವ್ಯವಸ್ಥೆ ರಾಷ್ಟ್ರೀಕರಣ ಮಾಡುವಾಗ ನಾನು ಬಹಳ ಆಸೆಯನ್ನು ಇಟ್ಟುಕೊಂಡಿದ್ದೆ. ಆದರೆ ಅದು ನಿರಾಸೆಗೆ ಕಾರಣವಾಯಿತು. ಸರಕಾರದವರು ರಾಷ್ಟ್ರೀಕರಣದ ನಂತರದ ಪ್ರಗತಿಯನ್ನು ಅಂಕಿಅಂಶಗಳ ಆಧಾರದಮೇಲೆ ಕೊಟ್ಟು, ಅದರ ಆಧಾರದಮೇಲೆ ನಾವು ಪ್ರಗತಿಯ ದಿಕ್ಕಿನಲ್ಲಿ ಹೋಗಿದ್ದೇವೆ ಎಂದು ಹೇಳಿ ಸಮರ್ಥಿಸುತ್ತಾರೆ. ಆದರೆ ವಾಸ್ತವಿಕವಾಗಿ ನಾವು ಈ ವ್ಯವಸ್ಥೆ ತೃಪ್ತಿಕರವಾಗಿ ನಡೆಯುತ್ತಾ ಇದೆಯೇ ಅನ್ನುವುದನ್ನು ನೋಡಿದರೆ, ಈ ಸಾರಿಗೆ ವ್ಯವಸ್ಥೆಯಲ್ಲಿ ಪ್ರತಿದಿನ ಒಂದು ಕಡೆಯಿಂದ ಇನ್ನೊಂದುಕಡೆಗೆ ಓಡಾಡಲೇಬೇಕಾಗಿರುವಂಥ ಸುಮಾರು 2 ಲಕ್ಷ ಜನರ ಅನುಭವವನ್ನು ನೋಡಿದ್ದೆ ಆದರೆ, ಈ ಸಾರಿಗೆ ಸಮರ್ಪಕವಾಗಿಲ್ಲದಿರುವುದು ಮಾತ್ರವಲ್ಲ, ತುಂಬ ಅವ್ಯವಸ್ಥೆಯಿಂದ ಕೂಡಿದೆ, ಈ ಬೆಂಗಳೂರು ಸಾರಿಗೆ ವ್ಯವಸ್ಥೆಯನ್ನು ನಂಬಿಕೊಂಡಿರುವ ಪ್ರಯಾಣಿಕರಿಗೆ ಬಹಳ ಸಲ ಕಾಲಕ್ಕೆ ಸರಿಯಾಗಿ ಅವರು ತಮ್ಮ ಉದ್ದೇಶಿತ ಸ್ಥಳಗಳಿಗೆ ಹೋಗಿ ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಎರಡು ಲಕ್ಷ ಜನರು ಕನಿಷ್ಠಪಕ್ಷ 2 ಲಕ್ಷ ಕೆಲಸಮಾಡುವ ಗಂಟೆಗಳಾದರೂ ಬಸ್‌ಸ್ಟಾಪುಗಳಲ್ಲಿ ಪ್ರತಿದಿನ ನಷ್ಟವಾಗುತ್ತದೆ; ಅನ್ನುವುದನ್ನು ವಿಷಾದದಿಂದ ನೋಡಬೇಕಾಗಿದೆ. ಬರೀ ಹಣದ ನಷ್ಟವಲ್ಲ. 2 ಲಕ್ಷ ಪ್ರಯಾಣಿಕರು ಏನು ಬಸ್ ನಿಲ್ದಾಣಗಳಲ್ಲಿ ಬಸ್ಸಿಗಾಗಿ ಗಂಟೆಗಟ್ಲೆ ಕಾಯುತ್ತಿದ್ದಾರೆ, ನಾನು ಅದನ್ನು ಬಹಳ ಜಿಪುಣ ಲೆಕ್ಕಹಾಕಿ ಕನಿಷ್ಠ ಹಿಡಿದಿದ್ದೇನೆ. ಒಬ್ಬ ಮನುಷ್ಯ ಒಂದು ಕಡೆಯಿಂದ ಹೋಗಿಬರುವ ಟ್ರಿಪ್ಪಿನಲ್ಲಿ ಕಾಯುವುದರಿಂದ 2 ಲಕ್ಷ ಮ್ಯಾನ್ ಅವರ್ (ಅದರಲ್ಲಿಯೂ ಕಡಮೆ ಮಾಡಿದ್ದೇನೆ) ಕನಿಷ್ಠ ನಷ್ಟವಾಗುತ್ತದೆ. ಇದು ಹಣಕ್ಕಿಂತ ಬಹಳ ದೊಡ್ಡ ನಷ್ಟ. ಆಮೇಲೆ ಕೆಂಪೇಗೌಡ ರಸ್ತೆಯಲ್ಲಿ 6 ಗಂಟೆಯ ನಂತರ ಕಾಯುವಾಗ ತಲೆಮೇಲೆ ಕಾಗೆಗಳು ಏನು ಪಾಯಿಖಾನೆ ಮಾಡುತ್ತವೆ ಆ ತೊಂದರೆಗಳನ್ನೆಲ್ಲಾ ಬಿಟ್ಟಿದ್ದೇನೆ. ಆ ಕಷ್ಟವನ್ನೆಲ್ಲಾ ಕೂಡಿಸಿಕೊಂಡು ಬಿ.ಟಿ.ಎಸ್.ಮೇಲೆ ದಾವ ಹಾಕುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲಾ ನಮ್ಮ ಜನ ಒರಿಸಿಕೊಳ್ಳುತ್ತಾರೆ; ಅದು ಅವರಿಗೆ ಹೊಳೆಯುವುದಿಲ್ಲ. ಅದೆಲ್ಲಾ ಮಾಡಿದರೆ ನಿಮಗೆ ಕೆಲಸ ಮಾಡುವುದು ತೀರ ಕಷ್ಟವಾಗುತ್ತದೆ. ಆದ್ದರಿಂದ ಸಣ್ಣಪುಟ್ಟ ತೊಂದರೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನೂ ಏನೇನೋ ಆಗುತ್ತಿರುತ್ತವೆ; ನಿಲ್ದಾಣದಲ್ಲಿ ಜೇಬುಗಳ್ಳರಿಂದ ಆಗತಕ್ಕಂಥ ನಷ್ಟ, ಊಟಕ್ಕೆ ಬರುತ್ತೇನೆಂದು ಹೇಳಿ ಕಾಲಕ್ಕೆ ಸರಿಯಾಗಿ ಹೋಗುವುದಕ್ಕೆ ಆಗದೆ ಇರುವುದು, ಇಂಥವುಗಳನ್ನೆಲ್ಲಾ ದೊಡ್ಡದುಮಾಡಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ತಾವು ಅಂಕಿಅಂಶಗಳನ್ನು ಕೊಟ್ಟು ರಾಷ್ಟ್ರೀಕರಣವಾಗುವಾಗ ಎಷ್ಟು ಬಸ್ಸುಗಳಿದ್ದವು, ಅವು ಎಷ್ಟು ಮೈಲಿ ಓಡಾಡುತ್ತಿದ್ದವು, ಸ್ಟಾಫಿಗೆ ಎಷ್ಟು ಖರ್ಚು ಆಯಿತು, ಮೈಲಿಗೆ ಎಷ್ಟು ಖರ್ಚು ಮಾಡುತ್ತಾ ಇದ್ದೀರಿ, ಆವಾಗ ಏನೇನು ವ್ಯವಸ್ಥೆ ಇತ್ತು, ಈಗ ಏನು ಆಗಿದೆ ಎಂದು 1962-63ರ ಎಲ್ಲ ಅಂಕಿಅಂಶಗಳನ್ನೂ ಹೇಳುತ್ತೀರ ? ಅದು ಹೆಚ್ಚಿದೆ. ಆಗ 1956-57ರಲ್ಲಿ 148 ಬಸ್ಸುಗಳಿದ್ದವು, 110 ಬಸ್ಸುಗಳು ಓಡಾಡುತ್ತಿದ್ದವು, 59 ರಸ್ತೆ ದಾರಿಗಳು ಇದ್ದವು, ಆದರಲ್ಲಿ 28 ರೂಟ್ ಮೈಲೇಜ್ ಇತ್ತು. ಹೀಗೆಲ್ಲಾ ಇತ್ತು, ಅದನ್ನು ತಾವೇ ಹೇಳುವುದು ಕ್ಷೇಮ. ಅಂಕಿಅಂಶಗಳು ಬಹಳ ಸಲ

(ಶ್ರೀ ಎಸ್. ಗೋಪಾಲಗೌಡ)

ಧೋಕಾ ಕೊಡುವಂಥವು, ಏಕೆಂದರೆ ಅಂಕಿಅಂಶಗಳನ್ನು ಕೊಡುವಾಗ ನಾವು ಮೊದಲೇ ಹೇಳಿದಂತೆ ಈಗ ಕಾಗೆ ಹೇಳುವುದು ಅಂಥಾದ್ದನ್ನೆಲ್ಲ ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಅದೆಲ್ಲ ಸಾಮಾನ್ಯವಾಗಿ ಏನು ದೊಡ್ಡದು ಎಂದು ಲೆಕ್ಕ ಮಾಡುವ ಕ್ರಮ ಬಂದಿದೆ. ಟಿ.ವಿ.ಎಸ್. ಸಂಸ್ಥೆಗೆ ಹೋಲಿಸಿ ನಾವು ಭುಜ ತಟ್ಟಿಕೊಳ್ಳಬಹುದು ಎನ್ನುವ ಅಭಿಪ್ರಾಯವೂ ಇದೆ. ಯಾರು ಯಾರೆ ಯಾರನ್ನು ಹೋಲಿಸಿ ಹೇಳಿಕೊಳ್ಳಬಹುದು ಎನ್ನುವುದು ಒಂದು ಕ್ರಮ. ಯಾವುದಾದರೂ ಸಾಪೇಕ್ಷವೇ. ರಿಲೇಟಿವ್ ಆಗಿ ತೆಗೆದುಕೊಳ್ಳಬೇಕೇ ಹೊರತು absolute ಆಗಿ ತೆಗೆದುಕೊಂಡು ಅರ್ಥಮಾಡಿಕೊಳ್ಳುವುದಕ್ಕಾಗುವುದಿಲ್ಲ. ಒಬ್ಬರು ಯಾರಿಗಾದರೂ ಹೋಲಿಸಿ ಹೇಳುವಂಥ ಮಾತನ್ನು ಒಪ್ಪಿಕೊಳ್ಳುತ್ತೇವೆ. ಅದೇ ಮಾತು ರಾಷ್ಟ್ರೀಕರಣಕ್ಕೂ ಆಗುತ್ತದೆ. 1956-57ರಲ್ಲಿ ಕರ್ಣಾಟಕವಾಗುವುದಕ್ಕೆ ಮುಂಚೆ ಹಳೆಯ ಮೈಸೂರು ಇದ್ದಾಗ, ಬೆಂಗಳೂರು ಆ ಸ್ಥಿತಿಯಲ್ಲಿದ್ದಾಗ ಏನು ಸಾರಿಗೆ ವ್ಯವಸ್ಥೆ ಖಾಸಗಿ ಜನರ ಕೈಯಲ್ಲಿತ್ತು ಅದನ್ನು ಸರ್ಕಾರದವರು ತೆಗೆದುಕೊಂಡು ರಾಷ್ಟ್ರೀಕರಣ ಮಾಡಿ ಅದರಲ್ಲಿ ಏನೇನು ಅನುಕೂಲಗಳನ್ನು ಕಲ್ಪಿಸಿದ್ದೀರೆಂಬುದನ್ನು, ಬಸವನಗುಡಿಯಿಂದ ಪ್ರತಿದಿವಸ ಮೆಜಿಸ್ಟಿಕ್‌ಗೆ ಬಂದು ಅಲ್ಲಿಂದ ಮಲ್ಲೇಶ್ವರಕ್ಕೆ ಹೋಗಿ ಪುನಃ ಮಲ್ಲೇಶ್ವರದಿಂದ ವಾಪಸು ಬಸವನಗುಡಿಗೆ ಹೋಗುವ ಮನುಷ್ಯನನ್ನು ಕೇಳಿದರೆ ಗೊತ್ತಾಗುತ್ತದೆ. ತಾವು ಹೇಳಬಹುದು ಬೇರೆ ಮಾರ್ಗಗಳನ್ನು ಪ್ರಾರಂಭಿಸಿದ್ದೇವೆ ಎಂದು. ಈ ವಿಚಾರಕ್ಕೆ ಒಬ್ಬ ಮನುಷ್ಯನನ್ನೇ ತೆಗೆದುಕೊಳ್ಳಬೇಕು. ಬಿ. ಟಿ. ಎಸ್. ಪ್ರಾರಂಭವಾದ ಲಾಗಾಯ್ತು ಓಡಾಡಿರುವವರನ್ನು, ವಯಸ್ಸಾದವರನ್ನು ಪಟ್ಟಿಮಾಡಿ ಅವರನ್ನು ಕೇಳಬೇಕಾಗುತ್ತದೆ. ಮೊನ್ನೆ ಸಚಿವರು ಸ್ವತಃ ಈ ವ್ಯವಸ್ಥೆಯನ್ನು ನೋಡಬೇಕು, ಅದು ಹೇಗೆ ಇದೆ ಎನ್ನುವುದನ್ನು ತಿಳಿದುಕೊಳ್ಳಬೇಕು ಎಂದು ಬಿ.ಟಿ.ಎಸ್. ಬಸ್ಸುಗಳಲ್ಲಿ ಓಡಾಡಿದರು ಎಂದು ಕೇಳಿದೆ. ಅದು ಸಂತೋಷದ ವಿಷಯವೇ; ಓಡಾಡಬೇಕಾದ್ದೇ. ಗುರುತು ಮರೆಸಿಕೊಂಡು ಓಡಾಡಿದ್ದು ಒಳ್ಳೆಯದು. ಅವರಿಗೆ ಏನು ಅನುಭವ ಬಂತು ಎನ್ನುವುದು ನನಗೆ ಗೊತ್ತಾಗಿಲ್ಲ. ನನ್ನ ದೃಷ್ಟಿ ಇರುವುದು ಎಲ್ಲಿ ಎಂದರೆ ಅವರು ಟಿಕೆಟ್ ತೆಗೆದುಕೊಂಡು ಹೋಗಿದ್ದರೋ, ಹಾಗೆಯೇ ಹೋಗಿದ್ದರೋ ಎನ್ನುವುದರಲ್ಲಿ. ಏಕೆಂದರೆ ಟಿಕೆಟ್ ಕೊಡುವ ಸಂಬಂಧವಲ್ಲಿ ಇನ್ನೂ ಬಹಳ ಸೋರಿಹೋಗುವ ವ್ಯವಸ್ಥೆ ಇದೆ, ಎಲ್ಲೆಲ್ಲಿ ಎಷ್ಟು ಹೊತ್ತು ನಿಲ್ಲುತ್ತದೆ, ಹೇಗೆ ನಡೆಯುತ್ತದೆ ಎನ್ನುವುದನ್ನು ಸಚಿವರು ಕಂಡಿರಬಹುದು. ನಾನೂ ಬಸ್ಸಿನಲ್ಲಿ ಓಡಾಡಿದ್ದೇನೆ, ಓಡಾಡಿದ್ದಕ್ಕೆ ಅನುಭವವಿದೆ. ಆದುದರಿಂದ ಆ ರೀತಿ ಹಿಂದಿನಿಂದ ಪ್ರಯಾಣ ಮಾಡಿರುವ ಒಬ್ಬ ಮನುಷ್ಯ ಈ ಸಭೆಗೆ ಬರುವುದಕ್ಕೆ ಅಧ್ಯಕ್ಷರು ಅವಕಾಶವನ್ನು ಕಲ್ಪಿಸಿಕೊಟ್ಟರೆ ಬಸವನಗುಡಿಯಿಂದ ಮಲ್ಲೇಶ್ವರಕ್ಕೆ ಹೋಗಿ ಬರಲು ಒಬ್ಬ ಪ್ರಯಾಣಿಕನಿಗೆ ಏನೇನು ಅನುಕೂಲಗಳು; ತೊಂದರೆಗಳಿವೆ ಬಿ.ಟಿ.ಎಸ್. ಹುಟ್ಟಿದ ಲಾಗಾಯಿತು ಎಂದು ಅವನನ್ನು ಕೇಳಿದರೆ ಹೇಳುತ್ತಾನೆ ವ್ಯವಸ್ಥೆ ಎಷ್ಟು ಕುದುರಿದೆ, ಎಷ್ಟು ಚೆನ್ನಾಗಿ ಆಗುತ್ತಿದೆ ಎನ್ನುವುದನ್ನು. ಅವನ ಅನುಭವ ಹೆಚ್ಚು ಮಹತ್ವವಾದುದು; ನಂಬಿಕಾಸ್ಪದವಾದುದು ಮತ್ತು ಪ್ರಾಮಾಣಿಕವಾದುದು ಎಂದು ನಾನು ಹೇಳುತ್ತೇನೆ. ಅವನು ಪರವಾಯಿಲ್ಲ ಎಂದು ಹೇಳಿದರೆ, ಒಂದು ಸಮಾಧಾನದ ಉಸಿರನ್ನು ಎಳೆದರೆ ಒಳ್ಳೆಯದು. ಅವನ ಮಾತನ್ನು ನಂಬಬಹುದು ಎಂದು ನನಗನ್ನಿಸುತ್ತದೆ. ಹಾಗೆ ನಾವು ಕೇಳಿದ್ದರಲ್ಲಿ, ನಾವು ವಿಚಾರ ಮಾಡಿದ್ದರಲ್ಲಿ ನಮಗೆ ಅನ್ನಿಸುವುದು ಅವರ ಗೋಣಗು ಹೆಚ್ಚಿದೆ. ಅವನು ಹಿಂದೆ ಕೊಡುತ್ತಿದ್ದಂಥ ಒಂದು ಅಣೆಗೆ ಎಷ್ಟೋ ದೂರ ಪ್ರಯಾಣ ಮಾಡುತ್ತಿದ್ದನಲ್ಲ, 11 ನಯೇ ಪೈಸೆಗೆ ಹೋಗುತ್ತಿದ್ದನಲ್ಲ ಅದು ಈಗ ಎಷ್ಟು ಜಾಸ್ತಿಯಾಗಿದೆ ಎನ್ನುವುದನ್ನು ಕೂಡ ತಾವು ನೋಡಬೇಕು. ಹೆಚ್ಚಿಗೆ ಇನ್ನೂ ಕೆಲವು ಸೌಲಭ್ಯಗಳನ್ನು ಒದಗಿಸಿದ್ದೇವೆಂದು ಹೇಳಿಕೊಳ್ಳುತ್ತೀರಿ. ರಾತ್ರಿಯ ಕಾಲದಲ್ಲಿ ವಿಶೇಷವಾದ ಸಾರಿಗೆ ವ್ಯವಸ್ಥೆಯನ್ನು ಮಾಡಿದ್ದೇವೆ, ಶಾಲಾ ಮಕ್ಕಳಿಗೆ ವಿಶೇಷವಾದ ವ್ಯವಸ್ಥೆಯನ್ನು ಮಾಡಿದ್ದೇವೆ, ಆಫೀಸಿಗೆ ಹೋಗತಕ್ಕವರಿಗೆ Peak Hour Service ಎಂದು ಹೆಚ್ಚು ಒತ್ತಡವಿರುವ ಸಮಯದಲ್ಲಿ ವಿಶೇಷ ವ್ಯವಸ್ಥೆ ಮಾಡಿದ್ದೇವೆ; ಹೊಸದಾಗಿ ಈ ಎಕ್ಸ್‌ಪ್ರೆಸ್ ಬಸಸ್ ಎಂದು ಮಾಡಿದ್ದೇವೆ ಎಂದು ಹೇಳುತ್ತೀರಿ. ಒಂದು ಕಡೆ ಟಿಕೆಟ್ ಕೊಟ್ಟು ಹತ್ತಿಬಿಡುತ್ತಾನೆ, ಟಿಕೆಟ್ ಕೊಡಲಿಲ್ಲವೆನ್ನುವ ದೂರಿಲ್ಲ, ಅಲ್ಲಲ್ಲಿ ಟಿಕೆಟ್ ಕೊಡುವ ಟಿ.ಐ.ಪಿ.ಗಳ ತೊಂದರೆ ಇಲ್ಲ, ನೇರವಾಗಿ ಹೋಗುತ್ತದೆ ಎನ್ನುವುದನ್ನೆಲ್ಲಾ ಹೇಳುತ್ತೀರಿ. ಅವೆಲ್ಲ ಒಳ್ಳೆಯ ಕೆಲಸಗಳೇ. ಪ್ರಗತಿಯ ದಿಕ್ಕಿನಲ್ಲಿ ಹೆಚ್ಚು ಅನುಕೂಲವನ್ನು ಪ್ರಯಾಣಿಕರಿಗೆ ಕಲ್ಪಿಸುವ ದೃಷ್ಟಿಯಿಂದ ವ್ಯವಸ್ಥೆ ಮಾಡಿದ್ದೇವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೀರಿ. ತಾವೆಲ್ಲ ಮೂರ್ತಿಯವರ ಕಾರ್ಟೂನ್ ನೋಡಿರಬಹುದು. ಎಕ್ಸ್‌ಪ್ರೆಸ್ ಬಸ್ಸುಗಳು ಹೋಗುವ ಮಾರ್ಗದಲ್ಲಿ ಇಬ್ಬರು ಕಟ್ ಪ್ಯಾಸೆಂಜರ್ಸ್ ನಿಂತಿದ್ದರು. ಅವರನ್ನು ಯಾರೂ ಬಸ್ಸಿನಲ್ಲಿ ಹತ್ತಿಸಿಕೊಳ್ಳುವುದಿಲ್ಲ. ಅವರ ಗತಿ ಏನು ? ಎಕ್ಸ್‌ಪ್ರೆಸ್ ಬಸ್ಸುಗಳು ಹೋಗುತ್ತಿರುತ್ತವೆ. ಆ ರೀತಿಯ ಕಟ್ ಪ್ಯಾಸೆಂಜರ್ಸ್ ಕೆಲವು ಕಡೆ ಬರುತ್ತಾರೆ. ಏಕೆ

ಇದನ್ನು ಹೇಳುತ್ತಿದ್ದೇನೆಂದರೆ ವ್ಯವಸ್ಥೆಯ ಹಿಂದುಗಡೆ ಇರತಕ್ಕ rationale ಎಂದು ಏನು ಹೇಳಬಹುದು ಅದನ್ನು ನಿಯಂತ್ರಿಸತಕ್ಕ ಒಂದು ತಲೆಯಿರುತ್ತದಲ್ಲ, ಆ ತಲೆ ಬಹಳ ಸಲ ಇರುವುದಿಲ್ಲ ಅದರ ಹಿಂದುಗಡೆ. ಏಕೆಂದರೆ ಹತ್ತಾರು ಜನ ಸೇರಿ ಆಗಬಹುದು ಆ ತಲೆ. ಗವರ್ನರ್ ನಿಯಂತ್ರಿಸತಕ್ಕ ಮೂಲ ಎಲ್ಲಿದೆ ಎಂದು ನೋಡುವುದಾದರೆ ಅವನಿಗೆ ಬಹಳ ವಿಚಾರಗಳು ಗೊತ್ತಿರಬೇಕು. ಅವನಿಗೆ ದುರ್ಬೀನಿನ ಕಣ್ಣಿನ ದೃಷ್ಟಿ ಇರಬೇಕು, ಒಂದು ಬಸ್ಸು ಇಂಥ ನಿಮಿಷದಲ್ಲಿ ಇಂಥ ಕಡೆ ಇರತಕ್ಕದ್ದು. ಈ ಬಸ್ಸು ಇಂಥ ಕಡೆಗೆ ಬರಬೇಕು ಎನ್ನುವುದು ಅವನಿಗೆ ಗೊತ್ತಿರಬೇಕು, ಆ ಚಿತ್ರ ಅವನ ಕಣ್ಣು ಮುಂದೆ ಇರಬೇಕು. ಅವನು ಒಬ್ಬನೋ, ಹಲವು ಜನರೋ ಅದು ಬೇರೆ ಮಾತು. ಅದೇ ಇಲ್ಲ, ಕೆಲವು, ನಾಯಿಗಳು ಹೋದ ಹಾಗೆ ಒಂದರ ಹಿಂದೆ ಒಂದು ಹೋಗುತ್ತಿರುತ್ತವೆ, ಒಬ್ಬನಿಗಿಂತ ಮೊದಲು ಎನ್ನುವಂತೆ ಹೋಗುತ್ತಿರುತ್ತವೆ. ಹುಚ್ಚರು ಮಾತ್ರ ಆ ರೀತಿ ಮಾಡಬಲ್ಲರೇ ಹೊರತು ಅವನ್ನು ವ್ಯವಸ್ಥೆ ಎಂದು ಕರೆಯುವುದಕ್ಕೆ ಸಾಧ್ಯವಿಲ್ಲ. ಅವನಿಗೆ ಅವಕಾಶವಿಲ್ಲದೆ ತೊಂದರೆಯಾಗಿರಬಹುದು. ಕೆಲವು ಕಾರಣಗಳನ್ನೂ ಹಾಗು ಕೆಲವು ಸಂದರ್ಭಗಳನ್ನು ಬಿಟ್ಟರೂ ನಿತ್ಯವೂ ಈ ರೀತಿ ನಡೆಯುತ್ತ ಇರುತ್ತದೆ: ಹನ್ನೊಂದನೆ ನಂಬರು ಬಸ್ ಮಾರ್ಗದಲ್ಲಿ ನಾಲ್ಕಾರು ಬಸ್ಸುಗಳು ಒಂದರ ಹಿಂದೆ ಒಂದು ಯಾವುದೋ ದೊಡ್ಡ ರಸ್ತೆಯಲ್ಲಿ ಒಟ್ಟಿಗೆ ಹೋಗುವುದು, working hours ಎಂದರೆ, ಅಂಥದಕ್ಕೆ ನಾವು ವ್ಯವಸ್ಥೆ ಎಂದು ಹೇಳುವುದಕ್ಕಾಗುವುದಿಲ್ಲ. ಬಹಳ ಮೃದುವಾದ ರೀತಿಯಲ್ಲಿ ಅವ್ಯವಸ್ಥೆ ಎಂದು ಹೇಳಬಹುದು, ಬಿರುಸಾಗಿ ಹೇಳಬೇಕು ಎಂದರೆ ಹುಚ್ಚುತನದ ಓಡಾಟ ಎಂದು ಹೇಳಬಹುದು. ಹುಚ್ಚ ಎಲ್ಲೋ ಹೋಗುತ್ತಾನೆ ಎಂದು ಹೇಳುವ ಹಾಗೆ ಎಲ್ಲಿಗೆ ಇವು ಹೋಗುತ್ತವೆ ಎಂದು ಕೇಳಬೇಕಾಗುತ್ತದೆ. ಯಾರನ್ನು ಕೇಳಬೇಕು ? ಕೇಳಿದರೆ ಬಹಳ ಕಷ್ಟ, ಅದು ಖಾಸಗಿ ಬಸ್ಸು ಅಲ್ಲವೆಂದು ಹೇಳುತ್ತಾನೆ. ಇವುಗಳನ್ನು ತಾವು ಸರಿಪಡಿಸಿದರೆ ತಮಗೆ ಲಾಭ ಬರಬಹುದು. ಇಷ್ಟೊಂದು ಹಣವನ್ನು ಹಾಕಿ ಬಸ್ಸುಗಳನ್ನು ಓಡಿಸುತ್ತ ಇದ್ದು, ಪ್ರಯಾಣಿಕನು ಹೆಚ್ಚು ದರವನ್ನು ಕೊಟ್ಟೂ ಲಾಭ ಬರಲಿಲ್ಲವೆಂದರೆ ತಪ್ಪಾಗುತ್ತದೆ. ಎಷ್ಟು ಜನರಿಗೆ ಉದ್ಯೋಗ ದೊರೆಯುತ್ತದೆ, ಎಷ್ಟು ಜನರು ಓಡಾಟದ ಸೌಲಭ್ಯವನ್ನು ಪಡೆಯುತ್ತಾರೆ ಎಂಬುದನ್ನೆಲ್ಲ ಲಾಭ ಎಂದು ಹೇಳಬಹುದು. ಅದನ್ನು ಲಾಭವಲ್ಲ ಎಂದು ಹೇಳುವುದಿಲ್ಲ. ಜೊತೆಗೆ ಹಣಕಾಸಿನ ದೃಷ್ಟಿಯಿಂದಲೂ ಈ ವ್ಯವಸ್ಥೆ ತನ್ನನ್ನು ತಾನು ವಹಿಸಿಕೊಂಡು ತನ್ನನ್ನು ತಾನು ಬೆಳಸಿಕೊಂಡು ಹೋಗುವಷ್ಟನ್ನಾದರೂ ದುಡಿದುಕೊಳ್ಳಬೇಕು. ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಅದರಿಂದಲೇ ಹಣ ಬರಬೇಕು, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅದೇ ಸಂಸ್ಥೆಯಿಂದ ಹಣ ಬಂದರೆ ಒಳ್ಳೆಯದು. ತಾನು ಸರಿಯಾಗಿದ್ದು ಸಂಬಂಧಪಟ್ಟವರೆಲ್ಲರೂ ಸರಿಯಾಗಿದ್ದು ಯಾವ ಸಮಾಜಕ್ಕೆ ಸೇವೆ ಸಲ್ಲಿಸಬೇಕೋ ಅದಕ್ಕೆ ಅವರು ತೃಪ್ತಿಕರವಾಗಿ ಸೇವೆಯನ್ನು ಸಲ್ಲಿಸಬೇಕು ಎನ್ನುವುದೇ ರಾಷ್ಟ್ರೀಕರಣದ ಮುಖ್ಯವಾದ ಉದ್ದೇಶ.

ಆ ಎರಡು ಉದ್ದೇಶಗಳನ್ನು ತಾವು ಸಾಧಿಸಬೇಕಾಗಿದೆ. ಮುಂಬೈ ಕರ್ನಾಟಕದಲ್ಲಿ ಮತ್ತಿತರ ಕಡೆಗಳಲ್ಲಿ ರಸ್ತೆ ಸಾರಿಗೆಯನ್ನು ರಾಷ್ಟ್ರೀಕರಣ ಮಾಡಿದ್ದಾರೆ, ನಮ್ಮಲ್ಲಿ ಮಂಗಳೂರು ಮತ್ತು ಹಳೇ ಮೈಸೂರಿನ ಕೆಲವು ಭಾಗಗಳಲ್ಲಿ ರಾಷ್ಟ್ರೀಕರಣ ಮಾಡಿಲ್ಲ. ನಾನು ಒಂದು ಆಪಾದನೆಯನ್ನು ಸರ್ಕಾರದ ಮೇಲೆ ಮಾಡಬೇಕೆಂದು ಇದ್ದೇನೆ. ಈ ಭಾಗಗಳಲ್ಲಿ ಕೆಲವು ದೊಡ್ಡ ದೊಡ್ಡ ಮೋಟಾರ್ ಕಂಪೆನಿಗಳು ಅಸ್ತಿತ್ವದಲ್ಲಿವೆ ಅವು ಸಾಕಾದಷ್ಟು ಪ್ರಭಾವಶಾಲಿ ಜನರಿಂದ ಕೂಡಿದ್ದು ಆಗಿವೆ; ಮೈಸೂರು ಸರ್ಕಾರದ ಮೇಲೆ ಗಣನೀಯವಾದ ಪ್ರಮಾಣದಲ್ಲಿ ಅವು ಪ್ರಭಾವವನ್ನು ಬೀರುವ ಶಕ್ತಿಯನ್ನು ಪಡೆದಿದೆ. ಆ ಕಾರಣದಿಂದಲೇ ಈ ರಾಷ್ಟ್ರೀಕರಣ ಮಾಡತಕ್ಕ ಕೆಲಸ ಕುಂಠಿತವಾಗುತ್ತಾ ಮುಂದೆ ಮುಂದೆ ಹೋಗುತ್ತಾ ಇದೆ ಮತ್ತು ಆ ದಿಕ್ಕಿನಲ್ಲಿ ಮೈಸೂರು ಸರ್ಕಾರ ಹೋಗುವುದಕ್ಕೆ ಹೆದರುತ್ತಾ ಇದೆ ಅಥವಾ ಮುಲಾಜನ್ನು ಇಟ್ಟುಕೊಂಡಿದೆ ಎಂದು ಈ ಆಪಾದನೆಯನ್ನು ಮಾಡಲೇಬೇಕು, ಮಾಡುತ್ತಾ ಇದ್ದೇನೆ. ಜಾಸ್ತಿ ಸಿಕ್ಕದೇ ರಾಷ್ಟ್ರೀಕರಣ ಹೀಗೆ ವಿಳಂಬವಾಗುತ್ತಾ ಇದೆ ಎಂಬ ಮಾತು ಸುಳ್ಳು ಅಥವಾ ನಿಜವಲ್ಲ ಎಂದು ಈ ಸಂದರ್ಭದಲ್ಲಿ ಹೇಳದೇ ವಿಧಿ ಇಲ್ಲ: ಏಕೆಂದರೆ ಇದು ಬೇರೆ ಎಲ್ಲರಿಗೂ ಅನ್ವಯವಾಗುತ್ತದೆ ಎಂದಾದರೆ ಅವರೂ ಕೂಡ ನಿಲ್ಲಿಸುತ್ತಿರಲಿಲ್ಲವೇ ಎಂದು ಪ್ರಶ್ನೆ ಬರುತ್ತದೆ. ಆದ್ದರಿಂದ ಅದು ಅಷ್ಟು ಸಮಂಜಸವಾದ ಕಾರಣವಾಗುವುದಿಲ್ಲ ಅದು ಒಂದು ನೆಪ ಆದೀತು. ಆದ್ದರಿಂದ ಅದು ಇವತ್ತು ಸರ್ಕಾರದ ಪರವಾಗಿ ಮಾನ್ಯ ಸಚಿವರು ಬಹಳ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ರಾಷ್ಟ್ರೀಕರಣದ ಬಗ್ಗೆ ಹೇಳಿಕೆಯನ್ನು ಕೊಡಬೇಕು ಎಷ್ಟು ಕಾಲಾವಧಿ ಹಿಡಿಯಬಹುದು, ಈ ವ್ಯವಸ್ಥೆಯನ್ನು ಅವರು ಹೇಗೆ ನಡೆಸಿಕೊಂಡು ಹೋಗುವರಿದ್ದಾರೆ, ನಷ್ಟವನ್ನು ಹೇಗೆ ತುಂಬಿಕೊಡುವವರಿದ್ದಾರೆ ಮತ್ತು ಈ ವ್ಯವಸ್ಥೆಯನ್ನು ಹೋಗಲಾಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದಕ್ಕೆ ಅವರಿಂದ ಯಾವ ಸ್ಪಷ್ಟವಾದ ಉತ್ತರವೂ ಇವೊತ್ತು ನಮಗೆ ಸಿಕ್ಕುತ್ತಿಲ್ಲ. ಆಡಳಿತದ ಹಿತದೃಷ್ಟಿಯಿಂದ ಕಾರ್ಪೊರೇಷನ್ ಮಾಡಿದಾಗಲೂ ಇಲ್ಲಿ ಓಡಾಡುವ ಜನರು ಸಾರ್ವಜನಿಕರು, ಅವರ ಹಣವನ್ನು ಇದರಲ್ಲಿ ವಿನಿಯೋಗಿಸಿದ್ದೇವೆ, ಒಂದು ಕೈಗಾರಿಕೋದ್ಯಮ ಅತ್ಯ

(ಶ್ರೀ ಎಸ್. ಗೋಪಾಲಗೌಡ)

ಗತ್ಯವಾದ ಸೇವೆಗಳಿಗೆ ಸಂಬಂಧಪಟ್ಟದ್ದು; ಆದ್ದರಿಂದ ಇದರ ಮೇಲೆ ಸರ್ಕಾರದವರನ್ನು ಸಾರ್ವಜನಿಕರೆಲ್ಲರೂ ಕೇಳುವುದಕ್ಕೆ ಹಕ್ಕು ಬಾಧ್ಯತೆಗಳನ್ನು ಹೊಂದಿರುತ್ತಾರೆ. ಆ ವಿಷಯದಲ್ಲಿ ಮಾನ್ಯ ಸಭೆಗೆ ಉತ್ತರ ದೊರಕಬೇಕಾಗುತ್ತದೆ-ಅದು ಬಹಳ ಅಗತ್ಯ ಮತ್ತು ಮುಖ್ಯವಾಗಿದೆ. ಆದ್ದರಿಂದ ಅವರು ಉತ್ತರ ಕೊಡುವಾಗ ಈ ಅಂಕಿ ಅಂಶಗಳನ್ನು ತಿಳಿಸಬೇಕು. ನಮ್ಮ ಸ್ನೇಹಿತರಾದ ಮಾದಪ್ಪ ಗೌಡರು ಒಂದು ಮಾತನ್ನು ಹೇಳಿದರು, ಲಂಚಕೋರತನ ಮತ್ತು ಸಾಮಾನುಗಳನ್ನು ಕದ್ದು ಮಾರಾಟ ಮಾಡಿಕೊಳ್ಳುವುದು, ಟಿಕೆಟ್ಟುಗಳನ್ನು ಕೊಡದೆ ಇರುವುದು ಇಂಥ ವಿಷಯಗಳಲ್ಲಿ ಶುಚಿಯಾಗಿರಬೇಕು-ಎಂದು ಆಗ ಅದು ತಕ್ಷಣ ನನ್ನ ಗಮನ ಸೆಳೆಯಿತು. ಅವರ ಸುಖ ಸೌಲಭ್ಯ, ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳಬೇಕೆನ್ನುವುದಕ್ಕೆ ಈ ಕಾರ್ಪೊರೇಷನ್ ಇಲ್ಲ, ಅಲ್ಲಿ ನೌಕರರು ಅದಕ್ಕಾಗಿ ಇರಬಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲನೆಯ ಸಲ ಹೊಗಳಿದ್ದು ಅವರ ಮೇಲೆ ಕೆಟ್ಟ ಪರಿಣಾಮವಾಗಿದೆ ಎಂದು ಕಾಣುತ್ತದೆ, ಸಾಮಾನ್ಯವಾಗಿ ಈ ಕಡೆಯಿಂದಯಾರನ್ನೂ ಹೊಗಳಬಾರದು ಆದರೂ ಶ್ರೀಮಾನ್ ದೇವರಾಜ ಅರಸ್ ಅವರು ಬಹಳ ಉತ್ಸಾಹಶಾಲಿಗಳು ಅವರು ಈ ವ್ಯವಸ್ಥೆಯನ್ನು ಬಹಳ ಚೆನ್ನಾಗಿ ಸುಧಾರಣೆ ಮಾಡುತ್ತಾರೆ ಎಂದು ಹೇಳಿದ್ದು ಏನಿದೆ ಅದನ್ನು ಇವತ್ತು ಸ್ವಲ್ಪ ತಡೆಹಿಡಿದು ನಿಲ್ಲಿಸಬೇಕಾಗಿದೆ. ಈ ತರಹ ಹೊಗಳುವುದು ತಪ್ಪು ಎಂದು ತೋರುತ್ತದೆ ಆದ್ದರಿಂದ ಅವರು ಈ ವ್ಯವಸ್ಥೆಯನ್ನು ಸರಿಪಡಿಸಿದಾಗ ಬೇಕಾದರೆ ವಿಚಾರ ಮಾಡೋಣ, ಈಗ ತಪ್ಪಿದೆ ಎಂದು ಹೇಳುವುದೇ ಸರಿ ಎಂದು ಹೇಳಿ ತಿದ್ದುಪಡಿ ಮಾಡಿಕೊಂಡು ನಾನು ಈ ಚರ್ಚೆಯಲ್ಲಿ ಎತ್ತಿದ ಕೆಲವು ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಈಗಲಾದರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ, ವಸತಿ ಮತ್ತು ಸಾರಿಗೆ ಶಾಖೆಗಳ ಮಂತ್ರಿಗಳು).—ಸ್ವಾಮಿ ಅವರು ಹೇಳಿರತಕ್ಕ ಕೆಲವು ಮುಖ್ಯವಾದ ಮೂಲ ವಿಷಯಗಳಿಗೆ ಸಮಗ್ರವಾಗಿ ಹೇಳಬೇಕಾದರೆ 10—15 ನಿಮಿಷವಾದರೂ ಬೇಕಾಗುತ್ತದೆ. ರಾಷ್ಟ್ರೀಕರಣದ ಬಗ್ಗೆ ಬೇರೆ ಸಂದರ್ಭದಲ್ಲಿ ಅವರು ಮತ್ತೆ ಉತ್ತರವನ್ನು ಬಯಸಿದರೆ ಹೇಳೋಣ. ಈಗ ಮೈಸೂರು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಯಾವ ರೀತಿ ಕೆಲಸ ಕಾರ್ಯಗಳನ್ನು ಮಾಡುತ್ತಿದೆ ಎಂಬುದರ ಬಗ್ಗೆ ಎರಡು ನೋಟ್‌ಗಳನ್ನು ಕೊಟ್ಟಿದ್ದೇನೆ ಅದರಲ್ಲಿ ಸಾಕಾದಷ್ಟು ಅಂಕಿ ಅಂಶ ಮಾಹಿತಿಗಳು ಇವೆ. ಆದರೂ ಈಗ ರಾಷ್ಟ್ರೀಕರಣದ ಬಗ್ಗೆ ಹೇಳುವುದಾದರೆ ಹಿಂದೆ ನಾವು ಪ್ರೆಸ್ ಕಾನ್‌ಫರೆನ್ಸ್ ಕರೆದು ಇಂತಿಂತಹ ರೂಟ್ಸ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇವೆ. ಹೆದರಿಕೆಯಿಂದ ಅಥವಾ ಯಾರೋ ಕೆಲವು ಮಾಲೀಕರು ಅಥವಾ ಇತರರ ಪ್ರಭಾವಕ್ಕೆ ಒಳಗಾಗಿ ರಾಷ್ಟ್ರೀಕರಣ ನಿಲ್ಲಿಸಿದ್ದಾರೆ ಎಂದು ಅವರು ಏನು ಹೇಳಿದ್ದಾರೆ ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ನಾವು ಹೇಳುವುದನ್ನು ನಂಬಿದರೆ ಈ ರೀತಿ ಹೇಳುತ್ತಿರಲಿಲ್ಲ, ಆದರೆ ಅವರು ನಾವು ಏನು ಹೇಳಿದರೂ ನಂಬುವುದಕ್ಕೆ ತಯಾರಾಗಿಲ್ಲ ಆದ್ದರಿಂದ ಅವರು ಹೇಳಿದ್ದು ಸುಳ್ಳು ಎಂದು ಹೇಳಬಹುದು. ಅ ್ಟೇ ವಿನಾ ಬೇರೆ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ಒಂದು ಸಂಸ್ಥೆ ಹಾಲಿ ಇರುವುದನ್ನು ಏಕಾಏಕಿ ರಾಷ್ಟ್ರೀಕರಣ ಮಾಡಬೇಕೆಂದರೆ ನಾನಾ ಸಮಸ್ಯೆಗಳು ಬರುತ್ತವೆ. ಈಗಿರತಕ್ಕ ಪ್ರೈವೇಟ್ ಮಾಲೀಕರಹತ್ತಿರ ಇರತಕ್ಕ ಬಸ್ಸುಗಳನ್ನು ನೇರವಾಗಿ ಸರ್ಕಾರದವರು ಆರ್ಡರ್ ಮಾಡಿ ರೆಜಿಸ್ಟ್ರೇಷನ್ ಮಾಡಿ ಅವರಲ್ಲಿರತಕ್ಕ ಬಸ್ಸುಗಳು ವರ್ಕ್‌ಷಾಪು ಎಲ್ಲವೂ ನಮ್ಮದು ಆಗುತ್ತವೆ ಎಂದು ಹೇಳಬೇಕಾಗುತ್ತದೆ. ಆ ರೀತಿ ಏಕಾಏಕಿ ರಾಷ್ಟ್ರೀಕರಣ ಮಾಡಬಹುದಾಗಿತ್ತು, ಬಿ. ಟಿ. ಎಸ್. ಮಾಡಿದ ಹಾಗೆ, ಆದರೆ ಇದನ್ನು ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ರಾಷ್ಟ್ರೀಕರಣ ಎಂದರೆ ಅದಕ್ಕೆ ಸಾಕಾದಷ್ಟು ಸಾಮಾನುಗಳು ಚಾಸಿಗಳು ಸಿಕ್ಕಬೇಕು, ಬಸ್ಸುಗಳನ್ನು ತೆಗೆದುಕೊಳ್ಳಬೇಕು. ಹೊರಗಿನವರಿಗೆ ಸಿಕ್ಕುತ್ತದೆ ನಿಮಗೆ ಸಿಕ್ಕುವುದಿಲ್ಲವೇ ಎಂದು ಹೇಳಿದರು. ನಮಗೆ ಬರತಕ್ಕ ಚಾಸಿಗಳು ಮೂರು ಕಂಪೆನಿಗಳಿಂದ ಬರಬೇಕು. ಅಶೋಕ್ ಲಿಲೆಂಡ್ಸ್—ಟಾಟಾ ಪ್ರೀಮಿಯರ್ಸ್—ಮರ್ಸಿಡೀಸ್ ಬೆನ್ಜ್ಸ ಈ ಮೂರು ಕಂಪೆನಿಗಳ ಹೊರತು ಬೇರೆ ಕಡೆಗಳಿಂದ ತರಿಸುತ್ತಾ ಇಲ್ಲ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ತುರ್ತು ಪರಿಸ್ಥಿತಿ ಷುರುವಾದ ಮೇಲೆ ಹೋದ ವರ್ಷ 1962ರಲ್ಲಿ ಆರ್ಡರ್ ಮಾಡಿದಂಥ 70 ಚಾಸಿಗಳಲ್ಲಿ ಈಗ ಕೇವಲ ಹೋದ ಎರಡು ತಿಂಗಳಲ್ಲಿ 15 ಚಾಸಿಗಳು ಮಾತ್ರ ಬಂದಿವೆ. ಮಾನ್ಯ ಸದಸ್ಯರು ಹೇಳಿದ ಹಾಗೆ 10 ರೂಟುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಈಗಾಗಲೇ ತೀರ್ಮಾನ ಕೈಕೊಂಡು ಅದಕ್ಕನುಸಾರವಾಗಿ 280 ಚಾಸಿಗಳು ನಮಗೆ ಬೇಕಾಗಿವೆ—280 ಚಾಸಿಗಳಲ್ಲಿ ಅಷ್ಟೂ ನಮಗೆ ಬೇಕೆಂದರೆ ಈಗ ಆರ್ಡರ್ ಕೊಟ್ಟರೆ ಅವು ಬರಬೇಕಾದರೆ ಇನ್ನೂ ಒಂದು ವರ್ಷದ ಮೇಲೆ ಆಗುತ್ತದೆ. ಆದರೂ ಕೂಡ ಆ 10 ರೂಟ್ಸನ್ನು ನ್ಯಾಷನಲೈಸ್ ಮಾಡಬೇಕೆಂಬ ಕಾರ್ಯ ಮುಂದುವರಿಸಬೇಕಾದ್ದು ಅಗತ್ಯ ಎಂದು ಕಂಡು ಬಂದಿದೆ ಅದನ್ನು ಮಾಡುತ್ತಾ

ಇದ್ದೇವೆ ಆದಕ್ಕೆ ಅಡ್ಡಿ ಬಂದಿರುವುದು ಚಾಸಿಗಳ ಜೊತೆಗೆ ದುಡ್ಡಿನ ಅಭಾವ ಕೂಡ ಸ್ವಲ್ಪ ಹುಟ್ಟಿಗೆ ಇದೆ. 1963—64ಕ್ಕೆ ರಾಷ್ಟ್ರೀಕರಣಕ್ಕಾಗಿ 2 ಕೋಟಿ ರೂಪಾಯಿಗಳು ಬೇಕೆಂದು ಕೇಳಿದೆವು. ಅದನ್ನು ಮೈಸೂರು ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಕೊಡಬೇಕು, ಮೈಸೂರು ಸರ್ಕಾರದವರು ಮೂರನೇ ಎರಡು ಭಾಗ ಕೊಡುತ್ತಾರೆ; ಕೇಂದ್ರ ಸರ್ಕಾರದವರು ಮೂರನೆಯ ಒಂದು ಭಾಗ ಕೊಡಬೇಕಾಗಿದೆ. 2 ಕೋಟಿ ರೂಪಾಯಿನಲ್ಲಿ ಕೇವಲ 28 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ; ಇನ್ನು ಬಾಕಿ ದುಡ್ಡನ್ನು ಎಲ್ಲಿಂದ ಒದಗಿಸಬೇಕೆಂದಾಗ ಡಿಪ್ರೀಸಿಯೇಷ್‌ ಫಂಡ್‌ನಿಂದ ಒಂದೂವರೆ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಆ 10 ರೂಟುಗಳನ್ನೂ ಬೇಗನೆ ರಾಷ್ಟ್ರೀಕರಣ ಮಾಡಬೇಕೆಂದು ಅಂದುಕೊಂಡಿದ್ದೇವೆ.

According to the rules of accounting these vehicles should not be used because they are meant purely to replace the vehicles, not for expansion. ಹಾಗೂ ಕೂಡ ಆದನ್ನು ಮಾಡಬೇಕೆಂದು ಏರ್ಪಾಡು ಮಾಡಿಕೊಂಡಿದ್ದೇವೆ. ಹೀಗೆ ಮುಖ್ಯವಾಗಿ ಹಣದ ಅಭಾವ ಇದೆ ಮತ್ತು ಚಾಸಿ ಇಲ್ಲದೇ ಇರುವುದು ಮತ್ತು ಇದೇ ಸಂದರ್ಭದಲ್ಲಿ ತುರ್ತು ಪರಿಸ್ಥಿತಿ ಬಂದಿರುವುದು ಮತ್ತು ಸ್ಪೇರ್‌ ಪಾರ್ಟ್ಸ್‌ ಸಿಕ್ಕದೇ ಇರುವುದು ನಿಧಾನವಾಗುವುದಕ್ಕೆ ಕಾರಣವಾಗಿದೆ. ಈಗ 2100 ಚಿಲ್ಲರೆ ಬಸ್ಸುಗಳು ನಮ್ಮ ಸಂಸ್ಥಾನದಲ್ಲಿವೆ ಅದರಲ್ಲಿ 400 ಚಿಲ್ಲರೆ ಬಸ್ಸುಗಳು ಸ್ಪೇರ್‌ ಪಾರ್ಟ್ಸ್‌ ರಿಪೇರಿ ಮಾಡುವುದಕ್ಕಾಗದೇ ನಿಂತು ಹೋಗಿವೆ. ಅವನ್ನು ವ್ಯವಸ್ಥೆ ಮಾಡುವುದು ಒಂದು ದೊಡ್ಡ ಕಷ್ಟವಾಗಿದೆ. ಈ ಮುಖ್ಯವಾದ ಕಾರಣಗಳಿಂದ ಮಾತ್ರ ರಾಷ್ಟ್ರೀಕರಣ ಮಾಡುವುದಕ್ಕೆ ಸಾಧ್ಯವಾಗಿಲ್ಲ ಅಷ್ಟೇ ಹೊರತು ಯಾರ ಪ್ರಭಾವಕ್ಕಾಗಲಿ ಅಥವಾ ಯಾರ ಒಂದು ದಾಕ್ಷಿಣ್ಯಕ್ಕಾಗಲಿ ಸರ್ಕಾರ ರಾಷ್ಟ್ರೀಕರಣ ಮಾಡುವುದನ್ನು ನಿಲ್ಲಿಸಿಲ್ಲ ಎಂಬುದನ್ನು ನಾನು ಮಾನ್ಯ ಸಭೆಯಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

Mr. SPEAKER,—The House will now rise and re-assemble tomorrow at 12-30 P.M.

The House adjourned at Thirty Minutes past Six of the Clock to meet again at Thirty Minutes past Twelve of the Clock on Thursday, the 12th September 1963.

WD 1085—GPB—900—23-11-63

MYSORE LEGISLATIVE ASSEMBLY

FIFTIETH DAY

Thursday, 12th September 1963.

The House met in the Assembly Hall, Vidhana Soudha, Bangalore at Thirty Minutes Past Twelve of the Clock.

MR. SPEAKER (SRI B. VAIKUNTA BALIGA, B.A., B.L.), in the Chair.

MR. SPEAKER.—Sri Munichinnappa has authorised Sri Devaiya to put Question No. 514. But the Hon'ble Minister is not present in the House. I know he is not well. I will hold over the question.

STARRED QUESTIONS.

(to which oral answers were given)

Value of Medicines supplied to each of the Rural and Taluk Dispensaries in Chitradurga District during 1962-63.

* *Q.*—605. SRI V. MASIAPPA (Hiriyur).—

Will the Government be pleased to state :—

(*a*) the value of all the medicines supplied to each of the Rural and Taluk Dispensaries in Chitradurga District during the year 1962-63 ;

(*b*) whether it has come to the notice of the Government that there are no drugs, even those required every day, in most of the Rural and Taluk Dispensaries in Chitradurga District ;

(*c*) if so, what action is taken to improve the situation ?

A.—Sri K. NAGAPPA ALVA (Minister for Health).—

(*a*)—

	Name of the Institution		Total amount spent for medicines during 1962-63	
			2	
			Rs.	nP.
L. F. Dispensaries.—				
1	Kondajji	...	150	00
2	Bidarakere	...	271	82
3	Bharamasagar	.	409	79
4	Ramapura	...	705	67
5	Narayanagondanahalli	...	382	66
6	Sanikere	...	476	69
7	Kondahalli	...	372	57
8	Anaji	...	175	75
9	Asagodu	...	567	36
10	Jajur	...	343	95
11	Kandagal	...	482	73
12	Hireguntanur	...	963	44
13	Honnur	...	280	63
14	Sokke	...	329	87
15	Gunderi	...	444	97
16	Thalya	...	281	68
17	Meerasabihalli	...	275	85
18	Jankal	...	1,166	77
19	Belagur	...	317	60
20	Naikanahatti	...	347	43
21	Thuruvanur	...	863	20
22	Chickjajur	...	729	20
23	Bilichodu	...	696	43
24	Bharamanaikanadurga	...	325	24
25	Srirampura	...	658	39
26	Ramagiri	...	939	94
27	Mallappanahalli (Hiriyur Taluk)	...	333	50
28	Doddariddanahalli	...	251	21
29	Mayakonda	...	275	00
30	Mathodu	...	573	26

1			2	
			Rs	nP.
R. S. L. F. Dispensaries.—				
31	Basavanakote	...	280	33
32	Horakere Devarapura	...	372	83
33	Belaghatta	...	400	00
34	Malladihalli	...	230	80
35	Chickondanahalli	...	390	87
Combined Dispensaries.—				
36	Hosadurga	...	1,185	24
37	Challakere	...	727	91
Primary Health Units (Mysore Type).—				
38	Hadadi	...	367	37
39	Malebennur	...	396	03
40	Neralige	...	702	09
41	Ranganathapura	...	849	03
42	Maradihalli	...	369	46
43	Dharmapura	...	646	17
44	V. V. Pura	...	949	40
45	Belludi	...	626	07
46	V. V. Sagar, Hiriyur	...	766	50
Primary Health Centres (Government of India Type).—				
47	Holalkere	...	1,217	23
48	Jagalur	...	1,273	53
49	Parasurampura	...	680	89
50	Kodaganur	...	517	29
51	Thalak	...	1,635	35
52	Molakalmuru	...	1,170	04
53	Sirigere	...	1,585	28
54	Mallappanahalli (Hosadurga Taluk)	...	987	74
55	Harihar	...	964	40
Taluk Board Dispensary.—				
56	Lokkikere	...	326	57

(*b*) In some cases inadequacy of drugs have been reported.

(*c*) Suitable action is being taken to improve the situation.

ಶ್ರೀ ಪಿ. ಮಸಿಯಪ್ಪ.—ಇಲ್ಲಿರುವ ಪಟ್ಟಿಯನ್ನು ನೋಡಿದರೆ, ಮಲ್ಲಪ್ಪನ ಹಳ್ಳಿ, ರಾಮಗಿರಿ ಹಾಗೂ ದೊಡ್ಡರ ದೊಡ್ಡನಹಳ್ಳಿ, ಇತ್ಯಾದಿ ಗ್ರಾಮಗಳಲ್ಲಿರುವ ಆಸ್ಪತ್ರೆಗಳಲ್ಲಿ ಎರಡು ಮೂರು ತಿಂಗಳುಗಳಿಗೂ ಸಾಕಾಗುವಷ್ಟು ಔಷಧಿಗಳಿರುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಕಾಲ ಕಾಲಕ್ಕೆ ಔಷಧಿಗಳು ಕಡಿಮೆ ಸರಬರಾಜಾಗಿವೆ ಅಥವಾ ಇಲ್ಲವೇ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೆ ಬೇಕಾಗುವ ಕ್ರಮಗಳನ್ನು ಸಾಧ್ಯವಾದಷ್ಟು ತೆಗೆದುಕೊಂಡಿದ್ದೇವೆ.

Sri A. KRISHNA SETTY.—Is it not a fact that the *per capita* expenditure on drugs in this State is awfully low, when compared to the neighbouring States ?

Sri K. NAGAPPA ALVA.—That comparative statement is not available with me, Sir.

ಶ್ರೀ ಬಿ. ಚನ್ನಬೈರೇಗೌಡ.—ಇಲ್ಲಿ ಹೇಳಿರುವಂತೆ ಕೊಂಡಜ್ಜಿಗೆ 150 ರೂಪಾಯಿಗಳಷ್ಟು ಔಷಧಿ ಸಾಕಾಗುತ್ತದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಒಂದು ವರ್ಷಕ್ಕೆ ಇಷ್ಟು ಕೊಡಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಔಷಧಿ ಸರಬರಾಜು ಕಡಿಮೆಯಾಗಿರುವುದೂ ಅಲ್ಲದೆ ಆಸ್ಪತ್ರೆಗಳಲ್ಲಿ ಇರುವ ಔಷಧಿಗಳನ್ನು ಕೊಡಲು ಡಾಕ್ಟರುಗಳಿಲ್ಲದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹೌದು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಯಾವ ಯಾವ ಕಾಯಿಲೆಗೋಸ್ಕರ ಇಂತಿಂತಹ ಔಷಧಿಗಳನ್ನು ಕೊಡಬೇಕೆಂದೇನಾದರೂ ಇದೆಯೇ ?

Sri K. NAGAPPA ALVA.—This is a very vague question, Sir.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸರಕಾರದ ಆಸ್ಪತ್ರೆಗಳಿಗೆ ಸರಿಯಾದ ರೀತಿಯಲ್ಲಿ ಔಷಧಿಗಳ ಸರಬರಾಜು ಮಾಡದಿರುವುದರಿಂದ ಖಾಸಗೀ ಆಸ್ಪತ್ರೆಗಳಿಗೇ ಹೋದರೆ ಕಾಯಿಲೆ ವಾಸಿಯಾಗುತ್ತದೆ ಎನ್ನುವುದು ಜನಗಳಲ್ಲಿ ಈಚೆಗೆ ಹೆಚ್ಚಾಗಿ ಕಂಡುಬರುತ್ತಿರುವುದು ನಿಜವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಅಭಿಪ್ರಾಯ ಸರಿಯಲ್ಲ.

ಶ್ರೀ ಬಿ. ಎಲ್. ಗೌಡ.—ಪಟ್ಟಿಯಲ್ಲಿರುವ 17, 20, ಮತ್ತು 21 ಈ ಆಸ್ಪತ್ರೆಗಳಿಂದ ಔಷಧಿಗಾಗಿ ಬೇಡಿಕೆಗಳು ಎಷ್ಟು ಬಂದಿದ್ದವು ? ಎಷ್ಟನ್ನು ಸರಬರಾಜು ಮಾಡಲಾಗಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇದರಲ್ಲಿ ಒಂದು ವಿಚಾರವನ್ನು ಸಭೆಗೆ ತಿಳಿಸಬೇಕಾಗಿದೆ. ಎಲ್ಲಿ ಔಷಧಿಗಳನ್ನು ಸ್ವಲ್ಪ ಕಡಮೆ ಕೊಡುತ್ತಿದ್ದೆವೋ ಅಲ್ಲಿ ಅದನ್ನು ಸ್ವಲ್ಪ ಹೆಚ್ಚು ಮಾಡಿ ಕೊಡಲಾಗಿದೆ, ಮೊದಲಿಗೆ ಇಂಡೆಂಟು ಬರುತ್ತದೆ. ಅದಾದ ಮೇಲೆ ಎರಡೆರಡು ಸಾರಿ ಔಷಧಿಗಳನ್ನು ಹಂಚಲಾಗುತ್ತದೆ.

Sri A. KRISHNA SETTY.—With reference to reply to (c), what is the suitable action taken by them to improve the situation, Sir ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ ಅಂತಹ ಪರಿಸ್ಥಿತಿ ಇಲ್ಲ. ಸರಕಾರದ ಮೆಡಿಕಲ್ ಸ್ಟೋರ್ಸ್‌ನಿಂದ, ಇಂಡಸ್ಟ್ರಿಯಲ್ ಟೆಸ್ಟಿಂಗು ಲ್ಯಾಬರೇಟರಿಯಿಂದ ಆಮೇಲೆ ಡಿಸ್ಟ್ರಿಕ್ಟು ಹೆಲ್ತ್ ಆಫೀಸರವರು ಅಗತ್ಯ ಬಿದ್ದರೆ ಖರೀದಿ ಮಾಡಿ ಔಷಧಿಗಳನ್ನು ಸರಬರಾಜು ಮಾಡಬೇಕೆಂದು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ನಮಗೆ ಡಿಸ್ಟ್ರಿಕ್ಟು ಹೆಲ್ತ್ ಆಫೀಸರವರ ರಿಪೋರ್ಟಿನ ಆಧಾರದ ಮೇಲೆ ಯಾವ ಯಾವ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ, ಮತ್ತು ಎಲ್ಲಿ ಹೆಚ್ಚಾಗಿದೆ ಎನ್ನುವುದನ್ನೆಲ್ಲಾ ನೋಡಿಕೊಂಡು ಅಲ್ಲಿಗೆ ಔಷಧಿಗಳನ್ನು ಕಳುಹಿಸುವ ಏರ್ಪಾಡು ಮಾಡಲಾಗಿದೆ.

Sri C. V. VENKATARAYAPPA.—What is the basis for allotting this amount ? Do you take the number of patients that attend the hospitals into consideration or is there any other consideration ?

ಶ್ರೀ ಕೆ. ನಾಗಪ್ಪ ಆಳ್ವ.—ಬೇರೆ ಬೇರೆ ತರಹದ ಆಸ್ಪತ್ರೆಗಳಿಗೆ ಬೇರೆ ಬೇರೆ ರೀತಿಯಾಗಿ ಹಣವನ್ನು ನಿಗದಿ ಮಾಡಲಾಗಿದೆ.

ಶ್ರೀ ಬಿ. ಎಲ್. ಗೌಡ.—ಪಟ್ಟಿಯಲ್ಲಿರುವ 17, 20 ಮತ್ತು 21 ಈ ಸಂಸ್ಥೆಗಳಿಂದ ಔಷಧಿಗಳಿಗಾಗಿ ಬಂದ ಬೇಡಿಕೆಗಳೆಷ್ಟು ಮತ್ತು ಎಷ್ಟು ಸರಬರಾಜು ಆಯಿತು ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲಿ ಬೇಡಿಕೆಯ ಪ್ರಶ್ನೆ ಬರುವುದಿಲ್ಲ, ಇದರಲ್ಲಿ ಹೇಗಿದೆ ಎಂದರೆ, ಎಲ್. ಎಫ್. ಡಿಸ್ಪೆನ್ಸರಿಗಾಗಿ 1,000 [illegible] ಫಂಡು ಡಿಸ್ಪೆನ್ಸರಿಗಾಗಿ 1,500 ರೂಪಾಯಿಗಳಷ್ಟು, ಕಂಬೈನ್ಡ್ ಡಿಸ್ಪೆನ್ಸರಿಗಾಗಿ 2,000 ಹಾಗೂ ಗವರ್ನಮೆಂಟ್ ಆಫ್ ಇಂಡಿಯಾ ಟೈಪ್ ಆಸ್ಪತ್ರೆಗಾಗಿ 3,000 ಎಂದು ಈ ತರಹ ಇದೆ.

Sri D. PARAMESWARAPPA.—There is a great disparity in the figures given in the statement. May I know what is the principle that you follow in the distribution of drugs to each Hospital?

Sri K. NAGAPPA ALVA.—Different types of the institutions have been allotted different amounts.

ಶ್ರೀ ಸಿದ್ದಯ್ಯ ಕಾಶೀಮಠ್.—ಆಸ್ಪತ್ರೆಗಳಿಗಾಗಿ ಔಷಧಿಗಳನ್ನು ಸರ್ಕಾರದವರು ಹೇಳುವ ಷಾಪುಗಳಿಂದ ಪೂರೈಸಲು ಆಗುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ, ಅದೇನಾದರೂ ತಮಗೆ ಗೊತ್ತಿದ್ದರೆ ತಿಳಿಸಬಹುದು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಆಸ್ಪತ್ರೆಗಳಿಗೆ ಔಷಧಿಗಳನ್ನು ಅಲ್ಲಿಗೆ ಬರತಕ್ಕ ರೋಗಿಗಳ ಸಂಖ್ಯೆಯ ಆಧಾರದ ಮೇಲೆ ಹಂಚುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ನಾನಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ. ಎಲ್ಲೆಲ್ಲಿ ಹೆಚ್ಚಿನ ಔಷಧಿಗಳು ಬೇಕಾಗಬಹುದು ಎನ್ನುವುದನ್ನು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರರು ಆಗಾಗ್ಗೆ ತಿಳಿಸುತ್ತಾರೆ, ಅವರಿಂದ ಮಾಹಿತಿ ಪಡೆದು ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೆಡಿಕಲ್ ಸ್ಟೋರ್ಸ್‌ಗಳಲ್ಲಿ ಇರ್ರೆಗ್ಯುಲಾರಿಟೀಸು ಇವೆ ಎಂದು ಹೇಳಿದರು, ಅವು ಯಾವುವು ?

ಶ್ರೀ ಕೆ. ನಾಗಪ್ಪ ಆಳ್ವ.—ಏನೇನು ಕುಂದು ಕೊರತೆಗಳಿವೆಯೋ ಅವನ್ನೆಲ್ಲಾ ನೋಡಿಕೊಂಡು ಈ ಮೆಡಿಕಲ್ ಸ್ಟೋರ್ಸನ್ನು ರೀಆರ್ಗನೈಸು ಮಾಡಬೇಕೆಂದು ಹೇಳಿದೆ.

ಶ್ರೀ ಜಿ. ವಿ. ಗೌಡ.—ಬೇರೆ ಬೇರೆ ಆಸ್ಪತ್ರೆಗಳಿಗೆ ಬೇರೆ ಬೇರೆ ನಮೂನೆ ಔಷಧಗಳನ್ನು ಕೊಡುತ್ತೀರೆಂದು ಅಪ್ಪಣೆ ಕೊಡಿಸಿದಿರಿ. L. F. Dispensaries R.S.L.F. Dispensaries Combined Dispensaries Primary Health Units (Mysore type ಮತ್ತು Government of India type), ಇವುಗಳಿಗೆಲ್ಲಾ ಯಾವ ಯಾವ ನಮೂನೆ ಔಷಧಿಗಳನ್ನು ಕೊಡಬೇಕು ಎಂದು ಸರ್ಕಾರದ ನಿಯಮವಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಸರ್ಕಾರದ ತೀರ್ಮಾನ ಇಷ್ಟರಲ್ಲಿಯೇ ಆಗುವುದಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಕ್ಲಾಜ್ (b) ನಲ್ಲಿ "In some cases inadequacy of drugs have been reported" ಎಂದು ಹೇಳಿದ್ದೀರಿ. ಎಷ್ಟು ಕೇಸುಗಳಲ್ಲಿ ಔಷಧ ಸಾಕಾಗುತ್ತಿಲ್ಲವೆಂದು ವರದಿಯಾಗಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇದರಲ್ಲಿ ಇಷ್ಟು ಎಂಬುದಾಗಿ ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಒಂದು ವಿಚಾರ ಹೇಳಬೇಕಾಗುತ್ತದೆ. ಈ ಆಸ್ಪತ್ರೆಗಳಿಗೆ ಸಂಬಂಧಪಟ್ಟ ಡಾಕ್ಟರುಗಳು ಕೂಡ ಅಲ್ಲಿಯ ವಿಚಾರವನ್ನು ಆಗಾಗ್ಗೆ ತಿಳಿಸಬೇಕಾಗುತ್ತದೆ. ಕೆಲವು ಕಡೆ ಡಾಕ್ಟರುಗಳು ಕೂಡ ಅದನ್ನು ತಿಳಿಸುತ್ತಿಲ್ಲ. ಈ ಬಗ್ಗೆ ಸರಕಾರಕ್ಕೆ ಸರಿಯಾದ ವಿವರ ತಿಳಿದ ಕೂಡಲೆ, ಸರಕಾರ ಆಕ್ಷನ್ ತೆಗೆದುಕೊಳ್ಳುತ್ತದೆ.

ಶ್ರೀ ಜಿ. ವಿ. ಗೌಡ.—ವರ್ತಮಾನ, ವಿವರಣೆ ವರದಿ ಮಾಡದಿದ್ದ ಡಾಕ್ಟರುಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೋಸ್ಕರ, ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಿಗೆ ತಿಳಿಸಲಕ್ಕೆ ಇಷ್ಟರಲ್ಲಿಯೇ ಆದೇಶ ಕೊಟ್ಟಿದ್ದೇವೆ.

ಶ್ರೀ ಗೋಪಾಲ ಸಾಲೆನ್ಸ.—ಕೆಲವು ಸಂದರ್ಭಗಳಲ್ಲಿ ಸಾಕಷ್ಟು ಔಷಧಗಳಿಲ್ಲವೆಂಬುದಾಗಿ ವರದಿಯಾಗಿದೆಯೆಂದು ಹೇಳುತ್ತೀರ. ಔಷಧಗಳನ್ನು ಒದಗಿಸದೆ ಇರುವುದರಿಂದ, ರಾಜ್ಯದ ಅನೇಕ ಆಸ್ಪತ್ರೆಗಳಲ್ಲಿ ಜನರು ರೋಗಗಳ ಬಾಯಿಗೆ ತುತ್ತಾಗಿದ್ದಾರೆ, ಮತ್ತು ಕೆಲವು ಸಂದರ್ಭಗಳಲ್ಲಿ ಮರಣಗಳು ಕೂಡ ಸಂಭವಿಸಿವೆ ಹೀಗೆಂದು ಸರಕಾರಕ್ಕೆ ವರದಿಗಳು ಬಂದಿವೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ತರಹ ವರದಿ ಬಂದಿಲ್ಲ.

ಶ್ರೀ ಎಸ್. ಶಿವಪ್ಪ.—ತಾವು ಕೊಟ್ಟಿರತಕ್ಕಂಥ ವಿವರಣೆಯ ಪ್ರಕಾರ ಕೊಂಡಜ್ಜಿಯಲ್ಲಿರುವ ಡಿಸ್ಪೆನ್ಸರಿಗೆ ಒಂದು ವರ್ಷಕ್ಕೆ 150 ರೂಪಾಯಿನಷ್ಟು ಔಷಧಕ್ಕೆ ವೆಚ್ಚ ಮಾಡಿದ್ದೀರ. ಅಂದರೆ ಒಂದು ದಿನಕ್ಕೆ ಒಂದು ಡಿಸ್ಪೆನ್ಸರಿಗೆ ಸರಾಸರಿ 8 ಆಣೆಯಷ್ಟು ಔಷಧ ಕೊಡುತ್ತೀರೆಂದು ಆಯಿತು. ಒಂದು ದಿನಕ್ಕೆ ಅದು ಸಾಕಾಗುತ್ತದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಸಾಕಾಗುವುದಿಲ್ಲ, ನಿಜ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ಯಾವ ಕೆಮಿಸ್ಟು ಮತ್ತು ಡ್ರಗ್ಗಿಸ್ಟುಗಳಿಂದ ಔಷಧಗಳನ್ನು ಕೊಂಡುಕೊಳ್ಳುತ್ತೀರೋ ಅವರಿಗೆ ಅದರ ಹಣ ಕೊಡದೆ ಇರುವುದು ಔಷಧಗಳು ಇಲ್ಲದಿರುವುದಕ್ಕೆ ಒಂದು ಕಾರಣವಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೆ ಏನೂ ಇಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಮೈಸೂರು ಟೈಪು ಪ್ರೈಮರಿ ಹೆಲ್ತ್ ಯೂನಿಟ್ಟುಗಳಿಗೆ, ಸಪ್ಲೈ ಮಾಡತಕ್ಕಂಥ ಔಷಧಗಳ ಬಗ್ಗೆ ಜನರಿಗೆ ಅಸಮಾಧಾನವಾಗಿದೆ? ಇಂಜಕ್ಷನ್ ಟ್ಯೂಬುಗಳ ಸವಲತ್ತೂ ದೊರೆಯುತ್ತಾ ಇಲ್ಲ. ಕೆಲವು ಸಂದರ್ಭಗಳಲ್ಲಿ ಎಮರ್ಜನ್ಸಿ ಪರಿಸ್ಥಿತಿಯೆಂದು ಹೇಳಿ ಇಂಜಕ್ಷನ್ ಕೊಡುವುದಿಲ್ಲ, ಆದ್ದರಿಂದ ಔಷಧಗಳ ಅವಶ್ಯಕತೆಯನ್ನಾದರೂ ಪೂರೈಸುತ್ತೀರ?

ಶ್ರೀ ಕೆ. ನಾಗಪ್ಪ ಆಳ್ವ.—ಹೆಚ್ಚಿನ ಔಷಧಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

Examinations prescribed for Promotions in the Commercial Tax Department.

*Q.—631. Sri T. S. SHIVANNA (Madhugiri).—

Will the Government be pleased to state.—

(*a*) what are the examinations prescribed for promotions in the Commercial Tax Department of (i) First Division Clerks, (ii) Assistant Commercial Tax Officers, (iii) Commercial Tax Officers, under old Rules and New Rules, *i.e.*, before 1st November 1956 and after 1st November 1956;

(*b*) the number of promotions made under the old Rules and New Rules for the above said posts for the last three years;

(*c*) whether any promotions have been made for the above said posts by adopting both the Rules;

(*d*) if so, the number of persons so promoted;

(*e*) whether the seniority of any officials has been affected by such promotions?

A.— Sri B. D. JATTI (Minister for Finance).—

(*a*) *Vide* statement given below.

(*b*) *I Division Clerks*:—	*Old Rules*	*New Rules*
1959-60 ...	31	1
1960-61 ...	32	3
1961-62 ...	1	4

Assistant Commercial Tax Officers and Commerial Tax Officers.

As these posts are in the Statewide cadre, promotions are being effected without insisting upon passing of the Departmental Examinations from time to time. In Notification No. GAD 38 SRR 61, dated 28th April 1962, the time limit for passing the Departmental Examinations has been further extended till 31st December 1963.

(*c*) Yes, in the cadre of I Division Clerks.

(*d*) 9

(*e*) All the promotions made are purely on a temporary basis and pending finalisation of equations and Inter-state Seniority List.

STATEMENT

The examinations prescribed for promotions are as under :

	Prior to 1-11-1956					*After 1-11-1956*
	Ex-Bombay Area	*Ex-Madras Area*	*Old Mysore Area*	*Ex-Hyderabad Area*	*Coorg*	
(i) I Division Clerks.	Departmental Examination of Sales Tax Inspectors and Higher clerical posts.	Test in Comml. Taxes Acts Parts I & II.	Sales Tax (Lower) Accounts (Higher) Accountancy (Jr.)	Nil	Accounts Test.	Commercial Taxes (Hr.) Accounts (Hr.) General Law, (Part I)
(ii) Assistant Commercial Tax Officers	Departmental Examination for Sales Tax Officers.	Accounts tests for subordinate officers, Part I Comml. Taxes Acts, Parts I, II & III and Diploma in Accountancy – examinations conducted by the Institute of Chartered Accountant or Government Technical Examination in Book-keeping by the lower grade test in Comml. Taxes Acts, Parts I & III.	Sales Tax (Hr.) Senior Accountancy conducted by the Commercial Examinations Board Accounts (Hr.) Criminal (Hr.)	Examinations prescribed for Assistant Sales Tax Officers and Sales Tax Officers.	Nil	Commercial Taxes (Hr.) Accounts (Hr.) General Law, Part I & II
(iii) Commercial Tax Officers						

Sri B. D. JATTI.—Sir, the total number is given and it is including old Mysore people also.

Sri G. V. GOWDA.—When the new rules were framed is it not a fact that the old rules were superseded ?

Sri B. D. JATTI.—Sir, old rules are superseded when new rules come into effect.

Sri G. V. GOWDA.—Then, how were both old and new rules given effect to ?

Sri B. D. JATTI.—After new rules came into effect, old rules are not given effect to.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಳೆಯ ಮೈಸೂರಿನಲ್ಲಿ ಬಹಳ ಜನಕ್ಕೆ ಸೀನಿಯಾರಿಟಿ ಓವರ್‌ಲುಕ್ ಆಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಅದು ಸರಿಯಲ್ಲ, ಏಕೆಂದರೆ ಗವರ್ನ್‌ಮೆಂಟ್ ಆಫ್ ಇಂಡಿಯದಿಂದ, ಫೈನಲ್ ಲಿಸ್ಟ್ ಬಂದಿದೆ. ಇನ್ನು ಎರಡು ದಿವಸದೊಳಗೆ ಗೆಜೆಟ್ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊನ್ನೆ ಹೈ ಕೋರ್ಟಿನವರು Commercial Tax ಇಲಾಖೆಯ ಒಬ್ಬ ಅಧಿಕಾರಿಯ ಪ್ರಮೋಷನನ್ನು ಕ್ವಾಷ್ ಮಾಡಿದ್ದಾರೆ. ಯಾವ ರೂಲ್ ಪ್ರಕಾರ ಆ ಪ್ರಮೋಷನನ್ನು ಕೊಟ್ಟಿದ್ದಿರಿ.

Sri B. D. JATTI.—Sir, it was a provisional list which was prepared for the convenience of the department. Even in that provisional list, the person who went to the High Court was not senior. The difficulty was, the counter-affidavit that had to be put in by the Pleader was not put in. According to the final list of Government of India, he is not at all senior.

Providing of Dhoby-ghats to Dhobies of Sriramapuram and Malleswaram

*Q.—653. **Sri K. DEVAIAH** (Malleswaram).—

Will the Government be pleased to state :—

(*a*) whether it is a fact that the Agasarakere (Kethamaranahalli tank) has breached causing much inconvenience to Dhobies of Srirampuram and Malleswaram ;

(*b*) if so, whether Government intend providing 'Dhobi-ghats' for them in the same area ;

(*c*) whether it has come to the notice of the Government that these Dhobies have been forced to walk a great distance of more than four miles to Laggerihalla at a great risk;

(*d*) whether it has come to the notice of the Government that the villagers of Laggeri are obstructing them from washing the clothes in the channel water on the ground that the water of halla becomes poisonous for drinking purposes of cattle and sheep, etc. ?

A.—**Sri K. PUTTASWAMY** (Minister for Municipal Administration).—

(*a*) The tank has not been breached but the waste weir has been lowered to prevent water extending into the layout—Rajajinagar II Stage.

(b) This will be examined.
(c) No.
(d) No.

ಶ್ರೀ ಕೆ. ದೇವಯ್ಯ.—ಈ ಕೆರೆಯನ್ನು ಬ್ರೀಚ್ ಮಾಡಿಲ್ಲ ಎಂದು ಹೇಳಿದ್ದೀರಿ. ಕೆಳಗಡೆ ಕೆರೆಯ ಏರಿಯನ್ನು ರಸ್ತೆಮಾಡುವುದಕ್ಕೋಸ್ಕರ ಕಟ್‌ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಕೆರೆ ಒಡೆದು ಹೋಗಿಲ್ಲ. ವೇಸ್ಟ್‌ವೇರ್ ಮಾತ್ರ ಲೋಯರ್ ಮಾಡಿದೆ.

ಶ್ರೀ ಕೆ. ದೇವಯ್ಯ.—ಈ ಕೆರೆಯನ್ನು ಒಂದುವೇಳೆ ಒಡೆದು ಹಾಕಿದ್ದರೆ, ಅಲ್ಲಿ ಇಡೀ ಬೆಂಗಳೂರಿಗೆ ಅನುಕೂಲವಾಗುವ ಒಂದು ಸ್ಟೇಡಿಯಂ ಸ್ಥಾಪಿಸಲು ಅವಕಾಶ ಕಲ್ಪಿಸಿಕೊಡುತ್ತೀರ ?

Sri K. PUTTASWAMY.—That is a suggestion and it has to be considered.

ಶ್ರೀ ಕೆ. ದೇವಯ್ಯ.—ಬೆಂಗಳೂರು ನಗರದಲ್ಲಿ ಲಕ್ಷಾಂತರ ಜನ ದೋಬಿಗಳಿಗೆ ಬಟ್ಟೆ ಒಗೆಯುವುದಕ್ಕೆ ಬೇರೆ ಎಲ್ಲಿಯಾದರೂ ಅವಕಾಶ ಕಲ್ಪಿಸಿಕೊಡುತ್ತೀರ ?

ಶ್ರೀ ಕೆ. ಪುಟ್ಟಸ್ವಾಮಿ.—ಲಕ್ಷಾಂತರ ಜನ ಬಟ್ಟೆ ಒಗೆಸಿಕೊಳ್ಳುವವರೂ ಇಲ್ಲ, ಲಕ್ಷಾಂತರ ದೋಬಿಗಳಂತೂ ಇಲ್ಲ. ಆದರೆ ಎಷ್ಟುದೋಬಿಗಳಿದ್ದಾರೋ ಅವರಿಗೆ ಅನುಕೂಲ ಮಾಡಿಕೊಡಲು ಇಲಾಖೆ ಮತ್ತು ಸರ್ಕಾರದವರು ಆಲೋಚನೆ ಮಾಡುತ್ತಾರೆ. ಹತ್ತಿರ ಸ್ಯಾಂಕಿ ಟ್ಯಾಂಕಿಗೆ ಹೋಗಿ ಒಗೆಯುತ್ತಿದ್ದಾರೆ. ಆ ಕೆರೆಯ ಕೆಳಗೆ ಅವಕಾಶ ಮಾಡಿಕೊಡುವುದಕ್ಕೆ ಅವಕಾಶವಿದೆ. ಕೆಂಪಾಂಬುಧಿ ಕೆರೆಯಲ್ಲಿಯೂ ಅವಕಾಶವಿದೆ, ಬೇಕಾದರೆ ಏರ್ಪಾಡು ಮಾಡೋಣ.

Sri SANJEEVANATH AIKALA.—Whether it has come to the notice of the Government that hundreds of dhobies have been washing clothes of Bangalore citizens in the dirty water of the factory on the Mysore–Bangalore road?

Sri K. PUTTASWAMY.—That has not come to my notice. I already submitted that the Corporation was making arrangements to facilitate washing of clothes.

ಶ್ರೀ ಕೆ. ದೇವಯ್ಯ.—ಟ್ರಸ್ಟ್ ಬೋರ್ಡ್ ಚೇರ್ಮನ್ ಅವರು ಸ್ಯಾಂಕಿ ಕೆರೆಯಲ್ಲಿ ಬಟ್ಟೆ ಒಗೆಯ ಕೂಡದೆಂದು ನಿರ್ಬಂಧ ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri K. PUTTASWAMY.—I am not aware of it. We see people washing clothes there every day.

Sri K. DEVAIAH.—Will the Government think of having a Dhoby-ghat at all the four corners of Bangalore City to serve its heavy population?

Sri K. PUTTASWAMY.—In the interest of the health of the people of Bangalore City, proper and better arrangements have to be made for washing clothes. We are aware of it.

Unemployed Civil, Mechanical and Electrical Diploma holders in the State.

*Q.—656. Sri S. RUDRAPPA (Kalgi).—

Will the Government be pleased to state.—

(a) whether they are aware that number of Civil, Mechanical, and Electrical Diploma Holders are unemployed in the State;

(b) if so, why, in spite of great need for the services of the above Diploma Holders in the State, Government is not employing them?

A.—Sri G. B. SHANKAR RAO (Parliamentry Secretary to the Minister for the Public Works).—

(*a*) Yes.

(*b*) The presumption that there is a great need for Diploma Holders in the State is not correct.

Sri S. RUDRAPPA.—May I know the number of unemployed diploma-holders in Mechanical, Electrical and Civil Engineering at present ?

Sri G. B. SHANKAR RAO.—The number of unemployed diploma-holders is : Mechanical : 839, Electrical : 407 and up to the end of March 1963 it was 725 in Civil Engineering and this latest figure is 1,100.

Sri S. RUDRAPPA.—May I know if the Government has made any attempts to request the neighbouring States of Madras, Andhra and Maharashtra to provide employment to these surplus diploma-holders ?

Sri G. B. SHANKAR RAO.—The State Government have requested the neighbouring States as well as other institutions to provide jobs for these persons. The Maharashtra State has agreed to absorb 269 diploma-holders but our candidates are not willing to go there. Only 10 diploma-holders have shown their intention to go to Maharashtra.

Sri S. SIVAPPA.—What is the intention of Government in starting polytechnics in every district and not utilising their services after they pass out ?

Mr. SPEAKER.—If there are no vacancies, how can the Government solve the problem ? Is the Hon'ble Member aware of any vacancy existing and its not being filled up ?

Sri S SIVAPPA.—The Government started the polytechnics in the State knowing full-well the employment potentialities in the State. May I conclude that the development programmes have failed because if they had succeeded, all these diploma-holders could have been absorbed, since I believe the schools were started keeping in view the possible employment under the various development programmes.

Sri VEERENDRA PATIL (Minister for Public Works).—The Hon'ble Member is under the impression that it is the responsibility of the Government to provide jobs for all the students who pass from the polytechnics. That is not so. The policy of the Government in starting the polytechnics is to impart technical education. So far as the State Government is concerned, we have been doing our best to absorb as many diploma-holders as possible but it cannot be said that the State Government should create vacancies for all the diploma-holders, just to give them work.

Mr. SPEAKER.—My impression is that certain persons are not willing to go out-of-the State. Therefore they are unemployed.

Sri VEERENDRA PATIL.—The Parliamentary Secretary has just now explained that we have been requesting the neighbouring States to use the services of our diploma-holders, who are surplus to us. The Maharashtra Government has come forward to absorb about 269 candidates but our people are unwilling, excepting 10 persons. They are not

willing to go outside their districts, let alone going to Maharashtra. If that be the position I am afraid they cannot all be provided with jobs in their native place.

Mr. SPEAKER.—Is it not correct that Employment Exchanges are circulating information to all those who want jobs? Such information is on an All-India basis. The Labour Department also circulates such information. If that be so, where is the question of failure of schemes?

Sri S. SIVAPPA.—Is it a fact that the Employment Exchanges are not giving adequate information and guidance to those who want employment?

Sri D. DEVARAJ URS (Minister for Housing, Labour and Transport).—It is not correct. The Employment Exchanges give all relevant information concerning the availability of jobs not only in this State but outside also. In fact there are vocational guidance officers attached to the Universities. The difficulty arises when students ask for jobs being given in a place of their choice.

Sri K. S. SURYANARAYANA RAO.—From the figures given we find that we have exceeded the third plan targets. Am I correct?

Sri D. DEVARAJ URS.—The point is that polytechnics are not started by the Mysore Government on its own initiative. There is a general policy in this regard which is laid down by the Planning Commission. The Commission keeps in mind the over-all requirements of the country as a whole and allots polytechnics to each State. It is not as if the Mysore State can start them on its own whims and fancies. We get about 60% Central aid for these institutions. Therefore essentially the Planning Commission envisages a certain measure of mobility among diploma-holders so that they may be employed in places where they are required. But if our students stick hard to the places of their birth, then it would be difficult for the State to help them.

Sri S. SIVAPPA.—May I ask what this State has done to absorb the surplus diploma-holders? Have they attempted to absorb as many of them as possible in the Government and the industries here?

Sri D. DEVARAJ URS.—The P. W. Minister has already said that he has written to other States to absorb them. But, the trouble is our candidates do not want to go out.

ಶ್ರೀಮತಿ ಬಸವರಾಜೇಶ್ವರಿ.—ಈಗ ಅಭಿವೃದ್ಧಿ ಬ್ಲಾಕುಗಳಲ್ಲಿ ಕೆಲಸ ಮಾಡತಕ್ಕ ಇಂಡಸ್ಟ್ರಿಯಲ್ ಎಕ್ಸ್‌ಪಾನ್‌ಷನ್ ಆಫೀಸರುಗಳಲ್ಲಿ ಡಿಪ್ಲೊಮಾ ಹೋಲ್ಡರುಗಳನ್ನು ಸಾಧ್ಯವಾದಮಟ್ಟಿಗೂ ರಿಟ್ರೆಂಚ್ ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ. ಅವರನ್ನೆಲ್ಲ ಏನು ಮಾಡುತ್ತೀರಿ, ಸ್ವಾಮಿ ?

† Sri B. D. JATTI (Minister for Finance).—Wherever there is retrenchment, persons thrown out would be absorbed in other departments. They would not be sent home.

1 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಜನ ಸಿವಿಲ್, ಮೆಕಾನಿಕಲ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪಾಸ್ ಆದವರನ್ನು ನೇಮಕ ಮಾಡಿಕೊಳ್ಳಲು ಸಾಧ್ಯವಾಗಿದೆ ?

Sri G. B. SHANKAR RAO.—In the case of diploma holders, we have absorbed as many as possible, keeping in view the requirements of the Departments.

ಶ್ರೀ ಟಿ. ಜಿ. ಸತ್ಯನಾರಾಯಣ.—ನಮ್ಮ ರಾಜ್ಯದಲ್ಲಿ ಡಿಪ್ಲೋಮಾ ಹೋಲ್ಡರ್ಸ್ ಹೆಚ್ಚಾಗಿದ್ದರೆ ಅವರನ್ನು ಬೇರೆ ದೇಶಕ್ಕೆ ಏಕೆ ಕಳಿಸಬಾರದು?

Sri G. B. SHANKAR RAO.—It is open for the Diploma-holders to go and serve anywhere in the country.

ಶ್ರೀ ವಿ. ಮುನಿಯಪ್ಪ.—ಡಿಪ್ಲೋಮಾ ಹೋಲ್ಡರ್ಸ್‌ಗಳು ಇಲಾಖೆಗಳಲ್ಲಿ ಹಂಗಾಮಿಯಾಗಿ ಎಂದರೆ ಡೇಲಿ ವೇಜಸ್ ಮೇಲೆ ಕೆಲಸ ಮಾಡತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆಯೇ?

Sri G. B. SHANKAR RAO.—Yes, Sir. That is also one of the opportunities provided for the Diploma-holders to earn daily wages at least.

ಶ್ರೀ ಎಸ್. ಗೋಪಾಲ ಗೌಡ.—ಸರಕಾರ ಕೊಟ್ಟಿರತಕ್ಕ ಮುಖ್ಯ ಅಂಶಗಳ ಪ್ರಕಾರ ತೆಗೆದು ಕೊಳ್ಳುವುದಾದರೆ ಡಿಪ್ಲೋಮಾ ಹೋಲ್ಡರ್ಸ್ ಹೆಚ್ಚಾಗಿರುವುದರಿಂದ ಮತ್ತು ಸರಕಾರಕ್ಕೆ ಉದ್ಯೋಗ ಕೊಡಿಸುವ ಜವಾಬ್ದಾರಿ ಇಲ್ಲ ಎಂದು ತಿಳಿಸಿರುವುದರಿಂದ ಮೂರನೇ ಪಂಚವಾರ್ಷಿಕ ಯೋಜನೆಯ ವಿಷಯದಲ್ಲಿ ಸರಕಾರ ವಿಫಲವಾಗಿದೆ ಎಂದು ಈ ಮಾನ್ಯ ಸಭೆ ಅರ್ಥ ಮಾಡಿಕೊಳ್ಳಬಹುದೇ?

Sri G. B. SHANKAR RAO.—No, Sir. That cannot be accepted.

ಶ್ರೀಮತಿ ಬಸವರಾಜೇಶ್ವರಿ.—ಪಿ. ಡಬ್ಲ್ಯು. ಡಿ. ಯಲ್ಲಿ ಸೂಪರ್‌ವೈಜರರನ್ನು ಕೂಡ ಗ್ರಾಜ್ಯುಯೇಟ್ ಆದವರನ್ನು ನೇಮಿಸಬೇಕೆಂದು ಸರಕಾರ ಆಜ್ಞೆ ಮಾಡಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಗ್ರಾಜುಯೇಟ್ ಆದವರನ್ನು ಸೂಪರ್‌ವೈಜರ್ ಎಂದು ಕರೆಯುವುದಿಲ್ಲ. ಅವರನ್ನು ಜೂನಿಯರ್ ಎಂಜಿನಿಯರ್ ಎಂದು ಕರೆಯುತ್ತೇವೆ.

Sri G. V. GOWDA.—Has it come to the notice of the Government that the South Indian Regional Council on Technical Education recently has expressed their concern that these technical intitutions are allowed to increase year after year especially in the Mysore State?

Mr. SPEAKER.—Is it with regard to Colleges or Polytechnics?

Sri G. V. GOWDA.—With regard to technical Colleges.

Mr. SPEAKER.—If it relates to Colleges, I disallow the supplementary under this question.

Sri GANJI VEERAPPA.—In view of the fact that every year continuously Civil Diploma-holders have had no opportunities, is it not advisable to close the Civil section in Polytechnices?

Sri G. B. SHANKAR RAO.—There is another opportunity for the diploma-holders in Civil Engineering. There is a rule which can be enforced on the Contractors. The rule lays down that the Diploma-holders should be employed by the contractors in works of Rs. 2 to 5 lakhs.

ಶ್ರೀ ಟಿ ಚನ್ನಬೈರೇಗೌಡ.—ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎಷ್ಟು ಪಾಲಿಟೆಕ್ನಿಕ್ಸ್ ಪ್ರಾರಂಭ ಮಾಡಬೇಕಾಗಿದೆ?

Sri G. B. SHANKAR RAO.—During the Third Five-Year, Plan, our target is to establish 26 Polytechnics.

Sri V. M. DEO.—Is the Government aware that as per the objectives of the Third Five Year Plan they are supposed to provide employment and absorb all additional hands? To that extent, do you admit that the Government have failed?

Sri B. D. JATTI.—Government of India are considering how to utilise the man-power and they have set up a machinery with the State Government to solve the problems.

ಶ್ರೀ ಕೆ. ಲಕ್ಕಪ್ಪ.—ಒಂದು ಸಪ್ಲಿಮೆಂಟರಿ ಕೇಳುವುದಕ್ಕೆ ನನಗೆ ಅವಕಾಶ ಕೊಡಬೇಕು, ಸ್ವಾಮಿ.

Mr. SPEAKER.—Next question.

ಶ್ರೀ ಎಸ್. ಎಂ. ಕೃಷ್ಣ.—ಇದನ್ನು ನಾಲ್ಕು ಜನ ಮಂತ್ರಿಗಳು ಮಾತನಾಡಿ ಡಿಫೆಂಡ್ ಮಾಡಿದ್ದಾರೆ. ಸಪ್ಲಿಮೆಂಟರಿಗೆ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ನಿಜಲಿಂಗಪ್ಪ.—ಇದರಲ್ಲಿ ರಾಜಕೀಯ ಮಾಡಲು ಹೊರಟಿದ್ದೀರಿ ಎಂದು ಇಷ್ಟು ಜನ ಮಂತ್ರಿಗಳು ಮಾತನಾಡಬೇಕಾಯಿತು.

Starting of Collective Farms in the State.

*Q.—663. Sri H. R. KESHAVA MURTY (Gandasi):—

Will the Government be pleased to state :—

(a) whether they intend to start collective Farms in the State ;

(b) if so, what are the areas selected for starting these farms ;

(c) whether they have purchased the machinery required for starting such Farms ; and if so, the details may be furnished ?

A.—Sri RAMAKRISHNA HEGDE (Minister for Co-operation and Development).—

(a) Yes. Collective and Joint Co-operative Farming Societies.

(b) No specific area is selected.

(c) No.

Sri H. R. KESHAVA MURTHY.—May I know when they are starting collective Farms in the State ?

Sri RAMAKRISHNA HEGDE.—Sir, what the Hon'bleMember wanted, was not quite clear. He had asked about collective Farms. Presuming that the Hon'ble Member wants information regarding collective farming Societies, the information is provided, and if that is correct, these Societies have been started during the last two years, and they are being started.

Sri H. R. KESHAVA MURTHY.—I do not want information regarding Societies. I want information about collective Farms in the State.

Sri RAMAKRISHNA HEGDE.—Sir, there is no collective Farm in the State

Sri H. R. KESHAVA MURTHY.—May I know when you are going to start collective Farms in the State ?

Sri RAMAKRISHNA HEGDE.—Whenever it is found necessary.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಕೂಡೊಕ್ಕಲು ಸಂಘ ಸ್ಥಾಪನೆ ಮಾಡುವುದರ ಹಿಂದೆ ನಿಮ್ಮ ಅನುಭವ ಏನು ಇದೆ ? ಇದು ಜಯಪ್ರದವಾಗಿಲ್ಲ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಕೂಡೊಕ್ಕಲು ಸಂಘ ಎಂಬುದು ಬಹಳ ಹಳೇ ಕಾಲದಿಂದ ಬಂದಿರತಕ್ಕದ್ದು ಅಲ್ಲ. ಮೂರು ವರ್ಷಗಳ ಹಿಂದೆ ಕೇಂದ್ರ ಸರಕಾರದವರು ಕೋ-ಅಪರೇಟಿವ್ ಫಾರ್ಮಿಂಗ್ ವಿಚಾರದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಯೋಜನೆಯ ಅವಧಿಯಲ್ಲಿ ಒಂದು ಪೈಲೆಟ್ ಪ್ರಾಜೆಕ್ಟ್ ಮಾಡಿ ಅದರ ಮುಖಾಂತರ ಸ್ಥಾಪನೆ ಮಾಡಬೇಕೆಂಬ ಉದ್ದೇಶವಿದೆ ಎಂದು ಇದನ್ನು ಮಾಡಿದ್ದಾರೆ.

ಶ್ರೀ ವಿ. ಎಂ. ದೇವ್.—(ಎ) ಪ್ರಶ್ನೆಗೆ 'ಹೌದು' ಎಂದು ಹೇಳಿದ್ದೀರಿ. ಈಗ ತಾವು ಮಾಡ ಕೂಡದು ಎಂದು ಮಾಡಿದ್ದೀರಾ ? ಮತ್ತು ಕಲೆಕ್ಟಿವ್ ಫಾರಂಗೂ ಕೋ-ಆಪರೇಟಿವ್ ಫಾರಂಗೂ ಇರತಕ್ಕ ವ್ಯತ್ಯಾಸವೇನು ?

Sri RAMAKRISHNA HEGDE.—Sir, as I said earlier, it was not quite clear from the wording of this question. I do not have any knowledge about collective farms started anywhere in the world. Either they are State Farms or Collective Farming Societies. There are no collective farms as such.

Sri H. R. KESHAVA MURTHY.—Are you not aware that such farms are started in Russia? You said that it was not anywhere in the world?

Sri RAMAKRISHNA HEGDE.—For the information of the Hon'ble Member, I may tell him that even the farms that were started in Russia, are State Farms or Collective Farming Societies.

Sri C. V. VENKATARAYAPPA.—What are the essential requisites for starting Collective and Joint Farming Co-operative Societies?

Sri RAMAKRISHNA HEGDE.—Sir, the most essential requisite is willingness of the people—agriculturists to come forward and start such socieites. There should be in addition, land, capital and so on.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ನಮ್ಮ ಕಡೆಗೆ ತಾವು ಗಮನಕೊಡುವಂತೆ ಮಾಡಲು ಏನು ಉಪಾಯಮಾಡಬೇಕು ?

Mr. SPEAKER.—Is that a supplementary to be answered by the Hon'ble Minister?

ಶ್ರೀ ಎಸ್. ಗೋಪಾಲ ಗೌಡ.—ಸರ್ಕಾರದವರು ಹಾಲಿ ಯಾವುದಾದರೂ ಕೂಡೊಕ್ಕಲು ಅಥವಾ ಸಂಯುಕ್ತ ಸಹಕಾರಿ ಸಂಘಗಳನ್ನು ನಡೆಸಿಕೊಂಡು ಹೋಗುತ್ತಾ ಇದ್ದಾರೆಯೇ ? ಇದ್ದ ಪಕ್ಷದಲ್ಲಿ ಎಷ್ಟು ಇವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೂಡೊಕ್ಕಲು ಸಹಕಾರಿ ಸಂಘ ಇದೆ; ಆದರೆ ಸರ್ಕಾರದವರು ನಡೆಸಿಕೊಂಡು ಹೋಗುತ್ತಾ ಇಲ್ಲ. ಎರಡು ತರಹದ ಪ್ರದೇಶದಲ್ಲಿ ಈ ಸಂಘಗಳು ಇವೆ. Pilot project area, Non-pilot project area ದಲ್ಲಿ ಇವೆ ; Pilot project area ದಲ್ಲಿ 93 ಸಂಘಗಳು ಇವೆ, Non-pilot project area ದಲ್ಲಿ 70 ಸಂಘಗಳು ಇವೆ.

Sri M. Y. GHORPADE.—Will the Hon'ble Minister be pleased to say, whether there are any co-operative farms in the Mysore State formed by small land-holders voluntarily or do they exclusively refer to landless people who have been settled on lands? Can you quote one or two instances of small landlords who voluntarily formed themselves into co-operative farms, at least one instance?

Sri RAMAKRISHNA HEGDE.—All these joint farming societies are formed voluntarily by the agriculturists. It is only in the case of collective farming societies, that Government land is given to agriculturists and they are required to work, and the proprietorship of these lands vests in the societies.

Doctors posted to the Hospitals in Bangalore and Mysore during the last Eight Years

* *Q.*—667. Smt. K. S. NAGARATHNAMMA (Gundlupet).—

Will the Government be pleased to state :—

(*a*) the number of doctors who have been posted only to the hospitals either in Bangalore or at Mysore during the last eight years;

(b) since how long each one of them has worked in each of the above hospitals ?

A.—Sri K. NAGAPPA ALVA (Minister for Health).—

ಉತ್ತರ (a): 36.

(b) *Vide* statement placed on the Table of the House.

[placed in the Legislature Library. *Vide* No. 28-12th September 1963]

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ 36ರ ಪೈಕಿ ಸ್ಪೆಷಲೈಸ್ ಮಾಡಿಕೊಂಡಿರುವ ಡಾಕ್ಟರುಗಳು ಎಷ್ಟು ?

Sri K. NAGAPPA ALVA.—A majority of these doctors are specialists.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರ ಪೈಕಿ ಟೀಚಿಂಗ್ ಇನ್‌ಸ್ಟಿಟ್ಯೂಷನ್‌ಗೆ ಹೋಗಿ ಸರ್ವ್ ಮಾಡುವುದಕ್ಕೆ ಇಷ್ಟಪಟ್ಟವರು ಎಷ್ಟು ಜನ ? ನಿರಾಕರಿಸಿದವರು ಎಷ್ಟು ಜನ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಸಂಖ್ಯೆ ಇಲ್ಲ.

Mr. SPEAKER.—How does this arise out of this question ?

Smt. K. S. NAGARATHNAMMA.—They all want to stay in Bangalore and Mysore. They do not want to go anywhere else.

Mr. SPEAKER.—If that is all the idea, the Hon'ble Minister will take note of it.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ಕಾರದ ಹಣ ಸಹಾಯದಿಂದ ನ್ಯೂರಾಲಜಿ ಪಾಸ್ ಮಾಡಿಕೊಂಡವರೊಬ್ಬರು ಬೌರಿಂಗ್ ಹಾಸ್ಪಿಟಲ್‌ನಲ್ಲಿದ್ದು ಪ್ರೈವೇಟ್ ಪ್ರಾಕ್ಟೀಸ್ ಮಾಡಬೇಕೆಂದು ಇಲ್ಲಿಗೆ ವರ್ಗ ಮಾಡಿಸಿಕೊಂಡಿರುವುದು ನಿಜವೆ ? ಅವರು ಎಲ್ಲಾ ಫ್ಯಾಕ್ಟರಿಗಳಿಗೂ ಡಾಕ್ಟರ್ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಅದಕ್ಕೆ ಸರ್ಕಾರದವರು ಪರ್ಮಿಷನ್ ಕೊಟ್ಟಿದ್ದಾರೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ವಿಷಯವನ್ನು ಪ್ರತ್ಯೇಕವಾಗಿ ಸರ್ಕಾರದವರ ಗಮನಕ್ಕೆ ತಂದರೆ ವಿಚಾರಿಸಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ಕಾರದ ಹಣದಿಂದ ನ್ಯೂರಾಲಜಿ ಪಾಸ್ ಮಾಡಿಕೊಂಡು ಬಂದು ಟೀಚಿಂಗ್ ಇನ್‌ಸ್ಟಿಟ್ಯೂಷನ್‌ಗೆ ಹೋಗುವುದಿಲ್ಲ ಎಂದು ನಿರಾಕರಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ? ಮತ್ತು ಅವರು 14 ವರ್ಷಗಳಿಂದ ಬೆಂಗಳೂರಿನಲ್ಲೇ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ತಾವು ಸ್ಪಷ್ಟವಾಗಿ ಹೆಸರು ಹೇಳಿದರೆ ಅದನ್ನು ನೋಡಬಹುದು.

Mr. SPEAKER.—I was about to disallow it. Question-hour is not intended for agitating the claims of any individual and canvass his case for or against.

Sri C. J. MUCKANNAPPA.—Is it not a fact that a doctor who had been 14 years in Bangalore resigned and again he was re-employed ?

Sri K. NAGAPPA ALVA.—He had resigned. He was re-employed.

Sri K. S. SURYANARAYANA RAO.—Is it not a fact that since these people are specialists and are working in the hospitals, there are few changes by way of transfers ?

Sri K. NAGAPPA ALVA.—Only because they are in the teaching staff, to a large extent; because they are working in these teaching institutions, their transfers could not be effected.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ವಾಣೀ ವಿಲಾಸ ಆಸ್ಪತ್ರೆಯಲ್ಲಿದ್ದ ಡಾಕ್ಟರ್ ಒಬ್ಬರು ಮೈಗೆ ಚೆನ್ನಾಗಿಲ್ಲ ಎಂದು ಮಲ್ಲೇಶ್ವರದ ಆಸ್ಪತ್ರೆಗೆ ವರ್ಗ ಮಾಡಿಸಿಕೊಂಡು ಅಲ್ಲಿ ಅದನ್ನು ನರ್ಸಿಂಗ್ ಹೋಂ ಆಗಿ ಮಾಡಿಕೊಂಡಿರುವುದು ತಮಗೆ ಗೊತ್ತೇ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ಪ್ರಶ್ನೆ ಅರ್ಥವಾಗುವುದಿಲ್ಲ. I have not understood the question, Sir.

Mr. SPEAKER.—If the Hon'ble Minister has not understood it, it is best not to answer such a question.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಂಥ ಡಾಕ್ಟರುಗಳ ಸೇವೆ ಬೆಂಗಳೂರು ಮೈಸೂರಿಗೆ ಮಾತ್ರ ಬೇಕೆ ಅಥವಾ ಬಾಕಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ಗಳಲ್ಲಿರುವ ಜನಗಳಿಗೂ ಬೇಕೆ ? ಸರ್ಕಾರದವರು ಅಲ್ಲಿಗೆ ಇಂತಹವರನ್ನು ವರ್ಗ ಮಾಡುವುದಕ್ಕೆ ಇರುವಂಥ ಹರಕತ್ತು ಏನು ?

ಶ್ರೀ ಕೆ. ನಾಗಪ್ಪ ಆಳ್ವ.—ಇದರಲ್ಲಿ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುತ್ತೇನೆ ಬಹುಮಟ್ಟಿಗೆ ಒಳ್ಳೆಯ ಡಾಕ್ಟರುಗಳು ನಿಜವಾಗಿಯೂ ಬೆಂಗಳೂರು ಮೈಸೂರಿನಲ್ಲಿಯೇ ಇರಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರ ವಿಷಯವಾಗಿ ಸರ್ಕಾರ ಕಾರ್ಯಕ್ರಮ ಇಷ್ಟರಲ್ಲೇ ತೆಗೆದುಕೊಳ್ಳುವುದರಲ್ಲಿದೆ. ನನ್ನ ಒಂದು ಪ್ರಾರ್ಥನೆ ಏನೆಂದರೆ ದಯವಿಟ್ಟು ಲೆಜಿಸ್ಲೇಟರುಗಳು ಈ ವಿಷಯದಲ್ಲಿ ಇಂಟರ್‌ಫಿಯರ್ ಆಗಬಾರದು. ಒಂದು ವೇಳೆ ಯಾರಿಗಾದರೂ ಅನ್ಯಾಯವಾಗಿದ್ದರೆ ಅದನ್ನು ತಿಳಿಸಬೇಕು. ದಯವಿಟ್ಟು ಟ್ರಾನ್ಸ್‌ಫರ್ ಮಾಡಿದರೆ ಅದನ್ನು ಕ್ಯಾನ್ಸಲ್ ಮಾಡಲಿಕ್ಕೆ ಪ್ರಯತ್ನ ಮಾಡುವುದು ಅಥವಾ ಇದ್ದ ಕಡೆಯಲ್ಲೇ ಇರುವಂತೆ ಮಾಡುವುದಕ್ಕೆ ಪ್ರಯತ್ನ ಮಾಡಬಾರದೆಂದು ಹೇಳುತ್ತೇನೆ.

Sri SANJEEVANATH AIKALA.—Are such legislators from the Ruling Party or from the Opposition Party, Sir ?

Mr. SPEAKER.—I have not allowed the question. The question will not be answered.

Amount of Legal Aid sanctioned to Scheduled Castes and Scheduled Tribes in the State from April 1959, to the end of February 1963.

*Q.—671.—Sri S. SUBBAYYA NAIK (Sullia).—

Will the Government be pleased to state.—

(a) the number of people to whom and the number of cases in which legal aid was given to Scheduled Tribes and Scheduled Castes people in the State from April 1959 to end of February 1963 (figures to be given yearwar and separately for Scheduled Tribes and Scheduled Castes) ;

(b) the amounts allotted and the amounts spent in this ragard for the above years (figures to be given districtwise) ;

(c) the reasons for not spending the allotted amount, in full ;

(d) whether they intend to take suitable steps to see that the concerned people make full use of the legal aid ?

A.—Smt. YESHODARA DASAPPA (Minister for Social Welfare).—

(a) *Vide* Statement 'A' given below.

(b) *Vide* Statement 'B' given below. Districtwise distribution was not made. The amount was kept at the disposal of Director of Social Welfare.

(c) For want of eligible applicants.

(d) Does not arise in view of 'c' above.

STATEMENT 'A'

Amount of legal aid sanctioned to Scheduled Castes and Scheduled Tribes.

Year	Scheduled Castes		Scheduled Tribes	
	No. pending	No of cases	No. pending	No. of cases
1959-60	...	...	...	...
1960-61	...	...	...	...
1961-62	...	...	...	...
1962-63 Upto Feb.	2	2	1	1

STATEMENT 'B'

Amounts allotted and spent on legal aid to Scheduled Castes and Scheduled Tribes from 1959-60 to 1963 February.

Year	Scheduled Castes		Scheduled Tribes	
	Allotted	Spent	Allotted	Spent
	Rs.	Rs.	Rs.	Rs.
1959-60	...	...	...	...
1960-61	...	...	10,000	...
1961-62	4,000	...	3,000	...
1962-63	3,000	2,156-50 nP.	3,000	100

ಶ್ರೀ ಎಸ್. ಸುಬ್ಬಯ್ಯನಾಯಕ್.—ಈಗ ಕೊಡತಕ್ಕ ಲೀಗಲ್ ಎಯ್ಡ್ ಏನಿದೆ ಅದರ ಪ್ರಕಾರ ಈ ಜನಾಂಗಗಳು ತಮ್ಮ ವ್ಯವಹಾರಗಳನ್ನು ಈ ಸರ್ಕಾರಿ ಪಬ್ಲಿಕ್ ಪ್ರಾಸಿಕ್ಯೂಟರುಗಳ ಮೂಲಕವೇ ನಡೆಸಿಕೊಳ್ಳಬೇಕು ಎಂಬ ನಿರ್ಬಂಧವೇನಾದರೂ ಇದೆಯೇ?

† ಶ್ರೀಮತಿ ಯಶೋಧರ ದಾಸಪ್ಪ.—ಅಂಥ ನಿರ್ಬಂಧವೇನೂ ಇಲ್ಲ. ಸ್ಥಳದಲ್ಲಿ ಯೋಗ್ಯರಾಗಿರತಕ್ಕ ಜನ ಇದ್ದರೆ ಅವರನ್ನು ಇಟ್ಟುಕೊಳ್ಳತಕ್ಕ ಬಗ್ಗೆ ಸರ್ಕಾರದವರು ಹಣ ಕೊಡುವರು.

†Indicates that the remarks or speeches have not been revised by the member concerned.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ತಃಖ್ತಿಯಲ್ಲಿ 1961-62ಕ್ಕೆ 10,000 ರೂಪಾಯಿಗಳನ್ನು ಒದಗಿಸಲಾಗಿದೆ. 1961-62 ರಲ್ಲಿ ಎರಡು ಕೋಮಿನವರಿಗೂ 4 000 ಮತ್ತು 3,000 ರೂಪಾಯಿಗಳನ್ನು ಒದಗಿಸಿದ್ದರೂ ಒಂದು ಕಾಸನ್ನೂ ಖರ್ಚುಮಾಡಿಲ್ಲ. 1962-63ಕ್ಕೆ ಅನುಸೂಚಿತ ಆದಿಮ ಜಾತಿಗಳವರಿಗೆ ಒದಗಿಸಲಾಗಿದ್ದ 3,000 ರೂಪಾಯಿಗಳಲ್ಲಿ ಕೇವಲ 100 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದನ್ನು ನೋಡಿದರೆ ಸರ್ಕಾರ ಇವರ ವಿಚಾರದಲ್ಲಿ ಬಹಳ ಮಂದಗತಿಯಿಂದ ಕೆಲಸ ಮಾಡುತ್ತಿದೆ ಎಂದು ಕಾಣುವುದಿಲ್ಲವೆ ?

ಶ್ರೀಮತಿ ಯಶೋದರ ದಾಸಪ್ಪ.—ಅಂಥ ಭಾವನೆಯೇನಿಲ್ಲ. ಜನರಿಗೆ ಆಗತ್ಯಬಿದ್ದಿಲ್ಲ, ಅವರು ದುಡ್ಡನ್ನು ಬಳಸಿಲ್ಲ, ಅಷ್ಟೇನೆ. ಈಗಲೂ ದಕ್ಷಿಣ ಕನ್ನಡ ಜಿಲ್ಲೆಗೆ ಅಗತ್ಯಬಿದ್ದಾಗ ಉಪಯೋಗಿಸಲು ಹಣವನ್ನು ಅಲ್ಲಿ ಡಿಪಾಜಿಟ್ ಇಟ್ಟಿದ್ದೇವೆ.

Areca Research Centre established in Thirthahalli

*Q.—680. Sri S. GOPALA GOWDA (Thirthahalli).—

Will the Government be pleased to state :—

(a) when the Areca Research Centre was established in Thirthahalli and what are the researches conducted so far in this Centre ;

(b) the period for which this Centre was sanctioned ;

(c) whether they would furnish details as to the annual expenditure incurred and income derived so far ;

(d) whether they intend to establish such a Research Centre permanently in Malnad which is the Arecanut Growing Centre ?

A.—Sri H. C. BORAIAH (Parliamentary Secretary to the Minister for Agriculture).—

(a) The Areca Research Centre was established on 10th December 1952.

The researches conducted are indicated in Statement I.

(b) This Centre was sanctioned for a period of 10 years from 10th December 1952 to 9th December 1962 and subsequently ordered to continue till 31st March 1966.

(c) The annual expenditure incurred and income derived are given in Statement II.

(d) The question of establishing such a centre permanently will be considered after the end of the III Five-Year Plan Period, when the period of the continuance of the present Centre would expire.

STATEMENT—I.

I. *Manurial Experiments* :

(1) Effect of liming on manurial treatments.
(2) Combined organic and inorganic manurial experiments.
(3) Fundamental (N.P.K.) manurial experiment.

II. Agronomy:

(1) Comparative study of different positions-*cum*-depth of sowing seednuts in the nursery.

(2) To determine the frequency of occurrence of seednuts, possessing different floating habits, factors influencing such habits and their relative merits as seednuts.

(3) To study the relative merits of single, double and triple transplantation of seedlings in the nursery.

(4) Effect of position of seednuts in the bunch and their size on germination and vigour of seedlings.

(5) Sowing in situ *versus* transplanting the seedlings raised from three different sources, *i.e.*, young, middle-aged and old mother palms.

III. Cultural Experiments:

(1) Studies on the effeet of inter and associate crops in arecanut garden and their economics.

(2) Comparative study of different green manure *cum* cover crops for arecanut gardens.

(3) Weed control experiments with chemicals.

IV. Harvesting Trials:

Influence of harvesting tender and mature nuts on the productivity of areca palms during subsequent year.

V. Investigation on Diseases and Pests:

To find out the comparative efficiency of different fungicides as a preventive measure against '*Phytophthora arecae*' causing 'Koleroga'.

V-, 31 N 63
N63-3-46-50
(B) 4795

(SRI H. C. BORIAH)

STATEMENT II.

(i) The expenditure incurred since the inception of the Scheme up to June 1962:

Year		Non-recurring	Recurring	Total	Share of I.C.A.C.	Share of State Government
		Rs. nP.	Rs. nP.	Rs. nP.	Rs. nP.	Rs. nP.
1953—54	...	59,385—44	16,905—30	76,290—74	38,145—37	38,145—37
1954—55	...	2,409—72	34,028—23	26,437—95	13,218—98	13,218—97
1955—56	...	24,929—98	25,707—36	50,637—34	25,318—67	25,318—67
1956—57	...	2,102—94	29,260—76	31,363—70	15,681—85	15,681—85
1957—58	...	...	35,427—25	35,427—25	17,713—62	17,713—63
1958—59	...	260—29	31,194—30	31,454—68	15,727—34	15,727—34
1959—60	...	7,335—39	44,515—24	51,850—63	25,925—31	25,925—32
1960 April to 1960 June	...	...	9,090—41	9,090—41	5,545—21	4,545—20
1960 July to 1961 June	...	10,729—32	53,218—72	63,948—04	31,974—02	31,974—02
1961 July to 1962 June	...	31,204—87	60,723—14	91,928—01	45,964—01	45,964—00
Total	...	1,38,357—95	3,30,070—80	4,68,428—75	2,34,214—38	2,34,214—37

(ii) Receipts realised since the inception of the Scheme till June 1962.

Year		Amount	Share of I.C.A.C.	Share of State Government
		Rs. nP.	Rs. nP.	Rs. nP.
1953—54	...	452—20	226—10	226—10
1954—55	...	13,963—77	6,981—89	6,981—88
1955—56	...	15,467—27	7,733—63	7,733—64
1956—57	...	18,785—94	9,392—97	9,392—97
1957—58		19,884—64	9,942—32	9,942—32
1958—59	...	19,941—40	9,970—70	9,970—70
1959—60	...	24,919—59	12,459—79	12,459—80
1960 April to 1960 June	...	195—83	97—92	97—91
1960 July to 1961 June	...	25,807—47	12,903—73	12,903—74
1961 July to 1962 June	...	29,763—25	14,881—63	14,881—62
Total	...	1,69,181—36	84,590—18	84,590—18

ಶ್ರೀ ಎಸ್. ಗೋಪಾಲ ಗೌಡ.—ಇಲ್ಲಿಯತನಕ ಸರ್ಕಾರದವರು ನಡೆಸುತ್ತಿರುವ ಪರಿಶೋಧನೆಗಳ ಫಲಿತಾಂಶ ಏನೆಂಬುದು ಸರ್ಕಾರದವರಿಗೆ ತಿಳಿದುಬಂದಿದೆಯೇ ?

†ಶ್ರೀ ಎಚ್. ಸಿ. ಬೋರಯ್ಯ.—ಫಲಿತಾಂಶವೇನೆಂಬುದನ್ನು ಪುಸ್ತಕ ರೂಪದಲ್ಲಿ ಅಚ್ಚು ಹಾಕಿಸಿ ಜನರಿಗೆ ಹಂಚಲಾಗುತ್ತಿದೆ. ಸಭೆಗಳನ್ನು ಕರೆದು ಜನಗಳಿಗೆ ಈ ವಿಚಾರದಲ್ಲಿ ತಿಳಿವಳಿಕೆಯನ್ನು ಕೊಡಲಾಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಯಾವ ಭಾಷೆಯಲ್ಲಿ ಅಚ್ಚು ಹಾಕಿಸುತ್ತೀರಿ, ಅಡಕೆ ಬೇಸಾಯಗಾರರಿಗೆ ಕರಪತ್ರಗಳ ಮೂಲಕ ಅಥವಾ ಸಣ್ಣ ಪುಸ್ತಕಗಳ ಮೂಲಕ ಏನಾದರೂ ಅಚ್ಚು ಹಾಕಿಸಿ ಅವರಿಗೆ ಹಂಚುತ್ತಿದ್ದೀರಾ, ಅಥವಾ ವರ್ಷಕ್ಕೊಮ್ಮೆ ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಇಂಗ್ಲೀಷಿನಲ್ಲಿ ಅಚ್ಚು ಹಾಕಿಸತಕ್ಕ ರಿಪೋರ್ಟಿನ ವಿಚಾರವನ್ನು ಹೇಳುತ್ತಿದ್ದೀರೋ ?

ಶ್ರೀ ಎಚ್. ಸಿ. ಬೋರಯ್ಯ.—ಪ್ರದೇಶ ಭಾಷೆಯಲ್ಲೇ ಅಚ್ಚುಹಾಕಿಸಿ ಹಂಚಲಾಗುತ್ತಿದೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಮುಂಡಿಗೆ ರೋಗ ಮತ್ತು ಕೊಳೆ ರೋಗಗಳ ನಿವಾರಣೆಗೆ ಏನು ಔಷಧಿಗಳನ್ನು ಕಂಡುಹಿಡಿದಿದ್ದಾರೆ ?

ಶ್ರೀ ಎಚ್. ಸಿ. ಬೋರಯ್ಯ.—ಕೊಳೆ ರೋಗಕ್ಕೇನೂ ಸಂಪೂರ್ಣ ಪರಿಶೋಧನೆ ನಡೆದಿದೆ. ಮುಂಡಿಗೆ ರೋಗಕ್ಕಿನ್ನೂ ಈಗ ನಡೆಯುತ್ತಿದೆ. ಇದರ ಫಲಿತಾಂಶವಿನ್ನೂ ಹೊರಬಿದ್ದಿಲ್ಲ.

Posting of a Munsiff to Gangavathi Court in Raichur District.

*Q.—687. Sri THIRUMALADEVARAYALU RANGADEVARAYALU (Gangavathi).—

Will the Government be pleased to state :—

(a) whether they are aware that no Munsiff has been posted at Gangavathi, Raichur District, since the previous Munsiff retired on 2nd January 1963 ;

(b) whether they are aware of the difficulties confronting the litigant public for want of a Munsiff-Magistrate therefor the last two-and-a-half months ;

(c) whether they intend to take immediate action to post a Munsiff to the Gangavathi Court without any further delay ?

A.—Sri M. V. RAMA RAO (Minister for Law).—

(a) Yes.

(b) Yes.

(c) The High Court have since posted a Munsiff-Magistrate to the Gangavathi Court.

Sri THIRUMALADEVARYALU RANGADEVARAYALU.—What wa the cause for the delay, Sir ?

† Sri M. V. RAMA RAO.—The delay is due to the vacancy having arisen and no candidate being available for filling it up immediately.

Representation received from the Pensioners of the State praying for certain relief.

* *Q.*—698. Sri P. F. D'MELLOW (Nominated).—

Will the Government be pleased to state :—

(*a*) whether there has been any communication from the Central Government to State Government concerning representations received by that Government from its pensioners praying for certain relief ;

(*b*) whether Government is aware of the economic distress experienced by their pensioned employees due to the steep rise in the cost of living, and if so, whether Government intend to take any steps to ameliorate their condition ;

(*c*) whether Government have received any representations from their pensioners in the State praying for an increase in the dearness allowance, and extension of suitable concessions in regard to medical and educational facilities for their children and dependants ?

A.—Sri B. D. JATTI (Minister for Finance).—

(*a*) No such communication has been received from the Government of India. But representations received by the Government of India from the Pensioners' Associations, have been forwarded to this Government for disposal.

(*b*) Government have already taken steps to afford as much relief as possible consistent with the financial resources of the State.

(*c*) Yes.

Sri P. F. D'MELLOW.—Sir, what is the nature of the representations ?

Sri B. D. JATTI.—The representations were and are for increasing the dearness allowance.

Mr. SPEAKER.—Held over Question No. 621 may be taken up.

Master plan for Greater Mangalore.

* *Q.*—621. Sri SANJEEVANATH AIKALA (Suratkal).—

Will the Government be pleased to state :—

(*a*) whether a Master plan for Greater Mangalore has been prepared ;

(*b*) if so, what is the extent of area proposed to be covered and the names of the subarban villages proposed to be covered in this Greater Mangalore Plan ?

A.—Sri K PUTTASWAMY (Minister for Municipal Administration).—

(*a*) No.

(*b*) Does not arise in view of reply to clause (*a*)

Sri K. PUTTASWAMY.—Sir, after the answer to this question were sent to your office, Government have recevied the outline development plan for Mangalore City. Therefore, I have to correct the answers given here.

For question (*a*), the answer is 'Yes'.

For (*b*), the proposed extent of land is about 62 sq. miles which includes about 28 sq. miles water log and river area. I will read the names of villages which are 35 in number if the claim permits.

Mr. SPEAKER.—It may be laid on the Table.

Sri SANJEEVANATH AIKALA.—May I know the main recommendations of that Master plan?

Sri K. PUTTASWAMY.—Sir, Government have recently received this Master-plan and the main recommendations are that we have to develop the land usage extending to about 62 sq. miles and we have to restrict the land usage to industrial areas and other areas. We are examining all that.

Mr. SPEAKER—I suggest that the Report may be placed on the Table so that Members may look into it.

Sri K. PUTTASWAMY.—Yes, Sir.

Sri C. J. MUCKANNAPPA.—May I know whether Government have such Master-plans for all places where the population is more than 50,000?

Sri K. PUTTASWAMY.—Sir, Government have an estimate on hand costing about 31 lakhs for preparing Master-plan for all the towns having a population of over 50,000.

Sri A. KRISHNA SHETTY.—Has it come to the notice of Government that the Mangalore Municipality has been kept in the dark about this Master-plan?

Sri K. PUTTASWAMY.—That is not a fact. The Mangalore Municipality was closely in touch with this.

Corporation land in Harischandraghat (Srirampuram) alienated by the Revenue Department.

**Q*.—651. Sri K. DEVAIAH (Malleswaram).—

Will the Government be pleased to state:—

(*a*) Whether they are aware that the Corporation land on the western side of Lingayat burial ground in Harischandraghat (Srirampuram) has been alienated by the Revenue Department by having a Khata given in the name of a private person;

(*b*) the amount spent by the City Improvement Trust Board and the Corporation for filling up the said land and hallas therein;

(*c*) whether it was a fact that the Corporation authorities while enclosing the Lingayat burial ground, had left out the sloping ground with the old public fountain, towards the big halla;

(*d*) whether it is a fact that the Corporation authorities have been prevented from forming the circle for the turning of buses and cars at that point ;

(*e*) whether they are aware that the land in question is made up of a portion of the land acquired for the burial ground and that portion where there was a big water way ?

A.—Sri K. PUTTASWAMY (Minister for Municipal Administration).—

(*a*) A khata has been registered in the name of Sri Motappa for 7 guntas of Phut Kharab land.

(*b*) About Rs. 500 by the Corporation. No amount was spent by the City Improvement Trust Board.

(*c*) Yes.

(*d*) Yes.

(*e*) No.

1-30 P.M.

ಶ್ರೀ ಕೆ. ದೇವಯ್ಯ.—ಐನೂರು ರೂಪಾಯಿಗಳು ಮಾತ್ರ ಖರ್ಚಾಗಿವೆ ಎಂದು ಉತ್ತರದಲ್ಲಿದೆ. ಆದರೆ 1961-62ನೆಯ ಸಾಲಿನ ಬಡ್ಜೆಟ್ಟಿನ ಐಟಂ 13 ಮತ್ತು 15 ರಲ್ಲಿ 1,500 ಮತ್ತು 2,000 ಖರ್ಚು ಮಾಡಿದೆ ಎನ್ನುವುದು ಸರಕಾರದ ಗಮನಕ್ಕೆ ಬಂಧಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಕಾರ್ಪೊರೇಷನ್ ಮೆಂಬರಾಗಿದ್ದವರು, ಅವರಿಗೆ ಇದರ ವಿಚಾರವೆಲ್ಲಾ ಚೆನ್ನಾಗಿ ಗೊತ್ತಿರಬಹುದು. ನನ್ನಲ್ಲಿ ಈಗ ಆ ವಿವರಗಳು ಇಲ್ಲ.

ಶ್ರೀ ಕೆ. ದೇವಯ್ಯ.—ಟ್ರಸ್ಟ್ ಬೋರ್ಡಿನವರು ಹೇಳುವಂತೆ ಲಿಂಗಾಯಿತರ ಸ್ಮಶಾನ ಭೂಮಿಗೆ ಪಶ್ಚಿಮದಲ್ಲಿರುವ ಹಳ್ಳವನ್ನು ತುಂಬುವುದಕ್ಕಾಗಿ ಏನೂ ಖರ್ಚು ಮಾಡಿಲ್ಲ ಎಂದರೆ ಸರಿಯೇ ? ಅಲ್ಲಿ ಎಂಟು ಅಡಿ ಗೋಡೆಯನ್ನು ಕಟ್ಟಿ ಹಳ್ಳವನ್ನು ತುಂಬಲು ಸುಮಾರು 1,000 ರೂಪಾಯಿಗಳಷ್ಟು ಖರ್ಚನ್ನು ಸ್ವತಃ ನಾನೇ ವಿಚಕ್ಷಣೆಯಿಂದ ಮಾಡಿಸಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರೇ ವಿಚಕ್ಷಣೆಯಿಂದ ಮಾಡಿಸಿರುವುದರಿಂದ ನಾನು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ವಿಚಾರಿಸುತ್ತೇನೆ.

ಶ್ರೀ ಕೆ. ದೇವಯ್ಯ.—ಸಾರ್ವಜನಿಕ ಕ್ಷೇತ್ರದಲ್ಲಿ ಚುನಾವಣೆಯಾದ ಯಾರೇ ಆಗಲೀ ಆ ಕ್ಷೇತ್ರದ ಜನಗಳ ಒಳ್ಳೆಯದಕ್ಕಾಗಿ ಕೆಲಸ ಮಾಡುತ್ತಿದ್ದರೂ, ಇಂತಹ ಅನ್ಯಾಯಗಳು ನಡೆಯಬಹುದೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಿಗೆ ಯಾವ ಅನ್ಯಾಯವಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಹಾಗೇನಾದರೂ ಅನ್ಯಾಯವಾಗಿದ್ದರೆ ಅವರ ಹಕ್ಕು ಬಾಧ್ಯತೆಗಳನ್ನು ನಾವು ರಕ್ಷಣೆ ಮಾಡಲು ಪ್ರಯತ್ನ ಮಾಡಬೇಕಾಗಿದೆ.

ಶ್ರೀ ಕೆ. ದೇವಯ್ಯ.—ಬರೀ 12 ಅಡಿ ರೋಡನ್ನು ಬಿ. ಟಿ. ಎಸ್. ಟರ್ಮಿನಸ್ ಸರ್ಕಲ್ಲನ್ನು ಮಾಡುವುದಕ್ಕಾಗಿ ಸುಮಾರು 2,000 ರೂಪಾಯಿಗಳ ಅಂದಾಜಾಗಿದ್ದು ನಿಂತು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಒಂದು ಸರ್ಕಲ್ಲನ್ನು ಮಾಡಬೇಕೆಂದು ಇತ್ತು. ಅಲ್ಲಿ ಜಮೀನು ಮೋಟಪ್ಪ ಎನ್ನುವವರ ಹೆಸರಿಗೆ ಖಾತೆಯಾಗಿದೆ ಮತ್ತು ಅವರ ಹೆಸರಿಗೆ 7 ಗುಂಟೆಗಳಷ್ಟು ಮಾತ್ರ ಆಗಿದೆ. ಇತ್ತೀಚೆಗೆ ಪರಿಶೀಲನೆ ಮಾಡಿದಾಗ 7 ಗುಂಟೆಯಷ್ಟು ಜಮೀನಿಲ್ಲ, ಕೇವಲ ಮೂರೂವರೆ ಗುಂಟೆಯಷ್ಟು ಜಮೀನು ಮಾತ್ರ ಇದೆ ಮತ್ತು ಸರ್ಕಲ್ಲಿಗೆ ಸೇರುವ ಜಮೀನೂ ಇಲ್ಲದೆ ಎಂದು ಗೊತ್ತಾಗಿದೆ. ಇದರ ಬಗೆಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

QUESTIONS FOR ANSWERS ON THE DAY

(but not taken up)

Supply of Water from the Bhadra Right Bank Channel.

*Q.—177. Sri KUNDUR RUDRAPPA (Channagiri).—

Will the Government be pleased to state :—

(a) whether it is not intended to give water from Bhadra Right Bank Channel by completing the same by the end of 1962 ;

(b) whether the work has been completed and water given ;

(c) if not, when the work would be completed and water is given for irrigation ?

A.—Sri S. NIJALINGAPPA (Chief Minister).—

(a) No.

(b) The work has been completed up to mile 47 and water has been allowed for irrigation.

(c) The entire work is programmed for completion by 1965-66.

Major and Minor Tanks in Chickanayakanahalli Taluk.

*Q.—611. Sri C. N. LINGADEVARU (Chickanayakanahalli).—

Will the Government be pleased to state :—

(a) the number of major and minor tanks in Chickanayakanahalli taluk ;

(b) out of them, the names of tanks that require to be restored and the atchkat area of each of the tanks ;

(c) the names of tanks which have been restored ?

A.—ALUR HANUMANTHAPPA (Deputy Minister for Minor Irrigation).—

(a) Major tanks ... 34

Minor Tanks ... 80

(b) Vide statement 'A' given below.

(c) Vide statement 'B' given below.

STATEMENT 'A'.

List of Tanks to be restored in Chickanaikanahalli Taluk.

Sl. No.	Names of Tanks	Total Atchkat
1	Ajjigudde tank	15.00
2	Bidarakatte tank	15.00
3	Belavadi tank	111.00
4	Bangaragere tank	118.00
5	Kyathanayakanahalli tank	12.00
6	Kardikere Hirikere tank	305.00
7	Nonavinakere	298.00
8	Belaguli tank	195.00
9	Todibesaralli tank	80.00
10	Byalakere Chikkere	105.00
11	Baragur tank	21.00
12	Somanahalli tank	20.00
13	K nkere Hosakere	28.04
14	Venkatiabanakere Godagere	32.00
15	Handanakere Halekere	74.00
16	Malligere tank	60.00
17	Belagihalli tank	31.00
18	Dabbegatta tank	89.13
19	Yelandu tank	38.00
20	Manchasandra tank	112.00
21	Thimmalapura tank	700.00

STATEMENT 'B'.

List of Tanks restored in Chicknayakanahalli Taluk, Tumkur District.

Names of the tanks

1 Kodlagarakatte.
2 Soralamavu tank.
3 Hosakere tank.
4 Seegebagi tank.
5 Kuppur tank.
6 Korager tank.
7 Bommanakatte.
8 Gopalapura tank.
9 Kodihalli tank.
10 Hesarahalli tank.
11 Kallenahalli Bommanakatte.
12 Ramagatta tank.

Taluk Agricultural Produce Marketing Co-operative Society, Ltd., Channapatna.

*Q.—635. Sri B. J. LINGE GOWDA (Channapatna).—

Will the Government be pleased to state :—

(a) when the Taluk Agricultural Produce Marketing Co-operative Society, Ltd., Channapatna, was registered ;

(b) what is the total amount of subsidy given to this Society from starting of this Society up-to-date ;

(c) what is the total reserve of this Society and how this amount is invested ;

(d) what is the total profit earned by this Society from the starting of it ?

A.—Sri RAMAKRISHNA HEGDE (Minister for Co-operation and Development).—

(a) Channapatna Taluk Multi-purpose Co-operative Society, Ltd., which was registered on 6th April 1949 was converted into Taluk Agricultural Produce Co-operative Marketing Society, on 24th March 1958.

(b) Rs. 27,500.

(c) Rs. 10,015-40 nP. and this amount has been invested in the purchase of shares of different co-operative institutions and Government securities.

(d) Rs. 48,962-78 nP.

Total number of sanctioned beds in Victoria Hospital, Bowring Hospital, Bangalore and Hubli Hospital and Mangalore Wenlock Hospital.

*Q.—691. Sri M. MADHAVARAJ (Udipi).—

Will the Government be pleased to state :—

the total number of sanctioned beds in—

1 Victoria Hospital, Bangalore,
2 Bowring Hospital, Bangalore,
3 Hubli Hospital, and
4 Wenlock Hospital, Mangalore ?

A.—Sri K. NAGAPPA ALVA (Minister for Health).—

1	Victoria Hospital	...	710
2	Bowring Hospital	...	590
3	Hubli Hospital and	...	450
4	Wenlock Hospital	...	505

Member's Representations

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಪ್ರಶ್ನೆಗಳ ಪಟ್ಟಿಗಳು ಈ ಸಭೆಯ ಮೇಜಿನ ಮೇಲಿಡಲ್ಪಡುತ್ತಿವೆ. ಕೊನೆಯ ಪಕ್ಷ ಪ್ರಶ್ನೆಗಳ ಪ್ರತಿಗಳನ್ನು ಸದಸ್ಯರಿಗೆ ನಾಲ್ಕು ಗಂಟೆಗಳ ಮುಂಚಿತವಾಗಿ ತಲುಪುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Answers cannot be given to the Hon'ble Members the previous day. In certain Assemblies answers are not at all given in advance. They are given only on the floor of the House. But to facilitate relevant supplementaries being put, we are giving it at least on the same day.

ಶ್ರೀ ಎಸ್. ಗೋಪಾಲ ಗೌಡ.—ಕೊನೆಯ ಪಕ್ಷ ಇಂತಿಂಥವರ ಪ್ರಶ್ನೆ ಇಲ್ಲಿಗೆ ಬರುತ್ತದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕಾದರೂ ಒಂದು ದಿನ ಮುಂಚಿತವಾಗಿ ಪ್ರಶ್ನೆಗಳು ಸಿಕ್ಕುವುದಿಲ್ಲ. ನಾವು ಇಲ್ಲಿಗೆ ಬಂದಮೇಲೆ ಇಂತಹ ಪ್ರಶ್ನೆ ಬರುತ್ತದೆ ಎಂದು ನೋಡಿಕೊಳ್ಳುವುದು ಎಂದರೆ ಬಹಳ ತೊಂದರೆಯಾಗುತ್ತದೆ.

Mr. SPEAKER.—Is it not put in the pigeon hole the previous evening? If Members walk away before the adjournment of the House, what can I do? Does Sri Gopal Gowda say that he does not find the agenda in the pigeon hole at the end of the day?

Sri S. GOPALA GOWDA.—They are not to be found, Sir.

Mr. SPEAKER.—There are other Members. They will testify. I will hold an enquiry into it and let the House know about it.

Sri G. DUGGAPPA (Holalkere).—The list of questions is put the previous day, and not the answers.

Mr. SPEAKER.—I have already said that answers cannot be given the previous day.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಇದನ್ನು ನಮ್ಮ ರೂಲ್ಸುಗಳಲ್ಲಿ ಯೆಲ್ಲ ಪ್ರೊವೈಡು ಮಾಡಲಾಗಿದೆ.

Mr. SPEAKER.—That rule is being complied with.

† ಶ್ರೀ ಎಸ್. ಗೋಪಾಲ ಗೌಡ.—ಸ್ವಾಮೀ, ಇನ್ನೊಂದು ವಿಷಯ ಇದೆ. ಒಮ್ಮೆ ಈ ಸಭೆ ನಡೆಯುತ್ತಿರುವಾಗ ಮಂತ್ರಿಗಳು ಅದರಲ್ಲೂ ಮುಖ್ಯವಾಗಿ ಈ ಸಭೆಗೆ ಹೇಳಿಕೆ ಕೊಡುವುದಕ್ಕೆ ಮುಂಚೆ ಪತ್ರಿಕೆಗಳ ಮೂಲಕ ತಮ್ಮ ಹೇಳಿಕೆಯನ್ನು ಕೊಡಕೂಡದು ಎನ್ನುವ ಪದ್ಧತಿ ಇದೆ. ಈಚೆಗೆ ನಮ್ಮ ಮರಾಮತ್ತು ಶಾಖಾ ಮಂತ್ರಿಗಳು ದೆಹಲಿಗೆ ಹೋಗಿ ಬಂದಮೇಲೆ ಈ ಸಭೆಗೆ ಅಂತಹ ಮುಖ್ಯವಾದ ಹೇಳಿಕೆಗಳನ್ನು ಕೊಡಬೇಕಾಗಿತ್ತು. ಹಾಗೆ ಮಾಡದೆ ಅವರು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಬಗ್ಗೆ ಒಂದು ಹೇಳಿಕೆಯನ್ನು ಪತ್ರಿಕೆಗಳ ಮುಖೇನ ಕೊಟ್ಟಿರುವುದನ್ನು ಪತ್ರಿಕೆಗಳಲ್ಲಿ ಎಲ್ಲರೂ ಓದಿದ್ದಾರೆ.

Mr. SPEAKER.—Will the Hon'ble Member let me know if he is raising a point of order?

ಶ್ರೀ ಎಸ್. ಗೋಪಾಲ ಗೌಡ.—ಈ ರೀತಿಯಾಗಿ ಸರ್ಕಾರದ ಪರವಾಗಿ ಮಂತ್ರಿಗಳು ಹೇಳಿಕೆಯನ್ನು ಪತ್ರಿಕೆಗಳ ಮೂಲಕ ಕೊಡುತ್ತಿರುವುದನ್ನು ನಾವು ಪ್ರತಿ ದಿವಸವೂ ನೋಡುತ್ತಿರುತ್ತೇವೆ. ಇದನ್ನು ತಮ್ಮ ಗಮನಕ್ಕೆ ಏಕೆ ತರಬೇಕಾಗಿದೆ ಎಂದರೆ ಮಾನ್ಯ ಮಂತ್ರಿಗಳಿಗೆ ಎಷ್ಟರಮಟ್ಟಿನ ಆಸಕ್ತಿ ಇದರ ಬಗ್ಗೆ ಇದೆಯೋ ಅದಕ್ಕಿಂತಲೂ ಹೆಚ್ಚಿನ ಆಸಕ್ತಿ ದೇಶದ ಆಗುಹೋಗುಗಳನ್ನು ತಿಳಿದುಕೊಳ್ಳಲು ಈ ಸಭೆಗೂ ಇದೆ. ಅದೂ ಈಗ ಸಭೆ ನಡೆಯುತ್ತಿರುವಾಗ ಇಂತಹ ಹೇಳಿಕೆಗಳನ್ನು ಈ ಸಭೆಗೆ ಮೊದಲು ತಿಳಿಸುವುದು ಉಚಿತವಾಗಿದೆ ಎನ್ನುವುದನ್ನು ಮಂತ್ರಿಗಳಿಗೆ ತಾವು ತಿಳಿಸಬೇಕು ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

Mr. SPEAKER.—Hereafter I will make it a point not to allow any Hon'ble Member to raise any point which was not mentioned to me previously. I allowed this because I did not want to appear discourteous. But if Hon'ble Members get up and go on repeating the same point, what is the use? This point is being brought here for the N'th time. I have already given a ruling and I can only refer the Hon'ble Member to that rule. All these things are taking up so much of the time of the House.

(*Several Members rose.*)

I am not allowing any new point.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಸಭೆ 12-30 ಗಂಟೆಯಿಂದ ಸೇರುತ್ತಿರುವಾಗ "ಟೀ ಬ್ರೇಕ್"ಗಾಗಿ ಅವಕಾಶವನ್ನು ಏಕೆ ಮಾಡಬಾರದು?

ಅಧ್ಯಕ್ಷರು.—ಸದಸ್ಯರು ಮಾತನಾಡಲು ಹೆಚ್ಚಿನ ಅವಕಾಶ ಸಿಕ್ಕುತ್ತದೆ ಎಂದು ಯೋಚನೆ ಮಾಡಿ ಹೀಗೆ ಮಾಡಲಾಗಿದೆ.

I have no objection. The time was extended just to enable more Members to participate. If the Members do not want it, I do not want to embarrass them. This is not a point which should be raised now. It could be talked over outside.

Sri C. J. MUCKANNAPPA.—A majority of the Members are whispering outside and that is why I brought it here.

Sri S. SIVAPPA (Sravanabelagola).—The point raised by Sri Gopala Gowda has not been answered by the P. W. Minister. He had been to Delhi during the sessions of the House and he has made a press statement on an important matter. It would have been better if he had taken us into confidence before doing so.

Mr. SPEAKER.—Next item. Laying of Papers.

PAPERS LAID ON THE TABLE.

Sri RAMAKRISHNA HEGDE.—I beg to lay Notification No. DRL 52 VAD 62, dated 26th July 1963 (Amendments to the Mysore Village Panchayats Declaration of Villages (Procedure) Rules, 1959) as required under Section 246 of the Mysore Village Panchayats and Local Boards Act, 1959.

MYSORE RELIGIOUS AND CHARITABLE INSTITUTIONS AND TRUSTS BILL, 1962.

Motion to consider (Debate contd.)

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ನಿನ್ನೆ ಮತ್ತು ಮೊನ್ನೆ ನಡೆದ 7 ಗಂಟೆ ಚರ್ಚೆಯಲ್ಲಿ ಧಾರ್ಮಿಕ ಮತ್ತು ದಾನೀಯ ಸಂಸ್ಥೆಗಳ ಮಸೂದೆಯನ್ನು ಮಾನ್ಯ ಸದಸ್ಯರುಗಳು ಸ್ವಾಗತಿಸುತ್ತಾ ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಮಾನ್ಯ ಸಭೆಯ ಸದಸ್ಯರಿಗೆ ಗೊತ್ತಿದೆ, ಇದು ಬಹಳ ಮುಖ್ಯವಾದ ಒಂದು ಕಾನೂನು ಎಂದು.

ಈ ಧಾರ್ಮಿಕ ಮತ್ತು ದಾನೀಯ ಸಂಸ್ಥೆಗಳು ಸಾರ್ವಜನಿಕವಾದುವು. ಈ ಸಂಸ್ಥೆಗಳಿಗೆ ಉತ್ಪತ್ತಿ ಸಾರ್ವಜನಿಕರಿಂದ ಬರುವುದು. ಆದ್ದರಿಂದ ಸಾರ್ವಜನಿಕರಿಂದ ಬರುವ ಉತ್ಪತ್ತಿಯನ್ನು ಆ ಸಂಸ್ಥೆಗಳ ಸ್ಥಾಪಕರು ಯಾವ ಮೂಲ ಉದ್ದೇಶಕ್ಕೆ ಉಪಯೋಗವಾಗಬೇಕು ಎಂದು ಮಾಡಿದರೋ ಆ ಉದ್ದೇಶಗಳು ನೆರವೇರುವುದಕ್ಕೆ ಉಪಯೋಗಿಸಿಕೊಳ್ಳಬೇಕು. ಆ ಸಂಸ್ಥೆಗಳ ಉತ್ಪತ್ತಿ ದುರುಪಯೋಗವಾಗಲು ಯಾವ ಸರಕಾರ ಕೂಡ ಆಸ್ಪದ ಕೊಡಕೂಡದು.

ತತ್ವದ ಮೇಲೆ ಮಾನ್ಯ ಸದಸ್ಯರೆಲ್ಲರೂ ಕೂಡ ಈ ಬಿಲ್ಲಿಗೆ ಸ್ವಾಗತ ಕೊಟ್ಟು, ಇದನ್ನು ಬಹಳ ಬೇಗ ಪಾಸುಮಾಡಿ, ಜಾರಿಗೆ ತರಬೇಕು ಎಂದು ಸಲಹೆಗಳನ್ನು ಕೊಟ್ಟಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು. ಮಾನ್ಯ ಸದಸ್ಯರಿಗೆ ನನ್ನ ಭರವಸೆ ಏನೆಂದರೆ ಇದನ್ನು ಸಾಧ್ಯವಾದಷ್ಟು ಬೇಗ ಮಾನ್ಯ ಸಭೆಯಲ್ಲಿ ಪಾಸುಮಾಡಿ, ಜಾರಿಗೆ ಕೊಡುವುದಕ್ಕೆ ಪ್ರಯತ್ನಪಡುತ್ತೇನೆ ಮತ್ತು ಮಾನ್ಯ ಸದಸ್ಯರು ಕೊಟ್ಟಿರುವ ಎಲ್ಲಾ ಸಲಹೆಗಳನ್ನು ಸೆಲೆಕ್ಟ್ ಕಮಿಟಿಯಲ್ಲಿ ಗಮನಕ್ಕೆ ತೆಗೆದುಕೊಂಡು ಸೂಕ್ತವಾದ ತಿದ್ದುಪಾಟು ಮಾಡುತ್ತೇವೆ.

ಎರಡನೆಯದಾಗಿ, ಈ ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸಿದ ಮೇಲೆ ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಡಾ|| ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ನೇತೃತ್ವದಲ್ಲಿ ಒಂದು ಹಿಂದು ರಿಲಿಜಿಯಸ್ ಅಂಡ್ ಎಂಡೋಮೆಂಟ್ ಕಮಿಷನ್ ನೇಮಕ ಮಾಡಿದ್ದರು. ಅವರ ವರದಿ ಕೂಡ ಬಂದಿದೆ. ಅವರು ಹಿಂದು ಧರ್ಮ ಸಂಸ್ಥೆಗಳ ಬಗ್ಗೆ ಬಹಳ ಒಳ್ಳೆಯ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಡಾ|| ರಾಮಸ್ವಾಮಿ ಅಯ್ಯರ್‌ರವರು ಬಹಳ ಅನುಭವಿಗಳು, ಆಡಳಿತದಲ್ಲಿ ವಿಶೇಷ ಜ್ಞಾನ, ಅನುಭವವುಳ್ಳವರು. ದೇಶದಲ್ಲೆಲ್ಲಾ ಸುತ್ತಾಡಿ, ಅನೇಕ ಸಂಸ್ಥಾನಗಳಲ್ಲಿ ಎವಿಡೆನ್ಸ್ ತೆಗೆದುಕೊಂಡು, ಅನೇಕ ಸಂಸ್ಥೆಗಳಿಗೆ ಭೇಟಿಕೊಟ್ಟು ಬಹಳ ಉಪಯುಕ್ತವಾದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿಯನ್ನು ಕೂಡ ನಾವು ಗಮನಕ್ಕೆ ತೆಗೆದುಕೊಂಡು ಕಾನೂನಿನಲ್ಲಿ ಕೆಲವು ತಿದ್ದುಪಾಟುಗಳನ್ನು ಮಾಡಬೇಕಾಗಿದೆ. ಇದನ್ನು ಮಾನ್ಯ ಸದಸ್ಯರು ಸೆಲೆಕ್ಟ್ ಕಮಿಟಿಯಲ್ಲಿ ಯೋಚನೆ ಮಾಡುತ್ತಾರೆ ಎಂದು ಈ ಸಭೆಗೆ ನಾನು ಭರವಸೆ ಕೊಡುತ್ತೇನೆ. ಮತ್ತು ಈ ಬಿಲ್ಲನ್ನು ಸ್ವಾಗತಿಸುವಾಗ ಕೊಟ್ಟ ಒಂದೆರಡು ಸಲಹೆಗಳು ಮತ್ತು ಎತ್ತಿದ ಆಕ್ಷೇಪಣೆಗಳ ಬಗ್ಗೆ ಮಾತ್ರ ಉತ್ತರಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

ಸರ್ವಸಾಮಾನ್ಯವಾಗಿ ಎಲ್ಲ ಸದಸ್ಯರೂ ಈ ಮಸೂದೆಯನ್ನು ಸ್ವಾಗತಿಸಿದರು. ಆದರೆ ಸ್ವಾಗತಿಸುವಾಗ ಕೆಲವು ವಿರೋಧಾಭಿಪ್ರಾಯಗಳು, ಭಿನ್ನಾಭಿಪ್ರಾಯಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ. ಇಂಥ ಮಹತ್ತರವಾದ ಬಿಲ್ಲಿನ ವಿಷಯದಲ್ಲಿ ಆ ದೃಷ್ಟಿಯಿಂದ ಕೆಲವು ಸದಸ್ಯರು ಕೆಲವು ಸಲಹೆಗಳನ್ನು ಕೊಡುವಾಗ ಅವರಿಗೆ ಒಂದು ಸಂಶಯ ಬಂದಹಾಗೆ ಇದೆ. ಅದೇನೆಂದರೆ ಸರಕಾರ ಕೆಲವು ಧರ್ಮ ಸಂಸ್ಥೆಗಳಿಗೆ, ದೇವಸ್ಥಾನಗಳಿಗೆ ಒಳ್ಳೆಯ ಸ್ಥಳವಸತಿ ಕೊಟ್ಟು, ರಸ್ತೆಮಾಡಿ, ದೀಪ ಹಾಕಿ, ಜನಗಳು ಅಲ್ಲಿಗೆ ಹೆಚ್ಚಾಗಿ ಬರುವಹಾಗೆ ಮಾಡಿಕೊಂಡು ಅದರಿಂದ ಬಂದ ಉತ್ಪನ್ನವನ್ನು ಖಜಾನೆಗೆ ತೆಗೆದುಕೊಂಡುಬಿಡುತ್ತಾರೆ ಎಂಬ ಅಂಶವನ್ನು ಹೇಳಿದರು. ಈ ರೀತಿಯಾದಂಥ ಭಾವನೆ ಸರ್ಕಾರಕ್ಕೆ ಇಲ್ಲ, ಸರ್ಕಾರಕ್ಕೆ ಆ ಹಣದ ಆಸೆ ಇಲ್ಲ. ಧರ್ಮಸಂಸ್ಥೆಗಳ ಇಲಾಖೆಗೆ ಇನ್ನೂ ಆಗಾಗ ಗ್ರಾಂಟುಗಳನ್ನು ಕೊಡುತ್ತಾರೆಯೇ ವಿನಾ ದೇವಸ್ಥಾನಗಳು ಮತ್ತು ಇತರ ಧಾರ್ಮಿಕಸಂಸ್ಥೆಗಳಿಗೆ ಬಂದ ಹಣವನ್ನು ಸರಕಾರ ತೆಗೆದುಕೊಂಡು ಇತರ ಕಾರ್ಯಕ್ರಮಗಳಿಗೆ ಉಪಯೋಗಿಸಬೇಕು ಎನ್ನುವ ಇರಾದೆ ಇಲ್ಲ.

ಅವತ್ತು ನಾನು ಪ್ರಾಸಂಗಿಕವಾಗಿ ಭಾಷಣ ಮಾಡುತ್ತಾ ಹೇಳಿದೆ ನಮ್ಮ ಮೈಸೂರು ಸಂಸ್ಥಾನದಲ್ಲಿ 7-8 ಸ್ಥಳಗಳಿವೆ, ಅವುಗಳನ್ನು ಒಳ್ಳೆಯ ಅಭಿವೃದ್ಧಿಗೆ ತರಬೇಕೆನ್ನುವುದು ನಮ್ಮ ಉದ್ದೇಶ ಎಂದು. ತಿರುಪತಿ ಮತ್ತು ಶ್ರೀ ಶೈಲವನ್ನು ಆಂಧ್ರ ಸರಕಾರದವರು ಅಭಿವೃದ್ಧಿಮಾಡಿ ಕೋಟ್ಯಾಂತರ ರೂಪಾಯಿ ಉತ್ಪತ್ತಿ ಮಾಡಿಕೊಂಡಿದ್ದಾರೆ. ಆ ಉತ್ಪತ್ತಿಯಿಂದ ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾನಿಲಯವನ್ನು ಅಲ್ಲದೆ ಮೆಡಿಕಲ್ ಕಾಲೇಜುಗಳು, ಇಂಜನಿಯರಿಂಗ್ ಕಾಲೇಜುಗಳು, ವೆಟರಿನರಿ ಕಾಲೇಜು, ಸಾಂಸ್ಕೃತಿಕ ಸಂಸ್ಥೆಗಳು ಮುಂತಾದುವನ್ನು ದೇವಸ್ಥಾನದ ಹೆಸರಿನಲ್ಲಿ ನಡೆಸುತ್ತಿದ್ದಾರೆ. ದೇವರಿಗೆ ಖರ್ಚುಮಾಡಿ ಮಿಕ್ಕದ್ದನ್ನು, ಅಂದರೆ, ಸರ್‌ಪ್ಲಸ್ ಫಂಡುಗಳನ್ನು, ಒಳ್ಳೆಯ ಕೆಲಸಗಳಿಗೆ ಈ ರೀತಿ ಉಪಯೋಗಿಸುತ್ತಾರೆ. ಭಕ್ತರು ಕೊಟ್ಟ ಹಣ ಭಕ್ತರಿಗೇ ಸದ್ವಿನಿಯೋಗವಾಗುತ್ತದೆ. ದೇವಸ್ಥಾನಗಳಿಗೆ ಹೆಚ್ಚಿಗೆ ಉತ್ಪತ್ತಿಯಾಗುತ್ತದೆ. ದೇವಸ್ಥಾನಗಳನ್ನು ಅಭಿವೃದ್ಧಿಗೆ ತಂದು ಅವುಗಳ ಹಣವನ್ನು ಸರಕಾರಕ್ಕೆ ತುಂಬುವ ಆಸೆ ಸರಕಾರಕ್ಕೆ ಇಲ್ಲ, ಆ ತಪ್ಪು ಭಾವನೆಯನ್ನು ತಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು.

ನಮ್ಮ ಮೈಸೂರು ಸಂಸ್ಥಾನದಲ್ಲಿ ಪ್ರೇಕ್ಷಣೀಯ ಸ್ಥಳಗಳಿವೆಯೆಂದು ಹೇಳಿದರೆ ಬೇರೆ ಸ್ಥಳಗಳಲ್ಲಿಲ್ಲ ಎಂದು ಹೇಳಿದನೆಂದು ತಿಳಿದುಕೊಳ್ಳಬಾರದು. ನಾನು ಹಿಂದೂಸ್ಥಾನದ ಕೇಂದ್ರ ಸರಕಾರದ ಆಡಳಿತದಲ್ಲಿ 10 ವರ್ಷ ಇದ್ದು ಹಿಂದೂಸ್ಥಾನದ ಎಲ್ಲ ಮೂಲೆಗಳಲ್ಲಿಯೂ ಓಡಾಡಿದ್ದೇನೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ಮೈಸೂರು ಸಂಸ್ಥಾನಕ್ಕೆ ದೇವರು ಕೊಟ್ಟಿರುವ ಒಂದು ಪ್ರಕೃತಿ ಸೌಂದರ್ಯ, ಇಲ್ಲಿರುವ ಪ್ರಕೃತಿ ದತ್ತವಾದಂಥ ಆಸ್ತಿಪಾಸ್ತಿ ನಮ್ಮ ಸಂಸ್ಥಾನಕ್ಕೆ ಒಳ್ಳೆಯ ಭವಿಷ್ಯವನ್ನು ಸೂಚಿಸುತ್ತದೆ. ಒಳ್ಳೆಯ ಭವನಗಳನ್ನು ಬೆಂಗಳೂರಿನಲ್ಲಿ ನೋಡಬಹುದು. ಆದರೆ ಮಲನಾಡಿಗೆ ಹೋದರೆ ಅಲ್ಲಿ ಪ್ರಕೃತಿ ಕೊಟ್ಟಿರುವಂಥ ಸೌಂದರ್ಯ ಬಹುಶಃ ಹಿಂದೂಸ್ಥಾನದಲ್ಲಿ ಎಲ್ಲಿಯೂ ಇಲ್ಲ. ಹಿಮಾಚಲ ಪ್ರದೇಶದ ಸ್ನೋಕವರ್‍ಡ್ ಪೀಕ್ಸ್ ಬಿಟ್ಟರೆ, ಅಂಥ ರಮಣೀಯ ನೋಟಗಳು ನಮ್ಮ ರಾಜ್ಯದಲ್ಲಿಯೇ ಇರುವುದು. ಮೈಸೂರು ರಾಜ್ಯದ ಪಶ್ಚಿಮ ಕರಾವಳಿಯಲ್ಲಿ ಹೊರಟರೆ, ಉತ್ತರ ಮತ್ತು ದಕ್ಷಿಣ ಕನ್ನಡದಲ್ಲಿ ಪ್ರಕೃತಿದತ್ತವಾದಂಥ ಸ್ಥಳಗಳು ನೂರಾರು ಇರುತ್ತವೆ. ಅವುಗಳ ಅಭಿವೃದ್ಧಿಯ ಕೆಲಸವನ್ನು ಸರಕಾರದವರು ತೆಗೆದುಕೊಳ್ಳಬೇಕು ಎಂದು ಆಲೋಚನೆ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಸ್ಥಳಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ಲಾನ್ ಹಾಕಿಕೊಳ್ಳಬೇಕಾಗಿದೆ. ಬಿಳಿಗಿರಿರಂಗನ ಬೆಟ್ಟ ಮತ್ತು ಮಹದೇಶ್ವರ ಬೆಟ್ಟ ತಿರುಪತಿಗಿಂತಲೂ ಬಹಳ ಚೆನ್ನಾಗಿವೆ. ಗೋಮಟೇಶ್ವರ ಮೂರ್ತಿಯನ್ನು ನೋಡಿದರೆ, ಆ ಶಾಂತಮೂರ್ತಿಯನ್ನು ನೋಡಿದರೆ, ಅದು ಮನಸ್ಸಿಗೆ ಶಾಂತಿ, ಸಮಾಧಾನವನ್ನು ಕೊಡುತ್ತದೆ. ಪ್ರಪಂಚ ಮರೆತು ಶಾಂತಿಪರವಶರಾಗುತ್ತೇವೆ. ಅಂಥ ಸುಖ, ಶಾಂತಿ ಕೊಡುವ ಮೂರ್ತಿ ಅದು. ಅದೇ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನವಿದೆ. ಹಾಗೆಯೇ ಧರ್ಮಸ್ಥಳ, ಕರಾವಳಿಯಲ್ಲಿರುವ ಗೋಕರ್ಣ ಕೂಡ ಅಷ್ಟೇ ಸೊಗಸಾಗಿದೆ. ಕರಾವಳಿಯ ಸಮುದ್ರದ ಪ್ರಶಾಂತ ವಾತಾವರಣದಲ್ಲಿ ಅವು ನಿರ್ಮಾಣವಾಗಿವೆ. ಉತ್ತರ ಕರ್ಣಾಟಕದಲ್ಲಿರುವ ಎಲ್ಲಮ್ಮದೇವರ ದೇವಸ್ಥಾನಕ್ಕೆ ಲಕ್ಷಾಂತರ ಜನ ಹೋಗಿ ಬರುತ್ತಾರೆ. ಈ 5-6 ಸ್ಥಳಗಳನ್ನು ಅಭಿವೃದ್ಧಿಪಡಿಸಲು ಎಷ್ಟೇ ಖರ್ಚು ಮಾಡಿದರೂ ಆ ಹಣ ವಾಪಸು ಬರುತ್ತದೆ. ತಿರುಪತಿಯಿಂದ ಸುಮಾರು 2 ಕೋಟಿ ಉತ್ಪತ್ತಿ ಇದೆ. ಎಷ್ಟು ಹೆಚ್ಚು ಖರ್ಚು ಮಾಡಿದರೆ ಅಷ್ಟು ಉತ್ಪತ್ತಿ ಹೆಚ್ಚಾಗಿ ಬರುತ್ತದೆ. ಯಾತ್ರಿಕರಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಟ್ಟರೆ ಬರುವ ವರಮಾನ ಹೆಚ್ಚಾಗುತ್ತದೆ.

ನಾನು ಕೆಲವು ಸ್ಥಳಗಳನ್ನು ಹೇಳಿದ್ದರಿಂದ ಬೇರೆ ದೇವರುಗಳನ್ನು ಮರೆತು ಬಿಟ್ಟಿದೆ ಎಂದು ತಿಳಿದುಕೊಳ್ಳಬಹುದು. ಮುಸ್ಲಿಮರ ದೇವರುಗಳನ್ನು ಬಿಟ್ಟು ಬಿಟ್ಟರು ಎಂದೂ ಯಾರಾದರೂ ತಿಳಿದುಕೊಳ್ಳಬಹುದು. ನಾನು ಬಿಡಲಿಲ್ಲ. ದೇವರುಗಳೆಲ್ಲಾ ಒಂದೆ. ಮುಸ್ಲಿಮು ಭವ್ಯ ಸ್ಥಳಗಳೂ ಅನೇಕವಿವೆ. ವಕ್‌ಫ್ ಬೋರ್ಡು ಮಾಡಿದೆ. ಹಿಂದು ದೇವಸ್ಥಾನಗಳಿಗಿಂತ ಮೊದಲೆ ಮುಸ್ಲಿಮು ದೇವಸ್ಥಾನಗಳ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಗೋಪಾಲ ಗೌಡರು ನಮ್ಮ ದೇಶದಲ್ಲಿ 33 ಸಾವಿರ ದೇವತೆಗಳಿದ್ದಾರೆ ಎಂದು ಹೇಳಿದರು. ಶ್ರೀ ಗೋಪಾಲ ಸಾಲೆನ್ನರು, ನೀಚ ದೇವರು, ಮಾರಮ್ಮ, ಮಾರಮ್ಮ ನಂಬರ್ 1, ಮಾರಮ್ಮ ನಂಬರ್ 2 ಎಂದು ಇವೆ, ಎಂದು ಹೇಳಿದರು. ಇವುಗಳೆಲ್ಲಾ ದೇವರ ಹೆಸರುಗಳು. ರೇಣುಕಾಮ್ಮನವರು ಎಂದು ಎನ್ನುವುದಕ್ಕೆ ಬದಲು ಮಾರಮ್ಮ ಎಂದು ಕರೆಯಬಹುದು. ಹೆಸರಿನಲ್ಲಿ ಏನಿದೆ? ಏನೂ ಇಲ್ಲ. 'ಮೇರಿ'ಗೂ 'ಮಾರಿ'ಗೂ ಏನು ವ್ಯತ್ಯಾಸ? ಬಹುಶಃ ಇನ್ನು ಕೆಲವು ದಿನ ಹೋದರೆ ಆ ಹೆಸರೇ ಲೇಟೆಸ್ಟ್ ಫ್ಯಾಷನ್ ಆಗಿಬಿಡಬಹುದು. ಈಗ ನಮ್ಮ ಅಜ್ಜಿಕಾಲದ ಸೀರೆ ಫ್ಯಾಷನ್ ಆಗಿದೆ; ಹಾಗೆಯೆ ನಮ್ಮ ಅಜ್ಜಂದಿರು ಉಡುತ್ತಿದ್ದ ತರಹ ಕೆಲ ಬಟ್ಟೆಗಳನ್ನು ಉಪಯೋಗಿಸುವುದು ಈ ದಿವಸ ರೂಢಿಗೆ ಬಂದಿದೆ.

There may come a time when people call Miss Mari, Miss Mary, etc. ಮಿಸ್‌ಮೇರಿ, ಮಿಸ್‌ಮಾರಿ, ಮಿಸ್ ಮಾರಿಯಮ್ಮ ಎಂಬ ಈ ತರಹ ಹೆಸರುಗಳನ್ನು ಇಡುವ ಕಾಲ ಬರಬಹುದು. ನೀಚದೇವರು ಅನ್ನುವುದಕ್ಕಿಂತ ಮಾರಿಕಾಂಬೆ ಎನ್ನುವುದು ದೊಡ್ಡ ಹೆಸರು. ನಾನು ಕರಾವಳಿ ಪ್ರಾಂತ್ಯದಲ್ಲಿ ಒಂದು ಕಡೆಗೆ ಹೋದಾಗ ಒಬ್ಬರು ತಮಾಷೆಗೆ ಈ ರೀತಿ ಹೇಳಿದರು. ಮೇರಿ ದೇವಸ್ಥಾನಕ್ಕೆ ಬಹಳ ಜನ ಭಕ್ತರು ಆದಾಗ, ಮಾರಿಯಮ್ಮನ ದೇವಸ್ಥಾನಕ್ಕೆ ಭಕ್ತರಾಗಿ ಬಂದೆವು, ಮೇರಿ ದೇವಸ್ಥಾನಕ್ಕೆ ಹೋಗುವುದಕ್ಕೆ ಬದಲು ಮಾರಿ ದೇವಸ್ಥಾನಕ್ಕೆ ಬಂದರು ಎಂದು. ಆದ್ದರಿಂದ ಹೆಸರಿನಲ್ಲಿ ಏನೂ ಇಲ್ಲ. ಪೂರ್ವಿಕರು ಹೇಳಿದ್ದಾರೆ:

'ಆಕಾಶತ್ಪತಿತಂ ತೋಯಂ ಯಥಾಗಚ್ಛತಿ ಸಾಗರಂ
ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ

ಆಕಾಶದಿಂದ ಬೀಳುವ ನೀರೆಲ್ಲಾ ಹೇಗೆ ಸಮುದ್ರವನ್ನು ಹೋಗಿ ಸೇರುತ್ತದೋ, ಹಾಗೆ ಯಾವ ದೇವರಿಗೆ ಪೂಜೆ ಮಾಡಿದರೂ ಕೇಶವನನ್ನೆ (ಪರಮಾತ್ಮನನ್ನೆ) ಹೊಂದುವುದು. ಆದ್ದರಿಂದ ಯೋಚನೆ ಮಾಡಬೇಡಿ ಎಂದು ಹೇಳಿದ್ದಾರೆ. ಯಾವ ಹೆಸರಿನಲ್ಲಿ ಪೂಜೆ ಮಾಡಿದರೂ ಕೂಡ ದೇವರು ಒಬ್ಬನು. ಈಶ್ವರ, ಅಲ್ಲ, ಅಥವಾ ಕ್ರಿಸ್ತ—ಇವೆಲ್ಲಾ ಒಂದೇ ದೇವರ ಹೆಸರು ಮತ್ತು ಜನರು ದೇವರನ್ನು ಅನೇಕ ವಿಧಗಳಲ್ಲಿ ಪೂಜೆ ಮಾಡುತ್ತಾರೆ.

ಶ್ರೀಮಾನ್ ಗೋಪಾಲ ಗೌಡರು ಹೇಳಿದರು.—ಈ ದೇವರುಗಳಿಗೆ ಬಟ್ಟೆ ಉಡಿಸುತ್ತಾರೆ, ಒಡವೆ ಹಾಕುತ್ತಾರೆ, ವಿಚಿತ್ರವಾದ ಊಟ ಕೊಡುತ್ತಾರೆ ಎಂದು. ಜನಗಳು ಏನು ಊಟ ಮಾಡುತ್ತಾರೆಯೋ ಅದನ್ನು ತಾವು ತಿನ್ನುವುದಕ್ಕೆ ಮೊದಲು ದೇವರಿಗೆ ಕೊಡಬೇಕು, ದೇವರ ಹೆಸರಿನಲ್ಲಿ ತಿನ್ನಬೇಕು ಎನ್ನುವುದು ಪೂರ್ವದಿಂದಲೂ ಬಂದಿರುವ ಪದ್ಧತಿ. ಸಾತ್ವಿಕಾಹಾರವನ್ನು ತಿನ್ನುವವರು ಅದನ್ನು ದೇವರಿಗೆ ನೈವೇದ್ಯ ಮಾಡುವುದೂ, ಬೇರೆ ಆಹಾರವನ್ನು ಊಟ ಮಾಡುವವರು ಆ ಆಹಾರವನ್ನು ದೇವರಿಗೆ ಕೊಡುವುದೂ ಒಂದು ವಾಡಿಕೆಯಾಗಿದೆ. ಜನರಲ್ಲಿ ಮೂಢ ನಂಬಿಕೆಯನ್ನು ಬೆಳಸಿ, ಅನಾಗರಿಕವಾದುದನ್ನು ಪ್ರೋತ್ಸಾಹ ಮಾಡುತ್ತೇವೆಂದು ಶ್ರೀ ಗೋಪಾಲ ಸಾಲೆನ್ನ ಅವರು ಹೇಳಿದರು. ಆ ರೀತಿ ಮಾಡುವುದಕ್ಕೆ ಎಳ್ಳಷ್ಟೂ ಇದರಲ್ಲಿ ಅವಕಾಶ ಇಲ್ಲ ಮತ್ತು ಆ ರೀತಿ ಮಾಡಬೇಕೆಂಬ ಇಚ್ಛೆಯೂ ಇಲ್ಲ. ಇರುವ ದೇವಸ್ಥಾನಗಳು ಒಳ್ಳೆಯ ಸ್ಥಿತಿಯಲ್ಲಿರುವಂತೆ ಅನುಕೂಲ ಮಾಡಿಕೊಟ್ಟು ಆ ಪ್ರದೇಶಗಳಿಗೆ ಜನಗಳು ಹೆಚ್ಚಾಗಿ ಹೋಗುವ ರೀತಿ ಮಾಡಬೇಕೆಂಬುದೇ ಮುಖ್ಯ ಉದ್ದೇಶ. ದೇವಸ್ಥಾನಕ್ಕೆ ದೇವರನ್ನು ನೋಡುವುದಕ್ಕೆ ಹೋಗುವುದಿಲ್ಲವೆಂದು ಜ್ಞಾನವಂತರು ತಿಳಿದುಕೊಂಡಿದ್ದಾರೆ. ನನ್ನಂಥ ಅಜ್ಞಾನಿಗಳು ದೇವಸ್ಥಾನದಲ್ಲಿ ದೇವರು ಇದ್ದಾನೆ ಎನ್ನುವ ಭಾವನೆಯಿಂದ ಹೋಗುತ್ತಾರೆ. ದೇಶ ಪರ್ಯಟನ ಮಾಡಿದರೆ ಅದರಿಂದ ಜ್ಞಾನವುಂಟಾಗುತ್ತದೆ, ಮನಸ್ಸಿಗೆ ಶಾಂತಿ ಬರುತ್ತದೆ. ಶ್ರೀಯುತರುಗಳಾದ ಗೋಪಾಲಗೌಡರೂ ಗೋಪಾಲ ಸಾಲೆನ್ನ ಅವರೂ ಈ ಅಸೆಂಬ್ಲಿ ಮುಗಿದ ಮೇಲೆ ಬಿಳಿಗಿರಿರಂಗನ ಬೆಟ್ಟಕ್ಕೆ ಹೋಗಿ ನೋಡಿಕೊಂಡು ಬರಬೇಕು. ಅಲ್ಲಿ ಮನಸ್ಸಿಗೆ ಎಷ್ಟೊಂದು ತೃಪ್ತಿಯಾಗುತ್ತದೆ; ಅಲ್ಲಿ ಎಂಥ ಪ್ರಶಾಂತ ವಾತಾವರಣವಿದೆ, ಪ್ರಕೃತಿ ಸೌಂದರ್ಯವಿದೆ ಎನ್ನುವುದು ಗೊತ್ತಾಗುತ್ತದೆ. ದೇವರಲ್ಲಿ ಭಕ್ತಿ ಇಲ್ಲದೆ ಇರುವ ಮನುಷ್ಯನಾದರೂ ಅಲ್ಲಿಗೆ ಹೋದರೆ ಪ್ರಪಂಚದ ಹವ್ಯಾಸವನ್ನು ಮರೆತು ಸ್ವಲ್ಪ ಹೊತ್ತಾದರೂ ಪಾರಮಾರ್ಥಿಕವಾಗಿ ಇದ್ದು ವಾಪಸು ಬರುತ್ತಾನೆ.

ಮಾನ್ಯ ರೇವಣ್ಣಸಿದ್ದಪ್ಪನವರು ಒಂದು ಟೀಕೆ ಮಾಡಿದರು: ಎಲ್ಲೋ ಯಾರೋ ಫರ್ಲಾಂಗ ಕಲ್ಲಿಗೆ ತೆಂಗಿನಕಾಯಿ ಒಡೆದರು ಎಂದು ಎಲ್ಲರೂ ತೆಂಗಿನಕಾಯಿ ಒಡೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎಂದು. ಅವರು ಹಾಸ್ಯಾಸ್ಪದವಾಗಿ ಹೇಳಿದರೋ ಏನೋ. ತಿಪಟೂರಿನಲ್ಲಿ ಬೆಳೆಯುವಷ್ಟು ತೆಂಗಿನಕಾಯಿ ಎಲ್ಲೂ ಬೆಳೆಯುವುದಿಲ್ಲ. ತೆಂಗಿನಕಾಯಿ ಒಡೆಯುವುದನ್ನು ಬಿಟ್ಟರೆ ಅವರ ಕ್ಷೇತ್ರದ ಗತಿ ಏನು ಎಂದು ಯೋಚನೆ ಮಾಡಬೇಕು. ಒಟ್ಟು ಉತ್ಪತ್ತಿಯಲ್ಲಿ ಶೇಕಡ 80ರಷ್ಟು ಭಾಗ ದೇವಸ್ಥಾನಗಳಲ್ಲ ಖರ್ಚಾಗುತ್ತದೆ. ಮಾನ್ಯ ಸದಸ್ಯರ ಪ್ರಚಾರಕ್ಕೇನಾದರೂ ಕಿವಿ ಕೊಟ್ಟರೆ ಜನಗಳು ತೆಂಗಿನಕಾಯಿ ಒಡೆಯುವುದನ್ನು ಬಿಟ್ಟರೆ ತಿಪಟೂರು ಜನರು ತೆಂಗಿನ ಚಿಪ್ಪು ತೆಗೆದುಕೊಂಡು ಹೋಗಬೇಕಾಗುತ್ತದೆ ಮಾನ್ಯ ಸದಸ್ಯರು ಈ ಪ್ರಚಾರವನ್ನು ಅಲ್ಲಿಗೇ ಬಿಟ್ಟಿದ್ದಾರೆಂದು ಭಾವಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮಲ್ಲಿ ಬೆಳೆಯುವ ತೆಂಗಿನಕಾಯಿಗಳಿಗೆ ಟೆಲಿಗ್ರಾಂ ಕೊಟ್ಟು ಮುಂಗಡ ಹಣ ಕಳಿಸಿ ಕಾಯನ್ನು ತರಿಸಿಕೊಳ್ಳುತ್ತಾರೆ.

ಶ್ರೀ ಎಂ. ಪಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಎಷ್ಟೋ ಸಲಹೆಗಳನ್ನು ಕೊಟ್ಟಿದ್ದಾರೆ, ಕೆಲವು ಸಂಶಯಗಳನ್ನೂ ವ್ಯಕ್ತಪಡಿಸಿದ್ದಾರೆ. ಅವುಗಳನ್ನೆಲ್ಲಾ ಸೆಲೆಕ್ಟ್ ಕಮಿಟಿಯ ಮುಂದೆ ಇಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ. ಒಟ್ಟಿನಲ್ಲಿ ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ ಏಕರೂಪತೆಯನ್ನು ತರಬೇಕೆಂಬ ದೃಷ್ಟಿಯಿಂದ ಐದು ಭಾಗಗಳಲ್ಲಿ ಇದ್ದಂಥ ಕಾನೂನುಗಳಲ್ಲ ಒಳ್ಳೆಯದನ್ನು ಮಾತ್ರ ತೆಗೆದುಕೊಂಡ ಪಂಚಾಮೃತ ಮಾಡುವ. ಹಾಗೆ ಮಾಡಿ ದೇವರಿಗೆ ಈ ಸಭೆಯ ಮುಖಾಂತರವಾಗಿ ಅರ್ಪಿಸುತ್ತಿದ್ದೇನೆ. ಕೆಲವು ಸದಸ್ಯರು ಹೇಳಿದರು: "That this is an interference with temples and mutts" ಎಂದು, ಇನ್ನು ಕೆಲವರು ಹೇಳಿದರು: We must take complete control over these mutts and other institutions, ಎಂದು. ನಾವು ಅವರಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತೇವೆ. ಆದರೆ ಪ್ರತಿಯೊಂದು ಸಂಸ್ಥೆಯೂ ರಿಜಿಸ್ಟರ್ ಮಾಡಿಸಿಕೊಳ್ಳಬೇಕು. It is a compulsory registration of all religious and charitable trusts within a particular date. Then whatever money or income they get, we have prescribed certain forms, they will have to submit accounts duly audited. ವರ್ಷದ ಕೊನೆಯಲ್ಲಿ ಲೆಕ್ಕಪತ್ರಗಳು ಆಡಿಟ್ ಆಗಿ ಅಪ್ರೂವ್ ಆಗಬೇಕು. ಇಷ್ಟು ಮಾಡಿದರೆ ಅವುಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದಿಲ್ಲ. ಯಾವಾಗ ಸಾರ್ವಜನಿಕರಾದ ಯಾವ ಸಂಸ್ಥೆಗೇ ಆಗಲೀ ಉತ್ಪತ್ತಿ ಬರತ್ತದೆಯೋ ಆಗ ಅದಕ್ಕೆ ನ್ಯಾಯವಾದ ಲೆಕ್ಕಪತ್ರಗಳನ್ನು ಇಡಬೇಕಾದ್ದು ಅವರ ಕರ್ತವ್ಯ. ಸರ್ಕಾರವು ಆ ಸಂಸ್ಥೆಗಳ ಲೆಕ್ಕಪತ್ರಗಳನ್ನು ಕೇಳದೆ ಇದ್ದರೆ ತಪ್ಪು. ಅದೇ ರೀತಿ ಈ ಸಂಸ್ಥೆಗಳಲ್ಲಿ, ಮಠಗಳಲ್ಲಿ ಹೆಚ್ಚುಕಡಮೆಯಾಗಿ ಯಾರಾದರೂ ಸರ್ಕಾರಕ್ಕೆ ಬರೆದರೆ ಸರ್ಕಾರ

(ಶ್ರೀ ಎಂ. ವಿ. ಕೃಷ್ಣಪ್ಪ)

ದವರು ಅಂಥವುಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳಬೇಕೆಂದು ಇದೆ. ಇದು ಹಿಂದಿನ ಕಾನೂನುಗಳಲ್ಲಿಯೂ ಇತ್ತು. ಇದರ ಜೊತೆಗೆ ರಿಜಿಸ್ಟರ್ ಮಾಡಿಸುವುದನ್ನು ಕಡ್ಡಾಯವಾಗಿ ಜಾರಿ ಮಾಡುವುದಕ್ಕೆ ಅವಕಾಶವಿರುತ್ತದೆ.

ದೇವಸ್ಥಾನಗಳಿಗೆ ಟ್ರಸ್ಟಿಗಳನ್ನು ನೇಮಕ ಮಾಡುವ ಪದ್ಧತಿಯನ್ನು ಮದ್ರಾಸ್ ಕಾನೂನಿನಿಂದ ತೆಗೆದುಕೊಂಡಿದ್ದೇವೆ. ಅಲ್ಲಿ ಈ ಪದ್ಧತಿ ಚೆನ್ನಾಗಿ ನಡೆಯುತ್ತಿದೆ. ನಾಲ್ಕೈದು ಜನರನ್ನು ಟ್ರಸ್ಟಿಗಳಾಗಿ ನೇಮಕ ಮಾಡುತ್ತಾರೆ. ಅವರು ಸೇರಿ ಒಬ್ಬರನ್ನು ಚೇರ್‌ಮನ್ ಎಂದು ಚುನಾಯಿಸುತ್ತಾರೆ. ಇವರು ದೇವಸ್ಥಾನದ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾರೆ. ಇದರಲ್ಲಿ ಸರ್ಕಾರದ interference ಹೆಚ್ಚಾಗಿರುವುದಿಲ್ಲ. ಒಂದು ಉದಾಹರಣೆಯನ್ನು ಕೊಡಬೇಕಾದರೆ ಮಹೇಶ್ವರ ದೇವಸ್ಥಾನಕ್ಕೆ ಶ್ರೀ ಜಿ. ವಿ. ಗೌಡರು ಚೇರ್ಮನ್ ಆಗಿದ್ದಾರೆ. ಆ ದೇವಸ್ಥಾನ ಬಹಳ ಶ್ರೇಷ್ಠವಾದ ರೀತಿಯಲ್ಲಿ ನಡೆಯುತ್ತಿದೆ. ಅದು ಆರು ಲಕ್ಷ ರೂಪಾಯಿ ಖರ್ಚು ಮಾಡಿ ಒಳ್ಳೆಯ ರಸ್ತೆ ಮಾಡಿದೆ, ದೇವಸ್ಥಾನದ ಹಣದಿಂದ ಮೂರ ಬಸ್ಸುಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ನೀರಿನ ತೊಂದರೆ ಇದ್ದುದರಿಂದ ಎರಡು ಲಕ್ಷ ರೂಪಾಯಿ ಖರ್ಚು ಮಾಡಿ ನಲ್ಲಿಗಳ ವ್ಯವಸ್ಥೆ ಮಾಡಿದೆ. ಬರುವ ದೀಪಾವಳಿಯಲ್ಲಿ ಅದನ್ನು ಪ್ರಾರಂಭ ಮಾಡಲಾಗುತ್ತದೆ. ಹೀಗೆ ಏಳೆಂಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವುದರಿಂದ ಮೂರು ಲಕ್ಷ ರೂಪಾಯಿ ಉತ್ಪತ್ತಿ ಇದ್ದುದು ಐದು ಲಕ್ಷವಾಗಿ ಎರಡು ಲಕ್ಷ ರೂಪಾಯಿ ಒಂದೇ ವರ್ಷದಲ್ಲಿ ಹೆಚ್ಚಾಗಿ ಬಂದಿದೆ. ಈ ರೀತಿಯಾಗಿ ಕೆಲವು ಮುಖ್ಯವಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಂದು ಮಾಸ್ಟರ್-ಪ್ಲಾನ್ ಮಾಡಬೇಕೆಂದಿದ್ದೇವೆ. ಅದಕ್ಕೆ ಸ್ವಲ್ಪ ಹಣ ಖರ್ಚಾದರೂ ಖರ್ಚು ಮಾಡಿದ ಹಣ ಬೇಗ ವಾಪಸು ಬರುತ್ತದೆ.

ಈ ಮಸೂದೆಗೆ ಮಾನ್ಯ ಸದಸ್ಯರೆಲ್ಲರೂ ಕೊಟ್ಟ ಸ್ವಾಗತಕ್ಕಾಗಿ ಅವರಿಗೆಲ್ಲ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—In the debate on this Bill, 24 Members have participated. I will now put it to the vote of the House. The question is:

"That the Mysore Religious and Charitable Institutions and Trusts Bill, 1962 be taken into consideration."

The motion was adopted.

Motion to refer to a Joint Select Committee.

Sri M. V. KRISHNAPPA.—Sir, I beg to move:

"That the Mysore Religious and Charitable Institutions and Trusts Bill, 1962 be referred to a Joint Select Committee, consisting of a total number of 20 members; 15 Members from the Legislative Assembly and 5 Members from the Legislative Council, and that the concurrence of the Legislative Council be obtained therefor and that the following Members of this House shall be members of the Joint Select Committee, namely:

Sriyuths:—

1. S. M. Krishna
2. S. Shivappa
3. Siddiah Kashimath
4. C. J. Muckannappa
5. G. V. Gowda
6. P. F. D'Mellow
7. M. Rajasekharamurthy
8. D. M. Siddaiya
9. Thirumaladevarayalu
10. H. R. Abdul Gaffar
11. R. S. Patil
12. S. D. Samrajya
13. N. Hutchmasthy Gowda
14. R. Kenchappa
15. K. M. Devaiah

Mr. SPEAKER.—The question is:

"That the Mysore Religious and Charitable Institutions and Trusts Bill, 1962, be referred to a Joint Select Committee consisting of a total number of 20 Members; 15 Members from the Legislative Assembly and 5 Members from the Legislative Council and that the concurrence of the Legislative Council be obtained therefor and that the following Members of this House shall be Members of the Joint Select Committee, namely:

Sriyuths:—

1. S. M. Krishna
2. S. Shivappa
3. Siddiah Kashimath
4. C. J. Muckannappa
5. G. V. Gowda
6. P. F. D'Mellow.
7. M. Rajasekharamurthy
8. D. M. Siddiah
9. Thirumaladevarayalu
10. H. R. Abdul Gaffar
11. R. S. Patil
12. S. D. Samrajya
13. N. Hutchmasthy Gowda
14. R. Kenchappa
15. K. M. Devaiah

The motion was adopted.

Mr. SPEAKER.—Under sub-rule (2) of Rule 240 of the Rules of Procedure and Conduct of Business, the Minister for Revenue and the Minister for Law are nominated as Members of the Joint Select Committee.

MYSORE BEEDI INDUSTRIAL PREMISES (REGULATION OF CONDITIONS OF WORK) BILL, 1962.

Motion to consider.

Sri D. DEVARAJ URS (Minister for Labour, Housing, Transport).—Sir, I beg to move:

"That the Mysore Beedi Industrial Premises (Regulation of Conditions of Work) Bill, 1962 be taken into consideration".

Mr. SPEAKER.—Motion moved:

"That the Mysore Beedi Industrial Premises (Regulation of Conditions of Work) Bill, 1962 be taken into consideration."

2-00 P.M.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಮೈಸೂರು ರಾಜ್ಯದ ಬೀಡಿ ಕೈಗಾರಿಕೆ ಸ್ಥಳಾವರಣಗಳ (ಕೆಲಸದ ಷರತ್ತುಗಳನ್ನು ಕ್ರಮಗೊಳಿಸುವುದಕ್ಕೆ ಸಂಬಂಧಪಟ್ಟ) ವಿಧೇಯಕ, 1962, ಇದನ್ನು ಮಾನ್ಯ ಸಭೆಯ ಮುಂದೆ ತರುವುದಕ್ಕೆ ಮುಖ್ಯ ಕಾರಣ ಏನಿದೆ ಎಂಬುದನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಸೂಕ್ಷ್ಮವಾಗಿ ತಿಳಿಸಿದೆ. ನಮ್ಮ ಮೈಸೂರು ರಾಜ್ಯದಲ್ಲಿ ಅನೇಕ

(ಶ್ರೀ ಡಿ. ದೇವರಾಜ ಅರಸ್)

ಕಡೆ ಬೀಡಿ ತಯಾರುಮಾಡತಕ್ಕಂಥ ಉದ್ಯಮ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಇಲ್ಲಿ ತಯಾರಾಗುವ ಬೀಡಿಗಳು ಹೊರಗಡೆ ಕೂಡ ಕಳಿಸಲಾಗುತ್ತಿದೆ. ಈ ಉದ್ಯಮದಲ್ಲಿ ಕೆಲಸ ಮಾಡತಕ್ಕಂಥ ಕೆಲಸಗಾರರ ಸಂಖ್ಯೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ನಿಖರವಾದ ಅಂಕಿಅಂಶಗಳು ಇರದಿದ್ದರೂ, ಲಕ್ಷಾಂತರ ಜನ ಕೆಲಸಗಾರರು ಇದ್ದಾರೆ. ಮೈಸೂರು ರಾಜ್ಯದಲ್ಲಿ 30 ಸಾವಿರಕ್ಕೂ ಮೇಲ್ಪಟ್ಟು ಕೆಲಸಗಾರರು ಇದ್ದಾರೆಂದು ಅಂದಾಜು ಮಾಡಲಾಗಿದೆ. ಇನ್ನೂ ಜಾಸ್ತಿ ಇದ್ದರೂ ಇರಬಹುದು. 70 ಅಥವಾ 80 ಸಾವಿರ ಕೆಲಸಗಾರರು ಇದ್ದಾರೆಂದು ಹಿಂದೆ ಒಮ್ಮೆ ಕೆಲಸಗಾರರ ಪರವಾಗಿ ಮೆಮೋರಾಂಡಂ ಕೊಟ್ಟಾಗ ಹೇಳಿದ್ದಾರೆ. ಇವರಲ್ಲಿ ಎರಡು ಮೂರು ತರಹದ ಕೆಲಸಗಾರರು ಇದ್ದಾರೆ. ಫ್ಯಾಕ್ಟರಿ ಕೆಲಸದ ಹಾಗೆ ಬಹು ಸಂಖ್ಯೆಯಲ್ಲಿ ಒಂದು ಸ್ಥಳದಲ್ಲಿ ಸೇರಿ ಕೆಲಸ ಮಾಡುವ ಅವಶ್ಯಕತೆ ಇಲ್ಲ. ಐವತ್ತು, ನೂರು ಜನ ಒಂದು ಕಡೆ ಸೇರಿ ಒಂದು ಫ್ಯಾಕ್ಟರಿ ಮಾಡಿಕೊಂಡು ಕೆಲಸ ಮಾಡುತ್ತಾರೆ. ಬಹುತೇಕವಾಗಿ ಬೀಡಿ ತಯಾರಮಾಡಿಸತಕ್ಕಂಥ ಮಾಲೀಕರು ಕೆಲಸಗಾರರನ್ನು ಒಂದು ಕಡೆ ಸೇರಿಸಿ ಕೆಲಸ ಮಾಡಿಸಲು ಅವಕಾಶ ಕೊಡುವುದಿಲ್ಲ. ಬೀಡಿ ಸುತ್ತುವ ಕೆಲಸವನ್ನು ಸಾಮಾನ್ಯವಾಗಿ ಅನೇಕರು ಮನೆಯಲ್ಲಿಯೇ ಮಾಡುತ್ತಾರೆ. ಎಲೆ, ಹೊಗೆಸೊಪ್ಪು, ದಾರ ಮುಂತಾದ ಸಾಮಾನು ಮನೆಗೆ ಕೊಟ್ಟು ಕಳಿಸುತ್ತಾರೆ. ಮನೆಯಲ್ಲಿಯೇ ಇದ್ದು ಬೀಡಿ ಸುತ್ತಿ ತಯಾರುಮಾಡಿ ಕಳಿಸಿಕೊಡುತ್ತಾರೆ. ಈ ರೀತಿ ಮನೆಯಲ್ಲಿ ಕೆಲಸ ಮಾಡತಕ್ಕಂಥವರು ಕಾನೂನು ವ್ಯಾಪ್ತಿಗೆ ಒಳಪಡುತ್ತಾರೆಂದು ಹೇಳುವುದಾಕ್ಕಾಗುವುದಿಲ್ಲ. ಅಂಥ ಕೆಲಸಗಾರರ ಸಂಖ್ಯೆ ದೊರೆಯುವುದೂ ಸಹ ದುರ್ಲಭ. ನಮ್ಮ ದೇಶದಲ್ಲಿ ಒಂದು ಲಕ್ಷ ಜನ ಇದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಇರುವ ಕೆಲಸಗಾರರ ಪರಿಸ್ಥಿತಿ ಹೇಗೆ ಇದೆ ಎಂದರೆ ಅದು ಬಹಳ ಹೀನಾಯ ಪರಿಸ್ಥಿತಿ ಇದೆ. ಬಹಳ ಕೀಳು ಮಟ್ಟದಲ್ಲಿದ್ದು ಪರಿಸ್ಥಿತಿ ದಿನೇ ದಿನೇ ಶೋಚನೀಯವಾಗುತ್ತಾ ಇದೆ. ಇತ್ತೀಚೆಗೆ ಮಿನಿಮಂ ವೇಜಸ್ ಗೊತ್ತುಮಾಡಿದ ನಂತರ ಅವರ ವರಮಾನದಲ್ಲಿ ಸ್ವಲ್ಪ ಸುಧಾರಣೆ ಉಂಟಾಗಿದೆ. ಅದೂ ಕೂಡ ಸಂಪೂರ್ಣವಾಗಿ ಅನುಕೂಲವಾಗಿ ಫಲಕಾರಿಯಾಗಿಲ್ಲ. ಈ ಬೀಡಿ ಕೆಲಸ ಮಾಡುವ ಜನ ಕೆಲಸ ಮಾಡತಕ್ಕಂಥ ಸ್ಥಳವನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಅಂಥ ಸ್ಥಳದಲ್ಲಿ ಕೆಲಸ ಮಾಡುತ್ತಾರೆ. ಅವರು ಕೆಲಸ ಮಾಡುವ ಕೋಣೆಯಲ್ಲಿ ಸಾಕಷ್ಟು ಬೆಳಕು ಇರುವುದಿಲ್ಲ. ಅನೇಕ ಕಡೆ ನಾನು ಸ್ವತಃ ಹೋಗಿ ಅವರ ವಸತಿಗಳನ್ನು ನೋಡಿದ್ದೇನೆ. ಎಂಟು ಹತ್ತು ಗಂಟೆ ಒಂದು ಕಡೆ ಕುಳಿತು ಕೆಲಸ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಮುಖ್ಯವಾಗಿ ಬೇಕಾದಂಥ ಅನುಕೂಲತೆಗಳು ಎಂದರೆ ಗಾಳಿ ಬೆಳಕು ಕುಡಿಯುವುದಕ್ಕೆ ನೀರು, ಕಕ್ಕಸ ಇವು ಇರುವುದಿಲ್ಲ. ಇವು ಇದ್ದರೂ ಬಹಳ ದುಸ್ಥಿತಿಯಲ್ಲಿ ಇರುತ್ತವೆ. ಇದರ ಪರಿಣಾಮ ಏನಾಗಿದೆ ಎಂದರೆ ಈ ಕೆಲಸಗಾರರಲ್ಲಿ ಶ್ವಾಸಕೋಶದ ಕಾಹಿಲೆ ಹೆಚ್ಚಾಗಿ ಉಂಟಾಗುವುದನ್ನು ನೋಡುತ್ತೇವೆ. ಕ್ಷಯ ರೋಗ ಕೂಡ ಈ ಕೆಲಸಗಾರರಲ್ಲಿ ಹೆಚ್ಚಾಗಿದೆ ಎಂದು ಕಂಡು ಬಂದಿದೆ. ಬೀಡಿ ಸುತ್ತುವ ಕೆಲಸ ಕೆಲವಾರು ವರ್ಷ ಮಾಡಿದ ಮೇಲೆ ಸಾಕಷ್ಟು ಕೈಯಲ್ಲಿ ಶಕ್ತಿ ಉಳಿಯುವುದಿಲ್ಲ. ನರ ದೌರ್ಬಲ್ಯದಿಂದ ಕೆಲಸ ನಿಧಾನವಾಗುತ್ತದೆ. ಅದರಿಂದ ಮೊದಲಿನ ಹಾಗೆ ಅಷ್ಟು ಸಂಪಾದನೆ ಮಾಡಲಾರರು. ಪೂರ್ತಿ ವೇತನ ದೊರೆಯದ ಮೂಲಕ ಅವರ ಸಂಸಾರ ದುಃಖದಾಯಕವಾಗುತ್ತದೆ. ಇದರಲ್ಲಿ ಸುಧಾರಣೆ ಮಾಡಬೇಕೆಂಬ ಉದ್ದೇಶದಿಂದ ಈಗ ಈ ಮಸೂದೆಯನ್ನು ಮಾನ್ಯ ಸಭೆಯ ಮುಂದೆ ಇಟ್ಟಿದ್ದೇವೆ. ಸದ್ಯಕ್ಕೆ ನಮ್ಮ ದೇಶದಲ್ಲಿ ಫ್ಯಾಕ್ಟರೀ ಕಾನೂನು ಜಾರಿಯಲ್ಲಿದೆ. ಆದರೆ ಕೆಲವು ಕಡೆ ಈ ಕಾನೂನನ್ನು ಚಲಾಯಿಸುವುದಕ್ಕೆ ಆಗುವುದಿಲ್ಲ. ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ಈ ಕಾನೂನು ಪ್ರಕಾರ ಏನೇನು ಸೌಕರ್ಯ ಒದಗಿಸಬೇಕೋ ಅದನ್ನು ಒದಗಿಸಿಕೊಡುತ್ತಾರೆ. ಆದರೆ ಕಾನೂನಿನ ಚೌಕಟ್ಟಿನಿಂದ ತಪ್ಪಿಸಿಕೊಳ್ಳಲು, ಈ ಉದ್ಯಮದ ಮಾಲೀಕರು ಬಹಳ ಜನ ಒಂದು ಕಡೆ ಸೇರಿ ಕೆಲಸ ಮಾಡುವುದನ್ನು ಒಡೆದುಬಿಟ್ಟು ಐವತ್ತು ಜನ, ಹತ್ತು ಜನ ಹೀಗೆ ಎರಡು ಮೂರು ಕಡೆ ಕೆಲಸ ಮಾಡುವ ಹಾಗೆ ವ್ಯವಸ್ಥೆಮಾಡಿ ಕಾನೂನು ನಿಬಂಧನೆಗೆ ಒಳಪಡದೇ ಇರುವ ರೀತಿಯಲ್ಲಿ ಏರ್ಪಾಡು ಮಾಡಿಕೊಳ್ಳುವುದರಿಂದ ಅಂಥವರಿಗೆ ಕಾನೂನು ಅನ್ವಯಿಸಲು ಆಗುವುದಿಲ್ಲ. ಹೀಗೆ ಇದು ನಡೆಕೊಂಡು ಬರುತ್ತಿದೆ. ಆದುದರಿಂದ ಫ್ಯಾಕ್ಟರಿ ಕಾನೂನು ಚಲಾಯಿಸುವುದು ಕಷ್ಟವಾಗಿದೆ. ಯಾವ ಪ್ರಮಾಣದಲ್ಲಿ ತೊಂದರೆ ಉಂಟಾಗಿದೆ ಎನ್ನುವುದಕ್ಕೆ ಇದರ ಬಗ್ಗೆ ಅಂಕಿಅಂಶಗಳನ್ನು ತಮ್ಮ ಮುಂದೆ ಇಟ್ಟರೆ ಅದನ್ನು ತಾವು ನಂಬುತ್ತೀರಿ.

ನಮ್ಮ ದೇಶದಲ್ಲಿ ಅಂದಾಜು ಮಾಡಿರತಕ್ಕ ಪ್ರಕಾರ ಈ ಕೆಲಸಗಾರರು ಕೆಲಸ ಮಾಡತಕ್ಕ ಸ್ಥಳಗಳು ಸುಮಾರು 2,000 ಇವೆ. ಇದರಲ್ಲಿ 1962ನೇ ಸಾಲಿನಲ್ಲಿ ಕೇವಲ 85 ಸ್ಥಳಗಳು ಮಾತ್ರ ರಿಜಿಸ್ಟರ್ ಮಾಡಿಸಿಕೊಂಡಿವೆ. ಅದು ಫ್ಯಾಕ್ಟರಿ ಆಕ್ಟ್ ಪ್ರಕಾರ; ಬಾಕೀವೆಲ್ಲಾ ಅವರ ಮೇಲೆ ಕಾನೂನು ಚಲಾಯಿಸುವುದಕ್ಕೆ ಸಾಧ್ಯವಿಲ್ಲದ ಹಾಗೆ ಮಾಡಿಕೊಂಡಿವೆ. ಹೋದ ವರ್ಷ ರಿಜಿಸ್ಟರ್ ಮಾಡಿಸಿಕೊಂಡಿದ್ದರೂ ಕೂಡ ವರ್ಷೇ ವರ್ಷೇ ರೀನ್ಯೂ ಆಗಬೇಕಾಗುತ್ತದೆ. ಈ ವರ್ಷ ಆ 85 ಕೂಡ ಇಲ್ಲ, ಕೇವಲ

22ಕ್ಕೆ ಬಂದು ನಿಂತಿದೆ. 1963ನೇ ಇಸವಿಯಲ್ಲಿ ಒಟ್ಟು 2,000 ಸ್ಥಳಗಳ ಪೈಕಿ ಕೇವಲ 22 ಮಾತ್ರ ರಿಜಿಸ್ಟರ್ ಆಗಿವೆ ಎಂದರೆ ತಾವೇ ಯೋಚನೆ ಮಾಡಬಹುದು. ಈಗಿರತಕ್ಕ ಫ್ಯಾಕ್ಟರಿ ಆಕ್ಟ್‌ನಿಂದ ಅವರನ್ನು ಹಿಡಿಯುವುದಕ್ಕೆ ಅಥವಾ ಕಾನೂನಿಗೆ ಒಳಪಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದೂ ಒಂದು ಕಾರಣದಿಂದಾಗಿ ಈ ರೀತಿ ಅವರು ತಪ್ಪಿಸಿಕೊಳ್ಳುವುದನ್ನು ತಡೆಗಟ್ಟಲು ನಾವು ಬೇರೆ ಒಂದು ಕಾನೂನನ್ನು ತಂದು ಈ ಕೆಲಸಗಾರರಿಗೆ ದೊರೆಯಬೇಕಾದ ನ್ಯಾಯವಾದ ಸೌಕರ್ಯಗಳು ಸೌಲಭ್ಯಗಳು ಏನಿವೆ ಅವನ್ನು ಒದಗಿಸಬೇಕಾಗಿದೆ. ಅವರು ಕೆಲಸ ಮಾಡುತ್ತಾ ಇರತಕ್ಕ ಸ್ಥಳ ಚೊಕ್ಕಟವಾಗಿರಬೇಕು; ಇಂಥ ಸೌಲಭ್ಯಗಳನ್ನು ದೊರಕಿಸುವುದಕ್ಕಾಗಿಯೇ ಈ ಒಂದು ಕಾನೂನನ್ನು ತಂದಿರುವುದು. ಇದರ ಜೊತೆಯಲ್ಲಿ ಅವರು ಕೆಲಸ ಮಾಡುತ್ತಾ ಇರತಕ್ಕ ವರ್ಕಿಂಗ್ ಕಂಡೀಷನ್ ಎಂದು ಏನು ಹೇಳುತ್ತೇವೆಯೋ ಅದನ್ನು ರೆಗ್ಯುಲೇಟ್ ಮಾಡುವುದಕ್ಕೂ, ಅವರ್ಸ್ ಆಫ್ ವರ್ಕ್ ರೆಗ್ಯುಲೇಟ್ ಮಾಡುವುದಕ್ಕೂ, ಸೆಂಟ್ರಲ್ ಆಕ್ಟ್ ಆದ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಮತ್ತು ಇನ್ನೂ ಒಂದೆರಡು ಮೂರು ಆಕ್ಟ್‌ಗಳಲ್ಲಿ ನಮೂದು ಮಾಡಿರುವಂತ ಆ ಆಕ್ಟ್‌ಗಳೂ ಈ ಕೆಲಸಗಾರರಿಗೆ ಅನ್ವಯವಾಗಬೇಕೆಂದು ಹೇಳಿ ಆ ಪ್ರೊವಿಜನ್‌ಗಳನ್ನೂ ಇಲ್ಲಿ ಸೇರಿಸಿದ್ದೇವೆ. ಹೀಗೆ ನಾನಾ ರೀತಿಯಲ್ಲಿ ಈ ಬೀಡಿ ಕೆಲಸಗಾರರ ಜೀವನ ಮಟ್ಟವನ್ನು ಹಾಗೂ ಮಾಡತಕ್ಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಬೇಕೆಂಬ ದೃಷ್ಟಿಯಿಂದ ಈ ಮಸೂದೆಯನ್ನು ಇವತ್ತು ತಂದಿದ್ದೇವೆ. ಇನ್ನೂ ಒಂದು ವಿಷಯವನ್ನು ಮಾನ್ಯ ಸಭೆಯ ಗಮನಕ್ಕೆ ತರಬೇಕಾದ್ದು ಯಾವುದೆಂದರೆ ಈ ಕಾನೂನನ್ನು ಇಡೀ ಭಾರತ ದೇಶಕ್ಕೆ ಅನ್ವಯವಾಗುವಂತೆ ತರಬೇಕೆಂದು ಉದ್ದೇಶಿಸಲಾಗಿದ್ದು ಪಾರ್ಲಿಮೆಂಟ್ ಮುಂದೆ ಬಂದಾಗ ಏನು ತೀರ್ಮಾನವಾಯಿತು ಎಂದರೆ ಒಟ್ಟಿಗೆ ಸೆಂಟ್ರಲ್ ಆಕ್ಟ್ ಮಾಡುವುದು ಬೇಡ, ಆಯಾಯಾ ರಾಜ್ಯ ಸರ್ಕಾರದವರು ತಮ್ಮ ಸ್ಥಳಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಬೇರೆ ಕಾನೂನುಗಳನ್ನು ತರುವುದು ಸೂಕ್ತ ಎಂದು ಅವರು ಒಂದು ಆದೇಶ ಕೊಟ್ಟಮೇಲೆ ನಮ್ಮಲ್ಲೂ ಈ ಕಾನೂನು ತರುವುದಕ್ಕೆ ಸಿದ್ಧವಾದೆವು. ಇದೇ ರೀತಿಯಲ್ಲಿ ಮದರಾಸ್ ಪ್ರಾಂತ್ಯದಲ್ಲಿ ಈ ಕಾನೂನು ಇದೆ, ಕೇರಳದಲ್ಲಿ ಇದೆ, ಆಂಧ್ರ ಪ್ರದೇಶದಲ್ಲಿ ಕಾನೂನು ಮಾಡಬೇಕೆನ್ನುವುದರಲ್ಲಿದ್ದಾರೆ. ಇನ್ನೂ ಆಗಿಲ್ಲ. ಮದರಾಸ್ ಮತ್ತು ಕೇರಳದಲ್ಲಿ ಅವರು ಈ ಕಾನೂನನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಕೆಲವು ಅಡ್ಡಿ ಆತಂಕಗಳಿವೆ ಎಂದು ಹಾಗೆಯೇ ತಡೆದು ಇಟ್ಟಿದ್ದಾರೆ. ಅದಕ್ಕೆ ಕಾರಣ ಮೈಸೂರು ಪ್ರಾಂತ್ಯವಾದ ನೆರೆ ಪ್ರಾಂತ್ಯದಲ್ಲಿ ಈ ಕಾನೂನು ಇಲ್ಲದೇ ಹೋದಾಗ ಅಕ್ಕಪಕ್ಕದಲ್ಲಿರತಕ್ಕ ಈ ಒಂದು ಕೈಗಾರಿಕೆ ಆ ಕಾನೂನಿನ ಚೌಕಟ್ಟನ್ನು ತಪ್ಪಿಸಿಕೊಳ್ಳುತ್ತದೆ ಎಂಬ ದೃಷ್ಟಿಯಿಂದ ಮತ್ತು ಅಲ್ಲಿರತಕ್ಕ ಕೈಗಾರಿಕೆ ಬೇರೆ ಪ್ರಾಂತ್ಯಕ್ಕೆ ಹೋದೀತು ಎಂಬ ಶಂಕೆ ಬಂದು ಮದರಾಸಿನವರಾಗಲೀ, ಕೇರಳದವರಾಗಲೀ ಈ ಕಾನೂನನ್ನು ಸಂಪೂರ್ಣವಾಗಿ ಜಾರಿಗೆ ಕೊಟ್ಟಿಲ್ಲ. ನಮ್ಮ ದೇಶದಲ್ಲಿ ಇದನ್ನು ಜಾರಿಗೆ ತಂದದ್ದೇ ಆದರೆ ನಮ್ಮ ದಕ್ಷಿಣ ಭಾರತದ ಮದರಾಸು, ಕೇರಳ ಹಾಗೂ ಆಂಧ್ರ ಪ್ರದೇಶದವರೂ ಸಹ ಇದನ್ನು ಜಾರಿ ಮಾಡಿ ಯಾರು ಎಂಬ ಆಶೆ ಇದೆ. ಎಲ್ಲಾ ಕಡೆ ಈ ಕಾನೂನು ಜಾರಿಗೆ ಬಂದು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಈ ಕೈಗಾರಿಕೆ ಹೋಗುವುದು ತಪ್ಪುತ್ತದೆ. ಮತ್ತು ಎಲ್ಲಾ ಕೆಲಸಗಾರರಿಗೂ ಒಂದೇ ರೀತಿಯಾದ ಸೌಲಭ್ಯ ಕೂಡ ದೊರೆಯತಕ್ಕ ಅನುಕೂಲವುಂಟಾಗುತ್ತದೆ. ಅದನ್ನೂ ಈ ಕಾನೂನನ್ನು ತರುವುದರಿಂದ ಒಂದು ಸಾಧನೆ ಮಾಡಿದಹಾಗಾಗುತ್ತದೆ. ಮೈಸೂರಿನ ಮತ್ತು ಇತರ ಮೂರು ರಾಜ್ಯಗಳಿಗೆ ಸಂಬಂಧಪಟ್ಟ ಮಂತ್ರಿಗಳ ಮತ್ತು ಇತರ ಅಧಿಕಾರಿಗಳ ಸಭೆ ನಡೆದು ಅಲ್ಲಿ ತೆಗೆದುಕೊಂಡ ತೀರ್ಮಾನದ ಪ್ರಕಾರವಾಗಿಯೂ ಈ ಒಂದು ಮಸೂದೆಯನ್ನು ತರುತ್ತಾ ಇದ್ದೇವೆ.

ಬಹುಶಃ ಮಾನ್ಯ ಸಭೆಯಲ್ಲಿ ಎಲ್ಲರಿಗೂ ಗೊತ್ತಿರಬಹುದು ಯಾವ ರೀತಿ ಈ ಕಾನೂನಿನ ಚೌಕಟ್ಟಿನಿಂದ ಮಾಲೀಕರು ತಪ್ಪಿಸಿಕೊಳ್ಳುತ್ತಾರೆ ಎಂಬುದು. ಬೀಡಿ ತಯಾರು ಮಾಡುವುದಕ್ಕೆ ಯಾವುದಾದರೂ ಒಂದು ಸ್ಥಳದಲ್ಲಿ ಕೆಲವರನ್ನು ಒಟ್ಟಿಗೆ ಕೂಡಿಸಿ—ಹೆಚ್ಚು ಜನರನ್ನು ಒಂದೇ ಕಡೆ ಇಟ್ಟುಕೊಂಡರೆ ಕಾನೂನಿನ ಪ್ರಕಾರ ಸೌಲಭ್ಯ ಕೊಡಬೇಕಾಗುತ್ತದೆ ಎಂಬ ದೃಷ್ಟಿಯಿಂದ—ಅವರಿಂದ ಬೀಡಿ ತಯಾರು ಮಾಡಿಸುತ್ತಾರೆ. ಈ ಕೆಲಸ ಮಾಡಿಸುವುದಕ್ಕೆ ಕೆಲವು ಮನೆಗಳನ್ನು ಇಟ್ಟುಕೊಂಡು ಏಜೆಂಟರ ಮೂಲಕ ಕೆಲಸ ಮಾಡಿಸುತ್ತಾರೆ. ನನಗೆ ಗೊತ್ತಿರುವಹಾಗೆ ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬೀಡಿ ತಯಾರು ಮಾಡತಕ್ಕ ಒಂದು ಸಂಸ್ಥೆಯೂ ಇಲ್ಲ. ಅವರ ಕೈಕೆಳಗೆ ನೇರವಾಗಿ ಒಬ್ಬ ಕೆಲಸಗಾರನೂ ಇರುವುದಿಲ್ಲ. ಆದರೆ ಪ್ರೊಡಕ್ಷನ್ ತೆಗೆದುಕೊಂಡರೆ ಒಂದು ದಿವಸಕ್ಕೆ ಎಷ್ಟೋ ಲಕ್ಷ ಬೀಡಿ ತಯಾರು ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಏರ್ಪಾಡು ಮಾಡಿಕೊಂಡಿದ್ದಾರೆ ಏಜೆಂಟುಗಳನ್ನು ನೇಮಕಮಾಡಿಕೊಂಡು ಅವರಿಗೆ ಕಂಟ್ರಾಕ್ಟ್ ಕೊಡುತ್ತಾರೆ. ಆ ಕಾಂಟ್ರ್ಯಾಕ್ಟರು ಏನು ಮಾಡುತ್ತಾನೆ ಎಷ್ಟೋ ಪೌಂಡ್ ಹೊಗೇಸೊಪ್ಪು ಎಲೆ ಅದಕ್ಕೆ ಬೇಕಾಗತಕ್ಕ ದಾರ ಎಲ್ಲಾ ಕೊಟ್ಟು ಅದಕ್ಕೆ ಪ್ರತಿಯಾಗಿ ಇಷ್ಟು ಬೀಡಿ ಎಂದು ಯಾವುದೋ ಒಂದು ಲೆಕ್ಕಾಚಾರ ಇರುತ್ತದೆ ಅದರಂತೆ ತಂದು ಕೊಡಬೇಕೆಂದು ಗೊತ್ತು ಮಾಡುತ್ತಾನೆ. ಅದಕ್ಕೆ ಬೇಕಾದ ಒಂದೆರಡು ಮನೆಗಳನ್ನು ಬಾಡಿಗೆಗೋ ಅಥವಾ ಸ್ವಂತಕ್ಕೋ ಯಾವುದೋ ರೀತಿಯಲ್ಲಿ ತೆಗೆದುಕೊಂಡಿರುತ್ತಾನೆ. ಹತ್ತು

(ಶ್ರೀ ಡಿ. ದೇವರಾಜ ಅರಸ್)

ಜನರನ್ನು ಒಂದು ಕಡೆ ಇನ್ನು ಹತ್ತು ಜನರನ್ನು ಇನ್ನೊಂದು ಕಡೆ ಸೇರಿಸಿ ಅವರಿಗೆ ಪ್ರತ್ಯೇಕವಾಗಿ ಎಲೆಯನ್ನು, ಸೊಪ್ಪನ್ನು ಹಂಚಿಕೊಟ್ಟು 1,000 ಸಾವಿರ ಬೀಡಿ ಕಟ್ಟಿದರೆ ಇಷ್ಟು ಕೂಲಿ ಕೊಡುತ್ತೇನೆ ಎಂದು ಗೊತ್ತು ಮಾಡಿಕೊಂಡಿರುತ್ತಾನೆ. ಒಂದು ಸಾವಿರ ಬೀಡಿಗೆ ಮಿನಿಮಂ ವೇಜಸ್ ಒಂದು ರೂಪಾಯಿ ಹನ್ನೆರಡಾಣೆ ಇದ್ದರೆ ಅವನು ಒಂದು ರೂಪಾಯಿ ಮಾತ್ರ ಕೊಡುತ್ತಾ ಇದ್ದಾನೆ. ಅವನಿಗೆ ಹನ್ನೆರಡಾಣೆ ಉಳಿಯುತ್ತದೆ. ಅಲ್ಲೂ ಕೂಡ ಮೋಸ ನಡೆಯುತ್ತಾ ಇದೆ. ಹೀಗೆ ನಾನಾ ರೀತಿಯಲ್ಲಿ ಕಾರ್ಮಿಕ ಕ್ಷೇತ್ರದಲ್ಲಿರತಕ್ಕ ಜನರನ್ನು ಎಷ್ಟು ಶೋಷಣೆ ಮಾಡಬಹುದೋ ಅಷ್ಟನ್ನೂ ಧಾರಿ ಮಾಲೀಕರು ಮತ್ತು ಕಂಟ್ರಾಕ್ಟರುಗಳು ಎಲ್ಲಾ ಸೇರಿ ಮಾಡುತ್ತಾ ಇದ್ದಾರೆ. ಇವತ್ತಿನ ಸನ್ನಿವೇಶದಲ್ಲಿ ಅದನ್ನು ತಪ್ಪಿಸಬೇಕಾಗಿದೆ.

ಈಗ ಈ ಕಷ್ಟಗಳನ್ನೆಲ್ಲ ತಪ್ಪಿಸಿ ಅವರಿಗೆ ಕೆಲವು ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಈ ಹಿಂದೆ ಮಹಾರಾಷ್ಟ್ರ ಸರ್ಕಾರದವರು ಬೀಡಿ ಉದ್ಯಮಕ್ಕೆ ಸಂಬಂಧಿಸಿದಂತೆ ಫ್ಯಾಕ್ಟರಿ ಆಕ್ಟಿನನ್ವಯ ಒಂದು ನೋಟಿಫಿಕೇಷನ್ ಹೊರಡಿಸಿದ್ದರು. ಆ ಬಗ್ಗೆ ಸಂಬಂಧಪಟ್ಟ ಫ್ಯಾಕ್ಟರಿ ಮಾಲೀಕರು ಅದನ್ನು ಛಾಲೆಂಜ್ ಮಾಡಿದ್ದರು. ಆದರೆ ಆರೀತಿ ನೋಟಿಫೈ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ ಯೆಂಬುದಾಗಿ ಮೊನ್ನೆ ತಾನೆ ತೀರ್ಮಾನವಾಯಿತು. ಈಗ ಕಾರ್ಮಿಕರಿಗೆ ರಕ್ಷಣೆ ಕೊಡತಕ್ಕ ಬಗ್ಗೆ ನಮ್ಮ ಮಸೂದೆಯಲ್ಲಿ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಕೆಲವು ಫ್ಯಾಕ್ಟರಿಗಳನ್ನು ರಿಜಿಸ್ಟರ್ ಮಾಡಬೇಕಾಗಿದ್ದರೆ ಅಲ್ಲಿ ಇಂತಿಷ್ಟು ಜನರು ಕೆಲಸಮಾಡುತ್ತಿರಬೇಕು ಎಂಬ ನೇಮವಿದೆ. ಆದರೆ ನಾವೀಗ ನಮ್ಮ ಮಸೂದೆಯಲ್ಲಿ ಪ್ರತಿಯೊಂದು ಫ್ಯಾಕ್ಟರಿಯವರೂ ಲೈಸನ್ಸನ್ನು ತೆಗೆದುಕೊಳ್ಳಲೇಬೇಕೆಂದು ಕಡ್ಡಾಯ ಮಾಡಿದ್ದೇವೆ. ಆ ಫ್ಯಾಕ್ಟರಿಯಲ್ಲಿ ಇಬ್ಬರಿರಲಿ, ಮೂವರಿರಲಿ ಅಂಥವರೂ ಕೂಡ ಲೈಸನ್ಸ್ ಪಡೆಯಲೇಬೇಕೆಂದು ಹೇಳಿದೆ. ಆ ಕಾರ್ಮಿಕರ ಆರೋಗ್ಯ ದೃಷ್ಟಿಯಿಂದ ಇದು ಅತ್ಯಗತ್ಯ. ಕೆಲವು ಸಂದರ್ಭಗಳಲ್ಲಿ ಬೇರೆ ಪ್ರಾಂತದಲ್ಲಿ ಈ ಮಸೂದೆ ಚರ್ಚೆಯಾಗುತ್ತಿದ್ದ ಕಾಲದಲ್ಲಿ ಮಾಲೀಕರಪರ ಮಾತನಾಡತಕ್ಕ ಕೆಲವು ಜನರು ಇದೊಂದು ಕ್ರಾಂತಿಕಾರಕ ಮಸೂದೆ. ಇದನ್ನು ಪಾಸ್ ಮಾಡಿದರೆ ಕಾರ್ಖಾನೆಗಳಿಗೆ ಬಹಳ ಧಕ್ಕೆ ತಗುಲುತ್ತದೆ ಎಂಬುದಾಗಿ ವಾದಮಾಡಿದ್ದರು. ಆದರೆ ಆ ವಾದದಲ್ಲಿ ತಿರುಳಿಲ್ಲ. ಯಾವುದೋ ಒಂದು ಭಾಗದಲ್ಲಿ ಮಾತ್ರ ಇಂಥ ಒಂದು ಕಾನೂನು ಇದ್ದು ಇನ್ನೊಂದು ಕಡೆ ಅಂಥ ಕಾನೂನು ಜಾರಿಯಲ್ಲಿ ಇಲ್ಲದಿದ್ದರೆ ಆಗ ಈ ಕೈಗಾರಿಕೆಗೆ ಸ್ವಲ್ಪ ತೊಂದರೆ ಬರುತ್ತಿತ್ತೋ ಏನೋ. ಈಗ ಎಲ್ಲ ಕಡೆಗಳಲ್ಲೂ ಈ ಕಾನೂನು ಜಾರಿಗೆ ಬಂದಿರುವಾಗ ಅಂಥ ಒಂದು ತೊಂದರೆಗೆ ಅವಕಾಶವಿಲ್ಲ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈಗಾಗಲೇ ಒಂದೆರಡು ಪ್ರಾಂತಗಳವರು ಈ ವೇಜಸ್ಸನ್ನೂ ನಿಗದಿ ಮಾಡಿದ್ದಾರೆ. ನಮ್ಮಲ್ಲಿ ಒಂದು ಸಾವಿರ ಬೀಡಿ ಕಟ್ಟತಕ್ಕವನಿಗೆ ಕನಿಷ್ಠ ಪಕ್ಷ ಒಂದು ರೂಪಾಯಿ ಎಪ್ಪತ್ತೊಂದು ನಯಾಪೈಸೆ ಕೂಲಿ ಕೊಡಬೇಕೆಂದು ನಿಗದಿ ಮಾಡಿದ್ದೇವೆ. ಹಾಗೆ ಕೂಲಿ ಕೊಡದೆ ಹೋದರೆ ಅವರು ಕೋರ್ಟಿನ ಮುಂದೆ ಬರಬೇಕಾಗುತ್ತದೆ, ಅವರು ಶಿಕ್ಷೆಗೂ ಗುರಿಯಾಗುತ್ತಾರೆ. ಮದ್ರಾಸಿನಲ್ಲಿ ಒಂದು ಸಾವಿರ ಬೀಡಿಗಳನ್ನು ಕಟ್ಟತಕ್ಕ ಒಬ್ಬ ಮನುಷ್ಯನಿಗೆ 1-69 ನ.ಪೈ ; ಒಂದು ರೇಟಿದೆ, ರೂ. 1-62 ನ.ಪೈ. ಒಂದು ರೇಟೂ, ಮತ್ತು ರೂ. 1-37 ನ.ಪೈ. ಒಂದು ರೇಟು ಹೀಗೆ ಮೂರು ವಿಧವಾದ ರೇಟುಗಳಿರುತ್ತವೆ. ಕೇರಳದಲ್ಲಿ ರೂ. 1-87 ನ.ಪೈ. ರೇಟಿದೆ. ನಮ್ಮಲ್ಲಿ ಕೆಲವು ಭಾಗದಲ್ಲಿ ಸ್ವಲ್ಪ ಜಾಸ್ತಿ ಇದೆ. ಇನ್ನು ಕೆಲವು ಕಡೆಗಳಲ್ಲಿ ಸ್ವಲ್ಪ ಕಡಮೆ ರೇಟಿದೆ. ನಿಪ್ಪಾಣಿಯಲ್ಲಿ ರೇಟು ಜಾಸ್ತಿ ಇದೆ. ಅಲ್ಲಿ 2 ರೂಪಾಯಿನ ವರೆಗೂ ರೇಟಿದೆ. ಇತ್ತೀಚೆಗೆ ಮದ್ರಾಸ್, ಆಂಧ್ರ, ಕೇರಳ ಮತ್ತು ನಮ್ಮ ಮೈಸೂರು ಈ ನಾಲ್ಕು ರಾಜ್ಯಗಳೂ ಒಟ್ಟಿಗೆ ಸೇರಿ ಈ ಕೂಲಿ ದರವನ್ನು ನಿಗದಿ ಮಾಡಬೇಕೆಂದು ಮಾತುಕತೆಗಳಾಗಿವೆ. ಆದುದರಿಂದ ಈಗ ನಮ್ಮ ಮೈಸೂರಿನಲ್ಲಿ ಈ ಬಿಲ್ಲನ್ನು ಜಾರಿಗೆ ತಂದರೆ ನಮ್ಮ ವ್ಯವಹಾರ ಬೇರೆಕಡೆಗೆ ಹೋಗುತ್ತದೆ ಎಂಬ ಶಂಕೆಗೆ ಅವಕಾಶವಿಲ್ಲ. ಇದು ಬಹಳ ಸಾಧುವಾದಂಥ ಕಾನೂನು. ಬೀಡಿ ಕೆಲಸಗಾರರು ಬಹಳ ದಿನಗಳಿಂದಲೂ ಬಯಸುತ್ತಿದ್ದಂಥ ಕಾನೂನು. ಅವರ ಸ್ಥಿತಿಗತಿಗಳು ಇಲ್ಲಿಯವರೆಗೂ ಬಹಳ ಚಿಂತಾಜನಕವಾಗಿದ್ದವು. ಹೊಲದಲ್ಲಿ ಕೂಲಿಮಾಡತಕ್ಕವನಿಗೆ ಇವರಿಗಿಂತ ಕಡಮೆ ಕೂಲಿ ಸಿಕ್ಕಿದರೂ ಅವನಿಗೆ ಒಳ್ಳೆ ಗಾಳಿ, ಬೆಳಕಾದರೂ ಸಿಕ್ಕುತ್ತದೆ. ಇವರಿಗೆ ಗಾಳಿಯೂ ಇಲ್ಲ, ಬೆಳಕೂ ಇಲ್ಲ, ಕಡೆಗೆ ಊಟವೂ ಇಲ್ಲ, ಹೀಗಿತ್ತು ಇವರ ಪರಿಸ್ಥಿತಿ. ಈ ಕಾನೂನು ಜಾರಿಗೆ ಬಂದರೆ ಅವರ ಸ್ಥಿತಿಗತಿಗಳು ಬಹಳಮಟ್ಟಿಗೆ ಉತ್ತಮಗೊಳ್ಳುತ್ತವೆ. ಈ ಕಾನೂನು ಎಲ್ಲ ದೃಷ್ಟಿಗಳಿಂದಲೂ ಬಹಳ ಒಳ್ಳೆಯದು. ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕೂ ಅವಕಾಶ ಮಾಡಿದ್ದೇನೆ. ಮಾನ್ಯ ಸದಸ್ಯರಿಂದ ಬರತಕ್ಕ ಉತ್ತಮ ಸಲಹೆಗಳ ಮೇಲೆ ಈ ಬಿಲ್ಲನ್ನು ಮತ್ತಷ್ಟು ಮಾರ್ಪಾಡು ಮಾಡುವುದಕ್ಕೆ ಅವಕಾಶವಿರಲೆಂದು ಹಾಗೆ ಮಾಡಿದ್ದೇನೆ. ಇಷ್ಟು ವಿಚಾರಗಳನ್ನು ಹೇಳಿ ಈ ಮಸೂದೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

Sri V. S. PATIL (Belgaum-I).—On a point of information, Sir. May I know from the Hon'ble Minister as to whether he intends to have any additional staff for the enforcement of this particular Bill or whether he is going to enforce this with the existing staff under his control?

Sri D. DEVARAJ URS.—As it is, we do not intend to have any additional staff. We want to carry on with the existing staff empowering them to act as Inspectors under the Act.

[MR. DEPUTY SPEAKER in the Chair.]

2-30 P.M.

ಶ್ರೀ ಸಂಜೀವನಾಥ ಐಕಳ (ಸೂರತ್ಕಲ್).—ಮಾನ್ಯ ಸಭಾಪತಿಗಳೇ, ಮೈಸೂರು ರಾಜ್ಯದ ಬೀಡಿ ಕೈಗಾರಿಕೆಗಳಿಗೆ ಸಂಬಂಧಪಟ್ಟ ಈ ಮಸೂದೆಯನ್ನು ಸ್ವಾಗತಿಸುತ್ತಾ ನನ್ನ ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಮೊದಲಿಗೆ ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಏಕೆಂದರೆ ಈ ಮಸೂದೆಯನ್ನು ನಾವು ಅನೇಕ ವರ್ಷಗಳಿಂದಲೂ ಬರುತ್ತದೆ ಎಂದು ನಿರೀಕ್ಷಿಸುತ್ತಿದ್ದೆವು. ಈಗ ಅದು ಬಂದಿದೆ. ಕಾರ್ಮಿಕರಿಗೆ ಕೆಲವು ಅನುಕೂಲತೆಗಳನ್ನು ಒದಗಿಸಬೇಕೆಂಬ ಭಾವನೆಯಿಂದ ಈ ಮಸೂದೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಆದರೆ ಸರಕಾರ ಮಸೂದೆ ತರುವುದೇನೂ ಕಷ್ಟವಲ್ಲ. ಈ ಮಸೂದೆಯನ್ನೂ ಬೇರೆ ಬೇರೆ ಇತರ ಕಾನೂನುಗಳಂತೆ ಸುಮ್ಮನೆ ಪಾಸುಮಾಡಿಕೊಂಡು ಇಡಬಹುದು. ಆದರೆ ಇದನ್ನು ಜಾರಿಗೆ ಕೊಡುವುದಕ್ಕಾಗಿ ಸರಕಾರದ ಎಷ್ಟೇ ಅಧಿಕಾರಿಗಳಿದ್ದರೂ ಇದನ್ನು ಕಾರ್ಯಗತ ಮಾಡದೇ ಇರುವುದರಿಂದ ಇದರಿಂದ ಯಾವ ನ್ಯಾಯವೂ ದೊರಕುವುದಿಲ್ಲ. ಇದಕ್ಕೆ ಕಾರಣ ಸರಕಾರಿ ಅಧಿಕಾರಿಗಳಲ್ಲಿ ವಿಶೇಷವಾಗಿ honesty, integrity, efficiency and application to do the needful things ಇಲ್ಲ ಎಂದು ಹೇಳಬಹುದು. ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಧ್ಯೇಯ ಮತ್ತು ತತ್ವಗಳು ಸರಿಯಾಗಿದ್ದರೂ ಇದನ್ನು ಆಚರಣೆಗೆ ತರುವಾಗ ಅವೊಂದೂ ಕಾಣುತ್ತಿಲ್ಲ. ಕಾರ್ಮಿಕರ ಹಿತಕ್ಕೆ ಸಂಬಂಧಪಟ್ಟಂತೆ ಸಾಧಾರಣವಾಗಿ ಈಗಾಗಲೇ ಐದಾರು ಕಾನೂನುಗಳಾಗಿವೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟಿದೆ. ಪೇಮೆಂಟ್ ಆಫ್ ವೇಜಸ್ ಆಕ್ಟಿದೆ. ವೀಕ್ಲೀ ಹಾಲಿಡೇಸ್ ಆಕ್ಟಿದೆ. ಪೇಮೆಂಟ್ ಆಫ್ ಕಾಂಪೆನ್‌ಸೇಷನ್ ಆಕ್ಟಿದೆ ಮತ್ತು ಫ್ಯಾಕ್ಟರೀಸ್ ಆಕ್ಟಿದೆ. ಹೀಗೆ ಐದಾರು ದೊಡ್ಡ ದೊಡ್ಡ ಕಾನೂನುಗಳು ಇವೆ. ಇವಲ್ಲದೇ ಇನ್ನೂ ಸಣ್ಣ ಸಣ್ಣ ಶಾಸನಗಳೂ ಇವೆ. ಇಷ್ಟೆಲ್ಲಾ ಇದ್ದರೂ, ಬಡ ಕಾರ್ಮಿಕರಿಗೆ ನಿಜವಾಗಿಯೂ ಏನೂ ಪ್ರಯೋಜನವಾಗುವುದಿಲ್ಲ. ನಾವು ನೋಡುತ್ತಿರುವಂತೆ ಪ್ರತಿದಿವಸವೂ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಎಂದರೆ ಎಷ್ಟೋ ಕೈಗಾರಿಕಾ ವಿವಾದಗಳಿಗಾಗಿ ಟ್ರಿಬ್ಯುನಲ್‌ಗಳು ನೇಮಕವಾಗುತ್ತಿವೆ. ಮೇಲಿಂದ ಮೇಲೆ ಇಂತಹ ನ್ಯಾಯಾಲಯಗಳು ನೇಮಕವಾಗುತ್ತಿರುವುದನ್ನು ನಾವು ನೋಡಬಹುದು. ನಮಗೆ ಬೇಕಾಗಿರುವ ಕಾನೂನುಗಳ ಹೆಚ್ಚುವರಿಯಾಗಿದ್ದರೂ ಅವುಗಳ ಉಪಯೋಗವಾಗದೇ ಇರುವಾಗ ಮೇಲಿಂದ ಮೇಲೆ ಇಂತಹ ಕಾನೂನುಗಳನ್ನು ಮತ್ತು ಅದರ ಮೂಲಕ ಹೊರಡಿಸಲಾಗುವ ಆಜ್ಞೆಗಳನ್ನು ಪಾಲಿಸದೇ ಹೋದರೆ ನಿಷ್ಠಾವಂತರಿಗೆ ಸರಕಾರದಿಂದ ನ್ಯಾಯ ದೊರೆಯುವಂತೆ ತೋರುವುದಿಲ್ಲ. ನಾನು ಹೇಳುವುದೇನೆಂದರೆ, ಇಂತಹ ಕಾನೂನುಗಳು ನಿಜವಾಗಿ ಬೇಕು. ಆದರೆ ಇದನ್ನು ಜಾರಿಗೆ ತರುವಾಗ ಇದರ ಅಧಿಕಾರಿಗಳಲ್ಲಿ ಚಾಕಚಕ್ಯತೆ, ವಿಚಕ್ಷಣತೆ ಮತ್ತು ಕಾರ್ಯದಕ್ಷತೆ ಇರಬೇಕಲ್ಲದೆ, ಧರ್ಮದ ಕಡೆಗೆ ಅವರ ಗಮನವಿರುವಂತೆ ಮಾಡಬೇಕಾದುದು ಅಗತ್ಯ. ಅಧಿಕಾರಿಗಳಿಂದ ತುಂಬಾ ಉಪಕಾರವಾಗುವುದಕ್ಕೆ ಬದಲಾಗಿ ಉಪದ್ರವಗಳೇ ಹೆಚ್ಚಾಗುತ್ತಿವೆ. ನಾಲ್ಕೈದು ಕಾನೂನುಗಳು ಇದ್ದರೂ ಕಾರ್ಮಿಕ ಕ್ಷೇತ್ರದಲ್ಲಿ ತುಂಬಾ ಅನಾನುಕೂಲಗಳಾಗುತ್ತವೆ. ಎಷ್ಟೋ ಕಡೆಗಳಲ್ಲಿ Weekly Holidays ಇಲ್ಲ. Payment of Wages Act ಇತ್ಯಾದಿ ಕೆಲವು ಕಾನೂನುಗಳು ಇದ್ದರೂ ಅದರಿಂದ ಜನತೆಗೆ ಹೆಚ್ಚಿನ ಉಪಯೋಗವಾಗುತ್ತಿಲ್ಲ. ನಮ್ಮ ಕೆಲಸಗಾರರನ್ನು ಸಂಘಟನೆ ಮಾಡಲಿಕ್ಕೆ ಇಲಾಖೆಯವರು ಎಷ್ಟರಮಟ್ಟಿಗೆ ಅನುಕೂಲತೆಗಳನ್ನು ಒದಗಿಸುತ್ತಿದ್ದಾರೆ ಎನ್ನುವುದು ನೋಡಿದರೆ ಗೊತ್ತಾಗುತ್ತದೆ. ಅನೇಕ ಕಡೆಗಳಲ್ಲಿ ಲೇಬರ್ ಇನ್ಸ್‌ಪೆಕ್ಟರು, ಫ್ಯಾಕ್ಟರಿ ಇನ್ಸ್‌ಪೆಕ್ಟರು, ಲೇಬರ್ ವೆಲ್‌ಫೇರ್ ಆಫೀಸರುಗಳು ಇದ್ದರೂ ದೂರನ್ನು ಎಲ್ಲಿ ಕೊಡುವುದೆಂಬುದು ಕಾರ್ಮಿಕರಿಗೆ ಗೊತ್ತಿರುವುದಿಲ್ಲ. ಇದು ಅಧಿಕಾರಿಗಳ ದಕ್ಷತೆಯಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಯಾವ ದೂರನ್ನೂ ತಾವು ಕೊಟ್ಟೇ ಇಲ್ಲ. ಯಾವುದಾದರೂ ಸಂದರ್ಭದಲ್ಲಿ ಕೂಲಿಗಾರರಿಗೆ ನ್ಯಾಯ ದೊರೆತಿಲ್ಲ ಎಂದು ಹೇಳಿದ್ದರೆ ಅದನ್ನು ಸರಿಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಂಜೀವನಾಥ ಐಕಳ.—ಉದಾಹರಣೆಗಾಗಿ ಪ್ಲಾಂಟೇಷನ್ನು ಲೇಬರ್ ಆಕ್ಟು ಎಂದಿರುವುದನ್ನು ನಿಜವಾಗಿಯೂ ಜಾರಿಗೆ ತಂದಿಲ್ಲ, ಕೆಲಸಗಾರರಿಗೆ ಇದರ ಪ್ರಯೋಜನವಾಗುತ್ತಿಲ್ಲ. ದೊಡ್ಡ ದೊಡ್ಡ ಕಂಪನಿಗಳ ಮೂಲಕ ನಡೆಯುತ್ತಿರುವ ಪ್ಲಾಂಟರುಗಳ ತೋಟದಲ್ಲಿಯೂ ಇದು ಜಾರಿಗೆ ಬರುವಂತೆ ಮಾಡಬೇಕು. ಇಂತಹ ಪ್ರಯತ್ನ ಇದುವರೆಗೂ ನಡೆದಿಲ್ಲ. ಸಣ್ಣಸಣ್ಣ ತೋಟಗಳ ಪ್ಲಾಂಟರುಗಳ ಮೇಲೆ ಈ ಕಾನೂನಿನಿಂದ ಅನೇಕ ಕಷ್ಟಗಳು ಬರುತ್ತವೆ. ಆದ್ದರಿಂದ ಈ ಕಾನೂನನ್ನು ದೊಡ್ಡ ಕಂಪೆನಿಗಳ ತೋಟಗಳಿಗೂ ಅನ್ವಯವಾಗುವಂತೆ ಮಾಡಬೇಕು. ಇದರ ಉದ್ದೇಶ ತುಂಬಾ ಚೆನ್ನಾಗಿದೆ. ಧ್ಯೇಯವೂ ಉದಾತ್ತವಾಗಿದೆ. ಆದರೆ ಇದರ ಕಾರ್ಯಾಚರಣೆ ನ್ಯಾಯವಾಗಿ ಕೆಲಸ ನಡೆಯುವಂತೆ ನೋಡಿಕೊಂಡು ಕೂಲಿಕಾರರುಗಳಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಬೀಡಿ ಕೆಲಸಗಾರರಂತೆ ಇನ್ನೊಂದು ಪ್ರಾಮುಖ್ಯವಾದ ಕೆಲಸಗಾರರ ವರ್ಗವಿದೆ. ಅದೇನೆಂದರೆ ನಶ್ಯ-ಕೆಲಸ ಮಾಡುವವರು ನಮ್ಮ ಜಿಲ್ಲೆಯಲ್ಲಿ ಬಡವರಾದ ಬಹುಜನ ಈ ನಶ್ಯದ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಭಾಗದಲ್ಲಿ ಸುಮಾರು ಬೀಡಿ ಕೆಲಸ ಮಾಡುವವರು ೨೫,೦೦೦ ದಷ್ಟು ಜನರಿದ್ದರೆ, ನಶ್ಯ ಮಾಡುವ ಕೆಲಸಗಾರರು ಸುಮಾರು ಐದಾರು ಸಾವಿರದಷ್ಟು ಇದ್ದಾರೆ. ಸಾಧಾರಣವಾಗಿ ನಮ್ಮ ಮಂಗಳೂರು ಟೈಲ್ಸ್, ಮಂಗಳೂರು ಕಾಫೀ, ಮಂಗಳೂರು ಬೀಡಿ, ಹಾಗೂ ಮಂಗಳೂರು ನಶ್ಯದಂತಹವುಗಳು ಹೆಸರು ಪಡೆದಿವೆ. ಈ ಉದ್ಯಮಗಳಲ್ಲಿ ತೊಡಗಿರುವ ಕೆಲಸಗಾರರನ್ನು ಕೂಡ ಇದರೊಳಗೆ ಸೇರಿಸುವುದು ಅಗತ್ಯ ಎಂದು ನನಗೆನಿಸುತ್ತದೆ. ಈ ಬಿಲ್ಲು ಹೇಗೂ ಸೆಲೆಕ್ಟ್ ಕಮಿಟಿಗೆ ಹೋಗುವ ಪ್ರಮೇಯವಿದೆ ಎಂದು ಮಂತ್ರಿಗಳು ಹೇಳಿದರು. ಆದರೆ ನನಗಾದರೂ ಇದು ಕಮಿಟಿಗೆ ಹೋಗುವುದು ಅಷ್ಟೇನೂ ಅಗತ್ಯವಿಲ್ಲ ಎಂದು ಕಾಣುತ್ತದೆ. ಇಲ್ಲೇ ಇದಕ್ಕೆ ಬೇಕಾದ ಒಂದೆರಡು ಸೂಚನೆಗಳನ್ನು ತಂದು ಇದನ್ನು ಪಾಸುಮಾಡಬಹುದಿತ್ತು. ಆದರೂ ಸೆಲೆಕ್ಟ್ ಕಮಿಟಿಗೆ ಹೋಗುವಂತಿದ್ದರೆ ಅದಕ್ಕೆ ನನ್ನ ಆಕ್ಷೇಪಣೆಯಿಲ್ಲ. ಆದರಲ್ಲಿ ನಶ್ಯದ ಕೆಲಸಗಾರರನ್ನೂ ಸೇರಿಸುವುದು ಅಗತ್ಯ. ಬೀಡಿ ಕೆಲಸಗಾರರಗಿಂತ ನಶ್ಯದ ಕೆಲಸಗಾರರು ಕೇವಲ, ಹತ್ತು ಹದಿನೈದು ಮಂದಿ ಹಾಗೂ ಎಂಟುಮಂದಿ ಕೂಡಿಕೊಂಡು ಕೆಲಸ ಮಾಡುವವರು ಸಣ್ಣಸಣ್ಣ ಮಾಲೀಕರಾಗಿದ್ದಾರೆ. ಇವರಿಗೆ Shop Establishment Act, Factories Act, ಇವು ಯಾವುದೂ ಲಾಗು ಆಗುವುದಿಲ್ಲ, ಬೇರೆ ಬೇರೆ ಕಡೆಗಳಲ್ಲಿ ನಶ್ಯ ತಯಾರಿಸುವವರೂ ಇದ್ದಾರೆ. ಈ ಕೆಲಸಗಾರರನ್ನೂ ಬೀಡಿ ಕೆಲಸಗಾರರೊಂದಿಗೆ ಸೇರಿಸಿದರೆ ಸರಿಯಾಗಿರುತ್ತದೆ. ಇದು ವರ್ಕ್ ಶೋಡಿನ ಮೇಲೆ ಕೆಲಸ ಮಾಡುವುದಲ್ಲ. ಒಂದು ದಿವಸದ ಕೆಲಸ ಎಂದರೆ ಒಂದುಸಾವಿರ ಬೀಡಿಗಳನ್ನು ಕಟ್ಟುವುದು. ಇಂತಹ ಕೆಲಸವನ್ನು ಎಷ್ಟೋ ಮನೆಗಳಲ್ಲಿ ಮಾಡುತ್ತಿರುವ ಪರಿಸ್ಥಿತಿಯೂ ಇದೆ.

ಅವರು ಇಡೀ ದಿವಸ ಕೆಲಸ ಮಾಡಬಹುದು ಅರ್ಧ ದಿವಸ ಕೆಲಸ ಮಾಡಬಹುದು, ಕೆಲಸ ಮಾಡದೆ ಇದ್ದರೂ ಇರಬಹುದು. ಬೀಡಿ ಕೆಲಸಗಾರರಿಗೆ piece-rate system ಇರುತ್ತದೆ; ಅವರಿಗೆ ಸ್ವಲ್ಪ ಸ್ವಾತಂತ್ರ್ಯವಿದೆ. ಆದ್ದರಿಂದ ನಶ್ಯದ ಕೆಲಸಗಾರರನ್ನೂ ಈ ಮಸೂದೆಯಲ್ಲಿ ಸೇರಿಸುವುದು ಪ್ರಾಮುಖ್ಯವಾದ ವಿಷಯವಾಗಿದೆ.

ಈ ಕಾನೂನು ಮಾಡುವುದೇನೋ ಒಳ್ಳೆಯದು. ಆದರೆ ಈ ಕಾನೂನಿನಿಂದ ದೊಡ್ಡ ತೊಂದರೆ ಆದೀತೋ ಎಂಬ ಭಯವಾಗುತ್ತದೆ. ಇದರಲ್ಲಿರುವ ಬೇರೆ ಬೇರೆ ಪ್ರಾವಿಶನ್ನುಗಳ ಪ್ರಕಾರ ಬೀಡಿ ತಯಾರಿಸುವ ಮಾಲೀಕರು ಫ್ಯಾಕ್ಟರಿ ಕಟ್ಟಬೇಕು. ಲೈಸೆನ್ಸು ತೆಗೆದುಕೊಳ್ಳಬೇಕು; ಕೆಲಸಗಾರರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಬೇಕು ಎಂದೆಲ್ಲಾ ಹೇಳಿದ್ದೀರಿ: ರಾಜ್ಯದ ಬೇರೆ ಕಡೆಗಳಲ್ಲಿ ಬೀಡಿ ಹೇಗೆ ತಯಾರಾಗುತ್ತಿದೆಯೋ ನನಗೆ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಈಗಾಗಲೆ ಸಾಧಾರಣವಾಗಿ ಬೀಡಿ ಫ್ಯಾಕ್ಟರಿಗಳಲ್ಲಿ 25 ಸಾವಿರ ಜನ ಕೆಲಸಮಾಡುತ್ತಿದ್ದಾರೆ. ಈ ಬೀಡಿ ಕಟ್ಟುವ ಕ್ರಮ ಹೇಗಿದೆಯೆಂದರೆ ಹೊರಗಿನ ದೊಡ್ಡ ಕಂಪೆನಿಗಳಿಗೆ ಕಂಟ್ರಾಕ್ಟ್ ಸಿಸ್ಟಂಮೇಲೆ ಬೀಡಿ ತಯಾರಿಸುವುದನ್ನು ವಹಿಸುತ್ತಾರೆ; ಅವರು ಕಂಟ್ರಾಕ್ಟ್ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ. ಬೀಡಿ ಕಟ್ಟುವುದನ್ನು ಮನೆಗಳಲ್ಲಿ ಮಾಡಿಸುತ್ತಾರೆ. ಪ್ರತಿಯೊಂದು ಮನೆಯಲ್ಲಿಯೂ ಕೆಲವರು ಹೆಂಗಸರು, ಮಕ್ಕಳು (ಗಂಡಸರು ಕೂಡ) ಬೀಡಿ ಕಟ್ಟುತ್ತಾರೆ. ಮನೆಗಳಿಗೇ ಬೇಕಾದ ಹೊಗೆಸೊಪ್ಪು, ಎಲೆ ಮುಂತಾದುವುಗಳನ್ನು ತಂದುಕೊಡುತ್ತಾರೆ. ಪ್ರತಿದಿವಸ ಕೆಲಸ ನೋಡಿ, ಅವರಿಗೆ ಕೂಲಿ ಕೊಡುತ್ತಾರೆ. ಈ ಕಾನೂನು ಜಾರಿಗೆ ಬಂದಮೇಲೆ, ಮನೆಯಲ್ಲಿ ಕೆಲಸಮಾಡುವವರ ಪರಿಸ್ಥಿತಿ ಏನು ? ಇದರಲ್ಲಿರುವ ವಿಧೇಯಕದ ಪ್ರಕಾರ ಮನೆಯಲ್ಲಿ ಬೀಡಿ ತಯಾರಿಸುವವರಿಗೆ ಅಡ್ಡಿ ಆತಂಕ ಮಾಡುತ್ತೀರಾ? ನಮ್ಮ ಜಿಲ್ಲೆಯಲ್ಲಿ ಸಾವಿರಾರು ಮಂದಿ ಮುಸ್ಲಿಮ್ ಹೆಂಗಸರು ಬೀಡಿ

ಯನ್ನು ಮನೆಯಲ್ಲಿ ಕಟ್ಟುತ್ತಾರೆ. ಗಂಡಸರು ಹೋಗಿ ಬೀಡಿಸೊಪ್ಪು, ನೂಲು, ಎಲೆಗಳನ್ನು ಅವರಿಗೆ ತಂದುಕೊಡುತ್ತಾರೆ. ಈ ಮುಸ್ಲಿಮ್ ಹೆಂಗಸರು ಫ್ಯಾಕ್ಟರಿಗಳಿಗೆ ಬಂದು ಕೆಲಸ ಮಾಡುವವರಲ್ಲ, ಮನೆಯಲ್ಲಿಯೇ ಕಟ್ಟುವವರು ಈ ಕಾನೂನು ಅಂಶಗಳಿಂದ ಮನೆಯಲ್ಲಿ ಕೆಲಸ ಮಾಡುವ ಮುಸ್ಲಿಮ್ ಹೆಂಗಸರಿಗೆ ತೊಂದರೆಯಾಗುವುದಿಲ್ಲವೇ ? ಅವರ ಜೀವನ ನಿರ್ವಹಣೆಗೆ ದೊಡ್ಡ ಅಪಾಯ ಸಂಕಟ ಒದಗುವುದಿಲ್ಲವೇ ? ನಮ್ಮಲ್ಲಿ ಹೆಚ್ಚಿನ ಮುಸ್ಲಿಮ್ ಹೆಂಗಸರೇ ಅಲ್ಲದೆ, ಅವರ ಮಕ್ಕಳೂ, 8-12-15-20 ವರ್ಷಗಳ ವಯಸ್ಸಿನವರೂ ಸಹ ಮನೆಯಲ್ಲಿ ಕೂಡ ಹಾಗೆ ಕೆಲಸ ಮಾಡುತ್ತಾರೆ. ಅವರು ಈ ಕಾನೂನಿನ ವ್ಯಾಪ್ತಿಗೆ ಒಳಪಡುವುದಿಲ್ಲವೇ ? ಈ ಕಾನೂನಿಂದ ಇನ್ನೊಂದು ತೊಂದರೆ ಇದೆ. ಅವರುಗಳು ತಾವು ಮಾಡುವ ಕೆಲಸದ ಜೊತೆಗೆ, ಬೀಡಿ ಕಸಬನ್ನು ಉಪಸಂಪಾದನೆಗಾಗಿ ತೆಗೆದುಕೊಂಡಿದ್ದಾರೆ. ಬೀಡಿ ಕಟ್ಟುವ ಪ್ರವೃತ್ತಿ, ಉದ್ಯೋಗ ನಮ್ಮಲ್ಲಿ ಎಷ್ಟರತನಕ ಹೋಗಿದೆಯೆಂಬುದರಿಂದ, ಅದರಿಂದ ರೈತರದು ಒಂದು ದೊಡ್ಡ ದೂರು ಎದ್ದಿದೆ. ಅದೇನಂದರೆ ಈ ಬೀಡಿ ಉಪಕಸಬಿನಿಂದ ಅವರಿಗೆ ಕೆಲಸಕ್ಕೆ ಜನ ಸಿಕ್ಕುವುದಿಲ್ಲವೆಂದೂ, ರೈತರ ಕೂಗು ಬಹಳವಾಗಿ ಕೇಳಿಬರುತ್ತಿದೆ. ಇದು ಎಷ್ಟರಮಟ್ಟಿಗೆ ಸರಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಬೀಡಿ ಕೈಗಾರಿಕೆ ನಮ್ಮ ಜಿಲ್ಲೆಯಲ್ಲಿ ಒಂದು ದೊಡ್ಡ ಉಪಕಸಬಾಗಿದೆ. ನಿಮ್ಮ ಕಾನೂನಿನ ಪ್ರಕಾರ ಫಾಕ್ಟರಿಗೇ ಹೋಗಿ ಬೀಡಿ ಕಟ್ಟಬೇಕೆಂದರೆ, ಎಷ್ಟೋ ಕೆಳವರ್ಗದ ಮುಸ್ಲಿಮ್ ಕುಟುಂಬಗಳು ಉಪವಾಸ ಬೀಳುವ ಸಂಭವ ಬರಬಹುದು. ಈ ಬೀಡಿ ಕಸಬು ಕೇವಲ ಷಹರುಗಳಲ್ಲಿಯೇ ಇಲ್ಲ. ನಮ್ಮ ಜಿಲ್ಲೆಯಲ್ಲಿ ಸಾಧಾರಣವಾಗಿ ಎಲ್ಲ ಕಡೆಗೂ ಹಬ್ಬಿದೆ. ನಮ್ಮ ಜಿಲ್ಲೆಯಲ್ಲಿ 50 ಸಾವಿರ ರೂಪಾಯಿ ಸೂಪರ್‌ಟ್ಯಾಕ್ಸ್ ಕೊಡುವಂಥ 2-3 ದೊಡ್ಡ ಕಂಪೆನಿಗಳಿವೆ (ಇನ್‌ಕಂಟ್ಯಾಕ್ಸ್ ಬಿಟ್ಟು). ಗಣೇಶ ಬೀಡಿ, No. 30 ಬೀಡಿ, P.V. 5 ಬೀಡಿಗಳು, ಸುವಾಸನೆ ಬೀಡಿಗಳು, ದರ್ಬಾರ್ ಬೀಡಿಗಳು, ಎಂದು ಹೆಸರಿರುವ ದೊಡ್ಡ ದೊಡ್ಡ ಕಂಪನಿಗಳು ನಮ್ಮ ಜಿಲ್ಲೆಯಲ್ಲಿವೆ. ಅವರುಗಳ ನೌಕರರುಗಳು ಮನೆಯಲ್ಲಿ ಕೆಲಸ ಮಾಡುತ್ತಿರುವುದರಿಂದ, ನಿಮ್ಮ ಕಾನೂನು ಜಾರಿಗೆ ಬಂದಲ್ಲಿ, ಬೀಡಿ ಕಟ್ಟುತ್ತಿರುವ ಮುಕ್ಕಾಲು ಪಾಲು ಕುಟುಂಬಗಳನ್ನು ನಿರುದ್ಯೋಗಕ್ಕೆ ದೂಡಿದಹಾಗಾಗುವುದಿಲ್ಲವೇ ? ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುತ್ತಾರೆ. ಆ ಸಮಿತಿಯಲ್ಲಿ ತಜ್ಞರು ಇರುತ್ತಾರೆ. ಅವರಿಗೆ ನಾನು ಈ ವಿಷಯವನ್ನು ಬಿಟ್ಟುಬಿಡುತ್ತೇನೆ.

ಈ ಮಸೂದೆಯನ್ನು ನೈತಿಕ ದೃಷ್ಟಿಯಲ್ಲಿ ಒಪ್ಪುತ್ತೇನೆ. ಇಂಥ ಕೈಗಾರಿಕೆಯ ಕೆಲಸಗಳು ಮನೆಯಲ್ಲಿ ನಡೆಯಬಾರದು ಮತ್ತು ಅದರಲ್ಲಿ ಸಣ್ಣ ಮಕ್ಕಳು ಮತ್ತು ಹೆಂಗಸರು ಕೆಲಸ ಮಾಡದಿರುವುದು ಒಳ್ಳೆಯದು. ಈ ಉದ್ಯೋಗದಲ್ಲಿ 3-4 ದೊಡ್ಡ ರೋಗಗಳು ಬರುವ ಸಂಭವವಿದೆ. ಒಂದು ಶ್ವಾಸಕೋಶಕ್ಕೆ ಸಂಬಂಧಪಟ್ಟುದು ; ಅದು ಅಸ್ತಮಾ ರೋಗ. ಕ್ಷಯವೂ ಸಹ ಈ ವೃತ್ತಿಯಿಂದ ಬರುತ್ತದೆ. ಈ ಕೆಲಸದಲ್ಲಿ waste of sexual energy ಇದ್ದು, impotency ಉಂಟುಮಾಡುತ್ತದೆ. ಹೇಗಾದರೂ ಈ ರೀತಿ 3-4 ರೋಗಗಳ ಲಕ್ಷಣಗಳು ಬೀಡಿ ಕೆಲಸಗಾರರಲ್ಲಿರುತ್ತವೆ.

ಒಂದಾನೊಂದು ಕಡೆ ಬೀಡಿಯನ್ನು ತಯಾರಿಸಲಿಕ್ಕೆ ಯಂತ್ರವನ್ನು ಉಪಯೋಗಿಸುತ್ತಿದ್ದರಂತೆ. ಅದು ಕಲಕತ್ತೆಯಲ್ಲಿ ಜಾರಿಗೆ ಬಂತು ಎಂದು ಕೇಳಿದ್ದೆ. ನೈತಿಕ ದೃಷ್ಟಿಯಿಂದ ಮತ್ತು ಆರೋಗ್ಯ ದೃಷ್ಟಿಯಿಂದ ಬೀಡಿಯನ್ನು ಮಿಲ್ಲುಗಳಲ್ಲಿ ತಯಾರಿಸುವುದು ಒಳ್ಳೆಯದು. ಆದರೆ ಹಾಗೆ ಮಾಡಿದರೆ ನಿರುದ್ಯೋಗದ ದೊಡ್ಡ ಪ್ರಶ್ನೆ ಬರುತ್ತದೆ. ಅದರಿಂದ ಸರಕಾರದವರು ಯಂತ್ರಗಿರಣಿಗಳ ಮೂಲಕ ತಯಾರಿಸುವುದನ್ನು ಉಪೇಕ್ಷಿಸಿರಬಹುದು. ಕೆಲಸಗಾರರ ಆರೋಗ್ಯದ ದೃಷ್ಟಿಯಿಂದ ಯಂತ್ರ ತಯಾರಿಕೆಯ ವಿಚಾರವನ್ನು ಸ್ವಾಗತಿಸುವಾಗ ಈ ಉದ್ದಿಮೆಯಲ್ಲಿ ತೊಡಗಿರುವವರ ನಿರುದ್ಯೋಗ ಸಮಸ್ಯೆಯ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಇದನ್ನೆಲ್ಲಾ ನಮ್ಮ ಸೆಲೆಕ್ಟ್ ಕಮಿಟಿಯವರು ಪರ್ಯಾಲೋಚಿಸುತ್ತಾರೆಂದು ನಾನು ಭಾವಿಸುತ್ತೇನೆ.

ನನ್ನ ಕೆಲವು ಸಮಸ್ಯೆಗಳನ್ನೂ, ಅನುಮಾನಗಳನ್ನೂ ನಿಮ್ಮ ಮುಂದಿಟ್ಟು, ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ನನಗೆ ತೋರಿದ ಸಮಸ್ಯೆಗಳನ್ನು ಕೈಗಾರಿಕೆಯ ದೃಷ್ಟಿಯಿಂದ, ಜನರ ಆರೋಗ್ಯ ದೃಷ್ಟಿಯಿಂದ, ಕೆಲಸಗಾರರ ಹಿತರಕ್ಷಣೆ ದೃಷ್ಟಿಯಿಂದ, ಅವರ ಆರ್ಥಿಕ ದೃಷ್ಟಿಯಿಂದ, ಮತ್ತು ನೈತಿಕದೃಷ್ಟಿಯಿಂದ ಪರಿಪೂರ್ಣವಾಗಿ ನಿಮ್ಮ ಮುಂದಿಟ್ಟಿದ್ದೇನೆ. ಮಾಲೀಕರಿಗೆ ಆಗುವ ತೊಂದರೆಗಳನ್ನೂ ಇಲ್ಲಿ ಹೇಳಿದ್ದೇನೆ. ಮುಖ್ಯವಾಗಿ ಕೆಲಸಗಾರರಿಗಿರುವ ಕುಂದುಕೊರತೆಗಳನ್ನು ಸರಿಪಡಿಸಬೇಕು. ಅದಕ್ಕೆ ನಿಜವಾಗಿಯೂ ಕೆಲಸಗಾರರ ಹಿತರಕ್ಷಣೆಯಲ್ಲಿ ಆಸಕ್ತಿ ಇರತಕ್ಕಂಥ ಮತ್ತು ಮಾಡತಕ್ಕಂಥ ಅಧಿಕಾರಿಗಳನ್ನು ನೇಮಿಸಬೇಕು.

ಇನ್ನೊಂದು ವಿಷಯವನ್ನು ಮಾತ್ರ ಹೇಳಬೇಕಾಗಿದೆ. ಕ್ಲಾಜ್ 26 ರಲ್ಲಿ 240 ದಿನ ಕೆಲಸ ಮಾಡಿದವರಿಗೆ ಮಾತ್ರ 20 ದಿನಗಳಿಗೆ ಒಂದು ದಿನದಂತೆ ರಜೆ ಕೊಡಲ್ಪಡತಕ್ಕದು ಎಂದು ಹೇಳಿದೆ. ಹೀಗೆ ಆಗಬಾರದು ; ಇದು ಎಲ್ಲರಿಗೂ ಅನುಕೂಲವಾಗುವುದಿಲ್ಲ. ಎಷ್ಟು ದಿವಸ ಕೆಲಸಮಾಡಿದ್ದರೆ, ಅಷ್ಟು ದಿವಸಕ್ಕೆ ದಾಮಾಷಾ ಮೇರೆ ರಜೆ ಸಿಕ್ಕುವ ಹಾಗೆ ಆಗಬೇಕು.

(ಶ್ರೀ ಸಂಜೀವನಾಥ ಐಕಳ)

ಮತ್ತೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಾದರೆ ಲೇಬರ್ ಇನ್‌ಸ್ಪೆಕ್ಟರ್ ಎಂದು ನೇಮಕ ಮಾಡಿದ್ದೀರಿ. ಇವರ ಉದ್ಯೋಗ ಏನು, ಇವರ ಕಾರ್ಯವ್ಯಾಪ್ತಿ ಏನು ಎನ್ನುವುದರ ಬಗ್ಗೆ ಒಂದು ನೋಟಿಫಿಕೇಷನ್ ಮಾಡದೆ ಇರುವುದರಿಂದ ಮಂಗಳೂರಿಗೆ ನೇಮಕಮಾಡಿ ಕಳಿಸಿರುವ ನಾಲ್ಕೈದು ಜನ ಲೇಬರ್ ಇನ್‌ಸ್ಪೆಕ್ಟರುಗಳು ಕೆಲಸವಿಲ್ಲದೆ ಇದ್ದಾರೆ. ಹೀಗೆ ಬೇಕಾದಷ್ಟು ಸಿಬ್ಬಂದಿಯನ್ನು ನೇಮಿಸಿದ್ದೀರಿ. ಅವರ ಕೆಲಸದ ಪರಿಮಿತಿ ಏನೆಂಬುದನ್ನು ತಿಳಿಸಿಲ್ಲ. ನಾವು ಅವರ ಹತ್ತಿರ ಕೇಳಿದರೆ ಇನ್ನೂ ಸರ್ಕಾರದಿಂದ ಆರ್ಡರಾಗಿಲ್ಲ, ನೋಟಿಫಿಕೇಶನ್ ಆಗಿಲ್ಲ, ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ.

Sri D. DEVARAJ URS.—It will be done shortly.

Sri SANJEEVANATH AIKALA.—In Government's parlance "shortly" means a minimum of 9 months.

Sri D. DEVARAJ URS.—By the time you reach your place it will be there

ಶ್ರೀ ಸಂಜೀವನಾಥ ಐಕಳ.—ಅವರ ಕೆಲಸವೇನು ಎನ್ನುವುದರ ಬಗ್ಗೆ ಆರ್ಡರಾಗಿಲ್ಲ, ಅವರೆಲ್ಲ ಕೆಲಸವಿಲ್ಲದೆ ಕುಳಿತಿದ್ದಾರೆ. ಇದಕ್ಕೆ ಗಮನ ಕೊಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಡಿ. ಸಾಮ್ರಾಜ್ಯ (ಬ್ರಹ್ಮಾವರ).—ಅಧ್ಯಕ್ಷರೇ, ನಾನು ಈ ಬಿಲ್ಲನ್ನು ಸ್ವಾಗತಿಸುತ್ತ ಅದರ ವಿಚಾರದಲ್ಲಿ ನನ್ನ ಅನುಭವವನ್ನು ಸಭೆಯ ಮುಂದೆ ಇಡಬಯಸುತ್ತೇನೆ. ಬೀಡಿ ಕಟ್ಟುವಂಥ ಕಾರ್ಮಿಕರಿಗೆ ಏನು ಅನುಕೂಲ ಮಾಡಿಕೊಡಬೇಕೆಂದು ಬಿಲ್ಲನ್ನು ತಂದಿದ್ದೀರಿ ಅದು ಕೆಲವು ಸಂದರ್ಭಗಳಲ್ಲಿ ಒಳ್ಳೆಯದಾದರೂ ಕೆಲವು ಸಂದರ್ಭಗಳಲ್ಲಿ ಬಹಳ ತೊಂದರೆಗಳು ಕೂಡ ಉಂಟು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಬೀಡಿ ಕಟ್ಟುವವರು ಹೆಚ್ಚಿನ ಜನ ಹೆಂಗಸರು ಮತ್ತು 14 ವರ್ಷ ಪ್ರಾಯಕ್ಕೆ ಮಿಕ್ಕಿದ ಜನರು. ಹಳ್ಳಿಯವರು ಕೂಡ ಬಹಳ ಜನ ಈ ಉದ್ಯಮದಲ್ಲಿರುತ್ತಾರೆ. ಅವರೆಲ್ಲ ಇದನ್ನು ಉಪಕಸಬಾಗಿ ಇಟ್ಟುಕೊಂಡಿರುತ್ತಾರೆ. ಅನೇಕ ರೈತರು ಸಾಗುವಳಿ ಮಾಡಿ ಬಿಡುವಾದಾಗ ಈ ಕೆಲಸವನ್ನು ಮಾಡುತ್ತಾರೆ. ದಿನಕ್ಕೆ 13 ಗಂಟೆ ಕೆಲಸಮಾಡುತ್ತಾರೆ ಎಂದು ಹೇಳುವುದು ಸರಿಯಾಗುವುದಿಲ್ಲ. ದಿನಕ್ಕೆ ನಾಲ್ಕೈದಾರು ಗಂಟೆ ಕಾಲ ಬೀಡಿ ಕಟ್ಟುತ್ತಾರೆ. ಇದರಿಂದ ಅವರಿಗೆ ದಿನಕ್ಕೆ ಒಂದರಿಂದ ಮೂರು ರೂಪಾಯಿ ಕೆಲವು ವೇಳೆ ನಾಲ್ಕು ರೂಪಾಯಿವರೆಗೂ ಉತ್ಪತ್ತಿ ಇದೆ. ಇದರಲ್ಲಿ ಏನು ತೊಂದರೆ ಎಂದರೆ ಅವರು ಒಂದೇ ಕಡೆಯಲ್ಲಿ ಬಂದು ಬೀಡಿಯನ್ನು ಕಟ್ಟಬೇಕು, ಸರಿಯಾದ ಲೆಕ್ಕಾಚಾರ ಮಾಡಬೇಕು ಎಂದರೆ ನಮ್ಮ ಜಿಲ್ಲೆಯಲ್ಲಿ ತೊಂದರೆಯುಂಟು. ಮಂಗಳೂರು ಷಹರಿನಲ್ಲಿ ಈಗಿರುವ ಜನಗಳಿಗೇ ವಸತಿ ಸೌಕರ್ಯವಿಲ್ಲ. ಬೀಡಿ ಕಟ್ಟುವುದಕ್ಕೋಸ್ಕರ ಹಳ್ಳಿಯಿಂದ ಜನರು ಬಂದರೆ ಸಣ್ಣ ಸಣ್ಣ ಪಟ್ಟಣಗಳಲ್ಲಿ ಮತ್ತು ಮಂಗಳೂರಿನಂಥ ಷಹರುಗಳಲ್ಲಿ ಮನೆ ಬಾಡಿಗೆ ಕೊಡಲಿಕ್ಕೆ ಕೂಡ ಅವರಿಗೆ ಕಷ್ಟವಾಗುತ್ತದೆ. ನಮ್ಮ ಊರಿಗೆ ಆರು ಮೈಲಿ ದೂರವಿರುವ ಮೂಡಬಿದ್ರಿಯಿಂದ ಬೆಳಗ್ಗೆ ಅಥವಾ ಮಧ್ಯಾಹ್ನ ಬಸ್ಸಿನಲ್ಲಿ ಬಂದು ಹೊಗೆಸೊಪ್ಪು, ಎಲೆ ಮುಂತಾದುವನ್ನು ಐದಾರು ದಿವಸಕ್ಕಾಗುವಷ್ಟು ತೆಗೆದುಕೊಂಡು ಹೋಗಿ ಸಾಗುವಳಿ ಮುಗಿದ ಮೇಲೆ ಬೀಡಿ ಕಟ್ಟಿ ಅದರಿಂದ ಬರುವ ಉತ್ಪತ್ತಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ಇದು ಅವರಿಗೆ ಒಂದು ಉಪಕಸಬಾಗಿರುತ್ತದೆ. ಅವರು ಪೇಟೆಗೆ ಬಂದು ಬೀಡಿ ಕಟ್ಟಬೇಕು ಎಂದರೆ ಅನೇಕ ಜನ ಹೆಂಗಸರಿಗೆ, ಹೆಚ್ಚಿಗೆ ಹೇಳುವುದಾದರೆ ಮುಸಲ್ಮಾನ್ ಘೋಷ ಹೆಂಗಸರಿಗೆ ಬಹಳ ತೊಂದರೆಯಾಗುತ್ತದೆ. ಅವರು ಈ ಕಸಬನ್ನೇ ಬಿಡಬೇಕಾಗುತ್ತದೆ. ಅವರಿಗೆ ಈ ಉಪಕಸಬಿನಿಂದ ಬರತಕ್ಕ ಉತ್ಪತ್ತಿ ನಿಂತುಹೋಗುತ್ತದೆ. ಬೇರೆ ಜಿಲ್ಲೆಗಳಿಗೂ ನಮ್ಮ ಜಿಲ್ಲೆಗೂ ಇರುವ ವ್ಯತ್ಯಾಸವೆಂದರೆ ನಮ್ಮಲ್ಲಿ ಮನೆಗಳು ಬಹಳ ದೂರವಾಗಿರುತ್ತವೆ. ಮನೆಗಳು ಒಂದಕ್ಕೊಂದು ಹೊಂದಿಕೊಂಡಿರುವುದಿಲ್ಲ. ಕೆಲವು ಕಡೆ ಒಂದು ಫರ್ಲಾಂಗ್ ದೂರದಲ್ಲಿದ್ದರೆ ಕೆಲವು ಕಡೆ ಅರ್ಧ ಮೈಲಿ, ಒಂದು ಮೈಲಿ ಇರುತ್ತವೆ. ಇಂಥ ಕಡೆಗಳಲ್ಲಿ ಬೀಡಿ ಕಾರ್ಮಿಕರು ಒಂದು ಸ್ಥಳದಲ್ಲಿ ಸೇರಿ ಕೆಲಸ ಮಾಡಬೇಕು ಎಂದರೆ ತೊಂದರೆಯಾಗುತ್ತದೆ. ರೈತರೂ—ಅವರಿಗೆ ಮೂರು ನಾಲ್ಕು ತಿಂಗಳು ಮಾತ್ರ ಕೆಲಸವಿರುತ್ತದೆ, ಉಳಿದ ಸಂದರ್ಭಗಳಲ್ಲಿ ಕೆಲಸವಿರುವುದಿಲ್ಲ—ತಮಗೆ ಕೆಲಸವಿಲ್ಲದ ವೇಳೆಯಲ್ಲಿ ಬೀಡಿ ಕಟ್ಟುವುದನ್ನು ಉಪಕಸಬಾಗಿ ಮಾಡಿಕೊಂಡು ತಮ್ಮ ಜೀವನವನ್ನು ಒಳ್ಳೆಯ ರೀತಿಯಲ್ಲಿ ನಡೆಸುತ್ತಿರುತ್ತಾರೆ. ಇಂಥ ಸಂದರ್ಭಗಳಲ್ಲಿ ಬಹಳ ಯೋಚನೆ ಮಾಡಬೇಕು.

ಇನ್ನೊಂದು ವಿಷಯವೆಂದರೆ ಸುವರ್ಣ ನಿಯಂತ್ರಣ ಆಜ್ಞೆಯಿಂದ ನಿರುದ್ಯೋಗಿಗಳಾದವರಲ್ಲಿ ಅರ್ಧ ಜನ ಹೆಂಗಸರು, ಅಥವಾ 14 ವರ್ಷಕ್ಕೆ ಮಿಕ್ಕಿದ ಹುಡುಗರು ಬೀಡಿ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೂ ಈ ಬಿಲ್ಲಿನಿಂದ ತೊಂದರೆಯಾಗಿತ್ತು. ಆದುದರಿಂದ ಈ ವಿಷಯವಾಗಿ ಬಹಳ ಆಲೋಚನೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಸುಮಾರು ಹತ್ತು ಸಾವಿರ ಕುಟುಂಬಗಳು ಬೀಡಿ ಕಟ್ಟುವ ಕೆಲಸದಲ್ಲಿವೆಂದರೆ 45,000 ಜನ ಬೀಡಿ ಕಟ್ಟುವವರಿದ್ದಾರೆ. ಅವರಿಗೆಲ್ಲ ತೊಂದರೆಯಾಗದಂತೆ ಸೆಲೆಕ್ಟ್ ಕಮಿಟಿ ಮತ್ತು ಈ ಸಭೆ ನೋಡಿಕೊಳ್ಳಬೇಕೆಂದು ತಿಳಿಸಿ ನನಗೆ ನಾಲ್ಕು ಮಾತನ್ನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ. ರಾಜ್ಯದ ಮಾನ್ಯ ಕಾರ್ಮಿಕ ಸಚಿವರು ಈ ಸಭೆಯ ಮುಂದೆ ಇಟ್ಟಿರುವ ಮೈಸೂರು ರಾಜ್ಯದ ಬೀಡಿ ಕೈಗಾರಿಕೆ ಷರತ್ತುಗಳ 1962ನೆಯ ವಿಧೇಯಕವನ್ನು ಓದಿನೋಡಿದೆ. ಈ ವಿಧೇಯಕವಲ್ಲಿ ಕೊಟ್ಟಿರತಕ್ಕ ಬೀಡಿ ಉದ್ಯಮಗಳಲ್ಲಿ ಕಾರ್ಮಿಕರಿಗೆ ಇರತಕ್ಕ ಸವಲತ್ತುಗಳನ್ನು ನೋಡಿದರೆ ಬಹಳ ಉತ್ತಮ ರೀತಿಯಿಂದ ಮಾಡಿದ್ದಿದೆ. ಆದರೆ ನಮ್ಮ ಸ್ನೇಹಿತರು ಈಗಾಗಲೇ ಸಂಶಯಪಟ್ಟಂತೆ ಈ ಕಾನೂನುಗಳು ಅಮಲಿನಲ್ಲಿ ಬರುವುವೋ ಇಲ್ಲವೋ ಎನ್ನುವುದನ್ನು ನಾವು ಇಲ್ಲಿ ವಿಚಾರಿಸತಕ್ಕದ್ದಿದೆ. ಈಗ ನಾವು ನೋಡಿದಹಾಗೆ ಬೀಡಿ ಕಟ್ಟುವ ಕೆಲಸದ ಬಗ್ಗೆ ನಾನು ರಾಜ್ಯದ ಕೆಲವೊಂದು ಭಾಗದಲ್ಲಿ ಹೋಗಿದ್ದೆ. ಮಂಗಳೂರು, ಗದಗ, ಧಾರವಾಡ, ಬೆಳಗಾಂ, ಬಳ್ಳಾರಿ ಮುಂತಾದ ಊರುಗಳಲ್ಲಿ ನಾನು ನೋಡಿದ್ದೇನೆ. ಈಗಾಗಲೇ ಮಂತ್ರಿಗಳು ವಿವರಿಸಿದಂತೆ ಬೀಡಿ ಕಟ್ಟುವ ಸ್ಥಳಗಳು ಬೆಳಕಿಲ್ಲದೆ, ಸ್ವಚ್ಛ ರೀತಿಯಲ್ಲಿಲ್ಲದೆ ರೋಗರುಜಿನಗಳಿಗೆ ಆಸ್ಪದ ಕೊಡತಕ್ಕ ಸ್ಥಳಗಳಾಗಿದ್ದುದು ಕಂಡುಬಂತು. ಇಷ್ಟೇ ಅಲ್ಲದೆ ಈಗಾಗಲೇ ಹೇಳಿದರು; ಸಾವಿರಾರು ಬೀಡಿಗಳನ್ನು ಕಟ್ಟಿದರೆ ಕಂಟ್ರಾಕ್ಟು ಮುಖಾಂತರವಾಗಿ ಅಥವಾ ಅವರಿಗೆ ದಿನಕೂಲಿಯಲ್ಲಿ ಬಹಳ ಕಡಮೆ ಕೂಲಿಯನ್ನು ಕೊಡತಕ್ಕ ಸರಿಸ್ಥಿತಿ ಕೂಡ ಉಂಟು ಎಂದು.

ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ರೀತಿಯಾಗಿ ಒಂದು ಸಾವಿರ ಬೀಡಿ ಸುತ್ತುವುದಕ್ಕೆ ರೇಟು ಇದೆ ಎಂಬುದು ಕಂಡು ಬಂದಿದೆ. ಈ ಮಸೂದೆಯಲ್ಲಿ ಹೇಳಿದ ಹಾಗೆ ಈ ಬೀಡಿ ಸುತ್ತುವ ಕೆಲಸಗಾರರು ಕೆಲಸ ಮಾಡುವ ಸ್ಥಳದಲ್ಲಿ ಗಾಳಿ ಬೆಳಕು ನೀರಿನ ವ್ಯವಸ್ಥೆ ಅವಶ್ಯಕವಾಗಿ ಇರಬೇಕು. ಕಾರ್ಮಿಕರ ಬಗ್ಗೆ ಅನುಕೂಲ ಒದಗಿಸಲು ಇದರಲ್ಲಿ ಆಸ್ಪದವಿದೆ. ಆದರೆ ಕಾರ್ಮಿಕರನ್ನು ಒಳ್ಳೇ ರೀತಿಯಿಂದ ನಡೆಸಿಕೊಂಡು ಬರತಕ್ಕ ಮಾಲೀಕರ ಬಗ್ಗೆ ಒಂದೆರಡು ಸಲವತ್ತು ಕೊಡಬೇಕಾಗಿತ್ತು. ಮಾಲೀಕರಿಗೆ ಸವಲತ್ತು ಒದಗಿಸದೇ ಹೋದರೆ ಎರಡು ಮೂರು ಸಾವಿರ ರೂಪಾಯಿ ಸಾಲ ತಂದು ಪ್ರಾರಂಭಿಸಿದ ಕಾರ್ಖಾನೆಗಳನ್ನು ಹಣ ಸಾಲದೆ ಮುಚ್ಚಿ ಬಿಡುವ ಸಂದರ್ಭ ಬರುತ್ತದೆ. ಅವರಿಗೂ ಸಹಾಯ ಕೊಡದೇ ಹೋದರೆ ಇನ್ನು ಮುಂದೆ ನಡೆಸುವುದು ಸಾಧ್ಯವಿಲ್ಲ. ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದದ್ದೇ ಆದರೆ ರಾಜ್ಯದಲ್ಲಿರುವ ಒಂದೆರಡು ಫ್ಯಾಕ್ಟರಿಗಳನ್ನು ಬಿಟ್ಟು ಉಳಿದುವುಗಳನ್ನು ಮುಚ್ಚಿಬಿಡಬೇಕಾಗುತ್ತದೆ. ಆ ರೀತಿ ಆಗದ ಹಾಗೆ ಮಾಡಲು ಮಸೂದೆಯಲ್ಲಿ ಸೂಕ್ತ ಬದಲಾವಣೆ ಮಾಡಬೇಕು. ಜಾಯಿಂಟ್ ಸೆಲೆಕ್ಟ್ ಕಮಿಟಿ ಇದನ್ನು ಗಮನಿಸಬೇಕಾದುದು ಅಗತ್ಯ. ಅವರು ಮಂಗಳೂರು, ಮುಂಬಯಿ ಕರ್ನಾಟಕ ಈ ಪ್ರದೇಶ ಮದ್ರಾಸ್ ಪ್ರದೇಶಕ್ಕೆ ಹೋಗಿ ನೋಡಿಕೊಂಡು ಬರಬೇಕು. ಕಾರ್ಮಿಕರ ಪ್ರತಿನಿಧಿಗಳನ್ನು ಬರಮಾಡಿಕೊಂಡು ವಿಚಾರಿಸಬೇಕು. ಉತ್ತಮ ರೀತಿಯಿಂದ ನಡೆಸಿಕೊಂಡು ಬರುತ್ತಿರುವ ಮಾಲೀಕರಿಗೂ, ಕಾರ್ಮಿಕರಿಗೂ ಪರಸ್ಪರ ಯಾರಿಗೂ ಲುಕ್ಸಾನವಾಗದ ಹಾಗೆ ನೋಡಿಕೊಳ್ಳಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

3 P.M

ಈ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕಾದುದು ಅಗತ್ಯವಿದೆ. ಯುವಕ ಎಂದರೆ 14 ವರ್ಷ ವಯಸ್ಸು ಪೂರ್ತಿಯಾಗಿರುವ ಆದರೆ 18 ವರ್ಷ ವಯಸ್ಸು ಪೂರ್ತಿಯಾಗದ ಮನುಷ್ಯ ಎಂದು ಅರ್ಥ ಎಂದು ಹೇಳಿದೆ. ಅಂದರೆ 14 ರಿಂದ 18 ವರ್ಷದವರೆಗೆ ಯುವಕ ಅಂದ ಹಾಗೆ ಆಗುತ್ತದೆ. ಅಲ್ಲದೆ 14 ವರ್ಷವರೆಗೆ ಮಕ್ಕಳು ಎಂಬ ಹಾಗೆ ಆಗುತ್ತದೆ. ಇದು ಅಷ್ಟು ಸರಿಯಾಗಿಲ್ಲ. 14 ವರ್ಷ ಮೇಲ್ಪಟ್ಟವರ ಬಗ್ಗೆ ಒಂದೇ ರೀತಿಯಾಗಿ ಅನ್ವಯಿಸಬೇಕು. ಈ ಬಗ್ಗೆ ಸೂಕ್ತ ತಿದ್ದುಪಡಿ ಮಾಡಬೇಕು. ಇನ್ನು ಷರತ್ತುಗಳ ಬಗ್ಗೆ ನಿರ್ದಿಷ್ಟಪಡಿಸಿರುವುದು ಪಟ್ಟಣಗಳಲ್ಲಿ ಮಾತ್ರ ಸಾಧ್ಯ. ಆದರೆ ಹಳ್ಳಿಗಳಲ್ಲಿ ಅದನ್ನು ಅನ್ವಯಿಸುವುದು ಸಾಧ್ಯವಿಲ್ಲ. ಸಣ್ಣ ಸಣ್ಣ ಮನೆಗಳಲ್ಲಿ ಬೀಡಿ ಕಟ್ಟುವ ಕೆಲಸ ನಡೆಯುತ್ತದೆ. ಕಾನೂನಿನಲ್ಲಿ ನಿರ್ದಿಷ್ಟ ಪಡಿಸಿದ ಹಾಗೆ ಎಲ್ಲ ಸೌಕರ್ಯವನ್ನು ಒದಗಿಸುವುದಾಗಲಿ, ದಿನ ಕೂಲಿ ಕೊಡುವುದಾಗಲಿ ಸಾಧ್ಯವಾಗುವುದಿಲ್ಲ. ಒಂದು ದಿನಕ್ಕೆ ಒಂಬತ್ತು ತಾಸು ಕೆಲಸ ಮಾಡಿದರೆ ಒಬ್ಬನು 600 ಬೀಡಿ ಕಟ್ಟುತ್ತಾನೆ. ಆದರೆ ಒಂದು ಸಾವಿರ ಬೀಡಿ ಕಟ್ಟಿದರೆ ಇಷ್ಟು ಕೂಲಿ ಕೊಡಬೇಕೆಂದು ನಿಗದಿ ಮಾಡುತ್ತಾರೆ. ಈ ರೀತಿ ಮಾಡಿದರೆ ಕಾರ್ಮಿಕ ಜನರಿಗೂ

(ಶ್ರೀ ಸಿದ್ದಯ್ಯ ಕಾಶಿಮಠ)

ಉತ್ತಮ ಮಾಲೀಕನಿಗೂ ಲುಕ್ಸಾನವಾಗುವುದಿಲ್ಲ. ಈ ರೀತಿ ಮಾಡಲು ಸೆಲೆಕ್ಟ್ ಕಮೀಟಿಯವರು ಪರಿಶೀಲನೆ ಮಾಡಬೇಕು.

ಇನ್ನು ಹೆಣ್ಣುಮಕ್ಕಳ ವಿಚಾರದಲ್ಲಿ ನಿಗದಿ ಮಾಡಿರುವುದನ್ನು ನಾನು ಒಪ್ಪುತ್ತೇನೆ. 14 ವರ್ಷ ವಯಸ್ಸು ಮೇಲ್ಪಟ್ಟು ಇರತಕ್ಕ ಹೆಣ್ಣುಮಕ್ಕಳು ರಾತ್ರಿ ಕೆಲಸ ಮಾಡಬಾರದು ಎಂಬುದು ಸರಿಯಾಗಿದೆ. ಆದರೆ ಹೆಣ್ಣುಮಕ್ಕಳು ಕಾರ್ಖಾನೆಗೆ ಕೆಲಸಕ್ಕೆ ಹೋಗುವುದನ್ನು ನಾವು ನೋಡಿಲ್ಲ. ಆದರೆ ಅವರು ಎಲೆ ತಂಬಾಕು ಮುಂತಾದ ಸಾಮಾನು ಮನೆಗೆ ತಂದು ಕೆಲಸ ಮಾಡುವುದನ್ನು ನಾವು ನೋಡುತ್ತೇವೆ. ಕ್ಯಾಂಟೀನ ಸೌಕರ್ಯ ಒದಗಿಸುವುದು, 50 ಜನ ಹೆಣ್ಣುಮಕ್ಕಳು ಕೆಲಸ ಮಾಡುವಕಡೆ ಬಾಲವಾಡಿ ಒದಗಿಸಬೇಕು ಎಂದು ಇದರಲ್ಲಿದೆ. ಆದರೆ ಬಾಕಿ ಎಲ್ಲ ಉದ್ಯಮಕ್ಕಿಂತ ಈ ಉದ್ಯಮ ಬೇರೆ ರೀತಿ ನಡೆಯುವುದರಿಂದ ಇಂಥ ಸೌಕರ್ಯ ಯಾವ ರೀತಿ ಒದಗಿಸಬೇಕೆಂಬುದನ್ನು ವಿಚಾರಮಾಡಿ ನೋಡಬೇಕು. ಕಾನೂನನ್ನು ಸರಿಯಾಗಿ ಉಪಯೋಗಿಸುವ ಹಾಗೆ ಮಾಡಬೇಕು.

ಇನ್ನು 3 ನೆಯ ಅಧ್ಯಾಯದಲ್ಲಿ ಪರಿಶೀಲನಾ ಸಿಬ್ಬಂದಿ ವರ್ಗದಲ್ಲಿ ಇನ್‌ಸ್ಪೆಕ್ಟರ್ ಬಗ್ಗೆ ಹೇಳಿದ್ದಾರೆ. ಹೊಸವಾಗಿ ಇನ್‌ಸ್ಪೆಕ್ಟರ ಗಳ ನೇಮಕ ಮಾಡಿ ಅಧಿಕಾರ ಕೊಡಬೇಕೆಂದು ಮಸೂದೆಯಲ್ಲಿ ಹೇಳಿದೆ. ಯಾವ ಸಮಯದಲ್ಲಿ ಹೋದರೂ ಮಾಲೀಕರೂ ಸಂಬಂಧಿಸಿದ ಲೆಕ್ಕಪತ್ರ ಕೊಡಬೇಕೆಂದು ಹೇಳಿದೆ. ಇದು ಸರಿಯಾಗಿಲ್ಲ. ಏಕೆಂದರೆ ಇದುವರೆಗೆ ಸೇಲ್ಸ ಟಾಕ್ಸ ಇನ್‌ಸ್ಪೆಕ್ಟರುಗಳಿಂದ ಆಗಬಾರದ ತೊಂದರೆಯಾಗುತ್ತಿರುವುದನ್ನು ನಾವು ನೋಡಿದ್ದೇವೆ. ಯಾವಾಗ ಬೇಕಾದಾಗ್ಗೆ ಎಂಬುದನ್ನು ತೆಗೆದು ಹಾಕಿ ನಿರ್ದಿಷ್ಟ ಪಡಿಸಿದ ಕೆಲಸದ ಸಮಯದಲ್ಲಿ ಮಾತ್ರ ಬಂದು ಲೆಕ್ಕ ಪತ್ರ ತಪಾಸ್ ಮಾಡಬೇಕು ಎಂದು ಇದರಲ್ಲಿ ತಿದ್ದುಪಡಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಶಿಶುವಿಹಾರ ನಡೆಸುವ ಬಗ್ಗೆ ಸರಕಾರ ಸಹಾಯ ಒದಗಿಸುತ್ತದೆಂದು ಹೇಳಿದರು. ಆದರೆ ಯಾವ ರೀತಿ ಸಹಾಯ ಕೊಡಲಾಗುವುದು ಎಂಬುದನ್ನು ಇದರಲ್ಲಿ ಹೇಳಿಲ್ಲ. ಅಂಥ ಸಹಾಯ ಒದಗಿಸುವುದನ್ನು ತಿಳಿಸಬೇಕು. ಈ ಸಹಾಯ ಒದಗಿಸುವ ಮೂಲಕ ಈ ಮಸೂದೆಯನ್ನು ಬೀಡಿ ಉದ್ಯಮದವರು ಸ್ವಾಗತಿಸುತ್ತಾರೆ. ಒಟ್ಟಿನಲ್ಲಿ ಈ ಮಸೂದೆಯಲ್ಲಿರುವ ಕುಂದು ಕೊರತೆಗಳನ್ನು ತೆಗೆದು ಹಾಕಲು ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಚಾರ ಮಾಡಿ ಇದನ್ನು ಪಾಸ್ ಮಾಡಬೇಕು ಮತ್ತು ಕಾರ್ಮಿಕರಿಗೆ ಯೋಗ್ಯ ಸಹಾಯ ಮಾಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

Sri B. R. SUNTHANKAR (Belgaum City).—Mr. Speaker Sir, this is a welcome measure. For the first time, this Bill seeks to regulate the conditions of work in the Beedi Manufacturing premises or concerns.

Sir, while we welcome this Bill, I should say that this contains some defects and shortcomings which will have to be removed and if this Bill has to serve its purpose, if the object is to be achieved and if this Bill has to be worked successfully, these defects and shortcomings will have to be removed.

Sir, this Beedi manufacturing industry is a very important industry in the State. This industry is spread over several areas and districts in the State. The extent and proportion of this industry are very considerable. Sir, unfortunately, I could not get statistics. I looked into figures that were suppplied to us in respect of this industry and industrial workers. But nowhere I could find any statistics or figures about this Beedi industry. I got some figures about the Tobacco factory, not about this big industry. So, we cannot definitely say how many beedi manufacturing concerns are there, and how many workers are employed. But Sir, I think several lakhs of workers are employed in this industry. The nature of this industry is a very peculiar one. It is not an industry working in group or collective industry as such. This work is scattered in different places, in different localities and in different villages. It is not a concentrated industry but it is a scattered industry assuming the

form of a cottage industry or home or subsidiary industry. There are a large number of households which take up this industry in their spare time as a subsidiary industry—not as a main industry, where womenfolk of these families in their spare time do this beedi manufacturing work. So, the extent and proportion of this industry are not perceptible. It is rather imperceptible. The proportion and extent are very large because it is scattered in large areas.

Sir, this is an industry which can be called a very easy industry. To start this industry, not much initial capital is required. Not much fixed capital is required. But at the same time, working capital is very high and huge and so profits made by the employers, by those proprietors are very huge and with less capital, with minimum capital, they can make maximum profits. Workers are paid very low. Particularly in this State, Sir, beedi workers are paid very low wages. As the Hon'ble Minister was pleased to state, such enactments have been passed in the Madras State and Kerala State. Naturally, this beedi industrialists are trying to shift to the borders of Mysore because there was no such legislation in this State and further because the wages paid here are very low. So, very recently this industry is being shifted from Kerala and Madras States to the borders of Mysore. Because the wages paid here to workers are very low, the employers can make a greater margin of profit. On account of the nature of the industry, huge industrial concerns have sprung up from mere scrap. In a period of a few years, tobacco kings have sprung up from almost nothing. If I say from almost nothing, it is correct, because the initial capital required is very little, no fixed capital is required and so within a very short period, from nothing, tobacco kings have sprung up in these tobacco areas. These tobacco kings have a tight grip on this industry. Wherever this industry exists, these tobacco magnates or tobacco kings have a tight grip on the industry and not only on this industry but they hold a tight grip on workers. They hold rural areas in their clutches where this industry is going on. They are at most kings in this industry and there has been absolutely no check on this industry.

Sir, it has been also mentioned in the statement of objects and reasons that owing to the peculiar nature of this industry, the employers and proprietors have been successfully evading all the Factory and Labour laws. They have been doing that. From that point of view, this Bill is very welcome and I should congratulate the Minister on bringing this Bill in this House.

Sir, this industry has been flourishing on the exploitation of the workers—men and women who are engaged in this industry. And the labour unfortunately is not organised. It cannot be organised because it is scattered in various places, houses, homes, cottages, etc. Owing to this peculiar nature of the working of this industry, labour unfortunately cannot organise themselves and they cannot put up any fight successfully and get their rights and facilities. or amenities. So, they are at a disadvantage.

(SRI B. R. SUNTHANKAR)

Another feature of this industry is that this industry almost goes on a contract basis. There is a special class of people who work as contractors and sub-contractors in this industry. The proprietors or employers sit at home, just as the Hon'ble Minister was pleased to explain and they have not much parafernalia. But through contractors they get this industrial work and make huge profits. There is nothing in this Bill to check the activities of these contractors because wages as I said is Rs. 1-80 or Rs. 1-13-0. This wage the contractor gets, not the employees or the actual workers. They get only Rs. 1-9-0. or Rs. 1-10-0. These contractors and agents make huge profits without putting up any labour. They are almost parasites in this industry. There is nothing in this Bill to check the activities of these contractors, these parasites on this industry. Sir, I therefore suggest that provision would have to be made to check the activities of these contractors or to do away with these contractor systems.

Sir, there has been a provision in this Bill about the sanitary conditions, etc., and that is very essential. The places where this industry is being worked are in a very unhygienic and dirty condition. As my friend Sri Aikala put it, it gives room for T. B. and other diseases. Particularly the women workers get emaciated. It is very necessary that healthy atmosphere and healthy conditions will have to be provided. But there is no provision here as regards the tools and other implements to be used by the workers. Then, the worker has to sit there for hours together in a sqatting position. This is very uncomfortable. So, there must be some provision to make certain arrangements, certain specifications in this regard. Similarly Minimum Wages Act. Some minimum standards not made applicable to the workers. At least wage has to be fixed for these workers.

Similarly, Sir, in clause 3 only the employees preparing beedies are mentioned. What about the clerical staff? There will be clerical staff also in these industries and this Bill does not cover them. So, provision should be made to cover them also. As Sri Aikala pointed out, snuff manufacturing industry should also be included in this Bill. That is also an important industry having similar conditions, if not worse conditions than beedi industry. So, that has to be included in this Bill.

Sir, for the successful working of this enactment, more and proper vigilance and supervision is very necessary. Simply passing an Act and leaving it to the hands of some Inspectors would not do any good. On account of the peculiar nature of this industry, strict vigilance is required. For the successful working of this Act, separate and special staff will have to be employed. I do not know why a Financial Memorandum is not attached to this Bill. The Hon'ble Minister was pleased to say that no new staff would be employed for the implementation of this Act. But, a Financial Memorandum should have been attached giving details of the expenditure for the staff and the income from the fee of licenses and all that.

[MR. SPEAKER in the Chair.]

About the powers of the Inspector, it says, 'The Inspector may for the purpose of enforcement of this Act...' 'May' may mean 'may not' also. These functions must be made obligatory on the Inspector. Sir, we have enough experience of these Inspectors. It would not be out of place if I were to mention something about the Inspectors in the Electricity Board. We have very bitter experience of them. For the last several years the electricity consumers of Belgaum have put forth their several grievances before the Government but the Inspector never cares to redress them. The consumers of electricity of Belgaum had to pass a resolution in a public meeting that the Electrical Inspector should be removed. Therefore, I say that we must make it obligatory on these Inspectors to supervise and inspect these beedi industries. It should not be left to their sweet will.

Then, Sir, proviso to clause 1 is unnecessary. Suppose the number of workers is less than 50 and there are some women workers also there. Should not separate urinals be provided there? So, this clause should be deleted and sub-section (2) is there and it covers everything.

Clause 17 refers to hours of working. It says more than 9 hours in any day. Why should it be nine hours? It should be only eight hours. The workers should not be made to work for more than eight hours.

In sub-clause (3) of Clause 18 there is a mention about basic wages. But what a basic wage is, who should fix it and how it is going to be fixed are all matters not defined in the Bill. This must be made clear and specific.

3-30 P.M.

Sri D. DEVARAJ URS.—It has been fixed in the notification under the Minimum Wages Act.

Sri B. R. SUNTHANKAR.—That Act is not applicable here.

Coming to clause 26, there is no mention about sick leave and festival holidays. The workers must be paid wages during sick leave and festival holidays also.

I agree with sub-clause (3) of clause 29 but I am afraid the families which are engaged in this industry on a part-time basis or as a subsidary industry are not covered.

Sri G. V. GOWDA.—They are not employees of anybody. This Bill will not apply to them.

Sri B. R. SUNTHANKAR.—That may create some trouble to those who are carrying on the business as a subsidiary work. It should be the duty of the employer to provide for some space or yard or shed for such families who work in their leisure time. According to this Bill such people may be prevented from carrying on their work in their homes and therefore some arrangement must be made for them to take to work during spare hours.

(SRI B. R. SUNTHANKAR)

The power of exemption given to Government under clause 40 should be deleted. Such exemptions would defeat the very purpose of this legislation. There should be no exemption if the Government is really keen or serious in bringing this Bill into effect.

Looking to the peculiar nature of this industry I would venture to suggest to Government that they should take all steps to bring it under the co-operative sector. That will do immense good to the employees, particularly women employees.

I hope the Bill would emerge in a better form from the Select Committee

†Sri D. PARAMESHWARAPPA (Honnali).—Sir, many of my friends have already spoken on this Bill and pointed out many defects My friend Sri Sunthankar has made the very valuable suggestion that this industry may best be under the co-operative sector and I hope the Government will take steps in that direction. I recollect that last year one of the Members of the Legislature, who happens to be the President of the Beedi Workers, Association of Mysore, submitted a memorandum setting forth the many grievances of the workers in this industry. I congratulate the Government on having brought this Bill so early. In my opinion this Bill appears to be superfluous and unwarranted by reason of the fact that the Factories Act and the Industrial Disputes Act could as well serve the interests of this industry. The Minister who is piloting this Bill argued that it was the intention behind this Bill to ameliorate the conditions of the workers and improve their living conditions. I congratulate the Labour Minister for his sympathy but all the same I would like to ask him whether the other two enactments of which I spoke just now would not serve the purpose. If it be his feelings that the employers are circumventing the provisions of the Factories Act, he may bring in appropriate amendments to that Act. The Minister said that there was no additional financial involvement in the course of the implementation of this Bill but I am afraid, it may not turn out to be true. There is likely to be some expenditure. My apprehension is, now at this stage it may appear a thin end of the edge, but certainly it is bound to assume some extra additional expenditure on the State Exchequer. With these observations, I submit that the Minister in charge of the Bill will be doing a very good thing if he drops this Bill totally in view of the Factory Act that is now in existence.

As has been suggested by the Hon'ble Minister, this Bill is going to be referred to a Joint Select Committee to go through the details of working and to examine this thoroughly. That is a suggestion which was made by the Minister. In that case, I think the members of the Select Committee will duly consider the valuable suggestions that were made out by my learned friend, Sri B. R. Sunthankar. I need not repeat the same argument so far as this Bill is concerned.

I oppose this Bill and request the Minister in charge to withdraw it in view of the existence of the Factory Act and the Industrial Disputes

Act, because these workers also can be governed by labour laws under the same Act.

Mr. SPEAKER.—One thing I could not follow. If it is superfluous, it won't do any harm.

Sri D. PARAMESHWARAPPA.—I said that it was not only superfluous but unwarranted, and so it should be withdrawn.

With these observations, I thank you, Sir.

† ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಅಧ್ಯಕ್ಷರೆ, ಮಾನ್ಯ ಕಾರ್ಮಿಕ ಮಂತ್ರಿಗಳು ಈ ಮಸೂದೆಯನ್ನು ಮಂಡಿಸುತ್ತಾ ಒಳ್ಳೆಯ ರೀತಿಯಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಒಳ್ಳೆಯ ಹ್ಯೂಮನ್ ಅಪ್ರೋಚ್ ಇಟ್ಟುಕೊಂಡು, ಮಸೂದೆಗೆ ಅನುಮತಿ ಪಡೆಯಲು ನಮ್ಮ ಮುಂದಿಟ್ಟಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಇದನ್ನು ತರುವುದು ಸ್ವಲ್ಪ ತಡವಾಗಿದೆಯೆಂದು ನನಗನಿಸುತ್ತದೆ. ಎಲ್ಲಾ ಬಿಲ್ಲುಗಳೂ ಸೆಲೆಕ್ಟ್ ಕಮಿಟಿಗೆ ಹೋಗಿ ಎರಡೆರಡು ವರ್ಷಗಳು ಹಿಂದಕ್ಕೆ ಸಭೆಗೆ ಬಂದಿರುವ ಅನುಭವ ನಮಗಿದೆ. ಆ ರೀತಿ ಈ ಮಸೂದೆಗೆ ಆಗಕೂಡದು. ಇದು ಬೇಗ ಸೆಲೆಕ್ಟ್ ಕಮಿಟಿಗೆ ಹೋಗಿ, ಹಿಂದಕ್ಕೆ ಬಂದು; ಬಹಳ ತೀವ್ರವಾಗಿ ಅಮಲಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇಷ್ಟರಲ್ಲಿ ಮಾನ್ಯ ಮಂತ್ರಿಗಳು ಇದನ್ನು ಸೆಂಟ್ರಲ್ ಆಕ್ಟ್ ಆಗಿ ಬರುವ ಹಾಗೆ ಸಮಯ ಬಂದಾಗ ಬಲವಂತ ಮಾಡಬೇಕು. ಇದು ಸೆಂಟ್ರಲ್ ಆಕ್ಟ್ ಆಗಿ ಬಂದರೆ ಒಳ್ಳೆಯ ರೀತಿಯಲ್ಲಿ ಬಹಳ ಫಲಕಾರಿಯಾಗಿ ಜಾರಿಗೆ ಬರುತ್ತದೆ. ಇಲ್ಲದೆ ಹೋದರೆ ಕೇರಳದವರು, ಮದ್ರಾಸ್ ಸರ್ಕಾರ ಜಾರಿಗೆ ಕೊಟ್ಟಿಲ್ಲವೆಂದು ಸ್ಪಷ್ಟವಾಗಿರುತ್ತಾರೆ. ಮದ್ರಾಸಿನವರು ಮೈಸೂರಿನವರು ಜಾರಿ ಮಾಡಲಿ ಎಂದು ಕಾಯಬಹುದು. ಮೈಸೂರಿನವರು ಒರಿಸ್ಸಾ ಸರ್ಕಾರ ಮೊದಲು ಇದನ್ನು ಮಾಡಲಿ ಎಂದು ಸುಮ್ಮನಿರಬಹುದು, ಹೀಗೆ ಒಂದು ರಾಜ್ಯದವರು ಇನ್ನೊಂದು ರಾಜ್ಯ ಆಕ್ಟನ್ನು ಮಾಡಲಿ ಎಂದು ನಿರೀಕ್ಷೆಮಾಡಿಕೊಂಡು ಮುಂದಕ್ಕೆ ಹಾಕುತ್ತಾ ಹೋಗುತ್ತಾರೆ, ಈ ಮಸೂದೆಯನ್ನು ಕೇಂದ್ರದವರೆ ಮಾಡದಿದ್ದರೆ, ಇಂಪ್ಲಿಮೆಂಟ್ ಮಾಡುವುದನ್ನು ರಾಜ್ಯ ಸರಕಾರಗಳು ಪೆಂಡಿಂಗ್ ನಲ್ಲಿಯೇ ಇಡುತ್ತವೆ. ಆದ್ದರಿಂದ ಎಲ್ಲಾ ಲೇಬರ್ ಮಿನಿಸ್ಟರುಗಳ ಕಾನ್‌ಫೆರೆನ್ಸಿನಲ್ಲಾಗಲಿ ಅಥವಾ ಬೇರೆ ಯಾವುದಾದರೂ ಸಂದರ್ಭದಲ್ಲಾಗಲಿ, ಮಾನ್ಯ ಮಂತ್ರಿಗಳು ಇದನ್ನು ಸೆಂಟ್ರಲ್ ಆಕ್ಟ್ ಆಗಿ ಒಪ್ಪುವಂತೆ ಕೇಂದ್ರದ ಮೇಲೆ ಒತ್ತಾಯ ಹಾಕಬೇಕೆಂದು ಸೂಚಿಸುತ್ತೇನೆ.

ಮಾನ್ಯ ಮಂತ್ರಿಗಳು ಹೇಳಿದರು, ಮಿನಿಮಮ್ ವೇಜ್ ಆಕ್ಟ್ ಇಂಪ್ಲಿಮೆಂಟ್ ಮಾಡಿದ ಮೇಲೆ, ಸ್ವಲ್ಪ ಸವಲತ್ತುಗಳು ಕಾರ್ಮಿಕರಿಗೆ ಆಗಿವೆಯೆಂದು. ಮಾನ್ಯ ಮಂತ್ರಿಗಳು ಇಷ್ಟು ಕಡೆ ನೋಡಿಕೊಂಡು ಬಂದಿದ್ದಾರೆ. ನಮ್ಮಲ್ಲಿ ಆ ಕಾನೂನು ಜಾರಿಗೆ ಬಂದಿಲ್ಲ ಅನ್ನುವುದು ಗೊತ್ತಿಲ್ಲವೇನೋ. ಆಕ್ಟಿನಲ್ಲಿ ಮಿನಿಮಮ್ ವೇಜ್ ಎಷ್ಟಿರಬೇಕೆಂದು ಚೆನ್ನಾಗಿ ನಿರ್ಧಾರಮಾಡಿದ್ದಾರೆ. ಆದರೆ ಸಂಬಂಧಪಟ್ಟ ಇನ್‌ಸ್ಪೆಕ್ಟರುಗಳು ಕಾನೂನು ಇಂಪ್ಲಿಮೆಂಟ್ ಮಾಡದಿದ್ದವರ ಮೇಲೆ ಕೇಸು ಹಾಕಿ ಪ್ರಾಸಿಕ್ಯೂಟ್ ಮಾಡಿದರೆ, ಮಾಲೀಕರಿಗೆ 50 ರೂಪಾಯಿ ಜುಲ್ಮಾನೆ ಹಾಕಿದ್ದಾರೆ. ಈ ಜುಲ್ಮಾನೆ ಹಣ ತೀರ ಕಡಮೆ; ಆದ್ದರಿಂದ ಜುಲ್ಮಾನೆಗೆ ಯಾರು ಹೆದರುವುದಿಲ್ಲ ಮತ್ತು ಮಿನಿಮಮ್ ವೇಜಸ್ ಆಕ್ಟನ್ನು ಜಾರಿ ಮಾಡಲಕ್ಕೆ ತಯಾರಿಲ್ಲ ಅದೂ ಅಲ್ಲದೆ ಈ ಕಾನೂನಿನ ಪ್ರಕಾರ ಪ್ರಾಸಿಕ್ಯೂಟ್ ಮಾಡಲಕ್ಕೂ ಇನ್‌ಸ್ಪೆಕ್ಟರುಗಳು ತಯಾರಿಲ್ಲ. ಆ ಇಲಾಖೆಯ ರೆಕಾರ್ಡುಗಳನ್ನು ತೆಗೆದುನೋಡಿ, ಎಷ್ಟು ಕೇಸುಗಳನ್ನು ಹಾಕಿದ್ದಾರೆನ್ನುವುದಕ್ಕೆ ಮಾನ್ಯ ಮಂತ್ರಿಗಳಿಗೆ ವೇಳೆ ಇದ್ದು, ಆ ಇನ್‌ಫರ್ಮೇಷನ್ ಪಡೆದರೆ, ಅದನ್ನು ಈ ಮಾನ್ಯ ಸಭೆಯ ಮುಂದಿಡಬೇಕು. ಇವತ್ತಿನವರೆಗೆ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಎಷ್ಟು ಕೇಸುಗಳನ್ನು ಹಾಕಿದ್ದಾರೋ ಅವು ಅಷ್ಟು ಯಶಸ್ವಿಯಾಗಿಲ್ಲ; ಏಕೆಂದರೆ ಬಹಳ ಕಡಿಮೆ ಜುಲ್ಮಾನೆ ಹಾಕಿದ್ದಾರೆ! ಗುಲ್ಬರ್ಗ ಜಿಲ್ಲೆಯಲ್ಲಿ 10-15 ಸಾವಿರ ಬೀಡಿ ಕಾರ್ಮಿಕರಿದ್ದಾರೆಂದು ಹೇಳಿದರು; ಅವರ ಲೆಕ್ಕದ ಪ್ರಕಾರ ಇಡೀ ರಾಜ್ಯದಲ್ಲಿ ಅವರ ಸಂಖ್ಯೆ 80 ಸಾವಿರ, ಆದರೆ ಅದು 1½ ಲಕ್ಷಕ್ಕೂ ಮೇಲಕ್ಕೆ ಹೋಗಬಹುದು. ಹಳ್ಳಿ ಹಳ್ಳಿಯಲ್ಲಿ 25-30 ಜನ ಕೆಲಸ ಮಾಡತಕ್ಕ ಫ್ಯಾಕ್ಟರಿಗಳಿವೆ; ಅವರು ಷಹರುಗಳಲ್ಲಿರುವುದನ್ನು ಮಾತ್ರ ಲೆಕ್ಕ ಹಾಕಿದ್ದಾರೆ. ಯಾದ್ಗಿರ್ ಟೌನಿನಲ್ಲಿಯೇ ಆರು ಸಾವಿರ ಜನ ಕೆಲಸ ಮಾಡುತ್ತಾರೆ. ಆದರೆ ಸರಕಾರಿ ಇನ್‌ಸ್ಪೆಕ್ಟರು ಅಲ್ಲಿ ಒಂದು ಕೇಸೂ ಹಾಕಿಲ್ಲ. ಇತರ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ, ಆ ನಿಯಮವನ್ನು ಜಾರಿಗೆ ಕೊಡತಕ್ಕ ಮೆಷಿನರಿ, ಎಂದರೆ ಸ್ಟ್ಯಾಫ್ ಏನಿದೆ, ಅದನ್ನು ಹೆಚ್ಚು ಮಾಡುವ ಅವಶ್ಯಕತೆಯಿದೆ ಎಂದು ನಾನು ಒತ್ತಾಯಮಾಡಿ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಅನಂತರ ಇಂಡಸ್ಟ್ರಿಯಲ್ ಪ್ರಿಮಿಸಸ್ ಎಂದು ಡಿಕ್ಲೇರ್ ಮಾಡುವ ಅಧಿಕಾರವನ್ನು ಈ ಕಾನೂನಿನ ಪ್ರಕಾರ ಹೊಂದಿದ್ದಾರೆ. ಆದರೆ ಕೆಲವು ಜನರನ್ನು ಇಟ್ಟುಕೊಂಡು ಬೀಡಿ ತಯಾರಿಸುತ್ತಿರುವ

(ಶ್ರೀ ಗಂಗಾಧರ ನಾಮೋಷಿ)

ಫ್ಯಾಕ್ಟರಿಗಳನ್ನು ಈ ಅರ್ಥ ವಿವರಣೆಯಿಂದ ಬಿಟ್ಟು ಬಿಡುತ್ತಾರೆ. ಇವುಗಳಿಗೆ Shops and Establishment Act ಲಾಗು ಆಗುವುದಿಲ್ಲ. ಇದರಲ್ಲಿ ಬೀಡಿಗೆ ಲೇಬಲ್ ಹಾಕತಕ್ಕಂಥ ಜನ, ಕ್ಲೆರಿಕಲ್ ಸ್ಟ್ಯಾಫ್, ಮುಂತಾದವರ್ಯಾರೂ ಬರುವುದಿಲ್ಲ. ಅವರನ್ನೂ ಇವರಲ್ಲಿ ಸೇರಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಸೆಲೆಕ್ಟ್ ಕಮಿಟಿಯಲ್ಲಿ ಕ್ಲಾಸು 9(1) ನ್ನು ಮತ್ತೊಮ್ಮೆ ಪರಿಶೀಲಿಸಿ ಅದನ್ನು ಬಲಾತ್ಕಾರವಾಗಿ ಜಾರಿಗೆ ಕೊಡುವಂತೆ ಮಾಡಬೇಕು.

ಇನ್ನು ಸದಸ್ಯರೆಲ್ಲರೂ ಮಾತನಾಡುತ್ತಾ ಎಲ್ಲ ಸಮಯದಲ್ಲಿಯೂ ಎಲ್ಲ ಫ್ಯಾಕ್ಟರಿಗಳಿಗೂ ಫ್ಯಾಕ್ಟರಿ ಆಕ್ಟು ಲಾಗು ಆಗುತ್ತದೆಂದು ಹೇಳಿದ್ದಾರೆ. ಆದರೆ ಈ ಕಾನೂನಿನಲ್ಲಿ 9 ಗಂಟೆಗಳ ಕಾಲಕ್ಕಿಂತ ಹೆಚ್ಚಾಗಿ ಕೆಲಸ ಮಾಡಿಸಬಾರದೆಂದು ಹೇಳಿದೆ, ಈ ನಿಯಮ ಸರಿಯಾದುದಲ್ಲ. ಈ ಕೆಲಸದ ಕಾಲವನ್ನು 8 ಗಂಟೆಗಳು ಎಂದು ನಿಗದಿ ಮಾಡಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು 8ನೆಯ ಅಧ್ಯಾಯದಲ್ಲಿ ಕೂಲಿ ಸಹಿತ ಅದೇ ವಿಷಯವನ್ನು ಹೇಳಿದೆ. ಇದರಲ್ಲಿ ಫೆಸ್ಟಿವಲ್ ಹಾಲಿಡೆಗಳನ್ನೆಲ್ಲಾ ಸೇರಿಸಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ಫೆಸ್ಟಿವಲ್ ಹಾಲಿಡೆಗಳಿಗೆ ಬೇರೆ ಕಾನೂನು ಮಾಡಿದರೆ. Industrial premises ಎಂದು ಡಿಕ್ಲೇರ್ ಮಾಡಿದ ಕೂಡಲೆ, ಆ ಕಾನೂನ ಅಲ್ಲೆಲ್ಲಾ ಅಪ್ಲೈ ಆಗುತ್ತದೆ.

ಶ್ರೀ ಗಂಗಾದರ ನಾಮೋಷಿ.—ಸೆಕ್ಷನ್ 31—Notice of dismissal ಬಗ್ಗೆ ಹೇಳುವ ಕ್ಲಾಸು ಸರಿಯಾಗಿ ಡ್ರಾಫ್ಟ್ ಆಗಿ ಬಂದಿಲ್ಲ. ಇದು ನೌಕರರ ಹಿತಕ್ಕೆ ಅತೃಪ್ತಿಕರವಾಗಿ ಬಂದಿವೆ. ದಯವಿಟ್ಟು ಈ ಕ್ಲಾಜನ್ನು ಕೂಲಿಗಾರರ ಹಿತರಕ್ಷಣೆಗೆ ಏನೂ ಧಕ್ಕೆ ಬರದಂತೆ ಸರಿಯಾಗಿ ತಿದ್ದುಪಾಡುಮಾಡಿಕೊಳ್ಳಬೇಕು. ಹೆಣ್ಣು ಮಕ್ಕಳು ಕೆಲಸ ಮಾಡುತ್ತಿದ್ದರೆ ಅವರ ಮೆಟರ್ನಿಟಿ ರಜೆ ವಿಷಯ ಇದರಲ್ಲಿಲ್ಲ, ಅದನ್ನು ಇದರಲ್ಲಿ ಸೇರಿಸಬೇಕು. ಕ್ಲಾಜ್ 40ರಲ್ಲಿ ಸರ್ಕಾರದವರು ವಿನಾಯಿತಿ ಕೊಡುವ ಅಧಿಕಾರವನ್ನು ಪಡೆಯುತ್ತಾರೆ. ಇದನ್ನು ಬಿಟ್ಟು ಬಿಡಬೇಕು. ಮಾನ್ಯ ಮಂತ್ರಿಗಳಂಥ ಅಭಿಮಾನಿಗಳು ಬಂದು ಸ್ವಲ್ಪ ಸಹಾನುಭೂತಿ ತೋರುವವರಿದ್ದರೆ ಒಳ್ಳೆಯದಾಗುತ್ತದೆ. ಆದರೂ, ಕೆಳಗಿನ ಆಡಳಿತ ಯಂತ್ರದವರಿಂದ ಇದರ ದುರುಪಯೋಗವಾಗುವ ಸಂಭವವಿರುವುದರಿಂದ ಇಂಥದನ್ನು ದಯವಿಟ್ಟು ಹಾಕಬಾರದು.

ಕೆಲವು ಮಾನ್ಯ ಸದಸ್ಯರು ಈ ವಿಧೇಯಕದ ಬಗ್ಗೆ ಆಕ್ಷೇಪಣೆಯನ್ನು ತೆಗೆದುಕೊಂಡರು. ಶ್ರೀ ಧರ್ಮಸಾಮ್ರಾಜ್ಯ, ಶ್ರೀ ಕಾಶೀಮಠ ಮತ್ತು ಇತರ ಕೆಲವು ಸದಸ್ಯರು ಹೆಣ್ಣು ಮಕ್ಕಳು, ಘೋಷದಲ್ಲಿರುವ ಹೆಣ್ಣು ಮಕ್ಕಳ ಬೀಡಿ ಕಟ್ಟುವ ಸ್ಥಳಗಳಿಗೆ ಬರುವುದಿಲ್ಲ, ಅವರಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ನಮ್ಮಲ್ಲಿ ಮುಸಲ್ಮಾನರ ಜನಸಂಖ್ಯೆ ಇದೆ. ಅದರಲ್ಲಿ ಬಹು ಜನ ಬೀಡಿ ಕೆಲಸಗಾರರಿದ್ದಾರೆ. ಇವರಿಗೆಲ್ಲ ಈ ವಿಧೇಯಕದಿಂದ ಏನೂ ತೊಂದರೆಯಾಗಲಾರದು. ಅವರು ಇದರ ಮೇಲೆಯೇ ಅವಲಂಬಿಸಿರುವವರಿದ್ದಾರೆ. ಕೆಲವರು ಹೆಣ್ಣು ಮಕ್ಕಳು ತಮ್ಮ ಗಂಡಂದಿರು ಬೇರೆ ಉದ್ಯೋಗಗಳಲ್ಲಿದ್ದರೂ ತಮ್ಮ ಬಿಡುವಿನ ವೇಳೆಯಲ್ಲಿ ಮನೆಗಳಲ್ಲಿ ಬೀಡಿ ಕಟ್ಟಿ ಅದರಿಂದ ಬರುವ ಹಣದಿಂದ ತಮಗೆ ಬೇಕಾದ ಒಳ್ಳೆಯ ಬಟ್ಟೆ ಬರೆಗಳನ್ನು ತೆಗೆದುಕೊಳ್ಳಲು ಉಪಯೋಗಿಸಿಕೊಳ್ಳುತ್ತಾರೆ. ಇಂಥವರ ಸಲುವಾಗಿ ರಿಯಾಯಿತಿಯನ್ನು ಕೊಡಬಾರದೆಂದು ಹೇಳುತ್ತೇನೆ. ದೇಶದಲ್ಲಿ ಒಂದು ಹೊತ್ತು ತಿನ್ನುವುದಕ್ಕೂ ಇಲ್ಲದೆ ಉಪವಾಸ ಸಾಯತಕ್ಕ ಎಷ್ಟೋ ಜನರಿದ್ದಾರೆ. ಇಂಥವರ ಸಲುವಾಗಿ ಈ ಕಾಯಿದೆಗಳನ್ನು ತರತಕ್ಕದು. ಮಾನ್ಯ ಸದಸ್ಯರು ಕೆಲವರು ಹೇಳಿದ ಅಭಿಪ್ರಾಯಗಳಿಗೆ ಮಾನ್ಯ ಮಂತ್ರಿಗಳು ಮತ್ತು ಸೆಲೆಕ್ಟ್ ಕಮಿಟಿಯವರು ಲಕ್ಷ್ಯ ಕೊಡಬಾರದು. ನಮಗೂ ಅನುಭವವಿದೆ. ಕೆಲವು ಕಡೆ ಮಾಲೀಕರ ಹಿತವನ್ನು ರಕ್ಷಣೆ ಮಾಡುವುದಕ್ಕೆ, ಇವರ ನೆಪ ತೆಗೆದುಕೊಂಡು ಅವರಿಗೆ ತ್ರಾಸವಾಗುತ್ತದೆಂದು ಹೇಳುತ್ತಾರೆಂದು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಬೀಡಿ ಕಾರ್ಖಾನೆಗಳಲ್ಲಿ ಹೆಣ್ಣು ಮಕ್ಕಳಿಗೆ, ಪ್ರತ್ಯೇಕವಾಗಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಿ ಅಲ್ಲಿಗೆ ಗಂಡಸರು ಹೋಗತಕ್ಕದ್ದಲ್ಲವೆಂದು ಮಾಡಿದರೆ ಸರಿಹೋಗುತ್ತದೆಂದು ನನಗನ್ನಿಸುತ್ತದೆ.

ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಆದಷ್ಟು ಬೇಗನೆ ತರಬೇಕು. ಈಗ exploitation ಹೆಚ್ಚಾಗಿದೆ. ಅದರ ಸಲುವಾಗಿ ಮಾನ್ಯ ಮಂತ್ರಿಗಳು ನಿಧಾನ ಮಾಡದೆ ಇದನ್ನು ಜಾರಿಯಲ್ಲಿ ತರಬೇಕು. ನಮ್ಮ ಸರ್ಕಾರದ ಭಾವನೆ ಸೆಲೆಕ್ಟ್ ಕಮಿಟಿಯಲ್ಲಿ ಸ್ವಲ್ಪ ವಿರೋಧ ಮಾಡು

ವವರೂ ಇರಲಿ, ಒಳ್ಳೆಯದು ಮಾಡುವವರೂ ಇರಲಿ ಎಂದು ಇವರಿಬ್ಬರನ್ನೂ ಸೇರಿಸುವರೆಂದು ಕಾಣುತ್ತದೆ. ಇಂಥದ್ದು ಮಾಡಬಾರದು.

ಕನಿಷ್ಠ ದರ್ಜೆ ಜನರಿಗೆ ಕೊಡುವ ಕೂಲಿ ಒಂದು ರೂಪಾಯಿ ಹದಿಮೂರಾಣೆ ಇದ್ದರೆ ಬೀಡಿ ಕೆಲಸಗಾರರಿಗೆ 14 ಆಣೆ ಕೊಟ್ಟು ದುಡಿಸಿಕೊಳ್ಳುತ್ತಿದ್ದಾರೆ. ಇದನ್ನೆಲ್ಲ ಸರಿಪಡಿಸಬೇಕು. ಬೀಡಿ ಕೆಲಸ ಮಾಡುವವರಿಗೆ ಕ್ಷಯ ರೋಗ ಬಹಳ ಬೇಗ ಬರುತ್ತದೆ. ಕ್ಷಯ ರೋಗ ಬಂದವರಿಗೆ ಏನಾದರೂ ಪರಿಹಾರ ಕೊಡುವುದನ್ನು ವಿಚಾರ ಮಾಡಬೇಕು. ಸೆಲೆಕ್ಟ್ ಕಮಿಟಿಯವರು ಇದಕ್ಕೆ ಲಕ್ಷ್ಯ ಕೊಡಬೇಕು. ಬೀಡಿ ಕೆಲಸ ಮಾಡುವವನಿಗೆ ಒಬ್ಬನಿಗೆ ಕ್ಷಯ ರೋಗ ಬಂತು. ಎಲ್ಲ ಕಡೆಯೂ ಸುತ್ತಿದ. ಅವನಿಗೆ ಎಲ್ಲೂ ಔಷಧಿ ಸಿಕ್ಕಲಿಲ್ಲ. ಕಡೆಗೆ ಯಾರೋ ದೇಶಭಕ್ತರು ಹೇಳಿದರಂತೆ ನೀನು ಷರಾಬು ಕುಡಿ, ಕೇಸಾಗುತ್ತದೆ ಜೈಲಿಗೆ ಹಾಕುತ್ತಾರೆ, ಅಲ್ಲಿ ಈ ರೋಗ ಗುಣವಾಗುತ್ತದೆ ಎಂದು. ಅವನು ಅದೇ ರೀತಿ ಮಾಡಿದ್ದಕ್ಕೆ ಅವನಿಗೆ ಜೈಲಿನಲ್ಲಿ ಒಳ್ಳೆಯ ಚಿಕಿತ್ಸೆ ನಡೆದು ಈಗ ಸ್ವಲ್ಪ ಮಟ್ಟಿಗೆ ಉತ್ತಮವಾಗಿದ್ದಾನೆ. ಪೂರ್ತಿ ಉತ್ತಮವಾಗಬೇಕಾದರೆ ಇನ್ನೂ ಒಮ್ಮೆ ಜೈಲಿಗೆ ಹೋಗಿ ಬರಬೇಕು ಎಂದು ಹೇಳುತ್ತಾನೆ. ಇಂಥ ಜನರ ಸಲುವಾಗಿ ಈ ವಿಧೇಯಕವನ್ನು ಒಳ್ಳೆಯ ರೀತಿಯಿಂದ ಆಲೋಚನೆ ಮಾಡಿ ಬೇಗನೆ ತರಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಮೈಸೂರು ರಾಜ್ಯದ ಬೀಡಿ ಕೈಗಾರಿಕೆ ಉದ್ಯಮದ ವಠಾರಗಳಿಗೆ ಸಂಬಂಧಪಟ್ಟ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಈ ಮಸೂದೆ ಹತ್ತಾರು ವರ್ಷಗಳ ಬೀಡಿಕಾರ್ಮಿಕರ ಒತ್ತಾಯದ ಪರಿಣಾಮವಾಗಿ ಈ ದಿನ ನಮ್ಮ ಮುಂದೆ ಬಂದಿದೆ ಎಂದು ಹೇಳಬಯಸುತ್ತೇನೆ. ಏಕೆಂದರೆ ಬಹಳ ಹೀನಸ್ಥಿತಿಯಲ್ಲಿರುವ ಇಡೀ ಕಾರ್ಮಿಕವರ್ಗದಲ್ಲಿ ಬಹಳ ಕೆಳಮಟ್ಟದ ಅತಿ ಹೆಚ್ಚಿನ ಶೋಷಣೆಗೆ ಸಿಕ್ಕಿ ಬಹಳ ಕಷ್ಟಸ್ಥಿತಿಯಲ್ಲಿರುವ ಈ ಬೀಡಿ ಕಾರ್ಮಿಕರ ಸತತ ಹೋರಾಟದ ಫಲವಾಗಿ ಈ ಶಾಸನ ಬಂದಿದೆಯೇ ವಿನಾ ಇದು ಸರ್ಕಾರದ ಔದಾರ್ಯದಿಂದ ಬಂದಿದ್ದೆಂದು ನಾನಾದರೂ ಒಪ್ಪಿಕೊಳ್ಳುವುದಿಲ್ಲ. ನಮ್ಮ ಮೈಸೂರು ರಾಜ್ಯದ ಸರ್ಕಾರ ಮೊಂಡೆತ್ತು ಇದ್ದ ಹಾಗೆ. ಸರಿಯಾದ ಎತ್ತು ಒಂದು ಸಾರಿ ಚಚ್ಚಿದರೆ ಮುಂದಕ್ಕೆ ಹೋಗುತ್ತದೆ. ಈ ಮೊಂಡೆತ್ತು ಹತ್ತು ಸಾರಿ ಚಚ್ಚಿದರೂ ಮುಂದಕ್ಕೆ ಹೋಗುವುದಿಲ್ಲ. ನಮ್ಮ ದೇಶದಲ್ಲಿನ ಎಲ್ಲ ಕಾರ್ಮಿಕರ ಮತ್ತು ವ್ಯವಸಾಯ ಕೂಲಿಕಾರರಿಗಿಂತ ಹೀನ ಸ್ಥಿತಿಯಲ್ಲಿ ಈ ಕಾರ್ಮಿಕರಿದ್ದಾರೆ. ಇವರಿಗೆ ಶುದ್ಧವಾದ ಗಾಳಿ, ನೀರು, ದೊರೆತು ಸರಿಯಾದ ಆವರಣಗಳಲ್ಲಿ ಕೆಲಸಮಾಡತಕ್ಕ ಅವಕಾಶವನ್ನು ಕಲ್ಪಿಸುವುದಕ್ಕೆ ನಮಗೆ ಸ್ವಾತಂತ್ರ್ಯ ಬಂದು 15 ವರ್ಷಗಳಾದಮೇಲೆ ಇಂಥ ಕಾನೂನು ಬರುತ್ತಿದೆ. ಸರ್ಕಾರ ಇನ್ನೂ ಮುಂಚೆಯೇ ಈ ದಾರಿಯಲ್ಲಿ ಏಕೆ ಹೋಗಲಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಕಳೆದ ಸಾರಿ ಮೈಸೂರಿನ ಕೆಲವು ಸಂಘದವರು ಸರ್ಕಾರಕ್ಕೆ ಮನವಿಯನ್ನರ್ಪಿಸಿದ್ದರಿಂದ ಈ ಕಾನೂನು ಬಂತು ಎಂದು ಹೇಳಿದರು. ಅಷ್ಟೇ ಅಲ್ಲ ಕೋಲಾರದವರು, ಬೆಂಗಳೂರಿನವರು, ಮತ್ತು ಬೇರೆ ಬೇರೆ ಭಾಗದ ಕಾರ್ಮಿಕ ಸಂಘಗಳವರು ಹತ್ತಾರು ವರ್ಷಗಳಿಂದಲೂ ಕೂಡ ಬೀಡಿ ಕಾರ್ಮಿಕರ ಉದ್ಯೋಗದ ರಕ್ಷಣೆ, ಅವರು ಕೆಲಸ ಮಾಡುವ ಫ್ಯಾಕ್ಟರಿಗಳಲ್ಲಿ ಸರಿಯಾದ ಗಾಳಿ, ಬೆಳಕು ಇರಬೇಕು, ಸರಿಯಾದ ಕಟ್ಟಡಗಳಲ್ಲಿ ಕೈಗಾರಿಕೆ ನಡೆಯಬೇಕು ಎಂದು ಕೇಳಿಕೊಳ್ಳುತ್ತಿದ್ದರು. ಈಗಲಾದರೂ ನಮ್ಮ ರಾಜ್ಯ ಸರ್ಕಾರಕ್ಕೆ ಮನಸ್ಸು ಬಂತಲ್ಲ ಇಂಥ ಒಂದು ಶಾಸನವನ್ನೂ ಮಾಡಲಿಕ್ಕೆ! ಇದು ನಿಜವಾಗಿಯೂ ಶ್ಲಾಘನೀಯವಾದ ವಿಷಯ. ಈ ದಿನ ಬೀಡಿ ಕೂಲಿಕಾರರು, ನಮ್ಮ ದೇಶದಲ್ಲಿ ಹರಿಜನರು, ಅಸ್ಪೃಶ್ಯರು ಎಂದು ಯಾರನ್ನು ಹೇಳುತ್ತಾರೆ ಅವರಿಗಿಂತ ಹೀನಸ್ಥಿತಿಯಲ್ಲಿದ್ದಾರೆ. ನಾನು ನೋಡಿದ ಕೆಲವು ಊರುಗಳಲ್ಲಿ ಬೀಡಿ ಕೂಲಿಕಾರರ ಕೇರಿಗಳು ಬೇರೆ ಇವೆ. ಹರಿಜನರ ಕೇರಿಗಳ ಹಾಗೆ ಬೀಡಿ ಕೂಲಿಕಾರರಿಗೆ ಬೇರೆ ಕೇರಿಗಳಿವೆ. ಅವರು ವಾಸ ಮಾಡುವ ಸ್ಥಳ, ದನಕರುಗಳು ಕೂಡ ವಾಸಮಾಡಲಿಕ್ಕೆ ಅರ್ಹವಲ್ಲದ ಸ್ಥಳ. ಅಂಥ ಗುಡಿಸಲುಗಳಲ್ಲಿ ಬೀಡಿ ಕಾರ್ಮಿಕರು ಜೀವನ ಮಾಡುತ್ತಿದ್ದಾರೆ. ಶ್ರೀಮಾನ್ ಗಂಗಾಧರ ನಾಮೋಷಿಯವರು ಹೇಳಿದ ಹಾಗೆ ಈ ದೇಶದಲ್ಲಿ ಕಾನೂನುಗಳೇನೋ ಇವೆ. ಅವೆಲ್ಲ ಕಾನೂನಿನ ಕಡತದಲ್ಲಿವೆ. ಅದರಲ್ಲಿಯೂ ನ್ಯಾಯಶಾಖೆಯಲ್ಲಿ ಕೆಲವು ತಜ್ಞರ ಸಹಾಯದಿಂದ ಅನೇಕ ಕಾನೂನುಗಳು ಈ ದೇಶದಲ್ಲಿ ತಯಾರಾಗುತ್ತಿವೆ. ಆದರೆ ಅವುಗಳನ್ನು ಜಾರಿ ಮಾಡುವ ಶಕ್ತಿ ಈ ರಾಜ್ಯ ಸರ್ಕಾರಕ್ಕೆ ಇಲ್ಲ. ಎಷ್ಟರ ಮಟ್ಟಿಗೆ ಈ ಕಾನೂನನ್ನು ಜಾರಿಗೆ ಇವರು ತರಲು ಸಾಧ್ಯವಿದೆ ಎಂದು ಯೋಚನೆ ಮಾಡಿದರೆ, ಬೇರೆ ಕಾನೂನುಗಳನ್ನೆಲ್ಲ ಹೇಗೆ ಜಾರಿಗೆ ಕೊಟ್ಟಿದ್ದಾರೆಂದು ನೋಡಿದರೆ, ಇದು ಕೂಡ ಸುಮ್ಮನೆ ಕಾನೂನಿನ ಕಡತದಲ್ಲಿ ಸೇರುವ ಹೊಸ ಕಾನೂನೇ ವಿನಾ ಇದನ್ನು ಜಾರಿಗೆ ತರುವುದಕ್ಕೆ ಇವರಿಗೆ ಸಾಕಷ್ಟು ಶಕ್ತಿಯಿಲ್ಲವೆಂದು ನನಗಾದರೂ ಅನ್ನಿಸುತ್ತದೆ.

ನಮ್ಮ ಕಾರ್ಮಿಕ ಮಂತ್ರಿಗಳು ಬಹಳ ಸರಳ ಜೀವಿಗಳು, ಒಳ್ಳೆಯವರು, ಸರಳ ರೀತಿಯಲ್ಲಿ ಜೀವನ ಮಾಡಿದ ಕರ್ಮಯೋಗಿಗಳು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಮಂತ್ರಿಗಳು ಅದ

(ಶ್ರೀ ಪಿ. ವೆಂಕಟಗಿರಿಯಪ್ಪ)

ತಕ್ಷಣ ಇವರು ಬದಲಾವಣೆಯಾದರು. ನಮ್ಮ ಮೈಸೂರು ಜಿಲ್ಲೆಯಲ್ಲಿ ಸಾವುಕಾರ ಚೆನ್ನಯ್ಯನವರ ಪ್ರಭಾವ ಕಡಿಮೆ ಮಾಡಲು ಕಾರ್ಮಿಕ ಮಂತ್ರಿಗಳು ತಮ್ಮ ಇಲಾಖೆಯ ಕೆಲಸ ಮಾಡುವುದನ್ನು ಬಿಟ್ಟು ಮತ್ತು ತಮ್ಮ ಗುಂಪಿನ ಪ್ರಭಾವ ಹೆಚ್ಚು ಮಾಡಲು ನಿರತರಾಗಿದ್ದಾರೆ.

4-P.M.

Mr. SPEAKER.—In respect of what provision of the Bill the Hon. Member is making this remark ?

Sri P. VENKATAGIRIYAPPA.—I am making a general comment on the Bill and the Government's inability to implement the Acts passed by this House.

Mr. SPEAKER.—Then his remarks must come under one provision or the other. Otherwise, such remarks should not be made.

ಶ್ರೀ ಪಿ. ವೆಂಕಟಗಿರಿಯಪ್ಪ.—ಕಾರ್ಮಿಕ ಮಂತ್ರಿಗಳು ಕೂಡ ಅವರವರ ಖಾತೆಗೆ ಸಂಬಂಧ ಪಟ್ಟ ಕಾನೂನುಗಳು ಯಾವ ರೀತಿ ಅಧಿಕಾರಿಗಳು ಜಾರಿಗೆ ತರುತ್ತಾರೆ ಎನ್ನುವುದನ್ನು ನೋಡಬೇಕು: ಫ್ಯಾಕ್ಟರಿಗಳು ಹೇಗೆ ನಡೆಯುತ್ತಿವೆ, ವಾಸಮಾಡುವ ಮನೆಗಳ ಹತ್ತಿರದಲ್ಲಿ ಇದೆಯೇ, ಅವರ ಸ್ಥಾನ ಮಾನವೇನು, ಮಾಲೀಕರು ಹೇಗೆ ನೋಡಿಕೊಳ್ಳುತಾರೆ ಎಂಬುದುದನ್ನು ಕಣ್ಣಾರೆ ಏಕೆ ನೋಡ ಬಾರದು ? ವಾಸ್ತವವಾಗಿ ಪರಿಸ್ಥಿತಿ ಏನಿದೆ ನೋಡಬೇಕು. ಈ ಮಸೂದೆಯ 6ನೇ ಕಲಮ್ಮಿನಲ್ಲಿ ಇನ್‌ಸ್ಪೆಕ್ಟರ ನೇಮಕದ ಬಗ್ಗೆ ಹೇಳಲಾಗಿದೆ. ಈಗ ಇರತಕ್ಕಂಥ ಇನ್‌ಸ್ಪೆಕ್ಟರುಗಳು ಈ ಕೆಲಸ ನೋಡುತ್ತಾರೆಂದು ಹೇಳಿದರು. ನನ್ನ ಅನುಭವದಿಂದ ನಾನು ಹೇಳುತ್ತೇನೆ. ಬೀಡಿ ಕಾರ್ಖಾನೆಯ ಕೆಲವು ಮಾಲೀಕರು ಭಾರೀ ಶ್ರೀಮಂತ ಜನ ಇದ್ದಾರೆ. ಇಂತಹ ಇನ್‌ಸ್ಪೆಕ್ಟರರಿಗೆ ಅವರು ಜಗ್ಗುವು ದಿಲ್ಲವೆಂಬ ಅನುಮಾನವಿದೆ. ಗೆಜೆಟೆಡ್ ದರ್ಜೆಯ ಅಧಿಕಾರಿಯನ್ನು ನೇಮಕ ಮಾಡಬೇಕು ಏಕೆಂದರೆ ನನ್ನ ಇನ್‌ಸ್ಪೆಕ್ಟರರು ಮಾಲೀಕರ ಮೇಲೆ ಕಾನೂನು ಜಾರಿ ಮಾಡಲು ಸಾಧ್ಯವಾಗುವುದಿಲ್ಲ ಎಂದು ನಾನು ಹೇಳುತ್ತೇನೆ.

ಇನ್ನೊಂದು ಮುಖ್ಯ ವಿಷಯವೆಂದರೆ ಕಾರ್ಮಿಕರ ಬಗ್ಗೆ ಸರಕಾರದ ಮನೋಭಾವನೆ ಬದಲಾವಣೆಯಾಗಬೇಕು. ಮುಖ್ಯವಾಗಿ ಭೂಮಿಯಲ್ಲಿ ಕಷ್ಟಪಡುವ ರೈತರ, ಕಾರ್ಖಾನೆಗಳಲ್ಲಿ ಕಷ್ಟಪಡುವ ಕಾರ್ಮಿಕರ ಬಗ್ಗೆ ಸರಕಾರಕ್ಕೆ ಒಳ್ಳೇ ಭಾವನೆಯಿಲ್ಲದೆ ಸರಿಯಾಗಿ ಕಾನೂನನ್ನು ಜಾರಿಗೆ ತರುತ್ತಿಲ್ಲ. ಸರ್ಕಾರದ ದೃಷ್ಟಿಯಲ್ಲಿ ಜನ ಎಂದರೆ ಭಾರಿ ಕಾರ್ಖಾನೆ ಮಾಲೀಕರು ಅಂದರೆ ಬಿರ್ಲಾ, ಡಾಲ್ಮಿಯಾ; ಭಾರಿ ಕಂಟ್ರಾಕ್ಟರುಗಳು ಬೋರಯ್ಯ, ಬಸವಯ್ಯ, ಮತ್ತು ರಾಮಯ್ಯ ಎನ್ನುವ ಭಾವನೆ ಇದೆ.

Mr. SPEAKER.—I have already said that names not concerned with the Bill should not be brought in.

Sri C. J. MUCKANNAPPA (Sira).—Sir, they are the names of concerns and not persons.

Mr. SPEAKER.—Even concerns are also persons in the eye of law.

ಶ್ರೀ ಪಿ. ವೆಂಕಟಗಿರಿಯಪ್ಪ.—ಒಟ್ಟಿನಲ್ಲಿ ಈ ಕಾನೂನನ್ನು ಜಾರಿಗೆ ತರಲು ಮಸೂದೆಯಲ್ಲಿರ ತಕ್ಕ ಅಧಿಕಾರ ಸಾಲದು. ಬೀಡಿ ಕೂಲಿಕಾರರ ಕಷ್ಟ ಪರಿಸ್ಥಿತಿಯನ್ನು ಹೋಗಲಾಡಿಸಿ ಅವರ ಪರಿಸ್ಥಿತಿ ಉತ್ತಮಗೊಳ್ಳುವಂತೆ ಏರ್ಪಾಡು ಮಾಡಬೇಕೆಂದು ಸರಕಾರಕ್ಕೆ ಒತ್ತಾಯಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಬೀಡಿ ಕೆಲಸಗಾರರು ಕೆಲಸ ಮಾಡತಕ್ಕಂಥ ಜಾಗ ಹೇಗಿರಬೇಕು, ಏನೇನು ಸೌಲಭ್ಯ ಒದಗಿಸಬೇಕು ಎಂಬುದಕ್ಕೋಸ್ಕರ 41 ಕ್ಲಾಜುಗಳಿಂದ ಕೂಡಿದ ಈ ಒಂದು ನಣ್ಣ ವಿಧೇಯಕವನ್ನು ಸರಕಾರದವರು ಈ ಸಭೆಯ ಮುಂದೆ ಇಟ್ಟಿದ್ದಾರೆ. ಸರಕಾರ ಕೈಗೊಂಡಿರುವ ಕೆಲಸ ಒಳ್ಳೆಯದಾಗಿದೆ ಎಂದು ಹೇಳುವುದಾದರೆ ಕಾರ್ಮಿಕರ ಹಿತರಕ್ಷಣೆಗೋಸ್ಕರ ಈ ಮಸೂದೆಯನ್ನು ಪಾಸು ಮಾಡಿ ಜಾರಿಗೆ ತಂದರೆ ನನಗೆ ಬಹಳ ಸಂತೋಷವಾಗುತ್ತದೆ. ಹಿಂದಿನ ಕಾರ್ಮಿಕ ಸಚಿವರು ಮಾಡಿರುವುದನ್ನ ಇವರು ಎಷ್ಟರ ಮಟ್ಟಿಗೆ ಕಾರ್ಮಿಕರ ಹಿತಕ್ಕೋಸ್ಕರ ಅಧಿ

ಕಾರ ಚಲಾಯಿಸಿ ಜಾರಿಗೆ ತಂದಿದ್ದಾರೆ ? ಕಾನೂನಿನಿಂದ ಕಾರ್ಮಿಕರಿಗೆ ಸೌಲಭ್ಯ ಸಿಕ್ಕಿಲ್ಲ. ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪರಿಶೀಲನೆಗಾಗಿ ಹೋಗುತ್ತದೆ; ಹೆಚ್ಚಾಗಿ ಚರ್ಚೆ ಮಾಡ ಬೇಕಾಗಿಲ್ಲ ಎಂದು ಕಾರ್ಮಿಕ ಸಚಿವರು ಹೇಳಿದರು. ಈ ಮಸೂದೆ ಒಂದೂವರೆ ವರ್ಷದಿಂದ ಸಭೆಯ ಮುಂದೆ ಬಾರದೆ ಇರುವುದಕ್ಕೆ ಅಸಮಾಧಾನವಾಗುತ್ತದೆ. ಆದುದರಿಂದ ಅತಿ ಶೀಘ್ರವಾಗಿ ಸಂಬಂಧ ಪಟ್ಟ ಮಂತ್ರಿಗಳು ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆ ಮಾಡಿದ ನಂತರ ಕಾನೂನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಸ್ವಾಮಿ, ಈ ಕಾನೂನನ್ನು ತಡ ಮಾಡಿ ತಂದಿರುವ ಬಗ್ಗೆ ಕಾರಣ ಹೇಳಲಿಲ್ಲ. ಇಷ್ಟು ತಡವಾಗಿಯಾದರೂ ತಂದಿದ್ದಾರೆಂದು ಸಮಾಧಾನ ಪಟ್ಟುಕೊಳ್ಳುವುದಾದರೆ ಇದನ್ನು ಯಾವ ರೀತಿ ಎನ್‌ಫೋರ್ಸ್ ಮಾಡುತ್ತಾರೆ ಎಂಬುದಕ್ಕೆ ಏನೇನೂ ಹೇಳಲಿಲ್ಲ.

ಒಬ್ಬ ಇನ್‌ಸ್ಪೆಕ್ಟರ ಕೈಗೆ ಅಥಾರಿಟಿ ಕೊಟ್ಟು ಕಾನೂನಿನ ಪ್ರಕಾರ ಬೀಡಿ ಫ್ಯಾಕ್ಟರಿಯವರು ಸರಿಯಾದ ರೀತಿಯಲ್ಲಿ ನಡೆಸುವ ಹಾಗೆ ಕಾನೂನಿಗೆ ಗೌರವ ತರತಕ್ಕ ರೀತಿಯಲ್ಲಿ ನಡೆದುಕೊಳ್ಳುವಂತೆ ವ್ಯವಸ್ಥೆ ಮಾಡು ಎಂದು ಹೇಳುತ್ತೀರಿ. ಹಾಗೆ ಹೇಳುವಾಗ ಒಂದು ವಿಷಯವನ್ನು ತಮ್ಮ ದೃಷ್ಟಿಗೆ ತರಬೇಕೆಂದು ಯೋಚನೆ ಮಾಡುತ್ತಾ ಇದ್ದೇನೆ. ಕೂಲಿಗಾರರು ಕೆಲಸ ಮಾಡತಕ್ಕ ವಠಾರ ಏನಿದೆ ಅದಕ್ಕೆ ಲೈಸೆನ್ಸ್ ಕೊಡಬೇಕಾದರೆ ಇಂತಿಂತಹ ಕಂಡೀಷನ್ ಇರಬೇಕೆಂದು 4 ನೆಯ ಕ್ಲಾಜಿನಲ್ಲಿ ಹೇಳಿದ್ದೀರಿ, ಕಾಂಪಿಟೆಂಟ್ ಅಥಾರಿಟಿ ಎಂದರೆ ಯಾರು ಎಂದು ಇಲ್ಲಿ ಎಲ್ಲೂ ಹೇಳಿಲ್ಲ; ಕಾಂಪಿಟೆಂಟ್ ಅಥಾರಿಟಿ ಎಂದರೆ,

> "The competent authority shall, in deciding whether to grant or refuse a licence, have regard to the following matters, namely,..."

ಎಂದು ಹೇಳಿದ್ದೀರಿ. ಲೇಬರ್ ಕಮೀಷನರೇ, ಡೆಪ್ಯೂಟಿ ಲೇಬರ್ ಕಮಿಷನರೇ, ಸರ್ಕಾರದವರೇ, ಡೆಪ್ಯೂಟಿ ಕಮಿಷನರೇ ಯಾರು ಲೈಸೆನ್ಸ್ ಕೊಡುವವರು ಎಂಬುದು ಅಸ್ಪಷ್ಟವಾಗಿದೆ. ಯಾರ ಹತ್ತಿರ ಲೈಸೆನ್ಸ್‌ಗೆ ಹೋಗಬೇಕೆನ್ನುವುದು ಅನುಮಾನವಾಗಿದೆ, ಇದಕ್ಕೆ ತಮ್ಮ ಉತ್ತರದಲ್ಲಿ ಯಾರು ಎಂಬುದನ್ನು ತಿಳಿಸಬೇಕು ಅಥವಾ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇಂಥವರೇ ಲೈಸೆನ್ಸ್ ಕೊಡಬೇಕು, ಇಂಥವರೇ ಅಪೀಲ್ ಹಿಯರ್ ಮಾಡಬೇಕೆಂದು ನಿರ್ದಿಷ್ಟವಾಗಿ ಸೂಚನೆ ಮಾಡ ಬೇಕೆಂದು ಸರ್ಕಾರದವರನ್ನ ಕೇಳಿಕೊಳ್ಳುತ್ತೇನೆ.

ಕ್ಲಾಜ್ 4 (ಬಿ) ನಲ್ಲಿ

"the status and previous experience of the applicant." ಎಂದು ಹೇಳಿದ್ದೀರಿ. ಅವನ ಸ್ಟೇಟಸ್ ಏನಿರಬೇಕು ? ಎಕ್ಸ್‌ಪೀರಿಯನ್ಸ್ ಎಷ್ಟಿರಬೇಕೆಂದು ಹೇಳಿಲ್ಲ. 10 ವರ್ಷ ಇರಬೇಕೇ ? 5 ವರ್ಷ ಇರಬೇಕೇ ? ಬೀಡಿ ಕಟ್ಟಿ ವ್ಯಾಪಾರ ಮಾಡುವುದರಲ್ಲೇ ಅಥವಾ ಬೀಡಿ ಕಟ್ಟಿಸುವುದರಲ್ಲೇ ? ಯಾವುದರಲ್ಲಿ ಅನುಭವ ಇರಬೇಕು ? ಎಷ್ಟು ವರ್ಷ ಅನುಭವ ಇರಬೇಕು ಎನ್ನುವುದು ಇಲ್ಲ. ಸ್ಟೇಟಸ್ ಎಂದರೆ ಏನಿರಬೇಕೆನ್ನುವುದು ಅರ್ಥವಾಗುವುದಿಲ್ಲ. ಮನುಷ್ಯನು ಶ್ರೀಮಂತನಾಗಿರಬೇಕೇ ಯಾವ ಮಟ್ಟದಲ್ಲಿರಬೇಕೆಂಬ ಬಗ್ಗೆ ಅನುಮಾನ ಬಂದಿದೆ. ಹಾಗಾದರೆ ಅನುಭವವಿಲ್ಲದೇ ಇರತಕ್ಕವನು ಶ್ರೀಮಂತನಾಗಿದ್ದು ಬೀಡಿ ಫ್ಯಾಕ್ಟರಿ ಮಾಡಬಾರದೇ ? ಅನುಭವ ಇಲ್ಲದೇ ಹೋದರೆ ಅದು ಅಡ್ಡಿ ಬರುತ್ತದೆಯೇ ? ಇದನ್ನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನು ಪರಿಶೀಲಿಸಬೇಕು. ಇದು ಅರ್ಥ ವಾಗದೇ ಇರತಕ್ಕ ಮಾತು, ದೇಶದಲ್ಲಿ ಅನೇಕ ಜನ ಇವತ್ತಿನ ದಿವಸ ಬೀಡಿ ಫ್ಯಾಕ್ಟರಿಗಳನ್ನು ಹೊಸ ಹೊಸದಾಗಿ ತೆಗೆಯುತ್ತಾ ಇದ್ದಾರೆ; ಅವರಿಗೆ ಅನುಭವ ಇರುವುದಿಲ್ಲ, ಕೆಲಸಗಾರರನ್ನು ಇಟ್ಟು ಕೊಂಡು ಕೆಲಸ ಮಾಡಿಸುತ್ತಾ ಇದ್ದಾರೆ.

ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

ಕ್ಲಾಜ್ 4 (ಸಿ) ನಲ್ಲಿ

> "the financial resources of the applicant including his financial capacity to meet the demands arising out of the provisions of the laws for the time being in force relating to welfare of labour."

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಂದು ಹೇಳಿದ್ದೀರಿ. ಫೈನಾನ್‌ಷಿಯಲ್ ರಿಸೋರ್ಸ್ ಎಂದರೆ ಏಷ್ಟಿರಬೇಕು ? 1 ಲಕ್ಷ ರೂಪಾಯಿ ಇರಬೇಕೇ ? 50 ಸಾವಿರ ರೂಪಾಯಿ ಇರಬೇಕೇ ? ಎಷ್ಟು ಧಡೂತಿ ಇರಬೇಕು ? ಸಾಲ್ವೆನ್ಸಿ ಸರ್ಟಿಫಿಕೇಟ್ ಪ್ರೊಡ್ಯೂಸ್ ಮಾಡಬೇಕೇ ? ಸೇಲ್ಸ್‌ಟ್ಯಾಕ್ಸ್ ಕ್ಲಿಯರನ್ಸ್ ಸರ್ಟಿಫಿಕೇಟ್ ಕೊಡಬೇಕೇ ಎನ್ನುವುದು ಇದರಲ್ಲಿ ಇಲ್ಲ. 50 ಸಾವಿರ ಅಥವಾ 1 ಲಕ್ಷ ರೂಪಾಯಿ ಇದೆ ಎಂದು ಹೇಳಿ ಮೂರು ತಿಂಗಳಾದಮೇಲೆ ಫ್ಯಾಕ್ಟರಿ ಮುಚ್ಚಿದರೆ ಏನು ಮಾಡುತ್ತೀರಿ ? ಇದು ಅರ್ಥವಾಗುತ್ತಿಲ್ಲ. 250 ಜನ ಕೆಲಸಗಾರರನ್ನು ಇಟ್ಟುಕೊಂಡು 50 ಸಾವಿರ ರೂಪಾಯಿ ಇದೆ ಎಂದು ಹೇಳಿ 500 ಜನರನ್ನು ಇಟ್ಟುಕೊಂಡರೆ ಆಗ ಏನು ಮಾಡುತ್ತೀರಿ ? ಇದು ಬಹಳ ಅಸ್ಪಷ್ಟವಾಗಿದೆ ಇದನ್ನು ಸ್ವಲ್ಪ ಚೆನ್ನಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಕ್ಲಾಜ್ 4 (ಇ) ನಲ್ಲಿ

"whether the beedi manufactured by the applicant will be sold and marketed by himself or through a proprietor or a registered user of a trade mark registered under the Trade and Merchandise Marks Act, 1958 (Central Act 43 of 1958), in relation to beedi, or any other person ;"

ಎಂದು ಹೇಳಿದ್ದೀರಿ ಇದು ಅರ್ಥವಾಗುವುದಿಲ್ಲ. ಗಣೇಶ ಬೀಡಿ ಕಟ್ಟುತ್ತಾರೆ, 30 ರ ಬೀಡಿ ಕಟ್ಟುತ್ತಾರೆ; ಮಂಗಳೂರಿನಿಂದ ಪ್ರಭು ಬೀಡಿ ಬರುತ್ತದೆ. ಹರಿಭಾಯಿ ಬೀಡಿ ಎಂಬುದನ್ನು ಎಷ್ಟೋ ಜನ ವ್ಯಾಪಾರ ಮಾಡುತ್ತಾರೆ. ಅವರು ಹೋಲ್‌ಸೇಲ್ ವ್ಯಾಪಾರ ಮಾಡುತ್ತಾ ಇಲ್ಲ ಇಂತಿಂತಹ ಏಜೆಂಟಗೆ ಇಷ್ಟಿಷ್ಟು ಎಂದು ಡಿಸ್ಟ್ರಿಬ್ಯೂಟ್ ಮಾಡುತ್ತಾರೆ. ನಮ್ಮಲ್ಲಿ ತಯಾರಾಗುವ ಗಣೇಶ ಬೀಡಿ ಡೆಲ್ಲಿಗೆ ಹೋಗುತ್ತದೆ. ಹೀಗಿರುವಾಗ ಈ ನಿಯಮದ ಅರ್ಥವಾಗುವುದಿಲ್ಲ, ಇದರ ಉದ್ದೇಶ ಏನು ? ಇದನ್ನು ಈ ಮಸೂದೆಯನ್ನು ಸಭೆಯ ಮುಂದೆ ಇಡುವಾಗಲೂ ಸಹ ಹೇಳಲಿಲ್ಲ ಆದ್ದರಿಂದ ಈ ವಿಷಯವನ್ನು ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಸ್ನೇಹಿತರಾದ ಶ್ರೀಮಾನ್ ಬಿ. ಎಸ್. ಪಾಟೀಲ್ ಅವರು ಫೈನಾನ್‌ಷಿಯಲ್ ಮೆಮೋರ್ಯಾಂಡಂ ಇಲ್ಲ ಎಂದು ಹೇಳಿದರು. ಎಷ್ಟು ಹಣ ಖರ್ಚು ಮಾಡುತ್ತೀರಿ, ಹೆಚ್ಚಿಗೆ ಸಿಬ್ಬಂದಿ ಎಷ್ಟು ತೆಗೆದುಕೊಳ್ಳುತ್ತೀರಿ ಎಂದರೆ ಏನೂ ಇಲ್ಲವೇ ಇಲ್ಲ; ಈಗಿರುವವರೇ ಮಾಡುತ್ತಾರೆ ಎಂದು ಹೇಳಿದಿರಿ, ಆದರೂ ಒಂದು ಫೈನಾನ್‌ಷಿಯಲ್ ಮೆಮೋರ್ಯಾಂಡಂ ಹಾಕಬೇಕಾಗಿತ್ತು, ಇದು ಏನು ತೋರಿಸುತ್ತದೆ ಎಂದರೆ ಈಗಿರತಕ್ಕ ಕಾನೂನನ್ನೇ ತಾವು ಯಾವ ಮಟ್ಟದಲ್ಲಿ ಯಾವ ವೇಗದಲ್ಲಿ ನಡೆಸುತ್ತಾ ಇದ್ದೀರಿ ಎಂಬುದು ಗೊತ್ತಾಗುತ್ತದೆ. ಹಾಲಿ ಇರತಕ್ಕ ಸಿಬ್ಬಂದಿ ಜಾಸ್ತಿಯಾಗಿದ್ದಾರೆ ಅವರಿಂದಲೇ ಮಾಡಿಸುತ್ತೇವೆ ಎಂದು ಹೇಳಿದಂತಾಯಿತು. ಹೀಗಾದರೆ ನಿಮ್ಮ ಜಾರಿಯಲ್ಲಿರತಕ್ಕ ಕಾರ್ಮಿಕ ಕಾನೂನನ್ನು ಪಿಜನ್‌ಹೋಲ್‌ನಲ್ಲಿಟ್ಟಿದ್ದೀರಾ, ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟಿದ್ದೀರಾ ಎಂದು ಅರ್ಥವಾಗುತ್ತದೆ. ಕಾರ್ಮಿಕ ಖಾತೆಯಲ್ಲಿ ಏನೂ ಕೆಲಸ ನಡೆಯುತ್ತಿಲ್ಲ ಎಂದು ಅರ್ಥವಾಗುತ್ತದೆ. ದೇಶದಲ್ಲಿ ಎಷ್ಟು ಬೀಡಿ ಕೆಲಸಗಾರರು ಇದ್ದಾರೆ ಎಂಬ ಅಂಕಿ ಅಂಶ ಇವತ್ತಿನ ದಿವಸ ನಿಮ್ಮ ಹತ್ತಿರ ಇಲ್ಲ. ಏಕೆಂದರೆ ಲೇಬರ್ ಡಿಪಾರ್ಟ್‌ಮೆಂಟು ಅತ್ತಕಡೆಗೆ ದೃಷ್ಟಿಯನ್ನು ಹರಿಸಿಲ್ಲ, ಎಷ್ಟಿರಬಹುದು ಎಂದು ತಮಗೆ ಅಂಕಿ ಅಂಶ ಕೊಡಬಹುದಾಗಿತ್ತು. ಅದು ಇಲ್ಲದೇ ಇರುವುದರಿಂದ ಏನು ಅನಿಸುತ್ತಾ ಇದೆ ಎಂದರೆ ಇದನ್ನು ಏನೋ ಒಂದು ಮಕ್ಕಿ-ಕಾ-ಮಕ್ಕಿ ನೋಡಿಕೊಳ್ಳಬಹುದು ಎಂದು ಹೇಳುತ್ತಾ ಇದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಅಂಕಿ ಅಂಶ ಕೊಟ್ಟದ್ದನ್ನು ತಾವು ಗಮನಿಸಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಜನ ಕೆಲಸಗಾರರು ಇದ್ದಾರೆ ? ನಾನು ವಾಸಮಾಡತಕ್ಕ ಒಂದು ಊರಿನಲ್ಲಿ 4,000 ಜನ ಬೀಡಿ ಕೆಲಸಗಾರರು ಇದ್ದಾರೆ, ನಮ್ಮ ತಾಲ್ಲೂಕಿನಲ್ಲಿ ಹಳ್ಳಿಹಳ್ಳಿಗಳಲ್ಲಿ 2,000 ಕ್ಕೂ ಮೇಲ್ಪಟ್ಟು ಬೀಡಿ ಕೆಲಸಗಾರರು ಇದ್ದಾರೆ. 1 ಲಕ್ಷದ 55 ಸಾವಿರ ಜನಸಂಖ್ಯೆ ಇರತಕ್ಕ ಒಂದು ತಾಲ್ಲೂಕಿನಲ್ಲಿ 6,000ಕ್ಕೂ ಮೇಲ್ಪಟ್ಟು ಬೀಡಿ ಕೈಗಾರಿಕೆಯಲ್ಲಿ ಕೆಲಸ ಮಾಡಿ ಜೀವನ ಮಾಡುತ್ತಾ ಇರತಕ್ಕ ಜನ ಇದ್ದಾರೆ, ಈ ಅಂಕಿ ಅಂಶ ನಿಮ್ಮ ಹತ್ತಿರ ಇದೆಯೇ ? ಇನ್‌ಸ್ಪೆಕ್ಟರುಗಳು ಚೆಕ್ ಇಟ್ಟಿಲ್ಲ; ಅದಕ್ಕೇ ನಿಮ್ಮಲ್ಲಿ ಅಂಕಿ ಅಂಶ ಇಲ್ಲ—ಅಂತೂ ಈಗಿರತಕ್ಕ ಸಿಬ್ಬಂದಿಯ ಮೂಲಕ ಈ ಕಾನೂನು ಜಾರಿಗೆ ಬರುತ್ತದೆಯೇ ಎಂದರೆ ಸರ್ವಥಾ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಇಂಥಾ

ಒಂದು ಹೊಸ ಬಿಲ್ಲನ್ನು ತಂದು ಶಹಬಾಸಗಿರಿ ಪಡೆಯುವುದಕ್ಕೆ ಮೊದಲು ಇದರ ಆಗುಹೋಗುಗಳನ್ನು ಯೋಚನೆ ಮಾಡಬೇಕಾಗಿತ್ತು ; ಅದನ್ನು ಮಾಡಿಲ್ಲ ಎಂದು ಹೇಳುತ್ತೇನೆ.

ಈಗ ಲೇಬರ್ ಡಿಪಾರ್ಟ್‌ಮೆಂಟಿಗೆ ಕೂಲಿಗಾರರು ಯಾರಾದರೂ ಅರ್ಜಿ ಕೊಟ್ಟರೆ ಅದು ಯಾವ ರೀತಿ ತೀರ್ಮಾನವಾಗುತ್ತದೆ ಎಂಬುದನ್ನು ನೋಡಿ. ಸಾಮಾನ್ಯವಾಗಿ ಈ ಕೈಗಾರಿಕೆ ನಡೆಸತಕ್ಕವರು ಶ್ರೀಮಂತರು ; ಅವರು ಈ ಇನ್‌ಸ್ಪೆಕ್ಟರನ್ನು ಕಾರಿನಲ್ಲಿ ಕೂಡಿಸಿಕೊಂಡು ಬಂದು ಒಳ್ಳೆಯ ಒಂದು ಭೋಜನ ಹಾಕಿಸಿದರೆ ಮುಗಿಯಿತು ಎಲ್ಲಾ ಸರಿಯಾಗಿದೆ ಎಂದು ರಿಪೋರ್ಟ್ ಕೊಡುತ್ತಾರೆ. ಕೂಲಿಗಾರ ವರ್ಗದವರು ಒಂದು ಅರ್ಜಿ ಕೊಟ್ಟರೆ ಅದನ್ನು ಎಷ್ಟುಮಟ್ಟಿಗೆ ಪರಿಶೀಲನೆ ಮಾಡುತ್ತೀರಿ, ಅವರಿಗೆ ಕೊಡಬೇಕಾದ ರಿಲೀಫ್ ಕೊಡುತ್ತೀರಾ ಎಂದು ಕೇಳುತ್ತೇನೆ. ಒಂದು ಸಾರಿ ನಮ್ಮ ಊರಿನಲ್ಲಿ ಬೀಡಿ ಫ್ಯಾಕ್ಟರಿಯಲ್ಲಿ ಗಲಾಟೆ ಆಯಿತು, ಹೊಡೆದಾಟ ಆಯಿತು. ಪೋಲೀಸ್‌ನವರು ಕೆಲವರನ್ನು ದಸ್ತಗಿರಿ ಮಾಡಿದರು. ಅದರಲ್ಲಿ ಯಾರ ತಪ್ಪು ಇತ್ತು ಎಂದು ತನಿಖೆ ಮಾಡಿ, ವಿಚಾರ ಮಾಡಿ ಎಂದು ಲೇಬರ್ ಇಲಾಖೆಗೆ ಕೊಟ್ಟ ಅರ್ಜಿ 5 ವರ್ಷ ಆಗಿದೆ; ಇದುವರಗೂ ಅದು ಬೆಳಕಿಗೆ ಬಂದಿಲ್ಲ.

ನಿಮ್ಮ ಆ ಅಧಿಕಾರಿಗಳಲ್ಲಿ ಸೇವಾ ಮನೋಭಾವನೆ ಇರುವುದಿಲ್ಲ. ಅವರು ಯಾವಾಗಲೂ ದೊಡ್ಡ ಮನುಷ್ಯರ ಕಿಸೆಯಲ್ಲಿರುತ್ತಾರೆ. ಅಂಥವಕ್ಕೆ ಅವರು ಬಲಿ ಬೀಳಬಾರದು. ಆದರೆ ಈಗ ಇರತಕ್ಕ ಸಿಬ್ಬಂದಿಯೇನಿದೆ ಅದು ಒಂದು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲ. ಆದುದರಿಂದ ಇಲ್ಲಿ ತಾವು ಹೇಳಿರತಕ್ಕ ಈ "May or may not" ಎಂಬುದು ಸರಿಯಾಗಿಲ್ಲ. ಇಲ್ಲಿ 'Shall' ಎಂಬ ಪದವನ್ನು ಹಾಕಬೇಕಾಗಿತ್ತು ಎಂದು ಹೇಳುತ್ತೇನೆ. It is an obligatory duty of the Inspector to inspect.

ಇನ್ನು ಕ್ಲಾಜ್ 12 ರಲ್ಲಿ ಹೀಗೆ ಹೇಳಿದೆ :

> "Provided that it shall not be necessary to provide for separate urinals in the beedi industrial premises where less than fifty persons are employed."

ಇದೆಲ್ಲ ಹೋಗಬೇಕೆಂದು ಹೇಳುತ್ತೇನೆ.

MR. SPEAKER.—If there are 50 persons, one Urinal may suffice. The idea behind that is, if there is a large number then two urinals may be necessary. Then it may be separate. If it is 50 persons, all the 50 do not use it at a time.

SRI C. J. MUCKANNAPPA.—One Urinal will not suffice. Every person is in the habit of taking Coffee or Tea three or four times and they will have to be visiting the Urinal often. ಇಲ್ಲಿ 50 ಜನರಿಗಿಂತ ಕಡಮೆ ಇದ್ದರೆ ಯೂರಿನಲ್ ಅನ್ನು ಪ್ರೊವೈಡ್ ಮಾಡಬೇಕಾಗಿಲ್ಲ ಎಂದು ಹೇಳಿರುವುದು ಸರಿಯಲ್ಲ. ಒಂದಾದರೂ ಇರಲೇಬೇಕು.

ಈ ಹದಿನಾಲ್ಕನೆಯ ಕ್ಲಾಜಿನಲ್ಲಿ ಮಕ್ಕಳನ್ನಿಟ್ಟುಕೊಂಡಿರತಕ್ಕಂಥ ಬಾಣಂತಿ ಹೆಂಗಸರೂ ಎಷ್ಟೋ ಕಡೆಗಳಲ್ಲಿ ಕೂಲಿ ಕೆಲಸಮಾಡುತ್ತಿದ್ದಾರೆ. ಅವರ ಮಕ್ಕಳನ್ನು ಮನೆಯಲ್ಲಿ ನೋಡಿಕೊಳ್ಳುವುದಕ್ಕೆ ಯಾರೂ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಅವರಿಗೊಂದು ಪ್ರತ್ಯೇಕ ರೂಮಿರುವುದು ಬೇಡವೆ ? 14ನೆಯ ಕ್ಲಾಜಿನಲ್ಲಿ ಹೀಗೆ ಹೇಳಿದ್ದಾರೆ :

> "In every beedi industrial premises wherein more than fifty women employees are ordinarily employed, there shall be provided and maintained a suitable room or rooms for the use of children under the age of six years of such women employees."

ಒಂದು ವೇಳೆ ಈ 50 ಜನ ಹೆಂಗಸರಲ್ಲಿ 7 ಜನ ಬಾಣಂತಿಯರಿದ್ದರೆ ಆಗ ಈ ರೂಮಿರುವುದು ಬೇಡ ಎಂತಲೇ ? ಹಾಗಾದರೆ ಅವರು ಆ ಮಕ್ಕಳನ್ನು ಎಲ್ಲಿ ಹಾಕಬೇಕು ! ನಾವು ಈ ಹಿಂದೆ ಒಂದಾವರ್ತಿ ಶರಾವತಿಗೆ ಹೋಗಿದ್ದಾಗ ಅಲ್ಲಿ ಕೂಲಿ ಮಾಡುತ್ತಿದ್ದ ಹೆಂಗಸರಲ್ಲಿ ಬಾಣಂತಿಯರಿಗಾಗಿ ತೊಟ್ಟಿಲುಗಳನ್ನು ಕಟ್ಟಿದ್ದ ಒಂದು ಪ್ರತ್ಯೇಕವಾದ ರೂಮಿತ್ತು. ಅಲ್ಲಿ ಅವರು ಹಂಗಾಮಿ ಕೆಲಸ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗಾರರು. ಇಲ್ಲಾದರೋ ಇವರು ಖಾಯಂ ಕೆಲಸಗಾರರು. ಇವರಿಗೆ ಒಂದು ರೂಮು ಇರಲೇ ಬೇಕೆಂದು ಇದರಲ್ಲಿ ಅಳವಡಿಸುವುದುತ್ತಮ. ಇದು ಕಡ್ಡಾಯವಾಗಿ ಇರಲೇಬೇಕೆಂದು ಹೇಳುತ್ತೇನೆ. ಇಂಥ ಸೌಲಭ್ಯಗಳನ್ನು ಒದಗಿಸುವುದರಿಂದ ಶ್ರೀಮಂತರಿಗೇನೂ ತೊಂದರೆ ಯಾಗುವುದಿಲ್ಲ. ಆದುದರಿಂದ ಈ ಕ್ಲಾಜ್ 14 ರಲ್ಲಿ 50 ಕ್ಕೆ ಮೇಲಿರಬೇಕು ಎಂಬ ಶಬ್ದವನ್ನು ತೆಗೆದುಹಾಕಬೇಕು. ಇಂಥ ಒಂದು ಕೊಠಡಿ ಇರಲೇಬೇಕು ಎಂಬುದನ್ನು ಒತ್ತಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೆಲಸ ಮಾಡತಕ್ಕ ವೇಳೆಯ ವಿಚಾರದಲ್ಲಿ ಒಟ್ಟು ದಿನಕ್ಕೆ 8 ಗಂಟೆಯ ಪ್ರಕಾರ ಒಂದು ವಾರ ಕೆಲಸ ಮಾಡಿದಮೇಲೆ ಇನ್ನೂ ಹೆಚ್ಚು ಕಾಲ ಕೆಲಸ ಮಾಡಿದರೆ ಅವರಿಗೆ ಓವರ್‌ಟೈಂ ಭತ್ಯ ಕೊಡಬೇಕೆಂದು ಹೇಳಿ ಮತ್ತೆ ಅಗ್ರಿಗೇಟಿನಲ್ಲಿ 50 ಗಂಟೆಗಳಿಗೆ ಮೀರದಂತೆ ಇರಬೇಕೆಂದು ಹೇಳಿದೆ. ಇದನ್ನು ಆ ಮಾಲಿಕರು ತಮ್ಮ ಮನಸ್ಸು ಬಂದಹಾಗೆ ವ್ಯಾಖ್ಯಾನ ಮಾಡುತ್ತಾರೆ. ಆದುದರಿಂದ ಇಲ್ಲಿ ಈ ಕೆಲಸದ ಅವಧಿ ಅಥವಾ ವೇಳೆ ಏನಿದೆ ಇದನ್ನು ಖಚಿತವಾಗಿ ಇಷ್ಟೇ ಇರಬೇಕೆಂದು ಹೇಳುವುದು ಉತ್ತಮವೆಂದು ನನಗೆ ಕಾಣುತ್ತದೆ. ಇಲ್ಲವಾದರೆ ಎಂಪ್ಲಾಯರ್ಸಿಗೂ, ಎಂಪ್ಲಾಯಿಗೂ ವೃಥಾ ವ್ಯಾಜ್ಯ ಉಂಟಾಗಲು ಅವಕಾಶವಾಗುತ್ತದೆ. ಆದುದರಿಂದ ಇದನ್ನು ಸರ್ಕಾರದವರು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕ್ಲಾಜ್ 31 ರಲ್ಲಿ ಹೇಳಿರತಕ್ಕ ಅಂಶಗಳನ್ನು ವಿಚಾರಣೆ ಮಾಡತಕ್ಕವರು ಯಾರು? ಈ ಅಂಶ ಇಲ್ಲಿ ಸರಿಯಾಗಿ ಅರ್ಥವಾಗುತ್ತಿಲ್ಲ. ಇದು ಬಹಳ ವೇಗ್ ಆಗಿದೆ. ಆದುದರಿಂದ ಇದನ್ನು ಸರ್ಕಾರದವರು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು 35 ನೆಯ ಕ್ಲಾಜಿನಲ್ಲಿ ಹೇಳಿರತಕ್ಕ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಕಾರ್ಮಿಕರು ತಪ್ಪು ಮಾಡಿದರೆ ಅವರನ್ನು ಪ್ರಾಸೀಕ್ಯೂಟ್ ಮಾಡಲು ಬೇಗ ಪರ್ಮಿಷನ್ ಸಿಕ್ಕುತ್ತದೆ. ಆದರೆ ಅದೇ ಮಾಲೀಕ ತಪ್ಪು ಮಾಡಿದರೆ ಪರ್ಮಿಷನ್ ಸಿಕ್ಕುವುದು ಕಷ್ಟ. ಈ ವಿಚಾರವನ್ನೂ ಕೂಡ ಸರ್ಕಾರದವರು ಸ್ವಲ್ಪ ಆಳವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕ್ಲಾಜ್ 38 ರಲ್ಲಿ ಹೇಳಿರುವುದನ್ನು ಡಿಲೀಟ್ ಮಾಡಬೇಕೆಂದು ಹೇಳುತ್ತೇನೆ. ಶ್ರೀ ಸುಂಠಣಕರ್ ಅವರು ಇದರಬಗ್ಗೆ ಏನು ಹೇಳಿದರೋ ಅದನ್ನೇ ನಾನೂ ಹೇಳುತ್ತೇನೆ. ಆದುದ ರಿಂದ ಈ ವಿನಾಯಿತಿ ಕ್ಲಾಜನ್ನು ತೆಗೆದು ಹಾಕಬೇಕೆಂದು ಹೇಳುತ್ತೇನೆ. ಹಾಗೆ ಮಾಡುವುದು ಒಳ್ಳೆಯದು.

ಇನ್ನು ಕ್ಲಾಜ್ 41 ರ (ಸಿ) ಭಾಗದಲ್ಲಿ ಹೀಗೆ ಹೇಳಿದ್ದಾರೆ:

> "submission of a monthly return by an employer to the competent authority specifying the quantity of beedi tobacco released by the Central Excise Department and the number of beedies manufactured by him."

ಇದು ಬಹಳ ಗಹನವಾದ ವಿಚಾರ. 100 ಪೌಂಡ್ ಎಂದು ಸೆಂಟ್ರಲ್ ಎಕ್ಸೈಜಿನಿಂದ ರಿಲೀಜ ಮಾಡಿಸಿಕೊಂಡರೆ, ಅದರಲ್ಲಿ ಲೆಕ್ಕಕ್ಕೆ ಸಿಕ್ಕದ 50 ಪೌಂಡ್ ಹೆಚ್ಚಿಗೆ ಇರುತ್ತದೆ. ಇವರು ಇಂಥ ಒಂದು ವಾಮ ಮಾರ್ಗವನ್ನು ಹಿಡಿದಿದ್ದಾರೆ. ಆದುದರಿಂದ ಇದರ ಬಗ್ಗೆ ಇನ್ನೂ ಕ್ರೂರವಾದ ಶಿಕ್ಷೆಯನ್ನು ವಿಧಿಸಬೇಕಾಗಿತ್ತು ಎಂದು ಹೇಳುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಸೆಂಟ್ರಲ್ ಎಕ್ಸೈಜ್ ಇನ್‌ಸ್ಪೆಕ್ಟರ್ ಇರುತ್ತಾರೆ. ಆದರೆ ಅವರು ಕೇಂದ್ರಕ್ಕೆ ಸಂಬಂಧಪಟ್ಟ ನೌಕರರು. ಆದುದರಿಂದ ಅವರು ನಮ್ಮ ಹಿಡಿತಕ್ಕೆ ಸಿಕ್ಕುವುದಿಲ್ಲ.

ನಮ್ಮಲ್ಲಿರುವ ಸೆಂಟ್ರಲ್ ಎಕ್ಸೈಜು ಇಲಾಖೆಗೆ ಸೇರಿದವರಿಗೆ ಯಾವ ಲೆಖ್ಖವನ್ನೂ ಒಬ್ಬರೂ ಕೊಡುತ್ತಿಲ್ಲ. ಸೆಕ್ಷನ್ನು 41 ರ (ಸಿ) ಕ್ಲಾಜಿನಲ್ಲಿ ಹೇಳಿರುವ ಹಾಗೆ ಲೆಕ್ಕಪತ್ರಗಳನ್ನೂ ಹೇಗೆ ಕೊಡ ಬೇಕು ಎನ್ನುವುದನ್ನೆಲ್ಲಾ ಸೆಲೆಕ್ಟು ಕಮಿಟಿಯವರು ಸ್ವಲ್ಪ ಆಲೋಚನೆ ಮಾಡಬೇಕು. ಏಕೆಂದರೆ 50 ಪೌಂಡಿನವರೆಗೆ ಲೆಕ್ಕವನ್ನೇ ಕೊಡುವುದಿಲ್ಲ. ನೂರು ಪೌಂಡು ಮೇಲಾದರೆ ಲೆಕ್ಕ ಮಾತ್ರ ಸಿಗು ತ್ತದೆ. ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

4-30 P.M.

ಇದರಲ್ಲಿ ಇನ್ನೊಂದು ಭಾಗದಲ್ಲಿ 14 ವರ್ಷಗಳಿಗಿಂತ ಕಡಿಮೆ ವಯಸ್ಸಿನವರನ್ನು ಫ್ಯಾಕ್ಟರಿಗೆ ಸೇರಿಸಕೂಡದು ಎಂದು ಇದೆ. ಇದರಂತೆ 14 ರಿಂದ 18 ವರ್ಷ ವಯಸ್ಸಿನವರನ್ನೇ ನೇಮಕ ಮಾಡಿ

ಕೊಳ್ಳುವುದು ಎಂದರೆ ಕೆಳಮಟ್ಟದ ವಯಸ್ಸಿನವರಿಗೆ ಬೇರೆ ಎಲ್ಲಿ ಕೆಲಸವನ್ನು ಒದಗಿಸುತ್ತೀರಿ ? ಇದು ಅವರ ಹೊಟ್ಟೆ ಬಟ್ಟೆಯ ಪ್ರಶ್ನೆ, ನನ್ನ ದೃಷ್ಟಿಯಲ್ಲಿ ಕಾರ್ಕಳ, ನಂಬರು 30 ಬೀಡಿ, ಗಣೇಶ ಬೀಡಿ ಹಾಗೂ ಪ್ರಭು ಬೀಡಿಗಳ ಫ್ಯಾಕ್ಟರಿಯ ದೃಷ್ಟಿ ಇಟ್ಟುಕೊಂಡು ತಪ್ಪುಮ್ಮಲ್ಲಿ ಹೇಳುತ್ತಿದ್ದೇನೆ. 14 ವರ್ಷಕ್ಕಿಂತ ಕೆಳಗಿರುವ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಅವರಿಗೆ ಶಕ್ತಿಯಿರುವುದಿಲ್ಲ. ಅಂತಹವರಿಗೆಲ್ಲ ಕೆಲಸವನ್ನು ಎಲ್ಲಿ ಒದಗಿಸಿ ಕೊಡುತ್ತೀರಿ ? ಕಂಪಲ್ಸರಿ ಎಜುಕೇಷನ್ನು ಎಂದೇನೋ ಕೊಡುತ್ತಿದ್ದೀರಿ, ಅದರ ಬಗ್ಗೆ ಯೋಚನೆ ಮಾಡುವಾಗ ಅನ್ ಎಂಪ್ಲಾಯ್‌ಮೆಂಟು ಪ್ರಾಬ್ಲಂನ್ನು ದೃಷ್ಟಿಯಲ್ಲಿಟ್ಟುಕೊಂಡು ಇದಕ್ಕೆ ಯಾವ ರೀತಿಯಾದ ಮೆಷಿನರಿ ಮಾಡುತ್ತೀರಿ ? ಇದರ ಅರ್ಥ ನನಗೆ ಇಲ್ಲಿ ಗೊತ್ತಾಗಲಿಲ್ಲ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. 12-14 ವರ್ಷಗಳ ಕೆಳಗಿನ ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ಯೋಚನೆ ಮಾಡಬೇಕು, ಇದು ಹಸಿವಿನ ಪ್ರಶ್ನೆ. ಇದಕ್ಕೋಸ್ಕರ ಸ್ವಲ್ಪ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಬೀಡಿಯನ್ನು ಪರದೇಶಕ್ಕೆ ಕಳುಹಿಸುವುದರ ಕಡೆಗೂ ತಾವು ಆದಷ್ಟು ಶ್ರಮಿಸಬೇಕು. ಮತ್ತು ಈ ಕೈಗಾರಿಕೆಗೆ ಇನ್ನು ಏನೇನು ಸವಲತ್ತುಗಳನ್ನು ಒದಗಿಸಿಕೊಡಬೇಕು ಎನ್ನುವುದರ ಬಗೆಗೆ ಸೆಲೆಕ್ಟು ಕಮಿಟಿಯವರು ಪರಿಶೀಲನೆ ಮಾಡಿ ಯಾವ ರೀತಿಯಾಗಿ ಇದನ್ನು ಜಾರಿಗೆ ತರಬಹುದು ಎನ್ನುವುದನ್ನು ಪರಿಶೀಲಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ (ಗುಬ್ಬಿ).—ಸ್ವಾಮಿ, ಈ ಬಿಲ್ಲನ್ನು ಸರಿಪಡಿಸುವ ದೃಷ್ಟಿಯಿಂದ ನಾನು ಕೆಲವು ಸಲಹೆಗಳನ್ನು ಮಂತ್ರಿಗಳಿಗೆ ತಿಳಿಸಬೇಕೆಂದು ನಿಂತಿದ್ದೇನೆ.

"It involves not only acceptance of time and application of modern technology, but far reaching changes in social customs and institutions."

ನನಗನಿಸುತ್ತಿರುವುದು ಇದುವರೆಗೆ ಪ್ಲಾನನ್ನು ಮಾಡುವಾಗ ಅದು ಎಲ್ಲಿಯವರೆಗೆ ಮಾಡಬೇಕು ಅದರಿಂದ ಯಾವ ರೀತಿಯ ಫಲ ದೊರಕುತ್ತದೆ ಎನ್ನುವುದನ್ನು ನೋಡಿಕೊಂಡು ಮಾಡಬೇಕು. ಆದರೆ ಮೂರನೆಯ ಪಂಚವಾರ್ಷಿಕ ಯೋಜನೆ ಬಂದಮೇಲೆ ಅನೇಕ ಬದಲಾವಣೆಗಳನ್ನು ಮಾಡಿ ಕೆಲವು ಇನ್‌ಸ್ಟಿಟ್ಯೂಷನ್ನುಗಳು ಬಂದಿವೆ ಎಂದು ನಾನು ಭಾವಿಸುತ್ತೇನೆ. ಇಲ್ಲಿ ನೋಡುವಾಗ ಬೀಡಿ ಕೈಗಾರಿಕೆಯಲ್ಲಿ ಕೆಲಸ ಮಾಡಲು ಬರುವ ಹೆಂಗಸರನ್ನು ಸೆಲೆಕ್ಷನ್ನು ಮಾಡಿ ಅದಕ್ಕೆ ಒಂದು ಕಮಿಟಿ ಮಾಡಿಕೊಂಡು ಅದರ ಮೂಲಕ ಹೆಂಗಸರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದರೆ ಅದು ಸರಿ ಕಾಣುವುದಿಲ್ಲ. ಇಲ್ಲಿರುವ ಸೆಕ್ಷನ್ನು 29 (1) ರಲ್ಲಿ ಏನಿದೆ ಎಂದರೆ :

"The Government may permit the wetting or cutting or wrapping leaves by women employees outside the beedi industrial premises on an application made by the employees."

ಇಲ್ಲೆಲ್ಲಾ ಕಂಟ್ರಾಕ್ಟರುಗಳ ಸಿಸ್ಟಂ ಇದೆ. ಇದನ್ನೆಲ್ಲಾ ತಪ್ಪಿಸುವುದಕ್ಕಾಗಿ ಇದರಲ್ಲಿ ಹೇಳಿರುವಂತೆ ಮಾಡಿದರೆ ಇದರ ಮೂಲ ಧ್ಯೇಯಕ್ಕೇನೇ ವಿರೋಧವಾಗುತ್ತದೆ. ಇದೂ ಅಲ್ಲದೇ ಈ ಬೀಡಿಗೆ ಜಾಸ್ತಿ ಬಂಡವಾಳ ಬೇಕಾಗುವುದಿಲ್ಲ. ಇದಕ್ಕ ಸರಕಾರ ಬಂಡವಾಳ ಹಾಕಿಕೊಂಡು, ಇದನ್ನು ಸಹಕಾರ ತತ್ವದ ಮೇಲೆ ನಡೆಸಿಕೊಂಡು ಹೋಗುವುದು ಎಂದರೆ ಇಲ್ಲದೇ ಇದ್ದ ತೊಂದರೆಗಳನ್ನು ಸರಕಾರ ವಹಿಸಬೇಕಾಗಿ ಬರುತ್ತದೆ. ಅಲ್ಲದೆ ಇದರ ಕೆಲಸಗಳನ್ನು "outside the premises ನಲ್ಲಿ ಮಾಡಬೇಕೆಂದು ಇದರಲ್ಲಿ ಹೇಳಿರುವುದು ಸರಿಯಾಗುವುದಿಲ್ಲ ಎಂದು ನಾನು ಹೇಳಬೇಕಾಗಿದೆ.

Mr. SPEAKER.—Does the Hon'ble Member want a model factory to be started by Government ?

Sri V. M. DEO.—Yes. In licensing new industrial units or sanctioning extension of the existing units there must be considerable proportion between the public sector and private sector... ಪ್ರೈವೇಟ್ ಸೆಕ್ಟರು ಮತ್ತು ಪಬ್ಲಿಕ್ ಸೆಕ್ಟರು ಎಂದಿರುವುದನ್ನು ಎರಡೂ ಸಮನ್ವಯ ಮಾಡಿಕೊಂಡು ಹೋಗಬೇಕು.

Mr. SPEAKER.—Is there any public sector in Beedi Industry ?

Sri V. M. DEO.—No Sir, you can create it. ಪಬ್ಲಿಕ್ಕು ಸೆಕ್ಟರ್ ಬಂದಾಗ ಇವೆಲ್ಲಾ ಸರಿಹೋಗುತ್ತದೆ ಎನ್ನುವುದು ನನ್ನ ವಾದ. ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಏನು ಉದ್ದೇಶಗಳಿವೆಯೋ ಅದರಂತೆ spirit of planning will be implemented. You

(SRI M. V. DEO)

will be enmeshed in a number of laws. ಹೀಗೆ ಹತ್ತಾರು ಕಾನೂನುಗಳು ಆಗಿ ಇಲ್ಲದೇ ಇರುವ ಅನಾನುಕೂಲಗಳು ಆಗಲು ಕಾರಣವಾಗುತ್ತದೆ. ಇದನ್ನು ಯಾವ ರೀತಿಯಾಗಿ ವಿಚಾರ ಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು. Government-*cum*-small beedi workers themselves—Invest some money in it and start it. ಆ ರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗಿರುವಂತೆ ಮಾಡಿದರೆ ಇದರಲ್ಲಿರುವ ಪ್ರಾವಿಷನ್‌ಗಳು ಕೂಲಿಗಾರರಿಗೆ ಅನುಕೂಲವಾಗದ ಹಾಗೆ ಮಾಡಿದ್ದಾರೆ. ಇದನ್ನು ಅನುಕೂಲವಾಗುವ ಹಾಗೆ ವಿಚಾರ ಮಾಡಬೇಕಾಗಿದೆ. ಇದನ್ನೆಲ್ಲಾ ಸೆಲೆಕ್ಟ್ ಕಮಿಟಿಯಲ್ಲಿ ಸರಿಯಾಗಿ ಯೋಚನೆ ಮಾಡಿ ಇದನ್ನು ಹೇಗೆ ಜಾರಿಗೆ ಕೊಡಬೇಕು ಎನ್ನುವುದರ ಕಡೆಗೆ ಯೋಚನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri RAJAGOPAL (K. G. F.).—Are you suggesting Public sector or Co-oprative Societies?

Sri V. M. DEO.—Take Mandya Sugar Factory—51 per cent was contributed by Government and the rest was contributed by people.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಸರಕಾರದವರು ಈ ಸಭೆಯ ಮುಂದೆ ಮಂಡಿಸಿರುವ ಈ ಬೀಡಿ ಕೈಗಾರಿಕೆಗೆ ಸಂಬಂಧಪಟ್ಟ ಮಸೂದೆಯನ್ನು ನಾನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ಕೊಡಬೇಕು ಎಂದಿದ್ದೇನೆ.

ಈ ಬೀಡಿ ಕೈಗಾರಿಕೆಯಲ್ಲಿ ತೊಡಗಿರತಕ್ಕಂಥ ಕಾರ್ಮಿಕರಿಗೆ ಈಗ ಇರತಕ್ಕಂಥ ಕಾರ್ಮಿಕ ರಕ್ಷಣೆ ಕಾನೂನುಗಳು ಏನಿವೆ ಅವು ಅನೇಕಸಲ ಅನ್ವಯವಾಗುವುದಿಲ್ಲ ಅಥವಾ ಅವುಗಳ ಲಾಭವನ್ನು ಈ ಕಾರ್ಮಿಕರು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕಾರಣ, ಪ್ರತ್ಯೇಕವಾಗಿ ಒಂದು ಕಾನೂನನ್ನು ರಚಿಸಬೇಕಾಗಿದೆ ಎನ್ನುವ ಉದ್ದೇಶವನ್ನು ಅವರು ಮಸೂದೆಯ ಉದ್ದೇಶ ಮತ್ತು ಕಾರಣಗಳಲ್ಲಿ ತಿಳಿಸಿದ್ದಾರೆ.

ಈ ಬೀಡಿ ಕೈಗಾರಿಕೆಯಂತೆಯೆ ಅಗರಬತ್ತಿ ಕೈಗಾರಿಕೆ ಕೂಡ ಇದೆ. ಹಾಗೇ ಶಿವಕಾಶಿಯಲ್ಲಿ ನೋಡಿದರೆ ಅಲ್ಲಿ ಬೆಂಕಿಪಟ್ಟಣ ಕೈಗಾರಿಕೆ ಕೂಡ ಫ್ಯಾಕ್ಟರಿಯಿಂದ ಹೊರಗಡೆ ಇದ್ದು ಅಲ್ಲಿಕೂಡ ಮನೆ ಮನೆಯಲ್ಲಿ ಮಾಡತಕ್ಕಂಥ ಒಂದು ವ್ಯವಸ್ಥೆ ಆಗಿದೆ. ಒಂದು ದೃಷ್ಟಿಯಿಂದ ಈ ಕೈಗಾರಿಕೆಯನ್ನು ಗೃಹ ಕೈಗಾರಿಕೆ ಎಂದು ಕರೆಯಬಹುದು. ಗೃಹ ಕೈಗಾರಿಕೆಗಳನ್ನು ಕೆಲಸಮಾಡತಕ್ಕಂಥವನು ತನ್ನ ಸ್ವಂತ ಬಂಡವಾಳದಿಂದ ಮಾಡುತ್ತಾ ಇರಲಿ ಅಥವಾ ಬೇರೆ ಯಾರಿಂದಲಾದರೂ ಬಂಡವಾಳ ಪಡೆದು ಮಾಡುತ್ತಾ ಇರಲಿ, ಅಂಥ ಕೆಲವು ಕೆಲಸಗಳನ್ನು ನಿಯಂತ್ರಿಸುವುದಕ್ಕೆ ಅನುಕೂಲವಾಗತಕ್ಕಂಥ ಕಾನೂನುಗಳು ಇನ್ನೂ ನಮ್ಮಲ್ಲಿ ಬಂದಿಲ್ಲ; ಕಾರಣವೇನೆಂದರೆ ಕಾನೂನುಗಳನ್ನು ನಾವು ಮಾಡಬಹುದು, ಆದರೆ ಆ ಕಾನೂನನ್ನು, ಅದರ ಉದ್ದೇಶ ಮತ್ತು ಅದರಲ್ಲಿ ಬರೆದಿರತಕ್ಕಂಥದ್ದನ್ನು ಕಾರ್ಯಗತ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಇವತ್ತು ನಾವು ಕೃಷಿ ಕೂಲಿಗಾರರಿಗೆ ಒಂದು ಕನಿಷ್ಠ ಸಂಬಳ (ಮಿನಿಮಮ್ ವೇಜಸ್) ಕೊಡಬೇಕು ಎಂದು ನಾವು ಒಂದು ಕಾನೂನನ್ನು ಮಾಡಿದ್ದೇವೆ. ಅದನ್ನು ಜಾರಿಗೆ ಕೊಡುವಂಥ ಒಂದು ಪ್ರಯತ್ನ ಕೆಲವು ಕಡೆಗಳಲ್ಲಿ ಇಲಾಖೆಯವರು ಮಾಡಿದ್ದರೂ ಅದನ್ನು ಪೂರ್ತಿ ಜಾರಿಗೆ ತರುವುದಕ್ಕೆ ಆಗುತ್ತಾ ಇಲ್ಲ. ಕಾರಣ ಏನೆಂದು ನಾವು ವಿಚಾರ ಮಾಡಿದರೆ ಈಗ ಸಮಾಜದಲ್ಲಿ ನಿರುದ್ಯೋಗ ದಿನೇ ದಿನೇ ಹೆಚ್ಚುತ್ತಾ ಇದೆ. ಜೊತೆಗೆ ಅವಶ್ಯಕ ವಸ್ತುಗಳ ಬೆಲೆ ಏರುತ್ತಾ ಇದೆ, ಜನಸಂಖ್ಯೆ ಬೆಳೆಯುತ್ತಾ ಇದೆ. ಸಮಾಜದ ಆರ್ಥಿಕ ಪರಿಸ್ಥಿತಿ, ಆಹಾರ ಧಾನ್ಯಗಳ ಬೆಲೆ ಏರುತ್ತಿರುವುದು, ಜನಸಂಖ್ಯೆ ಒಂದೇ ಸಮನೆ ಏರುತ್ತಾ ಇರುವುದು—ಈ ಮೂರನ್ನೂ ಗಣನೆಗೆ ತೆಗೆದುಕೊಂಡರೆ, ಕೈಗಾರಿಕೆಗಳ ಅಭಿವೃದ್ಧಿಯ ಒಂದು ವೇಗ ಮತ್ತು ನಮ್ಮ ದೇಶದ ಜನರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗುತ್ತಾ ಇರತಕ್ಕಂಥ ಪ್ರಮಾಣ ಮತ್ತು ಪರದೇಶಗಳ ಜೊತೆಯಲ್ಲಿ ಸ್ಪರ್ಧೆ ಮಾಡುವ ನಮ್ಮ ಶಕ್ತಿ—ಗಣನೆಗೆ ತೆಗೆದುಕೊಂಡರೆ, ಒಂದೊಂದು ಸಲ ಅನಿಸುತ್ತದೆ—ನ್ಯಾಯವಾದ ಉದ್ಯೋಗವನ್ನು ಕಲ್ಪಿಸಿಕೊಡದೆ ಇರತಕ್ಕಂಥ ಸರಕಾರಕ್ಕೆ, ಇಂಥ ಉದ್ಯೋಗ ಕೊಟ್ಟು, ಇಷ್ಟೆ ಸಂಬಳ ಕೊಟ್ಟು, ಇಷ್ಟೇ ಕಾಲ ದುಡಿಸಿಕೊಳ್ಳಬೇಕು ಅನ್ನತಕ್ಕಂಥ ಹಕ್ಕು ಕೊಡುವುದು ಎಲ್ಲಿ ಬರುತ್ತದೆ, ಎಂಬ ಪ್ರಶ್ನೆ ಏಳುತ್ತದೆ. ಯಾರಿಗೆ ಉದ್ಯೋಗ ಕೊಡಲಿಲ್ಲವೋ ಅವರು ಇಷ್ಟಪಟ್ಟ ಉದ್ಯೋಗವಿಲ್ಲದಿದ್ದರೆ, ಇನ್ನೊಂದು ಉದ್ಯೋಗ ಕೊಡುತ್ತೇವೆ, ಅದಕ್ಕಿಂತ ಉತ್ತಮ ಕೆಲಸಮಾಡುವ ವಾತಾವರಣವನ್ನು ಕಲ್ಪಿಸಿಕೊಡುತ್ತೇವೆ, ಅದಕ್ಕಿಂತ ಒಳ್ಳೆಯ ಪರಿಸ್ಥಿತಿಯನ್ನು ನಿರ್ಮಾಣಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಶ್ರೀ ದೇವರಾಜ ಅರಸರು ಕೊಡುವುದಕ್ಕೆ ಸಾಧ್ಯವಿದೆಯೆ ಎಂದು ನಾವು ಪ್ರಶ್ನೆ ಮಾಡಿದರೆ, ಬೆಳಿಗ್ಗೆ ತಾವೆಲ್ಲರೂ ಸೇರಿ

ಹೇಳಿದಿರಿ : "ನಾವು ಡಿಪ್ಲೊಮ ಮಾಡಿದವರಿಗೆಲ್ಲಾ ಕೆಲಸ ಕೊಡುವುದಕ್ಕೆ ಸಿದ್ಧರಿದ್ದೇವೆಂದು ಹೇಳುವುದಕ್ಕೆ ತಯಾರಿಲ್ಲ" ಎಂದು. ಆರ್ಥಿಕ ಮಂತ್ರಿಗಳು, ಕಾರ್ಮಿಕ ಮಂತ್ರಿಗಳು—ವಿದ್ಯಾಭ್ಯಾಸದ ಮಂತ್ರಿಗಳು ಒಬ್ಬರು ಇರಲಿಲ್ಲ, ಎಲ್ಲ ಹಾಗೆ ಹೇಳಿದರು.

ಶ್ರೀ ಡಿ. ದೇವರಾಜ ಅರಸು.—ಆ ರೀತಿ ಹೇಳಲಿಲ್ಲ. ಅದು ನಿಮ್ಮ ಊಹೆ.

ಶ್ರೀ ಎಸ್. ಗೋಪಾಲ ಗೌಡ.—ಊಹೆ ಅಲ್ಲ, ತಮ್ಮ ಹೇಳಿಕೆಗಳಿಂದ ಆ ಅಭಿಪ್ರಾಯ ವ್ಯಕ್ತಪಟ್ಟಿತು.

ಮತ್ತೆ ಲೇಬರ್ ಎಕ್ಸ್‌ಚೇಂಜ್ ಕೂಡ ಏನು ಮಾಡುತ್ತಿದೆ? ಕೆಲಸ ಬೇಡಿ ನಿಮಗೆ ಅರ್ಜಿ ಹಾಕುತ್ತಾರೆ, ಅವರು ಅವರ ಹೆಸರುಗಳನ್ನು ಪಟ್ಟಿ ಮಾಡುತ್ತಾರೆ. ಬೇರೆ ಯಾರಾದರೂ ಇಂಥ ಕೆಟಗರಿಯ ಇಷ್ಟು ಹೆಸರನ್ನು ಕಳುಹಿಸಿ ಎಂದು ಕೇಳಿದರೆ ಕಳುಹಿಸತಕ್ಕಂಥಾದ್ದು, ಅಷ್ಟು ಮಾಡುತ್ತಾರೆ. ಅವನಿಗೆ ಉದ್ಯೋಗ ದೊರೆಯಿತೊ ಇಲ್ಲವೊ ಎನ್ನುವುದನ್ನು ನೋಡುವುದಿಲ್ಲ; ಅದು ನಮ್ಮ ಕನ್‌ಸರ್ನ್ ಅಲ್ಲ, ನಮಗೆ ಸಂಬಂಧವಿಲ್ಲ, ಆ ಜವಾಬ್ದಾರಿಯನ್ನು ಹೊತ್ತುಕೊಂಡಿಲ್ಲ ಅನ್ನುವ ಮಾತನ್ನು ಸರಕಾರದವರು ಹೇಳಿಪರು. ಯೋಜನೆಯನ್ನು ಹಾಕಿಕೊಂಡು, ಅದಕ್ಕೆ ಬದ್ಧವಾದ ಕೈಗಾರಿಕೆಗಳನ್ನು, ಕೃಷಿಯನ್ನು, ನಮ್ಮ ಜನಜೀವನವನ್ನು ಯೋಜನಾಬದ್ಧವಾಗಿ ಪ್ರಗತಿಯ ಹಾದಿಯಲ್ಲಿ ಕೊಂಡೊಯ್ಯುವ ಜವಾಬ್ದಾರಿ, ಸರಕಾರದ್ದು. ಸಂದರ್ಭಗಳು ಬಂದಾಗಲೇ ಹಂಗನ್ನು ಹರಿಸಿಕೊಳ್ಳುವುದಾದರೆ, ಆವಾಗ ಜನರಿಗೆ ಗತ್ಯಂತರವಿಲ್ಲದೆ, ಎಷ್ಟೇ ಕೆಟ್ಟ ಪರಿಸ್ಥಿತಿಯಿರಲಿ, ಅಲ್ಲಿ ಹೊಟ್ಟೆ ಒತ್ತಡವನ್ನು, ಹಸಿವನ್ನು ಇಂಗಿಸಿಕೊಳ್ಳಲು ದುಡಿಯಲೇಬೇಕಾಗುತ್ತದೆ. ಇದನ್ನು ಮಾನ್ಯ ಕಾರ್ಮಿಕ ಸಚಿವರು ಗಮನಿಸುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ವಸ್ತು ಸ್ಥಿತಿ ಏನು ಅನ್ನುವುದು ಬಹಳ ಮುಖ್ಯ. ಏಕೆ ಬಡ ಕಾರ್ಮಿಕರು ಇಂಥ ಕೆಟ್ಟ ವಾತಾವರಣದಲ್ಲಿಯೂ, ಗೊತ್ತಾದ ಕಾಲಕ್ಕಿಂತ ಹೆಚ್ಚು ಕಾಲ ದುಡಿಯುತ್ತಾರೆ, ಗೊತ್ತಾಗಿರತಕ್ಕಂಥ ಒಂದು ಕನಿಷ್ಠ ಮಿತಿ ಸಂಬಳಕ್ಕಿಂತ ಕಡಮೆ ಸಂಬಳವನ್ನು ಪಡೆಯುತ್ತಾರೆ, ಎನ್ನುವುದು ಈ ಪರಿಸ್ಥಿತಿಯ ವಿವರಣೆಯಿಂದ ದೊರೆಯುತ್ತದೆ. ಈ ಪರಿಸ್ಥಿತಿಯ ಒತ್ತಡದಿಂದ ಮದ್ರಾಸಿನ ಒಂದು ಮೂಲೆಯಿಂದ ಶರಾವತಿಯ ಮೂಲೆಗೆ ಬಂದು ಒಬ್ಬ ಹೆಣ್ಣುಮಗಳು ದುಡಿಯುತ್ತಾಳೆ, ಆ ಹೆಣ್ಣು ಮಗಳು ಇನ್ನೂ ಹಡೆದು 2 ತಿಂಗಳು ಆಗುವುದಕ್ಕೆ ಮುಂಚೆ ಮಣ್ಣು ಹೊರುವುದಕ್ಕೆ ಬರುತ್ತಾಳೆ. ಮಗುವನ್ನು ಕಲ್ಲು ಮೇಲೋ, ಮರದ ಸಂದಿಯಲ್ಲಿಯೊ ಬಿಟ್ಟು ಶರಾವತಿಗೆ ಮಣ್ಣು ಹೊರುವುದಕ್ಕೆ ಏಕೆ ಬರುತ್ತಾಳೆ? ಪರಿಸ್ಥಿತಿಯ ಒತ್ತಡದಿಂದ—ತಾನು ಹುಟ್ಟಿದ ಊರು, ಬಂಧು ಬಳಗ ಬಿಟ್ಟು ದಿವಸಕ್ಕೆ ಒಂದು ಒಂದೂವರೆ ರೂಪಾಯಿ ಕೂಲಿಗೆ ದುಡಿಯುವುದಕ್ಕಾಗಿ ಎನ್ನುವುದನ್ನು ತಾವು ಗಮನಿಸಬೇಕಾಗಿದೆ.

ನಾವು ಇವೊತ್ತು ಪಾಣಿ ಮಂಗಳೂರಿಗೆ ಹೋಗಿ ನೋಡಿದರೆ, ಗುಲ್ಬರ್ಗ, ಧಾರವಾಡ, ಹುಬ್ಬಳ್ಳಿಗಳಲ್ಲಿ ನೋಡಿದರೆ, ಸಿರಾದಲ್ಲಿ ನೋಡಿದರೆ, ಅಥವಾ ಬೀಡಿ ಕೈಗಾರಿಕೆಗಳು ಹೆಚ್ಚಾಗಿರುವ ಯಾವುದೇ ಊರಿನಲ್ಲಿ ನೋಡಿದರೆ ಈ ಪರಿಸ್ಥಿತಿಯನ್ನು ನಾವು ಗಮನಿಸಬಹುದು. ತೀರ್ಥಹಳ್ಳಿಯಲ್ಲಿಯೂ ಒಂದು ಬೀಡಿ ಫ್ಯಾಕ್ಟರಿಇದೆ, ಮೂರನೇ ನಂಬರ್ ಬೀಡಿ ಎಂದು. ಮೊದಲು ಈ ಕಾನೂನುಗಳೆಲ್ಲ ಬರುವುದಕ್ಕೆ ಮುಂಚೆ ಅವರೂ ಕೂಡ ಸೂಪರ್‌ವಿಷನ್ ದೃಷ್ಟಿಯಿಂದ ಒಳ್ಳೆಯದಾಗುತ್ತದೆಂದು ಸಾಧ್ಯವಾದ ಮಟ್ಟಿಗೂ ಒಂದು ಹಾಲಿನಲ್ಲಿ ಸ್ಥಳಮಾಡಿ ಎಲ್ಲರೂ ಅಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದರು. ಈ ಕಾನೂನು ಬಂದ ಮೇಲೆ, ಕನಿಷ್ಠ ಕೂಲಿ, ಕಾಲದ ಮಿತಿ, ರಿಜಿಸ್ಟರುಗಳನ್ನು ಇಡುವುದು, ಅಧಿಕಾರಿಗಳು ಕೇಳತಕ್ಕ ಸಮಜಾಯಿಷಿಯನ್ನು ಕೊಡುವುದು, ಇವನ್ನೆಲ್ಲ ಮಾಡುತ್ತ ಹೋದರೆ ನಮ್ಮ ಬಂಡವಾಳ ಕರಗುತ್ತದೆಂದೂ, ನಮಗೆ ಲಾಭ ದೊರೆಯುವುದಿಲ್ಲವೆಂದೂ ಈ ಹೊಸ ಮಾರ್ಗವನ್ನು ಮಾಲೀಕರು ಹುಡಿಕಿದರು. ಒಂದು ಊರಿನಲ್ಲಿ ಒಬ್ಬ ಬೀಡಿ ಫ್ಯಾಕ್ಟರಿಯ ಮಾಲಿಕನಿದ್ದರೆ, ವಾಸ್ತವವಾಗಿ ಅವನು ಏನು ಮಾಡುತ್ತಾನೆಂದರೆ ಆ ಊರಿನಲ್ಲಿ ಎಷ್ಟು ಜನ ಈ ಉದ್ಯೋಗವನ್ನು ಕೈ ಕೊಳ್ಳುವುದಕ್ಕೆ ತಯಾರಿದ್ದಾರೆಂದು ತಿಳಿದುಕೊಂಡು ಅವರಿಗೆ ಎಷ್ಟು ಬೇಕೊ ಅಷ್ಟು ತಂಬಾಕು ಹಂಚುತ್ತಾನೆ, ಅದಕ್ಕೆ ಬೇಕಾದ ಎಲೆ ಹಂಚುತ್ತಾನೆ, ದಾರ ಕೊಡುತ್ತಾನೆ. ಅವರು ಅದನ್ನು ಮನೆಗೆ ತೆಗೆದುಕೊಂಡು ಹೋಗಿ ರಾತ್ರಿ ಹಗಲು ಕಟ್ಟುತ್ತಾರೆ. ಅದರಿಂದ ಕೂಲಿ ಎಂಟಾಣೆ, ಹತ್ತಾಣೆ, ಹದಿನಾಲ್ಕಾಣೆ, ಒಂದು ರೂಪಾಯಿ ಹೀಗೆ ಒಬ್ಬನು ದುಡಿಯಬಹುದು. ಅದೂ ಯಂತ್ರದಂತೆ ಕೆಲಸ ಮಾಡಿದರೆ. ಒಂದು ಸೆಕೆಂಡಿಗೆ ಒಂದು ಬೀಡಿ ಕಟ್ಟಬಹುದು ಎಂದು ಯೋಚನೆ ಮಾಡಿದ್ದರೆ, ಒಬ್ಬ ಒಂದು ಸಾವಿರ ಬೀಡಿ ಕಟ್ಟುತ್ತಾನೆಂದರೆ ಯಂತ್ರದಂತೆ ಕೆಲಸ ಮಾಡಬೇಕು. ಹೆಂಗಸರು ಮತ್ತು ಮಕ್ಕಳು ಅಷ್ಟು ಕಟ್ಟುವುದಕ್ಕೆ ಸಾಧ್ಯವಿಲ್ಲ. ಬೀಡಿಗಳ ವ್ಯಾಪಾರದಲ್ಲಿ ಅವರ ಖರ್ಚೆಲ್ಲ ಹೋಗಿ ತಂಬಾಕಿನ ಮೇಲೆ ಹಾಕಿರತಕ್ಕ excise duty, ಎಲೆಗಳ ಮೇಲೆ ಹಾಕಿರತಕ್ಕ ಡ್ಯೂಟಿ, ಇವನ್ನೆಲ್ಲ ಕೊಟ್ಟು ಅವನಿಗೆ ಎಷ್ಟು ಲಾಭ ಉಳಿಯುತ್ತದೆ ಎನ್ನುವುದೂ ಒಂದು ಪ್ರಶ್ನೆ ಬರುತ್ತದೆ. ಮಾರ್ಕೆಟ್ಟಿನಲ್ಲಿ ಬೀಡಿ ಕೊಳ್ಳತಕ್ಕವರೆಲ್ಲ ದಿವಸಕ್ಕೆ ಮೂರಾಣೆ ಸಂಪಾದನೆ ಮಾಡಿ ಜೀವನ ಮಾಡುವವರು, ತೀರ ಕೆಳಮಟ್ಟದಲ್ಲಿ ಜೀವನ

(ಶ್ರೀ ಎಸ್. ಗೋಪಾಲಗೌಡ)

ಮಾಡತಕ್ಕ, subsistance ಅಥವಾ existence level ಎಂದು ಏನು ಹೇಳುತ್ತೇವೆ; ಬದುಕುವ ಜೀವನವಲ್ಲ, ಸಾಯುವುದರ ಬದಲು ಬದುಕಿರುವುದು, ಇಂಥ ಜನ ಏನಿದ್ದಾರೆ ಅವರು ಬೀಡಿ ಕೊಳ್ಳುತ್ತಾರೆ, ಸೇವನೆ ಮಾಡುತ್ತಾರೆ. ತೀರ ಬಡವರು, ಮುಸಲ್ಮಾನರ ಹೆಣ್ಣು ಮಕ್ಕಳು, ಬೇರೆ ಏನೂ ಕೆಲಸ ದೊರೆಯದೆ ಇರತಕ್ಕ ಗಂಡಸರೂ, ಮಕ್ಕಳೂ, ಇವರು ಬೀಡಿ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಎಂಟು ಗಂಟೆ ಕೆಲಸ ಮಾಡಬೇಕು ಎಂದರೆ, ಎಂಟು ಗಂಟೆಗೆ 600 ಬೀಡಿ ಕಟ್ಟುತ್ತಾನೆಂದರೆ ಎಷ್ಟು ಸಂಬಳ ಕೊಡುತ್ತೀ ಎಂದರೆ ಎಷ್ಟೂ ಕೊಡುವುದಕ್ಕಾಗುವುದಿಲ್ಲವೆಂದು ಹೇಳತ್ತಾನೆ. ತನಗೆ ಲಾಭ ಬರುವುದಿಲ್ಲವೆನ್ನುತ್ತಾನೆ. ಈ ಕೆಲವು ವಿಶೇಷ ಅಂಶಗಳನ್ನೂ ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದು ತೀರ ಕೆಟ್ಟ ಪರಿಸ್ಥಿತಿ ಎಂದು ಹೇಳಬಹುದು. ಈ ಕಾರಣದಿಂದಲೇ ಈ ಪರಿಸ್ಥಿತಿಯನ್ನು ನಾನು ಸ್ವಲ್ಪ ವಿವರಿಸಿ ಹೇಳುವುದಕ್ಕೆ ಇಷ್ಟಪಟ್ಟೆ. ಕಾನೂನನ್ನೂ ಮಾಡಿದರೂ ಹೀಗೆಯೇ ಇದು ನಡೆಯತಕ್ಕದ್ದು, ತಪ್ಪಿದರೆ ಶಿಕ್ಷೆಯಾಗುತ್ತದೆಂದು ಹೇಳುವ ಮಾತು ಸರಿ, ಕಾನೂನನ್ನು ಪರಿಪಾಲನೆ ಮಾಡುವುದು, ಅದರಂತೆ ನಡೆದುಕೊಂಡು ಹೋಗುವುದು, ನಡೆದುಕೊಂಡು ಹೋಗುವುದಕ್ಕೆ ಪರಿಪಾಲನೆ ಮಾಡುವುದಕ್ಕೆ ಅಗತ್ಯವಾಗಿ ಬೇಕಾದ ಸನ್ನಿವೇಶಗಳು, ಮತ್ತು ಅವಶ್ಯ ಸಾಮಗ್ರಿಗಳೂ ನಮ್ಮಲ್ಲಿವೆಯೇ ಎನ್ನತಕ್ಕದ್ದು ಬಹಳ ಮುಖ್ಯವಾದ ಪ್ರಶ್ನೆ. ಆ ಕಾರಣದಿಂದ ಇವೊತ್ತು ಈ ಬೀಡಿ ಕೈಗಾರಿಕೆಯಲ್ಲಿ ಕೆಲವರು ಕಾನೂನು ಬಾಹಿರರಾಗಿ, ಮತ್ತು ಅನುಚಿತವಾದ ಲಾಭಗಳನ್ನೂ ಗಳಿಸಿ, ಹೆಚ್ಚು ಲಾಭವನ್ನೂ ಪಡೆಯತಕ್ಕ ಮಾಲೀಕರೂ ಇದ್ದಾರೆಂದು ಇಟ್ಟುಕೊಂಡರೂ ಬಹಳಷ್ಟು ಜನರು ಜೀವನೋಪಾಯಕ್ಕೇ ಗತ್ಯಂತರವಿಲ್ಲದೆ, ಈ ಉದ್ಯಮವನ್ನೂ ಅವಲಂಬಿಸಿಕೊಂಡು ಜೀವನ ಮಾಡುವುದಕ್ಕೆ ಮನೆಯಲ್ಲಿ ಅದನ್ನು ಮಾಡಿಕೊಂಡು ಹೋಗುತ್ತಿದ್ದಾರೆ.

ಗೃಹ ಕೈಗಾರಿಕೆಗಳನ್ನೂ, ತನ್ನ ಮನೆಯಲ್ಲಿ ತನ್ನ ಸ್ವಂತ ಬಂಡವಾಳದಿಂದ, ಅಥವಾ ಬೇರೆಯವರು ಕೊಡತಕ್ಕ ಬಂಡವಾಳದಿಂದ, ಕೆಲಸ ಮಾಡಿ ಆ ಕೈಗಾರಿಕೆಯಿಂದ ಜೀವನ ಮಾಡತಕ್ಕವನನ್ನೂ ನಿಯಂತ್ರಿಸತಕ್ಕ ಕಾನೂನು ಇನ್ನು ಬರುವುದಕ್ಕೆ ಸಾಧ್ಯವಾಗಿಲ್ಲವೆಂದು ನಾನು ಹೇಳಬಹುದಾಗಿದೆ. ಅಗರ ಬತ್ತಿಯ ಪರಿಸ್ಥಿತಿಯೂ ಹಾಗೆಯೇ ಇದೆ. ಅದು ಒಂದು ದೃಷ್ಟಿಯಲ್ಲಿ ಬೀಡಿ ಕೈಗಾರಿಕೆಗಿಂತ ಕೆಟ್ಟ ಪರಿಣಾಮವನ್ನುಂಟು ಮಾಡತಕ್ಕದ್ದು. ಅದರಲ್ಲಿ ಸುವಾಸನೆಯ ವಸ್ತುಗಳು ಮತ್ತು ಇತರ ವಸ್ತುಗಳು ಸೇರುತ್ತವೆ. ನೇರವಾಗಿ ನಮ್ಮ ಶರೀರವನ್ನು ಹಾಳು ಮಾಡತಕ್ಕ ವಸ್ತುಗಳು ಅದರಲ್ಲಿರುತ್ತವೆ. ಆಗರಬತ್ತಿ ಕೈಗಾರಿಕೆಯಲ್ಲಿಯೂ ಹೆಚ್ಚು ಜನ ಹೆಣ್ಣು ಮಕ್ಕಳು ಕೆಲಸ ಮಾಡುತ್ತಾರೆ. ಅದನ್ನು ಒಳ್ಳೆಯ ಸ್ಥಿತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಇಂಥ ಒಂದು ಮಸೂದೆಯನ್ನು ತರಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ಸಲಹೆಯನ್ನು ನಾನು ಮಾಡ ಬಯಸುತ್ತೇನೆ. ಸರ್ಕಾರದ ಸ್ಥಿತಿ, ಕಾನೂನುಗಳ ಸ್ಥಿತಿ ಏನು ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಯಾವ ಕೆಲಸವನ್ನು ಮಾಡಬೇಕು ಎಂದು ಹೇಳಿದರೂ ಈಗ ಅವರು ಹಣದ ಅಭಾವವನ್ನು ದೇಶದ ಮುಂದೆ ಇಡುತ್ತಿದ್ದಾರೆ. ಈ ಹಣದ ಅಭಾವದ ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿ ಮುಂದೆ ಬರುತ್ತದೆ. ಈ ಎರಡು ಕಾರಣಗಳೇನಿವೆ, ಇವು ಜನಜೀವನದ ಮೇಲೂ ಘೋರವಾದ ಪರಿಣಾಮವನ್ನುಂಟು ಮಾಡಿವೆ. ಇಂಥ ಸಂದರ್ಭಗಳಲ್ಲಿ ಈ ವಿಧೇಯಕಗಳನ್ನು ತಂದು ಕಾನೂನಿನ ಕಡತಕ್ಕೆ ಏರಿಸುವುದು ಎಷ್ಟು ಮುಖ್ಯವೋ ಅದಕ್ಕಿಂತ ಹೆಚ್ಚಾಗಿ ಇವೊತ್ತು ಈ ಸ್ಥಿತಿಯಲ್ಲಿ ಈ ಕೈಗಾರಿಕೆಯನ್ನು ಅವಲಂಬಿಸಿ ಕೊಂಡಿರತಕ್ಕ ಜನರಿಗೆ ನೀವು ಈ ಕಾನೂನುಗಳಲ್ಲಿ ಒದಗಿಸತಕ್ಕ ಸೌಲಭ್ಯಗಳಿಗೆ ಬದಲಾಗಿ ಇನ್ನೇನಾದರೂ ಸೌಕರ್ಯಗಳನ್ನೂ ಕಲ್ಪಿಸಿ ಕೊಡಬಹುದೇ ಎನ್ನುವುದನ್ನು ಇದನ್ನು ಈ ಸಂದರ್ಭದಲ್ಲಿ ವಿಚಾರ ಮಾಡಬೇಕು ಎನ್ನುವುದು ಮಾನ್ಯ ಕಾರ್ಮಿಕ ಮಂತ್ರಿಗಳಲ್ಲಿ ನನ್ನ ವಿನಂತಿ. ಈ ಕೈಗಾರಿಕೆಯನ್ನು ಸಹಕಾರ ಪದ್ಧತಿಯ ಮೇಲೆ ನಡೆಸಿಕೊಂಡು ಹೋಗಬಹುದು. ಸರ್ಕಾರ ನೇರವಾಗಿ ಈ ಕೈಗಾರಿಕೆಗೆ ಯಾವೊಂದು ಜವಾಬ್ದಾರಿಯನ್ನು ಹೊತ್ತುಕೊಳ್ಳದೆ ಯಾವ ಯಾವ ಊರುಗಳಲ್ಲಿ ಈ ಬೀಡಿ ಉದ್ಯಮದಲ್ಲಿ ತೊಡಗಿರತಕ್ಕ ಜನರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆಯೋ ಅಲ್ಲಿ ಹತ್ತು ಜನರಿಗಿಂತ ಹೆಚ್ಚಾಗಿ ಅಥವಾ 25–50 ಜನರಿಗಿಂತ ಹೆಚ್ಚಾಗಿದ್ದಾರೆ, ಅವರಿಗೆ ಸುಲಭ ದರದಲ್ಲಿ ಅಥವಾ ಒಂದು ಖಚಿತವಾದ ದರದಲ್ಲಿ ಎಲೆ, ತಂಬಾಕು ಮತ್ತು ಅದಕ್ಕೆ ಬೇಕಾದ ಇನ್ನಿತರ ಸಾಮಾನುಗಳನ್ನೂ ಒದಗಿಸಿ ಅವರು ಕಟ್ಟತಕ್ಕ ಬೀಡಿಗಳನ್ನು ಮಾರಾಟ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ ಅದರ ಮೂಲಕ ಅವರಿಗೆ ಸಹಾಯ ನೀಡಬಹುದು ಎಂದು ನನ್ನಗನಿಸುತ್ತದೆ. ಇದನ್ನು ಪ್ರತ್ಯೇಕವಾಗಿ ಸರ್ಕಾರ ಪರಿಶೀಲನೆ ಮಾಡುವುದು ಕೂಡ ಈ ದುಸ್ಥಿತಿಯಲ್ಲಿ ಬಹಳ ಅತ್ಯಗತ್ಯವೆಂದೆನ್ನಿಸುತ್ತದೆ.

ದಿನಕ್ಕೆ ಎಂಟು ಗಂಟೆ ಕಾಲ ಕೆಲಸ ಮಾಡಬೇಕೆಂದು ಪ್ರಪಂಚದಲ್ಲಿ ಎಲ್ಲರೂ ಒಪ್ಪಿರತಕ್ಕ ಕಾನೂನು, ಯಾವ ಕಾನೂನಿನಲ್ಲಿಯಾದರೂ ಇರತಕ್ಕದ್ದು ಇದೇ ರೀತಿಯಾಗಿ. ಈಗ ನಮ್ಮ ಮುಂದಿರುವ ಕಾನೂನಿನಲ್ಲಿ ದಿನಕ್ಕೆ ಹತ್ತು ಗಂಟೆಯ ತನಕ ಕೆಲಸ ಮಾಡಬಹುದು, ವಾರಕ್ಕೆ 54 ಗಂಟೆ ಕೂಡ ಕೆಲಸ ಮಾಡಬಹುದು ಎಂದು ಇದೆ. ನಿಜವಾಗಿಯೂ ಪರಿಸ್ಥಿತಿ ಹೇಗಿದೆ ಎಂದರೆ ಸರಿಯಾಗಿ 14 ಗಂಟೆ ಕೆಲಸ ಮಾಡಿದರೂ ಅವರಿಗೆ ವೇಜಸ್ ಸಿಕ್ಕುವುದಿಲ್ಲ. ಒಬ್ಬ ಕೆಲಸಗಾರನು ಸಾಧಾರಣವಾಗಿ ಒಂದು ವಾರಕ್ಕೆ 48 ಗಂಟೆ ಕೆಲಸ ಮಾಡ ಬೇಕಾಗುತ್ತದೆ. ಅದಕ್ಕೂ ಹೆಚ್ಚು ಕಾಲ ಕೆಲಸ ಮಾಡಿದರೆ ಓವರ್ ಟೈಂ ವರ್ಕ್ ಆಗುವುದರಿಂದ ಹೆಚ್ಚಿಗೆ ಕೊಡಬೇಕಾಗುತ್ತದೆ. ಆದರೆ ಬೀಡಿ ಕೆಲಸಗಾರರು ಹತ್ತು ಗಂಟೆ ಹೆಚ್ಚು ಕೆಲಸ ಮಾಡಿದರೂ ಅವರಿಗೆ ನ್ಯಾಯವಾಗಿ ದೊರೆಯಬೇಕಾದ ವೇತನ ದೊರೆಯುವುದಿಲ್ಲ.

5-00 P.M.

ಶ್ರೀ ಡಿ. ದೇವರಾಜ ಅರಸ್.—ಅನೇಕ ಕಡೆ ಈ ರೀತಿ ಇದೆ. ಎಲ್ಲಿ ಓವರ್-ಟೈಂ ಕೆಲಸ ಮಾಡುತ್ತಾರೆಯೋ ಅಲ್ಲಿ ಹೆಚ್ಚಿಗೆ ವೇತನ ಕೊಡಬೇಕಾಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಇದನ್ನು ನಿಯಂತ್ರಣ ಮಾಡುವುದು ಕಷ್ಟವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಒಂದು ದಿವಸಕ್ಕೆ ಎಂಟು ಗಂಟೆ ಕೆಲಸ ಮಾಡಿದರೆ ಹೊಟ್ಟೆ ತುಂಬುವಷ್ಟು ಕೂಲಿ ಪಡೆದುಕೊಳ್ಳುತ್ತಾರೆಯೇ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಈ ಕೆಲಸ ಕೈ ಚಳಕದ ಮೇಲೆ ಸಹ ಹೋಗುತ್ತದೆ. ಒಂದು ಗೆರೆ ಹಾಕಿ ಇದನ್ನು ಕಡ್ಡಾಯವಾಗಿ ಮಾಡಲು ಸಾಧ್ಯವಿದೆ ಎಂದು ನಾನು ಭಾವಿಸುವುದಿಲ್ಲ.

ಲೈಸೆನ್ಸ್ ತೆಗೆದು ಕೊಳ್ಳಬೇಕಾಗುತ್ತದೆ ಎಂದು ಮಸೂದೆಯಲ್ಲಿ ಹೇಳಿದೆ. ಆದರೆ ಈ ಕೆಲಸ ಮಾಡುವ ಜನರು ಎಲೆ ತಂಬಾಕು ತಂದು ಮನೆಯಲ್ಲಿಯೇ ಕುಳಿತು ಬೀಡಿ ತಯಾರು ಮಾಡಿ ಮಾರಾಟ ಮಾಡುತ್ತಾರೆ. ಇಂಥ ಸಂದರ್ಭಗಳಲ್ಲಿ ಲೈಸನ್ಸ್ ತೆಗೆದುಕೊಳ್ಳಬೇಕು ಎಂಬ ಬಲಾತ್ಕಾರ ಮಾಡಿದರೆ ಕಷ್ಟವಾಗುತ್ತದೆ. ಮನೆಯಲ್ಲಿ ಕುಳಿತು ಕೆಲಸ ಮಾಡಿದರೆ ಇದೊಂದು ಗೃಹ ಕೈಗಾರಿಕೆಯಾಗುವುದರಿಂದ ಫ್ಯಾಕ್ಟರಿ ಕಾನೂನು ಅನ್ವಯಿಸುವುದಕ್ಕಾಗುವುದಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ತಪ್ಪಾಗುತ್ತದೆ. ಕಾನೂನು ಚೆನ್ನಾಗಿದೆ. ಆದರೆ ಕೆಲಸ ಮಾಡತಕ್ಕಂಥ ಸ್ಥಳದಲ್ಲಿ ವಾತಾವರಣ ಚೆನ್ನಾಗಿ ಇರಬೇಕು ನೀರಿನ ಸೌಕರ್ಯ ಇರಬೇಕು. ಮಕ್ಕಳನ್ನು ನೋಡಿ ಕೊಳ್ಳಲು ವ್ಯವಸ್ಥೆ ಇರಬೇಕು. ಸಾಮಾನ್ಯವಾಗಿ ಕಾನೂನಿನಲ್ಲಿ ಒದಗಿಸಿರುವ ಎಲ್ಲ ಅನುಕೂಲತೆ ಒದಗಿಸಿಕೊಡಬೇಕು. ಸಾಧಾರಣವಾಗಿ ಈ ಕಾನೂನನ್ನು ಯಾರೂ ವಿರೋಧಿಸುವುದಿಲ್ಲ. ಈ ಕಾನೂನನ್ನು ಕಾರ್ಯಗತ ಮಾಡತಕ್ಕಂಥಾದ್ದು ದೊಡ್ಡದು. ಇದರಲ್ಲಿ ತೊಡಕು ಇದೆ. ಇದನ್ನು ಕಾರ್ಯಗತ ಮಾಡಲು ಅಧಿಕಾರಿಗಳು ಮೆದುತನ ತೋರಿಸದೆ ನಿಷ್ಠೂರವಾಗಿ ಕಾರ್ಯಗತ ಮಾಡಿದರೆ ಕಠಿಣ ಸನ್ನಿವೇಶ ಉಂಟಾಗುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೆ ಎಲ್ಲೆಲ್ಲಿ ಹತ್ತಾರು ಜನ ಸೇರಿ ಬೀಡಿ ಕೆಲಸ ಮಾಡುತ್ತಾರೆಯೋ ಅಂಥಲ್ಲಿ ಫ್ಯಾಕ್ಟರಿ ಆಕ್ಟ್, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್, ಮಿನಿಮಂ ವೇಜೆಸ್ ಆಕ್ಟ್ ಪ್ರಕಾರ ಏನೇನು ಸೌಲಭ್ಯ ಒದಗಿಸಬೇಕೋ ಅವುಗಳನ್ನು ಕೊಡುವಂತೆ ಮಾಲೀಕರ ಮೇಲೆ ಒತ್ತಾಯ ತರಬೇಕು. ಎಂದರೆ ಕಾನೂನಿನ ಉದ್ದೇಶ ಸಫಲವಾಗುವುದು. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಿ ಬಂದು ಕಾನೂನು ಪಾಸಾಗಿ ನೋಟಿಫಿಕೇಷನ್ಸ್ ಹೊರಡಿಸಿ ನಿಯಮಗಳನ್ನು ತಯಾರಿಸುವುದಕ್ಕೆ ಇನ್ನೊಂದು ಚುನಾವಣೆಯ ಕಾಲ ಬಂದರೂ ಬರಬಹುದು. ಈ ಕಾರ್ಮಿಕರಲ್ಲಿ ಮಹಿಳೆಯರು ಹೆಚ್ಚಾಗಿ ಇದ್ದಾರೆ. ಅವರೆಲ್ಲರಿಗೂ ರಕ್ಷಣೆ ಕೊಟ್ಟು ಕಾಪಾಡಿ ಸಹಾಯ ಮಾಡುತ್ತಾರೆಂದು ಆಶಿಸಿ ನಾನು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri S. RAJAGOPAL.—Mr. Speaker, Sir, regarding this Bill, several Members already have expressed their opinion, and there is very less chance for me to quote any important aspects of this Bill. I am happy, Sir, that the Hon'ble Minister for Labour, at least in his time, has brought this Bill before this Assembly; and in the same way I request him also to see, within his time, that this Bill is passed and implemented as early as possible, because there is a lot of talk going on even now that the Ministry is going to be cut down. While I am saying this, there may be some counter-charge also against me, because these Bills

(SRI S. RAJAGOPAL)

are not brought by individual Ministers. If it is, so it may not be called as Jatti Ministry, Nijalingappa Ministry, Kamraj Ministry or Sanjeeva-reddy Ministry. There is no necessity to stress ? Individuals if it is Congress Ministry I am happy that the Hon'ble Minister has at least got up this Bill at this juncture. He knows the troubles of the workers so far faced by them. In this introduction speech he mentioned that in spite of the Governments of Madras and Kerala having passed this measure because we have not passed it earlier, they could not implement it in a satisfactory way keeping in view the troubles faced by the workers. I request the Hon'ble Minister again and again, to see if possible, that this Bill is passed during the present Session alone after referring to the Select Committee, and implement this at an early stage also.

The second thing is Sir, the Hon'ble Minister mentioned that several difficulties also would crop up while implementation took place. Hon'ble Members suggested several difficulties that we are facing under other Acts and Rules while they are put into force; the Minimum Wages Act is there, unfortunately, the people concerned are not getting the proper benefit out of it. In this age, particularly even organised workers are lacking very much, in places like Kerala, Madras, Bombay and Calcutta, already there is law in this behalf and it is already implemented, but they are not able to utilise the provisions for their benefit because a lot of sabotage is coming in. There is a lot of rivalries between unions, suppression by the employers, suppression by some other parties. We are not able to utilise the benefits of the laws in existence in a full measure. We are having a small number of organised workers. We cannot understand why even the facilities created by the Government could not be utilised by the workers. As you say, the condition of the beedi workers is horrible and they are spread over in the villages and in houses, they are manufacturing beedies. Even though there are various laws, we are not able to utilise many of them in a proper manner. So, I request the Labour Minister to see how best he can use all the provisions of the Bill in the best interests of the beedi workers in the implementation of the legislation, because the machinery that we have is inefficient and inadequate. I think the Labour Minister also will accept it. In the Labour Department, we are having a good Labour Minister. I do not know whether he has been able to advance the cause of the labourers to the extent we expected. Implementating authorities are very very necessary. No doubt, the Labour Commissioner, Assistant Labour Commissioner, Labour Officers and Inspectors are there, but they are not giving effect to the laws in the manner expected. They are not fulfilling all the expectations raised in this behalf. In that respect there are Acts and Rules which have already been implemented, but they should have implemented them in a proper manner. In the same way we hope that this Bill relating to beedi workers will not suffer from defective implementation, but will be implemented in a proper manner so as to bring the expected relief to the

beedi workers. I do trust that the Labour Minister will keep in mind these points at least and help the poor beedi workers to derive the full benefits that are contemplated under the present Bill.

With this, I request the Labour Minister to have this legislation passed in this very session so that the beedi workers get the much-needed relief as early as possible. Thank you.

Sri G. V. GOWDA (Palya).—Mr. Speaker, Sir, by the introduction of this Bill, one thing is certain. The machinery of the Government which is entrusted with the implementation of the labour laws has failed and I must express my thanks to the Hon'ble Minister who has conceded that point in the statement of Objects and Reasons. He says, "it has become very difficult to estabish that there is employer-employee relationship between the proprietors of Beedi factories and their workers. As such it has been found impracticable to enforce labour laws". I do not know why it was not possible for this machinery to enforce these labour laws already on the statute book. You say that by implementing certain provisions of the existing enactments, much of the interests of the beedi workers could have been safeguarded. If a factory were to be found working on a permises which is dirty, if a factory were functioning in premises which is not suitable.........

Sri D. DEVARAJ URS.—My Hon'ble friend is a lawyer and knows all these things, still he is a r g u i n g in this fashion. I cannot understand. It is not possible to enforce the Factory Act. As I said big factories are being broken up into small establishment to escape the penalty of law. That is what they have been doing so far.

Sri G. V. GOWDA.—I know Sir, I am only saying whether the Govermental machinery is working. If for instance a factory owner for the purpose of escaping from the clutches of law breaks his business and opens small branches, should not the machinery pursue and go after the said person and bring him to book as soon as possible within the frame work of the existing law ?

Sri D. DEVARAJ URS.—How to do it ? Under what Law ?

Sri G. V. GOWDA.—It is possible, Sir. If that is so, what guarantee is there that the interests of the workers would be safeguarded even under this Bill ? What I mean is, adequate steps should have been taken under the existing enactments. I am not opposing this Bill. It is worth the while if the provisions of this measure are implemented and if the workers get their amenities. From that point of view, the machinery that is now entrusted with the task of enforcing the labour laws must have evinced keener interest, and must have the same zeal and enthusiasm that the Government has in securing the best interest of the beedi workers. Government's intentions are quite good, but sometimes they cannot be translated into action on account of the defect in the machinery that has to implement the measures. And unless the intentions are properly translated into action, there is no use making so many enactments and keeping them on the Statute Books. As a matter of fact the successful functioning of democracy in a Welfare State depends upon the proper implementation of the enactments that are

(SRI G. V. GOWDA)

passed in the Legislature. As we have been seeing, the more the number of enactments that we pass, it gives rise to more corruption, because if we do not really implement or translate the intentions of the Government, it gives rise to corruption. Therefore, I am submitting to the Hon'ble Minister enthusiastic as he is, that at least after these enactments are passed, the Government see that the provisions are properly enforced, and that the intention of this House is translated into action with the clear view of safeguarding the interest of the workers. I have also seen many of the premises where this manufacture of beedi is going on. There is no proper ventilation, it is not clean, it is not suitable for human beings to stay there at all. Such places are found there. It is, therefore, very necessary to safeguard the interests of workers who are working in an unhealthy surrounding. Provision has been made here to see that licences will not be given to carry on these activities in such unhealthy premises.

There are many other provisions included in this Bill in order to secure the interests of the workers. Unless, the inspecting authorities take the law in the proper spirit and implement it, there is no use. So, the test of these laws is in the implementation of it. Then only it is worthwhile enacting the law and the Hon'ble Minister can have the satisfaction that he has done something worthwhile for the sake of these poor workers.

Sir, it is said that a competent authority would issue licence. We do not know who might be appointed as the competent authority. If you can see the memorandum regarding delegated legislation, there are 41 clauses and if we remove clauses 40 and 41, there will be only 39 clauses; out of this, 13 clauses are there providing for delegated power. 13 clauses empower the State Government to take power in their hands.

I do not think that it is desirable to have so much authority delegated to the executive when an enactment is made. Then, Sir, in a family, father and his sons engage themselves in the manufacture of beedi and whether they would also come within the purview of this Act is a point to be examined. If I engage myself in this work with my family and not employ anybody else, should I also obtain a license, is the point. Here, there is no question of employer and employee. So, I suggest that in such cases we should not insist on obtaining licence. This enactment is only to safeguard the interests of the workers in the industry in a factory. It is to see that the premises in which this industry is carried on is licenced. But, if the members of a family, in their spare time, engage themselves in manufacturing beedi in their houses, they should not be subjected to the provision of obtaining license and all these conditions.

SRI D. DEVARAJ URS.—There is clause 40.

SRI G. V. GOWDA.—But you should not make a person go to the authority and prove that he has not employed any body and so he must be given exemption. There is the Inspector to watch and he may find

out the fact. Sir, we are seeing so many people living in slums. What has the Government done to to them ? If some poor man and his family do this work in their house, why should they be subjected to all these conditions ? So, this provision should not be made applicable in such cases.

ಶ್ರೀ ಆರ್. ಎಲ್. ಲಕ್ಷ್ಮೀಪತಿ (ಗೌರಿಬಿದನೂರು).—ಹೊಗೆಸೊಪ್ಪು ಸೆಂಟ್ರಲ್ ಎಕ್ಸೈಜ್ ಬಾಬಿಗೆ ಸೇರಿದ್ದು. ಇದನ್ನು ಕೇವಲ ಬೀಡಿ ಸುತ್ತುವುದಕ್ಕೇ ಅಲ್ಲದೆ, ಬೇರೆ ರೂಪದಲ್ಲೂ ಉಪಯೋಗಿಸುತ್ತಾರೆ. ಯಾರಲ್ಲೇ ಇದು ಇದ್ದರೂ ಅವರು ಇದರ ಬಗ್ಗೆ ಲೆಕ್ಕ ಇಡಬೇಕೆಂಬ ಕಾನೂನಿದೆ. ರಹದಾರಿಯಿಲ್ಲದೆ ಬೇರೆ ಕಡೆಗೆ ಸಾಗಿಸುವಂತಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಸ್ವಲ್ಪ ದೂರದೃಷ್ಟಿಯಿಂದ ವರ್ತಿಸುವುದೊಳ್ಳೆಯದು.

Sri G. V. GOWDA.—Sub-clause (2) of Clause 10 provides that the owner must provide 150 cubic feet of space for each worker. This comes to 5 feet by 5 feet per employee. I think this is on the high side and may prevent a more number of employees from being put to work and it may thus affect the industry. So also there is a provision that for every 50 workers there must be a first-aid kit manned by a trained man. I think it would be enough if one trained man is provided for a factory. The minimum wages to which the workers are entitled are not stated here. So also, unless an employee works for 240 days he is not entitled to leave. The employers will somehow maneouvre to see that something less than 240 days is shown to deprive the employees of their legitimate leave. I suggest that leave should be given on a proportionate or slab basis. Otherwise it would lead to exploitation.

5–30 P.M.

The terms about notice of dismissal should be liberalised and a resonable opportunity should be given to the worker if he has put in a certain period of service. It is also stated that the Central enactments will cease to be effective once this Bill becomes law. But I submit that if certain advantages accrue to the workers they should be protected. About the powers of exemption to be vested in Government, this provision is unwarranted and is likely to be misapplied. It may be that as long as good persons like the present Labour Minister are there, things may go alright but this cannot be guarantee and there is a likeihood of abuse. Hence that exemption should be removed.

I would also request that delegated legislation should be minimised and the provisions liberalised. The various original and appellate authorities should be mentioned in the Bill itself. I expect much from the Select Committee and I hope this would emerge as a pucca legislation.

ಶ್ರೀ ಡಿ. ದೇವರಾಜಅರಸ್.—ಸ್ವಾಮೀ, ಈಗ ಮಾತನಾಡಿದಂತಹ ಎಲ್ಲ ಮಾನ್ಯ ಸ್ನೇಹಿತರೂ, ಒಬ್ಬರು ವಿನಾ ಈ ಮಸೂದೆಯನ್ನು ಸ್ವಾಗತಿಸಿದ್ದಾರೆ. ಅವರೂ ಕೂಡ ಕೆಲಸಗಾರರ ದೃಷ್ಟಿಯಿಂದ ಇದು ಬಹಳ ಅಗತ್ಯವಾಗಿ ಬರಬೇಕಾಗಿತ್ತು, ಆದರೂ ಸ್ವಲ್ಪ ನಿಧಾನವಾಗಿಯಾದರೂ ಈಗ ತಂದದ್ದು ಒಳ್ಳೆಯದು ಎಂದು ಹೇಳಿದ್ದಾರೆ. ಜೊತೆಗೆ ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ಇದನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡತಕ್ಕ ಕಾಲದಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದಾರೆ. ಒಬ್ಬ ಮಾನ್ಯ ಸದಸ್ಯರು ಮಾತ್ರ ಈ ಬಿಲ್ಲನ್ನು ಮೊದಲು ಸ್ವಾಗತಿ

(ಶ್ರೀ ಡಿ. ದೇವರಾಜ್ ಅರಸ್)

ಸಿದರು. ಶ್ರೀಮಾನ್ ಪರಮೇಶ್ವರಪ್ಪನವರು ಈ ರೀತಿ ಸ್ವಾಗತಿಸಿ ಆ ನಂತರದಲ್ಲಿ ಈ ಬಿಲ್ಲು ಬರುವ ಅಗತ್ಯವಿಲ್ಲ. ಅದರಿಂದ ಇದನ್ನು ವಾಪಸು ತೆಗೆದುಕೊಳ್ಳಬೇಕು ಎಂದು ಹೇಳಿದರು. ನಾನು ಮೊದಲು ಹೇಳಿದುದನ್ನು ಅವರು ಸರಿಯಾಗಿ ಕೇಳಿ ತಿಳಿದುಕೊಂಡಿದ್ದರೆ ಅವರೂ ಹೀಗೆ ಹೇಳುತ್ತಿರಲಿಲ್ಲ. ಈಗ ಇಲ್ಲಿರತಕ್ಕ ಫ್ಯಾಕ್ಟರಿಯ ಆಕ್ಟ್ ಅಪ್ಲಿಕಬಲ್ ಆಗದ ರೀತಿಯಲ್ಲಿ ಕೆಲವು ಮಾಲೀಕರುಗಳು ಕೆಲವು ಹೊಸ ವಿಧಾನಗಳನ್ನು ಕಂಡುಹಿಡಿದುಕೊಂಡು ಇದನ್ನು ಈಗ ಅಪ್ಲೈ ಮಾಡುವುದಕ್ಕೆ ಸಾಧ್ಯವಾಗದಂತೆ ಮಾಡುತ್ತಿದ್ದಾರೆ. ಅವರು ಫ್ಯಾಕ್ಟರಿಯ ಅಕ್ಟಿನ ಡೆಫನಿಷನ್ನನ್ನು ಸರಿಯಾಗಿ ಓದಿಲ್ಲ ಎಂದು ನಾನು ಭಾವಿಸುತ್ತೇನೆ. ಫ್ಯಾಕ್ಟರಿಯ ಡೆಫನಿಷನ್ನು ಏನು ಎನ್ನುವುದನ್ನೂ ಕೊಟ್ಟಿದ್ದಾರೆ.

"Uuder the Factories Act 10 persons should work for the preceding 12 months with the aid of power. In the alternative 20 workers should be engaged in manufacturing process without the aid of power."

ಹೀಗೆ ಅವರು ಡೆಫನಿಷನ್ನಿನಲ್ಲಿ ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ ಉಪಯೋಗಿಸಿದಾಗ್ಯೂ ಹತ್ತು ಜನಕ್ಕಿಂತಲೂ ಕಡಿಮೆಯಿಲ್ಲದೇ ಹೋದರೆ ಅದನ್ನು ಫ್ಯಾಕ್ಟರಿ ಎಂದು ಪರಿಗಣನೆ ಮಾಡುವಂತಿಲ್ಲ. ವಿದ್ಯುಚ್ಛಕ್ತಿ ಉಪಯೋಗ ಮಾಡದೇ ಬರೀ 20 ಜನರು ಸೇರಿಕೊಂಡು ಒಂದು ಫ್ಯಾಕ್ಟರಿ ನಡೆಸುವಂತಿದ್ದರೆ ಅಂತಹವರು ಅದರ ವ್ಯಾಪ್ತಿಯಲ್ಲಿ ಬರಬಹುದು ಎನ್ನುವಂತೆ ಡೆಫಿನಿಷನ್ನು ಇರುವುದರಿಂದ ಇದರೊಳಗೆ ಬರುವ ಹಾಗಿಲ್ಲ. ಇದರಂತೆ 20 ಜನಕ್ಕೆ ಕಡಿಮೆ ಇರಬೇಕು ಎಂದು ಮಾಡಿರುವುದರಿಂದ ನಮ್ಮ ಮೈಸೂರು ದೇಶದಲ್ಲಿ ಬಹಳ ದೊಡ್ಡ ಮಾಲೀಕರುಗಳಾಗಿದ್ದರೂ ಬೀಡಿ ತಯಾರಿಕೆಯ ಉದ್ಯಮವನ್ನೆಲ್ಲಾ ಪೂರ್ತಿಯಾಗಿ ಸಣ್ಣ ಸಣ್ಣ ಮನೆಗಳೊಳಗೇ ಹಂಚಿಬಿಟ್ಟಿದ್ದಾರೆ. ಅವರು ಪ್ರತ್ಯೇಕವಾದ ಫ್ಯಾಕ್ಟರಿಗಳನ್ನು ಮಾಡಿಕೊಂಡು ನಡೆಸುವಂತಿಲ್ಲ. ಅದರಿಂದಾಗಿ ಈಗಿರುವ ಫ್ಯಾಕ್ಟರಿ ಆಕ್ಟ್ ಅವರುಗಳಿಗೆ ಅನ್ವಯಿಸುವಂತಿಲ್ಲ. ಇವರುಗಳು ಲಕ್ಷಾಂತರ ರೂಪಾಯಿಗಳಷ್ಟು ಆದಾಯವನ್ನು ಪಡೆಯುತ್ತಿದ್ದಾರೆ. ಇನ್‌ಕಂ-ಟ್ಯಾಕ್ಸನ್ನು ಕೊಡುತ್ತಿದ್ದಾರೆ. ಆದರೆ ಇವರುಗಳು ಈಗಿರುವ ಕಾನೂನಿನ ವ್ಯಾಪ್ತಿಯೊಳಗೆ ಬಾರದೇ ಇರುವುದರಿಂದ ಈ ಹೊಸ ಕಾನೂನನ್ನು ಮಾಡಿ ಇದರೊಳಗೆ ಅವರೆಲ್ಲ ಬರುವಂತೆ ಮಾಡಲಾಗಿದೆ. ಇದರಿಂದ ಮಾನ್ಯ ಸದಸ್ಯರು ಹೇಳುವ ವಾದದಲ್ಲಿ ತಿರುಳಿಲ್ಲ ಎಂದು ಹೇಳಬೇಕಾಗಿದೆ.

ಇನ್ನೊಬ್ಬರು ಮಾನ್ಯ ಸದಸ್ಯರು, ಪ್ರಾಯಶಃ ಶ್ರೀಮಾನ್ ಐಕಳರವರು ಎಂದು ಕಾಣುತ್ತದೆ. ಇದಕ್ಕೆ ಪ್ರತ್ಯೇಕವಾದ ಮೆಷಿನರಿಯನ್ನೇನಾದರೂ ತಯಾರು ಮಾಡಿದ್ದೀರಾ ಎಂದು ಕೇಳಿದರು. ಹಿಂದೆ ಶ್ರೀಮಾನ್ ವಿ. ವಿ. ಗಿರಿಯವರು ಕೇಂದ್ರ ಸರಕಾರದ ಮಂತ್ರಿಗಳಾಗಿದ್ದ ಕಾಲದಲ್ಲಿ ಈ ಪ್ರಶ್ನೆ ಬಂದಿತ್ತು. ನಮ್ಮ ಇಡೀ ಇಂಡಿಯಾ ದೇಶಕ್ಕಾಗಿ ಬೇಕಾಗುವ ಸುಮಾರು 15 ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಮೆಷಿನರಿಗಳನ್ನು ತರಿಸಿಕೊಳ್ಳಬಹುದು ಎಂದು ಏರ್ಪಾಡಾಗಿತ್ತು. ಆದರೆ ಇದರ ನಿಖರವಾದ ಅಂಕಿ ಅಂಶಗಳು ಸರಿಯಾಗಿ ಆಗ ದೊರಕದೇ ಹೋದುದರಿಂದಲೂ ಇದನ್ನು ಹೇಗೆ ಮಾಡಬೇಕೆಂದು ಯೋಚನೆ ಮಾಡಿದಾಗ ಬೀಡಿ ಕೈಗಾರಿಕೆಗಾಗಿ ಪಡೆಯತಕ್ಕ ಈ ಮೆಷಿನರಿಗಳಿಗಾಗಿ ತಯಾರಾಗುವ ಖರ್ಚು ಹೆಚ್ಚಾದುದರಿಂದಲೂ ಮತ್ತು ಇದರ ಮೇಲೆ ತೆರಿಗೆ ಹೊರೆಯೂ ಹೆಚ್ಚಾಗಿ ಬೀಳುವುದರಿಂದಲೂ ಅದನ್ನು ಕೈಬಿಟ್ಟರು. ಇಂತಹ ಮೆಷಿನರಿಗಳನ್ನು ತಯಾರ ಮಾಡುವುದು ಅಸಾಧ್ಯ ಎಂದು ಆಗಲೇ ಕೈಬಿಟ್ಟುದರಿಂದ ಇದರ ಲೆಕ್ಕ ಇದನ್ನು ಮಾಡದೇ ಇರುವಂತೆ ಅದು ಬಿಟ್ಟು ಇರುವಂತಾಯಿತು, ಇದರಿಂದ ಕೂಲಿಗಾರರುಗಳಿಗೆ ಅನುಕೂಲವಾಯಿತು ಅಲ್ಲದೆ ಇದಕ್ಕೆ ಬೇಕಾಗುವ ಮೆಷಿನರಿಯನ್ನು ನಮ್ಮ ದೇಶದಲ್ಲಿಯೇ ತಯಾರು ಮಾಡಲು ಸಾಕಾದಷ್ಟು ಜನರು ಸಿಕ್ಕದೇ ಇರುವ ಸಮಸ್ಯೆ ಬಂತು, ಹಾಗೂ ನಿರುದ್ಯೋಗದ ಸಮಸ್ಯೆಯೂ ಹೆಚ್ಚುತ್ತ ಇರುವ ವಿಚಾರವೂ ಬಂತು.

...ದ ಇದೆಲ್ಲವನ್ನು ಗಣನೆಗೆ ತೆಗೆದುಕೊಂಡು ಮೆಷಿನರಿ ಉಪಯೋಗಿಸುವುದು ಸಾಧುವಲ್ಲವೆಂದು ನಮ್ಮ ಭಾವನೆ.

ಶ್ರೀ ಸಂಜೀವನಾಥ ಐಕಳ.—ಕೆಲವುಕಡೆ ಬೀಡಿ ಸೇದಬಾರದೆಂದು ನಿಷೇಧಿಸಿದ್ದೀರಿ. ಇನ್ನು ಮುಂದೆ ಬೀಡಿ ಸೇದುವುದನ್ನೇ ಪ್ರೊಹಿಬಿಟ್ ಮಾಡಿ ನಿರುದ್ಯೋಗ ಕಲ್ಪಿಸುತ್ತೀರೋ!

ಶ್ರೀ ಡಿ. ದೇವರಾಜ ಅರಸ್.—ಒಂದಕ್ಕೊಂದಕ್ಕೆ ಕರ್ಫ್ಯೂಸ್ ಮಾಡಿಕೊಳ್ಳುತ್ತಾ ಇದ್ದೀರಿ 'ಅಸೆಂಬ್ಲಿ' ಹಾಲಿನಲ್ಲಿ ಬೀಡಿಸೇದಿ ಎಂದು ಹೇಳಬೇಕೆ ? ಸಿನಿಮಾ ಮಂದಿರಗಳು, ಬಸ್ಸುಗಳು ಇಂಥಾ ಕಡೆ ಇತರರಿಗೆ ತೊಂದರೆ, ಉಪದ್ರವವಾಗಬಾರದೆಂದು ಅದನ್ನು ನಿಲ್ಲಿಸಿದೆ ಎಲ್ಲಾ ಕಡೆ ಬೀಡಿ ಸೇದ ಬೇಕು ಅನ್ನುವುದು ಸಾಧುವಲ್ಲ ಅನ್ನುವುದನ್ನು ಒಪ್ಪತಕ್ಕ ಮಾತು.

ಸ್ವಾಮಿ, ಇನ್ನು ಒಂದು ಶಂಕೆಯನ್ನು ಮಾನ್ಯಸದಸ್ಯರನೇಕರು ವ್ಯಕ್ತಪಡಿಸಿದರು. ಆದ್ದೇನೆಂದರೆ ಈ ಮಸೂದೆ ಬರಬೇಕು, ಆದರೆ ನಿಧಾನವಾಗಿ ಬಂದಿದೆಯೆಂದು ಇದರಿಂದ ಕಾರ್ಮಿಕರ ಹಿತಸಾಧನೆ ಸ್ವಲ್ಪವಾಗುತ್ತದೆಂದು ಒಪ್ಪಿಕೊಂಡರು; ಆದರೆ ಇದನ್ನು ಜಾರಿಗೆ ತರುವುದರಲ್ಲಿ ನಿಧಾನಮಾಡದೆ ಹೋದರೆ ಎಲ್ಲರೂ ಸ್ವಾಗತಿಸುತ್ತೇವೆಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಈ ಮಾನ್ಯ ಸಭೆಗೆ ಒಂದು ಭರವಸೆ ಕೊಡುತ್ತೇನೆ. ಈ ಸಭೆಯು ಈ ಸೆಷನ್ ಮುಗಿಯುವುದರೊಳಗಾಗಿ, ಸುಮಾರು 15ದಿವಸಗಳೊಳಗೆ ಸೆಲೆಕ್ಟ್ ಕಮಿಟಿಯ ವರದಿಯನ್ನು ಈ ಸಭೆಯಮುಂದೆ ಇಡುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಾಸ್ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಪಾಸ್ ಮಾಡುವುದು, ಬಿಡುವುದು ತಮ್ಮ ಕೈಯಲ್ಲಿ ಇರುತ್ತದಲ್ಲ. ಅಂಥ ಒಂದು ಭಯಬೇಕಾಗಿಲ್ಲ. ರೀಜನಬಲ್ ಟೈಮಿನಲ್ಲಿ ಇದು ಕಾನೂನು ಆಗುತ್ತದೆಂದು ಭಾವಿಸುತ್ತೇನೆ.

ಈಗ ಈ ಇಲಾಖೆಯಲ್ಲಿರತಕ್ಕಂಥ ಅನೇಕ ಕಾನೂನುಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರುತ್ತಾ ಇಲ್ಲವಾದ ಪ್ರಯುಕ್ತ, ಈ ಕಾನೂನು ಸಹ ಹಿಂದಿನ ಕಾನೂನುಗಳಂತೆ ಕಡತದಲ್ಲಿ ಉಳಿದು ಹೋಗುತ್ತದೆ. ಅಥವಾ ಸರಿಯಾದ ರೀತಿಯಲ್ಲಿ ಅಧಿಕಾರಿಗಳು ಜಾರಿಗೆ ತರುವ ಸ್ಥಿತಿಯಲ್ಲಿಲ್ಲ ಎಂಬ ಅಪಾದನೆಗಳನ್ನು ಮತ್ತು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ವಿಷಯದ ಬಗ್ಗೆ ಮಾತನಾಡುವಾಗ ಈ ಮಾನ್ಯ ಸಭೆಯ ಗಮನಕ್ಕೆ—ಅವಗಾಹನೆಗೆ—ಒಂದು ಅಂಶವನ್ನು ತರಬೇಕಾದ್ದು ಅಗತ್ಯವೆಂದು ಕಾಣಿಸುತ್ತದೆ. ತಮಗೆ ಗೊತ್ತಿರುವ ಹಾಗೆ ಈ ಇಲಾಖೆ ಸರಕಾರದಲ್ಲಿ ಬಹಳ ಕೊನೆಯಲ್ಲಿ ಹುಟ್ಟಿದ ಶಿಶು. ಅಂದರೆ Labour Department as such ಕೊನೆಯದು. ಅದು ಒಂದು ಕಾಲದಲ್ಲಿರಲಿಲ್ಲ; ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಪ್ರತ್ಯೇಕವಾದ ಇಲಾಖೆಯಾಗಿ ಈಗಿರುವಂಥ ಒಬ್ಬ ದೊಡ್ಡ ಆಫೀಸರನ್ನು ಮುಖ್ಯಾಧಿಕಾರಿಯಾಗಿ ಹೊಂದಿರಲಿಲ್ಲ. ಆವಾಗ ಇದನ್ನು ಗ್ರಹಿಸಿ ಎಂದರೆ conceive ಮಾಡಿರಲಿಲ್ಲ. ಅದಕ್ಕೆ ದೇಶದ ಪರಿಸ್ಥಿತಿಯೇ ಕಾರಣ. ಕಾರ್ಮಿಕ ವರ್ಗದ ಅಭಿವೃದ್ಧಿ, ಕೈಗಾರಿಕೆ ಅಭಿವೃದ್ಧಿಯ ಜೊತೆಯಲ್ಲಿಯೇ ಸೇರಿಕೊಂಡಿತ್ತು. ಕಾರ್ಮಿಕರು ಹೆಚ್ಚುತ್ತಾ ಹೆಚುತ್ತಾ ಹೋದಹಾಗೆಲ್ಲಾ ಅವರಿಗೆ ಅಗತ್ಯವಾದ ಅನುಕೂಲಗಳನ್ನು ಒದಗಿಸುವುದು ಕಾನೂನು ರಕ್ಷಣೆಕೊಡುವುದು, ವಗೈರೆ ಯೋಚನೆಮಾಡುತ್ತಾ ಇದ್ದೇವೆ. ಆದ್ದರಿಂದ ಇದೂಕೂಡ ಬೆಳೆಯುತ್ತಾ ಇರತಕ್ಕಂಥಾ ಇಲಾಖೆ. ಆ ಮಾತನ್ನು ಹೇಳುವಾಗ ಒಂದೇ ಒಂದು ಉದಾಹರಣೆಯನ್ನು ಕೊಟ್ಟರೆ ನನ್ನಮಾತನ್ನು ಒಪ್ಪುತ್ತೀರ. ಸಂದರ್ಭಾನುಸಾರ ಇನ್‌ಸ್ಪೆಕ್ಟರೇಟನ್ನು, ಫ್ಯಾಕ್ಟರಿ ಇನ್‌ಸ್ಪೆಕ್ಟರುಗಳನ್ನು, ಹೆಚ್ಚಿಸಬೇಕು ಎಂದು ಸಲಹೆಬಂತು. ಆದರೆ ಅಡ್‌ವರ್ಟೈಸ್ ಮಾಡಿದರೆ ಅನೇಕ ಸಂದರ್ಭಗಳಲ್ಲಿ ಜನರು ಒದಗುತ್ತಾ ಇಲ್ಲ. ಸಿಬ್ಬಂದಿ ಜಾಸ್ತಿಮಾಡುವುದಕ್ಕೆ ಅದು ಒಂದು ಅಡ್ಡಿ ಬರುತ್ತಾ ಇದೆ. ಜನರು ಬಾರದೆಹೋದರೆ, ಈ ಹುದ್ದೆಗಳಿಗೆ ಉಮೇದುವಾರರನ್ನು ಆಕರ್ಷಿಸಲು ಹೆಚ್ಚುಸಂಬಳ ಕೊಡಬೇಕು, ಅದು ಇನ್ನೊಂದು ವಿಧಾನ. ಈಗ ಇಲಾಖೆಯ ಸಂಬಳ ಹೆಚ್ಚು ಮಾಡುವುದಕ್ಕೆ ಬದಲು ನಾವು ಅನುಭವಕ್ಕೆ ಬಂದ ಹಾಗೆಲ್ಲಾ ಇಲಾಖೆಯ ಅಧಿಕಾರಿಗಳನ್ನು ಎಷ್ಟು ಮಾಡಬೇಕು, ಅವರ ದಕ್ಷತೆ ಹೇಗಿರಬೇಕು ಎಂಬುದರ ಬಗ್ಗೆ ಗಮನ ಕೊಡುತ್ತಿದ್ದೇವೆ. ಇದಕ್ಕೆ 1962-63ರ ಸಾಲಿನಲ್ಲಿ Industrial disputes (ಎಂದರೆ ಮಾಲೀಕರು ಮತ್ತು ಕಾರ್ಮಿಕರಿಗೆ ಉಂಟಾಗತಕ್ಕಂಥ ಜಗಳಗಳು) ಎಷ್ಟಿದ್ದವು, ಅವು ಯಾವ ಒಂದು ಪ್ರಮಾಣದಲ್ಲಿ ತೀರ್ಮಾನಕ್ಕೆ ಬರಲು ಸಾಧ್ಯವಾಗಿದೆ ಎಂಬ ಅಂಕಿ ಅಂಶಗಳನ್ನು ನೋಡಬೇಕಾಗಿದೆ. 1962ನೇ ಸಾಲಿನಲ್ಲಿ, ಪೆಂಡಿಂಗ್ ಕೇಸುಗಳು 184, ಆ ಸಾಲಿನಲ್ಲಿ ಬಂದದ್ದೂ ಸೇರಿ 592 ಆದವು, ಅದರಲ್ಲಿ 330 ಕೇಸುಗಳು ತೀರ್ಮಾನವಾದುವು, ಫೇಲ್ಯೂರ್ ಆದದ್ದು 288, ಹಿಂದಕ್ಕೆ ತೆಗೆದುಕೊಂಡದ್ದು 104, ಅಡ್‌ಜುಡಿಕೇಷನ್ನಿಗೆ ಹೋಗಿರತಕ್ಕಂಥದ್ದು 135. 1963ನೇ ಇಸವಿಯಲ್ಲಿ ಇದುವರೆಗೆ 54 ಕೇಸುಗಳು ಪೆಂಡಿಂಗ್ ಇವೆ. ಹೊಸದಾಗಿ ಬಂದವು 491 ತೀರ್ಮಾನವಾಗಿರತಕ್ಕಂಥವು; 238 ಹಿಂದಕ್ಕೆ ತೆಗೆದುಕೊಂಡಿರುವುದು 66 ಈಗ 63 ಪೆಂಡಿಂಗ್ ಕೇಸುಗಳಿವೆ. ಬಹಳ ಕಾರಣವಿದ್ದು ಯಾವುದಾದರೂ ಡಿಸ್‌ಪ್ಯೂಟನ್ನು ಅಡ್‌ಜುಡಿಕೇಶನ್ನಿಗೆ ಕಳುಹಿಸಬಾರದು ಎಂದು ಕಂಡರೆ, ರೆಫ್ಯೂಸ್ ಮಾಡುತ್ತೇವೆ. ಸರ್ವೇ ಸಾಧಾರಣವಾಗಿ ಕಾರ್ಮಿಕರ ಹಿತದೃಷ್ಟಿಯಿಂದ ಯಾವ ಕೇಸು ಫೆಲ್ಯೂರ್ ಆಗಿದೆ ಅದು ಅಡ್‌ಜುಡಿಕೇಶನ್ನಿಗೆ ಹೋಗಬೇಕು ಎಂದು ಹೇಳಿದರೆ ಅದಕ್ಕೆ ಅಡ್ಡಿಬರುತ್ತಾ ಇಲ್ಲ ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

(ಶ್ರೀ ಡಿ. ದೇವರಾಜ ಅರಸ್)

ಈಗಿರತಕ್ಕಂಥ ಇನ್‌ಸ್ಪೆಕ್ಟರೇಟ್ ಸಂಖ್ಯೆ ಸಾಲದು, ಅಥವಾ ಹಾಲಿ ಇರತಕ್ಕಂಥ ಕಾನೂನುಗಳನ್ನು ಜಾರಿಗೆ ತರುವುದರ ಜೊತೆಗೆ, ಈಗ ಹೊಸದಾಗಿ ಬರುವಂಥ ಈ ಕಾನೂನನ್ನು ಜಾರಿಗೆ ತರುವುದು ಸ್ವಲ್ಪ ಕಷ್ಟವಾದೀತು, ಅವರ ಕೆಲಸ ಜಾಸ್ತಿ ಆದೀತು ಎಂದು ಮಾನ್ಯಸದಸ್ಯರು ಈ ಮಸೂದೆ ಜಾರಿಗೆ ಕೊಡುವುದಕ್ಕೇ ಹೊಸ ಅಧಿಕಾರಿಗಳನ್ನು ನೇಮಕಮಾಡುವುದು ಸೂಕ್ತವಲ್ಲವೇ ಎಂದು ಕೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ತಮಗೆ ತಿಳಿಸುವುದೇನೆಂದರೆ ವಿನಾಕಾರಣ ಇನ್‌ಸ್ಪೆಕ್ಟರೇಟ್ ತಕ್ಷಣ ಹೆಚ್ಚಿಸುವ ಬದಲು ಹಾಲಿಇರುವ ಇನ್‌ಸ್ಪೆಕ್ಟರೇಟ್ ಮತ್ತು ಅವರ ಮೇಲ್ಪಟ್ಟ ಅಧಿಕಾರಿಗಳಿಗೆ, ಅಧಿಕಾರವಹಿಸಿ, ಕೆಲಸದ ಪ್ರಮಾಣವನ್ನು ಕೆಲವು ದಿವಸ ವೀಕ್ಷಿಸೋಣ, ತದನಂತರ; ನಮಗೆ ಅನುಭವ ಬಂದಹಾಗೆಲ್ಲಾ, ಹೆಚ್ಚುಜನರು ಕೆಲಸ ನಿರ್ವಹಿಸುವುದಕ್ಕೆ ಬೇಕು ಎಂದು ಕಂಡರೆ, ಹೆಚ್ಚು ಜನರನ್ನು ನೇಮಿಸಿಕೊಳ್ಳುವುದಕ್ಕೆ ಪ್ರಯತ್ನಮಾಡೋಣ.

ಶ್ರೀಮಾನ್ ಗೋಪಾಲ ಗೌಡರು ಬೀಡಿ ಕೈಗಾರಿಕೆ ಕೆಲಸಗಾರರಿಗೆ ಅನ್ವಯವಾಗುವಂಥ ಈ ಕಾನೂನು ಏನಿದೆ ಆದೇರೀತಿ ಊದುಬತ್ತಿ ಮತ್ತು ಬೆಂಕಿಪೊಟ್ಟಣ ತಯಾರುಮಾಡತಕ್ಕಂಥ ಉದ್ಯೋಗಗಳಲ್ಲಿ ಕೆಲಸಮಾಡತಕ್ಕವರಿಗೂ ಇದು ಅನ್ವಯವಾಗಬೇಕಾಗಿದೆ, ಆ ರೀತಿ ಒಂದು ಕಾನೂನು ತರುವುದು ಒಳ್ಳೆಯದು ಎಂದು ಸಲಹೆಕೊಟ್ಟಿದ್ದಾರೆ. ಇನ್ನೂ ಕೆಲವು ಮಾನ್ಯಸದಸ್ಯರುಗಳು ಬೇರೆ ಬೇರೆ ಸಲಹೆಗಳನ್ನು ಕೊಟ್ಟಿದ್ದಾರೆ. ನಶ್ಯ ಕೈಗಾರಿಕೆ ಈ ವಿಧೇಯಕದಲ್ಲಿ ಬರುವುದಕ್ಕೆ ಸಾಧ್ಯವೋ ಇಲ್ಲವೋ ಗೊತ್ತಿಲ್ಲ. ಎಲ್ಲ ವಿಷಯಗಳನ್ನೂ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡುತ್ತಾರೆ. ಕೆಲಸಗಾರರ ಹಿತದೃಷ್ಟಿಯಿಂದ ಯಾವ ಕಾನೂನು ಅಗತ್ಯವೆಂದು ಒಪ್ಪುತ್ತೀರೋ ಅದನ್ನು ತಕ್ಷಣವೇ ತರುವುದಕ್ಕೆ ಪ್ರಯತ್ನಪಡೋಣ.

ಮತ್ತೆ ಅವರೇ ಹೇಳಿದ್ದಾರೆ; ವಸ್ತುಸ್ಥಿತಿ ಏನಿದೆ ಅನ್ನುವುದನ್ನು ವಿವರಣೆ ಮಾಡಿದ್ದಾರೆ; ಒಂದುಕಡೆ ಉದ್ಯೋಗವಿಲ್ಲದೆ ಇರತಕ್ಕಂಥಾದ್ದು; ಈ ಕಡೆ ಕಾನೂನಿನಲ್ಲಿ ಕೆಲಸಕಾರ್ಯಗಳಿಗೆ ಬಗಿಯಾದ ಆಡಚಣೆ ತರತಕ್ಕಂಥಾದ್ದು ಹೆಂಗಸರು ಇಷ್ಟುಗಂಟೆಗಳ ಮೇಲೆ ಕೆಲಸಮಾಡಬಾರದು, ರಾತ್ರಿಕೆಲಸ ಮಾಡಬಾರದು, ಮಕ್ಕಳನ್ನು ಕಾರ್ಖಾನೆಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದು, 14ವರ್ಷದ ಕೆಳಗಿರುವವರನ್ನು ಉಪಯೋಗಿಸಬಾರದು ಮುಂತಾದ ನಿಷೇಧಗಳನ್ನು ಹಾಕುವುದು. ಅವರನ್ನು ನಾವು ಉಪಯೋಗಿಸದೆಹೋದರೆ, ಜನರಿಗೆ ಉದ್ಯೋಗ ದೊರೆಯದೆ ಹೋದರೆ ಏನುಮಾಡಬೇಕು ಎಂದು ಬಹಳವಾಗಿ ಹೇಳಿದ್ದಾರೆ. ನಿಜ 14ವರ್ಷಕ್ಕೆ ಒಳಪಟ್ಟ ಚಿಕ್ಕವಯಸ್ಸಿನವರನ್ನು ಕೆಲಸಕ್ಕೆ ನೇಮಕಮಾಡಬಾರದು ಎಂದು ಹೇಳುವಾಗ, ಅದರ ಹಿನ್ನೆಲೆ ಏನು ಎನ್ನುವುದು ತಮಗೆಗೊತ್ತಿದೆ, ಚಿಕ್ಕಮಕ್ಕಳನ್ನು ಈ ರೀತಿ ಕೆಲಸಕ್ಕೆ ಉಪಯೋಗ ಮಾಡಿದರೆ ಅಪಾಯ. ಆದ್ದರಿಂದ ಉಪಯೋಗಮಾಡಬಾರದು ಎನ್ನುವುದು ನಿಷೇಧದ ತಾತ್ಪರ್ಯ. ಇವೆರಡನ್ನೂ ಹೇಗೆ ಸರಿದೂಗಿಸಬೇಕೆಂದು ಹೇಳಲಿಲ್ಲ, ಇದು ಯೋಚನೆ ಮಾಡತಕ್ಕಂಥ ವಿಚಾರ. ಸರಿದೂಗಿಸುವುದು ಕಷ್ಟ. ಒಬ್ಬ ಬಡವ, ಕುಷ್ಟರೋಗದಿಂದ ನರಳುತ್ತಿರುತ್ತಾನೆ; ಅವನು ಸೂಯಿಸೈಡ್ ಮಾಡಿಕೊಳ್ಳಬಹುದು ಎಂದು ಹೇಳುವ ಯಾವ ಕಾನೂನು ಇದೆ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾನೂನು ಒಪ್ಪುವುದಿಲ್ಲ, ಧರ್ಮವೂ ಒಪ್ಪುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಆತ್ಮಹತ್ಯೆಗೆ ಅವಕಾಶವಿರಬೇಕು. ಮಾನ ಮರ್ಯಾದೆ ಎಲ್ಲ ಹೋಗಿ ಬದುಕಿರುವುದಕ್ಕಿಂತ ಆತ್ಮಹತ್ಯೆಗೆ ಅವಕಾಶವಿರುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾನು ನನ್ನ ಸ್ನೇಹಿತರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅವರು ವಾದ ಮಾಡುತ್ತ ಪ್ರಪಂಚದ ಸೃಷ್ಟಿಯೇ ಸರಿಯಲ್ಲವೇನೋ, ನಾವು ಇರುವುದೇ ಸರಿಯಲ್ಲವೇನೋ ಎಂದು ಹೇಳುತ್ತಾರೆ. ಈಗ ಅವರು ಬ್ರಹ್ಮಚರ್ಯವನ್ನಾಚರಿಸುತ್ತಿದ್ದಾರೆ, ಸಂತೋಷ. ಅದಕ್ಕೆ ಅವಕಾಶವಿದೆ. ಆದರೆ ಆತ್ಮಹತ್ಯೆಗೆ ನಾನು ತಿಳಿದಮಟ್ಟಿಗೆ ಎಲ್ಲೂ ಅವಕಾಶವಿಲ್ಲ. ಗೋಪಾಲ ಗೌಡರ ಸರ್ಕಾರ ಬಂದು ಆತ್ಮಹತ್ಯೆಗೆ ಅವಕಾಶ ಮಾಡಿ ಕೊಡುವುದಾದರೆ ಸಂತೋಷ. ಆತ್ಮಹತ್ಯೆಗೆ ಕಾಂಗ್ರೆಸ್ ಸರ್ಕಾರದಲ್ಲಿ ಅವಕಾಶವೂ ಇಲ್ಲ, ಅದು ಸಾಧ್ಯವೂ ಇಲ್ಲ.

ಲೈಸೆನ್ಸ್ ಕೊಡುವ ಬಗ್ಗೆ ಕೆಲವು ಅಂಶಗಳನ್ನು ಶ್ರೀ ವೆಂಕಟೇಗೌಡರು ಮತ್ತು ಕೆಲವು ಸ್ನೇಹಿತರು ವ್ಯಕ್ತಪಡಿಸಿದ್ದಾರೆ. ಲೈಸೆನ್ಸ್ ಕೊಡುವಾಗ ಏನೇನೋ ನಿರ್ಬಂಧಗಳನ್ನು ಕಾನೂನಿನಲ್ಲಿ ಹಾಕಿದ್ದೀರಿ; ಕೇಳಿದವರಿಗೆಲ್ಲ ಏಕೆ ಕೊಡಬಾರದು, ಎಂದು ಕೇಳಿದರು. ಯಾವ ದೃಷ್ಟಿಯಿಂದ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇವೆನ್ನುವುದರ ಹಿನ್ನೆಲೆಯನ್ನು ಅರ್ಥಮಾಡಿಕೊಂಡರೆ ಈಗಿರತಕ್ಕದ್ದು ಸರಿಯಾಗಿದೆ ಎಂದು ತಾವು ಒಪ್ಪುತ್ತೀರಿ. ಈಗ ಮನೆಗಳಿಗೆ ಹೊಗೆಸೊಪ್ಪು ಮತ್ತು ಎಲೆಗಳನ್ನು ಕಳಿಸಿಕೊಡುತ್ತಿದ್ದಾರಲ್ಲ, ಅದರಿಂದ ನೀವು ಹೇಳಬಹುದು ಅದೂ ಒಂದು ಗೃಹ

ಕೈಗಾರಿಕೆ, ಅಲ್ಲಿರತಕ್ಕ ಬಡವರಿಗೆ ಇದರಿಂದ ಅನುಕೂಲವಾಗುತ್ತದೆ, ಅವರು ಆ ರೀತಿ ಕೆಲಸಮಾಡಿಕೊಂಡು ಹೋದರೆ ಅದಕ್ಕೆ ನೀವು ಏಕೆ ಅಡ್ಡಿಪಡಿಸಬೇಕು ಎಂದು. ಫ್ಯಾಕ್ಟರಿ ಎಂದು ಒಂದು ಸ್ಥಳವನ್ನು ನಿರ್ದೇಶ ಮಾಡಿದಾಗ ಅಲ್ಲಿ ಬಂದು ಕೆಲಸ ಮಾಡುವವರಲ್ಲಿ ಬಡವರೂ, ಹೆಣ್ಣುಮಕ್ಕಳೂ ಇರುತ್ತಾರೆ. ಮನೆಗೆ ತೆಗೆದುಕೊಂಡು ಹೋಗಿ ಕೆಲಸ ಮಾಡುವವರಲ್ಲಿ ಬಡವರೂ ಇರಬಹುದು. ಯಾರು ಮನೆಗಳಿಗೆ ತೆಗೆದುಕೊಂಡು ಹೋಗಿ ಕೆಲಸ ಮಾಡುತ್ತಾರೆಯೋ ಅವರಿಗಿಂತ ನೇರವಾಗಿ ಕಾರ್ಖಾನೆಗಳಿಗೆ, ಗೊತ್ತಾದ ಸ್ಥಳಗಳಿಗೆ ಬಂದು ಕೆಲಸ ಮಾಡುವವರ ಪರಿಸ್ಥಿತಿ ಚೆನ್ನಾಗಿರುವುದಿಲ್ಲ, ಮನೆಗೆ ತೆಗೆದುಕೊಂಡು ಹೋಗುವವರಿಗೆ ಮನೆಯಾದರೂ ಇದೆಯಲ್ಲ. ಒಂದು ಮನೆಯೂ ಇಲ್ಲದೆ ಇದ್ದವನಿಗೆ, ಮರದಡಿಯಲ್ಲಿ ಕುಳಿತುಕೊಂಡು ಕೆಲಸ ಮಾಡುವವನಿಗೆ ಯಾರೂ ಹೊಗೆಸೊಪ್ಪು ಎಲೆ ಕೊಡುವುದಿಲ್ಲ. ಆದುದರಿಂದ ಮನೆಗೆ ತೆಗೆದುಕೊಂಡು ಹೋಗಬೇಕಾದರೆ ಅವರಿಗೆ ಮನೆಯಾದರೂ ಇರುತ್ತದೆ. ಅನೇಕ ಬೀಡಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಮನೆಯೂ ಇಲ್ಲದೆ ಇರುವವರು ಇರುತ್ತಾರೆ. ಅವರಿಗೆ ಇನ್ನು ಯಾವುದೇ ತರಹ ಅನುಕೂಲಗಳಿರುವುದಿಲ್ಲ. ಮನೆಗಳಲ್ಲಿ ಕೆಲಸಮಾಡುವವರು ನಾಲ್ಕಾರು ಜನರಿದ್ದರೆ ಬಿಡುವಿನ ವೇಳೆಯಲ್ಲಿ ಕೆಲಸ ಮಾಡುತ್ತಾರೆ. ಕೆಲವರು ಹೇಳಿದ ಹಾಗೆ ಅವರು 2–3 ಗಂಟೆ ಕೆಲಸ ಮಾಡುತ್ತಾರೆ. ಅವರುಗಳು ಬೇರೆ ವೃತ್ತಿಯನ್ನು ಅವಲಂಬಿಸಿಕೊಂಡಿರುತ್ತಾರೆ ಮತ್ತು ಇದನ್ನು ಉಪಕಸಬಾಗಿ ಇಟ್ಟುಕೊಂಡಿರುತ್ತಾರೆ. ಗೊತ್ತಾದ ಸ್ಥಳದಲ್ಲಿ ಕೆಲಸಮಾಡುವುದಕ್ಕೆ ಬಂದರೆ ಆಗ ಇದು ಉಪಕಸಬಾಗುವುದಿಲ್ಲ. ಆಗ ಇದು ಮುಖ್ಯ ಕಸಬು ಅಥವಾ ಜೀವನಕ್ಕೆ ಬೇಕಾದ ಕಸಬಾಗುತ್ತದೆ. ಮೊದಲು ಜೀವನ ಮಾಡುವುದಕ್ಕೆ ಕಸಬನ್ನು ಒದಗಿಸಬೇಕು, ಆ ಮೇಲೆ ಉಪಕಸಬಿನ ಯೋಚನೆ ಮಾಡಬೇಕಾಗುತ್ತದೆ. ಕೆಲಸಗಾರರ ದೃಷ್ಟಿಯಿಂದ ಮನೆಗಳಿಗೆ ತೆಗೆದುಕೊಂಡು ಹೋಗಿ ಕೆಲಸ ಮಾಡುವುದನ್ನು ಸ್ವಲ್ಪ ಹತೋಟಿಯಲ್ಲಿಡಬೇಕಾದೀತು. ಇವೊತ್ತಿನ ಸನ್ನಿವೇಶದಲ್ಲಿ ಮನೆಗೆ ತೆಗೆದುಕೊಂಡು ಹೋಗುವವರೆಲ್ಲರೂ ಅನಕೂಲಸ್ಥರು ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಲೈಸೆನ್ಸ್ ಕೊಡುವ ಕಾಲದಲ್ಲಿ ಒಂದು ರೀತಿಯ ಡಿಸ್‌ಕ್ರಿಷನ್ ಇರಬೇಕು ಎನ್ನುವ ದೃಷ್ಟಿಯಿಂದ 40ನೆಯ ಕ್ಲಾಜಿನಲ್ಲಿ ಯಾವುದಕ್ಕೆ ವಿನಾಯ್ತಿಯನ್ನು ಕೊಡಬೇಕೆಂಬುದನ್ನು ಇಟ್ಟುಕೊಂಡಿರತಕ್ಕದ್ದು. ಒಂದು ವೇಳೆ ವಿನಾಯಿತಿ ಬೇಡ ಎಂದರೆ ಕೆಲವು ಜನ ಬಡವರಿಗೆ ತೊಂದರೆಯಾಗುತ್ತದೆನ್ನುವುದನ್ನೂ ತಾವು ಯೋಚನೆ ಮಾಡಬೇಕು. ಡಿಸ್ಕ್ರಿಷನ್ ಉಪಯೋಗಿಸಲೇಬೇಕಾಗುತ್ತದೆ. ನಾನು ಇದ್ದರೆ ಸರಿಹೋಗುತ್ತದೆ, ಇನ್ನೊಬ್ಬರು ಬಂದರೆ ಸರಿಹೋಗುವುದಿಲ್ಲ ಎನ್ನುವ ವಾದ ಸರಿಯಲ್ಲವೆಂದು ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇದಕ್ಕೆ ಸಂಬಂಧಪಟ್ಟಹಾಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನೆಲ್ಲಾ ಸೆಲೆಕ್ಟ್ ಕಮಿಟಿಯವರು ಗಮನದಲ್ಲಿಟ್ಟುಕೊಂಡು ಇದನ್ನು ಪರಿಶೀಲನೆ ಮಾಡುವಾಗ ಯಾವ ಮಟ್ಟದಲ್ಲಿ ತಿದ್ದುಪಡಿ ಸಾಧ್ಯವೋ ಅದನ್ನೆಲ್ಲಾ ಮಾಡುತ್ತಾರೆ. ಅನೇಕರು ಹೇಳಿರತಕ್ಕ ಕೆಲವು ಕಲಮುಗಳ ಬಗ್ಗೆ ನೇರವಾದ ಉತ್ತರ ಕೊಡಬೇಕಾದ ಅಗತ್ಯವಿಲ್ಲವೆಂದು ನನ್ನ ಭಾವನೆ.

ರಜದ ಸಂಬಂಧವಾಗಿ ಒಂದು ಮಾತನ್ನು ಹೇಳಿದ್ದಾರೆ. 'ಸಿಕ್-ಲೀವ್' ಕೊಡಬೇಕಾದರೆ ಯಾವುದೇ ಕಾನೂನಿನಲ್ಲಿ ಹೀಗೆಯೇ ಕೊಡಬೇಕೆಂದಿಲ್ಲ. ಇಲ್ಲಿ ಕೂಡ ಅದನ್ನು ನಮೂದು ಮಾಡುವುದು ಕಷ್ಟವಾಗುತ್ತದೆ. ಆದರೆ Statement of Objects and Reasons ನಲ್ಲಿ ಹೇಳಿರುವ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ.

" The provisions of the Payment of Wages Act, 1936, the Industrial Disputes Act, 1947, and the Industrial Employment (Standing Orders) Act, 1956, have been made applicable to the workers in beedi industrial premises so as to enable them to derive the benefits accruiug thereunder.

ಇದರ ಪ್ರಕಾರ ಕಾರ್ಮಿಕ ಮತ್ತು ಮಾಲೀಕ ಇಬ್ಬರೂ ಸೇರಿ ಯಾವ ಪ್ರಮಾಣದಲ್ಲಿ 'ಸಿಕ್ ಲೀವ್' ಕೊಡಬೇಕೆಂದು ತೀರ್ಮಾನ ಮಾಡಿಕೊಳ್ಳುತ್ತಾರೆ. National Festival Holidays ಬಗ್ಗೆ ಒಂದು ಕಾನೂನನ್ನು ಮಾಡಿದ್ದೇವೆ. ಅದು ಎಲ್ಲ ಕಾರ್ಖಾನೆಗಳಿಗೂ ಅನ್ವಯಿಸುತ್ತದೆ. ಅದರ ಪ್ರಕಾರ 7 ದಿನ ವೇತನ ಸಹಿತ ರಜ ಸಿಕ್ಕುತ್ತದೆ.

Mr. DEPUTY SPEAKER.—The question is:

" That the Mysore Beedi Industrial Premises (Regulation of Conditions of Works) Bill, 1962 be taken into consideration."

The motion was adopted.

Motion to refer to a Joint Select Committee.

Sri D. DEVARAJ URS.—Sir, I beg to move:

"That the Mysore Beedi Industrial Premises (Regulation of Conditions of Work) Bill, 1962, be referred to a Joint Select Committee consisting of a total number of 20 members, 15 from the Legislative Assembly and 5 members from the Legislative Council and that the concurrence of the Legislative Council be obtained therefor and that the following members of this House shall be members of the Joint Select Committee, namely:

Sriyuths:

1 P. Venkatagiriyappa
2 A. Krishna Shetty
3 Gopala Salenna
4 Bhaskar Shetty
5 K. H. Ranganath
6 S. S. Patil (*Badakihal*)
7 B. D. Jatti
8 B. J. Linge Gowda
9 M. Srinivasa Naik
10 Prabhu Rao Jagadale
11 Allum Karibasappa
12 Tavare Fakirappa Siddappa
13 S. P. Phayde
14 Koppal Rajasaheb Abdul Sab
15 Devappa Shamanna"

Mr. DEPUTY SPEAKER.—The question is:

"That the Mysore Beedi Industrial Premises (Regulation of Conditions of Work) Bill, 1962 be referred to a Joint Select Committee consisting of a total number of 20 members, 15 from the Legislative Assembly and 5 members from the Legislative Council and that the concurrence of the Legislative Council be obtained therefor and that the following members of this House shall be members of the Joint Select Committee, namely:

Sriyuths:

1 P. Venkatagiriyappa
2 A. Krishna Shetty
3 Gopala Salenna
4 Bhaskar Shetty
5 K. H. Ranganath
6 S. S. Patil (*Badakihal*)
7 B. D. Jatti
8 B. J. Linge Gowda

Sriyuths :

9 M. Srinivasa Naik
10 Prabhu Rao Jagadale
11 Allum Karibasappa
12 Tavare Fakirappa Siddappa
13 S. P. Phayde
14 Koppal Rajasaheb Abdul sab
15 Devappa Shamanna"

The Motion was adopted.

Mr. DEPUTY SPEAKER.—Under sub-rule (2) of Rule 240 of the Rules of Procedure and Conduct of Business in the Legislative Assembly, I nominate the Hon'ble Minister for Labour, Housing and Transport and the Minister for Law as Members of the Joint Select Committee.

Sri ANNA RAO GANAMUKHI (Afzalpur).—On a point of order, Sir. Under what rule the Minister for Finance is put on the Select Committee ?

Mr. SPEAKER.—He is an Hon'ble Member of the Assembly and there is no bar, if one is a Minister for serving as a member of the Select Committee.

The House will now adjourn and meet at 12-30 P.M. tomorrow.

The House adjourned at Six of the Clock to meet again at Thirty Minutes past Twelve of the Clock on Friday, the 13th September 1963.

WD 1127--GPB--900--29-11-1963

KSA LIBRARY, B'lore
B004795
328.32402 548 LAD,1963
JJ33